ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

೨೨ನೇ ಬುಧವಾರ, ಜನವರಿ ೧೯೬೯ [ಮಾಘ ೨, ೧೮೯೦ (ಶಕ)]

WEDNESDAY, 22ND JANUARY 1969 [MAGHA 2, 1890 (SAKA)] (B)

ಸಂಪುಟ ೧೫—ಕ್ರಮಾಂಕ ೬ 4857

Vol. XV—No. 6

Karnataka State Archives,
Accession No.............
4857

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

೨೩ನೇ ಗುರುವಾರ, ಜನವರಿ ೧೯೬೯ [ಮಾಘ ೩, ೧೮೯೦ (ಶಕ)]

THURSDAY, 23RD JANUARY 1969 [MAGHA 3, 1890 (SAKA)]

ಸಂಪುಟ ೧೫—ಕ್ರಮಾಂಕ ೭

Vol. XV—No. 7

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಸಭೆಯ ನಡವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

೨೪ನೇ ಶುಕ್ರವಾರ, ಜನವರಿ ೧೯೬೯ [ಮಾಘ ೪, ೧೮೯೦ (ಶಕ)]

FRIDAY, 24TH JANUARY 1969 [MAGHA 4, 1890 (SAKA)]

ಸಂಪುಟ ೧೫—ಕ್ರಮಾಂಕ ೮

Vol. XV—No. 8

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ: ೨೫ ಪೈಸೆ

Price: 25 Paise

ಮೈಸೂರು ವಿಧಾನಸಭೆಯ ನಡವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

೨೭ನೇ ಸೋಮವಾರ, ಜನವರಿ ೧೯೬೯ [ಮಾಘ ೭, ೧೮೯೦ (ಶಕ)]

MONDAY, 27TH JANUARY 1969 [MAGHA 7, 1890 (SAKA)]

ಸಂಪುಟ ೧೫—ಕ್ರಮಾಂಕ ೯

Vol. XV—No. 9

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

೨೮ನೇ ಮಂಗಳವಾರ, ಜನವರಿ ೧೯೬೯ [ಮಾಘ ೮, ೧೮೯೦ (ಶಕ)]

TUESDAY, 28TH JANUARY 1969 [MAGHA 8, 1890 (SAKA)]

ಸಂಪುಟ ೧೫—ಕ್ರಮಾಂಕ ೧೦

Vol. XV—No. 10

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

CONTENTS

		Pages
1	Obituary Reference *re*: the Death of Sri Ganga Nayak, Ex-M.L.A. ...	445
2	Motion of No-Confidence in the Council of Ministers —(Negatived) ...	445—496
3	(i) Statement of Supplementary and Additional Demands for Grants for 1968-69 (2nd Instalment)—(Presentation) ...	496
	(ii) Point raised *re*: Decision of the Chair on the voting of no confidence Motion ...	497
4	(i) Starred Questions and Answers ...	498—517
	(ii) Questions for Answers on the day (but not taken up) ...	518—524
	(iii) Request for taking up left over Question on the next day ...	524—525
	(i) Request for early announcement of Reserved Rulings ...	525
	(ii) A question of Privilege against the Deputy Minister for Health—(Postponed) ...	525
	(iii) Notice of breach of Privilege against Sri S. Nijalingappa—(Postponed) ...	525
5	Report of the Rules Committee—(Presentation) ...	526
6	Motion of Thanks to the Governor's Address — (Debate not Concluded) ...	526—847
7	Half-an-Hour Discussion arising out of the Answers to Question No. 190 *re*: Arrest Warrants against Markhal and Bothagi Villages ...	547...552

CONTENTS

PAGES.

1 (i) Starred Questions and Answers ... 553—570

(ii) Questions for Answers on the day (but not taken up) 571—580

(iii) Complaint against non-inclusion of Members' questions and answers in the daily list of business ... 580—581

2 (a) Notice of question of privilege against Sri S. Nijalingappa, M. L. A.—(Postponed) ... 581

(b) Requests to held over questions ... 581

(c) Notice of Adjournment motion *re*: the Hubli incident—(Postponed) ... 582

(d) Notice of a question of privilege against the Deputy Minister for Health—(Motion was adopted) ... 582—586

3 Speaker's Ruling *re*: allotment of Seats to members joining another party ... 587—588

4 Leave of Absence to Sri C. M. Churchihalmath—Grant of 588—589

5 Motion of Thanks to the Governor's Address ... 589—605

6 Point of order whether a Minister can reply to points raised in connection with no-confidence motion already disposed of while replying to debate on Motion of Thanks ... 605—659

7 Report of the Mysore Pay Commission 1966-68—Motion to Consider (Debate not concluded) ... 659—663

CONTENTS

PAGES

1 (i) Starred Questions and Answers ... 665—690

(ii) Short Notice Question and Answers ... 690—692

(iii) Questions for Answers on the day (but not taken up) 692—696

(iv) Permission to make a personal Explanation by Sri H. Siddaveerappa ... 696—697

2 Calling Attention to a matter of urgent Public Importance *re*: Naxalbari Elements in Mysore-Kerala boundry areas of the State ... 697

3 Adjournment motion *re*: Students disturbance in Dharwar and Belgaum District (Withdrawn) ... 698—704

4 Personal Explanation by Sri H. Siddaveerappa on the statement of the Deputy Minister ... 701—704

5 Eighth Report of the Committee on Private Members' Bills and Resolutions—(Adopted) ... 704—705

6 City of Bangalore Municipal Corporation (Amendment) Bill, 1969—(Introduced) ... 705—706

7 Supplementary and Additional Demands for Grants—Demand Nos. 4, 10, 13, 15, 17, 18, 20, 23, 27, 29, 30, 39, 44, 45, 46, 47, 48 and 54 —(Voted)... 706—734

8 Private Members' Business—

Motion to Circulate for eliciting public opinion on the Mysore Public Men Enquires Bill, 1969—(Nagatived) 734—760

9 Half-an-hour Discussion on Question No. 166 *re*: Prohibition in the State ... 761—767

CONTENTS

		PAGES
1	(i) Starred Questions and Answers ...	769—792
	(ii) Short Notice Question and Answer ...	792—794
	(iii) Questions for Answers on the day (but not taken up)	795—798
2	Notice of adjournment motion *re* : burning of a PSP Flag at Channapatna ...	799—801
3	Calling Attention to a matter of urgent Public Importance *re* : Incidents at Channapatna during the By-election to Taluk Boards ...	801—803
4	Notice of Adjournment motion *re* : Kidnapping of Vice-President at Davangere Municipal Council ...	803—804
5	Allotment of Scooters to Members of Legislature—wrong reporting by the Press ...	804—805
6	Papers laid on the Table— Accounts for 1967-68 and Audit Report of the MSEB ...	806
7	Mysore Appropriation Bill, 1969—(Introduced) ...	806
8	Mysore Appropriation Bill, 1969—(Passed) ...	806—807
9	Report of the Mysore Pay Commission— ...	807—808
	(i) Ruling of the Speaker on the point of order and allowing a Substantive Motion for consideration	808—854
	(ii) Motion to consider anther Substantive Motion } Debate not concluded	
10	Half-an-hour Discussion arising out of replies to Question No. 42 *re* : Construction of Houses for S.C. and S.T....	855—860

CONTENTS

		Pages
1	(i) Starred Questions and Answers ...	769—792
	(ii) Short Notice Question and Answer ...	792—794
	(iii) Questions for Answers on the day (but not taken up)	795—798
2	Notice of adjournment motion re: burning of a PSP Flag at Channapatna ...	799—801
3	Calling Attention to a matter of urgent Public Importance re: Incident at Channapatna during the By-election to Taluk Boards ...	801—803
4	Notice of Adjournment motion re: Kidnapping of Vice-President at Davangere Municipal Council ...	803—804
5	Allotment of Scooters to Members of Legislature—wrong reporting by the Press ...	804—806
6	Papers laid on the Table— Account for 1967-68 and Audit Report of the MSEB ...	806
7	Mysore Appropriation Bill, 1969—(Introduced) ...	806
8	Mysore Appropriation Bill, 1969—(Passed) ...	806—807
9	Report of the Mysore Pay Commission— ...	807—808
	(i) Ruling of the Speaker on the point of order and allowing a Substantive Motion for consideration; (ii) Motion to consider another Substantive Motion — Debate not concluded	808—854
10	Half-an-hour Discussion arising out of replies to Question No. 42 ... : Construction of Houses for S.C. and S.T. ...	855—860

CONTENTS

		PAGES
1	(i) Starred Questions and Answers ...	861—888
	(ii) Short Notice Questions and Answers ...	888—891
	(iii) Questions for Answers on the day (but not taken up)	891—894
2	Calling Attention to matters of urgent Public Importance (i) re: Labour Strike in Kampli Sugar Factory in Bellary District ...	894
	(ii) re: Death of a Lorry Driver in Bantwal Police Station ...	894—897
3	(i) Madhugiri Commission Report ...	897
	(ii) Miscellaneous matters to be raised at the end of the Business of the Day ...	897—898
4	Papers laid on the Table—	
	(i) Notification No. HD 50 TMR 68, dated 6th January 1969 issued under the Motor Vehicles Act, 1939	
	(ii) Statement as promised in Reply to Question No. 429 ...	898
5	Statement of the Deputy Minister for Industries re: Allegations against the Gur Development Officer, M.S.K. and V.I. Board, Bangalore ...	899—907
6	Petition re: Levy on Jowar Crop submitted by the Ryots of Aland Taluk—(Presentation) ...	907
7	City of Bangalore Municipal Corporation (Amendment) Bill, 1969—(Passed) ...	907—955
8	Business of the House ...	956
9	(i) Absence of Ministers at Gandhi Centenary Celebrations at Bangalore—(Statement of Ministere, etc.	956—963
	(ii) Matters under Rules 311 and 312 of the Rules of Procedure ...	
	(iii) A question of Privilege against Sri B.P. Gangadhar —(Dropped) ...	
10	Notice of Adjournment motion re: Excesses upon the Marathi people in Belgaum—(Postponed) ...	963—964
11	Expenditure incurred for Bangalore University Convocation held at the Glass House, Bangalore ...	964—965
12	Irrigation Projects in Bidar District ...	965—966
13	(i) Expediting the construction of the Upper Krishna Project ...	966—968
	(ii) Replies to Questions tabled by the members ...	
14	Half-an-hour Discussion arising out of Replies to Question No. 204 re: Nationalisation of Bus Routes in Mangalore and Shimoga Districts ...	968—971

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 22nd January 1969

The House met in the Assembly Chamber, Vidhana Soudha, Bangalore, at Thirty Minutes past Eight of the Clock.

Mr. SPEAKER (SRI S. D. KOTHAVALE) in the Chair.

Obituary reference *re*: Death of Sri Ganga Nayak

MR. SPEAKER.—I regret to announce the sad demise of Sri Ganga Nayak, a former Member of the Legislative Assembly, on 17th January 1969. He was a member of the Assembly during the period 1950–56.

On behalf of the Members I express our deep sense of sorrow at the demise of the member and convey the same to the members of the bereaved family.

May I request the members to stand in silence for a minute as a mark of respect to the deceased ?

(*Members stood in silence for one minute*).

Motion of No-Confidence in the Council of Ministers

(*Debate Continued.*)

†ಶ್ರೀ ಜಿ. ದುಗ್ಗಪ್ಪ (ಭರಮಸಾಗರ).—ಶ್ರೀಮಾನ್ಯ ಸಭಾಧ್ಯಕ್ಷರೇ, ಈ ಸಭೆಯ ಮುಂದೆ ಮಂಡಿಸಿರುವ ಅವಿಶ್ವಾಸ ನಿರ್ಣಯದ ಬಗ್ಗೆ ಇಲ್ಲಿಯವರೆಗೂ ಚರ್ಚೆಯಾಗಿದೆ. ಈ ಚರ್ಚೆಯ ಮೇಲೆ ಶ್ರೀಮಾನ್ ನಾಗಪ್ಪನವರು ಆಮೇಲೆ ನಮ್ಮ ಈ ಸಭೆಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಹೇಳಿದಮೇಲೆ ಸರ್ಕಾರದವರಿಗೆ ಚೆನ್ನಾಗಿ ಮನವರಿಕೆಯಾಗಿದೆ. ಹೆಚ್ಚು ಗೊತ್ತಾಗತಕ್ಕದ್ದು ಏನೂ ಅಲ್ಲ. ನಾನು ಒಂದು ವಿಷಯ ಹೇಳುತ್ತೇನೆ. ಇವರು ಅಧಿಕಾರಿಗಳನ್ನು ಹೇಗೆ ಉಪಯೋಗ ಮಾಡಿಕೊಂಡಿದ್ದಾರೆ ಎಂಬುದಕ್ಕೆ ಒಂದು ದೃಷ್ಟಾಂತ ಹೇಳುತ್ತೇನೆ. The Circulars issued by the Divisional Commissioner ran

---

†Indicates that the remarks or speeches have not been revised by the member concerned.

(ಶ್ರೀ ಜಿ. ದುಗ್ಗಪ್ಪ)

counter to the rules. ಯಾವ ಪ್ರಭೃತಿ ಡಿವಿಜನಲ್ ಕಮೀಷನರಿಗೆ ಇನ್‌ಸ್ಟ್ರಕ್ಷನ್ ಕೊಟ್ಟರು! ಇವರಿಗೆ ಸರ್‌ಕ್ಯುಲರ್ ಇಷ್ಯೂ ಮಾಡುವುದಕ್ಕೆ ಅಧಿಕಾರವೇ ಇಲ್ಲ. ಹೀಗಿರುವಾಗ ಅವರು ಆ ರೀತಿ ಮಾಡುವುದಕ್ಕೆ ಯಾರು ಅವರಿಗೆ ಬೆಂಬಲ ಕೊಟ್ಟರು? ಈ ಅಬ್ಕಾರಿ ಕಂಟ್ರಾಕ್ಟ್ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳನ್ನು ಅಗತ್ಯ ಎನಿಸುವುದಾದರೆ ಈ ಸಭೆಗೆ ಕರೆಸಿ ವಿಚಾರಣೆ ಮಾಡಿ.

ಚಿತ್ರದುರ್ಗ ಅಸಿಸ್ಟೆಂಟ್ ಕಮೀಷನರಿಗೆ ಒಬ್ಬ ಮಾನ್ಯ ಸದಸ್ಯರು ತಾಲ್ಲೂಕು ಬೋರ್ಡಿನ ಚುನಾವಣೆಯಲ್ಲಿ ಭಾಗವಹಿಸುವುದಕ್ಕೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ. ಪಾಪ ಅವರು ಇನ್ನೂ ಹುಡುಗರು, 25 ವರ್ಷ ವಯಸ್ಸಾಗಿಲ್ಲ. ಆದ್ದರಿಂದ ಇವರಿಗೆ ಅಂಜಿಕೊಂಡು ಇವರು ಹೇಳಿದಹಾಗೆ ಕೇಳುತ್ತಾರೆ. ಸ್ವಾಮಿ, ಈವೊತ್ತು ಈ ಅಬ್ಕಾರಿ ಕಂಟ್ರಾಕ್ಟ್ ಪ್ರಕರಣಕ್ಕೆ ಸಂಬಂಧಪಟ್ಟ ವಿಷಯವನ್ನು ಈ ಮಹಾ ಸಭೆ ತಿಳಿದುಕೊಳ್ಳುವ ದೃಷ್ಟಿಯಿಂದ ಅದಕ್ಕೆ ಸಂಬಂಧಪಟ್ಟ ಫೈಲು ಏನಿದೆ ಅದನ್ನು ಈ ಸಭೆಯಮುಂದೆ ಇಡಲಿ. ಇದರಲ್ಲಿ ಯಾರು ಯಾರು ಇನ್‌ವಾಲ್ವ್ ಆಗಿದ್ದಾರೆ ಎಂಬುದನ್ನು ವಿಚಾರಣೆ ಮಾಡುವುದಕ್ಕೆ ಒಂದು ಎನ್‌ಕ್ವೈರಿ ಕಮಿಷನ್ ನೇಮಕ ಮಾಡಿ. ಯಾರು ಯಾರು ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಅವರನ್ನು ಬೇಕಾದರೆ ಈ ಸಭೆಗೆ ಕರೆಸಿ ವಿಚಾರಣೆ ಮಾಡಿ. ಆ ರೀತಿ ಮಾಡುವುದಕ್ಕೆ ಈ ಸಭೆಗೆ ಅಧಿಕಾರ ಇದೆ. ಅಧಿಕಾರಿಗಳು ನಿಸ್ಪೃಹರಾಗಿದ್ದಾರೆ ಎಂಬುದು ಜನಗಳಿಗೆ ಗೊತ್ತಾಗಬೇಕು ಈ ದೃಷ್ಟಿಯಿಂದ ಅಧಿಕಾರಿಗಳನ್ನು ಈ ಸಭೆಯ ಮುಂದೆ ಕರೆಸಿ ಅವರ ಎವಿಡೆನ್ಸ್ ಕೇಳಿ. I suspect the bona fides of the Government. You disprove it. ಸ್ವಜನ ಪಕ್ಷಪಾತ ಏನಿದೆ ಅದನ್ನು ನಿಮ್ಮ ಬಾಯಿಂದಲೇ ಹೇಳಿಸುತ್ತೇವೆ. ಮೂಗು ಹಿಡಿದರೆ ಬಾಯಿ ತಾನಾಗಿಯೇ ಬಿಡುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ನಿಮಗೆ ಬೇಕಾಗಿರತಕ್ಕವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಯಾವ ರೂಲ್ಸ್ ಇಲ್ಲಾ, ಯಾವ ಕಾನೂನು ಇಲ್ಲ. ಮುನಿಸಿಪಾಲಿಟಿಯ ಆಕ್ಟ್ ಏನೋ ಇದೆ. ಆದರೆ ನಿಮಗೆ ಯಾವುದೂ ಲಾ ಇಲ್ಲ. ಕಣ್ಣುಮುಚ್ಚಿಕೊಂಡು ಆರ್ಡರ್ ಮಾಡುತ್ತೀರಿ, ಈ ಚಿತ್ರದುರ್ಗ ಡಿಸ್ಟ್ರಿಕ್ಟ್ ಏನಿದೆ ಇದು ವಿಚಿತ್ರವಾದ ಡಿಸ್ಟ್ರಿಕ್ಟ್. ಸುಮಾರು 8 ಮುನಿಸಿಪಾಲಿಟಿಗಳಲ್ಲಿ ಅವಧಿಯನ್ನು ವಿಸ್ತರಣೆ ಮಾಡುತ್ತಾರೆ. ಹರಿಹರ ಮುನಿಸಿಪಾಲಿಟಿಯ ಟರ್ಮ್ 9-12-68ಕ್ಕೆ ಮುಕ್ತಾಯವಾಯಿತು. 31-12-68ಕ್ಕೆ ಪ್ರೆಸಿಡೆಂಟ್ ಎಲೆಕ್ಷನ್ ಆಗಬೇಕಾಗಿತ್ತು. ಡಿಶೆಂಬರ್ 30ನೇ ತಾರೀಖು ಎಕ್ಸ್‌ಟ್ರಾರ್ಡಿನರಿ ಗೆಜೆಟ್‌ನಲ್ಲಿ ನೋಟಿಫಿಕೇಷನ್ ಹೊರಡಿಸಿ ಆ ಮುನಿಸಿಪಾಲಿಟಿಯ ಅವಧಿಯನ್ನು ಮುಂದುವರಿಸುತ್ತಾರೆ. In Notification dated 30th December published in Extraordinary Gazette on December 31, the Ex. Municipal Administration Minister has extended the life of the Municipal Council. ಆಮೇಲೆ ಹಾಗೆಯೇ ಹಿರಿಯೂರು ಮುನಿಸಿಪಾಲಿಟಿಯ ಅವಧಿಯು 5–12–68 ಕ್ಕೆ ಮುಕ್ತಾಯವಾಗಬೇಕಾಗಿತ್ತು. ಅದರ ಅವಧಿಯನ್ನು ಎಕ್ಸ್‌ಟೆಂಡ್ ಮಾಡಿದರು. ಇದೇ ರೀತಿ ಹೊಸದುರ್ಗ, ಹೊಳಲ್ಕೆರೆ ಮತ್ತು ಮೊಳಕಾಲ್ಮೂರು ಇತ್ಯಾದಿ ಮುನಿಸಿಪಾಲಿಟಿಗಳ ಅವಧಿಯನ್ನು ವಿಸ್ತರಣೆ ಮಾಡಿದರು. ಅವುಗಳ ಚುನಾವಣೆ ನಡೆದರೆ ನಮಗೆ ಮೆಜಾರಿಟಿ ಬರುವುದಿಲ್ಲ ಎಂದು ತಿಳಿದುಕೊಂಡು ಅವುಗಳ ಅವಧಿಯನ್ನು ವಿಸ್ತರಣೆ ಮಾಡಿದರು. ಇಲ್ಲದೇ ಹೋದರೆ ಆ ಮುನಿಸಿಪಾಲಿಟಿಗಳ ಅವಧಿಯನ್ನು ವಿಸ್ತರಣೆ ಮಾಡುವುದಕ್ಕೆ ಪ್ರಬಲವಾದ ಕಾರಣವೇನಿತ್ತು! Under the powers conferred by the proviso to sub-section (1) of section 18 of the Mysore Municipalities Act. ಇದನ್ನು ಎರಡು ಕನ್ನಡಕ ಹಾಕಿಕೊಂಡು ಓದಿ. ಇದು ಏನು ಹೇಳುತ್ತದೆ ಎಂಬುದನ್ನು ನೋಡಿ. ಯಾವ ಪ್ರಬಲವಾದ ಕಾರಣವನ್ನು ಕೊಟ್ಟು ಈ ಮುನಿಸಿಪಾಲಿಟಿಗಳ ಅವಧಿಯನ್ನು ವಿಸ್ತರಣೆ ಮಾಡಿದಿರಿ!

ಇನ್ನು ಚಿತ್ರದುರ್ಗ ತಾಲ್ಲೂಕಿಗೆ ಬರುತ್ತೇನೆ. ಇದು ಬಹಳ ವಿಚಿತ್ರವಾಗಿದೆ. ಚಿತ್ರದುರ್ಗ ಮುನಿಸಿಪಾಲಿಟಿಯ ಚುನಾವಣೆಗೆ ಸಂಬಂಧಪಟ್ಟ ಹಾಗೆ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕಿ ಸೆಕ್ರೆಟರಿಯವರು ಸಕಾಲದಲ್ಲಿ ಅರ್ಜಿಯನ್ನು ಸಲ್ಲಿಸಿದ್ದರೂ ಕೂಡ ಆ ವಿಷಯದಲ್ಲಿ ಸರ್ಕಾರದವರು ಬಹಳ ಅನ್ಯಾಯ ಮಾಡಿದ್ದಾರೆ. ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕಿ ನಾಮಿನೇಷನ್ ಪೇಪರ್ ಕೊಟ್ಟಿದ್ದರೂ ಸಹ, ಹೈಕೋರ್ಟಿನವರು ಸ್ಟೇ ಆರ್ಡರ್ ಕೊಟ್ಟಿರುವುದರಿಂದ ಈ ಮುನಿಸಿಪಾಲಿಟಿಯ ಚುನಾವಣೆಯನ್ನು ಮುಂದಕ್ಕೆ ಹಾಕಬೇಕೆಂದು ಸರ್ಕಾರದವರು ಆದೇಶ ಕೊಟ್ಟರು. ಇದು ಸರ್ಕಾರವೇ! ಡಿಶೆಂಬರ್ ತಿಂಗಳು 28ನೇ ತಾರೀಖು ನಮ್ಮ ಸ್ನೇಹಿತರಾದ ಹಿಂದಿನ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳು ಆ ಪೋರ್ಟ್‌ಫೋಲಿಯೋವನ್ನು ಬಿಟ್ಟಿದ್ದರೂ ಸಹ ಚಿತ್ರದುರ್ಗ

ಮುನಿಸಿಪಾಲಿಟಿಯ ಅವಧಿಯನ್ನು ವಿಸ್ತರಣೆ ಮಾಡುವುದಕ್ಕೆ ಶ್ರೀ ಬಿ. ಎಂ. ಪಾಟೀಲರಿಂದ ರುಜು ಹಾಕಿಸಿ ಈ ಮುನಿಸಿಪಾಲಿಟಿಯ ಅವಧಿಯನ್ನು ಜೂನ್ ತಿಂಗಳವರೆಗೂ ವಿಸ್ತರಣೆ ಮಾಡಿದ್ದಾರೆ. For the second time they have extended the term of Chitradurga Town Municipal Council. ಇದಕ್ಕೆ ಏನು ಪ್ರಬಲವಾದ ಕಾರಣ ಎಂದು ನಾನು ಕೇಳುತ್ತೇನೆ. ಈ ಪತ್ರವನ್ನು ತಮಗೆ ಕಳಿಸಿಕೊಡುತ್ತೇನೆ, ತಾವು ಮಂತ್ರಿಗಳಿಗೆ ಕಳುಹಿಸಿಕೊಡಿ. ಹೇಗೆ ಮೂಗು ಹಿಡಿಯುತ್ತೀರಿ ಎಂದು ಮಾನ್ಯ ಮಂತ್ರಿಗಳು ಕೇಳಿದರು. ಈಗಲಾದರೂ ಬಾಯಿ ಬಿಡುತ್ತೀರಾ ? ಮಾಡುವುದು ಮಾಡಿ ಈಗ ಮುಖ ಒರೆಸಿಕೊಳ್ಳುವುದು ಬೇಡ. ನೀವುಗಳು ಅಧಿಕಾರದಲ್ಲಿರುವುದಕ್ಕೆ ನಾಲಾಯಕ್ ಎನ್ನುವುದಕ್ಕೆ ಇದು ಒಂದು ನಿದರ್ಶನವಾಗಿದೆ. This is the authenticated information of the Mysore Government. You change from time to time to suit your own whims and fancies. ತಾವು ಬೆಳಿಗ್ಗೆ ಎದ್ದಮೇಲೆ ದೇವರ ಹೆಸರನ್ನು ಹೇಳುವುದಕ್ಕಿಂತ ಹರಿಜನರ ಹೆಸರನ್ನು ಹೇಳಬೇಕು. ಏಕೆಂದರೆ ಅವರ ಬೆಂಬಲದಿಂದ ನೀವು ಅಧಿಕಾರದಲ್ಲಿ ಇದ್ದೀರಿ. ಇವತ್ತು ಅವರನ್ನು ತಾವು ದುರುಪಯೋಗಪಡಿಸಿಕೊಳ್ಳುತ್ತಿರುವುದಲ್ಲದೆ, ಅವರಲ್ಲಿಯೇ ಭಿನ್ನಾಭಿಪ್ರಾಯವನ್ನು ತಂದಿಟ್ಟಿದ್ದೀರಿ. ಒಂದು ಕಾಗದ ಇದೆ ಓದುತ್ತೇನೆ, This is the letter sent by one of your Secretaries. He says :

> "I am directed to convey the views of the State Government on the aspect as follows :
>
> 'The Government of Mysore had actually transferred some of the communities from the list of Scheduled Castes and Scheduled Tribes.'
>
> Mr. Nijalingappa has written a letter to Government of India saying that 'I am sending the Ministers who know these Scheduled Castes and Scheduled Tribes. I have requested Mr. Rachaiah and Mr. Prabhakar, Minister and Deputy Minister respectively.........."

ಏನು ಸ್ವಾಮಿ, ಇದರರ್ಥ. ಇವತ್ತು ಇಲ್ಲಿ ಷೆಡ್ಯೂಲ್ ಕ್ಯಾಸ್ಟ್‌ಗೆ ಸೇರಿದ ಮಂತ್ರಿಗಳು ಇಲ್ಲ, ನಾನು ಚಾಲೆಂಜ್ ಮಾಡುತ್ತೇನೆ : Very recently this Government headed by Sri Veerendra Patil has written a letter suggesting that we are for status quo. This is most unfortunate. They are ineffective. Today I give a challenge that if Sri Y. Ramakrishna and Rachaiah feel that they are not untouchables, they must quit the Ministry. No purpose would be served if they continue in the Ministry. When they are ineffective, why should they continue there ?

Sri K. PUTTASWAMY.—There is no one who is untouchable.

Sri G. DUGGAPPA.—Why not ? It is in reality. We do not have any special privileges. What we want is our right. What is enshrined in the Constitution should be respected. You say this untouchability is abolished. Has it been really done ? You are forgetting the fundamental principles taught by Mahathmaji. You are making use of these people for your own ends. If this state of affairs continue, who wants democracy ? You do not want to safeguard the interests of Scheduled Castes and Schedule Tribes.

Sri K. PUTTASWAMY.—The Hon. Member does not want democracy ?

Sri G. DUGGAPPA.—In this atmosphere, I do not want democracy. The time has come that you must reap the consequences. You are the root cause for all these evils. ಈಗ ಕಾಲ ಬಂದಿದೆ. ಇನ್ನು ಮುಂದೆ ಹಿಂದುಳಿದವರನ್ನು ಆಟವಾಡಿಸುವುದಕ್ಕೆ ನಿಮಗೆ ಸಾಧ್ಯವಾಗುವುದಿಲ್ಲ. ಈ ಮೂರು ಉದಾಹರಣೆಗಳೇ ಸಾಕು. ಬೇಕಾದರೆ ಸಂಬಂಧಪಟ್ಟ ಅಧಿಕಾರಿಗಳಿಂದ ವಿಷಯಗಳನ್ನು ತಿಳಿದುಕೊಂಡು, ನನ್ನ ಪ್ರಶ್ನೆಗಳಿಗೆ ಉತ್ತರ ಕೊಡಬೇಕು. ನಾನು ಹೇಳಿದಂತಹ ವಿಚಾರಗಳು ತಪ್ಪಿದ್ದರೆ ನನ್ನ ಮಾತನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಪಾನನಿರೋಧವನ್ನು ಏತಕ್ಕಾಗಿ ರದ್ದು ಮಾಡಿದರು ಎಂಬುದು ಈಗ ನಮಗೆ ಅರ್ಥವಾಗುತ್ತಿದೆ. ರಾಜ್ಯಾಂಗ ಶಾಸನ ಬಂದಮೇಲೆ ಸ್ವಲ್ಪಮಟ್ಟಿಗಾದರೂ ಪಾನನಿರೋಧವನ್ನು ಜಾರಿಗೆ ತರಬೇಕೆಂಬುದು ಮಹಾತ್ಮ ಗಾಂಧಿಯವರ ಆಶೆಯಾಗಿತ್ತು ಎಂಬ ಮಹದುದ್ದೇಶದಿಂದ ಜಾರಿಗೆ ತಂದಿದ್ದರು. ಆದರೆ ಇತ್ತೀಚೆಗೆ ನಡೆದಿರುವ ವಿದ್ಯಾಮಾನಗಳನ್ನು ನೋಡಿದರೆ ಅದು ಕಾರ್ಯರೂಪಕ್ಕೆ ಬರಲಿಲ್ಲ ಎನ್ನುವ ಕಾರಣವನ್ನು ಹೇಳಿ ಈಗ ಪಾನನಿರೋಧವನ್ನು ರದ್ದು ಮಾಡುತ್ತಿರುವುದರಲ್ಲಿ ಬಹಳ ಗೂಢಾರ್ಥವಿದೆ. ಪಾನನಿರೋಧ ಜಾರಿಯಲ್ಲಿ ಇದ್ದರೆ ಸರ್ಕಾರಕ್ಕೆ ವರಮಾನ ಕಡಿಮೆಯಾಗುತ್ತದೆಂದೂ ಸಹ ಹೇಳಿದ್ದಾರೆ. ಈ ಕಾರಣವೂ ಸಹ ನಿಜಸ್ಥಿತಿಯನ್ನು ಮರೆಮಾಚುತ್ತದೆ. ಹೋಗಲಿ, ಈ ಬಾಬಿನಿಂದ ಸರ್ಕಾರಕ್ಕೆ ಎಷ್ಟು ವರಮಾನ ಬರಬೇಕಾಗಿತ್ತೋ ಅಷ್ಟು ಬರುತ್ತದೆಯೋ ಎಂದರೆ ಆ ವರಮಾನವನ್ನು ಪೂರ್ತಿಯಾಗಿ ಸರ್ಕಾರ ಪಡೆಯುವ ಪ್ರಯತ್ನವೂ ಕಂಡುಬರುತ್ತಿಲ್ಲ. ಈ ನಾಟಕವೆಲ್ಲಾ ಕೆಲವರು ಹಣಪಡೆಯುವುದಕ್ಕಾಗಿ ಅಥವಾ ಅವರ ಪಕ್ಷಕ್ಕಾಗಿ ಎಂಬುದನ್ನು ಇಂತಹ ಒಂದು ಪ್ರಸಂಗದಿಂದ ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಈ ವಿಚಾರವನ್ನು 1968ನೇ ಇಸವಿಯ ಹರಾಜಿನಿಂದ ಮಾತ್ರವಲ್ಲ, 1967ನೇ ಇಸವಿಯ ಹರಾಜಿನಿಂದಲೂ ಕೂಡ ನಾವು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. 1967ನೇ ಇಸವಿಯಲ್ಲಿ ಗುಲ್ಬರ್ಗ ಮತ್ತು ರಾಯಚೂರಿನಲ್ಲಿ ನಡೆದಂತಹ ಹರಾಜಿನಲ್ಲಿ 12 ಲಕ್ಷ ರೂಪಾಯಿಗಳು ಕಡಿಮೆಯಾಯಿತು. ಈ ರೀತಿ ಕಡಿಮೆಯಾದಮೇಲೆ ಮತ್ತೆ ಹರಾಜು ಮಾಡಬೇಕಾಗಿತ್ತು. ಬೇರೆ ಜಿಲ್ಲೆಗಳಲ್ಲಿ ಹರಾಜಿನಲ್ಲಿ ಸರ್ಕಾರದವರು ಎಷ್ಟು ಹಣವನ್ನು ನಿರೀಕ್ಷೆ ಮಾಡುತ್ತಾರೋ ಅಷ್ಟು ಹಣ ಬಾರದಿದ್ದರೆ ಮತ್ತೆ ಹರಾಜು ಮಾಡುವ ಕ್ರಮವನ್ನು ಇಟ್ಟು ಕೊಂಡಿದ್ದಾರೆ. ಆದರೆ ಈ ಜಿಲ್ಲೆಗಳಲ್ಲಿ ಮಾತ್ರ ಆ ರೀತಿ ಮಾಡಲಿಲ್ಲ. ಹರಾಜಿನಲ್ಲಿ 12 ಲಕ್ಷ ರೂಪಾಯಿಗಳು ಕಡಿಮೆಯಾಗುವುದಕ್ಕೆ ಕಾರಣವೇನೆಂದರೆ, ಹರಾಜಿನಲ್ಲಿ ಭಾಗವಹಿಸಲು ಯಾವ ಕಂಟ್ರಾಕ್ಟರ್ ಬಂದಿದ್ದರೋ ಅವರಿಗೆ ಆ ಕ್ಷಣವೇ 24 ಲಕ್ಷ ರೂಪಾಯಿಗಳನ್ನು ಕಟ್ಟಬೇಕೆಂದು, ಬೇರೆ ರೀತಿಯ ಸೆಕ್ಯೂರಿಟಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಹಣವನ್ನೇ ಕಟ್ಟಬೇಕೆಂದು ಡಿವಿಜನಲ್ ಕಮೀಷನರ್ ಅವರು ಹೇಳಿದರು. ಆ ಕಾರಣದಿಂದ ಆ ಕ್ಷಣದಲ್ಲಿ ಆ ಕಂಟ್ರಾಕ್ಟರ್‌ಗೆ 24 ಲಕ್ಷ ರೂಪಾಯಿಗಳನ್ನು ಕಟ್ಟುವುದಕ್ಕಾಗಲಿಲ್ಲ. ಆ ಕಾರಣದಿಂದ ಆ ಕಂಟ್ರಾಕ್ಟರು ಹರಾಜಿನಲ್ಲಿ ನಿಲ್ಲಲಿಲ್ಲ. ಈ ಭಾಗದಲ್ಲಿ ಯಾರಿಗೆ ಕಂಟ್ರಾಕ್ಟ್ ಕೊಡಬೇಕೆಂದು ಸರ್ಕಾರದವರು ತಮ್ಮ ಮನಸ್ಸಿನಲ್ಲಿ ಒಂದು ಭಾವನೆಯನ್ನು ಇಟ್ಟುಕೊಂಡಿದ್ದರೋ ಅವರ ಹೆಸರಿಗೇ ಆಯಿತು. ಈ ರೀತಿ ಕಂಟ್ರಾಕ್ಟ್ ಪಡೆದಮೇಲೆ ಆತನು ಸುಮಾರು 76 ಲಕ್ಷ ರೂಪಾಯಿಗಳಷ್ಟು ಆದಾಯ ಮಾಡಿ ಕೊಂಡಿದ್ದಾನೆಂದು ತಿಳಿದುಬಂದಿದೆ. 76 ಲಕ್ಷ ಆದಾಯ ಬಂದಿದೆ ಎಂದು ಹೇಳಲು ಹೇಗೆ ಸಾಧ್ಯವೆಂದರೆ ಬಾಂಡೆಡ್ ಡಿಪೋದಿಂದ ಎಷ್ಟು ಲೀಟರ್ ಸಾರಾಯಿ ತೆಗೆದುಕೊಂಡಿದ್ದಾರೆ, ಎಷ್ಟು ಮರಗಳಿಂದ ಹೆಂಡ ಇಳಿಸಿದ್ದಾರೆಂಬುದರಮೇಲೆ ಟ್ರೀ ಟ್ಯಾಕ್ಸ್ ಕೊಟ್ಟಿರುವುದು, ಮತ್ತು ಮರ ಒಂದಕ್ಕೆ ಎಷ್ಟು ಹೆಂಡ ಇಳಿಯುತ್ತೆ ಎಂಬುದರ ಲೆಕ್ಕದ ಮೇಲೆ ಇದನ್ನು ಕಂಡು ಹೈದರಾಬಾದಿನಿಂದ ಬಂದು ಕಳೆದವರ್ಷದ ಹರಾಜು ಮೊಬಲಗಿಗಿಂತ 36 ಲಕ್ಷ ರೂಪಾಯಿ ಹೆಚ್ಚಿಗೆಮಾಡಿದ್ದಾರೆ. ಅಂದರೆ 1967ನೇ ಇಸವಿಗಿಂತ 1968ನೇ ಇಸವಿಯಲ್ಲಿ ಸರ್ಕಾರಕ್ಕೆ ಹೆಚ್ಚು ಹಣ ಬಂದಂತಾಯಿತು.

9-00 P.M.

ಆದರೆ ಈ ಹಣ ಸರಕಾರಕ್ಕೆ ಬರತಕ್ಕ ಆಸೆ ಇದ್ದಿದ್ದರೆ ಯಾರು ಹರಾಜಿನಲ್ಲಿ ಹೆಚ್ಚು ಹಣ ಕೊಡುತ್ತೇವೆ ಎಂದು ಕೂಗುತ್ತಾರೋ ಅಂತಹವರ ಹೆಸರಿಗೆ ಬಿಡ್ ನಿಲ್ಲಬೇಕು ಮತ್ತು ಅದರಿಂದ ಹೆಚ್ಚು ಸರಕಾರಕ್ಕೆ ಬರುತ್ತದೆ ಎನ್ನುವುದನ್ನೂ ಇಲ್ಲಿ ಆಲೋಚನೆ ಮಾಡಬೇಕು. ಇದಕ್ಕೆ ಬದಲಾಗಿ ಹರಾಜಿನಲ್ಲಿ ಈ ರೀತಿ ಲಾಭ ಬರುವುದನ್ನು ಕೈ ತಪ್ಪಿಸಿ ಇವರಿಗೆ ಯಾರು ಸಹಾಯ ಮಾಡುತ್ತಾರೋ ಅಂತಹವರಿಗೆ ಈ ಕಂಟ್ರಾಕ್ಟ್ ನಿಲ್ಲಬೇಕೆಂದು ವ್ಯವಸ್ಥೆ ಮಾಡಿದ್ದಾರೆ ಇದಕ್ಕೆ ಕೆಲವಾರು ನಿದರ್ಶನಗಳನ್ನೂ ಕೊಡಬಹುದು. ಆದರೆ ಈಗ ಇದರ ವಿವರಗಳನ್ನು ಕೊಡುವುದಕ್ಕೆ ನಾನು

ಹೋಗುವುದಿಲ್ಲ ಮತ್ತು ಇದರ ಬಗ್ಗೆ ಆಗಲೇ ಅನೇಕರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇನ್ನು ಇದರಲ್ಲಿ ಹೆಚ್ಚು ಹಣ ಸಂಪಾದನೆ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡುವಾಗ ಹರಾಜುಗಳನ್ನು ಷಾಪುವೈಸು ಮಾಡಿದ್ದರೆ ಇದರಿಂದ ಸ್ವಲ್ಪ ಹೆಚ್ಚು ಲಾಭ ಪಡೆಯಲು ಅವಕಾಶ ವಿತ್ತು. ಆದರೆ ಇದರ ಬಗ್ಗೆ ಹೇಳುವಾಗ ನಮ್ಮ ಅಬಕಾರಿ ಸಚಿವರು ಇದನ್ನು ತಿರುವು ಮುರುವು ಮಾಡಿ ಇದರ ಬಗ್ಗೆ ಸಾಕಾದಷ್ಟು ಉತ್ತರ ಕೊಟ್ಟಿದ್ದಾರೆ. ಇದನ್ನು ಇಲ್ಲಿ ಪುನಃ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇದನ್ನೆಲ್ಲಾ ನೋಡಿದರೆ ಹೆಂಡ ಮಾರುವ ಕಂಟ್ರಾಕ್ಟರುಗಳೊಂದಿಗೆ ಸರಕಾರದವರೂ ಸೇರಿಕೊಂಡು ಒಂದು ರೀತಿಯಾದ ಪರಸ್ಪರ ಸಹಾಯ ಸಂಘವನ್ನು ಮಾಡಿಕೊಂಡಿದ್ದಾರೆ ಎನ್ನುವುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ನಾಗಪ್ಪನವರು ಹೇಳಿದಂತೆ ಈ ಕಂಟ್ರಾಕ್ಟರುಗಳಿಂದ ಚುನಾವಣೆಗಳ ಕಾಲದಲ್ಲಿ ಇವರಿಗೆ ಯಾವ ಯಾವ ತರಹದ ಸಹಾಯ ಸಲಕರಣೆಗಳು ಬೇಕೋ ಅವರಿಗೆ ಸಿಗುತ್ತವೆ. ಇವರಿಗೆ ಬೇಕಾಗುವಷ್ಟು ಜೀಪುಗಳು ಸಿಗುತ್ತವೆ ಮತ್ತು ಇವರ ಪ್ರತಿ ನಿತ್ಯದ ವ್ಯವಹಾರಗಳಿಗೆ ಬೇಕಾಗುವಷ್ಟು ಹಣ ಸಿಗುತ್ತದೆ. ಇದರಲ್ಲಿ ಯಾವ ಅನುಮಾನವೂ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸು, ಯೋಜನೆ ಮತ್ತು ಯುವಜನ ಕಲ್ಯಾಣ ಶಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರಿಗೆ ಒಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ಸೇಂದಿಯನ್ನು ಹರಾಜು ಮಾಡುವ ವಿಚಾರದಲ್ಲಿ ಇಲ್ಲಿ ಚರ್ಚೆ ಬಂದಾಗ ಷಾಪುವೈಸು ಹಾಗು ತಾಲ್ಲೂಕುವೈಸು ಹರಾಜು ಮಾಡಬೇಕೇ ಬೇಡವೇ ಎನ್ನುವುದರ ಬಗೆಗೆ ಈ ಸಭೆಯಲ್ಲಿ ಚರ್ಚೆಯಾಗಿದೆ ಇದರ ಬಗ್ಗೆ ನಾನು ಆಗ ಕಳೆದ ಮೂರು ವರ್ಷಗಳಿಗೆ ಸಂಬಂಧಪಟ್ಟ ಎಲ್ಲ ಅಂಕೆ ಸಂಖ್ಯೆಗಳನ್ನೂ ಕೊಟ್ಟಿದ್ದೇನೆ. ಷಾಪುವೈಸು ಹರಾಜು ಮಾಡಿದರೆ ಕೆಲವು ಕಡೆಗಳಲ್ಲಿ ಎಂದರೆ ಎಲ್ಲಿ ಬಿಸಿನೆಸ್ಸು ಚೆನ್ನಾಗಿ ನಡೆಯುತ್ತದೆಯೋ ಅಲ್ಲ ನಮಗೆ ಸರಿಯಾದ ಬಿಡ್ಡು ಬರುತ್ತದೆ. ಆದರೆ ನಮ್ಮ ರಾಜ್ಯದ ಗುಲ್ಬರ್ಗಾ ಹಾಗೂ ರಾಯಚೂರು ಜಿಲ್ಲೆಗಳನ್ನು ತೆಗೆದುಕೊಂಡರೆ ಗುಲ್ಬರ್ಗಾದಲ್ಲಿ ನಾಲ್ಕು ತಾಲ್ಲೂಕುಗಳಿವೆ ಮತ್ತು ರಾಯಚೂರಿನಲ್ಲಿ ಐದು ತಾಲ್ಲೂಕುಗಳಿವೆ. ಇಲ್ಲಿ ಹರಾಜು ಮಾಡಲು ಟೆಂಡರುಗಳನ್ನು ಕರೆದರೂ ಯಾರಿಂದಲೂ ಸರಿಯಾದ ಬಿಡ್‌ಗಳು ಬರಲೇ ಇಲ್ಲ ಅಲ್ಲದೆ ಇಲ್ಲಿ ಷಾಪುಗಳ ಮೂಲಕವೇ ಹರಾಜು ಮಾಡಬೇಕೆಂದರೆ ನೂರಾರು ಕಂಟ್ರಾಕ್ಟರುಗಳೊಡನೆ ಡೀಲ್ ಮಾಡಬೇಕಾಗಿ ಬರುತ್ತದೆ. ಇದರಲ್ಲಿ ಯಾರು ಸರಿಯಾಗಿ ವ್ಯವಹಾರ ಮಾಡುತ್ತಾರೆ ಯಾರು ಬೇರೆ ವ್ಯವಹಾರ ಮಾಡುತ್ತಾರೆ. ಇವುಗಳನ್ನು ಕಂಡುಹಿಡಿಯಬೇಕು ಎಂದರೆ ಸ್ವಲ್ಪ ಕಷ್ಟವಾಗುತ್ತದೆ. ಇದರಿಂದ ಇಲ್ಲಿ ಷಾಪುವೈಸು ಮಾಡುವುದು ಸರಿಯಲ್ಲ ಎಂದು ನಿಲ್ಲಿಸಲಾಯಿತು. ಎಲ್ಲಿ ಷಾಪುವೈಸು ಮಾಡಲು ಅನುಕೂಲ ಇದ್ದು ಅಲ್ಲಿ ಹೆಚ್ಚು ಹಣ ಬರುವ ಸಂಭವ ಇದ್ದರೆ ಅಲ್ಲಿ ಹರಾಜು ಮಾಡುತ್ತೇವೆ ಮತ್ತು ಕೆಲವು ಕಡೆ ಗ್ರೂಪುಗಳನ್ನು ಮಾಡಿ ಗ್ರೂಪ್‌ವೈಸು ಹರಾಜು ಕೂಡ ಮಾಡಲಾಗಿದೆ ಮತ್ತು ಎಲ್ಲಿ ಸರಕಾರಕ್ಕೆ ಅತಿ ಹೆಚ್ಚಿನ ಆದಾಯ ಬರುತ್ತದೆಯೋ ಮತ್ತು ಯಾರಿಂದ ಹೈಯಸ್ಟ್ ಬಿಡ್ ಬರುತ್ತದೋ ಅಂತಹುದನ್ನೇ ಸರ್ಕಾರ ಒಪ್ಪಬೇಕು ಇದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಷಾಪುವೈಸು ಎಂದು ಇಲ್ಲಿ ಮಾಡಿದ್ದರೆ ಸರಕಾರಕ್ಕೆ ಲಕ್ಷಾಂತರ ರೂಪಾಯಿಗಳಷ್ಟು ನಷ್ಟವಾಗುತ್ತಿತ್ತು. ಇದರ ಹೊಣೆ ಹೊರುವುದು ಸರಿಯಲ್ಲ ಎಂದು ಇದನ್ನು ಕೈಬಿಡಲಾಯಿತು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅನೇಕ ಕಂಟ್ರಾಕ್ಟರುಗಳೊಡನೆ ವ್ಯವಹಾರ ಮಾಡಬೇಕಾಗುತ್ತದೆ ಮತ್ತು ಹೀಗೆ ಮಾಡುವುದು ಕಷ್ಟ ಎಂದು ಮಾನ್ಯ ಮಂತ್ರಿಗಳು ತಿಳಿಸಿದರು. ಇದನ್ನು ನೇರವಾಗಿ ಮಂತ್ರಿಗಳು ಮಾಡಬೇಕಾದ ಅವಶ್ಯಕತೆಯೇನೂ ಇಲ್ಲ. ಇದರ ವ್ಯವಹಾರಗಳನ್ನು ಮಾಡಲು ಅಬಕಾರಿ ಇಲಾಖೆ ಇದೆ ಮತ್ತು ಪೋಲೀಸು ಇಲಾಖೆ ಇದೆ ಮತ್ತು ಇಲ್ಲಿ ನೌಕರರು ಇದ್ದಾರೆ ಅವರು ನೋಡಿಕೊಳ್ಳುತ್ತಾರೆ. ನಿನ್ನೆ ದಿವಸ ಇಲ್ಲಿ ಮಾತನಾಡಿದ ಕೆಲವು ಸದಸ್ಯರುಗಳು ಸ್ಪಷ್ಟವಾಗಿ ಹೇಳುತ್ತಾ ಮಧ್ಯದಲ್ಲಿ ಹೈಡ್ರೋಕ್ಲೋರೈಡ್ ಎನ್ನುವಂತಹ ವಸ್ತುವನ್ನು ಬೆರಸಿ ಜನರಿಗೆ ಕುಡಿಯಲು ಕೊಟ್ಟು ಅವರ ಆರೋಗ್ಯವನ್ನೂ ಹಾಳುಮಾಡುತ್ತಿದ್ದಾರೆ ಎಂದು. ಇದರ ಅವ್ಯವಹಾರಗಳನ್ನು ತಡೆಗಟ್ಟಬೇಕು ಎಂದು ಸರಕಾರಕ್ಕೆ ಹೇಳಿದರೂ ಸರಕಾರ ಇದರ ಕಡೆಗೆ ಗಮನ ಕೊಡುತ್ತಿಲ್ಲ ಮತ್ತು ಸಾಕಾದಷ್ಟು ವ್ಯವಸ್ಥೆ ಕೂಡ ಮಾಡಲಿಲ್ಲ ಎಂದೂ ಹೇಳಿದರು. ಮಾನ್ಯ ಸಚಿವರು ಎಷ್ಟುಮಟ್ಟಿಗೆ ಇಲ್ಲಿ ವ್ಯವಹಾರಗಳನ್ನು ಮಾಡಿದ್ದಾರೆ ಮತ್ತು ಯಾವ ರೀತಿಯಾಗಿ ಅವ್ಯವಹಾರಗಳಾಗಿವೆ ಎನ್ನುವುದನ್ನು ಹೇಳುವಾಗ ಕಳ್ಳಬಟ್ಟಿ ಮಾಡಿ ಹೆಂಡ ಕುಡಿಸಿ ಜನರ ಆರೋಗ್ಯವನ್ನು ಕೆಡಿಸುತ್ತಿರುವುದರ ಪರ ವಾದವನ್ನು ಮಾಡುವುದಕ್ಕೋಸ್ಕರ ಇಲ್ಲಿ ನಾವು ನಿಂತಿಲ್ಲ. ಇಲ್ಲಿ ಭೂಮರೆಡ್ಡಿ ಎನ್ನುವ ಕಂಟ್ರಾಕ್ಟರಿಂದ ತಪ್ಪುಗಳು ಆಗಿದ್ದರೂ ಅದು ತಪ್ಪಲ್ಲ ಇನ್ನೊಬ್ಬರು ಮಾಡಿದುದು ತಪ್ಪು ಎಂದು ಹೇಳುತ್ತಿಲ್ಲ. ಇದರಲ್ಲಿ ಒಬ್ಬರಿಗೊಬ್ಬರಿಗೆ ನಡೆದಿರುವ ವ್ಯವಹಾರ ಅಷ್ಟು ಸಮರ್ಥನೀಯವಾದುದಲ್ಲ. ಇದರ ಬಗ್ಗೆ ಯಾರೂ ಅನುಮಾನ ಮಾಡಬೇಕಾಗಿಲ್ಲ.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಇನ್ನು ಈ ಹೆಂಡದ ಕಂಟ್ರಾಕ್ಟರು ಅಂಗಡಿಗಳನ್ನು ನಡೆಸಿದ ಒಂದು ತಿಂಗಳ ಅವಧಿಯಲ್ಲಿ ಅಧಿಕಾರಿಗಳು ಯಾರೂ ಅವರಿಗೆ ಸಹಾಯ ಕೊಡದಂತೆ ಹೇಳಿ ಕಂಟ್ರಾಕ್ಟರ್ ಮೇಲೆ 250 ಕೇಸುಗಳನ್ನು ಹಾಕಿದ್ದಾರೆ. ಇದರಲ್ಲಿ ತಮಗೆ ಬೇಕಾದ ಕಂಟ್ರಾಕ್ಟರುಗಳಾದರೆ ಅವರ ಮೇಲೆ ಯಾವ ಕ್ರಮವೂ ಇಲ್ಲ. ಭೂಮಾರೆಡ್ಡಿಯವರು ಅಪರಿಚಿತ ವ್ಯಕ್ತಿ ಎಂದು ಹೇಳಿ ಕಮರ್ಷಿಯಲ್ ಟ್ಯಾಕ್ಸ್ ಆಫೀಸರವರು ಇವರಿಂದ ಒಂದು ವರ್ಷದ ಸೇಲ್ಸ್ ಟ್ಯಾಕ್ಸನ್ನು ಅಡ್ವಾನ್ಸಾಗಿ ಮೊದಲೇ ಕೊಡಬೇಕು ಎಂದು ಒಂದು ಹುಕುಂ ಕೂಡ ಕೊಟ್ಟಿದ್ದರು ಎಂದು ಇಲ್ಲಿ ತಿಳಿದುಬರುತ್ತದೆ. ಇದು ಯಾವ ನ್ಯಾಯ ಎಂದು ಇಲ್ಲಿ ನಾನು ಕೇಳಬೇಕಾಗಿದೆ. ಸುಮಾರು ತೊಂಬತ್ತು ಲಕ್ಷ ರೂಪಾಯಿಗಳಷ್ಟು ಮೊದಲೇ ಸರಕಾರದಲ್ಲಿ ಡಿಪಾಸಿಟ್ಟು ಮಾಡಿರುವ ವ್ಯಕ್ತಿಯನ್ನು ಅಪರಿಚಯಸ್ಥನೆಂದು ಕರೆದು ಮೊದಲೇ ಟ್ಯಾಕ್ಸ್ ಕೊಡಬೇಕು ಎಂದು ಹೇಳುವುದು ಸರಿಯಾದುದಲ್ಲ. ಇದರಿಂದ ಒಂದು ಸ್ಪಷ್ಟವಾಗುತ್ತದೆ. ಯಾರು ಇವರಿಗೆ ಸಹಾಯಕರಾಗಿರುವುದಿಲ್ಲವೋ ಅವರಿಗೇನೂ ಸಹಾಯ ಮಾಡಬಾರದು ಯಾರು ಇವರಿಗೆ ಒಬ್ಬರಿಗೊಬ್ಬರಿಗೆ ನಿಂತು ಸಹಾಯ ಮಾಡುತ್ತಾರೋ ಅವರಿಂದ ಸರಕಾರಕ್ಕೆ ವರಮಾನ ಬರುವುದು ಹೋದರೂ ಸರಿಯೇ ಪರವಾಗಿಲ್ಲ ಅಂತಹವರಿಗೆ ಕಾನೂನು ಇಲ್ಲದಿದ್ದರೂ ಸಹಾಯ ಮಾಡಬೇಕು ಎಂದು ಮಾಡುವ ಇವರ ಕುಹಕ ನೀತಿಯನ್ನು ನಾವು ಕಂಡಿತ ಒಪ್ಪುವುದಕ್ಕಾಗುವುದಿಲ್ಲ. ಸರಕಾರಕ್ಕೆ ಬರುವ ಉತ್ಪತ್ತಿಯನ್ನು ಯಾವ ರೀತಿಯಿಂದಲಾದರೂ ಹೆಚ್ಚು ಮಾಡಬೇಕು ಎನ್ನುವುದರ ಕಡೆಗೆ ಇವರ ಗಮನ ಇಲ್ಲ. ಇವರ ವ್ಯವಹಾರಕ್ಕೆ ಹಣ ಬೇಕು ಎಂದು ಇವರಿಗೆ ಸಹಾಯ ಮಾಡುತ್ತಿದ್ದಾರೆ. ಬಂಡವಾಳಗಾರರನ್ನು ದಮನ ಮಾಡಬೇಕು ವರ್ಗರಹಿತ ಸಮಾಜವನ್ನು ಕಟ್ಟಬೇಕು ಎಂದು ಕಾಂಗ್ರೆಸ್ಸಿನವರ ನೀತಿ ಇದೆ ಎಂದು ಆಕಾಶದ ಉದ್ದಕ್ಕೂ ಇವರು ಎಲ್ಲ ಕಡೆಗಳಲ್ಲಿಯೂ ಭಾಷಣ ಮಾಡುತ್ತಿದ್ದ ಇವರ ತತ್ವದಂತೆ ಇಂದು ನಡೆಯುತ್ತಿದ್ದಾರೆಯೇ ಎಂದು ಇಲ್ಲಿ ಕೇಳಬೇಕಾಗಿದೆ. ಆದುದರಿಂದ ನಾನು ಇಲ್ಲಿ ಹೇಳುವುದು ಮೊದಲನೆಯದಾಗಿ ರಾಜ್ಯಕ್ಕೆ ಬರುವ ವರಮಾನವನ್ನು ಬಾರದಂತೆ ಮಾಡಿರುವುದು ಸರಿಯಲ್ಲ. ಇದರಲ್ಲಿ ಅಪರಾಧಮಾಡಿದ್ದಾರೆ. ಎರಡನೇದಾಗಿ ಅಧಿಕಾರಿಗಳು ಕಾನೂನು ಪ್ರಕಾರ ವ್ಯವಹಾರ ಮಾಡುವಾಗ ಅವರಲ್ಲಿ ಕೈ ಹಾಕಿದ್ದಾರೆ ಮತ್ತು ಅಧಿಕಾರಿಗಳು ಮಾಡುವ ಕೆಲಸಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ತಮ್ಮ ಪಕ್ಷದ ತತ್ವಕೇ ತಿಲಾಂಜಲಿಯನ್ನಿತ್ತು ಬಂಡವಾಳಗಾರರಿಗೆ ಪ್ರೋತ್ಸಾಹ ಕೊಟ್ಟಿದ್ದಾರೆ. ಇದರಿಂದ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ್ದಾರೆ. ಇಂತಹ ಅಪರಾಧಗಳನ್ನು ಮಾಡಿರತಕ್ಕ ಸರಕಾರ ಅಧಿಕಾರದಲ್ಲಿರಲು ಅರ್ಹರಲ್ಲ. ಇವರು ತಕ್ಷಣ ರಾಜಿನಾಮೆ ಕೊಡಬೇಕು. ಒಂದು ಶ್ರೇಷ್ಠ ನ್ಯಾಯಾಲಯದ ತೀರ್ಪು ಬಂದ ಮೇಲೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಹಾಗೂ ವಿಶ್ವಾಸ ಉಳ್ಳ ಜನಕ್ಕೆ ಇದು ಯೋಗ್ಯವಲ್ಲ ಎಂದು ನಾನು ಭಾವಿಸುತ್ತೇನೆ. ನಮಗೆ ಬಂದಿರುವ ವರ್ತಮಾನದ ಪ್ರಕಾರ ಈ ಕೇಸು ಸುಪ್ರೀಂ ಕೋರ್ಟು ಮುಂದೆ ಚರ್ಚೆಯಾಗುತ್ತಿದ್ದಾಗ ಅಲ್ಲಿದ್ದ ನ್ಯಾಯಾಧೀಶರಾದ ಮಾನ್ಯ ಶ್ರೀ ಬಚಾವತ್ ರವರು "If your Chief Minister has got any respect for democraylet him resign immediately". ಎಂದು ಹೇಳಿದರೆಂದು ನಮಗೆ ಗೊತ್ತಾಗಿದೆ.

ಸ್ವಾಮಿ, ಸುಪ್ರೀಂ ಕೋರ್ಟಿನ ತೀರ್ಪು ನಮ್ಮ ಮುಂದಿದ್ದರೂ ಸಹ ಹೈಕೋರ್ಟ್ ತೀರ್ಪಿನ ಕೆಲವು ಅಂಶಗಳ ಮೇಲೆ ವಾದ ಮಾಡುತ್ತಿರುವುದು ನಿಮ್ಮ ದಡ್ಡತನವನ್ನು ಎತ್ತಿ ತೋರಿಸುತ್ತದೆ. ಆದುದರಿಂದ ನೀವು ಅಧಿಕಾರದಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಜನಗಳಿಗೆ ನೀವು ಒಂದು ಒಳ್ಳೆಯ ಸತ್‌ಸಂಪ್ರದಾಯಗಳನ್ನು ಹಾಕಿಕೊಡಿ. ಶ್ರೇಷ್ಠ ನ್ಯಾಯಾಲಯ ನಿಮ್ಮ ಮೇಲೆ ಒಂದು ಅಭಿಪ್ರಾಯ ಕೊಟ್ಟಿರುವುದರಿಂದ ನೀವು ಅದಕ್ಕೆ ಮನ್ನಣೆ ತೋರಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಪ್ರಾರ್ಥನೆ ಏತಕ್ಕೆಂದರೆ ನಾವೆಲ್ಲರೂ ಇಡೀ ಭರತಖಂಡದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆ ಮಾಡಲು ಕಂಕಣ ಬದ್ಧರಾಗಿರಬೇಕು. ಅದನ್ನು ನೀವು ಪರಿಪಾಲನೆ ಮಾಡುತ್ತಾ ಇಲ್ಲ. ಈವೊತ್ತಿನ ದಿವಸ ಜನಗಳಿಗೆ ಸರ್ಕಾರದಲ್ಲಿ ನ್ಯಾಯ ಸಿಕ್ಕುವುದಿಲ್ಲವೆಂಬ ಕಾರಣದಿಂದಲೇ ನ್ಯಾಯಾಲಯಕ್ಕೆ ಹೋಗುತ್ತಿದ್ದಾರೆ. ಇದಕ್ಕೆ ಹೈಕೋರ್ಟ್ ಮುಂದಿರುವ ರಿಟ್ ಅರ್ಜಿಗಳೇ ಸಾಕ್ಷಿ. ಇದರಿಂದ ಅವಿಶ್ವಾಸ ಜನಗಳಲ್ಲಿ ಇದೆ. ಇದು ಸರ್ಕಾರಕ್ಕೂ ಗೊತ್ತಿದೆ. ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡಬೇಕಾದರೆ ನೀವು ಮೊದಲು ರಾಜೀನಾಮೆ ಕೊಡಬೇಕು. ಆಮೇಲೆ ವಿಚಾರಣಾ ಆಯೋಗ ರಚಿಸಿ ವಿಚಾರಣೆ ಮಾಡಿ. ನೀವು ಅಧಿಕಾರದಲ್ಲಿ ಇರಲು ಅರ್ಹರಲ್ಲ ಎಂದು ನಾನು ಧೃಡವಾಗಿ ಹೇಳಿ ಅವಿಶ್ವಾಸ ನಿರ್ಣಯವನ್ನು ಪುಷ್ಟೀಕರಿಸುತ್ತೇನೆ.

V-3IN69
H69-25.6-10
(B) 4857

† Sri B. P. GANGADHAR (Tumkur).—Hon. Speaker Sir, during the time of ex-Rulers even though it was not a full fledged democracy, even to the limited extent that was possible, democracy functioned very well and the representatives of the people used to function on behalf of the people. Now Sir, after the advent of Independence, this Congress organisation has captured power and time and again there are instances of gross misrule and misdeeds committed by these people. It is not one or two instances but any number of them are there. Every year, every minute, every day, they will be indulging in atrocities, wrong orders and they are doing acts of favouritism to their own henchmen only with intention of perpetuating Congress rule in the State. In fact why such a distinction is made between contractor and contractor is for the reason that they want to grab as much money as possible from the contractors to spend on election and distribute the money to their own henchmen so that they will get their own men elected and form a cabinet, and thus perpetuate Congress misrule till eternity. This is the reason why these people have been indulging in atrocious acts and acts which have no parallel in any other State in India. In the instant case, the topmost bidder quoted Rs. 9,99,999 per month and the next bidder Sri K. V. Niranjan Rs. 9,69,999. There was a difference of nearly 30,000. This contractor at the direction of the officials concerned made a deposit of nearly 40 lakhs. 40 lakhs is no small amount. It is a very fabulous and big amount. These people were not satisfied with that deposit because they wanted that the contract should be given to their own henchmen, namely, Sri K. V. Niranjan and through him they wanted to get as much money as possible for their own needs. So they wanted to invent methods as to how the topmost bidder could be crushed and sent back and how their own henchman could be brought and installed as contractor. So Sir, they started punching him. In one month, they have launched as many as 250 cases against Mr. Bhooma Reddy. It is possible to get instances of 10 or 15 cases being launched against a Contractor, but nowhere can you get an instance where 250 cases have been launched against any single contract within the course of a single month. Is it not a proof of mala fides on the part of the Government to see that by hook or crook he must be coerced out of this contract and the contract may be given to their own henchman, namely, Sri K. V. Niranjan?

Yet another instance is there. Apart from launching of cases and prosecuting the persons concerned, the Sales-tax department was alerted. All this can be done only by Ministers who are concerned in the Cabinet and they must be responsible for this. Unless they whip up the local police and excise officers, they would not be able to launch 250 cases. Is there any other single instance like this, anywhere in Mysore State? Similarly, they have whipped up the Sales-tax Department which served a mandate on Mr. Bhooma Reddy saying that he must have to pay the entire sales-tax for one full year. This is yet another instance of *mala fides* on the part of the Government to see that somehow or other he is coerced out and that their own henchman, a person who has financed

(SRI B. P. GANGADHAR)

these persons in the last general election and from whom finances will be again available in the next general election. That is why they have whipped up the Sales-tax Department.

I promised the Speaker that I will not take more than five minutes. I limit myself only to facts which have not as yet been brought before the House. I am not repeating any points already made out.

In this context, the matter did not stop there. When the writ petition was pending, I have reliable information to the effect that the Chief Minister intervened, got the contractors to his House and he wanted to effect a compromise in the matter. Then he stated that the 40 lakhs that would be forfeited would be restored to him and he is reported to have said that some more money will be given to him if he is prepared to accept the compromise. To this, Mr. Bhooma Reddy is reported to have replied : ' No Sir. Is this not a government ? Is there no law and order prevailing in this State ? Is equity prevailing in this Government ? If justice has to be done, I must be given the contract because I am the highest bidder. There is no *via media* and no compromise. If justice and fairplay can prevail in this country where Gandhiji......

Sri G. THAMMANNA (Deputy Minister for Sericulture).—I rise to a point of order, Sir. Can a member read newspapers in this House ?

Mr. SPEAKER.—The hon. Member has given it up now.

Sri B.P. GANGADHAR.—So, while you are celebrating the Gandhi Centenary this year and truthfulness of Gandhi is the guiding principle he is reported to have said, 'I am not prepared to compromise'. I am given to understand that the Chief Minister stated in this conversation " I will see, how you will be able to have the contract for the entire year ". That was the information given to me. One distinguished personality from Hyderabad, no less a person like the Minister Sri J.V. Narasinga Rao intervened in this matter. He came to the doors of the Chief Minister and the minister for Excise and he pursuaded them.

Sri VEERENDRA PATIL.—On a point of order, Sir. The hon. Member has referred to the name of Sri J.V. Narasinga Rao. He is the Minister in charge of Communication in Andhra Pradesh. That hon. Member is not a member of this House and he is not in a position to defend himself. I do not think it is fair on the part of any member to drag in the name of an hon. member of the other State.

Mr. SPEAKER.—I think the hon. Member will avoid mentioning names of persons. Supposing the Chief Minister were to say that he had never met him there, the hon. Member will be unnecessarily embarrassed. So, it will be better to aviod reference to names.

Sri B. P. GANGADHAR.—I shall leave it at that. So, intervention of persons even from Andhra Pradesh did not bear fruit. In fact they wanted to impress on the State of Mysore, the Chief Minister and also

the Minister for Excise to the effect that justice needs to be done and must be done. I am also given to understand that if any contractors were to go to Andhra, they will be met with similar disastrous consequences. Such a threatening conversation took place.

When things are like that, this one single instance, namely, launching of 250 cases in one month and demanding the payment of sales tax for the entire year, is surprising. This shows clear *mala fide* on the part of the Government which does not require any further proof. That is why the Supreme Court has observed that there are many reasons to suspect the *bona fides* of the Government and the way the Government has functioned is not beyond suspicion. If they have any self-respect, I demand their resignation forthwith. The topmost court has said that there is *mala fide* on the part of the Government and the conduct of the Government is not beyond suspicion. There cannot be better proof and verdict than the one passed by the Supreme Court. I demand the resignation of the present cabinet. Sri Devaraj Urs was making a comment the only that Minister concerned will be responsible and not the entire cabinet. The Constitution is clear on this point. The whole ministry is responsible jointly for the actions of the Government.

With this, I conclude Sir.

†ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಈ ಮಂತ್ರಿಮಂಡಲದ ಮೇಲೆ ತಂದಿರತಕ್ಕ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಸಂಪೂರ್ಣವಾಗಿ ನಡೆಯುತ್ತಿದೆ. ಈ ಸರ್ಕಾರ ಪಾಪದ ಕೆಲಸವನ್ನು ಮಾಡುವುದಕ್ಕೆ ಹೋಗುತ್ತಿದೆ ಎಂದು ನಾನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಈ ಪಾಪದ ಕೆಲಸಕ್ಕೆ ಪ್ರೇರೇಪಕರು ಒಬ್ಬರು, ಮಾಡಿರುವವರು ಒಬ್ಬರು, ಯಜ್ಞಪಶುವಾಗಿರುವವರು ಇನ್ನೊಬ್ಬರು. ಈ ತರಹ ಇದರಲ್ಲಿ ನಡೆದಿದೆ. ಇದರಲ್ಲಿ ಶ್ರೀ ಭೂಮರೆಡ್ಡಿಯವರದಾಗಲೀ ಅಥವಾ ಶ್ರೀ ನಿರಂಜನ್ ಅವರದಾಗಲೀ ಅವರದು ದೊಡ್ಡ ಶ್ರೀಮಂತರ ಜಗಳ. ಅದಕ್ಕೂ ನಮಗೂ ಸಂಬಂಧವಿಲ್ಲ. ಯಾರಿಗೋ ಬಡವರಿಗೆ ಸಹಾಯ ಮಾಡುವ, ಅನುಕೂಲ ಮಾಡುವ ಉದ್ದೇಶ ಇದರಲ್ಲಿ ಏನೂ ಇಲ್ಲ. ಸರ್ಕಾರ ಯಾವರೀತಿ ಒಬ್ಬ ಶ್ರೀಮಂತರಿಗೆ ಸಹಾಯ ಮಾಡಿ ಅವರ ಕೈಗೊಂಬೆಯಾಗಿದ್ದಾರೆ ಎಂದು ಹೇಳುತ್ತ ಇದ್ದೇನೆ. ಮುಖ್ಯ ಮಂತ್ರಿಯವರ ಚುನಾವಣೆ ನಡೆದ ಸಂದರ್ಭದಲ್ಲಿ ಸಹಾಯ ಮಾಡಿದವರಿಗೆ, ಸಹಾಯ ಮಾಡುತ್ತೇವೆಂದು ಹೇಳಿದವರಿಗೆ, ಯಾವ ಯಾವ ಮೂಲಕ ಏನೇನು ಸಹಾಯ ಕೊಟ್ಟಿದ್ದಾರೆ ಅವರಿಗೆ ಒಂದು ರೀತಿಯ ಗುಲಾಮರಾಗಿ ಸಹಕಾರ ನೀಡಿದ್ದಾರೆ. ಮಾನ್ಯ ನಿಜಲಿಂಗಪ್ಪನವರು ಈ ಸರ್ಕಾರವನ್ನು ಬಿಟ್ಟು ಹೋಗಿದ್ದರೂ ಅವರು ಹೇಳಿದ ರೀತಿಯಲ್ಲಿ ನಡೆಯತಕ್ಕ ಸರ್ಕಾರ ಇದು. ಇದರಲ್ಲಿ ಅತಿ ಮುಖ್ಯವಾದ ತಪ್ಪು ಮಾಡಿರುವವರು, ಪಾಪದ ಕೆಲಸಕ್ಕೆ ಕೈ ಹಾಕಿಸುವವರು ಶ್ರೀ ನಿಜಲಿಂಗಪ್ಪನವರು. ಈ ಪಾಪದ ಕೆಲಸವನ್ನು ಮಾಡುವುದಕ್ಕೆ ವೀರೇಂದ್ರ ಪಾಟೀಲರು ನುಗ್ಗಿದ್ದಾರೆ. ಈ ಸಂದರ್ಭದಲ್ಲಿ ನಿನ್ನೆ ಒಬ್ಬ ಸದಸ್ಯರು ಮಾತನಾಡುತ್ತಾ ಕೇವಲ ಒಬ್ಬ ಮಂತ್ರಿ ರಾಜೀನಾಮೆ ಕೊಡತಕ್ಕದ್ದು ಅವರಿಗೆ ಸಂಬಂಧಪಟ್ಟದ್ದು ಎಂದು ಹೇಳಿದರು. ಸುಪ್ರೀಂ ಕೋರ್ಟ್‌ನವರು ಹೇಳುವ ಪ್ರಕಾರ "It is rather surprising that the Government acted so hastily and issued licences to respondent No. 4 on or about September, 18". ಸರ್ಕಾರ ಎಂದರೆ ಏನು? ಕೇವಲ ಒಬ್ಬ ಮಂತ್ರಿ ಅಲ್ಲ. ನನಗೆ ತಿಳಿದಮಟ್ಟಿಗೆ ಈ ಮಂತ್ರಿಮಂಡಲದಲ್ಲಿ ಏನಾಗಿದೆ ಎಂದರೆ ವೀರೇಂದ್ರ ಪಾಟೀಲರ ಒಂದು ಸಿಂಡಿಕೇಟ್ ಇದೆ. ಅದಕ್ಕೆ ವೀರೇಂದ್ರ ಪಾಟೀಲರು ಮುಖ್ಯರು, ಎರಡನೆಯವರು ಶ್ರೀ ರಾಜಶೇಖರ ಮೂರ್ತಿಗಳು, ಮೂರನೆಯವರು ಶ್ರೀ ನಾಡಗೌಡರು. ಈ ಮೂರು ಜನರ ಸಿಂಡಿಕೇಟ್ ಮಂತ್ರಿಮಂಡಲದಲ್ಲಿ ಮೇಲುಗೈ ಪಡೆದಿದೆ. ಇತರರು ಮಂತ್ರಿಮಂಡಲದಲ್ಲಿ ಇಲ್ಲವೇ? ಈಗ ನಡೆದಿರುವ ಪಾಪದ ಕೆಲಸದಲ್ಲಿ ಯಜ್ಞಪಶು ಆಗಿರುವವರು ಶ್ರೀ ರಾಮಕೃಷ್ಣ ಹೆಗಡೆ ಅವರು. ಹೆಗಡೆ ಅವರಿಗೂ ಸಿಂಡಿಕೇಟಿನವರಿಗೂ ತಿಕ್ಕಾಟ ನಡೆಯುತ್ತಿದೆ. ಅವರು ಮಂತ್ರಿಮಂಡಲವನ್ನು ತ್ಯಜಿಸಿ ಬೇರೆ ಒಂದು ಉನ್ನತವಾದ

(ಶ್ರೀ ವಾಟಾಳ್ ನಾಗರಾಜ್)

ವಿದೇಶೀ ಹುದ್ದೆಗೆ ಹೋಗತಕ್ಕ ಮನಸ್ಸು ಅವರಿಗೆ ಇದೆ ಎಂದು ನನಗೆ ತಿಳಿದುಬಂದಿದೆ. ಅವರಿಗೆ ಯಾವುದಾದರೂ ರೀತಿಯಲ್ಲಿ ಏನಾದರೂ ಮಾಡಿ ಕಳಿಸಬೇಕು ಎಂದು ಇದ್ದಾರೆ. ಈ ಪಾಪದ ಕೆಲಸದಲ್ಲಿ ಅವರ ಕೈ ಶುದ್ಧವಾಗಿದೆ ಎಂದು ನನಗೆ ಅನ್ನಿಸುತ್ತದೆ. ಲೆಕ್ಕಾಚಾರವಾಗಿ ಈ ಪಾಪದ ಕೆಲಸದಿಂದ ಏನಾದರೂ ಅನ್ಯಾಯ ನಡೆದಿದ್ದರೆ ಅದರ ಹೊಣೆ ವೀರೇಂದ್ರ ಪಾಟೀಲರದೇ. ಅವರು ಸತ್ಯ ಧರ್ಮ ಎಂದು ಏನು ಹೇಳುತ್ತಾರೆ ಅದರಿಂದ ಏನೂ ಪ್ರಯೋಜನವಿಲ್ಲ. ಅವರು ಮಾಡಿರುವ ಪಾಪಕ್ಕೆ ಪ್ರಾಯಶ್ಚಿತ್ತವಾಗಬೇಕಾಗಿದ್ದರೆ, ಅವರಿಗೆ ಧೈರ್ಯವಿದ್ದರೆ, ಮಹಾತ್ಮ ಗಾಂಧಿಯವರ ತತ್ವಗಳಲ್ಲಿ ನಂಬಿಕೆ ಇದ್ದರೆ, ಕಾಂಗ್ರೆಸ್ ತತ್ವಗಳನ್ನು ಅನುಸರಿಸುವುದಾದರೆ, ರಾಜಿನಾಮೆ ಕೊಟ್ಟು ಹೊರಗೆ ಬಂದು ನ್ಯಾಯ ತನಿಖೆಗೆ ಸಿದ್ಧರಾಗಲಿ. ಅವರಿಗೆ ಆ ಶಕ್ತಿ ಇದ್ದರೆ ಮಾಡಲಿ. ನಾನು ಆಗಲೇ ಹೇಳಿದಂಥ ಮೂರು ಜನ ಸಿಂಡಿಕೇಟ್ ಸದಸ್ಯರು ಸೇರಿ ಇಷ್ಟಬಂದ ಹಾಗೆ ಮಾಡುತ್ತಿದ್ದಾರೆ. ಭೂಮರೆಡ್ಡಿ ಬಗ್ಗೆಯೂ ಅಲ್ಲ, ನಿರಂಜನರ ಬಗ್ಗೆಯೂ ಅಲ್ಲ. ಭೂಮರೆಡ್ಡಿಯರು ದೊಡ್ಡ ಮನುಷ್ಯರು ಎಂದು ಹೇಳುವ ಪ್ರಶ್ನೆ ಅಲ್ಲ. ಸುಪ್ರೀಂ ಕೋರ್ಟ್ ಆರ್ಡರ್ ಪ್ರಕಾರ ಇವರು ಏನು ಮಾಡಿದ್ದಾರೆ? ಸುಪ್ರೀಂ ಕೋರ್ಟ್ ಆಜ್ಞೆ ಪ್ರಕಾರ ಈ ಸರ್ಕಾರ ಒಂದು ಕ್ಷಣವೂ ಅಧಿಕಾರದಲ್ಲಿ ಇರುವುದಕ್ಕೆ ಅರ್ಹರಲ್ಲ. ಇವರಿಗೆ ಏನಾದರೂ ಗಾಂಧಿ ತತ್ವದಲ್ಲಿ ನಂಬಿಕೆ ಇದ್ದರೆ, ಇವರು ಗಾಂಧಿ ಭಕ್ತರಾಗಿದ್ದರೆ, ಕಾಂಗ್ರೆಸ್ ತತ್ವದ ವೇದವನ್ನು ಹೇಳುವುದಾದರೆ, ನಾನು ಆದರ್ಶವಾದಿಯಾದ ಮುಖ್ಯ ಮಂತ್ರಿ ಎಂದು ಹೇಳುವುದಾದರೆ, ರಾಜಿನಾಮೆಯನ್ನು ಕೊಡಲಿ. ಶ್ರೀಮಾನ್ ನಿಜಲಿಂಗಪ್ಪನವರ ಆಶೀರ್ವಾದ ಇದೆಯೆಂದು ನಿಜಲಿಂಗಪ್ಪನವರ ಹಾಗೆ ಬಹಳ ಬಹಳ ಚೀಪ್ ಆಗಿ, ಬಹಳ ಸುಲಭವಾಗಿ ಮಾತನಾಡಬಹುದು. ಅವಿಶ್ವಾಸ ನಿರ್ಣಯ ತಂದಿರುವುದರ ಬಗ್ಗೆ ಮೊನ್ನೆ ಚೇಂಬರ್ ಆಫ್ ಕಾಮರ್ಸ್ ಹತ್ತಿರ ಕೇಳಿದಾಗ ಅದು ಬರುತ್ತದೆ, ಹೋಗುತ್ತದೆ, ಮಾಮೂಲು ಕಥೆ ಎಂದು ಹೇಳಿದ್ದಾರೆ ಶ್ರೀ ನಿಜಲಿಂಗಪ್ಪನವರ ಮೇಲೆ 24 ಚಾರ್ಜಸ್ ಹಾಕಿದ್ದೆವು. ಇದೇ ಸಭೆಯ ವಿರೋಧ ಪಕ್ಷದ ನಾಯಕರು ಅವರ ಮೇಲೆ ಚಾರ್ಜಸ್ ಮಾಡಿದ್ದರು. ಕಪಟ ನಾಟಕದಿಂದ, ಮೋಸದಿಂದ ಅದು ಹಾಗೆಯೇ ಮುಂದೆ ಹೋಯಿತು. ಇವೊತ್ತು ಅದೇ ಜಾಡನ್ನು, ಅದೇ ದಾರಿಯನ್ನು ಶ್ರೀಮಾನ್ ವೀರೇಂದ್ರ ಪಾಟೀಲರು ಹಿಡಿಯುತ್ತಿದ್ದಾರೆ. ಇದು ಅವರಿಗೆ ಶ್ರೇಯಸ್ಕಾದುದಲ್ಲ, ಅವರಿಗೆ ಗೌರವ ತರತಕ್ಕುದಲ್ಲ. ಇವರು ಆತ್ಮಸಾಕ್ಷಿಯಾಗಿ ಅವರದು ಏನೂ ತಪ್ಪಿಲ್ಲ ಎಂದು ಹೇಳುವುದಾದರೆ ಅಗ್ನಿ ಪರೀಕ್ಷೆಗೆ ನಿಲ್ಲಲಿ. ಹಿಂದೆ ಸೀತೆಯ ಬಗ್ಗೆ ಒಂದು ಸಣ್ಣ ಮಾತು ಬಂದುದಕ್ಕಾಗಿ ಸೀತೆ ಅಗ್ನಿ ಪ್ರವೇಶ ಮಾಡಿ ಪರಿಶುದ್ಧಳು ಅನ್ನಿಸಿಕೊಳ್ಳಲಿಲ್ಲವೇ? ಅದೇ ರೀತಿಯಾಗಿ ಶ್ರೀ ವೀರೇಂದ್ರಪಾಟೀಲರಿಗೂ ಅಗ್ನಿಪ್ರವೇಶ ಮಾಡುವ ಕಾಲ ಬಂದಿದೆ. ಅದರಲ್ಲಿ ಪುನೀತರಾಗಿ, ಸತ್ಯಹರಿಶ್ಚಂದ್ರನ ಮೊಮ್ಮಗ ಎಂದು ಹೇಳುವುದಾದರೆ ಈ ಅಗ್ನಿ ಪರೀಕ್ಷೆಗೆ ಬನ್ನಿ, ನಿಮ್ಮ ಸತ್ವ ಪರೀಕ್ಷೆಯಾಗಲಿ. ಈ ಪ್ರಶ್ನೆ ಬಹಳ ಗಂಭೀರವಾದ ಪ್ರಶ್ನೆ. ನಿಜವಾಗಿಯೂ ನ್ಯಾಯ, ಧರ್ಮ ಮುಂತಾದುವುಗಳಿಗೆ ಬೆಲೆ ಕೊಡುವುದಾದರೆ, ಗಾಂಧೀಜಿಯವರು ಹಾಕಿಕೊಟ್ಟ ಮೇಲು ಪಂಕ್ತಿಯನ್ನನುಸರಿಸುವುದಾದರೆ ಮೊದಲು ಈ ಇಡೀ ಮಂತ್ರಿಮಂಡಲವು ರಾಜೀನಾಮೆ ಕೊಡಬೇಕು. ಅದು ನ್ಯಾಯವಾಗಿದೆ. ಯಾರು ಕಾಂಗ್ರೆಸ್ಸಿಗೆ ಸಹಾಯ ಮಾಡುವರೋ, ಯಾರು ಕಾಂಗ್ರೆಸ್ ಪಕ್ಷದವರಿಗೆ ಚುನಾವಣೆಗಳಲ್ಲಿ ಸಹಾಯ ಮಾಡುವರೋ, ಯಾರು ಜಾಸ್ತಿ ಹಣ ಕೊಡುವರೋ ಅವರಿಗೆ ಅನುಕಲವಾಗುತ್ತಿದೆ, ಇದು ಕಂಟ್ರಾಕ್ಟರುಗಳ ರಾಜ್ಯವಾಗಿದೆ, ಕಾಂಗ್ರೆಸ್ ರಾಜ್ಯವಲ್ಲ, ಇದು ಕಂಟ್ರಾಕ್ಟರುಗಳ ಪರವಾಗಿ ಕೆಲಸಮಾಡುವ ಏಜೆನ್ಸಿಯಾಗಿದೆ. ಈ ಮಂತ್ರಿಮಂಡಲ ಹೀಗೆ ಏಜೆಂಟಾಗಿ ಕೆಲಸಮಾಡಿ ಯಾರು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಡುವರೋ ಯಾರು ಮಂತ್ರಿಮಂಡಲಕ್ಕೆ ಬೆಂಬಲ ನೀಡುವರೋ ಅವರಿಗೆ ಬೇಕಾದ ಅನುಕೂಲ ಸರಕಾರ ಮಾಡಿಕೊಡುತ್ತಿದೆ. ನಿನ್ನೆ ಶ್ರೀ ದೇವರಾಜ ಅರಸ್‌ರವರು ಸಂಬಂಧಪಟ್ಟ ಒಬ್ಬ ಮಂತ್ರಿಗಳ ಮೇಲೆ ತಪ್ಪು ಆರೋಪ ಬಂದಿರುವುದರಿಂದ ಅವರು ರಾಜಿನಾಮೆ ಕೊಟ್ಟರೆ ಸಾಕು ಎಂದು ಹೇಳಿದರು. ಆದರೆ ಇದು ಹಾಗಿಲ್ಲ, ಇಡೀ ಮಂತ್ರಿಮಂಡಲ ಇದಕ್ಕೆ ಹೊಣೆಯಾಗಿದೆ, ಅದರ ಮೇಲೆ ಪೂರ್ಣವಾಗಿ ಈ ಜವಾಬ್ದಾರಿ ಇರುವುದರಿಂದ ಪೂರ್ಣ ಮಂತ್ರಿಮಂಡಲ ರಾಜೀನಾಮೆ ಕೊಡಬೇಕಾದ್ದು ಅಗತ್ಯವಾಗಿದೆ.

9-30 A.M.

ಈ ಸಂಧರ್ಭದಲ್ಲಿ ಅಲಿಬಾಬ ಮತ್ತು 40 ಮಂದಿ ಕಳ್ಳರ ಕತೆ ಜ್ಞಾಪಕಕ್ಕೆ ತರಬೇಕಾಗಿದೆ. ಈ ಸರಕಾರ ಧರ್ಮದಿಂದ, ನ್ಯಾಯದಿಂದ ರಾಜ್ಯದ ಆಡಳಿತ ನಡೆಸುವುದಾದರೆ ಮೊದಲು ರಾಜೀನಾಮೆ

ಕೊಡಬೇಕು. ಇದಕ್ಕೆ ಒಂದು ಕ್ಷಣ ಕೂಡ ಅಧಿಕಾರದಲ್ಲಿರುವುದಕ್ಕೆ ಯೋಗ್ಯತೆಯಿಲ್ಲ, ದಕ್ಷತೆ ಇಲ್ಲ, ಯೋಗ್ಯತೆಯಿಲ್ಲ. ಆದುದರಿಂದ ಕೂಡಲೆ ರಾಜೀನಾಮೆ ಕೊಟ್ಟು ಮಂತ್ರಿಮಂಡಲ ಹೊರಕ್ಕೆ ಬರಬೇಕೆಂದು ಎಲ್ಲರ ಪರವಾಗಿ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

Sri G. CHANDRAKANTH (Bidar).—Mr. Speaker, Sir, the no-confidence motion has been moved by the Leader of the Opposition and while supporting that, I would like to offer my criticism.

In the Supreme Court judgment in the case of Bhooma Reddy *versus* the State of Mysore and others severe strictures have been passed against this Government and this has been made clear beyond doubt by many members who have spoken from this side as well as from the other side. It has been said that there have been grounds to believe that there are excesses on the Government side and that they wanted to help a contractor. I do not think more severe strictures than this could be passed by the highest judiciary in the land. Even after doing this, if they say that the Government is clean-handed in this regard, not only myself but nobody from outside will agree to it. There have been instances of this nature where Mr. Sanjeeva Reddy against whom strictures were passed by the Supreme Court has resigned. Without going deep into the details of this case I would earnestly tell on behalf of the people who have been very carefully watching the acts of this Government that this Government along with all the Ministers must resign immediately. I would like to deal as to how these people have played a game to remove an unwanted contractor, namely, Bhooma Reddy. Even though Bhooma Reddy was the highest bidder and his bid was Rs. 9,99,999 and the next bid was Rs. 9,69,999, in order to remove Sri Bhooma Reddy all sorts of tortures were inflicted on him Besides, several bogus cases have been launched and immediately after the judgment of the High Court, licenses for 1168 shops were granted to K. V. Niranjan who is the contractor wanted by the Government. The Supreme Court has stated in its judgment that 'it is really surprising how licences for 1168 shops could be granted to a contractor in a day'. The same thing has not been done in the case of Bhooma Reddy. After the judgment was delivered by the Supreme Court, they took about 3 or 4 days in order to see that the contractor who was not wanted by these people was put to harassment and loss. Not only that, one Mirani who is a supporter of K. V. Niranjan entered the office of the Excise Commissioner and threatened the Inspector that he would be transferred since he was not harassing Bhooma Reddy. This matter was brought to the notice of the Government through their subordinates, but they have kept mum because he was the person who was not wanted by them. Not only this but there are several other incidents for which this Government is responsible jointly severally and over which they should resign. Incidents like communal rioting took place in Ramnagaram, Chickmagalur and Bangalore where the Government utterly failed to bring the law and order situation under control immediately. Similarly, there are several other incidents. In this case this Government has actually tortured the contractor Bhooma Reddy; we cannot

(SRI G. CHANDRAKANTH)

hold the Divisional Commissioner personally responsible for this. After all, he has acted on the instructions of this Government. Therefore, without making him or the Minister concerned personally responsible for this, we can hold the entire Cabinet responsible for this and we can ask them to resign. The Hon. Chief Minister claims to be a true patriot and all that. In this connection, I would like to quote an incident where he has committed a blunder which an ordinary citizen of India should not. At the M. P. C. C. session at Bidar in the open meeting these people have failed to sing the National Anthem. When they were reminded about it, they said, "We have sung many times and there is no reason why we should sing." Many of the members who were present there know about it. On the excuse that he was in a hurry to go to a dinner party. This is an instance where his patriotism can be doubted. At this juncture without going into the details, I would like to close my speech and thank the Chair for having accorded me an opportunity to speak.

† ಶ್ರೀ ಕೆ. ಎಚ್. ರಂಗನಾಥ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಮೇಲೆ ಗುರುತರವಾದ ಅಪಾದನೆಗಳನ್ನು ನಿನ್ನೆಯಿಂದ ಈ ಮಾನ್ಯ ಸದಸ್ಯರು ಮಾಡುತ್ತಾ ಇದ್ದಾರೆ. ಇವತ್ತಿನದಿವಸ ವಾಸ್ತವಾಂಶಗಳನ್ನು ಅಂಕಿಅಂಶಗಳಿಂದ ಸಮರ್ಥನೆ ಮಾಡತಕ್ಕ ಪರಿಸ್ಥಿತಿ ಈ ಸಭೆಗೆ ಇಲ್ಲ. ಈ ದೇಶದ ಶ್ರೇಷ್ಠನ್ಯಾಯಾಲಯ ಅದನ್ನು ಪರಿಗಣಿಸಿ ಒಂದು ತೀರ್ಪನ್ನು ಕೊಡುವಾಗ ಸರ್ಕಾರ ಯಾವುದೋ ಒಬ್ಬ ವ್ಯಕ್ತಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಪಟ್ಟಿದೆ ಎಂಬ ಅಭಿಪ್ರಾಯವನ್ನು ಹೇಳುವುದಕ್ಕೆ ಸಕಾರಣ ಇದೆ ಎಂಬ ಒಂದು ಅಂಶವನ್ನು ಹೇಳಿದ್ದಾರೆ. ಇದು ಸೌಜನ್ಯ ರೀತಿಯಿಂದ ಹೇಳಿರತಕ್ಕ ಮಾತು. ಈ ಮಾತನ್ನು ಯಾವುದೇ ಸರ್ಕಾರ ಅರ್ಥ ಮಾಡಿಕೊಳ್ಳುವುದಾದರೆ ಒಂದು ನಿಮಿಷ ಕೂಡ ಅಧಿಕಾರದಲ್ಲಿರತಕ್ಕ ಪರಿಸ್ಥಿತಿ ಇಲ್ಲ. ಆದರೆ ಸರ್ಕಾರ ಸಮರ್ಥನೆ ಮಾಡಿಕೊಳ್ಳುತ್ತಾ ಇದೆ. ನಿನ್ನೆಯಿಂದ ನಾವು ಯಾರಿಗೂ ಅನ್ಯಾಯ ಮಾಡಿಲ್ಲ, ಸರ್ಕಾರ ಹಸ್ತಕ್ಷೇಪ ಮಾಡಲಿಕ್ಕೆ ಪ್ರಯತ್ನ ಪಟ್ಟಿಲ್ಲ ಎಂದು ಸಮರ್ಥನೆ ಮಾಡಿಕೊಳ್ಳಲಿಕ್ಕೆ ಆಗಾಗ್ಗೆ ಪ್ರಯತ್ನ ಪಟ್ಟಿದೆ. ಸ್ವಾಮಿ, ನನ್ನ ಆಪಾದನೆಯಾದರೂ ಇಷ್ಟೇ, ಮುಖ್ಯಮಂತ್ರಿಗಳು ನೇರವಾಗಿ ಈ ಒಂದು ಪ್ರಸಂಗದಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಅವರು ಮುಖ್ಯಮಂತ್ರಿಯಾದ ಕೆಲವೇ ತಿಂಗಳುಗಳಲ್ಲಿ ಎಂದರೆ ಎರಡು ತಿಂಗಳಿನಲ್ಲಿ ಗುಲ್ಬರ್ಗ ಮತ್ತು ರಾಯಚೂರು ಭಾಗಕ್ಕೆ ಸುಮಾರು 6 ಸಲ ಭೇಟಿ ಕೊಟ್ಟಿದ್ದಾರೆ. ನನ್ನ ನೇರವಾದ ಅಪಾದನೆ 28ನೇ ತಾರೀಖು ಮೇ 1968ರಲ್ಲಿ ಒಂದು ಹರಾಜು ನಡೆಯಿತು. 23 ಅಥವಾ 21ನೇ ತಾರೀಖು ಅವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಚುನಾಯಿಸಲ್ಪಟ್ಟಿದ್ದಾರೆ. ಅಷ್ಟರಲ್ಲಿ ಅವರಿಗೆ ಈ ಚುನಾವಣೆಯಲ್ಲಿ ನನಗೆ ಬಂದಂಥ ವರ್ತಮಾನದ ಪ್ರಕಾರ—ಈ ಕಂಟ್ರಾಕ್ಟುದಾರರು ಏನಿದ್ದಾರೆ ಗುಲ್ಬರ್ಗಾ ರಾಯಚೂರು ಕಂಟ್ರಾಕ್ಟರು ಸಹಾಯ ಮಾಡಿದರು ಎಂದು ನನಗೆ ವರ್ತಮಾನ ಬಂದಿದೆ. 28ನೇ ತಾರೀಖು ಈ ಭೂಮರೆಡ್ಡಿಯವರ ಕಾಂಟ್ರಾಕ್ಟ್ ಆದಾಗ ಅವರವರಲ್ಲೇ ಮನಸ್ತಾಪ ಬಂದಾಗ ಮುಖ್ಯಮಂತ್ರಿಗಳು ಪಂಚಾಯ್ತಿ ಮಾಡಲಿಕ್ಕೆ ಕುಳಿತು ಅವರು ವಿಫಲರಾದ ಮೇಲೆ 19ನೇ ಜೂನ್ 1968ರಂದು ಮುಖ್ಯಮಂತ್ರಿಗಳ ಹಸ್ತಕ್ಷೇಪ ಪ್ರಾರಂಭವಾಗಿದೆಯೆಂದು ನನ್ನ ನೇರವಾದ ಅಪಾದನೆ. 19ನೇ ಜೂನ್ 1968 ರಂದು ಡಿವಿಜನಲ್ ಕಮಿಷನರ್ ಅವರು ಅವರಿಗೆ ಹೇಳುತ್ತಾರೆ, ಭೂಮರೆಡ್ಡಿಯವರೇ ನೀವು ರೂಲ್ 19ರ ಪ್ರಕಾರ ನಡೆದುಕೊಂಡಿಲ್ಲ ನಿಮ್ಮ ಲೈಸೆನ್ಸ್ ಕ್ಯಾನ್ಸಲ್ ಮಾಡಬೇಕಾಗುತ್ತದೆ, ಜಾಗ್ರತೆ ನೋಡಿಕೊಳ್ಳಿ ಎಂದು 19ರಲ್ಲಿ ಬಾಯಿಮಾತಿನಲ್ಲಿ ಬಳ್ಳಾರಿಯಲ್ಲಿ ಹೇಳಿ ಮತ್ತೆ ಅಂದೇ ಗುಲ್ಬರ್ಗಾಕ್ಕೆ ಬಂದು ಅದೇ ತಾರೀಖಿನಂದು ಒಂದು ನೋಟೀಸು ಬರೆಯುತ್ತಾರೆ. ಆ ನೋಟೀಸು 23-6-68ರಂದು ಜಾರಿಯಾಗಬೇಕಾಗಿತ್ತು. ಈ ಮಧ್ಯೆ ಒಂದು ಸರ್ಕ್ಯುಲರ್ ಇದೆ ಏನೆಂದರೆ ಎರಡು ತಿಂಗಳ ಖಿಸ್ತನ್ನು ಕಟ್ಟಬೇಕು ಇಲ್ಲದ ಪಕ್ಷದಲ್ಲಿ 4 ತಿಂಗಳ ಖಿಸ್ತನ್ನು ಕಟ್ಟಬೇಕು, 6 ತಿಂಗಳ ಖಿಸ್ತಿಗೆ ಕೊಲ್ಯಾಟರಲ್ ಸೆಕ್ಯೂರಿಟಿ ಕೊಡಬೇಕೆಂದು ಇದೆ. ಅದು 19 ಜಿಲ್ಲೆಯಲ್ಲಿರತಕ್ಕ ಎಲ್ಲಾ ಕಂಟ್ರಾಕ್ಟರುಗಳಿಗೂ ಜಾರಿ ಮಾಡಲ್ಪಟ್ಟಿದೆ. ಆದರೆ ಅದು ಗುಲ್ಬರ್ಗಾ ರಾಯಚೂರು ಕಂಟ್ರಾ

ಕ್ಟರಿಗೆ ಮಾತ್ರ ಅನ್ವಯಿಸುವುದಿಲ್ಲ ಎಂದು ಡಿವಿಜನಲ್ ಕಮಿಷನರು ಹೇಳುತ್ತಾರೆ. ನ್ಯಾಯಾಲಯ ದವರು ಅವರ ಆರ್ಡರ್‌ನಲ್ಲಿ :

> "The Excise Commissioner had no jurisdiction to issue such a circular. It is ineffective. I do not understand how a Divisional Commissioner who is subordinate to the excise Commissioner could give a finding to this effect."

ಎಂದು ಹೇಳಿರುತ್ತಾರೆ. ಇದು ಏನು ಅರ್ಥವಾಗುತ್ತದೆ ಎಂದರೆ ಸರ್ಕಾರದ ಹಸ್ತಕ್ಷೇಪ ಇಲ್ಲದೆ ಇದ್ದಿದ್ದ ಪಕ್ಷದಲ್ಲಿ ಒಬ್ಬ ಡಿವಿಜನಲ್ ಕಮಿಷನರು ಇಂತಹ ಒಂದು ಕಾರಣವನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಎಂದು. ನಂತರ ಸ್ವಾಮಿ, 23ರಂದು ನೋಟೀಸು ಜಾರಿಯಾಗಬೇಕಾಗಿತ್ತು, 22ರಂದೇ ಆ ಒಬ್ಬ ಕಂಟ್ರಾಕ್ಟರ್ ಸರ್ಕಾರದವರಿಗೆ ಮೈಸೂರು ಎಕ್ಸೈಜ್ ಆಕ್ಟ್ 62ನೇ ಕಲಂ ಪ್ರಕಾರ ರಿವಿಜನ್ ಅರ್ಜಿ ಹಾಕಿದರು. ಇದರಲ್ಲಿ ಒಂದು ವಿಷಯ 1–7–68ಕ್ಕೆ ಅವನು ಡೆಪ್ಯೂಟಿ ಕಮಿಷನರಿಂದ ಲೈಸೆನ್ಸ್ ತೆಗೆದುಕೊಂಡು ಬಂದು ಹೆಂಡ ಸಾರಾಯಿ ಮಾರಾಟ ಮಾಡಬೇಕು, 19ನೇ ತಾರೀಖು ಎಂದರೆ ಕೇವಲ 11 ದಿವಸ ಉಳಿದಿದೆ, 22ನೇ ತಾರೀಖು 22ನೇ ಸೆಕ್ಷನ್ ಪ್ರಕಾರ ರಿವಿಜನ್ ಅರ್ಜಿ ಹಾಕಿದರು, ಎರಡರಿಂದ ಮೂರು ದಿವಸದಲ್ಲಿ ಇತ್ಯರ್ಥವಾಗದ್ದಿದ್ದ ಪಕ್ಷದಲ್ಲಿ ಅಪೀಲು ಹಾಕಬೇಕಾಗಿತ್ತು ಎಂದು. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾ ಇದ್ದರು. ಸ್ವಾಮಿ, ನಾನು ಅವರಿಗೆ ಕೇಳುತ್ತೇನೆ, ಒಬ್ಬ ವ್ಯಕ್ತಿಗೆ 62ನೇ ಸೆಕ್ಷನ್ ಪ್ರಕಾರ ರಿವಿಜನ್ ಅರ್ಜಿ ಹಾಕತಕ್ಕ ಹಕ್ಕು ಇದೆ ಅದರ ಪ್ರಕಾರ ಅರ್ಜಿ ಹಾಕಿದ್ದಾನೆ. ಸರ್ಕಾರದ ಒಂದು ಪದ್ಧತಿಯನ್ನನುಸರಿಸಿ 40 ಲಕ್ಷ ರೂಪಾಯಿಗಳನ್ನು ಕಟ್ಟಿದ್ದಾನೆ. ತನಗೆ ಇರತಕ್ಕ 8 ದಿವಸವಲ್ಲಿ ಎಂದರೆ ಜುಲೈ ಒಂದನೇ ತಾರೀಖು ಅವನು ಅಂಗಡಿಗಳಲ್ಲಿ ಸಾರಾಯಿ ಮಾರಾಟ ಮಾಡಬೇಕು, ಈ ಒಂದು ಪರಿಸ್ಥಿತಿಯಲ್ಲಿ ನ್ಯಾಯವಾಗಿ ನಡೆಯತಕ್ಕ ಯಾವುದೇ ಸರ್ಕಾರವಾಗಿರಲಿ ಟೆಲಿಗ್ರಾಂ ಮುಖಾಂತರ ನೋಟೀಸ್ ಜಾರಿ ಮಾಡ ಬೇಕಾಗಿತ್ತು, ಆ ರೀತಿ ಏನೂ ಮಾಡಿಲ್ಲ. ಈ ಒಂದು ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳು ವುದಾದರೆ ನಮಗೆ ಈ ರಾಜ್ಯಸರ್ಕಾರದ ಮುಖ್ಯಮಂತ್ರಿಗಳ ಮತ್ತು ಇತರ ಮಂತ್ರಿಗಳ ಹಸ್ತಕ್ಷೇಪ ಇರಲಿಕ್ಕೇ ಬೇಕು ಎಂದು ಗೊತ್ತಾಗುತ್ತದೆ. 22ರಲ್ಲಿ ಕೊಟ್ಟಂಥ ಅರ್ಜಿಗೆ ಹಿಯರಿಂಗ್ ಕೊಟ್ಟಿರುವುದು ಎಂದು ? 28ನೇ ತಾರೀಖು ಲೈಸೆನ್ಸ್‌ಕ್ಯಾನ್ಸಲ್ ಆಗಿದೆ. ಹೋಮ್ ಸೆಕ್ರೆಟರಿಯವರು ಹಿಯರಿಂಗ್ ಕೊಟ್ಟಿದ್ದಾರೆ. ಸೆಕ್ಷನ್ 62ರ ಪ್ರಕಾರ Who should hear the party ? It is the Government. That is the concerned Minister. ಯಾವ ಒಬ್ಬ ಖಾತೆಯ ಮಂತ್ರಿ ಇದ್ದಾರೋ ಅವರು ಪರಿಶೀಲನೆ ಮಾಡಬೇಕಾಗಿತ್ತು. ಹೋಂ ಸೆಕ್ರೆಟರಿಯವರು ಬರೆದಿರತಕ್ಕ ಆರ್ಡರ್ ಶೀಟಿನಲ್ಲಿ—ರಿಟ್ ಹೋಗಿದ್ದರು ಜಡ್ಜ್‌ಮೆಂಟ್ ಬಂದಿಲ್ಲ ಅಂತ ಹೇಳಿ—28ನೇ ತಾರೀಖು ಲೈಸೆನ್ಸ್ ಕ್ಯಾನ್ಸಲ್ ಮಾಡಿದ್ದಾರೆ. ಯಾರಿಗೆ ರಿವಿಜನ್ ಅರ್ಜಿಯನ್ನು ಪರಿಶೀಲನೆ ಮಾಡತಕ್ಕ ಅಧಿಕಾರವಿಲ್ಲವೋ ಆ ಹೋಂ ಸೆಕ್ರೆಟರಿಯವರು ಲೈಸೆನ್ಸ್ ಕ್ಯಾನ್ಸಲ್ ಮಾಡಿದ್ದಾರೆ ಎಂದು ವರ್ತಮಾನ ಈ ಮಧ್ಯೆ ಎಕ್ಸೈಜ್ ಮಿನಿಸ್ಟರು ತಮ್ಮ ಅಧಿಕಾರ ವನ್ನು ಡೆಲಿಗೇಟ್ ಮಾಡಿದ್ದಾರೆ. By notification of the Home Secretary ಅಂತ ಕೂಡ ತಿಳಿದುಬಂದಿದೆ.

22-23ರಲ್ಲಿ ಒಂದು ಫೈಲು ಎಕ್ಸೈಜ್ ಮಿನಿಸ್ಟರ್ ಆಫೀಸಿನಲ್ಲಿ ಇತ್ತು. ನಂತರ ಅವರು ತಮ್ಮ ಅಧಿಕಾರವನ್ನು ಡೆಲಿಗೇಟ್ ಮಾಡಿ ಕೊಟ್ಟರು ಎಂದು ತಿಳಿದು ಬಂದಿದೆ. ಇದನ್ನೆಲ್ಲಾ ವಿಚಾರ ಮಾಡುವುದಾದರೆ ಸರ್ಕಾರದ ಹಸ್ತಕ್ಷೇಪ ಇರಲಿಲ್ಲವೇ ಅಂತ ಅನ್ನುವುದನ್ನು ಈ ಮಾನ್ಯ ಸಭೆಯ ಸದಸ್ಯರು ಪರಿಶೀಲನೆ ಮಾಡಬೇಕು. ಇನ್ನೊಂದು ವಿಚಾರ, 25ನೇ ತಾರೀಖು ನನಗೆ ಇನ್ನೂ ಸ್ವಲ್ಪಕಾಲ ಕೊಡಿ ಎಂದು ಹಾಕಿದ ಅರ್ಜಿಯನ್ನು ಡಿವಿಜನಲ್ ಕಮಿಷನರು ವಜಾ ಮಾಡಿದರು ಮತ್ತು ಅದೇ ದಿನ ಸಾಯಂಕಾಲ 7–40 ಗಂಟೆಗೆ ಷೋಕಾಸ್ ನೋಟೀಸು ಕೊಟ್ಟಿರುತ್ತಾರೆ. ಆಫೀಸು ನಡೆಯತಕ್ಕ ವೇಳೆ 5–30ರವರೆಗೆ, ಅನಂತರ ಕ್ಲೋಸ್ ಆಗುತ್ತದೆ, ಆದರೆ ಷೋಕಾಸ್ ನೋಟೀಸ್ ಜಾರಿಮಾಡಿರುವುದು ರಾತ್ರಿ 7–40 ಗಂಟೆಗೆ.

Sri RAMAKRISHNA HEGDE.—Revision petition under section 62 is only by way of exercising the residuary power of the Government. This is not the normal course of getting any grievance remedied. If my friend who is an experienced lawyer reads the whole section, there is a proviso to the section. The proviso says that "no order shall be

(SRI RAMAKRISHNA HEGDE)

annulled, reversed or modified except after giving reasonable opportunity of being heard, to the person affected by that order.'' If a revision petition is filed before the Government on 22nd, it is physically impossible to give opportunity to the person who passed the order to explain under what circumstances he has passed the order. The hon'ble Member referred to delegation of power by the Minister to the Home Secretary. This is not the first time that such delegation had taken place. In my personal view it is wrong for any Minister to sit in judgment on a decision given by an I.A.S officer or a judicial officer. Revision petition lies even after the decision of a tribunal or any other body set up for the purpose. In democracy a time may come when a Minister may be illiterate and he may not be a law graduate. In a country where illiteracy is 75 per cent, it is possible that a Minister can be illiterate. Is there any qualification fixed for a Minister ? It is my considered and personal opinion; others may not agree with me. Even when I was Minister in charge of Development and Co-operation, I delegated the powers of hearing petitions to the Secretary to Government, because I consider that it is not proper for a Minister who may not have the legal knowledge to sit injudgement, given by other bodies.

ಶ್ರೀ ಬಿ. ಎಸ್. ಪಾಟಿಲ್.—ಇಂಗ್ಲೀಷ್......

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ 62ನೇ ಪ್ರಾವಿಜನ್ನನ್ನು ರೆಫರ್‌ಮಾಡಿದ್ದಾರೆ. ಇಲ್ಲಿ :

" Petitioner is Mr. Bhooma Reddy. The petition is against the notice given by the Divisional Commissioner. The respondent was the Divisional Commissioner.''

ಒಂದು ಸರ್ಟಿಫೈಡ್‌ಕಾಪಿಯನ್ನು ತೆಗೆದುಕೊಳ್ಳಲು ಅದರ ಬಗ್ಗೆ ಒಂದು ಟೆಲಿಗ್ರಾಂ ಕೊಡ ಮಾಡಿದ್ದಾರೆ. ಅದನ್ನು ಸರ್ಕಾರದವರು ತಾರೀಖು 22 ರಿಂದ ತಾರೀಖು 30ರೊಳಗೆ ತೀರ್ಮಾನ ಮಾಡಬೇಕಾಗಿತ್ತು. ಅತ ಆಗಲೇ ಸರ್ಕಾರಕ್ಕೆ 40 ಲಕ್ಷ ರೂಪಾಯಿಗಳನ್ನೂ ಕೂಡ ಕಟ್ಟಿದ್ದ. ಆಗ ಮಂತ್ರಿಗಳೇನೂ ತೀರ್ಮಾನ ತೆಗೆದುಕೊಳ್ಳಲಿಲ್ಲ. ಅವರು ತಮ್ಮ ಪವರನ್ನು ಕಾರ್ಯದರ್ಶಿಗೆ ಡೆಲಿಗೇಟ್‌ಮಾಡಿದ್ದೆ ಎಂದು ಹೇಳುತ್ತಿದ್ದಾರೆ. ಇರಬಹುದು, ಹಾಗೆ ಡೆಲಿಗೇಟ್ ಮಾಡಿರಬಹುದು. ಆದರೆ ಈ ಸಂದರ್ಭದಲ್ಲಿ ನಾನು ಒಂದಂಶವನ್ನು ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ.

ನಮ್ಮ ಸರ್ಕಾರದವರು ತಮ್ಮದೇ ಆದ ಒಂದು ರೀತಿಯಲ್ಲಿ ಈ ಲಿಕ್ಕರ್ ವ್ಯವಹಾರವನ್ನು ಮನಾಪಲಿ ಮಾಡಿಕೊಂಡು ಅದಕ್ಕಾಗೇ ಒಂದು ಪ್ರತ್ಯೇಕ ರಂಗವನ್ನು ವ್ಯವಸ್ಥೆಮಾಡಿಕೊಂಡಿದ್ದಾರೆ. ಈ ಬಾಬಿನಿಂದ ಬರತಕ್ಕ ವರಮಾನ 13-14 ಕೋಟಿ. ಇಂಥ ಒಂದು ಭಾರೀ ಪ್ರಮಾಣದ ವ್ಯವಹಾರವನ್ನು ಸರ್ಕಾರದವರು ತಮ್ಮದೇ ಆದ ರೀತಿಯಲ್ಲಿ ನಡೆಸುತ್ತಿದ್ದಾರೆ. M/s. Niranjan and Co., Venkataswamy & Co., Narayan & Co., & Sindhi & Co., are the only contractors in this State.

ಸರ್ಕಾರದವರು ಇದು ಬೇನಾಮಿ ಆಗುತ್ತದೆಯೋ ಇಲ್ಲವೇ ಎಂಬುದನ್ನು ರೂಲ್ 16ರ ಪ್ರಕಾರ ವಿಚಾರಮಾಡಬೇಕಾಗಿದೆ. ಎಕ್ಸೈಜ್ ಕಮೀಷನರ್, ಡಿವಿಜನಲ್ ಕಮೀಷನರ್ ಮತ್ತು ಡಿ. ಸಿ. ಎಲ್ಲರೂ ಇದರಲ್ಲಿದ್ದಾರೆ. ಆದ್ದರಿಂದ ತಾವು ಇದು ಬೇನಾಮಿ ಆಗುತ್ತದೆಯೋ ಇಲ್ಲವೇ ಎಂಬುದನ್ನು ಸರ್ಕಾರದವರಿಗೆ ಹೇಳಲಿ.

Mr. SPEAKER.—Can they not verify these things and find out who is the regular contractor and who is running the shops ?

ಶ್ರೀ ಕೆ. ಎಚ್. ರಂಗನಾಥ್.—ಇಲ್ಲಿ ತಾರೀಖು 1-7-1968 ರಿಂದ ತಾರೀಖು 6-7-1968ರ ಒಳಗೆ "The partner of Narayana & Co., was threatened by the Excise Inspector, Muzahiruddin" ಎಂದು ಒಂದು ಪತ್ರವನ್ನು ಬರೆದು ಅಲ್ಲಿದ್ದ ಎಕ್ಸೈಜ್ ಇನ್‌ಸ್ಪೆಕ್ಟರ್‌ನ್ನು ಅಲ್ಲಿಂದ ತಾರೀಖು 10-7-68ರಲ್ಲಿ ವರ್ಗಮಾಡಲಾಗಿದೆ. ಆ ವರ್ಗವಾದ ಎಕ್ಸೈಜ್ ಇನ್‌ಸ್ಪೆಕ್ಟರ್ ತಾರೀಖು 6-7-68ರಲ್ಲಿ ಆ ಸ್ಥಳದಲ್ಲೇ ಇದ್ದರು. ಆ ಎಕ್ಸೈಜ್ ಕಂಟ್ರಾಕ್ಟರಿಗೆ ಹರಾಜಿನಲ್ಲಿ ಬಿಡ್‌ನಿಲ್ಲಿಸಿ ಹಣವನ್ನು ಕಟ್ಟಿಸಿಕೊಂಡಿದ್ದಾರೆ. ಅಷ್ಟರಲ್ಲೇ ಡಿ. ಸಿ. ಗೂ ಕೂಡ ಒಂದು ಪತ್ರವನ್ನು ಬರೆದಿದ್ದಾರೆ. ಆದರೆ ಅಷ್ಟರಲ್ಲಿ ಅವರಿಗಾಗಲೇ ವರ್ಗವಾಗಿತ್ತು. ಇದನ್ನೆಲ್ಲಾ ಕೂಲಂಕಷವಾಗಿ ವಿಚಾರಮಾಡಬೇಕೆಂದು ಹೇಳುತ್ತಿದ್ದೇನೆ. ಇದರಲ್ಲಿ ಸರ್ಕಾರದವರ ಹಸ್ತಕ್ಷೇಪವಿದೆ ಎಂದು ಯಾರುಬೇಕಾದರೂ ಹೇಳಬಹುದು. ಎಕ್ಸೈಜ್ ಇನ್‌ಸ್ಪೆಕ್ಟರ್ ಹೀಗೆ ಬರೆದಿದ್ದಾರೆ:

> "I feel pained for the specific orders of transfer for the reason that any Excise contractor can transfer any Excise Officer even if the auctions are quite in accordance with the rules as per law."

This is the letter which he has written to the Deputy Commissioner after the transfer order. With these observations, I conclude.

SRI D. B. KALMANKAR (Aland).—Mr. Speaker, Sir, since the time at my disposal is very limited, I want just to highlight how the Goverment had deliberately acted illegally in this matter. Even the High Court in their judgement at page 25 have observed as follows:—

> "But in the circumstances of the case, it is necessary to observe that the authorities concerned will consider the advisability of accepting the bid of the fourth respondent, subject to his complying with all the requirements of the Act and the Rules."

The direction of the High Court was very clear. Rule 17 (3) of the Mysore Excise Rules 1967, says:

> "In case the bid or offer is rejected by the Officer conducting the auction, or by the Deputy Commissioner or the Divisional Commissioner or in revision by the Excise Commissioner or the Government, the shop or group of shops shall again be disposed off by calling for tenders, auction or by tender-*cum*-auction or by any other method as the Excise Commissioner may direct."

In Rule 21 of the Mysore Excise Rules, 1967, the procedure as to what should be done, is given and the same has to be taken into consideration. Rule 17 (3) says that the officer conducting the sale has to again dispose it of by calling for tenders. Rule 20 (2) says that on failure of any person to comply with the provisions of rules 17 and 19, the deposits already made shall be forfeited and the right of retail vend of liquor in such shop or group of shops disposed of in such manner under these rules, as the Excise Commissioner may direct. Rule 21 reads as follows:

> "Re-sales to be held under sub-rule (2) of Rule 20 shall be at the risk of the defaulting purchaser who shall not be entitled

(ಶ್ರೀ ಕೆ. ಎಚ್. ರಂಗನಾಥ್)

to any excess amount realised and, in the event of loss to Government, shall be bound to make good the deficiency between the total amount payable for the whole period under the terms of the original sale and the total amount payable by the purchaser at the re-sale. In the latter case the forfeited deposits shall be deducted from the loss arising from the re-sale and the balance if any,........."

Why I am reading the relevant provisions is that the judgement of the High Court was passed on the 18th, and respondent No. 4 immediately went before the Divisional Commissioner, Gulbarga. The licences were issued to him without following these rules, which are very clear.

10-00 A.M.

Rule 17 is very clear.

"In case the bid or offer is rejected by the Officer conducting the auction, or by the Deputy Commissioner or the Divisional Commissioner or in revision by the Excise Commissioner or the Government, the shop or group of shops shall again be disposed off by calling for tenders, auction or by tender-*cum*-auction or by any other method as the Excise Commissioner may direct."

This Government has violated the provisions of Law. This Government is responsible for the omission. This could have been avoided. The Divisional Commissioner who refers to so many rules under Act, has resorted to this method. But he is not such a person to come to this level. He is not an ignorant person. He always acts according to law. But due to pressure from the Government he did it. I know him personally well. It is well known that there is some force used on him. The Chief Minister might have dictated terms to him and he did accordingly. The Supreme Court has held that :—

"Having regard to the fact that the appellant had already deposited about Rs. 40 lakhs, the Divisional Commissioner, Gulbarga, acted rather precipitately and harshly in cancelling the sale. For the reasons already given, the order of cancellation is invalid. The order must be set aside and a writ of mandamus must issue for the grant of licences to the apellant."

On page 2 in this item the petitioner has prayed to grant him license to vend liquors in the Combined District Groups of Shops of Gulbarga and Raichur. But no action seemed to have been taken. It was further said that a Circular was issued on 12th December 1967. But it is said that there was no such circular issued to all the Deputy Commissioners. But the circular issued applies to all the Deputy Commissioners. No procedure was followed. By creating some confusion they wanted to favour their own man. Mr. Bhooma Reddy

was never wanted by this Government. They wanted to choose their own man who does not hesitate to give money to the Congress for elections. They took money from him and did all these things in the name of democracy. This is wrong. This Supreme Court judgement is a sufficient proof of this fact. They misused the authority and misused the power for their own advantage. There is sufficient proof from the highest authority in the Country. With these remarks I conclude.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ನನ್ನ ಮಂತ್ರಿ ಮಂಡಲದ ಮೇಲೆ ವಿರೋಧಪಕ್ಷದ ನಾಯಕರು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ. ಅಧ್ಯಕ್ಷರಲ್ಲಿ ಮತ್ತು ಮಾನ್ಯ ಸದಸ್ಯರಲ್ಲಿ ಅದರಲ್ಲಿಯೂ ವಿಶೇಷವಾಗಿ ವಿರೋಧಪಕ್ಷದ ಸದಸ್ಯರಲ್ಲಿ ಬಹಳ ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ. ತಾವು ನೋಡಿರಬಹುದು, ನಿನ್ನೆ ಬೆಳಿಗ್ಗೆ ಯಿಂದ ಅನೇಕ ಮಾನ್ಯ ಸದಸ್ಯರು ಪ್ರಚೋದಕವಾದಂಥ ಅನೇಕ ವಿಚಾರಗಳನ್ನು ಹೇಳಿದರು. ನಾನು ಬಾಯಿ ಮುಚ್ಚಿಕೊಂಡು ಒಂದು ಮಾತೂ ಸಹ ಮಧ್ಯೆ ಆಡದೆ, ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಬರೆದುಕೊಂಡು ಇಟ್ಟಿದ್ದೇನೆ. ಅದಕ್ಕೆಲ್ಲಾ ಉತ್ತರ ಹೇಳುವಾಗ ನನಗೆ ಮಧ್ಯೆ ಯಾರೂ ಡಿಸ್ಟರ್ಬ್ ಮಾಡದೇ ಹೋದರೆ ನಾನು ಹೇಳುವ ವಿಚಾರಗಳನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಮತ್ತು ನನಗೂ ಅನುಕೂಲವಾಗುತ್ತದೆ. ನಾನು ಉತ್ತರ ಹೇಳಿದಮೇಲೆ ಮಾನ್ಯ ಸದಸ್ಯರು ಕ್ಲಾರಿಫಿಕೇಷನ್‌ಗಾಗಿ ಏನಾದರೂ ಪ್ರಶ್ನೆಗಳನ್ನು ತಮ್ಮ ಅಪ್ಪಣೆ ಪಡೆದು ಕೇಳಿದರೆ, ಅವಕ್ಕೂ ಉತ್ತರ ಹೇಳುತ್ತೇನೆ. ವಿರೋಧ ಪಕ್ಷದ ನಾಯಕರು ಈಗ ಅವಿಶ್ವಾಸ ನಿರ್ಣಯವನ್ನು ಈ ಮಂತ್ರಿಮಂಡಲ ಬಂದು 8 ತಿಂಗಳುಗಳಾದಮೇಲೆ ಈ ಸಭೆಯಲ್ಲಿ ಮಂಡಿಸಿದ್ದಾರೆ. ಟ್ರೆಡಿಷನ್ ಪ್ರಕಾರ 6 ತಿಂಗಳಿಗೊಮ್ಮೆ ಇದನ್ನು ಮಂಡಿಸಬೇಕಾಗಿತ್ತು; ಎಂಬುದಾಗಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳುತ್ತಿದ್ದರು. ಆದರೆ ಇದು 6 ತಿಂಗಳಿಗೊಮ್ಮೆ ಬಂದೇ ಬರುತ್ತಿದೆ. ಇವತ್ತು ಇದೇನು ಹೊಸದಲ್ಲ. 1962ರಿಂದ 6 ತಿಂಗಳುಗಳಿಗೆ ಒಂದು ಸಾರಿ ಬರುತ್ತಲೇ ಇವೆ. ಈ ಮಂತ್ರಿಮಂಡಲ ಬಂದಮೇಲೆ 6 ತಿಂಗಳುಗಳಿಗೊಂದು ಸಾರಿ ಬರಬೇಕಾಗಿತ್ತು. ಎರಡು ತಿಂಗಳು ತಡವಾದರೂ ಚಿಂತೆ ಇಲ್ಲ. ಅವಿಶ್ವಾಸ ನಿರ್ಣಯ ಬಂತು. ಅವಿಶ್ವಾಸ ನಿರ್ಣಯವನ್ನು ವಿರೋಧಪಕ್ಷದ ನಾಯಕರು ಯಾವ ಹಿನ್ನೆಲೆಯಲ್ಲಿ ಮಂಡಿಸಿದ್ದಾರೆನ್ನುವುದು ನಾವು ಮೊದಲು ವಿಚಾರಮಾಡಬೇಕಾದುದು ಮುಖ್ಯ. ವಿರೋಧ ಪಕ್ಷದ ನಾಯಕರು ಮತ್ತು ಅನೇಕ ಸದಸ್ಯರು ಹೇಳಿದ್ದಾರೆ, ಈ ಅವಿಶ್ವಾಸ ನಿರ್ಣಯವನ್ನು ಮಂಡಿಸುವುದು ಒಂದು ಪಾಶುಪತಾಸ್ತ್ರ ಅಥವಾ ಬ್ರಹ್ಮಾಸ್ತ್ರ ಇದ್ದಹಾಗೆ ಎಂದು. ಅದೊಂದೇ ವಿರೋಧ ಪಕ್ಷಕ್ಕೆ ಇರುವುದು. ಅದನ್ನು ಯಾವಾಗ ಉಪಯೋಗಮಾಡಬೇಕೆಂಬುದಾಗಿ ಅವರೇ ಹೇಳಿದ್ದಾರೆ. ಎಲ್ಲೆ ಮೀರಿ ಹೋದಮೇಲೆ ಅದನ್ನು ಉಪಯೋಗಿಸಬೇಕು. ಅದು ನಮ್ಮ ಅಧಿಕಾರವೆಂಬುದಾಗಿ ಹೇಳಿದ್ದಾರೆ. ಅದು ನಿಜ. ಅವರಿಗೆ ಪರಿಪೂರ್ಣ ಅಧಿಕಾರ ಇದೆ. ಅದನ್ನು ಅಲ್ಲಗಳೆಯುವುದಿಲ್ಲ. ಬ್ರಹ್ಮಾಸ್ತ್ರ ಉಪಯೋಗಮಾಡುವುದಕ್ಕೆ ಪರಿಸ್ಥಿತಿ, ಹಿನ್ನೆಲೆ, ಏನೆಂಬುದನ್ನು ತಿಳಿಯುವುದು ಅವಶ್ಯಕ. ನಾವು ಮೊದಲನೆಯ ದಿವಸ ಸೇರಿದಾಗ ಅಂದು ಏನೂ ಬಿಜಿನೆಸ್ ಆಗಲಿಲ್ಲ. ರಾಜ್ಯಪಾಲರ ಭಾಷಣವಾಯಿತು. ಎರಡನೇದಿವಸ ಅಡ್ಜರ್ನ್‌ಮೆಂಟ್ ಮೋಷನ್ ಇಬ್ಬರು ಮಾನ್ಯ ಸದಸ್ಯರಿಂದ ಬಂತು. ಮಾನ್ಯ ಅಧ್ಯಕ್ಷರು ಆ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದರು. ಅದಕ್ಕೇನಾದರೂ ನಾವು ಒಪ್ಪಿಗೆ ಕೊಟ್ಟಿದ್ದರೆ, ಇಂತಹ ಅವಿಶ್ವಾಸ ನಿರ್ಣಯ ಈ ಸಭೆಯಲ್ಲಿ ಬರುತ್ತಲೇ ಇರಲಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಆ ಅಡ್ಜರ್ನ್‌ಮೆಂಟ್ ಮೋಷನ್ನನ್ನು ನಾವು ಒಪ್ಪಿಕೊಳ್ಳದೇ ಹೋದ್ದರಿಂದ ಎರಡು ಲೈನುಗಳನ್ನು ಬರೆದುಕೊಟ್ಟು ಇಂತಹ ಅವಿಶ್ವಾಸ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಿದರು. ಆದರೆ ಇದಕ್ಕೆ ಮೊದಲಿನಿಂದ ಇದ್ದಂಥ ವಾತಾವರಣ ಪರಿಸ್ಥಿತಿ ಯಾವರೀತಿ ನಿರ್ಮಾಣವಾಯಿತು ಎಂಬುದನ್ನು ನಾನು ಹೇಳುತ್ತಿದ್ದೇನೆ. ಅಡ್ಜರ್ನ್‌ಮೆಂಟ್ ಮೋಷನ್ನಿಗೆ ಅವರಿಗೆ ಅವಕಾಶ ಸಿಗದೇ ಇದ್ದುದರಿಂದ ಅದಕ್ಕೆ ಇನ್ನಾವುದಾದರೂ ಒಂದು ಅವಕಾಶ ಕಲ್ಪಿಸಿಕೊಳ್ಳಬೇಕೆಂದು ಯೋಚಿಸಿ ಈ ಅವಿಶ್ವಾಸ ನಿರ್ಣಯವನ್ನು ಮಂಡಿಸಲಾಗಿದೆ. ಆ ರೀತಿ ಪರಿವರ್ತನೆಯಾಯಿತು. ಇದು ಈ ಸಭೆಯಲ್ಲಿ ಚರ್ಚೆಗೆ ಬಂದುದನ್ನು ನಾನು ಸ್ವಾಗತ ಮಾಡುತ್ತೇನೆ. ಅನೇಕ ಮಾನ್ಯ ಸದಸ್ಯರು ಏನೇನು ಅವರ ಮನಸ್ಸಿನಲ್ಲಿ ಕುದಿಯುತ್ತೋ ಅದನ್ನು ಹೊರಗೆಡುವುದಕ್ಕೆ ವಾತಾವರಣ ತಣ್ಣಗಾಗುವಂತೆ ಇದು ಅನುಕೂಲವಾಯಿತೆಂದು ನಾನು

(ಶ್ರೀ ವೀರೇಂದ್ರ ಪಾಟೀಲ್)

ತಿಳಿದುಕೊಂಡಿದ್ದೇನೆ. ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಇನ್ನೊಂದು ವಿಚಾರವನ್ನು ನಾನು ಪ್ರಸ್ತಾಪಮಾಡುತ್ತೇನೆ. ವಿರೋಧಪಕ್ಷದ ನಾಯಕರು ಈ ಮಂತ್ರಿ ಮಂಡಲ ಹೋಗಬೇಕು, ಇದರಲ್ಲಿ ನಮಗೆ ವಿಶ್ವಾಸವಿಲ್ಲವೆಂದು ಹೇಳಿದರು. ಇನ್ನು ಕೆಲವು ಸದಸ್ಯರು ಪೂರ್ತಿ ಮಂತ್ರಿಮಂಡಲದ ಬಗ್ಗೆ ಹೇಳದೆ ಸಂಬಂಧಪಟ್ಟ ಮಂತ್ರಿಗಳು ರಾಜೀನಾಮೆ ಕೊಡಬೇಕು ಎಂಬುದಾಗಿ ಹೇಳಿದರು. ಕೆಲವು ಮಾನ್ಯ ಸದಸ್ಯರು ನೀವು ಎನ್‌ಕ್ವಾಯರಿ ಕಮೀಶನ್ ನೇಮಕ ಮಾಡಬೇಕೆಂದು ಹೇಳಿದರು. ಇದು ಏಕೆ ಬಂತು ಎಂದರೆ, ಮೊದಲು ಅಡ್‌ಜರ್ನ್‌ಮೆಂಟ್ ಮೋಷನ್ ರೂಪದಲ್ಲಿದ್ದದ್ದನ್ನು ಈಗ ಈ ಒಂದು ನೋ ಕಾನ್‌ಫಿಡೆನ್ಸ್ ಮೋಷನ್ನಿನ ರೂಪದಲ್ಲಿ ತಂದಿದ್ದಾರೆ. ಇದರಲ್ಲಿ ಇವರು ಏನು ಹೇಳುತ್ತಾರೆ, ಅದನ್ನು ನೋಡಿದರೆ, ವಿರೋಧ ಪಕ್ಷದವರಲ್ಲಿಯೇ ಒಂದು ಹೊಂದಾಣಿಕೆ ಇಲ್ಲ, ಐಕ್ಯಮತ್ಯವಿಲ್ಲವೆಂದು ಸ್ಪಷ್ಟವಾಗುತ್ತದೆ. ವಿರೋಧ ಪಕ್ಷದ ನಾಯಕರು ಮಂತ್ರಿ ಮಂಡಲ ಹೋಗಬೇಕು ಎಂದು ಹೇಳುತ್ತಾರೆ, ಇನ್ನು ಕೆಲವರು ಒಬ್ಬರು ಮಂತ್ರಿಯವರು ಹೋಗಬೇಕೆಂದು ಹೇಳುತ್ತಾರೆ, ಮತ್ತು ಕೆಲವರು ಸಂಬಂಧಪಟ್ಟ ಮಂತ್ರಿ ಹೋಗಬೇಕಾದ ಅವಶ್ಯವಿಲ್ಲ ಎಂಕ್ವಾಯರಿ ಕಮಿಶನ್ ಮಾಡಬೇಕೆಂದು ಹೇಳುತ್ತಾರೆ. ಅನೇಕ ಮಾನ್ಯ ಸದಸ್ಯರು ಈ ಒಂದು ನೋ ಕಾನ್‌ಫಿಡೆನ್ಸ್ ಮೋಷನ್ ಬಗ್ಗೆ ಮಾತನಾಡುತ್ತಾ ಅನೇಕ ವಿಚಾರಗಳನ್ನು ಮಾತಾಡಿದರು. ಇನ್ನು ಕೆಲವರು ಶರಾವತಿಯ ವಿಚಾರ, ಹೇಮಾವತಿಯ ವಿಚಾರ ಮತ್ತು ಹಾರಂಗಿ ಮುಂತಾದುವುಗಳ ವಿಚಾರ ಹೇಳಿದರು. ಆದರೆ ನಾನಾದರೂ ತಿಳಿದುಕೊಂಡಿದ್ದೇನೆ, ಈ ನೋ ಕಾನ್‌ಫಿಡೆನ್ಸ್ ಮೋಷನ್ ಏನು ತಂದಿದ್ದಾರೆ, ಇದು ಬಹುಶಃ ಎಕ್ಸ್‌ಪ್ರೆಸ್ ಆಕ್ಷನ್‌ನ ವಿಚಾರದಲ್ಲಿ ಹೈಕೋರ್ಟು ಮತ್ತು ಸುಪ್ರೀಂ ಕೋರ್ಟು ತೀರ್ಪು ಏನು ಇದೆ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಂದಿದ್ದಾರೆ ಎಂದು. ಮುಖ್ಯವಾಗಿ ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಅದಕ್ಕಾಗಿ ಇದರ ಹೊರತು ಏನೇನು ವಿಚಾರಗಳನ್ನು ವ್ಯಕ್ತಮಾಡಿದ್ದಾರೆ, ಅದರ ಬಗ್ಗೆ ಮುಂದೆ ಚರ್ಚೆಗೆ ಉತ್ತರ ಕೊಡುವ ಸಂದರ್ಭ ಬಂದಾಗ ಅಂತಹ ಅವಕಾಶವನ್ನು ಉಪಯೋಗಿಸಿಕೊಂಡು ಎಲ್ಲಾ ವಿಚಾರಗಳ ಬಗ್ಗೆ ಹೇಳುತ್ತೇನೆ. ಇವತ್ತಿನ ದಿವಸ ಕೇವಲ ಹೈಕೋರ್ಟು ಮತ್ತು ಸುಪ್ರೀಂ ಕೋರ್ಟು ಏನು ಒಂದು ನಿರ್ಣಯ ಮಾಡಿದ್ದಾರೆ, ಅದರ ಬಗ್ಗೆ ಮಾತ್ರ ಉತ್ತರ ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಕೇಳಿದರು......

Sri H. M. CHANNABASAPPA (Periyapatna).—On a point of order, Sir. The no-confidence motion has not been tabled mainly on the basis of the judgement delivered by the High Court or the Supreme Court. It is one of the items or acts of omissions and commissions that have been alleged. There are a number of omissions and commissions and it is the duty of the Government to take note of all such matters on which no-confidence motion has been tabled and satisfy the House on various points raised. It would not be in order for the Chief Minister to think that the no-confidence motion has been based only on this particular item. This item is not specifically mentioned in the motion. It would be disillusionment to the House itself to say that the motion has been tabled only on this issue and not on other issues. Sir, the motion says "that this House has no confidence in the Council of Ministers headed by Sri Veerendra Patil". It is not open to the Chief Minister to give a connotation of his own.

Mr. SPEAKER.—Hon. Member Sri Channabasappa has raised a point of order that the Chief Minister should try to answer all the points raised in the debate on the no-confidence motion. It is left to Hon. Chief Minister to reply in such manner as he thinks proper. The Chair has no right to give him a direction to reply in a particular manner. As such, there is no point of order.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಾನು ಪ್ರಥಮದಲ್ಲೇ ಹೇಳಿದೆ, ಕೇವಲ ಒಂದೇ ಚರ್ಚೆಗೆ ಅವಕಾಶ ಇರಬೇಕೆಂದು ತಂದಿಲ್ಲವೆಂದು ನಾನು ಒಪ್ಪಿಕೊಂಡಿದ್ದೇನೆ. ಆದರೆ ಮುಖ್ಯವಾಗಿ ಇದೇ ಚರ್ಚೆಗೆ ಬಂತು ; ಮತ್ತು 2-3 ಜನ ಸದಸ್ಯರು ಇನ್ನೂ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಆದರೆ ಆ ವಿಚಾರಕ್ಕೆ ಉತ್ತರ ನೀಡಬಾರದು ಎಂದು ಏನೂ ಇಲ್ಲ. ಉತ್ತರ ನೀಡುವುದಕ್ಕೆ ಸಾಮರ್ಥವಿಲ್ಲವೆಂದೇನೂ ಇಲ್ಲ. ಅದಕ್ಕಾಗಿ ಆ ಕೆಲವು ಟೀಕೆಗಳ ಬಗ್ಗೆ ಮತ್ತೊಂದು ಅವಕಾಶ ಒದಗಿಸಿಕೊಳ್ಳುತ್ತೇನೆಂದು ಹೇಳಿದ್ದೇನೆ. ತಾವು ಅಪ್ಪಣೆ ಕೊಡಿಸಿದರೆ, ಯಾವ ಟೀಕೆ ಟಿಪ್ಪಣಿಗಳಿಗೆ ಉತ್ತರ ಕೊಟ್ಟಿಲ್ಲವೋ, ಅದನ್ನು ಮುಂದೆ ಕೊಡುತ್ತೇನೆ. ಈಗ ಮೂಲ ಪ್ರಶ್ನೆಗೆ ಬರುವುದಕ್ಕೆ ಮೊದಲು ಪ್ರಾಶಸ್ತ್ಯವಾದ ಕೆಲವು ಮಾತುಗಳನ್ನು ಹೇಳುತ್ತೇನೆ. ಕೆಲವು ಮಾನ್ಯ ಸದಸ್ಯರು ಟೀಕೆ ಮಾಡಿದ್ದಾರೆ, ಏನೆಂದರೆ—ಡಿವಿಜನಲ್ ಕಮೀಷನರ್ ಸರ್ಕಾರ ಹೇಳಿದಂತೆ ಮಾಡಿಕೊಂಡು ಹೋಗುತ್ತಾರೆ. ಸರ್ಕಾರ ತಮ್ಮ ಮನಸ್ಸಿನಲ್ಲಿ ಏನಿದೆ ಆ ರೀತಿ ಡಿವಿಜನಲ್ ಕಮೀಷನರಿಂದ ಮಾಡಿಸಿದ್ದಾರೆ ಎಂದು ಹೇಳಿದ್ದಾರೆ. ಅಲ್ಲಿಂದ ಇನ್ನೊಂದು ವಿಚಾರ ಹೇಳಿದ್ದಾರೆ. ಭೂಮರೆಡ್ಡಿಯವರು ಹೈಯೆಸ್ಟ್ ಟೆಂಡರರ್ ಇದ್ದರೂ, ಎಕ್ಸೈಸ್ ಮಂತ್ರಿಯವರ ಹತ್ತಿರ 22ನೇ ತಾರೀಖು ಕೊಟ್ಟಾಗ ಎಕ್ಸೈಸ್ ಮಂತ್ರಿಯವರು ಸುಮ್ಮನೆ ಕೂತಿದ್ದರಲ್ಲದೆ ಏನೂ ಮಾಡಿಲ್ಲವೆಂದು ಹೇಳಿದ್ದಾರೆ. ಈ ವಿಚಾರವನ್ನು ಮೊದಲು ಏಕೆ ಪ್ರಸ್ತಾಪ ಮಾಡುತ್ತೇನೆಂದರೆ, ಬಹುಶಃ ಮುಂದೆ ಈ ಕೇಸ್ ಹೇಳುವಾಗ ಇದು ಮರೆತುಹೋಗಬಹುದು ಎಂದು ಹೇಳುತ್ತಿದ್ದೇನೆ. ನಿನ್ನೆ ಹೇಳಿದೆ, 22ನೇ ತಾರೀಖಿಗೆ ಎಕ್ಸೈಸ್ ಮಂತ್ರಿಯವರ ಹತ್ತಿರ ಅರ್ಜಿ ಸಲ್ಲಿಸಿದಾಗ, ಅವತ್ತಿನ ದಿವಸವೇ ಹೋಂ ಸೆಕ್ರೆಟರಿಯವರನ್ನು ಕರೆದು, ಕಾನೂನು ಪ್ರಕಾರ ಡಿಸ್ಪೋಸ್ ಮಾಡಬೇಕೆಂದು ಆದೇಶ ಕೊಟ್ಟಿದ್ದಾರೆ. ಆ ಆದೇಶ ಕೊಟ್ಟಮೇಲೆ, 23—24—25 ಮೈಸೂರಿನಲ್ಲಿ ಯಾವುದೋ ಅರ್ಜೆಂಟ್ ಕೆಲಸಕ್ಕಾಗಿ ಹೋಗಿದ್ದರು. ಆಮೇಲೆ ರಿವಿಜನ್ ಪಿಟಿಶನ್ ಮೇಲೆ ಡಿವಿಜನಲ್ ಕಮೀಷನರಿಂದ ರಿಪೋರ್ಟು ತರಿಸಿಕೊಳ್ಳತಕ್ಕದ್ದು ಅವಶ್ಯಕವಾಯಿತು ಮತ್ತು ಅದಕ್ಕೆ ಸಾಕಷ್ಟು ಸಮಯವಿಲ್ಲವೆಂದು ಟ್ರಂಕ್ ಕಾಲ್ ಮೇಲೆ ಡಿವಿಜನಲ್ ಕಮಿಷನರಿಗೆ ಓದಿ ಹೇಳಿದ್ದಾರೆ. ಇದಕ್ಕಾಗಿ ನೀವು ರಿಪೋರ್ಟು ಸಲ್ಲಿಸಬೇಕು, ರಿಪೋರ್ಟು ಸಲ್ಲಿಸಿದ ಮೇಲೆ ನಿರ್ಣಯ ತೆಗೆದುಕೊಳ್ಳಬಹುದು ಎಂಬ ವಿಚಾರ ಹೇಳಿದ್ದಾರೆ. ಆಮೇಲೆ 25—26, ಟ್ರಂಕ್ ಕಾಲ್ ಮೇಲೆ ಹೇಳಿದ ಪ್ರಕಾರ 27ಕ್ಕೆ ಬಹುಶಃ ನಮ್ಮ ಹತ್ತಿರ ರಿಪೋರ್ಟು ಬಂತು. 28ಕ್ಕೆ ಕೇಸ್......

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—22ಕ್ಕೆ ಎಕ್ಸೈಸ್ ಮಂತ್ರಿಗೆ ಅರ್ಜಿ ಕೊಟ್ಟಾಗ 26ಕ್ಕೆ ಡಿವಿಜನಲ್ ಕಮೀಷನರ್ ತೀರ್ಮಾನ ಕೊಡುತ್ತೇವೆಂದು ಎಕ್ಸೈಸ್ ಮಂತ್ರಿಯವರಿಗೆ ಫೋನ್ ಮಾಡಿದಾಗ ನೀವು ಏನು ಆರ್ಡರ್ ಮಾಡಬೇಡಿ, ಅದು ನನ್ನ ಮುಂದೆ ಇದೆ ಎಂದು ಹೇಳಿದ್ದೀರಾ ?

Mr. SPEAKER.—I request the hon. Members not to interrupt because the Hon. Chief Minister has already made a request to the Hon. Members that there should not be interruptions. I cannot compel the Hon. Leader of the House to yield to any interruptions.

ಶ್ರೀ ವೀರೇಂದ್ರ ಪಾಟೀಲ್.—ಈಗ ನಾನು ಹೇಳುತ್ತಾ ಇದ್ದೆ. 22 ನೇ ತಾರೀಖು ಅಪ್ಲಿಕೇಶನ್ ಕೊಟ್ಟಾಗ ಹೋಮ್ ಸೆಕ್ರೆಟರಿಯವರಿಗೆ ಅಬ್ಕಾರಿ ಮಂತ್ರಿಗಳು ಕಾನೂನು ಪ್ರಕಾರ ಇದರ ಬಗ್ಗೆ ಕ್ರಮತೆಗೆದುಕೊಳ್ಳಬಹುದು ಎಂದು ಆದೇಶ ಕೊಟ್ಟಿದ್ದಾರೆ ಹೋಮ್ ಸೆಕ್ರೆಟರಿಯವರು 26ನೇ ತಾರೀಖು ಡಿವಿಜನಲ್ ಕಮೀಷನರಿಗೆ ಟ್ರಂಕಾಲ್ ಮಾಡಿ, ರಿವಿಜನ್ ಪಿಟಿಷನ್ ನಿಮ್ಮ ಹತ್ತಿರ ಕಳುಹಿಸಬೇಕು ಆದರೆ ಈಗ ಸಮಯವಿಲ್ಲ, ನಂತರ ಇದನ್ನು ನಿಮಗೆ ಕಳುಹಿಸುತ್ತೇನೆ ಈಗ ಪಿಟಿಷನ್‌ನಲ್ಲಿ ಇರುವುದನ್ನು ನಾನು ಓದಿ ಹೇಳುತ್ತೇನೆಂದು ಹೇಳಿ ಅದನ್ನು ಓದಿ ಹೇಳುತ್ತಾರೆ ಆ ಸಂಬಂಧದಲ್ಲಿ ಏನು ರಿಪೋರ್ಟ್ ಇದೆ ಅದನ್ನು ಕಳುಹಿಸಬೇಕು ಎಂದು ಅವರು ಹೇಳಿದಮೇಲೆ 27ನೇ ತಾರೀಖು ರಿಪೋರ್ಟ್ ಡಿವಿಜನಲ್ ಕಮೀಷನರರಿಂದ ಬಂದಮೇಲೆ ಆ ಸಂಬಂಧದಲ್ಲಿ 28ನೇ ತಾರೀಖು ಹಿಯರಿಂಗ್ ಇಟ್ಟುಕೊಳ್ಳುತ್ತಾರೆ ಆದರೆ ಆ ದಿವಸ ಭೂಮರೆಡ್ಡಿಯವರ ಅಡ್ವೋಕೇಟ್ ಬಂದು ನಾವು ಹೈಕೋರ್ಟಿಗೆ ಹೋಗಿದ್ದೇವೆ. ಈ ಹಿಯರಿಂಗ್ ಅವಶ್ಯಕತೆ ಇಲ್ಲ ಎಂದು ಅವರು ಹೇಳಿದ ಮೇಲೆ ಮುಂದಿನ ಕ್ರಮತೆಗೆದುಕೊಳ್ಳುವುದು ನಿಂತುಹೋಯಿತು. 22ನೇ ತಾರೀಖಿನ ದಿವಸವೇ ನನ್ನ ಹತ್ತಿರ ಕೆಲವರು ಬಂದಾಗ ಹೇಳಿದರು ಅಬ್ಕಾರಿ ಮಂತ್ರಿಗಳು ಮಲಗಿಕೊಂಡಿದ್ದಾರೆ. ಇದನ್ನು ಡಿಸ್‌ಪೋಜ್ ಮಾಡುವುದಕ್ಕೆ ಸೆಕ್ರೆಟರಿಯವರಿಗೆ ಕೊಟ್ಟಿದ್ದಾರೆ ಎಂದು ನಾನು ಈಗಾಗಲೇ ಈ ಮಾನ್ಯ ಸಭೆಗೆ ಹೇಳಿದ್ದೇನೆ. ಪ್ರತಿನಿತ್ಯವೂ ನಾವು ಅನೇಕ ವಿಚಾರಗಳಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇವೆ. ಅನೇಕ ವಿಚಾರಗಳಲ್ಲಿ ಸೆಕ್ರೆಟರಿಗಳಿಗೆ ನಾವು ಅಡ್ವೈಜ್ ಮಾಡಿ ನಾವು ನಿರ್ಣಯ ತೆಗೆದುಕೊಳ್ಳುವುದಿಲ್ಲ, ನೀವೇ ಈ ಬಗ್ಗೆ ನಿರ್ಣಯ ತೆಗೆದು

(ಶ್ರೀ ವೀರೇಂದ್ರ ಪಾಟೀಲ್)

ಕೊಳ್ಳಬಹುದು ಎಂದು ನಾವು ಸೆಕ್ರೆಟರಿಗಳಿಗೆ ಪವರ್ ಡೆಲಿಗೇಟ್ ಮಾಡಬಹುದು. ಅನೇಕ ಸಲ ಅಧಿಕಾರಿಗಳು ನಮಗೆ ಅಡ್ವೈಸ್ ಮಾಡಿದರೆ ನಾವು ಆ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಒಳ್ಳೆಯ ರೀತಿಯಿಂದ ಯೋಗ್ಯವಾಗುತ್ತದೆ ಎಂದು ನಾವು ಆ ರೀತಿ ಮಾಡಿದ್ದೇವೆ. ಒಂದು ವಿಚಾರವನ್ನು ಶ್ರೀಮಾನ್ ನಾಗಪ್ಪನವರು ಹೇಳಿದರು. ನಾನು ಮತ್ತು 3-4 ಜನ ಎಂ. ಎಲ್. ಎ. ಗಳು ಅಬ್ಕಾರಿ ಮಂತ್ರಿಗಳ ಹತ್ತಿರ ಹೋಗಿ ಹೇಳಿದ್ದೇವೆ, ನಾವು ಹತ್ತು ಪರ್ಸೆಂಟ್ ಹೆಚ್ಚು ಆದಾಯ ವನ್ನು ಕೊಡುವುದಕ್ಕೆ ತಯಾರಾಗಿದ್ದೇವೆ, ಇದನ್ನು ಆಕ್ಷನ್ ಮಾಡಿ ಎಂದು ಹೇಳಿದರೂ ಅಬ್ಕಾರಿ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡಲಿಲ್ಲ ಎಂದು ಹೇಳಿದರು. ಅನೇಕ ಜನ ಮಾನ್ಯ ಸದಸ್ಯರು ಹೇಳುತ್ತಿದ್ದರು ನಮ್ಮ ದೇಶಕ್ಕೆ ಹೆಚ್ಚು ರೆವಿನ್ಯೂ ಬರುವ ದೃಷ್ಟಿಯಿಂದ ಇವರು ಕೆಲಸಮಾಡಿಲ್ಲ ಎಂದು ಪದೇ ಪದೇ ಹೇಳುತ್ತಿದ್ದರು. ರಾಜ್ಯದ ಆದಾಯವನ್ನು ಹಾಳು ಮಾಡುವ ಕೆಲಸವನ್ನು ಸರ್ಕಾರ ಮಾಡಿಲ್ಲ. 10 ಪರ್ಸೆಂಟ್ ಜಾಸ್ತಿ ಆದಾಯವನ್ನು ಕೊಡುತ್ತೇವೆಂದು ಯಾರ ಪರವಾಗಿ ಶ್ರೀಮಾನ್ ನಾಗಪ್ಪನವರು ಭರವಸೆ ನೀಡಿದರೋ ಗೊತ್ತಿಲ್ಲ. 20 ಪರ್ಸೆಂಟ್ ಹೆಚ್ಚು ಕೊಟ್ಟರೆ ಅದನ್ನು ಕೊಡುವುದಕ್ಕೆ ವಿಚಾರ ಮಾಡುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದರು. 20 ಪರ್ಸೆಂಟಿನಂತೆ ಒಪ್ಪಿಕೊಂಡಿದ್ದರೂ ಸರ್ಕಾರಕ್ಕೆ ಅದರಿಂದ ಹಾನಿಯಾಗುತ್ತಿತ್ತು. ಅವರು 10 ಪರ್ಸೆಂಟ್ ಹೆಚ್ಚು ಆದಾಯ ಕೊಡುತ್ತೇವೆ ಎಂದು ಹೇಳುವ ಕಾಲಕ್ಕೆ ಈ ವರ್ಷ ಶೇಕಡ 35 ರಷ್ಟು ಹೆಚ್ಚು ಆದಾಯ ಬಂದಿದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದಹಾಗೆ ಅದನ್ನು ಒಪ್ಪಿದ್ದರೆ ಅದರಿಂದ ಸರ್ಕಾರಕ್ಕೆ ಹಾನಿಯಾಗುತ್ತಿತ್ತು. ಈ ದೃಷ್ಟಿಯಿಂದ ಯಾರೋ ಒಬ್ಬರು ಮಾನ್ಯ ಸದಸ್ಯರು ಶೇಕಡಾ 10ರಷ್ಟು ಜಾಸ್ತಿ ಆದಾಯ ಕೊಡುತ್ತೇವೆಂದು ಹೇಳಿದ ಮಾತ್ರಕ್ಕೇ ಅದನ್ನು ಒಪ್ಪುವುದಕ್ಕೆ ಇದೇನು ಅಂಗಡಿಯ ವ್ಯಾಪಾರವಲ್ಲ ಇದು ಸರ್ಕಾರದ ಕೆಲಸ, ಕಾನೂನು ಕಾಯಿದೆ ಮೂಲಕ ವಿಚಾರ ಮಾಡಿ ಮಾಡುವಂತಹ ಪರಿಸ್ಥಿತಿ ಇರುತ್ತದೆ. ಮಾನ್ಯ ಸದಸ್ಯರಾದ ಶ್ರೀ ನಾಗಪ್ಪನವರು ಮತ್ತು ಇತರ ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು, ಶ್ರೀಮಾನ್ ನಾಗಪ್ಪನವರ ಕೇಳಿಕೆಯನ್ನು ಅಬ್ಕಾರಿ ಮಂತ್ರಿಗಳು ನಿರಾಕರಿಸದೆ ಸುಮ್ಮನೆ ಒಪ್ಪಿಕೊಡಿದ್ದರೆ ಸರ್ಕಾರಕ್ಕೆ ಶೇಕಡಾ 35ರಷ್ಟು ಆದಾಯ ಹೆಚ್ಚು ಬರುತ್ತಿತ್ತೇ ಎಂಬುದನ್ನು. ಕೇವಲ ಶೇಕಡ 10ರಷ್ಟು ಮಾತ್ರ ಹೆಚ್ಚು ಆದಾಯ ಬರುತ್ತಿತ್ತು. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು, ಅಬಕಾರಿ ಹರಾಜಿನಲ್ಲಿ ಅಂಗಡಿ ಟೆಂಡರು ವಿಚಾರದಲ್ಲಿ ಸಮಾಜವಾದ ಇಲ್ಲ. ಏನೋ ಸಣ್ಣ ಸಣ್ಣ ಜನಗಳು ಬದುಕಿಕೊಳ್ಳಬೇಕು ಎಂದರೆ ಸರ್ಕಾರಕ್ಕೆ ಬರುವ ವರಮಾನವನ್ನು ಕಡಿಮೆ ಮಾಡಿ ಎಕ್ಸೈಜ್ ಬಾಬಿನಲ್ಲಿ ಸೋಷಲಿಸಂ ಅಥವಾ ಸಮಾಜವಾದವನ್ನು ತರುವ ಇಚ್ಛೆ ನಮ್ಮದು ಇಲ್ಲ. ಅದಕ್ಕಾಗಿ ನಾವು ವಿಚಾರ ಮಾಡುವಂಥಾದ್ದು ಏನು ಎಂದರೆ ಈ ಬಾಬಿನಲ್ಲಿ ಎಷ್ಟು ಹೆಚ್ಚು ಹಣ ಸರ್ಕಾರಕ್ಕೆ ಬರುವುದಕ್ಕೆ ಸಾಧ್ಯವಿದೆಯೋ ಆ ತರಹ ಎಲ್ಲಾ ಕ್ರಮಗಳನ್ನೂ ಅನುಸರಿಸಬೇಕು ಎಂಬುದು ಸರ್ಕಾರದ ಒಂದು ಧೋರಣೆಯಾಗಿದೆ. ಅಬ್ಕಾರಿ ಹರಾಜಿನ ವಿಷಯದಲ್ಲಿ ಡಿಸ್ಟ್ರಿಕ್ಟ್‌ವೈಜ್ ಮಾರಾಟ ಕ್ರಮ ಇಟ್ಟಾಗ, ಅಂಗಡಿವಾರು ಹೋದರೆ ಕೆಲವು ಕಡೆ ಟೆಂಡರು ಬರುವುದಿಲ್ಲ, ಅದರಿಂದ ಸರ್ಕಾರಕ್ಕೆ ಹಾನಿಯಾಗುತ್ತದೆ, ಒಂದು ವೇಳೆ ಅಂಗಡಿವಾರು ಮಾಡಿದರೆ, ಅನುಕೂಲ ಇರುವ ಕಡೆ ಆದಾಯ ಬರುತ್ತದೆ. ಉಳಿದಕಡೆ ಕೈಬಿಟ್ಟುಬಿಡುತ್ತಾರೆ. ಸರ್ಕಾರ ಲಿಕ್ಕರ್ ಮತ್ತು ಟಾಡಿಷಾಪುಗಳನ್ನು ಓಪನ್ ಮಾಡಿ ಅದನ್ನು ಮಾರಾಟ ಮಾಡುವುದಕ್ಕೆ ಸಿಬ್ಬಂದಿಯನ್ನು ನೇಮಕ ಮಾಡಿ, ಅಧಿಕಾರಿಗಳನ್ನು ನಿಲ್ಲಿಸಿ ಆ ಕೆಲಸವನ್ನು ಮಾಡಬೇಕಾದ ನೀತಿ ನಮ್ಮದಲ್ಲ. ನಾನು 1961ನೇ ಇಸವಿಯಲ್ಲಿ ಅಬ್ಕಾರಿ ಮಂತ್ರಿಗಳಾಗಿದ್ದಾಗ ಬೆಂಗಳೂರು ಸಿಟಿ ಮತ್ತು ಬೆಂಗಳೂರು ಜಿಲ್ಲೆಗೆ ಬೇರೆ ಬೇರೆ ಆಕ್ಷನ್ ಮಾಡಿದಾಗ ಬೆಂಗಳೂರು ಸಿಟಿಗೆ ಹೆಚ್ಚು ಟೆಂಡರು ಬಂದು ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟದ್ದು ನಷ್ಟವಾಗುವ ಪರಿಸ್ಥಿತಿ ಕಂಡುಬಂತು. ಆಗ ಎಕ್ಸೈಜ್ ಕಮೀಷನರನ್ನು ಮತ್ತು ಡೆಪ್ಯುಟಿ ಕಮೀಷನರುಗಳನ್ನು ಕನ್‌ಸಲ್ಟ್ ಮಾಡಿ ಡಿಸ್ಟ್ರಿಕ್ಟ್‌ವಾರು ಸರಿಯಾಗಿ ಟೆಂಡರು ಬರುವುದಿಲ್ಲ. ಆದ್ದರಿಂದ ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಬೆಂಗಳೂರು ಸಿಟಿ ಎರಡನ್ನು ಕಂಬೈಂಡ್ ಮಾಡಿ ಆಕ್ಷನ್ ಮಾಡಿದರೆ ಅನುಕೂಲವಾಗಬಹುದು ಎಂದು ಹೇಳಿ ಆ ರೀತಿ ಎರಡನ್ನು ಒಟ್ಟಿಗೆ ಸೇರಿಸಿ ಹರಾಜು ಮಾಡಿದಾಗ ಹೆಚ್ಚು ಹಣ ಬಂತು. ಈ ದೃಷ್ಟಿಯಿಂದ ಅಬ್ಕಾರಿ ಹರಾಜಿನಲ್ಲಿ ಅಂಗಡಿ ಟೆಂಡರು ವಿಚಾರದಲ್ಲಿ ಯಾವ ಸೋಷಲಿಜಂ ತರುವ ಇಚ್ಛೆ ಇಲ್ಲ. ಸರ್ಕಾರಕ್ಕೆ ಎಷ್ಟು ಹೆಚ್ಚು ಹಣ ಬರಲು ಸಾಧ್ಯವಿದೆಯೋ ಆ ಕ್ರಮವನ್ನು ಅನುಸರಿಸಬೇಕು. ಈಗ ಆ ನೀತಿಯನ್ನು ನಾವು ಅನುಸರಿಸಿಕೊಂಡು ಹೋಗುತ್ತಿದ್ದೇವೆ. ರಾಯಚೂರು, ಗುಲ್ಬರ್ಗ ಜಿಲ್ಲೆಗಳನ್ನು ಪ್ರತ್ಯೇಕವಾಗಿ ಜಿಲ್ಲಾವಾರು ಹರಾಜು ಹಾಕುತ್ತಿದ್ದಾಗ 1963-64ನೇ ಸಾಲಿನಲ್ಲಿ, 6,24,381 ರೂಪಾಯಿಗಳ ಆದಾಯ ಬರುತ್ತಿತ್ತು. 1964-65ನೇ ಸಾಲಿನಲ್ಲಿ 6,74,229

ರೂಪಾಯಿಗಳು ಆದಾಯ ಬರುತ್ತಿತ್ತು, 1965-66ನೇ ಸಾಲಿನಲ್ಲಿ 6,36,365 ರೂಪಾಯಿಗಳು, 1966-67ನೇ ಸಾಲಿನಲ್ಲಿ 6,09,612 ರೂಪಾಯಿಗಳು, ಈ ಪ್ರಕಾರವಾಗಿ ಆ ಬಾಬಿನಲ್ಲಿ ಆದಾಯ ಬರುತ್ತಿತ್ತು. 1967-68ನೇ ಸಾಲಿನಲ್ಲಿ ಆ ಎರಡು ಜಿಲ್ಲೆಗಳನ್ನು ಕ್ಲಬ್ ಮಾಡಿ ಹರಾಜು ಹಾಕಿದ್ದಾರೆ. ಈ ವರ್ಷ 7,40,669 ರೂಪಾಯಿಗಳ ಆದಾಯ ಬಂದಿದೆ. ಇದು ಶೇಕಡ 22 ರಷ್ಟು ಆದಾಯ ಹೆಚ್ಚಿದೆ. 1968-69ನೇ ಸಾಲಿನಲ್ಲಿ 9,99,999 ರೂಪಾಯಿಗಳ ಆದಾಯ ಬಂದಿದೆ. ಇದು ಶೇ. 35 ರಷ್ಟು ಆದಾಯ ಹೆಚ್ಚಿದೆ. ಈ ರೀತಿಯಾಗಿ ಎಲ್ಲೆಲ್ಲಿ ನಮಗೆ ಹೆಚ್ಚು ಅನುಕೂಲವಾಗುತ್ತದೆ, ಹೆಚ್ಚು ರೆವಿನ್ಯೂ ಬರುತ್ತದೆ ಎಂಬುದನ್ನು ತಿಳಿದುಕೊಂಡು ಅಧಿಕಾರಿಗಳು ನಮಗೆ ಸಲಹೆ ಕೊಡುತ್ತಾರೆ. ಅಧಿಕಾರಿಗಳ ಜೊತೆಯಲ್ಲಿ ನಾವು ಚರ್ಚೆಮಾಡಿ ಅವರಿಗೆ ನಾವು ಈ ರೀತಿ ಮಾಡಿ ಎಂದು ಸಲಹೆ ಕೊಡುತ್ತೇವೆ. ಈ ಪ್ರಕಾರವಾಗಿ ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ವರಮಾನ ಬಂದಿದೆ ಎಂದು ನಾನು ಅಂಕಿಸಂಖ್ಯೆಗಳ ಮುಖಾಂತರ ಸ್ಪಷ್ಟಪಡಿಸುತ್ತೇನೆ.

10–30 A.M.

ಅಲ್ಲಿಂದ ಇನ್ನೂ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಒಬ್ಬರು ಮಾನ್ಯ ಸದಸ್ಯರು ಹೇಳುತ್ತಿದ್ದರು, ಮುಖ್ಯಮಂತ್ರಿಗಳ ಹತ್ತಿರ ಕೆಲವರು ಕಾಂಪ್ರಮೈಸ್‌ಗೆ ಬಂದಿದ್ದರು, ಅವರಿಗೆ ಮುಖ್ಯಮಂತ್ರಿಗಳು 40 ಲಕ್ಷ ರೂಪಾಯಿಗಳನ್ನು ಕಳೆದುಕೊಳ್ಳುತ್ತೀರಾ ಎಂದು ಕೇಳಿದರು, ಆಂಧ್ರದಿಂದ ಒಬ್ಬ ಮಂತ್ರಿಗಳು ಬಂದಿದ್ದರು, ಮತ್ತೊಬ್ಬರು ಬಂದಿದ್ದರು, ಎಲ್ಲರೂ ಕಾಂಪ್ರಮೈಸ್ ಸಲುವಾಗಿ ಪ್ರಯತ್ನ ಮಾಡುತ್ತಿದ್ದರು ಎಂಬ ಅನೇಕ ವಿಚಾರಗಳನ್ನು ಹೇಳಿದರು. ಒಬ್ಬರು ಮಾನ್ಯ ಸದಸ್ಯರು ಮುಖ್ಯಮಂತ್ರಿಗಳು ಸಿಂಡಿಕೇಟ್ ಮಾಡಿಕೊಂಡಿದ್ದಾರೆಂದು ಹೇಳಿದರು. ಅವರ ಮನಸ್ಸಿನಲ್ಲಿ ಏನು ಕಿಚ್ಚು ಇದೆ ಎಂಬುದು ನನಗೆ ಗೊತ್ತು. ಅದು ಬೇರೆಯವರಿಗೆ ಗೊತ್ತಿಲ್ಲ, ಸಭೆಗೆ ಗೊತ್ತಿಲ್ಲ. ಅದನ್ನು ಇಲ್ಲಿ ಹೇಳುವುದರಿಂದ ಕಹಿವಾತಾವರಣ ಬರುತ್ತದೆ. ಆದ್ದರಿಂದ ಹೇಳುವುದಿಲ್ಲ. ನಿರಂಜನ ಎಂಬುವರ ಮುಖವನ್ನು ನಾನು ನೋಡಿಲ್ಲ. ಭೂಮಾರೆಡ್ಡಿ ಎಂಬುವರನ್ನು ಸಹ ನಾನು ನೋಡಿಲ್ಲ. ಆದರೆ ಒಬ್ಬ ಪಾರ್ಲಿಮೆಂಟ್ ಸದಸ್ಯರು ಮಾತ್ರ ಒಂದು ಸಲ ನನ್ನ ಹತ್ತಿರ ಬಂದು ಇಬ್ಬರಿಗೆ ಜಗಳ ಬಂದಿದೆ, ಬಹಳ ಹಾನಿಯಾಗುತ್ತಿದೆ, ನೀವು ಮಧ್ಯಸ್ಥಿಕೆ ವಹಿಸಬೇಕೆಂದು ಹೇಳಿದರು. ಅದಕ್ಕೆ ನಾನು ಹೇಳಿದೆ, ಮುಖ್ಯಮಂತ್ರಿಯಾಗಿ ನಾನು ಕಾಂಪ್ರಮೈಸ್ ಮಾಡಿಸುವಂತಹ ಒಂದು ಕೆಲಸಕ್ಕೆ ಕೈಹಾಕುವುದಕ್ಕೆ ತಯಾರಿಲ್ಲ, ನೀವುಗಳೇ ಯಾರಾದರು ದೊಡ್ಡವರು, ಹಿರಿಯರು ಸೇರಿಕೊಂಡು ಒಂದು ಕಾಂಪ್ರಮೈಸ್‌ಗೆ ಬರಬಹುದು, ಈ ವಿಚಾರದ ಬಗ್ಗೆ ಮತ್ತೆ ನನ್ನ ಹತ್ತಿರ ಬರಬೇಡಿ ಎಂದು. ಅನಂತರ ನನ್ನ ಹತ್ತಿರ ಯಾರೂ ಬರಲಿಲ್ಲ. ಈ ವಿಚಾರದಲ್ಲಿ ಹೈದರಾಬಾದಿನಲ್ಲಿಯಾಗಲೀ, ಬೆಂಗಳೂರಿನಲ್ಲಿಯಾಗಲೀ ನನ್ನ ಮುಖೇನ ಕಾಂಪ್ರಮೈಸ್ ಆಗಿಲ್ಲ. ನಾನು ಮುಖ್ಯಮಂತ್ರಿಯಾದ ಮೇಲೆ 5-6 ಸಲ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಹೋಗಿ ಈ ವಿಚಾರದ ಬಗ್ಗೆ ಹೇಳಿ ಬಂದಿದ್ದೇನೆ ಎಂದು ಹೇಳಿದರು. ಈ ಬಗ್ಗೆ ಏನು ಹೇಳಬೇಕೋ ಗೊತ್ತಾಗುವುದಿಲ್ಲ. ನಾನು ಮುಖ್ಯಮಂತ್ರಿಯಾದ 2 ತಿಂಗಳ ಮೇಲೆ ಗುಲ್ಬರ್ಗಕ್ಕೆ ಹೋಗಿದ್ದೇನೆ. ಮೇ 28 ಅಥವಾ 29 ರಂದು ನನ್ನನ್ನು ಮುಖ್ಯಮಂತ್ರಿಯಾಗಿ ಆರಿಸಿದರು. ಈ ಹರಾಜು ನಡೆದಿರುವುದು ಮೇ 25ನೇ ತಾರೀಕು. ನಾನು ಮುಖ್ಯಮಂತ್ರಿಯಾದ 6 ತಿಂಗಳ ಮೇಲೆ ನನ್ನ ಕ್ಷೇತ್ರಕ್ಕೆ ಹೋಗಿದ್ದೇನೆ. ಕೆಲಸದ ಒತ್ತಡದಿಂದ ನಾನು ಜಾಗ್ರತೆ ನನ್ನ ಕ್ಷೇತ್ರಕ್ಕೆ ಹೋಗುವುದಕ್ಕಾಗಲಿಲ್ಲ. ಮಾನ್ಯ ಸದಸ್ಯರು ಏನಾದರೂ ಹೇಳಬೇಕೆಂದರೆ ಸ್ವಲ್ಪ ವಿಚಾರಮಾಡಿ ವಿಷಯ ಸರಿಯಾಗಿ ತಿಳಿದುಕೊಂಡು ಹೇಳಬೇಕು. ನಾನು 6 ಸಲ ಹೋಗಿಯೇ ಇಲ್ಲ. ಇನ್ನೂ 2-3 ಸಲ ಹೋದರೆ 6 ಸಲ ಆಗಬಹುದು. ಆ ಭಾಗದವರು ನನ್ನನ್ನು ಬರಬೇಕೆಂದು ಕರೆಯುತ್ತಲೇ ಇದ್ದಾರೆ. ನಮ್ಮ ಭಾಗದಿಂದ ತಾವು ಮುಖ್ಯಮಂತ್ರಿಗಳಾಗಿದ್ದೀರಿ, ಆದ್ದರಿಂದ ತಮ್ಮ ಕ್ಷೇತ್ರಕ್ಕೆ ಬರಬೇಕೆಂದು ಅಲ್ಲಿಯ ಜನರು ಇಚ್ಛೆಪಡುತ್ತಾರೆ. ಆದರೆ ಕೆಲಸದ ಒತ್ತಡದಿಂದ ನಾನು ಹೋಗುವುದಕ್ಕೆ ಸಾಧ್ಯವಾಗಿಲ್ಲ.

ಇನ್ನು ಈ ಕೇಸಿನ ಬಗ್ಗೆ ಪ್ರಸ್ತಾಪ ಮಾಡುವ ಮೊದಲು ನನ್ನ ಮೇಲೆ ಲಿಮಿಟೇಷನ್ ಇವೆ. ಅದರ ಪ್ರಕಾರ ಮಾನ್ಯ ಸಭೆಗೆ ತಿಳಿಸುತ್ತೇನೆ. ಈ ಕೇಸ್ ಬಗ್ಗೆ ಹೈಕೋರ್ಟಿನ ಮತ್ತು ಸುಪ್ರೀಂ ಕೋರ್ಟಿನ ಎರಡು ಜಡ್ಜ್‌ಮೆಂಟ್‌ಗಳಿವೆ. ಇವೆರಡೂ ಸಹ ಚರ್ಚೆಗೆ ಬರುತ್ತವೆ. ಈ ಜಡ್ಜ್‌ಮೆಂಟ್‌ಗಳು ಚರ್ಚೆಗೆ ಬಂದಾಗ ಮಾನ್ಯ ಸದಸ್ಯರುಗಳು ತಮಗೆ ತಿಳಿದಹಾಗೆ ಮಾತನಾಡಿದ್ದಾರೆ. ನಾನು ಮಾತ್ರ ಮುಖ್ಯಮಂತ್ರಿಯಾಗಿ ಜವಾಬ್ದಾರಿಯಿಂದ ಮಾತನಾಡಬೇಕಾಗಿದೆ. ಮತ್ತು ತೂಕದಿಂದ ಮಾತನಾಡಬೇಕಾಗಿದೆ. ಆರ್ಟಿಕಲ್ 211ರ ಪ್ರಕಾರ..........

Sri K. H, PATIL (Hubli).—On a point of order, Sir. The Chief Minister while addressing this House has stated that he is speaking with great responsibility as a Chief Minister as if other members have no responsibility. The Chair should give him direction. We have equal responsibility if not more.

Mr. SPEAKER.—The Hon. Chief Minister has not said that the others have no responsibility. Therefore there is no point of order.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಏನಾದರೂ ಹೇಳಬೇಕಾದರೆ ನನ್ನಿಷ್ಟಕ್ಕೇ ನಾನು ಹೇಳುವುದಕ್ಕಾಗುವುದಿಲ್ಲ. ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. ಕಾನ್ಸ್ಟಿಟ್ಯೂಷನ್ನಿನ 211 ಆರ್ಟಿಕಲ್ಲಿನಲ್ಲಿ ಈ ರೀತಿ ಹೇಳಿದೆ :

> "No discussion shall take place in the Legislature of a State with respect to the conduct of any Judge of the Supreme Court or of a High Court in the discharge of his duties".

ಅಂದರೆ they have delivered judgment while discharging their duties as Judges ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಮೇಲೆ ಹೆಚ್ಚು ಮಾತನಾಡುವುದು ಕಷ್ಟವಾಗುತ್ತದೆ. ಅನೇಕ ವಿಚಾರಗಳನ್ನು ಇಲ್ಲಿ ಹೇಳುವುದು ಕಷ್ಟವಾಗುತ್ತದೆ. ಬಹಳ ತೂಕದಿಂದ ಪ್ರತಿಯೊಂದು ಶಬ್ದವನ್ನು ವಿಚಾರ ಮಾಡಿ ಮಾತನಾಡಬೇಕಾದ ಆವಶ್ಯಕತೆ ಇದೆಯೆಂದು ತಿಳಿದುಕೊಂಡಿದ್ದೇನೆ, ಒಂದು ವಿಚಾರವನ್ನು ಮಾನ್ಯ ಸಭೆಗೆ ತಿಳಿಸಬೇಕೆಂದಿದ್ದೇನೆ. ನಾನು ಅಧಿಕಾರ ವಹಿಸಿಕೊಂಡಮೇಲೆ ಒಂದು ಮಾತನ್ನು ಪದೇ ಪದೇ ಹೇಳುತ್ತಿದ್ದೇನೆ. ಅಧಿಕಾರಿಗಳ ಸಭೆಯಲ್ಲಿ ಹೇಳಿದ್ದೇನೆ. ಹೊರಗಡೆ ಹೇಳಿದ್ದೇನೆ, ಮತ್ತು ಅದರಂತೆ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದು ಏನೆಂದರೆ, ಎಲ್ಲಾ ಅಧಿಕಾರಿಗಳು ನಾವು ತೆಗೆದುಕೊಂಡ ನಿರ್ಣಯದ ಪ್ರಕಾರ ಯಾವುದೇ ಕೆಲಸಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ತಡವಾಗಬಾರದು, ಡಿಲೇ ಆಗಬಾರದು, ಆ ರೀತಿಯಾಗುವುದನ್ನು ನಿಲ್ಲಿಸಬೇಕು ಎಂಬುದು ಈ ಮಂತ್ರವನ್ನು ಹೇಳುತ್ತಲೇ ಇದ್ದೇವೆ. ಆ ಒಂದು ವಾತಾವರಣವನ್ನು ನಿರ್ಮಿಸುತ್ತಿದ್ದೇವೆ. ಅದು ಬರುತ್ತಿದೆ. ಎಲ್ಲಾ ಅಧಿಕಾರಿಗಳು ಆ ರೀತಿನಡೆಯುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ವಿಚಾರಗಳು ಬಹಳ ಕಾಲದಿಂದ ನೆನೆಗುದಿಗೆ ಬಿದ್ದಿದ್ದವು. ಅವುಗಳ ಬಗ್ಗೆ 5-6 ತಿಂಗಳಲ್ಲಿ ಒಂದು ನಿರ್ಣಯ ತೆಗೆದುಕೊಂಡಿದ್ದೇವೆ. ಈ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿದೆ ಇನ್ನು ಏನೂ ಬಾಕಿ ಇಲ್ಲ ಎಂದು ಹೇಳುತ್ತಿಲ್ಲ. ಮುಖ್ಯವಾದ ವಿಚಾರಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾದರೆ ನಾವು ತಡಮಾಡಬಾರದು ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ಹಿನ್ನಲೆಯಲ್ಲಿ ಒಂದು ಪ್ರಶ್ನೆ ಈಗ ನಮ್ಮ ಮುಂದೆ ಇದೆ. ಇದನ್ನು ವಿಚಾರ ಮಾಡಬೇಕಾಗಿದೆ. ವಿಚಾರ ಮಾಡಬೇಕಾದಾಗ ಯಾವ ಅಂಶಗಳನ್ನೂ ಮಾನ್ಯ ಸದಸ್ಯರಿಗೆ ಮುಚ್ಚಿ ಇಟ್ಟಿಲ್ಲ. ಅಸೆಂಬ್ಲಿಯ ಇತಿಹಾಸದಲ್ಲಿ ಇದೇ ಮೊದಲು ಸಲ ಮಾನ್ಯ ಸದಸ್ಯರಿಗೆ ನಮ್ಮಿಂದ ಕೊಡುವುದಕ್ಕೆ ಸಾಧ್ಯವಾದ ಎಲ್ಲಾ ಲಿಟರೇಚರ್‌ಗಳನ್ನು ಸಹ ಹಂಚಿದ್ದೇವೆ. ರಿವಿಷನ್ ಪಿಟಿಷನ್, ಸ್ಟೇ ಆರ್ಡರ್, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳ ಜಡ್ಜ್‌ಮೆಂಟ್‌ಗಳು ಎಲ್ಲವನ್ನೂ ಹಂಚಿದ್ದೇವೆ. ಏನು ನಡೆದಿದೆ, ಏನಾಗಿದೆ ಎಂಬುದನ್ನು ಎಲ್ಲ ಮಾನ್ಯಸದಸ್ಯರುಗಳೂ ಸಹ ತಿಳಿದುಕೊಳ್ಳಲಿ, ಓದಲಿ ಎಂಬುದಾಗಿ ಎಲ್ಲಾ ಲಿಟರೇಚರ್‌ಗಳನ್ನು ಒದಗಿಸಿದ್ದೇವೆ. ಮಾನ್ಯ ಸದಸ್ಯರಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಮೈಂಡ್ ಮೇಕಪ್ ಮಾಡಿಕೊಂಡು ಕೇವಲ ಸರ್ಕಾರದ ಹುಳುಕನ್ನು ತೋರಿಸಬೇಕೆಂಬ ವಿಚಾರ ಇಟ್ಟುಕೊಳ್ಳದೆ, ನಿರ್ಮಲ ಅಂತಃಕರಣದಿಂದ ನಾವು ಕೊಟ್ಟಿರುವ ಲಿಟರೇಚರ್‌ಗಳನ್ನೆಲ್ಲಾ ಓದಿಕೊಂಡು ಒಂದು ನಿರ್ಣಯಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈಗಿನ ಪ್ರಶ್ನೆಯಿರುವುದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿನ ಬಗ್ಗೆ. ಹೈಕೋರ್ಟಿನವರು ಒಂದು ಅಭಿಪ್ರಾಯಪಟ್ಟಿದ್ದಾರೆ ಸುಪ್ರೀಂ ಕೋರ್ಟಿನವರು ಒಂದು ಅಭಿಪ್ರಾಯಪಟ್ಟಿದ್ದಾರೆ. ಇವೆರಡು ಅಭಿಪ್ರಾಯಗಳಲ್ಲಿ ವ್ಯತ್ಯಾಸವಿದೆ. ಅವರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಾತ್ರ ಹೇಳಿದ್ದಾರೆ. ಇವತ್ತು ಬಂದಿರುವಂತಹ ಪ್ರಶ್ನೆಯೆಂದರೆ, ಹೈಕೋರ್ಟಿನವರು ಡಿವಿಜನಲ್ ಕಮೀಷನರ್ ಅವರಿಗೆ ರೂಲ್ 19ರ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರವಿತ್ತು, ಆದ್ದರಿಂದ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ಆದರೆ ಸುಪ್ರೀಂ ಕೋರ್ಟಿನವರು ರೂಲ್ 19ರ ಪ್ರಕಾರ

ಭೂಮಾರೆಡ್ಡಿ ವಿಷಯದಲ್ಲಿ ಡಿವಿಜನಲ್ ಕಮೀಷನರ್‌ಗೆ ಅಧಿಕಾರ ಇಲ್ಲ ಎಂದು ಹೇಳಿದ್ದಾರೆ. ಈ ಒಂದು ಒಪೀನಿಯನ್ ಹೇಗೆ ಕ್ಲ್ಯಾಷ್ ಆಗುತ್ತದೆ ಎನ್ನುವುದು ಹೈಕೋರ್ಟಿನ ಹಾಗೂ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿನಲ್ಲಿ ಬರುತ್ತದೆ. ಇವೆಲ್ಲಾ ಬರುವುದಕ್ಕೆ ಕಾರಣವೇನು ಎನ್ನುವುದರ ಬಗ್ಗೆ ಸುಪ್ರೀಂ ಕೋರ್ಟಿನವರು 38ನೇ ಪೇಜಿನಲ್ಲಿ ಕೊನೆಯಲ್ಲಿ ಹೀಗೆ ಹೇಳಿದ್ದಾರೆ :

> "It is rather surprising that the Government acted so hastily and issued licences to respondent No. 4 on or about September 18. It is not quite clear how licences in respect of 1168 shops could be issued on a single day. The effect of this precipitate action on the part of the Government was that the appellant could not on the next day obtain a stay of the operation of the High Court's order. There is ground for suspecting that the Government was favouring respondent No. 4."

ಇದರ ಅರ್ಥವೇನು ಎಂದರೆ ಒಂದೇ ದಿವಸದಲ್ಲಿ 1168 ಷಾಪುಗಳಿಗೂ ಲೈಸನ್ಸ್ ಹೇಗೆ ಕೊಟ್ಟರು ಎಂದು ಅವರಿಗೆ ಆಶ್ಚರ್ಯವಾಗಿದೆ. ಇಂತಹ ಅಬ್‌ಸರ್‌ವೇಷನ್ ಮಾಡುವುದಕ್ಕೆ ಕಾರಣವೇನು ಎಂದರೆ 1168 ಷಾಪುಗಳಿಗೂ ಒಂದೇ ದಿವಸದಲ್ಲಿ ಲೈಸನ್ಸ್‌ಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದರ ಬಗ್ಗೆ ಅವರಿಗೆ ಸಂಶಯ ಬಂದಿರಬಹುದು. ಅವರು ಹೇಳುವುದರಲ್ಲಿ ಏನು ಅರ್ಥವಾಗುತ್ತದೆ ಎಂದರೆ ಒಂದೇ ದಿವಸದಲ್ಲಿ ಲೈಸನ್ಸ್ ಕೊಡಲು ಆಗುವುದಿಲ್ಲ ಮೂರು ನಾಲ್ಕು ದಿನಗಳಲ್ಲಿ ಕೊಡಬಹುದು ಎನ್ನುವುದು ಅವರ ಅಬ್‌ಸರ್‌ವೇಷನ್ನಿಂದ ಅರ್ಥವಾಗುತ್ತದೆ. ಇಲ್ಲಿ ನಾವು ಒದಗಿಸಿರುವ ಕ್ರಾನಾಲಾಜಿಕಲ್ ಆರ್ಡರಿನಲ್ಲಿ ಎಲ್ಲ ವಿವರಗಳೂ ಇವೆ. ಇದರಲ್ಲಿರುವಂತೆ 10-5-1968ರಲ್ಲಿ ನೋಟಿಫಿಕೇಷನ್‌ನನ್ನು ಇಷ್ಯೂ ಮಾಡಿ ಇದರಲ್ಲಿ ಗುಲ್ಬರ್ಗಾದಲ್ಲಿ ಟೆಂಡರು ಹಾಕಬೇಕೆಂದು ಕರೆದಾಗ, ಅದರಲ್ಲಿ ಲಾಸ್ಟ್ ಡೇಟು 27-5-1968ರ ದಿನದಂದು 3 ಗಂಟೆವರೆಗೆ ಎಂದು ಇತ್ತು. ಇದನ್ನು ಅಲ್ಲಿನ ಡಿವಿಜನಲ್ ಕಮೀಷನರವರಿಗೆ ಹಾಕಬೇಕೆಂದು ಹೇಳಲಾಗಿತ್ತು. 27-5-1968ರಂದು ಶ್ರೀ ಭೂಮರೆಡ್ಡಿಯವರು 9,99,999 ರೂಪಾಯಿಗಳಿಗೆ ಟೆಂಡರನ್ನು ಹಾಕಿದರು. 4-6-1968ರಲ್ಲಿ ಡಿವಿಜನಲ್ ಕಮಿಷನ್‌ರವರು ಇದರ ಸೇಲ್‌ನ್ನು ಕನ್‌ಫರ್ಮ್ ಮಾಡಿದರು 6-6-1968ರಲ್ಲಿ ಭೂಮರೆಡ್ಡಿಯವರಿಗೆ ನೋಟೀಸು ಕೊಟ್ಟು ರೂಲು 19ರ ಪ್ರಕಾರ ಪುನಃ ಡಿಪಾಜಿಟ್ ಕಟ್ಟಬೇಕೆಂದು ಸೂಚನೆ ಕೊಟ್ಟರು. ಇದರಂತೆ ಭೂಮರೆಡ್ಡಿಯವರು —

8—6—1968ರಲ್ಲಿ	...	5,20,000
10—6—1968ರಲ್ಲಿ	...	2,20,000
13—6—1968ರಲ್ಲಿ	...	9,99,000
15—6—1968ರಲ್ಲಿ	...	1,00,000
15—6—1968ರಲ್ಲಿ	...	1,59,326

ಎಂದು ಡಿಪಾಜಿಟ್ಟುಗಳನ್ನು ಕಟ್ಟಿದರು. ಅನಂತರ ಇವರು ಡಿವಿಜನಲ್ ಕಮಿಷನರ್‌ರವರನ್ನು ಬಳ್ಳಾರಿ ಕ್ಯಾಂಪಿನಲ್ಲಿ ಮೊಖಾತ್ತ ಭೇಟಿ ಮಾಡಿದಾಗ ಲೈಸನ್ಸ್‌ಗೆ ಅಪ್ಲೈ ಮಾಡಬೇಕೆಂದು ಸೂಚನೆ ಮಾಡಿದರು ಮತ್ತು ಇನ್ನೂ 20 ಲಕ್ಷ ಕೊಡಬೇಕೆಂದೂ ಹೇಳಿದರು. ಇದರ ಬಗ್ಗೆ ನಾನು ವಿವರಗಳನ್ನು ಮುಂದೆ ಹೇಳುತ್ತೇನೆ. ಇದನ್ನು ಹೇಳಿದ್ದು 19-6-1968ರಲ್ಲಿ. ಆದರೆ 22-6-1968ರಂದು ರಿವೈಸ್ಡ್ ಅಪೀಲು ಎಂದು ಎಕ್ಸೈಜು ಮಂತ್ರಿಗಳ ಮುಂದೆ ಅಪೀಲು ಫೈಲ್ ಮಾಡಿದರು ಮತ್ತು ಈ ಅಪೀಲು ದಾಖಲೆ ಮಾಡಿದಮೇಲೆ ಏನಾಯಿತು ಎನ್ನುವ ವಿವರಗಳೆಲ್ಲಾ ಇದರಲ್ಲಿ ಹೇಳಲಾಗಿದೆ. ಮತ್ತು ಭೂಮರೆಡ್ಡಿಯವರು 25-6-1968ರಲ್ಲಿ ಒಂದು ರಿಪ್ಲೈ ಕೊಟ್ಟು ಎಕ್ಸೈಜು ಸರ್‌ಕ್ಯುಲರ್ ಪ್ರಕಾರ ಡಿಪಾಜಿಟ್ಟು ಕಟ್ಟಲು ಇನ್ನೂ ನಾಲ್ಕು ತಿಂಗಳ ಕಾಲ ಅವಕಾಶ ಬೇಕು ಎಂದು ಕೇಳಿದರು. ಸರ್‌ಕ್ಯುಲರುಗಳು ಇದ್ದರೂ ರೂಲ್ಸು ಪ್ರಕಾರ ನಿರ್ಣಯ ಮಾಡಿದರು. ಇದರ ಬಗ್ಗೆ ಸುಪ್ರೀಂ ಕೋರ್ಟು ಕೂಡ ಚರ್ಚೆ ಮಾಡಿದೆ. 26-6-1968ರಂದು ಮತ್ತೆ ಷೋಕಾಸ್ ನೋಟೀಸನ್ನು ಇಷ್ಯೂ ಮಾಡಿದ್ದಾರೆ. ಇಂತಹ ನೋಟೀಸು ಕೊಡುವ ಅವಶ್ಯಕತೆಯೇ ಇರಲಿಲ್ಲ. ಆದರೂ ನೋಟೀಸು ಕೊಟ್ಟು ಹಣ ಕಟ್ಟಬೇಕೆಂದು ಸೂಚನೆ ಕೊಟ್ಟರು. 28-6-1968ರಂದು ಹೈಕೋರ್ಟಿನಲ್ಲಿ ಭೂಮರೆಡ್ಡಿಯವರು ರಿಟ್ ಫೈಲು ಮಾಡಿದರು ಇದರ ಮೇಲೆ ಸ್ಟೇ ಆರ್ಡರನ್ನು ಪಡೆದರು. 29-6-1968ರಲ್ಲಿ ಸ್ಟೇ ಆರ್ಡರನ್ನು ವೆಕೇಟು ಮಾಡಲು ಹೈಕೋರ್ಟಿನಲ್ಲಿ ಪ್ರಯತ

(ಶ್ರೀ ವೀರೇಂದ್ರ ಪಾಟೀಲ್)

ಮಾಡಲಾಯಿತು. 30-6-1968ರಂದು ಎಂದರೆ, ಅಂದು ಭಾನುವಾರ ಹಾಲಿಡೇ ಇದ್ದರೂ ಡಿವಿಜನಲ್ ಕಮಿಷನರು ಕೊಟ್ಟ ಆದೇಶದಂತೆ ಡೆಪ್ಯುಟೀ ಕಮಿಷನರವರು ಭೂಮರೆಡ್ಡಿಯವರಿಗೆ 1168 ಷಾಪುಗಳಿಗೂ ಲೈಸನ್ಸ್ ಕೊಟ್ಟರು ಮತ್ತು ಜುಲೈ ಒಂದನೇ ತಾರೀಖಿನಿಂದ ಎಲ್ಲ ವ್ಯವಹಾರಗಳನ್ನು ಅವರು ಪ್ರಾರಂಭಿಸಿದರು. ಹೈಕೋರ್ಟಿನವರು 2-7-1968 ಸ್ಟೇ ಆರ್ಡರನ್ನು ವೆಕೇಟ್ ಮಾಡಲು ಒಪ್ಪಲಿಲ್ಲ. 7-7-1968ರಲ್ಲಿ ನಿರಂಜನ್ ಎನ್ನುವವರು ರಿಟ್ಟನ್ನು ಹೈಕೋರ್ಟಿನಲ್ಲಿ ದಾಖಲು ಮಾಡಿದರು. ಆ ರಿಟ್ ಮೇಲೆ ಲೈಸನ್ಸ್ ಏಕೆ ಕೊಡಲಿಲ್ಲ ಎನ್ನುವುದರ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಚರ್ಚೆಯಾಗಿ ಏನು ನಿರ್ಣಯವಾಗಿದೆ ಎನ್ನುವುದು ಎಲ್ಲರಿಗೂ ಇದರಲ್ಲಿ ಗೊತ್ತಾಗಿದೆ. ಮಾನ್ಯ ಸದಸ್ಯರಲ್ಲಿ ನಾನು ಒಂದು ಮಾತು ಹೇಳಬೇಕಾಗಿದೆ. ಒಂದೇ ಒಂದು ದಿನದಲ್ಲಿ 1168 ಷಾಪುಗಳಿಗೂ ಲೈಸನ್ಸ್‌ಗಳನ್ನು ಹೇಗೆ ಕೊಡಲಾಯಿತು ಎನ್ನುವುದರ ಬಗ್ಗೆ ಸ್ವಲ್ಪ ಆಶ್ಚರ್ಯ ವ್ಯಕ್ತ ಮಾಡಿದ್ದಾರೆ ಮತ್ತು ನಿರಂಜನರವರಿಗೆ ಹೇಗೆ ಕೊಟ್ಟಿದೆ ಎನ್ನುವುದು ಎಲ್ಲ ರಿಕಾರ್ಡಿನಲ್ಲಿದೆ. ಹೈಕೋರ್ಟಿನಲ್ಲಿ ಏನು ಹೇಳಿದರು ಮತ್ತು ಸುಪ್ರೀಂ ಕೋರ್ಟಿನಲ್ಲಿ ಏನು ಹೇಳಲಾಗಿದೆ ಎನ್ನುವುದನ್ನು ವಿಚಾರ ಮಾಡಿದರೆ ಭೂಮರೆಡ್ಡಿಯವರಿಗೇನೇ ಒಂದೇ ದಿನದಲ್ಲಿ 1168 ಷಾಪುಗಳಿಗೂ ಲೈಸನ್ಸ್‌ಗಳನ್ನು ಕೊಡಲು ಸಾಧ್ಯವಾಯಿತೇ ಎನ್ನುವುದು. ಇನ್ನು ಪುಟ 29ರಲ್ಲಿ ಮಾರ್ಜಿನಲ್ ಹೆಡ್ಡಿಂಗು 30ರಲ್ಲಿ ಸುಪ್ರೀಂ ಕೋರ್ಟು ಏನು ಹೇಳಿದೆ ಎಂದರೆ :

> "On June 30, the Divisional Commissioner granted licences to him. On July 1, he commenced his business in all the 1168 shops. Thereafter he duly deposited about Rs. 30,00,000 on account of rent for the months of July, August and September......"

ಸುಪ್ರೀಂ ಕೋರ್ಟು ಜಡ್ಜ್‌ಮೆಂಟಿನಂತೆ ಭೂಮರೆಡ್ಡಿಯವರಿಗೆ 1168 ಷಾಪುಗಳಿಗೂ ಲೈಸನ್ಸ್‌ಗಳನ್ನು ಕೊಡಲಾಗಿದೆ, ಮತ್ತು ಇದನ್ನು ಡಿವಿಜನಲ್ ಕಮಿಷನರವರು ಡೆಪ್ಯುಟೀ ಕಮಿಷನರ ಮೂಲಕ ಇಷ್ಯೂ ಮಾಡಿಸಿದ್ದಾರೆ ಮತ್ತು ಜುಲೈ ಒಂದನೇ ತಾರೀಖಿನಿಂದ ಭೂಮರೆಡ್ಡಿಯವರು ಅವರ ಎಲ್ಲ ವ್ಯವಹಾರಗಳನ್ನೂ ಪ್ರಾರಂಭಮಾಡಿದ್ದಾರೆ ಇದನ್ನು ಅವರೂ ಒಪ್ಪಿಕೊಂಡಿದ್ದಾರೆ. ಆಮೇಲೆ ನಿರಂಜನ್‌ರವರಿಗೆ ಲೈಸನ್ಸ್ ಕೊಡದೇ ಭೂಮರೆಡ್ಡಿಯವರಿಗೆ ಏಕೆ ಕೊಡಲಾಯಿತು ಎನ್ನುವುದರ ಬಗ್ಗೆ ಒಂದು ಕೇಸು ಕೂಡ ಆಗಿದೆ.

ಇವೊತ್ತಿನ ದಿವಸ ಇದನ್ನು ಏತಕ್ಕೆ ಹೇಳಬೇಕು ಎಂದರೆ ನಿರಂಜನ್‌ರವರಿಗೆ ಎಷ್ಟು ದಿವಸ, ಎಷ್ಟು ಗಂಟೆಗಳಲ್ಲಿ ವಿಚಾರಮಾಡಿ ಲೈಸನ್ಸ್ ಕೊಡಬೇಕೋ ಅಷ್ಟೇ ದಿವಸ, ಅಷ್ಟು ಗಂಟೆಗಳಲ್ಲಿ ವಿಚಾರಮಾಡಿ ಕೊಟ್ಟಿದ್ದೇವೆ. ಫೇವರ್ ಮಾಡಬೇಕು ಎನ್ನುವ ನೀತಿ, ಧೋರಣೆ ನನ್ನಲ್ಲಿಲ್ಲ. ಇದನ್ನು ಅಂಕಿಅಂಶಗಳ ಆಧಾರದಿಂದ ಹೇಳುತ್ತಿದ್ದೇನೆ.

ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಸದಸ್ಯರು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟನ್ನು ಓದಿರಬಹುದು. ಭೂಮರೆಡ್ಡಿಯವರು ಹೈಕೋರ್ಟಿಗೆ ಹೋದರು ಎನ್ನುವ ಪ್ರಶ್ನೆ ಇದೆ. ಅವರು ಹೈಕೋರ್ಟಿಗೆ ಹೋದಕಾರಣ Aggrieved by the decision of the Divisional Commissioner. ಈ ಎರಡು ಜಡ್ಜ್‌ಮೆಂಟ್ ಮೇಲೂ ಕೂಡ ಸರ್ಕಾರದ ಮೇಲೆ ಸಸ್‌ಪಿಷನ್‌ಗೆ ಅವಕಾಶವಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಕೊನೇ ಪ್ಯಾರಾದಲ್ಲಿ 'ಗೌರ್ನ್‌ಮೆಂಟ್' ಎಂಬ ಶಬ್ದ ಇದೆಯೇ ಹೊರತು ಇನ್ನು ಎಲ್ಲೂ ಆ ಪದವನ್ನು ಹಾಕಿಲ್ಲ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಜಡ್ಜ್‌ಮೆಂಟ್ ಎಲ್ಲವನ್ನೂ ಓದಿದ್ದೇನೆ. ಎಕ್ಸೈಜ್ ಕಮಿಷನರ್ ರೂಲ್ 19ರ ಪ್ರಕಾರ ಲೈಸನ್ಸ್ ಇಷ್ಯೂ ಮಾಡಿರುವುದು ಸರಿಯಾಗಿದೆ; ಎಂದು ಹೇಳಿದ್ದಾರೆ. ಭೂಮರೆಡ್ಡಿ 22ನೇ ತಾರೀಖು ಅರ್ಜಿ ಕೊಟ್ಟಿರುತ್ತಾರೆ. ಸರ್ಕಾರಕ್ಕೂ ಆ ಅರ್ಜಿಗೂ ಯಾವ ತರಹ ಸಂಬಂಧ ಇಲ್ಲ.

ಎರಡನೇ ವಿಷಯ ಮಾನ್ಯ ಸದಸ್ಯರು ಪದೇ ಪದೇ ಹೇಳುತ್ತಿದ್ದಾರೆ. 6 ತಿಂಗಳು ಡಿಪಾಜಿಟ್ ಕಟ್ಟಿಲ್ಲ, 4 ತಿಂಗಳು ಕಟ್ಟಿದ್ದಾರೆ, ಇನ್ನು ಎರಡು ತಿಂಗಳ ಡಿಪಾಜಿಟ್ ಕಟ್ಟಲು ಕಾಲಾವಕಾಶ ಬೇಕೆಂದು ಕೇಳಿದಾಗ ಡಿವಿಜನಲ್ ಕಮಿಷನರ್ ಕೊಡಲಿಲ್ಲ ಎಂದು ಹೇಳಿದ್ದಾರೆ. ಹೈಕೋರ್ಟಿಗೆ ಸ್ಟೇ ವೆಕೇಟ್ ಮಾಡುವುದಕ್ಕೆ ಹೋದಾಗ 6 ತಿಂಗಳು ಡಿಪಾಜಿಟ್ ಕಟ್ಟಬೇಕಾಗಿದೆ, 4 ತಿಂಗಳು ಡಿಪಾಜಿಟ್ ಕಟ್ಟಿದ್ದಾರೆ, ಇನ್ನೂ ಎರಡು ತಿಂಗಳದ್ದು ಕಟ್ಟಬೇಕು ಎಂದು ಆರ್ಡರ್

ಮಾಡಿದ್ದರು. ಇದನ್ನು ಎಲ್ಲಾ ವಿವರವಾಗಿ ಹೇಳಲು ಸಮಯ ಬೇಕಾಗುತ್ತದೆ. ಆದುದರಿಂದ ಡಿವಿಜನಲ್ ಕಮೀಷನರು ಮಾಡಿದಂಥ ಆರ್ಡರನ್ನು ಹೈಕೋರ್ಟಿನವರು ಎತ್ತಿ ಹಿಡಿದಿದ್ದಾರೆ, ಸ್ಟೇ ಆರ್ಡರನ್ನೂ ಕೂಡ ಎತ್ತಿ ಹಿಡಿದಿದ್ದಾರೆ.

ಇನ್ನೊಂದು ವಿಚಾರ ಹೇಳಿದ್ದಾರೆ. ಭೂಮರೆಡ್ಡಿ ಮತ್ತು ನಿರಂಜನ್‌ರವರ ವಿರಸವಿತ್ತೋ ಏನೋ ನಮಗೆ ಗೊತ್ತಿಲ್ಲ. ಆದರೆ ಈ ವಿಚಾರದಲ್ಲಿ ಹೇಳುವುದಾದರೆ ಶ್ರೀ ಭೂಮರೆಡ್ಡಿಯವರು ಎಕ್ಸೈಸ್ ಕಮೀಷನರ ಮೇಲಾಗಲಿ, ಸರಕಾರದ ಮೇಲಾಗಲಿ ಯಾವುದೇ ರೀತಿಯ ಅಪಾದನೆ ಮಾಡಿಲ್ಲ. ಸುಪ್ರೀಂ ಕೋರ್ಟಿನವರಾಗಲಿ ಹೈಕೋರ್ಟ್‌ನವರಾಗಲಿ ಅಪಾದನೆ ಮಾಡಿಲ್ಲ. ಒಂದು ಅಫಿಡವಿಟ್‌ನಲ್ಲಿ ಮಾತ್ರ ಡಿವಿಜನಲ್ ಕಮೀಷನರ ಮೇಲೆ ಅಪಾದನೆ ಮಾಡಿದ್ದಾನೆ. ಅದರೊಳಗೆ ಈ ರೀತಿ ಇದೆ :

> "I believe that the third respondent's intention in passing the said order in quick succession was to favour the last year's contractor whose tenders for this year had to be rejected."

ಡಿವಿಜನಲ್ ಕಮಿಷನರ್ ಕಳೆದ ವರ್ಷದ ಕಂಟ್ರಾಕ್ಟರಿಗೆ ಸಹಾಯ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅದು ಒಂದು ಶಬ್ದ ಬಿಟ್ಟರೆ ಇನ್ನಾವ ಅಪಾದನೆಯೂ ಇಲ್ಲ. ಇದರ ಮೇಲೆ ಸುಪ್ರೀಂ ಕೋರ್ಟಿಗೂ ತೆಗೆದುಕೊಂಡು ಹೋಗಿ ಅಲ್ಲಿ ಅಪೀಲು ಹಾಕಿದ್ದಾರೆ. ಸುಪ್ರೀಂ ಕೋರ್ಟ್‌ನವರು ಏನು ಒಂದು ಆರೋಪಣೆಯನ್ನು ಮಾಡಿಲ್ಲ. ಹೈಕೋರ್ಟಿನಲ್ಲಿ ಕೊಟ್ಟ ಅಫಿಡವಿಟ್‌ನಲ್ಲೂ ಕೂಡ ಸರ್ಕಾರದ ಮೇಲೆ ಆರೋಪಣೆ ಮಾಡಿಲ್ಲ. ಆ ಒಂದು ಶಬ್ದ ಬಿಟ್ಟರೆ ಮತ್ತೆ ಯಾವುದನ್ನೂ ಮಾಡಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ನಿರಂಜನ್‌ರವರ ಕೇಸಿನ ಮೇಲೆ ಹೈಕೋರ್ಟಿನ ಒಂದು ಆರ್ಡರ್ ಆಯಿತು. ಆ ಆರ್ಡರ್ ಸಹ ಓದಿ ತೋರಿಸುತ್ತೇನೆ.

High Court Order page 25ರಲ್ಲಿ ಈ ರೀತಿ ಇದೆ :

> "It is, therefore, submitted that there is no right vested in respondent No. 4 to compel the authorities to accept his bid. Therefore he is not entitled to a Writ of Mandamus as prayed for by him. But, in the circumstances of the case, it is necessary to observe that the authorities concerned will consider the advisability of accepting the bid of the fourth respondent, subject to his complying with all the requirements of the Act and the Rules"

ಈ ರೀತಿ ಅದರಲ್ಲಿ ಒಂದು ಸಜೆಷನ್ ಕೊಟ್ಟಿದ್ದಾರೆ. ಅದನ್ನು ಇಂಪ್ಲಿಮೆಂಟ್ ಮಾಡಬಹುದು, ಮಾಡದೇ ಇರಬಹುದು. ಮಾಡಿದರೂ ಆಕ್ಷೇಪಿಸುತ್ತಾರೆ, ಮಾಡದೇ ಇದ್ದರೂ ಆಕ್ಷೇಪಿಸುತ್ತಾರೆ. ಹೈಕೋರ್ಟ್‌ನವರು ಏನು ಹೇಳಿದ್ದಾರೋ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅದಕ್ಕೆ ತದ್ವಿರುದ್ಧವಾಗಿ ಹೋಗಬಾರದೆಂದು, ಎಕ್ಸೈಜ್ ಕಮೀಷನರ್ ಲೈಸನ್ಸ್ ಇಷ್ಯೂ ಮಾಡಿದರು.

ಸುಪ್ರೀಂ ಕೋರ್ಟಿನ ವಿಷಯ ಈಗ ಹೇಳುತ್ತೇನೆ. ಅತನಿಗೆ ಈ ರೀತಿಯಿಂದ ಒಂದೇ ದಿನದಲ್ಲಿ ಲೈಸೆನ್ಸ್ ಕೊಟ್ಟುದ್ದರಿಂದ ಹೈಕೋರ್ಟಿನಿಂದ ಸ್ಟೇ ಆರ್ಡರ್ ತರಲಿಕ್ಕೆ ಸಾಧ್ಯವಾಗಲಿಲ್ಲ ಎಂದು ಹೇಳಿದ್ದಾರೆ.

> "The effect of this precipitate action on the part of the Government was that the appellant could not on the next day obtain a stay of the operation of the High Court's order."

ಭೂಮರೆಡ್ಡಿ ಸ್ಟೇ ಪಿಟಿಷನ್ ಹಾಕಿದಮೇಲೆ ಹೈಕೋರ್ಟಿನವರು ಆರ್ಡರ್ ಮಾಡಿದರು ಇದರ ಬಗ್ಗೆ ಹೈಕೋರ್ಟಿನವರು ಕೊಟ್ಟಿರುವ ತೀರ್ಪು ಏನಿದೆ ಅದನ್ನು ನಾನು ಓದಿ ಹೇಳುತ್ತೇನೆ. ಅದರಲ್ಲಿ ಅವರು ಕೆಲವು ರೂಲಿಂಗ್‌ಗಳನ್ನು ಕೋಟ್ ಮಾಡಿದ್ದಾರೆ.

(ಶ್ರೀ ವೀರೇಂದ್ರ ಪಾಟೀಲ್)

11-00 A.M.

"The position is identical in this case. We have held that Exhibit J under which the sale is cancelled, is valid. We cannot now render it ineffective by granting an order of stay as prayed for by the petitioner, under Section 151 of the Code of Civil Procedure.

"The period of the Excise Privilege of selling toddy is only from 1st July 1968 to 30th June 1969. The State has to take immediate steps consequent on the order passed by this Court. This cannot be delayed.

Further, the fourth respondent states in his affidavit that action has already been taken and that has not been contradicted. Quite apart from the actual position at present, if the petitioner's application, taken to be one for the stay of the order passed by the Divisional Commissioner under Exhibit J, it would result in a person who is not competent to be purchaser and a licensee exercising the privileges of such purchaser and a licensee. This, in our opinion, cannot be done.

For these reasons, we dismiss I.A. No. I".

† Sri H. M. CHANNABASAPPA.—Sir, I rise to a Point of order, and my Point of order is this. As pointed out by the Hon'ble Chief Minister no discussion shall take place in the Legislature of a State with respect to the conduct of the Supreme Court or the High Court in the discharge of their duties. During the course of his speech, Sir, the Hon'ble Chief Minister has made reference to about three items, which amount to commenting on the Supreme Court judgement firstly, He made out that the Supreme Court Judges have come to the conclusion that the disposal of licences for 1168 shops cannot be done in a single day, and it is surprising that it has been done. He made a reference to the Supreme Court's judgement conceding that the same kind of licences were issued in the case of Sri Bhooma Reddy for 1168 shop on a single day. In this case the Supreme Court has felt surprised. We do not know what exactly was at the back of the mind of the Supreme Court in coming to this decision that there is ground for suspecting the bona fides of the Government. We do not know what was the material available. These are statement which are made by the Supreme Court. Is the Hon'ble Chief Minister intends to comment on the conduct of the Supreme Court Judges that they were not correct in coming to this decision, because in the case of Sri Bhooma Reddy they themselves have conceded that it is possible to issue so many licences, but in this case they are feeling surprised? Thereby, he has intended to make a comment on the conduct of the Supreme Court Judges in having come to this decision and that they have made discrimination in the case of Sri Bhooma Reddy. This will therefore, amount to violation of Article 211.

(2) Secondly, he said that there was no allegation whatsoever made on Government whether it is in the Supreme Court or the High Court but in spite of that this decision has been given. The term 'Government' has got elaborate meaning. What exactly was at the back of the mind of the Supreme Court when they said that the Government's conduct is suspicious? There is ground for suspecting that the Government was favouring respondent No. 4. What exactly is the import of the word 'Government' is well-known, and it is not for us to comment that though the Supreme Court was aware that no allegatiion made either in the High Court or the Supreme Court, still they have brought the Government into comment. That means the Chief Minister intends to point out that the Supreme Court has erred in giving a judgement that Government has been having its play in this game. These two things amount to questioning the conduct of the Judges of the Supreme Court.

Thirdly the Hon'ble Chief Minister was commenting on the observations of the Supreme Court that the effect of the precipitating action on the part of the Government was that the appellant could not on the next day obtain a stay of the operation of the High Court's order. It is the statement made by the Supreme Court. What reasons they had for coming to this decision is not for us to comment, but the fact is there. The Chief Minister was saying that it is not correct. He was reading the relevant portion from the judgement. When the Supreme Court has said that it was made impossible for Sri Bhooma Reddy to take out a stay for the operation of the judgement, it is not for the Chief Minister to comment and say that it is not correct to observe like that when the High Court had come to the conclusion that the party has been absolved from getting the stay of the High Court's orders by the fact of the Government in having disposed off all these licences in a single day.

Therefore these three items which have been referred to just now amount to Chief Minister commenting on the judgement of the Supreme Court and in other words commenting upon the conduct of the Judges of the Supreme Court. Therefore he should be pulled up. It is not in order under Article 211 of the Constitution.

MR. SPEAKER.—Mr. Channabasappa has raised a point of order stating that the Hon. Chief Minister committed breach of privilege under Article 211 by commenting upon the judgement of the Supreme Court. It is his contention that the Chief Minister pointed out that certain things pointed out by the Supreme Court are erroneous. According to Channabasappa it amounts to breach of the provisions of the Article 211. I am sorry I cannot accept this contention. Nobody can attribute motives to the conduct of the judges of any Court, whether it is High Court, Supreme Court or any other lower Court. It is not open to any Hon'ble Member here to say that the Supreme Court wanted to favour this man or that man. But it is open to the Hon'ble Members to comment upon the errors if any in the judgement of any Court. Mr. Channabasappa unfortunately has not got experience of law. If he sees the appeal memo which is preferred by Bhooma Reddy, you will find

(Mr. Speaker)

what it is, and he will come to know what is to be done in the matter. There may be logical errors or intellectual errors in the Judgement. It is always open to the Members to point out such things. If the Hon. Member goes through any book of law, he will come to know how things should be viewed. There are certain procedures to be followed. Such procedures have been followed with regard to the Judgement of the highest Court *i. e.*, Supreme Court. The Supreme Court is the highest Court of the land. The view expressed by the Supreme Court may be incorrect or erroneous.

Sri H. M. CHANNABASAPPA.—Is it open to the Chief Minister to say that the Judgement of the Supreme Court is not correct ? The Supreme Court has observed that the conduct of the State Government is suspicious. Is this comment open to the Government to say that it is not correct?

Mr. SPEAKER.—It is open to anybody to say that the Judgement is erroneous.

Sri H. M. CHANNABASAPPA.—If the Supreme Court judgement is erroneous, can we get it corrected ?

Mr. SPEAKER.- In Judiciary, there are courts at various levels - Munsiff Courts, Civil Judges Courts, District Courts, High Court and the Supreme Court. Appeals can be made against the orders of the lower Court. But the Supreme Court is the highest Court in our land and there is no appeal against the decisions of this Court. Whatever decision is given by the Supreme Court, it is binding on the parties.

Sri H. M. CHANNABASAPPA.—If the Government feels that judgement is erroneous, I do not know why they have implemented it. They could have challenged it. The Supreme Court has observed that this Government has acted hastily and prevented Mr. Bhooma Reddy to get the stay order from the High Court. Even if you assume that you acted correctly, may I know why the Supreme Court has come to the conclusion that the Government has erred ? The second point is : the Chief Minister is attributing motives to the Judges' conduct. This is a very serious matter.

That is the point. I want you to consider these matters in detail before a ruling is given, as it is a very important matter and the ruling given on this issue would be quoted by other Legislatures in future and I do not want that the Hon. Speaker of this House to be erroneous.

Sri VEERENDRA PATIL.—Sir, you can give your ruling after I finish my reply.

† Sri M. RAMAPPA (Hosadurga).—Sir, before you proceed to give a ruling on this point whether we in this House could criticise the judgement of the Supreme Court, I would like to submit that the ruling could be reserved. The point originally raised by Mr. Channabasappa

whether under article 211 it is open to the Hon. Chief Minister to criticise the conduct of the Judges of the Supreme Court. But now it has taken a different course. Therefore I feel it is better the Chair reserves its ruling. The point raised by Mr. Channabasappa whether we can criticise the conduct of the Judges is all right. But the other point he raised whether we can criticise the judgement of the Supreme Court really involves very delicate legal consequences and therefore I request you, not to give any ruling on this point, and reserve your ruling. I think we may have to hear the Advocate-General and the Government in turn would have to consult the Legal Department.

Sri S. SIVAPPA.—Sir, before you give your ruling, I want to give a caution. If you just permit me, I would like to bring to your notice that there was a stricture by the High Court on the P. W. D. Ministry regarding an election petition by Mr. Vishwanath Reddy. That stricture relates to the Department which the Chief Minister was holding then. If he quotes that stricture then everything will come out. It should not be like a devil quoting its own scriptures for its own sake. I am just warning the Hon. Chief Minister to be careful about it.

Sri L. SRIKANTAIAH (Nanjangud).— Sir, I want to say something.

Mr. SPEAKER.—Does the hon. member want to raise another point of order? The present point of order is yet to be disposed of. Sri Nagappa and the Hon. Minister Sri Puttaswamy are standing. I shall hear them first.

†Sri M. NAGAPPA (Raichur).—Sir, this being an important question of law we must be very careful and we should not consider this point on the party basis, but we must have such a good convention henceforth that there should not be difficulty for any members to discuss about the judgements of the Courts. So I request the Hon. Chair to give a very considered ruling after hearing the members.

Sir, I submit that if we read article 211 of the Constitution, it definitely prohibits this House from discussing about the conduct of a Judge in discharge of his duties which automatically means that we should not discuss the judgements because the duty discharged by a Judge is giving judgements. The judgements are the main things on which we cannot attribute any motives, right or wrong, partial or impartial. If we look at article 211 definitely there is no right for this House or any member of this House to discuss the judgements of any Court of Law. Secondly, this is a democracy in which there are three wings, *viz.*, the Executive, the Legislature and the Judiciary. If you read Chapter III which concerns with regard to Courts wherein it has been made clear that Courts must have certain rights and their judgements should be looked into with due respect and it should be given every weight and it is the final word. Similarly, the Legislature which is also one of the wings of the democracy; I submit that it has got its own rights and privileges under the Constitution. Therefore while this Constitution was codified, article 194 also has been put in this particular Constitution.

(SRI M. NAGAPPA)

Sir, if we read article 194, sub-clause (1) it runs as follows:—

"194 (1) Subject to the provisions of this Constitution and to the rules and standing orders regulating the procedure of the Legislature, there shall be freedom of speech in the Legislature of every State."

Sir, here the words start with subject to the provisions of this Constitution and to the rules made thereunder. The rules that have been made by us are the Rules of Procedure and Conduct of Business which definitely say that we should not discuss matters which are *subjudice* Further it is also subject to this provisions of the Constitution *i. e.*, the provisions laid down in article 211. Therefore, article 194 (1) prohibits us to discuss judgements, whereas if we read article 194 (2) it gives abundant powers to Members. It says:

"194 (2) No Member of the Legislature of a State shall be liable to any proceedings in any court in respect of anything said or any vote given by him in the Legislature or any committee thereof, and no person shall be so liable in respect of the publication by or under the authority of a House of such a Legislature of any report, paper, votes or proceedings."

Therefore, while codfying sub-rule (2) of article 194, the constitution framers have not put the words subject to the provisions of the articles of the Constitution and they have intelligently avoided those particular words.

MR. SPEAKER.—I have very carefully gone through that. It has no bearing on this subject.

SRI M. NAGAPPA.—Sir, I am not stating any facts. I am just stating the interpretation of laws.

So Sir, there is a power for us to discuss judgements and the High Court may not take any action against the hon. Members. But the Hon. Speaker is within his powers to take action against any contempt of the proceedings of the House. Therefore, Sir, we are fully competent to discuss the judgements of any court and there is no restriction under sub-rule (2) of article 194 to discuss judgements and even we can say that a judgement is wrong, baseless or false. This aspect has been discussed not only in one judgement but in several judgements. Yesterday I quoted the judgement of Orissa High Court. you may please call for the 1958 judgement of Orissa High Court and look into it, wherein the Chief Minister had been prosecuted for contempt under article 194 read with article 211. Article 194 (2) was also discussed. So the Chief Minister was taken to have not committed any breach or contempt of the High Court and he was released, because there was no such law prevailing at that time. So only the Press was prosecuted. That is my contention.

11-30. A.M.

† Sri K. PUTTASWAMY (Minister for Law, Labour and Parliamentary Affairs).—I am very thankful to the hon. Member Sri Nagappa. My task is very much lightened. Now the whole point seems to be revolving round the matter as to whether what the Chief Minister was saying amounts to questioning the conduct of the judges of the Supreme Court or whether he was trying to make certain observations on the passages contained in the judgement of the Supreme Court. Sir, it is an established point that on the floor of the legislature, members are entitled to make reasonable comments of the judgement of the Supreme Court. They may even criticise and go to the extent of criticising the judgement of the Supreme Court or the High Court or even differ from the opinion expressed in the judgement. That is a recognised point. Whether the Chief Minister was criticising or making observations on the passages in the judgement of the Supreme Court or whether he was trying to question the conduct of the Supreme Court, that is a point on which the Speaker will have to give a ruling.

Sir, I want to state one other fact. The hon. Member Sri Ramappa made a request for postponing your ruling. I take it that you have already given your ruling. I was listening to what the Hon. Speaker was stating. The Hon. Speaker has already expressed his opinion very clearly and he has said that the Members will be within the rights to differ from the judgement of the Supreme Court or even criticise judgement of the Supreme Court; only they are forbidden under article 211 from imputing motives to the judges of the Supreme Court. Therefore, Sir, I do not think there is any scope for further discussion now when the Hon. Speaker has already given his ruling. The Chief Minister will have to be permitted to continue his reply.

Sri H. M. CHANNABASAPPA.—The Hon Minister for Parliamentary Affairs is trying to mislead the whole House. The point at issue is whether we can discuss the judgement of the Supreme Court and whether it is permissible here to impute motives to the Supreme Court judges for having come to a particular conclusion.

Sri K. PUTTASWAMY.—With all respect to my hon'ble friend Sri H. M. Channabasappa, I would have very much appreciated him, if he had not tried to use the word 'misleading'. I have not misled the House. I have not even made a long speech because I do not think I am capable of making it. I only pointed out under article 211 what is forbidden is questioning the conduct of the Supreme Court Judges; and the Chief Minister during the course of his speech, whether he questioned the conduct of the judges of the Supreme Court or whether he was trying only to point out passages where facts were the same and the observations were different.

Sir, I rise to a Point of Order. Rule 294 of the Rules of Procedure requires that the permission of the Speaker should be obtained by the Chief Minister or whosoever he may be. Otherwise, the mover's reply will conclude the debate. As we understand from the facts of the case, the Chief Minister did not seek the permission of the Chair—the proceedings may be looked into. There was no reference by the Chief Minister to the Speaker seeking his permission. But, the Speaker was kind enough to say that after the reply of the mover of the resolution, the Chief

(SRI K. H. PATIL)

Minister may, if he thinks so, can reply. The Speaker was perfectly right and was within his jurisdiction. He was kind enough to give an indication to the Chief Minister. But, unfortunately, on account of certain facts known to the Chief Minister he has not at all sought the permission of the Speaker. Therefore, now, he cannot be allowed to reply, because it will be contrary to Rules 294 and 295.

MR. SPEAKER.—I have already given the permission.

SRI S. BANGARAPPA (Sorab). Sir, I rise to a Point of Order. The Hon. Chair was pleased to refer to Rules 294 and 295. Sir, the Rules of Procedure and Conduct of Business are the guiding principles. Chapters XVII and XXIV deal with this point. Chapter XXIV deals with the General Rules of Procedure, and Rules 294 and 295 come under that Chapter. Chapter XVII deals with Motion of No-confidence in Ministers and Statement by a Minister who has resigned. It is a special Chapter and the provisions of this Chapter are only applicable to cases of this type, but not Chapter XXIV. The provisions as laid down in Chapter XVII are the only guiding principles and not the provisions as laid down under Chapter XXIV. Therefore, I request you to follow the rules as laid down in Chapter XVII.

MR. SPEAKER.—Hon. Member Sri Bangarappa says that Chapter XVII alone applies and the provisions of Chapter XXIV do not apply. I have to say with regret that the hon. member was not attentive when I gave the Ruling. Chapter XVII deals with provisions for moving a No-confidence motion. It does not provide as to who should speak and there is no provision for a counter-reply. Therefore, the provisions of Rule 294 apply and it is not inconsistent. Special Chapter prevails only when there is a sense of exclusiveness. Therefore my Ruling, already given, holds good and it is regretted that the hon. Member was not attentive. I request the hon. Members to be attentive and not waste the time by raising questions which have already been decided upon. Let the Hon. Chief Minister continue.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಈಗ ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಉತ್ತರದಲ್ಲಿ ಏನು ಹೇಳಿದ್ದಾರೋ ಅದೆಲ್ಲಕ್ಕೂ ಉತ್ತರ ಹೇಳುವುದಕ್ಕೆ ಹೋಗುವುದಿಲ್ಲ. ಅನೇಕ ವಿಚಾರಗಳನ್ನು ಅವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಸಮಯ ಸಾಕಷ್ಟು ಆಗಿದೆ. ಆದ್ದರಿಂದ ಕೆಲವು ವಿಚಾರಗಳಿಗೆ ಮಾತ್ರ ಉತ್ತರ ಕೊಡುತ್ತೇನೆ. ಈವೊತ್ತು ಹೊಸದಾಗಿ ಮಾನ್ಯ ಶ್ರೀ ಹೆಗಡೆಯವರು ರಾಜೀನಾಮೆ ಕೊಟ್ಟಿದ್ದು, ಹೊರಬಿದ್ದಿದೆ, ಅದನ್ನು ಮೊದಲು ಇಲ್ಲಿ ಹೊರಗೆಡಹಬೇಕಾಗಿತ್ತು ಎಂಬುದಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಮಾನ್ಯ ಸದಸ್ಯರಿಗೆ ನಾನು ಒಂದು ವಿಷಯವನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮಂತ್ರಿಮಂಡಲ ರಚನೆಗಾಗಿ ಒಂದು ಪಟ್ಟಿಮಾಡಿ ಅವರು ಸದಸ್ಯರನ್ನು ಆರಿಸಿದಮೇಲೆ ಮಂತ್ರಿಗಳಾಗಿ ಆಡಳಿತಪಕ್ಷದಲ್ಲಿ ಯಾರು ಇರಬೇಕು ಎಂಬುದನ್ನು ನಿರ್ಣಯ ಮಾಡುತ್ತಾರೆ. ಆದ್ದರಿಂದ ಯಾರೇ ಮಂತ್ರಿಯಾಗಿರಲಿ ಅವರು ಅವರ ರಾಜೀನಾಮೆಯನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊಡುತ್ತಾರೆಯೇ ಹೊರತು ಈ ಸಭೆಗೆ ಕೊಡುವುದಿಲ್ಲ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಆದರೆ ಮುಖ್ಯಮಂತ್ರಿಗಳು ಅವರು ರಾಜೀನಾಮೆ ಕೊಟ್ಟಕೂಡಲೇ ಈ ಸಭೆಗೆ ತಿಳಿಸಬೇಕೆಂಬ ಪ್ರಶ್ನೆ ಇಲ್ಲಿ ಬರುವುದಿಲ್ಲ. ಕೆಲವರು ಅನೇಕ ರೀತಿಯ ಮನಸ್ತಾಪದಿಂದ

ರಾಜೀನಾಮೆ ಕೊಡಬಹುದು. ಮಹತ್ವ ಕಾರಣಗಳಿಂದಲೂ ಕೊಡಬಹುದು. ಅದು ಲೀಡರ್‌ಗೆ ಬಿಟ್ಟಿದ್ದು. ಈ ಮಾನ್ಯ ಸಭೆಗೆ ಇಂಥಾದ್ದು ಬರಬೇಕೆಂಬ ಪ್ರಶ್ನೆ ಇಲ್ಲಿರುವುದಿಲ್ಲ, ಒಂದು ವಿಷಯವನ್ನು ಹೊಸದಾಗಿ ಹೇಳಿದರು ಅದೇನೆಂದರೆ ಡಿವಿಜನಲ್ ಕಮಿಷನರ ಮೇಲೆ ಅಪಾದನೆ ಮಾಡಿದರೆ ಅದು ಸರ್ಕಾರದ ಮೇಲೆ ಆಪಾದನೆ ಮಾಡಿದಂತಾಗುತ್ತದೆಂದು ಹೇಳಿದ್ದಾರೆ. ಯಾವನೇ ಒಬ್ಬ ಅಧಿಕಾರಿಯ ಮೇಲೆ ಆಪಾದನೆ ಮಾಡಿದರೆ ಅದು ಸರ್ಕಾರದ ಮೇಲೆ ಮಾಡಿದಂತೆ ಎಂದು ಹೇಳುವುದಕ್ಕೆ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಅವಕಾಶವಿಲ್ಲ. ಅದರ ಬಗ್ಗೆ ಒಂದು ನಿಯಮ ಮಾಡಿದ್ದಾರೆ. ಅದನ್ನು ನಾನು ಓದಿ ಹೇಳುತ್ತೇನೆ. ಅದು ಈ ರೀತಿ ಇದೆ. Article 166 (3) of the Constitution says :

> "The Governor shall make rules for the more convenient transaction of the business of the Government of the State, and for the allocation among Ministers of the said business in so far as it is not business with respect to which the Governor is by or under this Constitution required to act in his discretion."

ಅದರಲ್ಲಿ ಮಿನಿಸ್ಟರ್ಸ್ ಎನ್ನುವ ಪದ ಉಪಯೋಗವಾಗಿದೆ. ಮಿನಿಸ್ಟರ್ಸ್ ಎಂದು ಬಂದಾಗ ಆಫೀಸರ್ಸ್ ಎಂದು ಅರ್ಥ ಬರುವುದಿಲ್ಲ. ಒಂದು ವೇಳೆ ಅದರಲ್ಲಿ ಆಫೀಸರ್ಸ್ ಬರುತ್ತಾರೆಂಬ ವಿಷಯವೇನಾದರೂ ತೆಗೆದುಕೊಂಡು ವಿಚಾರ ಮಾಡುವುದಾದರೆ, ಯಾವನೇ ಅಧಿಕಾರಿ ಒಂದು ವೇಳೆ ಮಾಡಿದಂಥ ತಪ್ಪಿಗೆ ಸರ್ಕಾರದವರು ರಾಜೀನಾಮೆ ಕೊಡಬೇಕೆಂದರೆ ಹೇಗೆ ? ಹಾಗಾದರೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಸರ್ಕಾರದವರು 50 ಸಾರಿ ರಾಜೀನಾಮೆ ಕೊಡಬೇಕಾಗುತ್ತದೆ. ಈವೊತ್ತು ಯಾವುದೋ ಒಂದು ಮರ್ಡರ್ ಕೇಸಿನಲ್ಲಿ ಸರಿಯಾದ ಇನ್‌ವೆಸ್ಟಿಗೇಷನ್ ಆಗಿಲ್ಲವೆಂದು ಹೇಳಿದರೆ ಅದಕ್ಕೆ ಸರ್ಕಾರದವರು ರಾಜೀನಾಮೆ ಕೊಡಬೇಕು ಅಂದರೆ ಹೇಗೆ? Investigating Officer is also a Government employee so any mistake committed by a Government employee is a mistake committed by the Government ಎಂದು ಆಗುವುದಿಲ್ಲ. ಗೌರ್ನಮೆಂಟ್ ಎಂದು ಹೇಳಿದಾಗ ಯಾರು ಎಂದು ತಿಳಿದುಕೊಳ್ಳಬೇಕಾಗುತ್ತದೆ.

ಇನ್ನೊಂದು ವಿಷಯ. ಹೈದರಾಬಾದ್ ಏರಿಯಾದಲ್ಲಿ ಆರಿಯರ್ಸ್ ಬಹಳ ಬಿದ್ದಿದೆ, ಮಂತ್ರಿಗಳ ಸಂಬಂಧ ಕೆಲವರು ಇದ್ದಿರಬೇಕು ಎಂಬ ಮಾತನ್ನು ಹೇಳಿದ್ದಾರೆ. ಅದು ಸರಿಯಲ್ಲ. ರೂಲ್ಸ್ ಪ್ರಕಾರ ಆರು ತಿಂಗಳು ಅಡ್ವಾನ್ಸ್ ತೆಗೆದುಕೊಳ್ಳಬೇಕು ಎಂದಿದೆ. ಹೈದರಾಬಾದ್ ಏರಿಯಾದಲ್ಲಿ ನಾನಾ ಪ್ರಾಪರ್ಟಿ ಅಕ್ಷನ್ನಿಗೆ ಬಂದು ಬಾಕಿ ನಿಂತಿರುವವೂ ಇವೆ. ಷಾಪ್ ಆಕ್ಷನ್‌ನಲ್ಲಿ ನಿಂತ ಅರಿಯರ್ಸ್‌ನ್ನು ಕೊಡಲಾರದೆ ಇರುವುದು ಕೋಟ್ಯಾಂತರ ರೂಪಾಯಿಗಳು ಇವೆ.

1–30 P.M.

ಇವತ್ತಿನ ಪರಿಸ್ಥಿತಿಯಲ್ಲಿ ಸುಮಾರು 30-40 ಲಕ್ಷ ರೂಪಾಯಿ ಏನು ಬಾಕಿ ಬಿದ್ದಿದೆ, ಅದನ್ನು ವಸೂಲು ಮಾಡುವುದಕ್ಕೆ ಸ್ಪೆಷಲ್ ಆಫೀಸರ್ ನೇಮಕ ಮಾಡಿದ್ದೇವೆ. ಅರಿಯರ್ಸ್ ವಸೂಲು ಮಾಡುವುದಕ್ಕೆ ಎಲ್ಲಿ ಸಾಧ್ಯವಿದೆ, ಅದನ್ನು ಮಾಡಬೇಕು, ಎಲ್ಲಿ ಸಾಧ್ಯವಿಲ್ಲ ಅದನ್ನು ರೈಟ್ ಆಫ್ ಮಾಡಬೇಕೆಂದು ಇದೆ. ಯಾವ ಒಂದು ಬಿಡಿ ಕಾಸು ಕೂಡ ಹೋಗಬಾರದು ಎಂಬ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ಅದರಿಂದ ಎಕ್ಸೈಸಿನ ಎಲ್ಲಾ ದುಡ್ಡು ನಮ್ಮಲ್ಲಿ ಬರುತ್ತದೆ.

ಅಲ್ಲಿಂದ ಇನ್ನೊಂದು ವಿಚಾರವನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು— "ನಮ್ಮ ಕಡೆ ಕೈಯೆತ್ತುವವರಿದ್ದಾರೆ, ಏನು ಬೇಕಾದರೂ ನಿರ್ಣಯ ಪಾಸ್ ಮಾಡಿಕೊಳ್ಳಬಹುದು" ಎಂದು. I humbly submit it is a reflection on this side. ಈ ಮನೆಯಲ್ಲಿ ಅವರಿಗೆ ಎಷ್ಟು ಅಧಿಕಾರ ಇದೆಯೋ, ಅಷ್ಟೇ ಅಧಿಕಾರ ನಮಗೂ ಇದೆ. ಎಷ್ಟು ಮಾತನಾಡುವುದಕ್ಕೆ ಅವರಿಗೆ ಅಧಿಕಾರ ಇದೆಯೋ, ಅಷ್ಟೇ ನಮಗೂ ಇದೆ. ಈವೊತ್ತಿನ ದಿವಸ ಸರ್ಕಾರ ನಡೆಸುವುದನ್ನು ನೀವು ಬಿಟ್ಟು ಹೋಗಿ ಎಂದು ಇವರು ಹೇಳಿದರೆ, ನಾವು ಇವರು ಹೇಳಿದ ಹಾಗೆ ನಡೆಯಲಿಕ್ಕೆ ತಯಾರಿಲ್ಲ. ಇದನ್ನು ಅವರು ತಿಳಿದುಕೊಳ್ಳಬೇಕು. ಅದಕ್ಕಾಗಿ ನಾನು ಅವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಹೋಗಿ, ಎಂದು ಹೇಳಿದರೆ, ನಾವು ಹೋಗುವುದಕ್ಕೆ ತಯಾರಾಗಿಲ್ಲ. ನಾವು ಆತ್ಮಸಾಕ್ಷಿಯಾಗಿ ವ್ಯವಹಾರ ಮಾಡುತ್ತೇವೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri H. M. CHANNABASAPPA.—I give a challenge. We will go to the Court on this issue.

ಶ್ರೀ ಎಸ್. ಶಿವಪ್ಪ.—ಇದರಿಂದ ದೇಶದ ಜನರಿಗೆ ಜವಾಬ್ದಾರರಾಗುತ್ತೀರಿ, ಆದ್ದರಿಂದ ರಾಜಿನಾಮೆ ಕೊಡಿ ಎಂದು ಹೇಳಿದ್ದು.

Sri H. M. CHANNABASAPPA.—Let them do so.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮುಖ್ಯಮಂತ್ರಿಯವರು ಈ ಸ್ಕೈಡಿನವರು, ಆ ಸ್ಕೈಡಿನವರು ಎಂದು ಹೇಳಿದರು. ಇದರಿಂದ ಈ ಮನೆಯೊಳಗೆ ಆ ರೀತಿ ಹೇಳುವುದು ಸರಿಯಲ್ಲ. ಸುಪ್ರೀಂ ಕೋರ್ಟಿನ ನಿರ್ಣಯದಿಂದ ಸಿಲುಕಿಕೊಂಡಿರುವುದರಿಂದ ಅವರಿಗೆ ಅಧಿಕಾರ ಬಿಡುವ ಪ್ರಸಂಗ ಬರುವಾಗ ಮನ ನೋಯುವುದು ಸ್ವಾಭಾವಿಕ. ಈ ಸಭೆಯ ಹಿರಿಯರನ್ನತಕ್ಕವರು ನೀವು ಬಿಡಿ ಎಂದು ಹೇಳಿದಾಗ, ಹೋಗದಿದ್ದರೆ, ಒಂದು ಸಮಯಕ್ಕೆ ಒಬ್ಬ ಮಾನ್ಯ ಸದಸ್ಯನು ಬಿಡಿ ಎಂದು ಹೇಳುವಾಗ ಇವರು ಹೋಗತಕ್ಕ ಕಾಲ ಬಂದೀತು ಎಂದು ಅವರಿಗೆ ಎಚ್ಚರಿಕೆಯನ್ನು ಕೊಡುತ್ತೇನೆ.

Mr. SPEAKER.—Now I put the motion to tho vote. The question is:

> "This Assembly has No Confidence in the Council of Ministers, headed by Sri Veerendra Patil."

The motion was negatived.

(At this stage the Members of the Opposition withdrew)

Supplementary and Additional Demands for Grants for the year 1968-69 (Second Instalment)

(Presentation.)

Mr. SPEAKER.—I announce that I have received a message from His Excellency the Governor recommending that the Supplementary and Additional Demands for Grants for the year 1968-69 (Second Instalment) be laid before the Assembly as required by article 205 of the Constitution of India.

Sri RAMAKRISHNA HEGDE (Minister for Finance, Planning and Youth Welfare).—I present a statement showing the Schedule for Supplementary and additional demands for Grants for the year 1968-69 (Second Instalment) as required under article 205 of the Constitution of India.

Mr. SPEAKER.—Statement of Supplementary and Additional Demands for grants for the year 1968-69 (Second Instalment) is presented.

The House will now rise and meet at 3 P. M.

The House rose for Recess at Forty Minutes past One of the Clock and reassembled at Three of the Clock.

[MR. SPEAKER in the Chair]

Point raised *re*; decision of the Chair on the Voting on No-Confidence Motion

SRI H. N. NANJE GOWDA.—Sir, in the morning the Government was voted down according to the ruling given by the Chair. Now a vaccum is created and there is no Government. I therefore request the Hon. Chair to adjourn the House until the constitution of a new Ministry.

SRI B. P. GANGADHAR.—Sir, a constitutional deadlock and vacuum is created here when you were pleased to say that the 'Ayes' have the motion and the motion being the motion of no-confidence against the Council of Ministers. As you were pleased to say that 'Ayes' have it and the motion is carried, I want to know whether the Ministers have tendered their resignation and if they have not chosen to do so, at least I request you to adjourn the House till they tender their resignations to the Governor and the Governor makes alternative arrangements to carry on the administration of the State. So Sir, when once the Chair has stated that the 'Ayes' have it, it means that there is an end to it. Therefore when such a vacuum has been created let there not be any constitutional deadlock further by saying that such a thing did not transpire in this House at all. Let us not go to that extent because all of us were here when that thing happened. When 'Ayes' have the motion, and when the motion of no-confidence is legally passed and when a constitutional vacuum is created, I presume there is no Cabinet, even though they have not tendered their resignations to the Governor. I therefore request you to adjourn this House till they tender their resignation and we do not consider them as persons who are occupying the treasury benches.

MR. SPEAKER.—The hon, Members Sri Nanje Gowda and Sri Gangadhar have stated that in the morning the Chair said 'Ayes' have it. It is far from the truth. The Chair after putting the motion to vote and evaluating the voice vote, declared that the 'Noes' have it. Nobody moved or pressed for any division at that stage I therefore said the 'Noes' have it, the 'noes' have it, and the motion is negatived. That is how the motion was negatived. Therefore there is no basis for these two hon. Members to raise their points. All their consequent inferences therefore are not correct.

Now I shall proceed with the work before the House.

STARRED QUESTIONS

(to which oral answers were given)

Sugar Factory at Holenarasipur

277. Sri H. D. DEVE GOWDA (Holenarasipur).—

Will the Minister for Industries, Information and Publicity be pleased to state :—

(a) whether any representation has been received by the State Government requesting sanction of a sugar factory at Holenarasipur Taluk under Co-operative Sector in the IV Five Year Plan ;

(b) whether Government intends to take necessary steps to sanction the same in IV Five Year Plan ?

Sri M. RAJASEKHARA MURTHY (Minister for Industries, Information and Publicity).—

(a) No.

(b) Does not arise.

ಶ್ರೀ ಹೆಚ್. ಡಿ. ದೇವೇಗೌಡ.—ಕೋ-ಆಪರೇಟೀವ್ ಸೆಕ್ಟಾರಿನಲ್ಲಿ ಹೊಳೆನರಸೀಪುರದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಮಂಜೂರು ಮಾಡಬೇಕೆಂದು ಸರಕಾರಕ್ಕೆ ಏನಾದರೂ ಮನವಿಗಳು ಬಂದಿವೆಯೇ ? ಬಂದಿದ್ದರೆ ಅದರ ಬಗ್ಗೆ ಸರಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ?

† ಶ್ರೀ ಎಂ. ರಾಜಶೇಖರಮೂರ್ತಿ.—ಸಕ್ಕರೆ ಕಾರ್ಖಾನೆ ಇಂತಹ ಸ್ಥಳದಲ್ಲಿ ಬೇಕು ಎಂದು ಅದಕ್ಕೆ ನಿಯಮಿತವಾದ ಗೊತ್ತಾದ ಫಾರಂನಲ್ಲಿ ಸರಕಾರಕ್ಕೆ ಕಳುಹಿಸಿದರೆ ಅದರ ಬಗ್ಗೆ ಶಿಫಾರಸು ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಬಹುದು.

ಶ್ರೀ ಎಸ್. ಎಂ. ಗುರೆಡ್ಡಿ.—ಕೇಂದ್ರ ಸರಕಾರದವರು ನಾಲ್ಕನೆ ಯೋಜನೆಯಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಈ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಬಿ. ದೊಡ್ಡ ಬೋರೇಗೌಡ.—ಇದುವರೆಗೆ ಕೇಂದ್ರ ಸರಕಾರದವರು ರಾಜ್ಯ ಸರಕಾರದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ ?

ಶ್ರೀ ಎಂ. ರಾಜಶೇಖರಮೂರ್ತಿ.—ಇದರ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು. ಇದು ಹೊಳೇನರಸೀಪುರಕ್ಕೆ ಸಂಬಂಧಪಟ್ಟುದು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸರಿಯಾದ ನಿಗದಿಯಾಗಿ ಗೊತ್ತಾಗಿರುವ ಫಾರಂನಲ್ಲಿ ಅರ್ಜಿ ಬಂದರೆ ಕಳುಹಿಸುತ್ತೇವೆ ಎಂದು ಮಂತ್ರಿಗಳು ಹೇಳಿದರು. ಆದರೆ ಎಲ್ಲೆಲ್ಲಿ ಸಕ್ಕರೆ ಕಾರ್ಖಾನೆ ಅವಶ್ಯಕವಿದೆ ಅನ್ನು ತಿಳಿದುಕೊಂಡು ಕೇಂದ್ರಕ್ಕೆ ರೆಕಮೆಂಡೇಷನ್ ಏಕೆ ಮಾಡಬಾರದು ?

ಶ್ರೀ ಎಂ. ರಾಜಶೇಖರಮೂರ್ತಿ.—ಕೇಂದ್ರ ಸರಕಾರದವರೇ ಸಕ್ಕರೆ ಕಾರ್ಖಾನೆಗೆ ಲೈಸನ್ಸ್ ಕೊಡುವವರು. ನಮ್ಮ ಕೆಲಸ ಏನಿದ್ದರೂ ಅರ್ಜಿ ಬಂದ ಮೇಲೆ ಶಿಫಾರಸು ಕಳುಹಿಸುವುದು. ಅರ್ಜಿ ಬಂದಾಗ ಅದರ ವಿವರಗಳನ್ನೆಲ್ಲಾ ಪರಿಶೀಲಿಸಿ ಆ ನಂತರ ಶಿಫಾರಸನ್ನು ಕಳುಹಿಸಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಹೇಮಾವತಿ ನದಿಯ ದಂಡೆಯಲ್ಲಿ ಸುಮಾರು 35 ಸಾವಿರ ಎಕರೆಗಳಷ್ಟು ಭೂಮಿ ನೀರಾವರಿಯಾಗುತ್ತದೆ. ಇದರಲ್ಲಿ ಸುಮಾರು 15 ಸಾವಿರ ಎಕರೆಗಳಲ್ಲಿ ಕಬ್ಬು ಬೆಳೆಯಲು ಅನುಕೂಲ ಇದೆ. ಇದನ್ನು ನಾಲ್ಕನೇ ಯೋಜನೆಯಲ್ಲಿ ಮಾಡಬೇಕೆಂದು ಇತ್ತು. ಇದರ ಬಗ್ಗೆ ಪರಿಶೀಲನೆ ಮಾಡಿ ಕೇಂದ್ರದವರಿಗೆ ಶಿಫಾರಸು ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಅರ್ಜಿ ಬಂದ ಮೇಲೆ ಇವನ್ನೆಲ್ಲಾ ಪರಿಶೀಲಿಸಿ ಶಿಫಾರಸನ್ನು ಕಳುಹಿಸಬಹುದು.

" Soonya Simhasana Prabhava "

323. Sri G. DUGGAPPA (Bharamsagar).—

Will the Chief Minister be pleased to state :—

(a) whether a Reader in Sanskrit, University of Mysore, has published a book "Soonya Simhasana Prabhava"

(b) whether it has come to the notice of the Government that it contains certain objectionable matters which tend to create ill-will and hatred among certain section of the society in the State ;

(c) whether the Government has received petitions from different sections of the society in the State stating that this book has created ill-will and wounded the feelings of certain sect in the society ;

(d) if so, the action Government intend to take in the matter ?

Sri N. M. KOTRABASAIAH SOGI (Deputy Minister for Education) [On behalf of SRI VEERENDRA PAIL (Chief Minister)].—

(a) A book entitled "Soonya Peetada Prabhava" has been published by a Reader in Sanskrit, University of Mysore.

(b) This is being examined.

(c) Yes.

(d) This is being examined.

ಶ್ರೀ ಜಿ. ದುಗ್ಗಪ್ಪ.— ಅನೇಕ ಮನವಿಗಳು ಬಂದಿವೆ ಎಂದು ಹೇಳಿದ್ದೀರಿ. ಈ ಪುಸ್ತಕದಲ್ಲಿ ಅನೇಕ ಧಾರ್ಮಿಕ ಭಾವನೆಗಳಿಗೆ ನೋವನ್ನುಂಟು ಮಾಡುವ ಪರಿಸ್ಥಿತಿಯುಂಟಾಗಿ ಅನೇಕ ಗೊಂದಲಗಳಿಗೆ ಕಾರಣವಾಗಿದೆ. ಇದಕ್ಕೆ ಕೂಡಲೇ ಸರಕಾರ ಮುಟ್ಟುಗೋಲು ಹಾಕಬೇಕು ಎಂದು ಮನವಿಗಳು ಬಂದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ.—ಇದರ ಬಗ್ಗೆ ಮನವಿಗಳು ಬಂದಿವೆ ಎಂದು ಉತ್ತರದಲ್ಲಿ ಹೇಳಲಾಗಿದೆ. ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಶೂನ್ಯ ಸಿಂಹಾಸನ ಪ್ರಭಾವ ಎನ್ನುವ ಪುಸ್ತಕ ಇಲ್ಲಿ ಈಗ ನನ್ನಲ್ಲಿದೆ. ಇದರಲ್ಲಿರುವ ಪುಟ 96ರಲ್ಲಿ ಹೀಗಿದೆ :

> " ಜಂಗಮರ ರಕ್ತಕ್ಕೆ ಹುಟ್ಟಿದ ವ್ಯಕ್ತಿಗಳಿಂದಲೇ ಲೋಕ ಕಲ್ಯಾಣವು ಶಾಶ್ವತವಾಗಿ ನಡದೀತೇ ಹೊರತು ಭಕ್ತಮನೆತನದವರಿಂದ ಹಾಗೆ ನಡೆಯಲಾರದೆಂಬುದಕ್ಕೆ ಇಂದಿನ ಪ್ರಚಲಿತವಾದ ಸಿರಿಗೆರೆ, ಸುತ್ತೂರು, ಸಿದ್ಧಗಂಗೆ ಮಠಗಳ ಸ್ವಾಮಿಗಳ ಚಲನವಲನಗಳೇ ಪ್ರತ್ಯಕ್ಷ ನಿದರ್ಶವಾಗಿವೆ "

ಇತ್ಯಾದಿ, ಇತ್ಯಾದಿ, ಇದರಲ್ಲಿ ಹೀಗೆ ಗುರುತರವಾದ ಆಕ್ಷೇಪಣೆಗಳು ಬಂದಿವೆ. ಇದಕ್ಕಿಂತಲೂ ಹೆಚ್ಚಿನ ಪುರಾವೆಗಳು ಬೇಕೇ ?

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ.—ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Exemption of Sales Tax on Perishable Articles

340. Smt. WINNIFRED F. FERNANDES (Coondapur).—

Will the Minister for Finance, Planning and Youth Welfare be pleased to state :—

(*a*) whether all perishable commoditios are exempted from the levy of sales tax as per the Mysore Sales Tax Act;

(*b*) whether coffee and meals hotels, who sell prepared food and drinks which is more perishable than some of the perishable commodities now exempted from sales tax, are not given this exemption benefit :

(*c*) will the Government intend to re-examine this issue, and pass orders exempting the hotel trade from the levy of sales tax ?

Sri RAMAKRISHNA HEGDE (Minister for Finance, Planning and Youth Welfare).—

(*a*) There is no general exemption in the Mysore Sales Tax Act, 1957 in respect of 'Perishables'.

(*b*) Coffee hotels are not exempted from tax.

(*c*) There is no proposal to exempt the hotel industry.

Smt. WINNIFRED F. FERNANDES.—Supplementary to (*a*) : What is the reason for not having a general exemption for perishable commodities like hotel trade ?

† Sri RAMAKRISHNA HEGDE.—It all depends upon the definition of perishable commodities. According to the hon'ble Member articles that are prepared in hotel for consumption by customers are also perishables. Actually perishable commodities are those like fruits, vegetables, etc., which are produced by agriculturists.

Smt. WINNIFRED F. FERNANDES.—Is it not a fact that the Mysore Sales Tax Act was introduced after prohibition came into force ?

Sri RAMAKRISHNA HEGDE.—I do not remember the exact date. The hon'ble. Member has asked another question. That would be the proper occasion to answer that question.

Smt. WINNIFRED F. FERNANDES.—Supplementary to (*c*) : You have said that there is no proposal to exempt the hotel industry. I have got one important proposal. Will you please reconsider and exempt these perishable commodities of the hotel trade especially?

Sri RAMAKRISHNA HEGDE.—I am always prepared to consider any good proposal by any hon'ble Member.

Restoration of Tanks in Tiptur Taluk

419. **Sri V. L. SIVAPPA** (Tiptur).—

Will the Minister of State for Minor Irrigation be pleased to state :—

(*a*) the number of tanks proposed or recommended for restoration in Tiptur Taluk during 1967–68 ;

(*b*) whether any Minor Irrigation works were taken up during the year ;

(*c*) whether Government is aware of the near famine conditions in the Taluk and the urgent necessity of taking up minor irrigation work without delay;

(*d*) whether Government have a proposal to sanction as many Minor Irrigation works as are possible in the Taluk ?

Sri D. PARAMESHWARAPPA (Deputy Minister for Major Irrigation and Electricity) [on behalf of Sri A. J. DODDAMETI (Minister of State for Minor Irrigation)].—

(*a*) Two.

(*b*) Yes.

(*c*) Yes.

(*d*) Yes.

ಶ್ರೀ ವಿ. ಎಲ್. ಶಿವಪ್ಪ.—1967–68ನೇ ಸಾಲಿನಲ್ಲಿ ತಿಪಟೂರ್ ತಾಲ್ಲೂಕಿನಲ್ಲಿ ಜೀರ್ಣೋದ್ಧಾರಕ್ಕಾಗಿ ಎರಡು ಕೆರೆಗಳನ್ನು ಶಿಫಾರಸ್ಸು ಮಾಡಿದೆ ಎಂದು ಹೇಳಿದ್ದೀರಿ, ಯಾವ ಯಾವ ಕೆರೆಗಳು, ಸ್ವಾಮಿ ?

† ಶ್ರೀ ಡಿ. ಪರಮೇಶ್ವರಪ್ಪ.—ಮಸಣಗಟ್ಟ ಹತ್ತಿರ ಇರುವುದು ಒಂದು ಕೆರೆ, ಹಾಲಗುರ್ಕಿ ಊರಮುಂದಿನ ಕೆರೆ. ಈ ಎರಡು ಕೆರೆ ಮಾತ್ರ.

ಶ್ರೀ ವಿ. ಎಲ್. ಶಿವಪ್ಪ.—ಕಳೆದ ಅಧಿವೇಶನದಲ್ಲಿ 13 ಕೆರೆಗಳನ್ನು ರೆಸ್ಟೋರೇಷನ್ ಮಾಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಈಗ ಎರಡು ಕೆರೆ ಎಂದು ಹೇಳುತ್ತೀರಿ. ಇದರಲ್ಲಿ ಯಾವುದು ಸರಿ ಸ್ವಾಮಿ !

Sri D. PARAMESWARAPPA.—These two tanks have been recommended one for restoration and the other for increasing the capacity. One work for Karikere tank has been sanctioned and it is taken up. The other works are taken on hand under 64 Famine are improvements to tanks.

ನಿಮಗೆ ಡೀಟೇಲ್ಸ್ ಹೇಳಬೇಕಾದರೆ 64ನೇ ಫ್ಯಾಮಿನ್ ರಿಲೀಫ್ ಪ್ರಕಾರ ತಿಪಟೂರ್ ತಾಲ್ಲೂಕಿನಲ್ಲಿ ಈ ಕೆಳಕಂಡ ಕೆಲಸಗಳನ್ನು ತೆಗೆದುಕೊಂಡಿದೆ.

1.	ಹಲಗುರ್ಕಿ ಟ್ಯಾಂಕ್ ಅಭಿವೃದ್ಧಿಪಡಿಸುವುದು	...	15,000
2.	ಬಜಾಜೂರ ಟ್ಯಾಂಕ್ ಅಭಿವೃದ್ಧಿಪಡಿಸುವುದು	...	15,000
3.	ಮಸಣಗಟ್ಟ ಕೋಣನಕೆರೆ ಅಭಿವೃದ್ಧಿಪಡಿಸುವುದು	...	20,000
4.	ಎಹನೂರು ಟ್ಯಾಂಕ್ ಅಭಿವೃದ್ಧಿಪಡಿಸುವುದು	...	14,000
5.	ಅರಗಲಗುಪ್ಪೆ ಟ್ಯಾಂಕ್ ಅಭಿವೃದ್ಧಿಪಡಿಸುವುದು	...	20,000

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಳೆದ ಅಧಿವೇಶನದ ಸಮಯದಲ್ಲಿ 1967-68ನೇ ಸಾಲಿನಲ್ಲಿ ಯಾವ ಯಾವ ಕೆರೆಗಳನ್ನು ಯಾವ ಯಾವ ತಾಲ್ಲೂಕುಗಳಲ್ಲಿ ತೆಗೆದುಕೊಳ್ಳಲಾಗುತ್ತದೆ ಎನ್ನುವ ಪಟ್ಟಿಯನ್ನು ಒದಗಿಸಿಕೊಟ್ಟಿದ್ದರು. ಅದರ ಪ್ರಕಾರ ಈ ವರ್ಷ ತಿಪಟೂರು ತಾಲ್ಲೂಕಿನಲ್ಲಿ ಯಾವ ಕೆರೆಯನ್ನೂ ತೆಗೆದುಕೊಳ್ಳಲಿಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಆ ಪಟ್ಟಿ ನನ್ನ ಹತ್ತಿರ ಇಲ್ಲ. ಆದರೆ ಒಂದು ಕೆರೆಯನ್ನು ಮಾತ್ರ ಅಂದರೆ ಕರೀಕೆರೆ ಎಂಬ ಕೆರೆಯನ್ನು ತೆಗೆದುಕೊಂಡಿದ್ದೇವೆ.

Assets and Liabilities of District Board, Raichur

39. Sri K. SANGAN GOWDA (Lingsugur).—

Will the Minister for Development be pleased to state :—

(*a*) the Assets and Liabilities of the defunct District Board, Raichur ;

(*b*) how the Assets and Liabilities were distributed to each Taluk Development Board (Talukwise information may be given) ;

(*c*) whether the Lingsugur Taluk Development Board has requested the Government to permit it to invest an amount of Rs. 55,000 out of the said assets with the M.S.E.B. for rural Electrification mainly for the line Mudgol to Ramathanahal ;

(*d*) if so, the action taken by Government in that behalf ?

Sri P. M. NADGOUDA (Minister for Development).—

(*a*) and (*b*) The Assets and Liabilities of the defunct District Board, Raichur have been apportioned among the Taluk Boards on population basis, etc., as per G.O. No. LLH 22 BAD 60, dated 29-4-1962 and G.O. No. DPC 132 BAD 64, dated 20-11-1967, copies of which are placed on the Table of the House. *

(*c*) No.

(*d*) Does not arise in view of reply to clause (*c*) above.

ಶ್ರೀ ಕೆ. ಸಂಗನಗೌಡ.—ಡೀಫಂಕ್ಟ್ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ 1-11-1956ಕ್ಕೆ ಎಷ್ಟು ಕ್ಯಾಷ್ ಬ್ಯಾಲೆನ್ಸ್ ಇತ್ತು ಎಂದು ತಿಳಿಸುತ್ತೀರಾ ?

†ಶ್ರೀ ಪಿ. ಎಂ. ನಾಡಗೌಡ.—1-11-1956ರಲ್ಲಿ 7,20,699-99 ರೂಪಾಯಿ ಮತ್ತು 1-11-1959ರಲ್ಲಿ 8,57,167-18 ರೂಪಾಯಿ ಇತ್ತು.

ಶ್ರೀ ಕೆ. ಸಂಗನಗೌಡ.—ಯಾವ ಯಾವ ತಾಲ್ಲೂಕು ಬೋರ್ಡಿಗೆ ಹಣವನ್ನು ಯಾವ ರೀತಿಯಲ್ಲಿ ಹಂಚಲಾಗಿದೆ.

ಶ್ರೀ ಪಿ. ಎಂ. ನಾಡಗೌಡ.—ಆಯಾ ತಾಲ್ಲೂಕಿನ ಜನಸಂಖ್ಯೆಯನ್ನು ತೆಗೆದುಕೊಂಡು ಆ ಪ್ರಕಾರ ಯಾವ ಯಾವ ತಾಲ್ಲೂಕು ಬೋರ್ಡಿಗೆ ಎಷ್ಟು ಬರಬಹುದೋ ಆ ಪ್ರಕಾರ ರಿಅಡ್‌ಜಸ್ಟ್‌ಮೆಂಟ್ ಮಾಡಿದ್ದೇವೆ.

---

* Copies placed in the Mysore Legislature Library *vide* No.......

ಶ್ರೀ ಎಂ. ನಾಗಪ್ಪ.—ಲಿಂಗಸೂಗೂರು ತಾಲ್ಲೂಕು ಬೋರ್ಡಿನವರು 55 ಸಾವಿರ ರೂಪಾಯಿಗಳನ್ನು ಮೈಸೂರು ವಿದ್ಯುಚ್ಛಕ್ತಿ ಮಂಡಲಿಗೆ ಕೊಡಬೇಕು ಎಂದು ನಿರ್ಣಯ ಮಾಡಿದೆಯೇ ಎಂದು ಕೇಳಿದ್ದಕ್ಕೆ "ಇಲ್ಲ", ಎಂದು ಹೇಳಿದ್ದೀರಿ. ಆದರೆ ತಾಲ್ಲೂಕು ಬೋರ್ಡಿಗೆ ಕೊಡುವಾಗ ಕಟ್ ಮಾಡಿ ಕಳುಹಿಸಿರುವುದು ಸರಿಯೇ ? ಇಲ್ಲದೆ ಇದ್ದರೆ ಯಾವ ರೀತಿ ಅದನ್ನು ಸರಿಪಡಿಸುತ್ತೀರಿ ?

(No Answer)

Primary Societies

84. **Sri M. K. BOMME GOWDA** (K. R. pet).—

Will the Minister for Development be pleased to state :—

(*a*) the number of Primary Societies in Mandya District which are defaulters ;

(*b*) the number of them which have not conducted General Body Meetings during the past 3 years up to prescribed date ;

(*c*) the number of Co-operative Credit Societies which have been superseded in K. R. pet Taluk by Government during the past 3 months up to end of November, 1968 ;

(*d*) the reason for supersession ?

Sri B. L. GOWDA (Deputy Minister for Co-operation).—

(*a*) 258.

(*b*) 53.

(*c*) 2.

(*d*) Working of the societies was not satisfactory. Steps to improve matters were not taken despite instructions. Moreover, the majority of the directors were themselves defaulters.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡುವುದಕ್ಕೆ ಪ್ರಬಲವಾದ ಕಾರಣಗಳೇನಿದ್ದುವು, ಸ್ವಾಮಿ ?

† ಶ್ರೀ ಬಿ. ಎಲ್. ಗೌಡ—ಸಂಬಂಧಪಟ್ಟ ಡೈರೆಕ್ಟರುಗಳು ಸಾಲವನ್ನು ಸರಿಯಾಗಿ ವಸೂಲು ಮಾಡದೆ ಇರುವುದು, ತಮ್ಮ ತಮ್ಮಲ್ಲೇ ಸಾಲ ತೆಗೆದುಕೊಂಡು ಅದನ್ನು ಮರುಪಾವತಿ ಮಾಡದೆ ಇರುವುದು, ಜನರಲ್ ಬಾಡಿ ಮೀಟಿಂಗ್ ಕರೆಯದೆ ಇರುವುದು ಸಹಕಾರ ಸಂಘಗಳ ಅಭಿವೃದ್ಧಿಯಲ್ಲಿ ಆಸಕ್ತಿ ತೆಗೆದುಕೊಳ್ಳದೆ ಇರುವುದು.

ಶ್ರೀ ಎಂ. ಕೆ. ಬೊಮ್ಮೇಗೌಡ.—258 ಡಿಫಂಕ್ಟ್ ಸೊಸೈಟಿಗಳಿವೆ ಎಂದು ಹೇಳಿದ್ದೀರಿ. ಇವುಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇವೆಲ್ಲ ರೆಗ್ಯುಲರ್ ಆಗಿ ಜನರಲ್ ಬಾಡಿ ಮೀಟಿಂಗಳನ್ನು ಕರೆದಿವೆಯೇ ?

ಶ್ರೀ ಬಿ. ಎಲ್. ಗೌಡ.—258 ಸೊಸೈಟಿಗಳ ಪೈಕಿ 53 ಸೊಸೈಟಿಗಳು ಮಾತ್ರ ಜನರಲ್ ಬಾಡಿ ಮೀಟಿಂಗನ್ನು ಕರೆದಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಎರಡು ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿರುವುದರಲ್ಲಿ ಯಾವ ಯಾವ ಕಾರಣಗಳಿಗೋಸ್ಕರ ಮಾಡಿದ್ದೀರಿ ?

ಶ್ರೀ ಬಿ. ಎಲ್. ಗೌಡ.—ಸೊಸೈಟಿಗಳ ಸರ್ವೇಸಾಮಾನ್ಯ ಪ್ರಗತಿಗೆ ಅಡ್ಡಿ ಬಂದಿದ್ದಾರೆ, ಡೈರೆಕ್ಟರುಗಳಲ್ಲಿ ಬಹುಮಂದಿ ಸಾಲ ತೆಗೆದುಕೊಂಡಿದ್ದಾರೆ, ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕಿಗೆ ತೆಗೆದುಕೊಂಡ ಸಾಲ ವಾಪಸು ಮಾಡದೆ, ಬರಬೇಕಾಗಿರುವ ಸಾಲವನ್ನು ವಸೂಲು ಮಾಡುವುದರಲ್ಲಿ ಆಸಕ್ತಿ ವಹಿಸಿಲ್ಲ, ಸುಸ್ತಿಯಲ್ಲಿರುವವರ ಮೇಲೆ ವಸೂಲಿ ಕ್ರಮಕ್ಕೆ ದಾವಾ ಹಾಕಿಲ್ಲ, ಜನರಲ್ ಬಾಡಿ ಮೀಟಿಂಗ್ ಕರೆದಿಲ್ಲ. ಈ ನಾನಾ ಕಾರಣಗಳಿಂದ ಸೂಪರ್‌ಸೀಡ್ ಮಾಡಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾಂಗ್ರೆಸ್ ಆಡಳಿತದಲ್ಲಿ ಎಷ್ಟು ಸೊಸೈಟಿಗಳಿವೆ ? ಬೇರೆಯವರ ಆಡಳಿತದಲ್ಲೆಷ್ಟಿವೆ ಎಂದು ಹೇಳಲು ಸಾಧ್ಯವೆ ?

ಶ್ರೀ ಬಿ. ಎಲ್. ಗೌಡ.—ಆ ಸಮಾಚಾರವಿಲ್ಲ, ಸಹಕಾರಿ ರಂಗದಲ್ಲಿ ರಾಜಕೀಯ ಪ್ರವೇಶ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಡಿಫಾಲ್ಟರ್ಸ್ ಸಂಖ್ಯೆ ನೋಡಿದರೆ ಇಡೀ ಜಿಲ್ಲೆಯಲ್ಲಿ ಸಹಕಾರ ಚಳವಳಿ ಜಯಪ್ರದವಾಗಿದೆಯೆಂದು ಹೇಳಲು ಸಾಧ್ಯವೇ ?

ಶ್ರೀ ಬಿ. ಎಲ್. ಗೌಡ.—ಅದು ತಮ್ಮ ಅಭಿಪ್ರಾಯ. ಡಿಫಾಲ್ಟರ್ಸ್‌ನಲ್ಲಿ ವೇರಿಯಸ್ ಸ್ಟೇಜಸ್ ಇದೆ.

ಶ್ರೀ ಗಂಗಾಬೋವಿ.—ಐದಾರು ವರ್ಷಗಳಿಂದ ಜನರಲ್ ಬಾಡಿ ಮೀಟಿಂಗನ್ನು ನಡೆಯಿಸದಿರುವ ಸೊಸೈಟಿಗಳಮೇಲೇನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಬಿ. ಎಲ್. ಗೌಡ.—ನೋಟೀಸ್ ಕೊಟ್ಟು ತಕ್ಷಣ ಮೀಟಿಂಗ್ ಕರೆಯಬೇಕೆಂದು ತಿಳಿಸಿದ್ದೇವೆ.

ಶ್ರೀ ಎಂ. ನಾಗಪ್ಪ.—ಮಂಡ್ಯ ಜಿಲ್ಲೆಯಲ್ಲಿ ಸುಮಾರು ಶೇಕಡ ಐವತ್ತಕ್ಕಿಂತ ಹೆಚ್ಚು ಸಹಕಾರ ಸಂಘಗಳು ಡಿಫಾಲ್ಟರ್ಸ್ ಆಗಿರುವುದರಿಂದ ಸಹಕಾರಿ ಚಳವಳಿ ಯಶಸ್ವಿಯಾಗಿಲ್ಲವಲ್ಲವೇ ?

ಶ್ರೀ ಬಿ. ಎಲ್. ಗೌಡ.—ಅದನ್ನು ಒಪ್ಪುವುದಕ್ಕಾಗುವುದಿಲ್ಲ.

Recruitment, of etc., Employees of M.S.R.T.C.

141. Sri SADASHIVAPPA PATIL (Deodurg).—

Will the Minister for Transport be pleased to state :—

(*a*) the policy and principles of the Mysore State Road Transport Corporation followed in respect of recruitment, re instatement and discharge of the employees of the Corporation ;

(*b*) whether the Mysore State Road Transport Corporation has set up any machinery to implement the said principles, policies as laid down by the Corporation ;

(*c*) whether it is the policy of the Corporation to appoint or reinstate those persons belonging to a particular community who have been discharged from service ;

(*d*) the number of employees of each community in the Mysore State Road Transport Corporation and the number of them reinstated or appointed within one year of their discharge (communitywise information may be given) ?

SRI H. C. BORAIAH (Deputy Minister for Transport).—

(*a*) The policies and principles are as follows:—

(*i*) *Recruitment*:

The policy of the Mysore State Road Transport Corporation is to recruit well qualified persons at various levels as per the Mysore State Road Transport Corporation Cadre and Recruitment Regulations.

(*ii*) *Discharge*:

Employees found guilty of misconduct are awarded different punishments depending on the nature of the offence, one of the punishments being discharge from service.

(*iii*) *Reinstatement*:

Aggrieved persons after being discharged from service prefer appeals and Appellate Authorities sometimes order reinstatement after considering the merits of individual cases.

(*b*) The Mysore State Road Transport Corporation Cadre and Recruitment Regulations govern the policy of recruitment. Various selection authorities have been specified in the said regulations for selecting candidates for recruitment. The qualifications required for each category of posts and the method of recruitment have been specified in the Regulations. Competent Authorities are prescribed separately for taking disciplinary action and Appellate Authorities are also prescribed for deciding appeals.

(*c*) No.

(*d*) Communitywise particulars are not maintained by the Corporation.

ಶ್ರೀ ಸದಾಶಿವಪ್ಪ ಪಾಟೀಲ್.—ಕೋಮುವಾರು ವಿವರಗಳನ್ನು ಕೇಳಿದರೆ ಅದನ್ನು ಸಂಸ್ಥೆಯವರು ಇಟ್ಟಿಲ್ಲ ಎಂದು ಹೇಳಿದ್ದಾರೆ. ನಾನು ಪ್ರಶ್ನೆಯನ್ನು ಕೇಳಿದ ಉದ್ದೇಶ ಸಾರ್ಥಕವಾಗಲಿಲ್ಲ.

ಅಧ್ಯಕ್ಷರು.—ಬೇರೆ ಪ್ರಶ್ನೆ ಏನಾದರೂ ಇದ್ದರೆ ಕೇಳಿ. ಆ ವಿವರ ಅವರ ಬಳಿ ಇಲ್ಲವೆಂದು ತಿಳಿಸಿದ್ದಾರೆ.

3-30 P.M.

ಶ್ರೀ ಸದಾಶಿವಪ್ಪ ಪಾಟೀಲ್.—"ಆ", ಗೆ ಉತ್ತರವಾಗಿ ದುರ್ವರ್ತನೆಯಿಂದ ತಪ್ಪಿತಸ್ಥರು ಎಂದು ಕಂಡು ಬಂದ ನೌಕರರನ್ನು ಕೆಲಸದಿಂದ ತೆಗೆದುಹಾಕುತ್ತೇವೆ ಎಂದು ಹೇಳುತ್ತೀರಿ. ಹಾಗೆ ತೆಗೆದುಹಾಕಿದ ಬಳಿಕ ಮೇಲ್ಮನವಿಯನ್ನು ಮಾಡಿಕೊಂಡಲ್ಲಿ ಅವರನ್ನು ರೀ ಇನ್‌ಸ್ಟೇಟ್ ಮಾಡುತ್ತೇವೆ ಎಂದು ತಿಳಿಸಲಾಗಿದೆ. ಮೇಲ್ಮನವಿಯನ್ನು ಪರಿಶೀಲನೆ ಮಾಡತಕ್ಕವರು ಯಾರು ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಚ್. ಸಿ. ಬೋರಯ್ಯ.—ಡೆಪ್ಯೂಟಿ ಜನರಲ್ ಮ್ಯಾನೇಜರು, ಡಿವಿಜನಲ್ ಕಂಟ್ರೋಲರು ಅಂತ ಇದ್ದಾರೆ. ಅವರೇನಾದರೂ ಶಿಕ್ಷೆ ವಿಧಿಸಿದರೆ ಜನರಲ್ ಮ್ಯಾನೇಜರಿಗೆ ಅಪೀಲು ಹಾಕಬಹುದು. ಅವರ ಮೇಲೆ ವೈಸ್ ಛೇರ್ಮನ್‌ರು ಇದ್ದಾರೆ. ಕಡೆಯಲ್ಲಿ ಮರ್ಸಿ ಸೆಕ್ಷನ್ ಅಂತ ಇದೆ ಆ ಪ್ರಕಾರ ಛೇರ್ಮನರಿಗೆ ಅಧಿಕಾರ ಇದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಡೆಪ್ಯೂಟಿ ಜನರಲ್ ಮ್ಯಾನೇಜರು ಮತ್ತು ಡಿವಿಜನಲ್ ಮ್ಯಾನೇಜರು, ವೈಸ್ ಛೇರ್ಮನ್‌ರವರು ಇವರೆಲ್ಲಾ ಮುಗಿದಮೇಲೆ ಛೇರ್ಮನ್‌ರಿಗೆ ಮರ್ಸಿ ತೋರಿಸ ತಕ್ಕ ಅಧಿಕಾರ ಇಟ್ಟಿದ್ದೀರಿ. ಛೇರ್ಮನರು ಎಷ್ಟು ಜನರನ್ನು ಆ ಪ್ರಕಾರ ರೀ ಇನ್‌ಸ್ಟೇಟ್ ಮಾಡಿದ್ದಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಚ್. ಸಿ. ಬೋರಯ್ಯ.–ಅದಕ್ಕೆ ಬೇರೆ ಪ್ರತ್ಯೇಕವಾಗಿ ಪ್ರಶ್ನೆ ಹಾಕಿದರೆ ತಿಳಿಸುತ್ತೇನೆ.

ಶ್ರೀ ಎಂ. ನಾಗಪ್ಪ.—ತಮ್ಮಲ್ಲಿರತಕ್ಕಂಥ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಮರ್ಸಿ ಪಿಟಿಷನ್ ಅನ್ನುವುದು ಯಾವುದೇ ಪ್ರಾವಿಜನ್‌ನಲ್ಲೂ ಇಲ್ಲ. ಛೇರ್ಮನ್‌ರು ಆ ತರಹದ ಒಂದು ಅಧಿಕಾರವನ್ನು ಉಪಯೋಗಿಸುತ್ತಾ ಇದ್ದಾರೆ. ರೀ ಇನ್‌ಸ್ಟೇಟ್ ಮಾಡಬೇಕಾದಂತಹ ಜನರಿಗೆ ತಮ್ಮ ನೋಟೀಸ್ ಹೋಗುವುದಕ್ಕೆ ಮೊದಲೇ ಅದನ್ನು ಕ್ಯಾನ್ಸಲ್ ಮಾಡುವುದಕ್ಕೆ ತಯಾರಾಗಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಹಾಗೆ ಕ್ಯಾನ್ಸಲ್ ಮಾಡುವುದಕ್ಕಾಗುವುದಿಲ್ಲ. ತಮಗೆ ಗೊತ್ತಿದ್ದ ಹಾಗೆ ಎಂ.ಎಸ್.ಆರ್.ಟಿ.ಸಿ. ಸ್ಟ್ಯಾಚ್ಯುಟರಿ ಬಾಡಿ. ಅದಕ್ಕೆ ಛೇರ್ಮನ್‌ರು ಹೈಯೆಸ್ಟ್ ಅಥಾರಿಟಿ, ಕೆಲವು ಸಂದರ್ಭದಲ್ಲಿ ಮರ್ಸಿ ತೋರಿಸುವುದಕ್ಕೆ ಯೋಗ್ಯವಾದ ಸಂದರ್ಭ ಇದೆ ಅಂತ ಅನ್ನುವುದು ಅವರಿಗೆ ಮನದಟ್ಟಾದರೆ ಮರ್ಸಿ ತೋರಿಸುತ್ತಾರೆ, ಅದಕ್ಕಾಗಿಯೇ ಒಂದು ಅವಕಾಶ ವನ್ನು ನಾವೇನೂ ಅವರಿಗೆ ಕಲ್ಪಿಸಿಕೊಟ್ಟಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಎಂ.ಎಸ್.ಆರ್.ಟಿ.ಸಿ. ನಲ್ಲಿ ಎಷ್ಟು ಜನರನ್ನು ಇದುವರೆಗೂ ಸಸ್‌ಪೆಂಡ್ ಮಾಡಿ ಇಟ್ಟಿದ್ದೀರಿ ? ಮತ್ತು ಯಾವ ಯಾವ ಡಿಪಾರ್ಟ್‌ಮೆಂಟಿನಲ್ಲಿ ಎಷ್ಟೆಷ್ಟು ಜನ ?

ಶ್ರೀ ಎಚ್. ಸಿ. ಬೋರಯ್ಯ.—ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ವಿವರಗಳನ್ನು ಒದಗಿಸುತ್ತೇನೆ.

Mr. SPEAKER.—Next question.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ನನಗೆ ಒಂದು ಉಪಪ್ರಶ್ನೆ ಕೇಳುವುದಕ್ಕೆ ಅವ ಕಾಶ ಕೊಡಿ.

Mr. SPEAKER.—No.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾನು ಇಷ್ಟು ಕೇಳಿದರೂ........

Mr. SPEAKER.—I do not allow. I have already called the next question.

ಶ್ರೀ ವಾಟಾಳ್ ನಾಗರಾಜ್.—ತಾವು ನನಗೆ ದಯವಿಟ್ಟು ಅವಕಾಶ ಕೊಡಲೇಬೇಕು......

ಅಧ್ಯಕ್ಷರು.—ಖಂಡಿತ ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾನು ಇಷ್ಟು ಹೊತ್ತಿಗೆ ಆ ಪ್ರಶ್ನೆಯನ್ನು ಹಾಕಿ ಮುಗಿಸುತ್ತಿದ್ದೆನು.......

ಅಧ್ಯಕ್ಷರು.—ನಾನು ಖಂಡಿತ ಅವಕಾಶ ಕೊಡುವುದಿಲ್ಲ. ಕಾರಣ ನಾನು ಬೇರೆ ಪ್ರಶ್ನೆಯನ್ನು ಕರೆದಿದ್ದೇನೆ.

Sri H. N. NANJE GOWDA.—In the first place I want to know whether the Chief Minister has got any correction made to my question ?

Mr. SPEAKER.—Whether the question has been corrected or not the Hon. Minister will tell you. Now the hon. Member will put the question.

Put your question.

Sri H. N. NANJE GOWDA.—My question was specific.

MR. SPEAKER.—The member may put his questions. Unless he puts question, how does supplementaries arise?

Utilisation of Full Share of Water in Cauvery Basin

157. Sri H. N. NANJE GOWDA (Arkalgud).—

Will the Chief Minister be pleased to state :—

(a) whether the Chief Minister made a statement in answer to a question on 11th September 1968 on the floor of the Legislative Council assuring that the State Government shall try to utilise the 'Full share' of waters in Cauvery Basin;

(b) if so, the full share of Mysore (including the share of water available due to the utilisation of water by Madras in gross violation of the 1924 agreement);

(c) the plans and estimates of the State Government to utilise this full share;

(d) the period within which the State Government would implement these plans?

Sri VEERENDRA PATIL (Chief Minister).—

(a) Yes.

(b) Projects to utilise the share of Mysore in Cauvery Basin are under investigation.

(c) The statement appended shows projects under construction.

(d) Depends on availability of funds.

STATEMENT

Showing the Projects under Construction in the Cauvery Valley.

Sl. No.	Name of the Project		Area in Acres	Utilisation in T.M.Cft.
1	2		3	4
1	Hemavathy Project Stage-I	...	1,00,000	22.00
2	Suvarnavathy Project	...	7,000	3.35
3	Harangi Project	...	75,000	19.20
4	Kabini Project	...	1,28,180	21.50
5	Mangala Project	...	1,950	0.44

Sri H. N. NANJEGOWDA.—My question is whether the Chief Minister had assured on the floor of the Council that the Mysore Government will try to utilise the full share of waters in Cauvery basin, and if so whether the full share has been utilised ?

Sri VEERENDRA PATIL.—The Hon. Members know what the agreement is. The utilisation under Scheduled Rivers will be as follows :

(1) Mysore is entitled to construct Krishnarajasagar to have an effective storage of 44.8 T. M. C. to irrigate 1,25,000 acres.

(2) Mysore can extend irrigation in the river channels above and below Krishnarajanagar by one-third of the area irrigated in 1910, extension being secured solely by improvement of duty, extension being considered separately under each channel.

(3) Mysore Government can also construct Reservoirs across Cauvery and its tributaries mentioned in Schedule 'A' of the 1892 Agreement of an effective capacity of 45 T. M. Cft. in the agreement.

(4) Should the Madras Government construct any new Reservoirs across, Government of Mysore shall be at liberty to construct as an offset a storage reservoir in addition to above, on one of the tributaries in Cauvery in Mysore of a capacity not exceeding 60 per cent of the new Reservoir in Madras.

Sri H. N. NANJE GOWDA.—I would like to know whether the Government assure to constitute two committees, one high-power committee to mobilise resources for construction of all these projects in the Cauvery Basin and other committee to examine the technical aspects of the problem ?

Sri VEERENDRA PATIL.—Yes. I have already stated that.

Old Rolling Mills of M. I. S. L.

206. Sri ABDUL KHUDDUS ANWAR (Bhadravathi).—

Will the Minister for Industry, Information and Publicity be pleased to state :—

(*a*) the quantity of steel rolled in old rolling mills of Mysore Iron and Steel Limited, Bhadravathi, since last 3 years (yearwise figures may be furnished);

(*b*) whether the stock verification report of last 3 years can be laid on the Table (yearwar figures to be furnished) ?

Sri M. RAJASEKHARA MURTHY (Minister for Industries, Information and Publicity).—

	Year.	Mts.
(a)	1965-66	26,150
	1966-67	29,670
	1967-68	22,474

(b) Copies of the stock verification reports for the years 1965-66, 1966-67 and 1967-68 are placed on the Table of the House.*

Sri ABDUL KHUDDUS ANWAR.—Does this Steel include production in old rolling mills also, Sir ?

† Sri M. RAJASEKHARA MURTHY.—I want notice for that.

Sri ABDUL KHUDDUS ANWAR.—May I know the reasons for the sudden fall in production from 29,000 in 1966-67 to 22,000 in 1967-68 ?

Sri M. RAJASEKHARA MURTHY.—The old rolling Mill had been closed for 62 days because it was overlapping with the construction of the new mill.

Sri ABDUL KHUDDUS ANWAR.—Is it not due to the appointment of the Industrial Officer who is paid a salary of Rs. 2,000 per month, Sir ?

Sri M. RAJASEKHARA MURTHY.—It is not correct.

Sri C. K. RAJAIAH SHETTY.—Is it not a fact that stocks to an extent of 40 lakhs of rupees of Steel ingots were lying idle because both the old and the new rolling mills did not have the capacity to roll to that extent, Sir?

Sri M. RAJASEKHARA MURTHY.—Now, it is moving, Sir.

Restoration of Tanks

223. Sri N. G. HALAPPA (Channagiri).—

Will the Minister for Public Works be pleased to state :—

(a) the names of tanks for which estimates have been prepared for restoration in Channagiri Taluk ;

(b) the estimated cost of restoration of such tanks in Channagiri Taluk and when the Government proposes to take up the restoration works ?

Sri D. PARAMESHWARAPPA (Deputy Minister for Major Irrigation and Electricity) [On behalf of SRI A. J. DODDAMETI (Minister of State for Minor Irrigation)].—

(a) *Vide* Statement appended.

---

*Copy placed in the Mysore Legislature Library.

(b) The estimated cost of such tanks is noted against each, in the statement appended.

Items 1 to 10 of the statement are approved by the Chief Engineer (General) for being taken up under scarcity Relief Works programme in Channagiri Taluk.

Items 11 and 12 are under execution under Scarcity Relief Work.

Items 13 to 16 would be considered for being taken up depending upon the feasibility of the projects and availability of funds.

STATEMENT

	Name of work	*Amount of Estimate*
		Rs.
1	Restoration of Nallur Doddakere Kasaba Hobli	94,400
2	Restoration of Mulkere of Ubrani Hobli	54,200
3	Restoration of Giriyannanakere of Hireuda Santhebennur Hobli.	31,000
4	Restoration of Basavanahalli Tank, Kasaba Hobli	19,000
5	Restoration of Singanabagee Seeneerinakere Basavapatna Hobli.	9,100
6	Restoration of Kamasagara Tank ...	19,700
7	Restoration of Swamineyenakatte of Mugalihalli Village, Ubrani Hobli.	10,000
8	Restoration of Kadanekatte tank Ubrani Hobli	7,000
9	Restoration of Haronahalli Balsokere Ubrani Hobli...	6,425
10	Restoration of Hanchinakatte Ubrani Hobli ...	7,500
	The above works are approved by the Chief Engineer (General) for being taken up under Scarcity Relief Works Programme in Channagiri Taluk.	
11	Restoration of Channapura Tank	13,500
12	Restoration of Honnebagi Doddakere	45,000
	These two works are under execution and they are also taken up under Scarcity Relief Works.	
13	Restoration of Mayagathinahalli Tank, Ubrani Hobli ...	6,000
14	Restoration of Hodikere Tank	65,000
15	Restoration of Mudigere Chikkanakere	72,000
16	Restoration of Bulsagar Gowdanakere and Construction of pick up and opening of a Feeder channel to it.	7,30,000

ಶ್ರೀ ಎನ್. ಜಿ. ಹಾಲಪ್ಪ.—ಪರಿಶಿಷ್ಟದಲ್ಲಿ ಕೊಟ್ಟಿರುವ ಹಾಗೆ ಕಸಬ ಹೋಬಳಿಯ ನಲ್ಲೂರು ದೊಡ್ಡಕೆರೆಯ ಜೀರ್ಣೋದ್ಧಾರದ ಕೆಲಸದ ಅಂದಾಜನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದರೂ ಇನ್ನೂ ಕೆಲಸ ಅಲ್ಲಿ ಷುರುವಾಗಿಲ್ಲ. 10 ವರ್ಷಗಳಿಂದಲೂ ಡಿಲೇ ಮಾಡುತ್ತಿದ್ದಾರೆ. ಆದಷ್ಟು ಜಾಗ್ರತೆ ಮಾಡಲು ಸಂಬಂಧಪಟ್ಟ ಇಲಾಖೆಗೆ ಆದೇಶವನ್ನು ಕೊಡುತ್ತೀರಾ ?

† **Sri D. PARAMESWARAPPA.**—Sir, there are about 16 proposals for construction of tanks, out of which 12 have already been sanctioned

V-31 N69
N69-25.6-10
(B)4857

and the works are being taken up. About 4 works are yet to be approved by Government and that is subject to the feasibility and availability of funds.

ಶ್ರೀ ಎನ್. ಜಿ. ಹಾಲಪ್ಪ.—ಬುರ್ರಾಗರಗೌಡನ ಕೆರೆಯು ಜೀರ್ಣೋದ್ಧಾರದ ಕೆಲಸಕ್ಕೆ ಅಂದಾಜು 7 ಲಕ್ಷ ಚಿಲ್ಲರೆ ರೂಪಾಯಿಗಳಷ್ಟು ಎಂದು ಹೇಳಿವೆ. ಅದನ್ನೂ ಕೂಡ ಮಾಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಶಾಂತಿಸಾಗರ ಕಾಲುವೆಯು ಕೆಲಸವನ್ನು ಆದಷ್ಟು ಜಾಗ್ರತೆ ಮಾಡಿಸುತ್ತೇವೆಂದು ಭರವಸೆ ಕೊಟ್ಟಿದ್ದರು. ಅದನ್ನೂ ಸಹ ಮಾಡಲಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಟಾಪ್ ಪ್ರಯಾರಿಟಿ ಮೇಲೆ ಈ ಕೆಲಸಗಳನ್ನು ಮಾಡಿಸುತ್ತೀರಾ ?

Sri D. PARAMESWARAPPA.—Sir, I have already stated that in respect of the remaining 4 tanks for which estimates have already been prepared, Government is yet to approve them and shortly they are going to be approved and works would be taken up after getting the approval.

Sri K. H. PATIL.—Sir, may I request the Chair to put this question No. 225 as it is very important one.

Mr. SPEAKER.—I shall consider it at the end of the question hour if the time is available.

Co-operative Societies for Production of Jaggery

258. **Sri K. P. NADAGOUDA** (Mudhol).—

Will the Minister for Development be pleased to state :—

(*a*) the number of Co-operative Societies established for the production of Jaggery in Mudhol Taluk and their aims and objects;

(*b*) the amount of Government Grants and loans given to such Societies;

(*c*) whether these societies are publishing their balance sheets every year as up to date. If not, the steps Government proposes to take against these societies ;

(*d*) whether the Secretaries of these Societies are misappropriating the amount received as rent for cane crushers which are owned by such societies ?

Sri P. M. NADGOUDA (Minister for Development).—

(*a*) Two.

The aims and objects of these societies among others, are the production of Jaggery and Khandsari out of Sugar-cane collected from members.

(*b*) No financial assistance or loan or subsidy has been sanctioned by Government to these Societies.

(*c*) These two societies are drawing up the statements like, receipts and disbursement for the year, a profit and loss account and

(SRI P. M. NADGOUDA)

balance sheet, as required under Rules every year. The accounts are audited annually by the Departmental Auditors and the audited balance sheets are available with the societies. In view of their meagre resources the societies have not been able to circulate printed balance sheets amongst the members. However, these statements of accounts are placed before their Annual General body meeting for their approval.

(*d*) No such instances have been noticed.

ಶ್ರೀ ಕೆ. ಪಿ. ನಾಡಗೌಡ.—ಈ ಸೊಸೈಟಿಗಳು ಯಾವ್ಯಾವ ಊರಿನಲ್ಲಿವೆ? ಒಂದೊಂದು ಸೊಸೈಟಿಯಲ್ಲಿ ಒಟ್ಟು ಬಂಡವಾಳ ಎಷ್ಟು ಇದೆ?

† ಶ್ರೀ ಪಿ. ಎಂ. ನಾಡಗೌಡ.—ಬೆಳಗಳಿಯಲ್ಲಿ ಕಬ್ಬಿನ ಬೆಲ್ಲದ ಸಂಘ ಇದೆ. ಮೆಂಬರುಗಳು 26. ಶ್ಯಾರ್ ಕ್ಯಾಪಿಟಲ್ 14,010 ರೂಪಾಯಿಗಳು.

ಶ್ರೀ ಕೆ. ಪಿ. ನಾಡಗೌಡ.—ಇದರಲ್ಲಿ ಸದಸ್ಯರಲ್ಲದೆ ಹೊರಗಡೆಯವರಿಗೆ ಕೂಡ ಬಾಡಿಗೆ ಕೊಟ್ಟು ಯಾರಾದರೂ ಬೆಲ್ಲ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಪಿ. ಎಂ. ನಾಡಗೌಡ.—ಅಲ್ಲಿ ಮೆಂಬರ್ಸ್ ಏನು ಇದ್ದಾರೆ, ಅವರು ಮಾಡಿಕೊಳ್ಳುತ್ತಿದ್ದಾರೆ.

Pick-ups in Tumkur Taluk

267. SRI B. P. GANGADHAR (Tumkur).—

Will the Minister for Public Works be pleased to state :—

(*a*) whether there has been a long agitation by the Public at large and the local M.L.A. for the Construction of Pick-ups at Nelhal, Swandenahalli, Chikkanaravangala and other places in Tumkur Taluk ;

(*b*) whether any estimates are prepared by the concerned authorities for the same ;

(*c*) if so, the number of works for which the plans and estimates are prepared ;

(*d*) if not, the reasons for not preparing them ;

(*e*) the action Government has taken in the matter regarding construction of Pick-ups ?

SRI D. PARAMESHWARAPPA (Deputy Minister for Major Irrigation and Electricity)[On behalf of SRI A. J. DODDAMETI (Minister of State for Minor Irrigation)].—

(*a*) Yes.

(*b*) and (*c*) Yes, for construction of Pick-ups near Swandenahalli and Sorekunte only.

(*d*) The proposal for construction of pick-ups near Chiknarvangala and Nelahala is under examination.

(*e*) Action is being taken to start the construction of Pick-up at Sorekunte. In respect of other works action will be taken to prepare plans and estimates.

Sri B. P. GANGADHAR.—In answer to (*d*) you have stated that the proposal for construction of pick-ups near Chiknarvangala and Nelahala is under examination. Now I am given to understand that the estimates have already been prepared and if so, when these works could be taken up for execution ?

†Sri D. PARAMESWARAPPA.—Sir, only two estimates is respect of construction of pick-ups near Swandenahally and Sorekunte are ready. So far as this Sorekunta pick-up is concerned the work was taken up because during 1967 October this was washed out and therefore there was urgency to take up this pick-up first and it is being attended to. So far as the other proposal is concerned it is being investigated. Immediately after investigation is over and estimates are prepared and sanctioned, works will be taken up on this pick-up.

Sri B. P. GANGADHAR.—Sir, I am telling you that the estimates have already been prepared and the feasibility of the work is also worked-out.

Sri D. PARAMESWARAPPA.—I have no information about that, Sir.

Sri B. P. GANGADHAR.—May I know if the estimates are prepared and plans are ready will the Government execute the work immediately?

Sri D. PARAMESWARAPPA.—Surely, Sir.

Mr. SPEAKER.—Next Question No. 269 by Mr. H. D. Deve Gowda.

Sri H. D. DEVE GOWDA.—Sir, I do not want to put the question.

ಅಧ್ಯಕ್ಷರು :—ಪ್ರಶ್ನೆ ನಂ. 290 ; ಮಾನ್ಯ ಸದಸ್ಯರು ಹಾಜರಿಲ್ಲ. ಈಗ ಪ್ರಶ್ನೆ ನಂ. 311.

Nationalised Bus Routes

311. Sri M. MALLAPPA (Birur).—

Will the Minister for Transport be pleased to state :—

(*a*) the number of bus routes nationalised in Chickmagalur District;

(*b*) the number of Government buses plying in the nationalised routes in Chickmagalur District ;

(*c*) the mileage nationalised in Chickmagalur District and the average monthly collection ;

(*d*) whether there is any proposal before the Government to take up the remaining routes in the Chickmagalur District ?

Sri H. C. BORAIAH (Deputy Minister for Transport).—

(*a*) 7 intra District routes and 3 road sections.

(*b*) The Mysore State Road Transport Corporation is operating 41 buses from its Chickmagalur Depot.

(*c*) The road mileage notified in Chickmagalur District is 144 miles and 6 furlongs. The average monthly collection at Chickmagalur Depot of Mysore State Road Transport Corporation is Rs. 3,02,554.

(*d*) No.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ರಾಷ್ಟ್ರೀಕರಣಗೊಳಿಸಲ್ಪಟ್ಟ ಮಾರ್ಗಗಳಲ್ಲಿ 41 ಬಸ್ಸುಗಳನ್ನು ಓಡಿಸುತ್ತಿದ್ದಾರೆಂದು ಹೇಳಿದ್ದಾರೆ. ಹಾಗಾದರೆ ಆ ಮಾರ್ಗದಲ್ಲಿ ಖಾಸಗೀ ಬಸ್ಸುಗಳನ್ನು ಎಷ್ಟು ಬಸ್ಸುಗಳನ್ನು ಓಡಿಸುತ್ತಿದ್ದಾರೆ ?

† ಶ್ರೀ ಎಚ್. ಸಿ. ಬೋರಯ್ಯ.—ಆ ವಿವರ ಈಗ ನನ್ನ ಮುಂದೆ ಇಲ್ಲ.

ಶ್ರೀ ಎಂ. ಮಲ್ಲಪ್ಪ.—ಈಗ ಸರ್ಕಾರದವರು ಬಸ್ ರೂಟನ್ನು ನ್ಯಾಷನಲೈಸ್ ಮಾಡಿರುವ ಕಡೆ 41 ಬಸ್ಸುಗಳನ್ನು ಮಾತ್ರ ಸರ್ಕಾರದವರು ಓಡಿಸುತ್ತಿದ್ದಾರೆ. ಅಲ್ಲಿ ಎಷ್ಟು ಬಸ್ಸುಗಳನ್ನು ಓಡಿಸಬೇಕೋ ಅಷ್ಟು ಬಸ್ಸುಗಳನ್ನು ಓಡಿಸದೇ ಇರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಈ ಬಗ್ಗೆ ಸಾರ್ವಜನಿಕರು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಈ ಬಗ್ಗೆ ಸಾರ್ವಜನಿಕರು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದರೆ ನಾವು ಖಂಡಿತಾ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಒಂದು ಜಿಲ್ಲೆಯಲ್ಲಿ ಒಂದಂಶವನ್ನು ರಾಷ್ಟ್ರೀಕರಣ ಮಾಡಿ ಉಳಿದದ್ದನ್ನು ಹಾಗೆಯೇ ಬಿಟ್ಟಿರುವುದರಿಂದ ಸರ್ಕಾರಿ ಬಸ್ಸುಗಳವರಿಗೂ, ಖಾಸಗೀ ಬಸ್‌ಗಳವರಿಗೂ ಪೈಪೋಟಿ ಬಂದು ಖಾಸಗಿಯವರು ಒಳ್ಳೆಯ ಹೆಸರನ್ನು ತೆಗೆದುಕೊಳ್ಳುವುದಕ್ಕೆ ಅದರಿಂದ ಅವಕಾಶವಾಗುವುದಿಲ್ಲವೇ ?

ಶ್ರೀ ಎಚ್. ಸಿ. ಬೋರಯ್ಯ.—ಅದು ಅಭಿಪ್ರಾಯದ ಮಾತಾಗುತ್ತದೆ. ಖಾಸಗೀ ಬಸ್‌ಗಳವರಿಗೂ, ಸರ್ಕಾರಿ ಬಸ್‌ಗಳವರಿಗೂ ಪೈಪೋಟಿ ಇದ್ದೇ ಇರುತ್ತದೆ.

ಶ್ರೀ ಎನ್. ಜಿ. ಹಾಲಪ್ಪ.—ತಾವು ನ್ಯಾಷನಲೈಜ್ ಮಾಡಿರುವ ರೂಟುಗಳಲ್ಲಿ ರಾತ್ರಿ ಹೊತ್ತು ಖಾಸಗೀ ಬಸ್‌ನವರು ಶಿವಮೊಗ್ಗದಿಂದ ಬೆಂಗಳೂರಿಗೆ ಬಸ್ಸನ್ನು ಓಡಿಸುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಆ ರೀತಿ ಬಸ್ಸುಗಳನ್ನು ಅವರು ಓಡಿಸುತ್ತಿದ್ದಾರೆಂದು ತಿಳಿದು ಬಂದಿದೆ. ಅತ್ತ ಕಡೆ ಮೋಟಾರ್ ಇಲಾಖೆಯವರು ಗಮನ ಕೊಡುತ್ತಾರೆ.

ಶ್ರೀ ಕೆ. ಎಂ. ತಮ್ಮಯ್ಯ.—ಬಸ್ ರೂಟುಗಳು ರಾಷ್ಟ್ರೀಕರಣ ಆದನಂತರ, ರೂಟುಗಳಲ್ಲಿ ಬಸ್ಸುಗಳನ್ನು ಬಿಡುವಾಗ ಹಿಂದೆ ಖಾಸಗಿಯವರು ಬಸ್ಸುಗಳನ್ನು ಬಿಡುತ್ತಿದ್ದ ವೇಳೆಯನ್ನು ಗಮನಿಸಿ ಸರ್ಕಾರದವರು ಬಸ್ಸನ್ನು ಬಿಡುತ್ತಿದ್ದಾರೆಯೇ ಅಥವಾ ಹಾಗೆಯೇ ಬಿಡುತ್ತಿದ್ದಾರೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಅಲ್ಲಿ ಬಸ್ಸುಗಳನ್ನು ಬಿಡುವಾಗ ಎಲ್ಲಾ ಕಡೆಗಳಲ್ಲೂ ಯಾವ ಯಾವ ವೇಳೆಯಲ್ಲಿ ಬಿಡಬೇಕೆಂಬ ಸಂಬಂಧದಲ್ಲಿ ಒಂದು ತೀರ್ಮಾನವನ್ನು ಕೈಗೊಳ್ಳಬೇಕೆಂದು ಗಮನದಲ್ಲಿಟ್ಟುಕೊಂಡು ನಮ್ಮ ಇಲಾಖೆಯವರು ತೀರ್ಮಾನ ಮಾಡಿದ್ದಾರೆ.

ಶ್ರೀ ಎಂ. ಎನ್. ರಾಮಣ್ಣ.—ಬಸ್‌ರೂಟುಗಳು ರಾಷ್ಟ್ರೀಕರಣವಾದ ಮೇಲೆ ಸಾರ್ವಜನಿಕರಿಗೆ ಬಹಳ ಕಷ್ಟವಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಅಲ್ಲಲ್ಲೇ ಆ ರೀತಿ ಅಕಸ್ಮಾತ್ತಾಗಿ ತೊಂದರೆಗಳಾಗಿರುವುದು ಸರ್ಕಾರದ ಗಮನಕ್ಕೆ ಬರುತ್ತಿದೆ.

ಶ್ರೀಮತಿ ಕೆ. ಲೀಲಾವತಿ ರೈ.—ಸ್ವಾಮಿ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈಗ ಕೆಲವು ಅಂಶ ರಾಷ್ಟ್ರೀಕರಣ ಮಾಡಿದ್ದಾರೆ. ಹಿಂದೆ ಆ ರೂಟುಗಳಲ್ಲಿ ಬಸ್ಸುಗಳನ್ನು ಓಡಿಸುತ್ತಿದ್ದ ಖಾಸಗೀ ಮಾಲೀಕರ ಹತ್ತಿರ ಇದ್ದ ಕೆಲಸಗಾರರು ನಿರುದ್ಯೋಗಿಗಳಾಗಿದ್ದಾರೆ. ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವ ಅಭಿಪ್ರಾಯ ಇದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಈಗ ಆ ರೀತಿ ಕೆಲಸವನ್ನು ಕಳೆದುಕೊಂಡವರಿಗೆ ಸ್ವಲ್ಪ ಅನುಕೂಲ ಮಾಡಬೇಕೆಂಬ ದೃಷ್ಟಿಯಿಂದ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ಸ್ವಲ್ಪ ಬದಲಾವಣೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅದು ಆದಮೇಲೆ ಮತ್ತೆ ಆ ಕೆಲಸಗಳಿಗೆ ಅಪ್ಲಿಕೇಷನ್ ಕಾಲ್ ಫಾರ್ ಮಾಡುತ್ತಾರೆ. ಆಗ ವಜಾ ಆಗಿರುವ ನೌಕರರು ಅಪ್ಲಿಕೇಷನ್ ಹಾಕಿಕೊಂಡರೆ ರೂಲ್ಸ್ ಪ್ರಕಾರ ಯಾರು ಯಾರಿಗೆ ಅರ್ಹತೆ ಇರುತ್ತದೆಯೋ ಅಂಥವರನ್ನು ಎಂ. ಎಸ್. ಆರ್. ಟಿ.ಸಿ.ಯವರು ನೇಮಕ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಶಿವಮೊಗ್ಗಾದಿಂದ ಬೆಂಗಳೂರಿಗೆ, ಮಂಗಳೂರಿಂದ ಬೆಂಗಳೂರಿಗೆ ಹೀಗೆ ಇನ್ನೂ ಬೇರೆ ಬೇರೆ ಕಡೆಗಳಲ್ಲಿ ರಾಷ್ಟ್ರೀಕರಣ ಮಾಡಿರತಕ್ಕ ರೂಟುಗಳಲ್ಲಿ ರಾತ್ರಿ ಹೊತ್ತು ಸಾಮಾನ್ಯ ಮತ್ತು ಲಕ್ಷುರಿ ಬಸ್ಸುಗಳನ್ನು ಓಡಿಸಲು ಖಾಸಗೀಯವರಿಗೆ ಕೆಲವರಿಗೆ ಮಂತ್ರಿಗಳ ಮಟ್ಟದಲ್ಲಿ ಲೈಸನ್ಸ್ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ, ಮತ್ತು ಆ ರೀತಿ ರಾತ್ರಿ ಹೊತ್ತು ಬಸ್ಸು ಓಡಿಸುತ್ತಿರುವವರ ಸಂಬಂಧದಲ್ಲಿ ಎಂ.ಎಸ್.ಆರ್.ಟಿ.ಸಿ.ಯವರು ಹೈಕೋರ್ಟಿಗೆ ರಿಟ್ ಹಾಕಿದ್ದಾರೆಂದು ಗೊತ್ತಾಗಿದೆ. ಆ ರೀತಿ ಬಸ್ಸುಗಳನ್ನು ಓಡಿಸಲು ಯಾರು ಯಾರಿಗೆ ಪ್ರೈವೇಟ್ ಆಪರೇಟರ್ಸ್‌ಗೆ ಲೈಸೆನ್ಸ್ ಕೊಡಲಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ತಮಗೆ ಈ ವಿವರಗಳು ಬೇಕಾದರೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ತರಿಸಿಕೊಡುತ್ತೇನೆ. ಮಂತ್ರಿಗಳ ಮಟ್ಟದಲ್ಲಿ ಕೆಲವರಿಗೆ ಲಕ್ಷುರಿ ಬಸ್‌ಗಳನ್ನು ರಾತ್ರಿ ಕಾಲದಲ್ಲಿ ಓಡಿಸಲು ಲೈಸನ್ಸ್ ಕೊಡಲಾಗಿದೆ ಎಂಬುದನ್ನು ನಾನು ಒಪ್ಪುವುದಿಲ್ಲ. ಅದನ್ನು ನಾನು ವಿರೋಧ ಮಾಡುತ್ತೇನೆ. ಲೈಸನ್ಸ್ ಕೊಡುವ ವಿಚಾರ ಆರ್.ಟಿ.ಎ. ಮತ್ತು ಎಸ್.ಟಿ.ಎ. ಗಳಿಗೆ ಸಂಬಂಧಪಟ್ಟಿದ್ದು. ಮಂತ್ರಿಗಳಿಗೆ ಸಂಬಂಧಪಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದ ಮಟ್ಟದಲ್ಲಿ ಕೆಲವರಿಗೆ ರಾತ್ರಿ ಕಾಲದಲ್ಲಿ ಲಕ್ಷುರಿ ಬಸ್‌ಗಳನ್ನು ಓಡಿಸಲು ಸ್ಪೆಷಲ್ ಪರ್ಮಿಟ್ ಕೊಟ್ಟಿರುವ ಬಗ್ಗೆ ಎಂ.ಎಸ್.ಆರ್.ಟಿ.ಸಿ. ಅವರು ಹೈಕೋರ್ಟಿನಲ್ಲಿ ರಿಟ್ ಹಾಕಿರುವ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಈಗಾಗಲೇ ತಿಳಿಸಿದ್ದೇನೆ. ನನಗೆ ನೋಟೀಸ್ ಬೇಕು. ಮತ್ತು ಮಂತ್ರಿಗಳಿಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಬಸ್ ರೂಟ್‌ಗಳನ್ನು ರಾಷ್ಟ್ರೀಕರಣ ಮಾಡಿ, ಶೃಂಗೇರಿ ಮತ್ತು ಆಗುಂಬೆ ಪ್ರದೇಶಗಳಲ್ಲಿ ರಾಷ್ಟ್ರೀಕರಣ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರಗಳು ಇಲ್ಲ. ಯಾವ ಯಾವ ರೂಟ್‌ಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಎಂ.ಎಸ್.ಆರ್.ಟಿ.ಸಿ.ಯವರು ತೀರ್ಮಾನ ತೆಗೆದುಕೊಂಡು ಸರ್ಕಾರಕ್ಕೆ ತಿಳಿಸುತ್ತಾರೆ. ಅದನ್ನು ನಾವು ಕಾರ್ಯಗತ ಮಾಡುತ್ತೇವೆ ಅಥವಾ ಅನುಷ್ಠಾನಕ್ಕೆ ತರುತ್ತೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಈ ಜಿಲ್ಲೆಗಳಲ್ಲಿ ಬಸ್ ರಾಷ್ಟ್ರೀಕರಣ ಮಾಡಲು ಏನು ಹಣ ಖರ್ಚು ಮಾಡಿದ್ದೀರಿ, ಅದೇ ಹಣದಲ್ಲಿ ಶೃಂಗೇರಿ ಮತ್ತು ಆಗುಂಬೆ ಪ್ರದೇಶಗಳಲ್ಲಿಯೂ ಬಸ್ ರಾಷ್ಟ್ರೀಕರಣ ಮಾಡುವುದಕ್ಕೆ ಪ್ರಯತ್ನ ಮಾಡಿದ್ದರೆ ಹೆಚ್ಚಿನ ಉತ್ಪತ್ತಿ ಸರ್ಕಾರಕ್ಕೆ ಬರುತ್ತಿರಲಿಲ್ಲವೆ?

ಶ್ರೀ ಎಚ್. ಸಿ. ಬೋರಯ್ಯ.—ಯೋಜನೆ ತಯಾರು ಮಾಡುವ ಕಾಲಕ್ಕೆ ಏನು ತೀರ್ಮಾನ ತೆಗೆದುಕೊಂಡಿದ್ದರು ಎಂಬ ವಿವರಗಳು ಈಗ ನನ್ನಲ್ಲಿ ಇಲ್ಲ.

ಶ್ರೀ ಎನ್. ಲೋಕಯ್ಯ ನಾಯಕ್.—ಅನೇಕ ಸರ್ಕಾರಿ ಬಸ್‌ಗಳಲ್ಲಿ ಪ್ರಥಮ ಚಿಕಿತ್ಸೆಯ ಪೆಟ್ಟಿಗೆ ಇರುತ್ತದೆ. ಆದರೆ ಔಷಧಗಳೇ ಇರುವುದಿಲ್ಲ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿ. ಬೋರಯ್ಯ.—ಪ್ರಥಮ ಚಿಕಿತ್ಸೆಯ ಪೆಟ್ಟಿಗೆ ಇದ್ದಮೇಲೆ ಔಷಧವೂ ಇರುತ್ತದೆಂದು ತಾವು ಭಾವಿಸಬೇಕು. ಔಷಧ ಇಲ್ಲದಿರುವ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ ಮತ್ತು ಔಷಧ ಇಡುವುದಕ್ಕೆ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಕೇಡರ್ ಅಂಡ್ ರೆಕ್ರೂಟ್‌ಮೆಂಟನ್ನು ಸಡಿಲ ಮಾಡಿದ್ದೇವೆಂದು ಈಗ ಉತ್ತರ ಕೊಟ್ಟಿದ್ದೀರಿ. ಎಷ್ಟರಮಟ್ಟಿಗೆ ಸಡಿಲ ಮಾಡಿದ್ದೀರಿ ಮತ್ತು ಆದ್ದರಿಂದ ಖಾಸಗೀ ಬಸ್ ಮಾಲೀಕರ ಬಳಿ ಇದ್ದಂಥವರಿಗೆ 'ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಇದಕ್ಕೆ ಸ್ವಲ್ಪ ವಿವರ ಬೇಕಾಗಿರುವುದರಿಂದ ತಾವು ಬೇರೆ ಪ್ರಶ್ನೆ ಹಾಕಬೇಕಾಗುತ್ತದೆ.

4-00 P.M.

Harijan Girijan House Building Co-operative Societies

321. Sri G. DUGGAPPA (Bharamasagara).—

Will the Minister for Development be pleased to state :—

(*a*) the number of Harijan Girijan House Building Co-operative Societies now working in the State ;

(*b*) the total number of applications forwarded to Government by these Societies for grant of loans ;

(*c*) the number of applications which were granted loan and the total amount of loan sanctioned for all the Societies (Talukwise figures for the last three years may kindly be furnished) ?

Sri B. L. GOWDA (Deputy Minister for Co-operation).—

(*a*) 294.

(*b*) None.

(*c*) 17,315. . Rupees 3.40 Crores respectively. *Vide* statement placed on the Table of the House.*

ಶ್ರೀ ಜಿ. ದುಗ್ಗಪ್ಪ.—ಈ ಸೊಸೈಟಿಗಳ ಮೂಲಕ ಎಷ್ಟು ಅರ್ಜಿಗಳು ಬಂದಿದ್ದವು ಮತ್ತು ಎಷ್ಟು ಸಾಲ ಕೊಟ್ಟು ಎಷ್ಟು ಮನೆಗಳನ್ನು ಮಾಡಬೇಕು ಎಂದು ಯೋಚನೆ ಮಾಡಿದ್ದೀರಿ ?

†ಶ್ರೀ ಬಿ. ಎಲ್. ಗೌಡ.—17,315 ಅರ್ಜಿಗಳು ಬಂದಿದ್ದವು. ಇದಕ್ಕಾಗಿ ಸುಮಾರು 3.40 ಲಕ್ಷ ಹಣ ಮಂಜೂರಾಗಿತ್ತು. ಇದರಲ್ಲಿ ಎರಡು ಸಾವಿರ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಇನ್ನುಳಿದುವನ್ನೂ ವಿಲೇವಾರಿ ಮಾಡುವುದರಲ್ಲಿದ್ದೇವೆ.

ಶ್ರೀ ಎಸ್. ಎಸ್. ಅರಕೇರಿ.—115 ಅರ್ಜಿಗಳಿಗಾಗಿ ಸುಮಾರು 3.40 ಲಕ್ಷ ಕೊಟ್ಟಿದೆ ಎಂದು ಹೇಳಿದರು. ಆದರೆ ಡೆವಲಪ್‌ಮೆಂಟ್ ಕಮಿಷನರವರು ಇಂತಹ ಹರಿಜನರ ಮನೆಗಳನ್ನು ಕಟ್ಟಲು ಬೇಕಾಗುವ ಎರಡನೇ ಇನ್‌ಸ್ಟಾಲುಮೆಂಟನ್ನು ಇನ್ನೂ ರಿಲೀಸು ಮಾಡದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದನ್ನು ಯಾವಾಗ ರಿಲೀಸು ಮಾಡುತ್ತೀರಿ ?

---

* Copy placed in the Mysore Legislature Library.

ಶ್ರೀ ಬಿ. ಎಲ್. ಗೌಡ.—ಇದರಲ್ಲಿ ಮನೆ ಕಟ್ಟುವಾಗ ಮೊದಲಿಗೆ ಶೇಕಡಾ 20ರಷ್ಟು ಕೊಡುತ್ತೇವೆ, ಆಮೇಲೆ ಬುನಾದಿಯಾದ ಮೇಲೆ ಶೇಕಡಾ 20ರಷ್ಟು ಆಮೇಲೆ ರೂಫ್ ಲೆವೆಲ್‌ವರೆಗೆ ಬಂದಾಗ ಶೇಕಡಾ 40ರಷ್ಟು ಸಾಲ ಕೊಡಲಾಗುತ್ತದೆ. ಇದರಲ್ಲಿ ಯಾರಿಗೂ ಹಣದ ತೊಂದರೆ ಯಾಗಿಲ್ಲ.

ಶ್ರೀ ಎಂ.ಹೆಚ್. ಜಯಪ್ರಕಾಶನಾರಾಯಣ್.—ಎಲ್.ಐ.ಸಿ. ಮೂಲಕ ಸುಮಾರು 3.4 ಕೋಟಿ ಯಷ್ಟು ಸಾಲ ಪಡೆದು 15 ಸಾವಿರ ಮನೆಗಳನ್ನು ಕಟ್ಟಬೇಕೆಂದು ನಿರ್ಣಯ ಮಾಡಿರಲಿಲ್ಲವೆ? ಹಾಗಿದ್ದರೆ ಎಷ್ಟು ಅರ್ಜಿಗಳು ಮನೆಗಳಿಗಾಗಿ ಬಂದಿದ್ದವು ಮತ್ತು ಎಷ್ಟು ಅರ್ಜಿಗಳು ಕೊಳೆಯುತ್ತಿವೆ?

ಶ್ರೀ ಬಿ. ಎಲ್. ಗೌಡ.—17.315 ಅರ್ಜಿಗಳು ಬಂದವು. ಇವುಗಳಲ್ಲಿ 8,000 ಅರ್ಜಿಗಳು ಮಂಜೂರಾಗಿವೆ ಇನ್ನು ಯಾವ ಅರ್ಜಿಗಳೂ ಕೊಳೆಯುತ್ತಿಲ್ಲ. ಇದು ಸತ್ಯಕ್ಕೆ ದೂರವಾದ ಮಾತು. ಇನ್ನೂ ಎರಡು ಸಾವಿರ ಅರ್ಜಿಗಳು ಪರಿಶೀಲನೆಯಲ್ಲಿವೆ.

Removal of Sales Tax on Foodgrains

341. Smt. WINNIFRED F. FERNANDES (Coondapur).—

Will the Minister for Finance, Planning and Youth Welfare be pleased to state :—

(a) whether Sales Tax was introduced, mainly to make up the loss of revenue due to the introduction of prohibition in this State ;

(b) whether there is any proposal to abolish levy of sales tax on all foodgrains, foodstuffs and the hotel business in view of the increased revenue that Government is getting from relaxation of prohibition policy ?

Sri RAMAKRISHNA HEGDE (Minister for Finance, Planning and Youth Welfare).—

(a) No.

(b) No.

Smt. WINNIFRED F. FERNANDES.—Is it not a fact that this sales tax was introduced soon after prohibition came into force ?

† Sri RAMAKRISHNA HEGDE.—Whether it was introduced after the prohibition was brought into force or not, it has nothing to do with the abolition of prohibition. Sales tax is prevalent all over the world where prohibition has been introduced.

Smt. WINNIFRED F. FERNANDES.—Has it not come to the notice of the Government that the levy of sales tax on foodstuffs is an extra burden to the common man and the poorer class ?

Sri RAMAKRISHNA HEGDE.—It cannot be considered as an extra burden as such. Even supposing sales tax is removed in respect of certain items, there is no guarantee that the prices of those items will fall down.

Mr. SPEAKER.—Question Hour is over.

QUESTIONS FOR ANSWERS ON THE DAY

(but not taken up)

Tourist Centre in Venoor

104. Sri RATNAKUMAR KATTEMAR (Mudabidri).—

Will the Minister for Transport be pleased to state :—

(*a*) whether there was a proposal to establish a Tourist Centre in Venoor of South Kanara District and the same was dropped ; if so, the reasons for dropping the proposal ;

(*b*) whether the proposal was dropped because the question of Moodabidri was raised and that for another two years, no funds are available for developing Tourist Centre ;

(*c*) whether the Government has proposed to form a 'Tourist Centre' at Maravanthe, on the coastal side in South Kanara ;

(*d*) whether they have received any representation with regard to the proposed 'Tourist Centre' at Venoor ?

Sri MOHAMED ALI (Minister for Transport).—

(*a*) No.

(*b*) Does not arise in view of reply to clause (*a*).

(*c*) Yes.

(*d*) Yes.

Pending Cases in Belgaum Court

151. Sri B. B. SAYANAK (Belgaum).—

Will the Minister for Law, Labour and Parliamentary Affairs be pleased to state :—

(*a*) the number of civil appeal, special suits and special darkast that are pending in Belgaum Court since 1st November 1967 to 1st December 1968 ;

(*b*) the number of them disposed off during this period ;

(*c*) whether there is any proposal before Government to appoint one more Civil Judge in Belgaum ?

Sri K. PUTTASWAMY (Minister for Law, Labour and Parliamentary Affairs).—

(*a*) and (*b*) *Vide* statement appended.

(*c*) Yes.

STATEMENT

Showing of monthwise institutions and disposals of Civil Appeals, Special Suits and Special Darkhasts during the period from 1st November 1967 to 1st December 1968 pertaining to the Court of the Civil Judge, Belgaum as per Letter No. R.O.C. 4099/68-CB, dated 23rd December 1968 of the High Court of Mysore, Bangalore.

Category of Cases		Pending at the beginning of the month.	Institution during the month.	Disposals during the month.	Pending at the end of the month.
1		2	3	4	5
November 1967					
Civil Appeals	...	1,834	47	5	1,875
Special Suits	...	233	8	2	239
Special Darkhasts	...	290	2	6	286
December 1967					
Civil Appeals	...	1,876	46	9	1,913
Special Suits	...	239	13	1	251
Special Darkhasts	...	286	1	10	277
January 1968					
Civil Appeals	...	1,913	49	17	1,945
Special Suits	...	251	10	5	256
Special Darkhasts	...	277	7	10	274
February 1968					
Civil Appeals (Regular)	...	1,945	55	21	1,979
Original Suits	...	256	14	1	269
Execution Cases	...	274	34	9	299
March 1968					
Regular Appeals	...	1,979	48	21	2,006
Original Suits	...	269	9	...	278
Execution Cases	...	299	8	6	301

(SRI K. PUTTASWAMY)

1		2	3	4	5
	April 1968				
Regular Appeals	...	2,006	38	18	2,026
Original Suits	...	278	14	7	285
Execution Cases	...	301	6	6	301
	May 1968				
Regular Appeals	...	2,026	35	2	2,059
Original Suits	...	285	3	...	288
Execution Cases	...	301	1	4	298
	June 1968				
Regular Appeals	...	2,059	65	27	2,097
Original Suits	...	288	12	7	293
Execution Cases	...	298	6	10	294
	July 1968				
Regular Appeals	...	2,097	24	44	2,077
Original Suits	...	293	17	8	302
Execution Cases	...	294	8	10	292
	August 1968				
Regular Appeals	...	2,077	39	22	2,094
Original Suits	...	302	16	1	317
Execution Cases	...	292	7	7	292
	September 1968				
Regular Appeals	...	2,094	42	28	2,108
Original Suit	...	317	8	5	320
Execution Cases	...	292	16	12	296
	October 1968				
Regular Appeals	...	2,108	46	33	2,121
Original Suits	...	320	13	8	325
Execution Cases	...	296	6	9	293
	November 1968				
Regular Appeals	...	2,121	40	19	2,142
Original Suits	...	325	17	7	335
Execution Cases	...	293	9	9	293

Industrial Disputes

185. Sri M. S. KRISHNAN (Malleswaram).—

Will the Minister for Law, Labour and Parliamentary Affairs be pleased to state :—

(*a*) the total number of industrial disputes referred to adjudication and rejected for reference (separate figures since 1st April 1966 to 31st March 1968 for each year for Labour Court, Industrial Tribunal and Additional Industrial Tribunal to be given) ;

(*b*) out of the above (i) the number of disputes which have been rejected (yearwise) (ii) referred to adjudication and (iii) the cases wherein the Commissioner of Labour has recommended for reference ;

(*c*) reasons if any, for rejection ?

Sri K. PUTTASWAMY (Minister for Law, Labour and Parliamentary Affairs).—

		Referred	*Rjctd.*
(*a*)	Industrial Tribunal, Bangalore	243	514
	Additional Industrial Tribunal, Bangalore	97	
	Labour Court, Bangalore	248	
	Labour Court, Hubli	213	

(*b*)		*1966–67*	*1967–68*
	(i)	171	343
	(ii)	449	352

(iii) It is not in public interest to disclose this information as the recommendation of the Commissioner of Labour is confidential.

(*c*) Reasons have been assigned in each case though an endorsement issued to parties.

Famine Relief Works

225. Sri S. S. ARAKERI (Balloli).—

Will the Minister for Revenue be pleased to state :—

(*a*) the total amount sanctioned for famine relief works to Belgaum Division during the year 1967–68 (Districtwise figures may be furnished) ;

(SRI S. S. ARAKERI)

(b) the total amount spent for famine relief works in all taluks of Bijapur District during the year 1967-68 (separate figures of amounts and number of works taken in each taluk to be furnished);

(c) whether Government propose to continue scarcity relief works till the end of February, 1969 ;

(d) if not, the reasons ?

SRI H. V. KOUJALGI (Minister for Revenue).—

(a) Belgaum	...	Rs. 2,43,192
Bijapur	...	Rs. 6,22,400
Dharwar	...	Rs. 10,06,000
		Rs. 18,71,592

(b) *Taluks*		*Amount Spent*	*No. of works taken up*
		Rs.	
1. Bijapur	...	1,98,712	38
2. Bagewadi	...	47,315	14
3. Bagalkot	...	3,926	5
4. Badami	...	1,320	3
5. Jamkhandi	...	4,884	2
6. Mudhol	...	8,340	2
Total		2,64,497	64

(c) No fresh works will be taken but sanctioned works which are in progress will be continued till they are brought to a safe stage, to the extent permitted by the availability of funds.

(d) In view of the improvement in the seasonal conditions to some extent, there is no need to continue relief works on a large scale now.

Irrigation Projects

285. SRI D. M. SIDDAIAH (Biligere).—

Will the Chief Minister be pleased to state :—

(a) the number of Irrigation Projects that are undertaken by the Centre as national projects in our State ;

(b) whether Government have urged upon the Centre to take up any one of our projects as National rojects and if so, the reaction of the Centre towards such a move ?

Sri VEERENDRA PATIL (Chief Minister).—

(a) None.

(b) The Government of India was requested to consider taking up of Upper-Krishna Project as a Central Project. This has not been accepted by the Government of India.

Minor Irrigation Schemes

290. Sri P. B. NANDIHALI (Uchgaon).—

Will the Minister of State for Minor Irrigation be pleased to state:—

(a) whether Government is aware that there is a great necessity for the irrigation schemes in the following villages in Belgaum Taluk :

(1) Bekinkere
(2) Atiwad
(3) Karale
(4) Bahaddarwadi
(5) Kinage
(6) Ranakundage
(7) Basurti
(8) Desur
(9) Khadarwadi
(10) Kangrali (Budruk) (Lift Irrigation) ;

(b) the action taken to complete the scheme in each village ?

Sri A. J. DODDAMETI (Minister of State for Minor Irrigation).—

(a) Yes, but only during failure of rains.

(b) The construction of Bandhara near Kinage has been completed. Construction of Tanks at (i) Karle (ii) Desur are found to be not feasible.

The remaining works are under examination.

Purchase of Sugar in Open Market

306. Sri G. T. GOVINDA REDDY (Madhugiri).—

Will the Minister of State for Food and Civil Supplies be pleased to state :—

(a) the total quantity of sugar purchased in the open market by the State Government during the year 1967 ;

(b) the rate at which the sugar was purchased ;

(c) the quantity of sugar sold up till now ;

(d) the quantity of sugar remaining ?

Sri B. VITHALDAS SHETTY (Minister of State for Food and Civil Supplies).—

(a) Nil.

(b) to (d) Does not arise.

Information Centre Building at Nittur

349. Sri PRABHURAO JAGADALE (Hulsoor).—

Will the Minister for Industries, Information and Publicity be pleased to state :—

(a) the stage of consideration and sanction of Information Centre Building to village Nittur, Taluk Bhalki, Bidar District ;

(b) the steps taken by Government to expedite its early consideration ?

Sri M. RAJASEKHARA MURTHY (Minister for Industries, Information and Publicity).—

(a) There is no proposal to open an Information Centre at Nittur.

(b) Does not arise in view of reply to clause (a).

Request for taking up left over questions on the next day

Sri S. S. ARAKERI.—Sir, my held-over question may please be taken up.

Mr. SPEAKER.—I have not held-over any question. I only said that if time permits, I will consider.

Sri K. H. PATIL.—Sir, the question is important and the hon. Member may be allowed to put his question.

Mr. SPEAKER.—All the answers and questions will go on record whether oral answers are given on the floor of the House or not. The hon. Member should have been present when I called the Question.

Sri M. NAGAPPA (Raichur).—Sir, the Question Hour actually started at 3.15 P.M. The Question Hour is fixed for one hour. Therefore, five minutes are still there. Hon. Chair was kind enough to extend the time by another five minutes. So, it should continue up to 4-20. P.M. Question Hour is not over.

Mr. SPEAKER.—Since I have already stated that Question Hour is over.........

Sri M. NAGAPPA.—Sir, I suggest that at least these two Questions may be held over for tomorrow.

Mr. SPEAKER.—Question No. 375 and 418 will be taken up tomorrow. Question No. 431 by Sri K. H. Ranganath is also held over.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಸ್ವಾಮಿ ನಿನ್ನೆ ದಿವಸ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿದ್ದೇನೆ. ಅದು ಆರೋಗ್ಯ ಇಲಾಖೆಯ ಉಪಮಂತ್ರಿಗಳ ವಿರುದ್ಧವಾಗಿ ಕಳುಹಿಸಿದ್ದೇನೆ.

Request for early announcement of reserved rulings

Mr. SPEAKER.—Due to rush of work I have not been able to bestow my thought upon it. The hon. member may meet me in my Chamber. I shall discuss the matter with him and give my Ruling tomorrow.

Sri M. NAGAPPA.—I have also moved another motion against the same Minister.

Mr. SPEAKER.—The hon. Members may please meet me in my Chamber to discuss the matter.

Sri D. B. KALMANKAR (Aland).—Sir, the other day you had stated that you would give a Ruling regarding the seating arrangement. That Ruling may be given, Sir.

Mr. SPEAKER.—I shall give my Ruling on this issue tomorrow.

Notice of breach of Privilege against Sri S. Nijalingappa

Sri K. H. PATIL (Hubli).—Sir, I have given a notice of breach of privilege against Sri S. Nijalingappa, a member of this House. I have presented the notice yesterday. I quite appreciate that today we are in the midst of heavy work and the Chair had no time to look into it. It may be taken up tomorrow.

Mr. SPEAKER.—The matter had come to me, and I have asked my office to request the hon'ble Member to meet me in my Chamber.

Report of the Rules Committee

Presentation

Mr. SPEAKER.—I beg to present the Report of the Rules Committee. The report will be circulated amongst the hon'ble Members now.

Motion of thanks to the Governor's Address

Dedate Continued

† ಶ್ರೀ ಚುರ್ಚಿಹಾಳಮಠ (ಮುಂಡರಗಿ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು 13ನೇ ತಾರೀಖಿನ ದಿವಸ ಮಾಡಿದ ಭಾಷಣದಲ್ಲಿನ ವಿಷಯಗಳೆಲ್ಲವನ್ನೂ ಸಂಪೂರ್ಣವಾಗಿ ಪರಿಶೀಲಿಸಿದಾಗ ಅವರು ರಾಜ್ಯದ ಎಲ್ಲ ಇಲಾಖೆಗಳ ಎಂದರೆ, ಆಹಾರ, ಪರಿಹಾರ ವ್ಯವಸ್ಥೆ, ತೋಟಗಾರಿಕೆ, ಅರಣ್ಯ, ಸಹಕಾರಿ, ಶಿಕ್ಷಣ, ನೀರಾವರಿ, ವಿದ್ಯುತ್, ಸಮಾಜ ಕಲ್ಯಾಣ ಮೊದಲಾದ ಅನೇಕ ವಿಷಯಗಳನ್ನು ಕೂಲಂಕಷವಾಗಿ ವಿಚಾರಮಾಡಿ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅವರ ಹೇಳಿಕೆಯಲ್ಲಿ ಸತ್ಯಾಂಶವಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಕೂಡ ಸಾಕಷ್ಟು ನಮ್ಮ ಸರ್ಕಾರ ಪ್ರಗತಿಯನ್ನು ಸಾಧಿಸಿದೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ.

ನಮ್ಮ ರಾಜ್ಯಕ್ಕೆ ಘೋರವಾದ ಬರಗಾಲ ಬಂದಾಗ ನಮ್ಮ ಸರ್ಕಾರ ಧೀರವಾದ ಹೆಜ್ಜೆಯನ್ನಿಟ್ಟು, ಎಲ್ಲ ಕಡೆಯೂ ಪರಿಹಾರ ಕಾರ್ಯಗಳನ್ನು ನೆರವೇರಿಸಿ ಬಹಳ ರೀತಿಯಿಂದ ಜನತೆಗೆ ಅನುಕೂಲ ಮಾಡಿಕೊಟ್ಟದ್ದನ್ನು ಯಾರೂ ಮರೆಯುವಂತೆ ಇಲ್ಲ.

ತಾಲ್ಲೂಕು ಬೋರ್ಡ್ ಚುನಾವಣೆಗಳ ಬಗ್ಗೆ ರಾಜ್ಯಪಾಲರು ಯಾವುದೇ ಒಂದು ವಿಷಯವನ್ನು ಎತ್ತಿ ವರ್ಣನಾತ್ಮಕ ದೃಷ್ಟಿಯಿಂದ ಹೇಳಿಲ್ಲ. ಆದರೂ ಸಹ ತಾಲ್ಲೂಕು ಬೋರ್ಡ್ ಚುನಾವಣೆಗಳ ಬಗ್ಗೆ ಅನೇಕ ಸದಸ್ಯರು ಟೀಕೆ ಮಾಡಿದ್ದನ್ನು ನೋಡಿದರೆ, ಅದರಲ್ಲಿ ಏನಾದರೂ ಇದೆಯೇ ಎಂದು ಪರಿಶೀಲಿಸದೆ, ಅವರಲ್ಲಿದ್ದ ಅಸಮಾಧಾನ ಮಾತ್ರ ಎದ್ದು ಕಾಣುತ್ತದೆ, ಮತ್ತೊಂದೇನೂ ಇಲ್ಲ. ಏಕೆಂದರೆ ರಾಜ್ಯಪಾಲರು ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣೆಗಳು ಶಾಂತ ರೀತಿಯಿಂದ ನಡೆದುವು ಎಂದು ಹೇಳಿದ್ದಾರೆ. ಕಾಂಗ್ರೆಸ್ಸಿಗರು ಬಹು ಸಂಖ್ಯೆಯಲ್ಲಿ ಆರಿಸಿ ಬಂದಿದ್ದಾರೆ ಎನ್ನುವ ಹೆಮ್ಮೆಯಿಂದ ಅವರು ಮಾತನಾಡುತ್ತಿದ್ದಾರೆ, ಆ ಹೆಮ್ಮೆ ಸರಿಯಲ್ಲ ಎನ್ನುವಂಥ ಮಾತನ್ನು ಅನೇಕ ಸದಸ್ಯರು ಹೇಳುತ್ತ ಅದಕ್ಕೆ ಭಾರತದ ಒಂದು ಉದಾಹರಣೆಯನ್ನು ಹೇಳಿದರು. ಅವರಿಗಿಂತ ಕಥೆಯನ್ನು ಮೀರಿಸಿ ಹೇಳಬಹುದು. ಆದರೆ ನನಗೆ ಹೆಚ್ಚು ಸಮಯವಿಲ್ಲ. ಅವರು ಇಲ್ಲಿ ಅಸಮಾಧಾನ ಪಡಲಿಕ್ಕೆ ಕಾರಣ ಇಷ್ಟೆ. ತಾಲ್ಲೂಕು ಬೋರ್ಡ್ ಚುನಾವಣೆಗಳು ಬಂದಾಗ ಅವರು ನಾನಾ ಅಶೋತ್ತರಗಳನ್ನು ಇಟ್ಟುಕೊಂಡು, ಎಲ್ಲ ಕಡೆಗೂ ಬಹುವಾಗಿ ಕಾಂಗ್ರೆಸ್ ಪಕ್ಷ ಬರುವುದಿಲ್ಲ, ನಮ್ಮ ಪಕ್ಷವೇ ಬರುತ್ತದೆ, ಅನೇಕರು ಪ್ರೆಸಿಡೆಂಟರಾಗುತ್ತೇವೆ, ವೈಸ್ ಪ್ರೆಸಿಡೆಂಟರಾಗುತ್ತೇವೆ, ಹಳ್ಳಿಗಳಲ್ಲಿ ಹೋದಾಗ ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟು ಒಳ್ಳೊಳ್ಳೆಯ ದೊಡ್ಡಸ್ಥನವನ್ನು ಹೇಳಿಕೊಂಡು ಬಂದಿದ್ದರು. ಚುನಾವಣೆಗಳಲ್ಲಿ ಅವರು ಬಾರದೆ ಈ ರೀತಿಯಾದುದಕ್ಕೆ ತಮ್ಮ ಅಸಮಾಧಾನವನ್ನು ತೋರಿಸಲು ಹೀಗೆ ಟೀಕೆ ಮಾಡಿದ್ದಾರೆಯೇ ವಿನಾ ಇದರ ಬಗ್ಗೆ ಯಾವ ಅರ್ಥವೂ ಇಲ್ಲ ಎನ್ನುವಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇದೆ.

ಅನೇಕ ಯೋಜನೆಗಳಲ್ಲಿ ಕಾರ್ಯದ ಪ್ರಗತಿ ಸಾಕಷ್ಟು ಸಾಧಿಸಿದ್ದರೂ ಇನ್ನೂ ಹೆಚ್ಚು ಹೆಚ್ಚು ಪ್ರಗತಿ ಆಗಬೇಕಾಗಿದೆ. ಇನ್ನೂ ಪ್ರಗತಿ ಆಗುವುದಕ್ಕೆ ಅನೇಕ ಸಲಹೆ ಸೂಚನೆಗಳನ್ನು ಕೊಡುವುದು ಅವಶ್ಯ.

ವ್ಯವಸಾಯ ವಿಭಾಗದಲ್ಲಿ ಪ್ರತಿ ವರ್ಷ ಕ್ರ್ಯಾಷ್ ಪ್ರೋಗ್ರಾಂ ಎಂಬ ಯೋಜನೆ ಮಾಡಿ ಅದಕ್ಕೆ ಸರಕಾರ ಕೆಲವು ಹಣ ಕೊಡುತ್ತಿದೆ. ಆದರೆ ಇಂದು ಬಹುತೇಕವಾಗಿ ನಮ್ಮ ಕಡೆ ಈ ಹಣ ಖರ್ಚಾಗದೆ ಹಾಗೆಯೇ ಉಳಿದಿರುವುದು ಕಂಡುಬರುತ್ತಿದೆ. ಈ ಹಣವನ್ನು ಸಾಲದ ರೂಪವಾಗಿ

ಕೊಡುವಾಗ ಸಹಕಾರ ಸಂಘಗಳ ಸದಸ್ಯರಿಗೆ ಕೊಡಬಾರದೆಂದು ನಿಯಮವಿರುವುದರಿಂದ ಬಹುತೇಕ ಹಳ್ಳಿಗಳಲ್ಲಿ ಎಲ್ಲರೂ ಸಂಘದ ಸದಸ್ಯರಾಗಿರುವುದರಿಂದ ಈ ಹಣ ಖರ್ಚಾಗಿಲ್ಲ. ಅದಕ್ಕೆ ಅವಕಾಶ ವಿಲ್ಲದಂತೆ ಪೀಕು ಬೆಳೆಯುವುದಕ್ಕೆ ಸೌಕರ್ಯವಿರುವವರಿಗೆ ಇದನ್ನು ಕೊಡುವುದು ಒಳ್ಳೆಯದು. ಅಲ್ಲದೆ ಅನೇಕ ಗ್ರಾಮಗಳಲ್ಲಿ ನೀರಾವರಿ ಬಾವಿಗಳಿಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಅಥವ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನಿಂದ ಅನೇಕ ಸಾಲ ಕೊಟ್ಟಿರುವುದುಂಟು. ಆದರೆ ಬಾವಿಗಳಲ್ಲಿ ನೀರೇ ಇಲ್ಲ. ನೀರಾವರಿ ಯೋಜನೆಯ ರೀತ್ಯ ಸಾಲ ತೆಗೆದುಕೊಂಡಿರುವುದಕ್ಕೆ ಬಡ್ಡಿ, ಕಂತಿನ ಬಡ್ಡಿ ದಿನದಿನಕ್ಕೆ ಬೆಳೆದು ಸಾಲ ತೆಗೆದುಕೊಂಡಿರುವವರ ಮನೆ ಹೊಲ ಮುಂತಾದ್ದೆಲ್ಲವೂ ಹೋಗುವ ಮಟ್ಟಕ್ಕೆ ಬಂದಿದೆ. ನೀರು ಬಾವಿಗಳಲ್ಲಿ ಇಲ್ಲದಿರುವುದರಿಂದ ಸರಕಾರ ಅನೇಕ ಬೋರಿಂಗ್ ಮೆಷೀನುಗಳನ್ನು ತರಿಸಿ ಬಾವಿಗಳನ್ನು ಆಳಪಡಿಸಬೇಕೆಂದಿರುವುದು ಸಂತೋಷದ ವಿಚಾರ. ಅದನ್ನು ತೀವ್ರವಾಗಿ ಕಾರ್ಯಗತಮಾಡಿದರೆ ಅನುಕೂಲವಾಗುತ್ತದೆ.

ಬರಗಾಲ ಕಾಮಗಾರಿ ಮಾಡುವಾಗ ಸರಕಾರದ ಒಂದು ಖಾತೆ ಇನ್ನೊಂದು ಖಾತೆಯೊಂದಿಗೆ ಸಹಕರಿಸದಿರುವುದರಿಂದ ಈಗಿರುವ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆ ಮಾಡುವುದು ಅವಶ್ಯವಾಗಿದೆ. ಏಕೆಂದರೆ ರಸ್ತೆ ಮಾಡುವುದು, ಫಾರೆಸ್ಟ್ ಪ್ರದೇಶದಲ್ಲಿ ಹಾದುಹೋಗಬೇಕಾದರೆ ಅರಣ್ಯ ಇಲಾಖೆ ಯವರು ರಸ್ತೆಗೆ ಜಾಗ ಕೊಡುವುದಿಲ್ಲ ಎಂದು ತಕರಾರು ಮಾಡಿರುವುದುಂಟು. ಈ ವಿಧವಾದ ಅನೇಕ ಉದಾಹರಣೆಗಳಿವೆ. ಅಲ್ಲದೆ ಬಸ್ ಸ್ಟ್ಯಾಂಡುಗಳನ್ನು ಸ್ಟೇಟ್ ಟ್ರಾನ್ಸ್‌ಪೋರ್ಟ್ ಇಲಾಖೆಯು ವರು ಫಾರೆಸ್ಟ್ ಪ್ರದೇಶದಲ್ಲಿ ಕಟ್ಟಲು ಅವಕಾಶ ಕೊಡುತ್ತಿಲ್ಲ. ಆದುದರಿಂದ ರಸ್ತೆ ಮತ್ತು ಬಸ್ ಸ್ಟ್ಯಾಂಡುಗಳ ನಿರ್ಮಾಣ ಕಾರ್ಯ ಸರಿಯಾಗಿ ಆಗಲು ಅವಕಾಶವಾಗಿಲ್ಲ. ಆದುದರಿಂದ ಸರಕಾರಿ ಯೋಜನೆಗಳಿಗೆ ಸರಕಾರದ ಪ್ರತಿಯೊಂದು ಖಾತೆಗಳವರು ಕೂಡ ಸಹಕಾರಮಾಡಿ ಅವು ಕಾರ್ಯಗತ ವಾಗುವಂತೆ ಮಾಡಬೇಕೆಂದು ಸೂಚಿಸಬಯಸುತ್ತೇನೆ.

ಗ್ರಾಮಾಂತರ ಪ್ರದೇಶಗಳಿಗೆ ಬಸ್ಸುಗಳನ್ನು ಓಡಿಸಬೇಕೆಂದು ಕೇಳಿದರೆ ಎಂ.ಎಸ್.ಆರ್.ಟಿ.ಸಿ. ನವರು ನಿಧಾನ ಮಾಡುತ್ತಾರೆ. ಎಲ್ಲವೂ ಬೆಂಗಳೂರಿಗೆ ಬಂದೇ ತೀರ್ಮಾನವಾಗಬೇಕೆಂದರೆ ನಿಧಾನವಾಗುವುದರಿಂದ ಮನವಿ ಬಂದಕೂಡಲೇ ಡಿಪೋ ಮ್ಯಾನೇಜರು ಅಥವ ಡಿವಿಜನಲ್ ಕಂಟ್ರೋ ಲರು ಅದಕ್ಕೆ ಗಮನ ಕೊಟ್ಟು ಇತ್ಯರ್ಥ ಮಾಡಲು ಅವಕಾಶ ಕೊಟ್ಟರೆ ಗ್ರಾಮಗಳವರಿಗೆ ಅನು ಕೂಲವಾಗುತ್ತದೆ. ಆದುದರಿಂದ ಜಿಲ್ಲೆಗಳಲ್ಲಿರುವ ಅಧಿಕಾರ ಕೊಡಬೇಕು ಎಂದು ಸೂಚಿಸಿ ಮತ್ತೊಮ್ಮೆ ರಾಜ್ಯಪಾಲರ ಭಾಷಣವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ದೇಶದ ಆಡಳಿತದ ವಿಚಾರವನ್ನು ರಾಜ್ಯಪಾಲರು ತಿಳಿಸಿರುವುದು ಒಂದು ರೂಪದಲ್ಲಿದೆ. ದ್ವಿಮುಖ ಆಡಳಿತ ನಮ್ಮ ರಾಜ್ಯದಲ್ಲಿದೆ, ಒಂದು ಬಹಿರ್ಮುಖ, ಇನ್ನೊಂದು ಅಂತರ್ಮುಖ. ಬಹಿರ್ಮುಖ ಆಡಳಿತದಲ್ಲಿ ಸರಕಾರದವರು ತಿಳಿಸಿರುವಂತೆ ವಿವಿಧ ಇಲಾಖೆಗಳ ಕಾರ್ಯವನ್ನು ಕೊಂಚಮಟ್ಟಿಗೆ ತಿಳಿಸಿರುತ್ತಾರೆ. ಜಾಸ್ತಿ ಪುಟಗಳಿಲ್ಲದೆ ಆಡಳಿತ ವಿಚಾರವನ್ನು ಕೊಂಚ ಪುಟಗಳ ಭಾಷಣದಲ್ಲಿಯೇ ಸರಕಾರದ ತತ್ವನಿರೂಪಣೆಯನ್ನು ರಾಜ್ಯಪಾಲರು ಮಾಡಿದ್ದಾರೆ. ಅಂತರ್ಮುಖ ನೋಡಿದರೆ ಸರಕಾರ ನಿಜವಾಗಿಯೂ ಪ್ರಾಮಾಣಿಕವಾಗಿ ಸ್ವಚ್ಛವಾದ ಆಡಳಿತ ನಡೆಸಿದ್ದರೆ ರಾಜ್ಯದ ಸ್ವರೂಪವೇ ಬೇರೆಯಾಗುತ್ತಿತ್ತು ಎಂದು ಹೇಳಬೇಕಾಗಿದೆ. ಅರವಿಂದಘೋಷ್‌ರವರು "ಹೊಸ ಹುಟ್ಟು" ಎಂಬ ಒಂದು ಪುಸ್ತಕ ಬರೆದಿದ್ದಾರೆ, ಅದರಲ್ಲಿ ಹೊಸಹುಟ್ಟು ಎಂಬ ಭಾಗದಲ್ಲಿ ಆಡಳಿತ ಹೇಗಿರಬೇಕೆಂಬುದನ್ನು ತಿಳಿಸಿದ್ದಾರೆ. ಆಡಳಿತ ಸ್ವಚ್ಛವಾಗಿ ನಡೆಯಬೇಕಾದರೆ ಏನೇನಿರಬೇಕು ಎಂಬುದನ್ನು ತಿಳಿಸಿದ್ದಾರೆ, ಆಡಳಿತದಲ್ಲಿ ಹಸ್ತಕ್ಷೇಪ ಇರಬಾರದು, ಭ್ರಷ್ಟಾಚಾರವಿರಬಾರದು, ದುಂದು ಇರಬಾರದು, ಲಂಚವಿರಬಾರದು, ದಕ್ಷತೆ ಇರಬೇಕು ಎಂದು ಹೇಳುತ್ತಾರೆ. ಹಾಗಿದ್ದರೆ ದೇಶದ ಆಡಳಿತ ಚೆನ್ನಾಗಿ ನಡೆಯುತ್ತಿದೆ ಎಂದು ಭಾವಿಸಬಹುದು. ಆದರೆ ಈ ಸರಕಾರ ತನ್ನದೇ ಆದ ಪಂಚಶೀಲವೊಂದರ ಆಧಾರದಮೇಲೆ ಆಡಳಿತ ನಡೆಸುತ್ತಿದೆ.

ಇದರಲ್ಲಿ ಜಾಸ್ತಿಯಾಗಿ ಕಾಣುತ್ತಾ ಇರುವುದು ಐದು ಭಾಗಗಳು, ಹಸ್ತಕ್ಷೇಪ, ಭ್ರಷ್ಟಾಚಾರ, ಮಿತಿ ಇಲ್ಲದೇ ಖರ್ಚು ಮಾಡುವುದು, ಸ್ವಜನಪಕ್ಷಪಾತ ಮತ್ತು ದಕ್ಷಹೀನತೆ. ಹಸ್ತಕ್ಷೇಪ ಅನ್ನುವು ದಕ್ಕೆ ಒಂದಲ್ಲ ನೂರಾರು ಉದಾಹರಣೆಗಳನ್ನು ಕೊಡಬಹುದು. ಒಬ್ಬ ತಹಸೀಲ್ದಾರರು ಒಂದು ತಾಲ್ಲೂಕಿಗೆ ಬಂದು ಕೇವಲ 8 ತಿಂಗಳಾಗಿದೆ, ಆತ ಪುಡಾರಿ ಒಬ್ಬ ಅಧ್ಯಕ್ಷನಾಗಿರುವ ಒಂದು ಸಹ ಕಾರ ಸಂಘ ಚೆಕ್ಕು ಮಾಡಿದಾಗ ಒಂದು ಮೂಟೆ ರವೆ, 12 ಮೂಟೆ ಸಕ್ಕರೆಯ ಷಾರ್ಟೇಜ್ ಇದ್ದದ್ದನ್ನ ಜಿಲ್ಲಾಧಿಕಾರಿಗಳಿಗೆ ರಿಪೋರ್ಟು ಮಾಡಲು ಪ್ರಯತ್ನ ಮಾಡಿದ, ಆತ ಅದಕ್ಕೆ ವಿರೋಧಿಸಿ ಅದಕೊ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಸ್ಕರ ಅತನಮೇಲೆ ಚಾಡಿ ಹೇಳಿ ಮಂತ್ರಿಗಳಿಂದ 8 ದಿವಸದಲ್ಲಿ ಆತನನ್ನು ಟ್ರಾನ್ಸ್‌ಫರ್ ಮಾಡಿಸಿ ಆರ್ಡರನ್ನು ಮಾಡಿಸಿಕೊಂಡು ಬಂದಿದ್ದಾನೆ. ಇದರಲ್ಲಿ ಎಷ್ಟುಮಟ್ಟಿಗೆ ಹಸ್ತಕ್ಷೇಪ ಇದೆ ಎನ್ನುವುದಕ್ಕೆ ಒಂದು ಉದಾಹರಣೆ. ಇದೇ ರೀತಿ ತಿಪಟೂರಿನಲ್ಲಿ ಒಬ್ಬ ಡಾಕ್ಟರು, ಎಷ್ಟು ಪ್ರಾಮಾಣಿಕ ಅವನು ಎಂದರೆ ದಿನಕ್ಕೆ ಹತ್ತು ಗಂಟೆ ಕೆಲಸ ಮಾಡುತ್ತಾ ಇದ್ದ. ಅಲ್ಲಿ ಒಬ್ಬ ಪುಡಾರಿ ಪ್ರೈವೇಟ್ ಪ್ರಾಕ್ಟೀಷನರು ಇದ್ದ. ಆ ಡಾಕ್ಟರು ಬಂದಮೇಲೆ ಇವನಿಗೆ ಬರುತ್ತಾ ಇದ್ದ ಹಣ ನಿಂತು ಹೋಯಿತು. ಇದನ್ನು ಗಮನದಲ್ಲಿಟ್ಟುಕೊಂಡು ಆ ಡಾಕ್ಟರನ್ನು 8 ತಿಂಗಳ ಕಾಲದಲ್ಲಿ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿಸಿದ್ದಾನೆ. ತುರುವೇಕೆರೆ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳವರೆಗೂ ಹಣ ದುರುಪಯೋಗ ಮಾಡಿದ್ದಾರೆ. ಅಸಿಸ್ಟೆಂಟ್ ರಿಜಿಸ್ಟ್ರಾರ್‌ವರು ಬಂದು ಇನ್‌ಸ್ಪೆಕ್ಟ್ ಮಾಡಿ ಸಂಬಂಧಪಟ್ಟ ಪಾರ್ಟಿಗಳಿಗೆ ನೋಟೀಸ್ ಕೊಟ್ಟು, ಕೂಡಲೇ ಹಣ ವಸೂಲು ಮಾಡಬೇಕೆಂದು ಪ್ರಯತ್ನ ಪಟ್ಟರು. ಆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರನ್ನು ಇದಕ್ಕೋಸ್ಕರ ಪುಡಾರಿಗಳು 8–10 ತಿಂಗಳುಗಳೊಳಗೆ ಅಲ್ಲಿಂದ ಟ್ರಾನ್ಸ್‌ಫರ್ ಮಾಡಿಸಿದ್ದಾರೆ. ಆಮೇಲೆ ಒಬ್ಬ ಹೈಸ್ಕೂಲು ಹೆಡ್ಮಾಸ್ಟರು ಬಹಳ ಪ್ರಾಮಾಣಿಕ, ಹಳೇ ತರಹದ ಮನುಷ್ಯ, ಬಹಳ ದಕ್ಷ, ಅಂತಹ ಮನುಷ್ಯನನ್ನು ಇಡೀ ಸ್ಟೇಟ್‌ನಲ್ಲೇ 23 ಪರ್ಸೆಂಟ್ ರಿಸಲ್ಟ್ ಬಂದಾಗ ತುಮಕೂರು ಜಿಲ್ಲೆಯಲ್ಲಿ 13 ಪರ್ಸೆಂಟ್ ರಿಸಲ್ಟ್ ಬಂದಿದೆ ಆದರೆ ಈ ಹೆಡ್ಮಾಸ್ಟರ್ ಇರುವ ಶಾಲೆಯಲ್ಲಿ 30 ಪರ್‌ಸೆಂಟ್ ಬಂದಿದೆ ಎಂದು ಹೇಳಿ ಅನೇಕ ವಿದ್ಯಾರ್ಥಿಗಳು ಸರ್ಕಾರಿ ಹೈಸ್ಕೂಲಿಗೆ ಸೇರುವುದಕ್ಕೆ ಪ್ರಾರಂಭ ಮಾಡಿದರು, ಇದನ್ನು ಅಲ್ಲಿನ ನೋಡಿ ಪ್ರೈವೇಟ್ ಹೈಸ್ಕೂಲು ನಡೆಸುತ್ತಾ ಇದ್ದ ಪುಡಾರಿಗಳು ಅವರನ್ನು ಅಲ್ಲಿಂದ ಒಂದೇ ವರ್ಷದಲ್ಲಿ ಟ್ರಾನ್ಸ್‌ಫರ್ ಮಾಡಿಸಿದರು. ಭ್ರಷ್ಟಾಚಾರ ಮಾಡುವ ಅಧಿಕಾರಿಯನ್ನು 6-7 ವರ್ಷಗಳಿಂದ ಒಂದೇ ಕಡೆ ಇಟ್ಟು ಪ್ರಾಮಾಣಿಕ ಅಧಿಕಾರಿಯನ್ನು 6–7 ತಿಂಗಳಿನಲ್ಲಿ ಟ್ರಾನ್ಸ್‌ಫರ್ ಮಾಡಿರುವ ಹತ್ತಾರು ಉದಾಹರಣೆಗಳನ್ನು ಕೊಡಬಲ್ಲೆ. ನಿಜವಾಗಿಯೂ ತಾವು ಯೋಚನೆ ಮಾಡಬೇಕು. ನಮ್ಮ ಸರ್ಕಾರದಲ್ಲಿ ಯಾವ ಪ್ರಾಮಾಣಿಕ ನೌಕರರತಾನೆ ಕೆಲಸ ಮಾಡುವುದಕ್ಕೆ ಸಾಧ್ಯವಿದೆ ಎಂದು ತಾವು ಯಾವ ಆಧಾರದ ಮೇಲೆ ಹೇಳುತ್ತೀರಿ ! ನಿಜವಾಗಿಯೂ ಯಾವ ಅಧಿಕಾರಿಯೂ ಕೂಡ ಪ್ರಾಮಾಣಿಕನಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಬೇಕಾಗುತ್ತದೆ. ಪ್ರಮಾಣಿಕವಾಗಿ ಕೆಲಸ ಮಾಡುವವನಿಗೆ ತೊಂದರೆ, ಪುಡಾರಿಗಳಿಗೆ ಪ್ರೋತ್ಸಾಹ. ಹೀಗಾದಲ್ಲಿ ಎಷ್ಟುಮಟ್ಟಿಗೆ ಈ ರಾಜ್ಯದ ಆಡಳಿತ ಸೂತ್ರ ಸುಗಮವಾಗಿ ನಡೆಯುತ್ತದೆ ಎಂಬುದನ್ನು ತಾವು ಹೇಳಬೇಕು. ಮತ್ತೊಂದು ಸೊಸೈಟಿಯಲ್ಲಿ ಒಂದು ಲಕ್ಷ ರೂಪಾಯಿಗಳವರೆಗೂ ಮೋಸವಾಗಿದೆ. ಆ ಸೊಸೈಟಿಯಲ್ಲಿನ ಅಧಿಕಾರಿಗಳಿಗೂ ಮತ್ತು ಪುಡಾರಿಗಳಿಗೂ ಅದರಲ್ಲಿ ಭಾಗ ಸೇರಿರಬಹುದು. ಅಂತಹ ಅಧಿಕಾರಿಗಳನ್ನು 6 ವರ್ಷಗಳವರೆಗೂ ಕೂಡ ಅದೇ ಸ್ಥಳದಲ್ಲಿ ಇಟ್ಟಿರುವುದಕ್ಕೆ ಏನು ಉತ್ತರ ಕೊಡುತ್ತಾರೋ ಅದನ್ನು ಬಹಳ ವಿಚಾರ ಮಾಡಿ ಹೇಳಬೇಕು. ಹಸ್ತಕ್ಷೇಪ ಇಷ್ಟುಮಟ್ಟಿಗೆ ಆದರೆ ಯಾವ ಪ್ರಾಮಾಣಿಕ ಅಧಿಕಾರಿಯೂ ಕೂಡ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಸ್ವಾಮಿ, ಈ ರಾಜ್ಯದಲ್ಲಿ ಒಬ್ಬ ಸಣ್ಣ ನೌಕರನಿಂದ ಹಿಡಿದು ರಾಜ್ಯಮಟ್ಟದ ಅಧಿಕಾರಿಗಳವರೆಗೂ ಪುಡಾರಿಗಳ ಹಸ್ತಕ್ಷೇಪ ಇದೆ. ಇವರು ತಮ್ಮ ಪಕ್ಷವನ್ನು ಬೆಳೆಸುವುದಕ್ಕೆ ಇಂಥ ವಿಧಾನವನ್ನು ಅನುಸರಿಸುತ್ತಾ ಹೋದರೆ ಈ ಹಸ್ತಕ್ಷೇಪ ತೋರಿಸಿ ಎಲ್ಲಿಯವರೆಗೆ ಇವರು ಜಯಪ್ರದರಾಗುತ್ತಾರೆ ? ಇಂಥ ಆಡಳಿತದಲ್ಲಿ ಹಸ್ತಕ್ಷೇಪ ಕಾರ್ಯ ನಡೆಸತಕ್ಕ ಸರ್ಕಾರದಲ್ಲಿ ಯಾವ ಅಧಿಕಾರಿತಾನೆ ನ್ಯಾಯವಾಗಿ ಕೆಲಸಮಾಡುತ್ತಾನೆ ? ಆಡಳಿತವು ಕಾನೂನಿಗೆ ಅನುಸಾರವಾಗಿ ನಡೆಯದಿದ್ದಾಗ ನಮಗೆ ಇನ್ನು ನಿಯಮಗಳಾದರೂ ಏಕೆ ಬೇಕು ? ಅಲ್ಲದೆ ಮುಖ್ಯ ಮಂತ್ರಿಗಳು ಅಧಿಕಾರಿಗಳನ್ನು ಅಂದರೆ ಐ. ಎ. ಎಸ್. ಅಧಿಕಾರಿಗಳನ್ನು ಶಿಕ್ಷೆಮಾಡುವುದಕ್ಕೆ ಕಾನೂನು ಪ್ರಕಾರ ನಮಗೆ ಅವಕಾಶವಿಲ್ಲ ಎಂದು ಹೇಳುತ್ತಿದ್ದಾರೆ. ಹಾಗಾದರೆ ನಾವು ಈ ಆಡಳಿತದಲ್ಲಿ ಸ್ವಚ್ಛತೆಯನ್ನು ಕಾಣುವುದಕ್ಕೆ ಸಾಧ್ಯವೇ ಇಲ್ಲ ಎಂದಹಾಗಾಯಿತು.

[Mr. Deputy Speaker in the Chair]

ಈ ರಾಜ್ಯವನ್ನು ನಾವು ಕಂಟ್ರಾಕ್ಟರುಗಳ ರಾಜ್ಯ ಎಂದು ಕರೆಯಬಹುದು ಎಂಬುದಕ್ಕೆ ಹತ್ತಾರು ನಿದರ್ಶನಗಳಿವೆ. ಅನೇಕ ಜನ ಕಂಟ್ರಾಕ್ಟರುಗಳಿಗೆ ಸರ್ಕಾರದವರು ಓರ ಕ್ಯಾರಿಯಿಂಗ್ ರೋಡುಕೆಲಸ ಮಾಡುವುದಕ್ಕೆ ಲಾರಿಗಳನ್ನು ಒದಗಿಸಿರುತ್ತಾರೆ. ಶರಾವತಿ ವ್ಯಾಲಿಯಲ್ಲಿ ಕೆಲಸಮಾಡತಕ್ಕ ಕಂಟ್ರಾಕ್ಟರುಗಳಿಗೂ ಲಾರಿಗಳನ್ನು ಒದಗಿಸುತ್ತಿದ್ದಾರೆ. ಒಂದು ವರ್ಷ ಕಳೆದನಂತರ ಆ ಕಂಟ್ರಾಕ್ಟರುಗಳಿಂದ ರೋಡ್ ಸೆಸ್ ಪರ್ಮಿಟ್ ಮತ್ತು ಸರ್‌ಛಾರ್ಜ್ ಎಲ್ಲಾ ಸೇರಿ ಒಂದು ಲಾರಿಗೆ

4 ಸಾವಿರ ರೂಪಾಯಿಗಳಾಗುತ್ತೆ. ಸರ್ಕಾರದ ಒಬ್ಬ ಮಂತ್ರಿಗಳ ಪ್ರಭಾವದಿಂದ ಈ ಟ್ಯಾಕ್ಸ್‌ನ್ನು ವಸೂಲ್ಮಾಡದೆ ಹಾಗೇ ಬಿಟ್ಟುಕೊಂಡು ಬರುತ್ತಿರುವುದರಿಂದ ಈ ದಿವಸ ಈ ಬಾಬಿನಲ್ಲಿ ಸರ್ಕಾರಕ್ಕೆ ಬರಬೇಕಾದ ಬಾಕಿ 40–50 ಸಾವಿರ ಒಬ್ಬೊಬ್ಬರಿಂದ ಬಾರದೆ ಹಾಗೇ ಮುಲ್ಕು ನಿಂತಿದೆ. ಹೀಗೆ ಳಿದ 4–5 ವರ್ಷಗಳಿಂದಲೂ ಲಾರಿಗಳ ಬಗ್ಗೆ ಸರ್ಕಾರಕ್ಕೆ ಬರಬೇಕಾದ ಟ್ಯಾಕ್ಸ್ ವೊಬಲಗು ಬಂದಿಲ್ಲ ಎಂಬುದಾಗಿ ನನಗೆ ತಿಳಿದು ಬಂದಿದೆ. ಅನೇಕ ಲಾರಿಗಳ ಬ್ರೇಕ್ ಇನ್‌ಸ್ಪೆಕ್ಷನ್ ಕೂಡ ನಡೆಯುತ್ತಿಲ್ಲ. ನಾನು ಒಂದು ದಿವಸ ಆರ್. ಟಿ. ಒ. ಆಫೀಸಿನಲ್ಲಿ ಕುಳಿತಿದ್ದೆ. ಅಲ್ಲಿಗೆ 3–4 ಲಾರಿಗಳನ್ನು ಹಿಡಿದುಕೊಂಡು ಬಂದು ಅವರಮೇಲೆ ಕೇಸ್‌ಹಾಕಬೇಕೆಂದಿದ್ದರು. ಆಗ ಅಲ್ಲಿಗೆ ಒಬ್ಬ ಮಂತ್ರಿಗಳು ಬಂದು ಅವರು ಬಹಳ ಒಳ್ಳೆಯವರು 'ಏಕರಿ ಅವರ ಮೇಲೆ ಕೇಸ್ ಹಾಕುತ್ತೀರಿ ? ಅವರ ಮೆಲೆ ಯಾವ ಕೇಸನ್ನು ಹಾಕುವುದು ಬೇಡ' ಎಂದು ಹೇಳಿದರು. ಹೀಗಾದರೆ ನಮ್ಮಲ್ಲಿ ಲಾ ಅಂಡ್ ಆರ್ಡರ್ ಉಳಿಯುವುದೆಲ್ಲಿ ಬಂತು ?

ಇನ್ನು ದೇಶದಲ್ಲಿ ಕೈಗಾರಿಕೆಗಳು ಬೆಳೆಯಬೇಕು ಎಂದು ಹೇಳುತ್ತಾ ನಮ್ಮ ಮುಖ್ಯ ಮಂತ್ರಿಗಳು ಹೊರಗಡೆ ಹೋದಾಗಲೂ ಕೂಡ ಅಲ್ಲೆಲ್ಲಾ ಭಾಷಣಗಳನ್ನು ಮಾಡಿದ್ದೂ ಮಾಡಿದ್ದೇ. ಸರೆ ರಾಜ್ಯದವರು ಇಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುತ್ತೇವೆ ಎಂದು ಬಂದರೆ ಅಂಥವರಿಗೆ ಪುರಸ್ಕಾರವೇ ಇಲ್ಲ. ಇದೇನು ನೀತಿ ? ಮೋಹನ್ ಅಂಡ್ ಕಂಪೆನಿಯವರು ಇಲ್ಲಿಗೆ ಬಂದು ಇಲ್ಲಿ ಒಂದು ವೈನ್ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿ ಅವರು ಸರ್ಕಾರವನ್ನು ಅಪ್ರೋಚ್ ಮಾಡಿದರು. ಇಲ್ಲಿ ಫ್ರುಟ್ ಕ್ಯಾನಿಂಗ್ ಕೈಗಾರಿಕೆಯ ಷೇರು ಬೆಲೆ ಸಾಕಷ್ಟು ಇಲ್ಲದೆ, ಅವುಗಳ ಷೇರ್ 5 ರೂಪಾಯಿ ಇದ್ದುದನ್ನು 10 ರೂಪಾಯಿನಂತೆ ಕೊಂಡರು, ಸರ್ಕಾರದವರಿಗೆ ಚುನಾವಣೆಗಾಗಿ ಹಣವನ್ನೂ ಕೂಡ ಕೊಟ್ಟರು, ಆದರೆ ಅವರಿಗೆ ಕಡೆಗೂ ಲೈಸನ್ಸ್ ಕೊಡದೆ ಇದ್ದುದರಿಂದ ಅವರು ಇಲ್ಲಿಂದ ಬೊಂಬಾಯಿಗೆ ಹೊರಟುಹೋದರು. ಅದೇ ರೀತಿ ಇಲ್ಲಿಗೆ ಇನ್ನೊಬ್ಬರು ಪೋಲ್ವಾಲೀಸ್ ಅಂಡ್ ಕೋ ಅವರು ಅದೇ ವೈನ್ ತಯಾರಿಕೆಗೆ ಲೈಸನ್ಸ್ ಕೇಳಿದರು ಅವರಿಗೂ ಅದು ಸಿಕ್ಕಲಿಲ್ಲ. ಅವರು ಆಂಧ್ರಕ್ಕೆ ಹೋದರು. ಹೀಗಾದರೆ ಹೇಗೆ ನಮ್ಮಲ್ಲಿ ಕೈಗಾರಿಕೆಗಳು ಬೆಳೆಯುತ್ತವೆ ? ಇಲ್ಲಿಯವರೆಗೂ ನಡೆದಂಥ ಯೋಜನೆಗಳಲ್ಲಿ ಬರೀ ಭ್ರಷ್ಟಾಚಾರ ಮಾತ್ರ ನಡೆದಿದೆ ಅಂದಾಗ ಇನ್ನು ದೇಶ ಮುಂದುವರಿಯುವುದೆಲ್ಲಿ ಬಂತು ? ನಾನು ಒಂದು ದಿವಸ ಬೆಂಗಳೂರಿನಿಂದ ಮೈಸೂರಿಗೆ ಹೋಗುತ್ತಿದ್ದೆ. ಮಧ್ಯೆ ರಾಮನಗರದ ಬಳಿ ಯಾವುದೋ ಒಂದು ಕಂಟ್ರಾಕ್ಟ್ ಹಿಡಿದಿದ್ದ ಒಬ್ಬ ಕಂಟ್ರಾಕ್ಟರು ಅವನಿಗೆ ಆ ಕಂಟ್ರಾಕ್ಟಿನಲ್ಲಿ 20–30 ಪರ್ಸೆಂಟ್ ಹಣವನ್ನು ಜಾಸ್ತಿ ಮಾಡಿಸಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಿಗೆ ಒಂದು ದೊಡ್ಡ ಹಾರವನ್ನು ಹಾಕುತ್ತಿದ್ದರು. ಅವರು ಮತ್ತೆ ಕಾಂಗ್ರೆಸ್ ಪಾರ್ಟಿಯ ಫಂಡಿಗೂ ಸ್ವಲ್ಪ ಹಣವನ್ನು ಕೊಟ್ಟಿರಬಹುದೆಂದು ಕಾಣುತ್ತದೆ. ಆ ಕಂಟ್ರಾಕ್ಟರ ಕೆಲಸ ನಿರಾಯಾಸವಾಗಿ ಆಯಿತು. ಆದರೆ ಹಿಂದೆ ಅದೇ ಕೆಲಸಕ್ಕಾಗಿ ಆತ ಬೇಕಾದಷ್ಟು ಪ್ರಯತ್ನ ಮಾಡಿದ್ದರೂ ಅದು ಸಾಧ್ಯವಾಗದೆ ಚೀಫ್ ಇಂಜಿನಿಯರವರಿಂದ ಕಾಗದ 4-5 ಆವರ್ತಿ ಹಿಂದಕ್ಕೆ ಬಂದಿತ್ತು. ಆದರೆ ಆ ದಿವಸ ಮುಖ್ಯ ಮಂತ್ರಿಗಳು ಮೈಸೂರಿನಿಂದ ವಾಪಸ್ ಬರುತ್ತಿದ್ದ ಹಾಗೇ ಅದು ನೇರವಾಗಿ ಯಾರನ್ನೂ ಕೇಳದೆ ಮಂಜೂರಾಯಿತು ಎಂದು ಕೇಳಿದೆ. ತಿರುಪತಿ ಬೆಟ್ಟಕ್ಕೆ ಹೋಗಿ ಮೈಸೂರಿನ ಒಂದು ಛತ್ರವನ್ನು ಓಪನ್ ಮಾಡಿದಾಗ ಆ ಒಂದು ಬಿಲ್ಡಿಂಗಿಗೆ ಕಾಂಟ್ರಾಕ್ಟ್ ಕೊಟ್ಟಿದ್ದರೆ ಸುಮಾರು 2ಲಕ್ಷ 40ಸಾವಿರ ರೂಪಾಯಿಗಳು ಖರ್ಚಾಗುತ್ತಿತ್ತು, ಆದರೆ ಅದನ್ನು ಇಲಾಖೆಯವರು ಕೈಗೊಂಡ ಪ್ರಯುಕ್ತ 60 ಸಾವಿರ ರೂಪಾಯಿಗಳನ್ನು ಉಳಿಸಿದ್ದಾರೆಂದು ಹೇಳಿದರು. ನಿಜವಾಗಿಯೂ ಇಲಾಖೆಯವರು ದಕ್ಷತೆಯಿಂದ ಕೆಲಸಮಾಡಿ 2 ಲಕ್ಷ 40 ಸಾವಿರ ರೂಪಾಯಿಗಳ ಕೆಲಸಕ್ಕೆ 60 ಸಾವಿರ ರೂಪಾಯಿಗಳು ಉಳಿದಿದೆ ಎಂಬುದಾಗಿ ಹೇಳಿದ್ದರಿಂದ ಅವರನ್ನು ಶ್ಲಾಘನೆ ಮಾಡಬಹುದು. ಇವತ್ತಿನ ದಿವಸ ಈ ದೇಶದಲ್ಲಿ ಕಂಟ್ರಾಕ್ಟರು ಗಳು ಸೇಕಡ 10, 20 ಅಥವಾ 25ರಷ್ಟು ಜಾಸ್ತಿಹಾಕಿ ಹಸ್ತಕ್ಷೇಪಮಾಡಿ ಅನೇಕ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಇದರಿಂದ ಸರ್ಕಾರಕ್ಕೆ 10ಕೋಟಿ ರೂಪಾಯಿಗಳವರೆಗೂ ಪ್ರತಿವರ್ಷ ಲುಕ್ಸಾನು ಆಗುತ್ತದೆ. ಇದನ್ನು ನೋಡಿದರೆ ಬಹಳಮಟ್ಟಿಗೆ ಯೋಚನೆಮಾಡಬೇಕಾಗಿದೆ. ಎಷ್ಟರಮಟ್ಟಿಗೆ ಭ್ರಷ್ಟಾಚಾರ ಇಲ್ಲಿ ನಡೆಯುತ್ತಿದೆ ಎಂಬುದನ್ನು ನೋಡಬೇಕು.

4-30 P.M.

ರಾಜ್ಯಪಾಲರು ಹೇಳಿರುವ ಮುಖ್ಯ ಅಂಶಗಳಲ್ಲಿ 4ನೇ ಪಂಚವಾರ್ಷಿಕಯೋಜನೆ ವಿಚಾರವಾಗಿ ಸ್ವಲ್ಪ ಸೂಕ್ಷ್ಮವಾಗಿ ತಿಳಿಸಿದ್ದಾರೆ. ಮೊದಲನೆಯ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಳ್ಳಲಾಯಿತು. ಅವು ಸಕಾಲದಲ್ಲಿ ಪೂರೈಸದೆ 1ನೇ, 2ನೇ,

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಮತ್ತು 3ನೇ ಯೋಜನೆಗಳಲ್ಲಿರುವ ಅನೇಕ ನೀರಾವರಿ ಯೋಜನೆಗಳು, ಮತ್ತು ಹಾಗೆಯೇ ಇತರ ಇನ್ನೂ ದೊಡ್ಡ ದೊಡ್ಡ ಕೆಲಸಗಳು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಮುಂದುವರಿಯುತ್ತಿವೆಯೆಂದು ಹೇಳಿದ್ದಾರೆ. ಈ ಯೋಜನೆಗಳು ಯಾವ ಪ್ರಮಾಣದಲ್ಲಿ, ಎಷ್ಟು ಕಾಲದಲ್ಲಿ, ಎಷ್ಟು ಬಂಡವಾಳದಲ್ಲಿ ಕೆಲಸಗಳು ನಡೆಯಬೇಕಾಗಿತ್ತೋ ಅಷ್ಟು ತೀವ್ರತೆಯಿಂದ ವೇಗವಾಗಿ ನಡೆಯುತ್ತಾ ಇಲ್ಲವೆಂಬುದು ಇದರಿಂದ ನಿದರ್ಶನವಾಗುತ್ತದೆ. ಇವತ್ತಿನದಿವಸ 4ನೇ ಪಂಚವಾರ್ಷಿಕ ಯೋಜನೆಯಲ್ಲಿ ದೊಡ್ಡ ದೊಡ್ಡ ನೀರಾವರಿಯೋಜನೆಗಳಿಗಾಗಿ ಒದಗಿಸಿರುವ ಹಣವೇನಿದೆಯೋ ಅದು, ಮೂರು ಪಂಚ ವಾರ್ಷಿಕ ಯೋಜನೆಗಳಲ್ಲಿ ನಿಂತಿರುವ ಕೆಲಸಗಳನ್ನು ಪೂರೈಸುವುದಕ್ಕೇ ಸಾಲದು ಎಂದು ಕಾಣುತ್ತದೆ. ಈ ಯೋಜನೆಯನ್ನು ಮೊದಲು ಹಾಕುವಾಗ ಸರ್ಕಾರದವರು ಯಾವ ಒಂದು ತೀವ್ರಾಸಕ್ತಿಯಲ್ಲಿ ಅದನ್ನು ತೆಗೆದುಕೊಳ್ಳಬೇಕೆಂದು ಇರುತ್ತಾರೆಯೋ ಅಷ್ಟು ತೀವ್ರಾಸಕ್ತಿಯಿಂದ ತೆಗೆದುಕೊಂಡಂತೆ ಕಾಣುವುದಿಲ್ಲ. ಆದ್ದರಿಂದ ಇದನ್ನು ಯೋಜನೆ ಎಂಬುದಾಗಿ ಕರೆಯುವುದರಿಂದ ಏನೂ ಪ್ರಯೋಜನವಿಲ್ಲ. ಇವತ್ತಿನದಿವಸ ಈ ದೇಶದ ಎಲ್ಲಾ ಯೋಜನೆಗಳೂ ಕೂಡ ಬಹಳ ಮಂದಗತಿಯಲ್ಲಿ ಮುಂದುವರಿಯುತ್ತಿವೆ. ಆದ್ದರಿಂದ ಯೋಜನಾಸ್ವರೂಪವನ್ನು ಅದು ಹೊಂದಿಲ್ಲವೆಂದು ನಾವು ಈಗ ಹೇಳಬೇಕಾಗಿದೆ. ಅದಕ್ಕೋಸ್ಕರ ಈಗ 4ನೇ ಪಂಚವಾರ್ಷಿಕ ಯೋಜನೆಯನ್ನು ಬಹಳ ತೀವ್ರಗತಿಯಿಂದ ನಿಶ್ಚಿತವಾದ ಕಾಲದಲ್ಲಿ ನಿಯೋಜಿತ ಫಲ ಕೊಡುವ ಹಾಗೆ ಕಾರ್ಯಗತಮಾಡಿದರೆ ಇವತ್ತು ಆ ಯೋಜನೆಯ ಕೆಲಸ ಸಫಲವಾಗುತ್ತದೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಇವರು ಹೊಸ ವ್ಯಾಪಾರೋದ್ಯಮಗಳನ್ನು ಏಕೆ ಕೈಗೊಳ್ಳುತ್ತಾರೆಯೋ ಗೊತ್ತಿಲ್ಲ. ಬೆಂಗಳೂರು ಡೈರಿ ವ್ಯಾಪಾರೋದ್ಯಮದಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಲುಕ್ಸಾನು ಆಗಿದೆ. ಬೋರ್ಡ್ ಆಫ್ ಮಿನರಲ್ ಡೆವಲಪ್‌ಮೆಂಟ್‌ನಿಂದ ಒಂದು ಕೋಟಿ ರೂಪಾಯಿಗಳು ಲುಕ್ಸಾನು ಆಗಿದೆ. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್‌ನಿಂದ ಒಂದು ಕೋಟಿ ರೂಪಾಯಿಗಳು ಲುಕ್ಸಾನು ಆಗಿದೆ. ಆದ್ದರಿಂದ ಸರ್ಕಾರ ಯಾವ ಒಂದು ವ್ಯಾಪಾರ ಸಂಸ್ಥೆಯನ್ನು ನಡೆಸುವುದಕ್ಕೆ ಯೋಗ್ಯತೆ ಇಲ್ಲ, ದಕ್ಷತೆ ಇಲ್ಲವೆಂಬುದು ಚೆನ್ನಾಗಿ ಇವರು ಕೊಟ್ಟಿರುವ ಅಂಕಿಅಂಶಗಳಿಂದಲೇ ವ್ಯಕ್ತವಾಗುತ್ತದೆ. ಅದೇರೀತಿಯಾಗಿ ಬೋರ್ಡ್ ಆಫ್ ಮಿನರಲ್ ಡೆವಲಪ್‌ಮೆಂಟನ್ನು ಮೈಸೂರು ಮಿನರಲ್ ಯೂನಿಟ್ ಎಂಬುದಾಗಿ ಹೆಸರು ಬದಲಾಯಿಸಿದ್ದಾರೆ. ಹೆಸರು ಬದಲಾಯಿಸಿದ್ದರೂ ಅದರ ಸ್ವರೂಪ, ಆಡಳಿತ ಬದಲು ಆಗಿಲ್ಲ, ಇವತ್ತಿನದಿವಸ ಹೊಸ ಬಂಡವಾಳ ಹೂಡಿ ಹೆಸರು ಬದಲಾಯಿಸಿ ಹಿಂದಿನ ತಪ್ಪುಗಳನ್ನು ತಿದ್ದಿಕೊಳ್ಳದೆ ಆಡಳಿತವನ್ನು ಅಲ್ಲಿ ನಡೆಸಿದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಇಲ್ಲಿಗೆ ಕೇಂದ್ರ ಸರ್ಕಾರದಿಂದ ಅಧಿಕಾರಿಗಳನ್ನು ಕರೆದುಕೊಂಡು ಬಂದು ಅವರಿಗೆ ಜನರಲ್ ಮ್ಯಾನೇಜರ್, ಸೇಲ್ಸ್‌ಮ್ಯಾನೇಜರ್ ಹುದ್ದೆಗಳನ್ನು ಕೊಟ್ಟು ಅವರಿಗೆ ಒಂದು, ಎರಡು ಮತ್ತು ಮೂರು ಸಾವಿರ ರೂಪಾಯಿಗಳಂತೆ ಸಂಬಳವನ್ನು ಕೊಡುತ್ತಿರುವುದನ್ನು ನೋಡಿದರೆ ಈ ಸರ್ಕಾರ ಎಷ್ಟು ಬಂಡವಾಳ ಹಾಕಿದರೂ ಕೂಡ ಇವರ ಇಂದಿನ ಕೆಲಸಕಾರ್ಯಗಳ ವಿಭಾಗದಲ್ಲಿ ಯಾವ ಫಲವೂ ಬರುತ್ತಾ ಇಲ್ಲ. ಆದ್ದರಿಂದ ಸರ್ಕಾರ ಯಾವ ಒಂದು ವ್ಯಾಪಾರೋದ್ಯಮವನ್ನು ಕೈಕೊಳ್ಳುವ ಮುನ್ನ, ಅದಕ್ಕೆ ವ್ಯಾಪಾರ ಮಾಡುವ ಶಕ್ತಿ ಇದೆಯೋ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇವತ್ತಿನ ದಿವಸ ಬೆಂಗಳೂರು ಡೈರಿಯ ವಿಚಾರದಲ್ಲಿ ಕಳೆದ ವರ್ಷ ಕೆಲವು ಅಪಾದನೆಗಳನ್ನು ಮಾಡಿದಾಗ, ಮಾನ್ಯ ಮಂತ್ರಿಯವರು ಚ್ಯಾಲೆಂಜ್ ಮಾಡಿದ್ದಾರೆ. ಬೆಣ್ಣೆಗೆ ಹುಳ ಬಿದ್ದಿದೆ ಎಂದು ಹೇಳಿದಾಗ, ಬೆಣ್ಣೆಗೆ ಹುಳ ಬಿದ್ದಿಲ್ಲವೆಂದು ಹೇಳಿದರು. ಆದರೆ, ಅಲ್ಲಿಗೆ ಪಬ್ಲಿಕ್ ಅಕೌಂಟ್ ಕಮಿಟಿಯ ಸದಸ್ಯರು ಹೋಗಿ ನೋಡಿದಾಗ ಹುಳ ಬಿದ್ದಂತಹ 3—4 ಸಾವಿರ ಕೆ. ಜಿ ಯಷ್ಟು ಬೆಣ್ಣೆಯನ್ನು ಅಲ್ಲಿ ಒಂದು ಕಡೆ ಮುಚ್ಚಿಟ್ಟಿದ್ದರು. ಸರ್ಕಾರದವರು ಇಂಥಾದಕ್ಕೆ ಟೀಕೆ ಬಂದ ಪಕ್ಷದಲ್ಲಿ ಅದರ ಪ್ರಾಮಾಣಿಕತೆಯನ್ನು ಪರೀಕ್ಷೆ ಮಾಡಬೇಕು. ಅದನ್ನು ಬಿಟ್ಟು ಬಿಟ್ಟು, ಮಾಡಿದ ಅಪಾದನೆ ಬರೇ ಸುಳ್ಳು ಎಂದು ಹೇಳಿಕೊಂಡು ಆಡಳಿತ ಮಾಡಿದ ಪಕ್ಷದಲ್ಲಿ ಸರ್ಕಾರ ನಡೆಸುವ ಯಾವ ವ್ಯಾಪಾರದಲ್ಲಾಗಲಿ, ಅದು ಲಾಭದಾಯಕವಾಗಿ ನಡೆಯುವುದಾದರೂ ಹೇಗೆ ಎಂದು ಯೋಚಿಸಬೇಕು.

ಇನೊಂದು ವಿಷಯ. ಮಹತ್ಮಾ ಗಾಂಧೀಜಿಯವರ 100ನೇ ವರ್ಷದ ಶತಾಬ್ದಿಯನ್ನು ಆಚರಿಸಬೇಕಾಗಿದೆ ಎಂದು ಹೇಳಿದ್ದಾರೆ. ನಮ್ಮ ಎಕ್ಸೈಸ್ ಮಂತ್ರಿಯವರು ಈಗ ಪಾನನಿರೋಧದ ವಿಚಾರದಲ್ಲಿ ಒಂದು ರಾಷ್ಟ್ರೀಯ ಅಭಿಪ್ರಾಯವನ್ನು ನಾವು ಒಟ್ಟುಗೂಡಿಸಿ, ತಿಳಿದುಕೊಳ್ಳಬೇಕೆಂದು ಹೇಳಿದರು. ಆದರೆ ಈ ರಾಜ್ಯಾಂಗದ ಡೈರೆಕ್ಟಿವ್ ಪ್ರಿನ್ಸಿಪಲ್

ಪ್ರಕಾರ ಈ ರಾಷ್ಟ್ರೀಯ ಅಭಿಪ್ರಾಯವನ್ನು ತಿಳಿದುಕೊಳ್ಳುವ ಪ್ರಮೇಯವೇನೆಂದು ನನಗೆ ಗೊತ್ತಾಗಿಲ್ಲ. ಇವತ್ತಿನ ದಿವಸ ಯಾವುದೇ ಕಾನ್‌ಸ್ಟಿಟ್ಯೂಶನ್‌ನ ಡೈರೆಕ್ಟಿವ್ ಪ್ರಿನ್ಸಿಪಲ್ ಕಡ್ಡಾಯವಾಗಿ ರಾಷ್ಟ್ರದಲ್ಲಿ ಜಾರಿಯಾಗಲೇಬೇಕೆಂಬುದನ್ನು ನಾವು ಯೋಚನೆ ಮಾಡಬೇಕು. ಸರ್ಕಾರದಲ್ಲಿ ಎಲ್ಲಿ ನೋಡಿದರೂ ಅಭಾಸವಾಗಿದೆ. ಒಂದು ಕಡೆ ಪ್ರೊಹಿಬಿಷನ್ ಆಗಬೇಕೆಂದು ಹೇಳುತ್ತಿದ್ದಾರೆ. ಇನ್ನೊಂದು ಕಡೆ ಸೇಂಧಿ ಮಾರಾಟವನ್ನು ಪುನಃ ಜಾರಿಗೆ ಕೊಟ್ಟು ಜನಗಳ ಶೋಷಣೆ ಮಾಡುತ್ತಿದ್ದಾರೆ. ಒಂದು ಕಡೆ ಹರಿಜನರ ಉದ್ಧಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ, ಇನ್ನೊಂದು ಕಡೆ, ಅವನ್ನು ಶೋಷಣೆ ಮಾಡುತ್ತಿದ್ದಾರೆ. ಸರ್ಕಾರಕ್ಕೆ ಹರಿಜನರಿಂದಲೇ ಎರಡು ಕೋಟಿ ರೂಪಾಯಿ ಪಾನೀಯದಿಂದ ಬರುತ್ತಿದ. ಅವರ ಕಲ್ಯಾಣಕ್ಕೋಸ್ಕರ 40—50 ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಈ ಹೊತ್ತಿನ ದಿವಸ ಈ ಪ್ರಜಾಪ್ರಭುತ್ವದ ಒಂದು ಲಕ್ಷಣ ಎಷ್ಟೊಂದು ಕುಂಠಿತವಾಗುತ್ತದೆ ಎಂದರೆ, ಇದನ್ನು ಪ್ರಜಾ ಪ್ರಭುತ್ವವೆಂದು ಕರೆಯುವುದಕ್ಕೆ ಕಷ್ಟವಾಗುತ್ತದೆ. ಈವೊತ್ತಿನ ದಿವಸ ನಮ್ಮ ರಾಜ್ಯದ ಆಡಳಿತದ ಒಟ್ಟು ಉತ್ಪತ್ತಿಯಲ್ಲಿ ಎಷ್ಟು ಸಂಬಳ ಸಾರಿಗೆಗಳಿಗೆ ಹೋಗುತ್ತದೆ ಎಂದು ನೋಡಬೇಕು. ಈವೊತ್ತು ಮಿತವ್ಯಯವನ್ನು ಜಾರಿಯಲ್ಲಿ ಕೊಡಬೇಕೆಂದು ಎಲ್ಲಾ ಇಲಾಖೆಗಳಲ್ಲಿಯೂ 10 ಪರ್‌ಸೆಂಟ್ ಕಟ್ ಮಾಡಬೇಕೆಂದು ಹೇಳುತ್ತಿದ್ದಾರೆ. ಮತ್ತು ಮಿತವ್ಯಯ ತೋರಿಸುತ್ತೇವೆಂದು ಹೇಳುತ್ತಾರೆ ಇದು ಖಂಡಿತವಾಗಿಯೂ ಅರ್ಥವಿಲ್ಲದ ಮಾತು. ಇದನ್ನು ಒಂದು ತೀವ್ರ ರೂಪದಲ್ಲಿ ಯೋಚನೆ ಮಾಡಬೇಕು. ತುಕೋಳ್ ಕಮಿಟಿಯವರು ಕೆಲವು ಆಡಳಿತ ಸುಧಾರಣೆಯ ವಿಚಾರದಲ್ಲಿ ಹೇಳಿದ್ದಾರೆ. ಅದನ್ನಾದರೂ ಜಾರಿಯಲ್ಲಿ ತರಬೇಕು.

ಇನ್ನು ಮೂರು ಟ್ರಿಬ್ಯೂನಲ್ಸ್ ಮಾಡಿದ್ದಾರೆ. ಈ ಮೂರನ್ನೂ ಒಟ್ಟುಗೂಡಿಸಿ ಒಂದೇ ಮಾಡಿದರೆ ಒಳ್ಳೇಯದೆಂದು ಕಾಣುತ್ತದೆ. ಅದೇ ರೀತಿಯಲ್ಲಿ ಈ ಪಬ್ಲಿಕ್ ಸರ್ವಿಸ್ ಕಮಿಷನ್ ಇದೆ, ಇದು ಅನಾವಶ್ಯಕವೆಂದು ಹೇಳುತ್ತೇನೆ. ಅಲ್ಲಿರುವ ಸದಸ್ಯರ ಸಂಖ್ಯೆಯನ್ನು ಈಗ ಇರುವುದನ್ನು ಮೂರಕ್ಕೆ ಇಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇದೇ ರೀತಿಯಲ್ಲಿ ಅನೇಕ ರೀತಿ ಖರ್ಚು ಜಾಸ್ತಿಯಾಗುತ್ತಿದೆ. ಆದ್ದರಿಂದ ಇದನ್ನು ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಿ ಆಡಳಿತದಲ್ಲಿ ಅದಷ್ಟು ಮಟ್ಟಿಗೆ ತೀವ್ರವಾಗಿ ಮಿತವ್ಯಯವನ್ನು ಮಾಡಿದರೆ ಅದರಿಂದ ಪ್ರತಿವರ್ಷ 10 ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ. ಇಷ್ಟು ಹೇಳಿ ರಾಜ್ಯಪಾಲರ ಭಾಷಣದ ಮೇಲೆ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಮುನಿಸ್ವಾಮಯ್ಯ (ಆನೇಕಲ್).—ಸ್ವಾಮಿ, ಅಧ್ಯಕ್ಷರೇ, ಈ ತಿಂಗಳು 13ನೇ ತಾರೀಖಿನ ದಿವಸ ನಮ್ಮ ರಾಜ್ಯಪಾಲರು ಈ ಸಭೆಯಲ್ಲಿ ದಯಪಾಲಿಸಿದ ಭಾಷಣಕ್ಕೋಸ್ಕರ ಅವರನ್ನು ವಂದಿಸುವುದಕ್ಕೋಸ್ಕರವಾಗಿ ನಾನು ಮಾತನಾಡುತ್ತಿದ್ದೇನೆ. ಮಾನ್ಯ ರಾಜ್ಯಪಾಲರು ಸುಮಾರು ಒಂದು ಘಂಟೆಯ ಕಾಲ ಮಾಡಿದ ಭಾಷಣದಲ್ಲಿ ನಮ್ಮ ದೇಶದ ಆಡಳಿತವನ್ನು ಈ ವರ್ಷದಲ್ಲಿ ಯಾವ ರೀತಿಯಲ್ಲಿ ಉತ್ತಮಪಡಿಸಬೇಕು. ಯಾವ ಯಾವ ಕೆಲಸಕಾರ್ಯಗಳನ್ನು ಮಾಡಬೇಕು, ಯಾವ ಯಾವ ಆದಾಯವನ್ನು ಹೆಚ್ಚಿಸಿಕೊಳ್ಳಬೇಕು, ಯಾವ ಯಾವ ವ್ಯವಸ್ಥೆಯನ್ನು ಸರಿಪಡಿಸಬೇಕು ಎನ್ನತಕ್ಕಂಥಾದ್ದನ್ನು ಸೂಕ್ಷ್ಮವಾಗಿ ಹೇಳಿದ್ದಾರೆ. ಸಾಧಾರಣವಾಗಿ ನಮ್ಮ ದೇಶದಲ್ಲಿ ಎಲ್ಲಾ ಇಲಾಖೆ ವಿಷಯಗಳನ್ನೂ, ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಹೊಸದಾಗಿರತಕ್ಕ ವಿಷಯ ಎಂದರೆ ತಾಲ್ಲೂಕು ಬೋರ್ಡಿನ ಚುನಾವಣೆಗಳ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ತಾಲ್ಲೂಕು ಬೋರ್ಡಿನ ಚುನಾವಣೆಯಲ್ಲಿ ಕೆಲವುಕಡೆ ತಪ್ಪು ನಡೆದಿದೆ ಎಂದು ನಮ್ಮ ಸ್ನೇಹಿತರು ಹೇಳಿದರು. ದೊಡ್ಡ ಚುನಾವಣೆಗಳಲ್ಲಿ ದೇಶದಲ್ಲಿ ಕೆಲವು ತಪ್ಪುಗಳು ನಡೆಯತಕ್ಕದ್ದು ಸ್ವಾಭಾವಿಕ. ಆದರೆ ಅಂಥಾ ಎತ್ತಿ ತೋರಿಸತಕ್ಕಂಥ ತಪ್ಪುಗಳೇನೂ ನಡೆದಿಲ್ಲ ಎಂದು ನಾನು ಅನುಭವದಿಂದ ಹೇಳುತ್ತಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ದೇಶದ ಸರ್ಕಾರಿ ನೌಕರರು ಇಂಥಾ ಕಷ್ಟಕಾಲದಲ್ಲಿ ವೇತನ ಆಯೋಗದ ವರದಿಯನ್ನು ಹೆಚ್ಚು ಹೆಚ್ಚಾಗಿ ಕಾಯುತ್ತಿದ್ದಾರೆ. ವಿಧಾನಸಭೆಯ ಸದಸ್ಯರು ಇದರ ಬಗ್ಗೆ ಏನು ಅಭಿಪ್ರಾಯವನ್ನು ಕೊಡುತ್ತಾರೆ, ಯಾವ ರೀತಿ ತೀರ್ಮಾನ ಬರಬಹುದು ಎಂದು ಸರ್ಕಾರಿ ನೌಕರರು ಕಾದುಕೊಂಡಿದ್ದಾರೆ. ಶ್ರೀ ತುಕೋಳ್ ಅವರು ಬಹಳ ಶ್ರಮಪಟ್ಟು ಬಹಳ ಒಳ್ಳೆಯ ವರದಿಯನ್ನು ಒಪ್ಪಿಸಿದ್ದಾರೆ. ಆದರೆ ಕೆಲವು ಇಲಾಖೆಯವರು ತಮಗೆ ಕೊಡತಕ್ಕಂಥ ಅಥವಾ ಏರಿಸಿರತಕ್ಕಂಥ ಸಂಬಳ ಸಾಲದು ಎಂಬ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಪಶುವೈದ್ಯ ಇಲಾಖೆಯವರು ತಮಗೆ ಕೊಟ್ಟಿರತಕ್ಕ ಸಂಬಳ ಸಾಲದು ಎಂದು ಹೇಳುತ್ತಿದ್ದಾರೆ. ಮನುಷ್ಯರ ಆಸ್ಪತ್ರೆಯಲ್ಲಿ ಕೆಲಸಮಾಡತಕ್ಕ ಡಾಕ್ಟರಿಗೆ ಕೊಟ್ಟಿರತಕ್ಕ ಸಂಬಳವನ್ನೇ ಪಶುವೈದ್ಯ ಇಲಾಖೆಯಲ್ಲಿ, ಆಸ್ಪತ್ರೆಗಳಲ್ಲಿ ಕೆಲಸಮಾಡತಕ್ಕ ಡಾಕ್ಟರಿಗೂ ಕೊಡಬೇಕೆಂದು ಅವರು ಕೇಳುತ್ತಿದ್ದಾರೆ. ಜೂನಿಯರ್

(ಶ್ರೀ ಆರ್. ಮುನಿಸ್ವಾಮಯ್ಯ)

ಇಂಜಿನಿಯರ್‌ಗಳು ಎಷ್ಟೋ ವರ್ಷಗಳಿಂದ ನಾವು ಜೂನಿಯರ್ ಇಂಜನೀಯರುಗಳೇ ಆಗಿದ್ದೇವೆ, ನಮ್ಮನ್ನು ಅಸಿಸ್ಟೆಂಟ್ ಇಂಜಿನಿಯರ್ ಮಾಡಬೇಕು ನಮ್ಮ ಸಂಬಳ ಹೆಚ್ಚಿಸಬೇಕು ಎಂದು ಅವರು ನಿರೀಕ್ಷಣೆ ಮಾಡುತ್ತಿದ್ದಾರೆ. ಇದೇ ರೀತಿ ಬೇರೆ ಬೇರೆ ಇಲಾಖೆಗಳ ನೌಕರರು ತಮ್ಮ ಸಂಬಳವನ್ನು ಹೆಚ್ಚಿಸಿಕೊಳ್ಳಬೇಕೆಂದು ನಿರೀಕ್ಷಣೆ ಮಾಡುತ್ತಿದ್ದಾರೆ. ಮುಂದೆ ಈ ಸಭೆಯಲ್ಲಿ ತುಕೋಳ್ ಅವರ ವರದಿಯನ್ನು ಪರಿಸೀಲಿಸುವಾಗ ನೌಕರರಿಗೆ ಎಷ್ಟೆಷ್ಟು ಸಹಾಯ ಮಾಡಬಹುದು ಎನ್ನತಕ್ಕಂಥಾದ್ದನ್ನು ಅವರು ನಿರೀಕ್ಷಣೆ ಮಾಡುತ್ತಿದ್ದಾರೆ.

ಸ್ವಾಮಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಕಡೆ ಮಳೆ ಇಲ್ಲದೆ ಪ್ರಾರಂಭದಲ್ಲಿ ಬೆಳೆಗಳು ಕೆಟ್ಟು ಹೋಗಿ ಜನಗಳಲ್ಲಿ ಹಾಹಾಕಾರ ಉಂಟಾಗಿ ಒಂದು ದೊಡ್ಡ ಕ್ಷಾಮ ಬರುತ್ತದೆ ಎನ್ನುವ ಭಯ ಜನಗಳಿಗೆ ಉಂಟಾಯಿತು. ಅರ್ಧ ಮಳೆಗಾಲ ಆದಮೇಲೆ ಹೆಚ್ಚು ಹೆಚ್ಚಿನ ಮಳೆ ಆಗಿ ಕೆರೆ ಕಟ್ಟೆಗಳಿಗೆಲ್ಲಾ ನೀರು ಬಂತು. ಆಗ ದೇಶದಲ್ಲಿ ಸ್ವಲ್ಪ ಅಭಾವ, ಹಾಹಾಕಾರ ಕಡಿಮೆ ಆಯಿತು. ಆದರೆ ಅಭಾವ ಪರಿಸ್ಥಿತಿ ಸಂಪೂರ್ಣವಾಗಿ ಹೋಗಿದೆ ಎಂದು ತಿಳಿಯುವುದಲ್ಲ. ಮೊದಲು ಬೆಳೆಗಳೆಲ್ಲಾ ಕೆಟ್ಟುಹೋಗುತ್ತಿದ್ದವು. ಮಳೆ ಬಂದಮೇಲೆ ಖುಷ್ಕಿ ಬೆಳೆಗಳು ಮತ್ತು ತರೀ ಬೆಳೆಗಳು ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡುವು. ಇದರಿಂದಾಗಿ ರೈತರು ಸರ್ಕಾರದವರ ಸಹಾಯವನ್ನು ಪಡೆದುಕೊಂಡು ಮುಸುಕಿನ ಜೋಳ ಹೈಬ್ರಿಡ್ ಜೋಳ, ಬತ್ತ ರಾಗಿ ಇತ್ಯಾದಿ ದವಸ ಧಾನ್ಯಗಳನ್ನು ಸ್ವಲ್ಪ ಮಟ್ಟಿಗೆ ಬೆಳೆದು ಜನಗಳಿಗೆ ಆಹಾರವನ್ನು ಒದಗಿಸುತ್ತಿದ್ದಾರೆ, ಇದು ಸಂತೋಷದ ಸಂಗತಿ. ಕಷ್ಟಪಟ್ಟು ದುಡಿಯತಕ್ಕ ರೈತರಿಗೆ ಸರ್ಕಾರದ ಕಡೆಯಿಂದ ಸಹಕಾರ ಸಂಘಗಳ ಮುಖಾಂತರ ಸಾಕಷ್ಟು ರೀತಿಯಲ್ಲಿ ಹಣಕಾಸಿನ ಸಹಾಯ ಸಕಾಲದಲ್ಲಿ ಒದಗುತ್ತಾ ಇಲ್ಲ ಎಂದು ನಾನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಸಹಕಾರ ಇಲಾಖೆಯವರು ಅನಾವಶ್ಯಕವಾಗಿ ಕಾಲವನ್ನು ಕಳೆಯುತ್ತಿದ್ದಾರೆ. ಸರ್ಕಾರದ ಕಡೆಯಿಂದ ರೈತರಿಗೆ ಹೋಗತಕ್ಕ ಸಹಾಯ ಸೌಲಭ್ಯಗಳು ಅನಿರೀಕ್ಷಿತವಾಗಿ ನಿಧಾನವಾಗುತ್ತವೆ. ವ್ಯವಸಾಯ ಕಾಲದಲ್ಲಿ ಸರ್ಕಾರದವರು ರೈತರಿಗೆ ಕೊಡತಕ್ಕಂಥ ಸಹಾಯಗಳು, ಕ್ರಿಮಿ ಕೀಟಗಳನ್ನು ನಾಶ ಮಾಡುವುದಕ್ಕೆ ಉಪಯೋಗಿಸತಕ್ಕಂಥ ಔಷಧಿ, ಸಲಕರಣೆಗಳು ಇತ್ಯಾದಿಗಳೆಲ್ಲಾ ಮಧ್ಯವರ್ತಿ ಜನಗಳು ಅದನ್ನು ದುರುಪಯೋಗಿಸಿಕೊಂಡು ಅದು ರೈತರಿಗೆ ತಲುಪುತ್ತಾ ಇಲ್ಲ. ಅಂಥಾದಕ್ಕೆ ಅವಕಾಶ ಮಾಡಿಕೊಡದಂತೆ ಅಧಿಕಾರಿಗಳಿಗೆ ಸರ್ಕಾರದವರು ಎಚ್ಚರಿಕೆ ನೀಡಬೇಕು. ಅವು ದುರುಪಯೋಗವಾಗದ ಹಾಗೆ ಕಾಯುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು ಮತ್ತು ಸರ್ಕಾರದ ಕಡೆಯಿಂದ ರೈತರಿಗೆ ದೊರೆಯಬೇಕಾದಂತಹ ವ್ಯವಸಾಯದ ಸಲಕರಣೆಗಳು, ಕ್ರಿಮಿ ಕೀಟಗಳ ಔಷಧಿ ಇತ್ಯಾದಿಗಳು ರೈತರಿಗೆ ಸಕಾಲದಲ್ಲಿ ದೊರೆಯುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಈ ಬಗ್ಗೆ ಸರ್ಕಾರದವರು ಕಣ್ಣು ಇಡಬೇಕು ಎಂದು ನಾನು ಹೇಳುತ್ತೇನೆ.

ಆಮೇಲೆ ಇತ್ತೀಚೆಗೆ ಸರ್ಕಾರದವರು ಅನೇಕ ಬಸ್ ಲೈನುಗಳನ್ನು ರಾಷ್ಟ್ರೀಕರಣ ಮಾಡುತ್ತಿದ್ದಾರೆ. ಇದರಲ್ಲಿ ಸರ್ಕಾರದ ಉದ್ದೇಶವೇನೋ ಒಳ್ಳೆಯದು. ಆದರೆ ಇದುವರೆಗೆ ಖಾಸಗೀ ಬಸ್ಸುಗಳಲ್ಲಿ ಕೆಲಸ ಮಾಡುತ್ತಿದ್ದ ಡ್ರೈವರುಗಳು, ಕಂಡಕ್ಟರುಗಳು ಮತ್ತು ಇತರರು ಕೆಲಸಗಳನ್ನು ಕಳೆದುಕೊಂಡು ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯವರು ಇದನ್ನು ಪರಿಶೀಲನೆ ಮಾಡಿ ಅವರೆಲ್ಲರಿಗೂ ಕೆಲಸವನ್ನು ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಪೋಲೀಸ್ ದಳದ ವಿಷಯವಾಗಿ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಹೆದ್ದಾರಿ ಕಳ್ಳತನ ನಡೆದಿದ್ದರ ಸಂಬಂಧದಲ್ಲಿ ಹಿಡಿದಿದ್ದವರನ್ನು ತಪ್ಪಿಸಿಕೊಂಡು ಹೋಗುವ ಹಾಗೆ ಮಾಡಿದ್ದಾರೆ. ಇದು ಪೋಲೀಸಿನವರಲ್ಲಿ ಎಷ್ಟರಮಟ್ಟಿನ ದಕ್ಷತೆ ಇದೆಯೆಂಬುದು ತೋರಿಸುತ್ತದೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು.

ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ನೋಡಿದರೆ ಅದು ಬಹಳ ಚಿಂತಾಜನಕವಾಗಿದೆ. ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಭಾವಿಗಳಿಲ್ಲ. ಕೆಲವು ಕಡೆ ತಾಲ್ಲೂಕು ಬೋರ್ಡಿನವರು ನಮ್ಮಲ್ಲಿ ಅದಕ್ಕೆ ಸಾಕಷ್ಟು ಹಣವಿಲ್ಲ ಎಂದು ಹೇಳುತ್ತಾರೆ. ಸರ್ಕಾರದವರನ್ನು ಕೇಳಿದರೆ ಬಾವಿಯನ್ನು ತೋಡಿಸುವುದಕ್ಕೆ ಸಂಬಂಧಪಟ್ಟ ಗ್ರಾಮಗಳವರು ಇಷ್ಟು ಪರ್ಸೆಂಟೇಜ್ ಹಣವನ್ನು ಕೊಟ್ಟರೆ ನಾವು ಹಣವನ್ನು ಒದಗಿಸುತ್ತೇವೆ ಎಂದು ಹೇಳುತ್ತಾರೆ. ಗಾಂಧೀಜಿಯವರ ಶತಾಬ್ದಿಯ ವರ್ಷದಲ್ಲಿ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿ

ಗಳನ್ನು ಒದಗಿಸಬೇಕೆಂದು ಕೇಂದ್ರದ ಮಂತ್ರಿಗಳು ಹಾಗೂ ನಮ್ಮ ರಾಜ್ಯ ಸರ್ಕಾರದವರು ಹೇಳುತ್ತಿದ್ದಾರೆಂದು ಗೊತ್ತಾಗಿದೆ. ಆದ್ದರಿಂದ ಈ ವರ್ಷ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡು ಆದಷ್ಟು ಜಾಗ್ರತೆ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದವರಿಗೆ ಹೇಳಬಯಸುತ್ತೇನೆ.

ಸಮಾಜ ಕಲ್ಯಾಣ ಯೋಜನೆಯನ್ನು ಹಾಕಿಕೊಂಡಿರುವುದು ಸಮಾಜ ಕಲ್ಯಾಣ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಿಗೋಸ್ಕರವೇ, ಯಾವುದಕೋಸ್ಕರ ಈ ಯೋಜನೆಯನ್ನು ನಿರೂಪಿಸಿಕೊಂಡಿದ್ದಾರೆ, ಯಾವ ಉದ್ದೇಶದಿಂದ ಅಲ್ಲಿರತಕ್ಕ ನೌಕರರನ್ನು ನೇಮಕ ಮಾಡಿಕೊಂಡಿದ್ದಾರೆ ಎಂಬುದನ್ನು ಅವರು ಅರ್ಥ ಮಾಡಿಕೊಂಡಹಾಗೆ ಕಾಣುವುದಿಲ್ಲ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಡೈರೆಕ್ಟರಾಗಿರತಕ್ಕವರೇನೋ ಒಳ್ಳೆಯವರು. ಆದರೆ ಜಾಯಿಂಟ್ ಡೈರೆಕ್ಟರಾಗಲೀ ಅಥವಾ ಅಸಿಸ್ಟೆಂಟ್ ಡೈರೆಕ್ಟರಾಗಲೀ, ಅಲ್ಲಿಗೆ ಹೋಗತಕ್ಕಂಥ ಜನಗಳನ್ನು ದನಕರುಗಳಿಗಿಂತ ಕಡೆಯಾಗಿ ಭಾವನೆ ಮಾಡುತ್ತಿದ್ದಾರೆ. ದನಕರುಗಳಿಗಿಂತ ಕಡೆಯಾಗಿ ನೋಡಿಕೊಳ್ಳುತ್ತಿದ್ದಾರೆ. ಇಧನ್ನು ಸಮಾಜ ಕಲ್ಯಾಣ ಇಲಾಖೆಯವರು ಬಹಳ ಎಚ್ಚರಿಕೆಯಿಂದ ನೋಡಬೇಕು ಎಂದು ನಾನು ಸಂಬಂಧಪಟ್ಟ ಮಾನ್ಯ ಮಂತ್ರಿಗಳಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಜಾಯಿಂಟ್ ಡೈರೆಕ್ಟರು ಮತ್ತು ಅಸಿಸ್ಟೆಂಟ್ ಡೈರೆಕ್ಟರು ಸುಮ್ಮನೆ ಕಾಲಹರಣ ಮಾಡುತ್ತಿದ್ದಾರೆ. ಅವರಿಗೆ ಏನಾದರೂ ಫೋನ್ ಮಾಡಿದರೆ ಅವರು ಆಫೀಸಿನಲ್ಲಿ ಇಲ್ಲ ಎಂದು ಹೇಳುತ್ತಾರೆ. ಮಂತ್ರಿಗಳ ಆಫೀಸಿನಿಂದ ಫೋನ್ ಮಾಡಿದರೆ ಜಾಯಿಂಟ್ ಡೈರೆಕ್ಟರು, ಅಸಿಸ್ಟೆಂಟ್ ಡೈರೆಕ್ಟರು ಇದ್ದಾರೆ. ಎಲ್ಲೋ ಹೊರಗಡೆ ಯಾವುದೋ ಕೆಲಸಕ್ಕೆ ಹೋಗಿದ್ದಾರೆಂದು ಹೇಳುತ್ತಾರೆ. ಅಲ್ಲಿ ಸುಮಾರು 4—5 ಜನ ಅಸಿಸ್ಟೆಂಟ್ ಡೈರೆಕ್ಟರು ಇದ್ದಾರೆ. ಅವರಿಗೆ ಕನ್ನಡ ಬರುವುದಿಲ್ಲ. ಇದರಿಂದ ಅಲ್ಲಿಗೆ ಹೋಗತಕ್ಕ ಜನಗಳು ಏನಾದರೂ ಅವರಿಗೆ ಹೇಳಿದರೆ ಅದು ಅವರಿಗೆ ಅರ್ಥವಾಗುವುದಿಲ್ಲ. ಕೆಲಸಕಾರ್ಯಗಳಿಗಾಗಿ ಅವರ ಹತ್ತಿರ ಹೋಗತಕ್ಕ ಜನಗಳು ಅವರು ಜೊತೆಯಲ್ಲಿ ಮಾತನಾಡುವುದು ಕಷ್ಟವಾಗುತ್ತದೆ. ಆದಕಾರಣ ಜನಗಳು ತಮ್ಮ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳುವುದು ಕಷ್ಟವಾಗುತ್ತದೆ. ಅವರನ್ನೇನು ಸುಮ್ಮನೆ ನಾಮಕಾವಸ್ಥೆಗೆ ನೇಮಿಸಿರುವ ಹಾಗೆ ಕಾಣುತ್ತದೆ. ತುಕೋಳ್ ಅವರ ವರದಿಯಲ್ಲಿ ಹೇಳಿರುವಂತೆ ಇದನ್ನು ಬೇರೆ ಇಲಾಖೆಗಳಿಗೆ ಸೇರಿಸಿ ಅವರನ್ನು ಬೇರೆ ಇಲಾಖೆಗಳಿಗೆ ವರ್ಗ ಮಾಡುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ ವಿದ್ಯಾಭ್ಯಾಸದ ಮಟ್ಟ ಬಹಳ ಕಡಿಮೆಯಾಗಿದೆ. ಇದರಲ್ಲಿ ಪಾಠವನ್ನು ಹೇಳಿಕೊಡತಕ್ಕ ಉಪಾಧ್ಯಾಯರಿಗೂ ಕೂಡ ಸರಿಯಾದ ತರಪೇತಿಯನ್ನು ಕೊಡುತ್ತಿಲ್ಲ. ಒಂದು ಟ್ರೈನಿಂಗ್ ಸ್ಕೂಲಿಗೆ 20–30 ಜನ ಉಪಾಧ್ಯಾಯರನ್ನು ಸೆಲೆಕ್ಷನ್ ಮಾಡಿಕೊಳ್ಳುವಾಗ 10ವರ್ಷ, 12ವರ್ಷ, 17ವರ್ಷ, ಪಾಠ ಹೇಳಿದಂತಹ ಉಪಾಧ್ಯಾಯರುಗಳಿಗೆ ಕನ್ನಡದಲ್ಲಿ 20, 20 ಶಬ್ದಗಳನ್ನು ಡಿಕ್ಟೇಷನ್ ಕೊಟ್ಟಾಗ, ಅದರಲ್ಲಿ ಕಡಿಮೆ 15 ತಪ್ಪುಗಳನ್ನೂ, ಹೆಚ್ಚು 19 ತಪ್ಪುಗಳನ್ನೂ ಮಾಡಿದ್ದರು. 15 ವರ್ಷಗಳ ಕಾಲ ಕೆಲಸಮಾಡಿದ ಕನ್ನಡ ಉಪಾಧ್ಯಾಯರು ಕನ್ನಡ ಭಾಷೆಯಲ್ಲಿ 20 ಶಬ್ದಗಳನ್ನು ಬರೆಯುವುದರಲ್ಲಿ 13 ತಪ್ಪು, 19 ತಪ್ಪುಗಳನ್ನು ಮಾಡಿದ್ದೇ ಆದರೆ ಇಂತಹ ಉಪಾಧ್ಯಾಯರಿಂದ ಯಾವ ಮಟ್ಟದ ವಿದ್ಯಾಭ್ಯಾಸವನ್ನು ನಮ್ಮ ಮಕ್ಕಳಿಗೆ ನಿರೀಕ್ಷಿಸಬಹುದು ಎಂಬುದನ್ನು ಮಾನ್ಯ ವಿದ್ಯಾ ಮಂತ್ರಿಗಳು ಗಮನಿಸಬೇಕು. ಸುಮಾರು 400 ಉಪಾಧ್ಯಾಯರುಗಳಿಗೆ ಒಬ್ಬರಂತೆ ಇನ್ಸ್‌ಪೆಕ್ಟರನ್ನು ನೇಮಕ ಮಾಡಿದ್ದೀರಿ. ಇದರಿಂದ ಇನ್ಸ್‌ಪೆಕ್ಟರಿಗೆ ಕಷ್ಟವಾಗುತ್ತದೆ. ನೂರು ಜನ ಉಪಾಧ್ಯಾಯರುಗಳಿಗೆ ಒಬ್ಬರಂತಾದರೂ ಇನ್ಸ್‌ಪೆಕ್ಟರನ್ನು ನೇಮಕ ಮಾಡಿದರೆ ಆಡಳಿತ ಚೆನ್ನಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ಪ್ರತಿ ತಾಲ್ಲೂಕಿನಲ್ಲೂ ಮಾದರಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿ ಪದವೀಧರ ಉಪಾಧ್ಯಾಯರನ್ನು ಹೈಯರ್ ಪ್ರೈಮರಿ ಸ್ಕೂಲುಗಳ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸುವ ಉದ್ದೇಶವಿದೆಯೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ಪದ್ಧತಿಯನ್ನು ಜಾಗ್ರತೆ ಜಾರಿಗೆ ತರಬೇಕು.

ಇನ್ನು ಬೆಂಗಳೂರಿನಲ್ಲಿ ನಡೆಯುತ್ತಿರುವ ಹಾಲಿನ ಡೈರಿಯು ನಷ್ಟದಲ್ಲಿ ಕೆಲಸ ಮಾಡುತ್ತಿದೆಯೆಂದು ಶ್ರೀ ರಾಜಯ್ಯಶೆಟ್ಟರು ಈಗತಾನೇ ಹೇಳಿದರು. ಏತಕ್ಕೆ ನಷ್ಟದಲ್ಲಿ ನಡೆಯುತ್ತಿದೆ, ಮೊನ್ನೆ ಎಷ್ಟು ಬೆಣ್ಣೆಯನ್ನು ಸುಟ್ಟರು ಎಂಬ ಬಗ್ಗೆ ಒಂದು ವರದಿಯನ್ನು ಸಭೆಯ ಮುಂದೆ ಮಂಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹಳ್ಳಿಯಿಂದ ತರುವ ಹಾಲನ್ನು ಡೈರಿಯವರು, ಹಾಲಿನಲ್ಲಿ ಹಾಲಿನಂಶ ಕಡಿಮೆ ಇದೆ, ಹುಳಿ ಹಿಡಿದಿದೆಯೆಂಬ ಕಾರಣದಿಂದ ವಾಪಸ್ ಕಳಿಸುತ್ತಿದ್ದಾರೆಂದು ಕೇಳಿದ್ದೇನೆ. ಈ ಕಾರಣದಿಂದ ರೈತರು ಬಹಳ ದುಃಖ ಪಡುತ್ತಿದ್ದಾರೆ. ಇದನ್ನು

(ಶ್ರೀ ಆರ್. ಮುನಿಸ್ವಾಮಯ್ಯ)

ಸರ್ಕಾರದವರು ಗಮನಿಸಿ ಹಾಲನ್ನು ಒದಗಿಸುವ ವ್ಯಾಪಾರಸ್ಥರಿಗೆ ಮತ್ತು ಹಾಲನ್ನು ತರುವ ಹಳ್ಳಿಯ ರೈತರಿಗೆ ತೊಂದರೆ ಕೊಡದಂತೆ ನೋಡಿಕೊಳ್ಳಬೇಕು ಮತ್ತು ಆಡಳಿತವನ್ನು ಸರಿಪಡಿಸ ಬೇಕೆಂದು ಕೇಳಿಕೊಂಡು, ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಲೋಕಯ್ಯನಾಯಕ್ (ವಿರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯ ಪಾಲರ ಭಾಷಣವು ವರ್ಷಂಪ್ರತಿ ದೇವಸ್ಥಾನಗಳಲ್ಲಿ ನಡೆಯುವ ದೇವರ ಉತ್ಸವಗಳಂತೆ ನಡೆಯುತ್ತಿದೆಯೆಂದು ಹೇಳಬಹುದು. ನಾವುಗಳು ರಾಜ್ಯಪಾಲರ ಭಾಷಣದಲ್ಲಿ ಮಹತ್ವದ ವಿಚಾರಗಳು ಇರಬಹುದು ಎಂದು ಆಶಿಸಿದ್ದ ಸಂದರ್ಭದಲ್ಲಿ, ಅದನ್ನು ನೋಡಿದ ಮೇಲೆ ಅನೇಕ ವಿಚಾರಗಳು ಅದರಲ್ಲಿ ಕಂಡುಬಂದಿಲ್ಲ. ಮಾನ್ಯ ರಾಜ್ಯಪಾಲರು ಒಂದು ಕಡೆ ರಸ್ತೆಗಳನ್ನು ರಾಷ್ಟ್ರೀಕರಣ ಮಾಡಿದ ಬಗ್ಗೆ ಹೇಳಿದ್ದಾರೆ. ಮಂಗಳೂರು ಮತ್ತು ಶಿವಮೊಗ್ಗಾ ವಲಯಗಳ ಬಗ್ಗೆ ಈಗಾಗಲೇ ಸಮ್ಮತಿ ಪಡೆದ ಯೋಜನೆಗಳನ್ನು 1968ನೇ ಜುಲೈ ಒಂದನೇ ದಿನಾಂಕದಿಂದ ಜಾರಿಗೆ ತರಲಾಯಿತು ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಒಂದು ಮಹತ್ವದ ಸಂಗತಿಯನ್ನು ಕೈಬಿಟ್ಟಿದ್ದಾರೆ. ಏನೆಂದರೆ ಖಾಸಗಿಯವರು ನಡೆಸುತ್ತಿದ್ದ ಬಸ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಡ್ರೈವರ್‌ಗಳು, ಕಂಡಕ್ಟರ್‌ಗಳು ಮತ್ತು ಗುಮಾಸ್ತರುಗಳ ಬಗ್ಗೆ ಏನು ವ್ಯವಸ್ಥೆ ಮಾಡಲಾಗಿದೆ ಎಂಬುದನ್ನು ಹೇಳಿಲ್ಲ. ಈ ವರ್ಷದಲ್ಲಿ ಕೋಲಾರ ಜಿಲ್ಲೆಯಲ್ಲಿ ಅನೇಕ ಬಸ್ ರೂಟ್‌ಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಬಹಳ ಜವಾಬ್ದಾರಿ ಇದೆ. ಮೊದಲು ಖಾಸಗೀ ಬಸ್‌ಗಳಲ್ಲಿ ಇದ್ದ ನೌಕರರಿಗೆ ಬೇರೆ ಕಡೆ ಉದ್ಯೋಗ ಕಲ್ಪಿಸಿಕೊಡುವುದು ಸರ್ಕಾರದ ಕರ್ತವ್ಯವಾಗಿದೆ. ಆದರೆ ಸರ್ಕಾರದವರು ಈ ಯೋಜನೆಯಿಂದ ನಿರುದ್ಯೋಗಿಗಳನ್ನು ಹೆಚ್ಚು ಮಾಡಿದ್ದಾರೆ. ಮಂಗಳೂರಿನಲ್ಲಿ ಅನೇಕರು ನಿರುದ್ಯೋಗಿಗಳಾಗಿದ್ದಾರೆ. ಈ ನೌಕರರಲ್ಲಿ ಕೆಲವರಿಗೆ ಮಾತ್ರ ಕೆಲವು ಕಂಡೀಷನ್‌ಗಳ ಮೇಲೆ ಕೆಲಸ ಒದಗಿಸಿದ್ದಾರೆ. ಖಾಸಗಿಯವರ ಬಸ್‌ಗಳಲ್ಲಿ ಕೆಲಸ ಮಾಡುತ್ತಿರುವ ಡ್ರೈವರ್‌ಗಳು ಮತ್ತು ಕಂಡಕ್ಟರ್‌ಗಳು ಸರ್ಕಾರದಿಂದ ಲೈಸನ್ಸ್ ಪಡೆದಿರುತ್ತಾರೆ. ಇವರ ಎತ್ತರ, ದಪ್ಪ, ಕಣ್ಣುಗಳು ಸರಿಯಾಗಿ ಕಾಣುತ್ತವೆಯೇ, ಎರಡು ಕಿವಿಗಳು ಸರಿಯಾಗಿ ಕೇಳುತ್ತವೆಯೇ ಎಂಬುದನ್ನು ಪರೀಕ್ಷೆ ಮಾಡಿ, ಆರ್. ಟಿ. ಎ. ಅವರು ಲೈಸನ್ಸ್ ಕೊಡುತ್ತಾರೆ. ಈ ರೀತಿ ಲೈಸನ್ಸ್ ಇದ್ದವರನ್ನು ಎಂ. ಎಸ್. ಆರ್. ಟಿ.ಸಿ. ಅವರು ತೆಗೆದುಕೊಳ್ಳಲು ಮತ್ತೆ ಕೆಲವು ಹೊಸ ನಿಯಮಗಳನ್ನು ಹಾಕಿದ್ದಾರೆ. ಆ ರೀತಿ ಹಾಕಬಾರದು. ನಿಯಮಗಳನ್ನು ಸಡಿಲಿಸಿ ಇವರುಗಳಿಗೆ ಒಂದು ವ್ಯವಸ್ಥೆ ಮಾಡಿ ಉದ್ಯೋಗ ಕಲ್ಪಿಸಿಕೊಡ ಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಹರಿಜನ ಮತ್ತು ಗಿರಿಜನರಿಗೆ ಯಾವ ರೀತಿಯ ಅನುಕೂಲಗಳನ್ನು ಸಹ ಸರ್ಕಾರ ದವರು ಮಾಡಿಕೊಡುತ್ತಿಲ್ಲ. ಅವರ ಉದ್ಧಾರವಾಗಿಲ್ಲ. ಅವರನ್ನು ಉದ್ಧಾರ ಮಾಡುತ್ತೇವೆಂದು ಸರ್ಕಾರದವರು ದೊಡ್ಡ ದೊಡ್ಡ ರೀತಿಯಲ್ಲಿ ಪ್ರಚಾರ ಮಾಡುತ್ತಾರೆ. ಸ್ಕೂಲ್ ಮುಂದುಗಡೆ ಕೆಲವರು ಕಾಸು ಮಾಡುವುದಕ್ಕೆ ಭೂತಕನ್ನಡಿಯಲ್ಲಿ ಬೇರೆ ಹುಡುಗರಿಗೆ ಮದ್ರಾಸ್ ದೇಖೋ ಬೊಂಬಾಯಿ ದೇಖೋ ಎಂದು ತೋರಿಸುತ್ತಿರುತ್ತಾರೆ. ಅದರಂತೆ ಸರ್ಕಾರದವರು ಚುನಾವಣೆಯ ಸಮಯದಲ್ಲಿ ಒಂದು ಹತ್ತು ಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು, ನಿಮಗೆ ಮುಂದೆ ಬಹಳ ಅನುಕೂಲ ಮಾಡಿಕೊಡುತ್ತೇವೆಂದು ಆಶೆ ತೋರಿಸಿ ಓಟಿನ ಭೇಟೆಯಾಡುತ್ತಾರೆ. ಇವರ ಬಗ್ಗೆ ಬಹಳ ಅನ್ಯಾಯವಾಗುತ್ತಿದೆ. ಸಂಪೂರ್ಣವಾಗಿ ಇವರ ಉದ್ಧಾರವಾಗಿಲ್ಲವೆಂದು ಹೇಳಬೇಕಾಗುತ್ತದೆ. ಇವರಿಗೆ ಸರ್ಕಾರದವರು ಜಮೀನು ಕೊಟ್ಟರೆ, ಇವರಿಂದ ಕಾಂಗ್ರೆಸ್ ಪುಡಾರಿಗಳು ಮತ್ತೆ ವಾಪಸ್ ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿಯಾಗುತ್ತಿರುವುದನ್ನು ಕಳೆದ ವರ್ಷ ಆಗಿನ ಕಂದಾಯಮಂತ್ರಿಗಳಾಗಿದ್ದ ಶ್ರೀ ರಾಚಯ್ಯನವರಿಗೆ ತಿಳಿಸಿದಾಗ, ಅವರು ಆ ರೀತಿಯಾಗಿದ್ದರೆ ಸರಿಪಡಿಸುತ್ತೇನೆಂದು ಆಶ್ವಾಸನೆ ಕೊಟ್ಟಿದ್ದರು. ಮಡಿಕೇರಿ ಹತ್ತಿರ ಹಾಕತ್ತೂರು ಎಂಬ ಗ್ರಾಮವಿದೆ. ಅಲ್ಲಿ ಹರಿಜನರಿಗೆ ಕೊಟ್ಟಿದ್ದ ಸುಮಾರು 10 ಎಕರೆಗಳಷ್ಟು ಜಮೀನನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಶ್ರೀ ಎಂ. ಬಿ. ಅಹಮದ್ ಎಂಬುವರು ಎಕರೆಗೆ 750 ರೂಪಾಯಿಗಳಂತೆ ಅವರಿಂದ ಕೊಂಡು, ಅದೇ ಆಸ್ತಿಯನ್ನು 68 ಸಾವಿರ ರೂಪಾಯಿಗಳಿಗೆ ಮಾರಿಕೊಂಡಿದ್ದಾರೆ. ಇದು ಕಾಫಿ ಬೆಳೆಯತಕ್ಕಂಥ ಒಳ್ಳೆಯ ಜಮೀನಾಗಿತ್ತು. ಕಾಂಗ್ರೆಸ್ ಪುಡಾರಿಗಳು ಹರಿಜನರಿಂದ ಜಮೀನಿಗಾಗಿ ಅರ್ಜಿ ಹಾಕಿಸಿ, ಅವರಿಗೆ ಸರ್ಕಾರದಿಂದ ಕೊಡಿಸಿ ನಂತರ ತಾವೇ ತೆಗೆದುಕೊಳ್ಳುತ್ತಿದ್ದಾರೆ. ಇಂತಹ ಅನೇಕ ಆಧಾರಗಳಿವೆ. ಈ ವಿಚಾರದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಿಗೆ ಬರೆದಿದ್ದೇನೆ. ಆದರೂ ಸಹ ಅವರು ಈ ವಿಚಾರದಲ್ಲಿ ತನಿಖೆ ಮಾಡಿಲ್ಲ.

ಇನ್ನು ಆ ರೋಗದ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಶುದ್ಧ ಆಯುರ್ವೇದದ ಬಗ್ಗೆ ಹೇಳಿದ್ದಾರೆ. ಇದಕ್ಕೆ ಪ್ರೋತ್ಸಾಹ ಕೊಡುವ ವಿಚಾರದಲ್ಲಿ ಹೇಳಿದ್ದಾರೆ. ಇದನ್ನು ಸ್ವಾಗತಿಸಬೇಕಾಗಿದೆ. ಆಯುರ್ವೇದದ ಔಷಧಗಳು ಬಹಳ ಪ್ರಾಮುಖ್ಯವಾದವು. ಆದರೆ ಇದಕ್ಕೆ ಸರಿಯಾದ ಪ್ರೋತ್ಸಾಹ ಸರ್ಕಾರದಿಂದ ಸಿಗುತ್ತಿಲ್ಲ. ಉಡುಪಿಯಲ್ಲಿ ಶುದ್ಧ ಆಯುರ್ವೇದದ ಕಾಲೇಜು ಇದೆ. ಈ ಕಾಲೇಜಿಗೆ ಸಕಾಲದಲ್ಲಿ ಸರ್ಕಾರದವರು ಗ್ರಾಂಟನ್ನು ಕೊಡುತ್ತಿಲ್ಲ. ಇದರಿಂದ ಆ ಕಾಲೇಜನ್ನು ನಡೆಸಲು ಹೆಚ್ಚಿನ ಉತ್ತೇಜನ ಸಿಗದಂತಾಗಿದೆ. ಈ ಒಂದು ಕಾಲದಲ್ಲಿ ಶುದ್ಧ ಆಯುರ್ವೇದದ ಪದ್ಧತಿಯು ಬಹಳ ಉತ್ತಮ ರೀತಿಯಲ್ಲಿ ನಡೆದುಕೊಂಡು ಬರುತ್ತಿದೆ. ಉಡುಪಿಯಲ್ಲಿರುವ ಕಾಲೇಜಿನವರಿಗೆ ಜಮೀನು ಬೇಕಾದಾಗ ಸರ್ಕಾರದವರು ಜಮೀನನ್ನು ಹಣಕ್ಕೆ ಮಾರಾಟ ಮಾಡಿದಿರಿ. ಮಾರಾಟ ಮಾಡದೆ ಉತ್ತೇಜನ ಕೊಡುವ ರೀತಿಯಲ್ಲಿ ಮುಫತ್ತಾಗಿ ಕೊಡಬೇಕಾಗಿತ್ತು. ಈಗಲಾದರೂ ಸಹ ಆ ಜಮೀನಿನಿಂದ ಸರ್ಕಾರದವರು ಪಡೆದ ಹಣವನ್ನು ವಾಪಸ್ಸು ಕೊಡಬೇಕು. ಶುದ್ಧ ಆಯುರ್ವೇದದ ಬಗ್ಗೆ ಇನ್ನೂ ಹೆಚ್ಚಿನ ಉತ್ತೇಜನವನ್ನು ಸರ್ಕಾರದವರು ಕೊಡುವುದು ಅವಶ್ಯಕವಾಗಿದೆಯೆಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಅನೇಕ ಆಸ್ಪತ್ರೆಗಳಲ್ಲಿ ವಿದ್ಯುಚ್ಛಕ್ತಿ ಇಲ್ಲ. ಉದಾಹರಣೆಗೆ ಹೇಳಬೇಕಾದರೆ, ನಮ್ಮ ಕೊಡಗು ಜಿಲ್ಲೆಯ ಬೆಟ್ಟಳ್ಳಿ, ಮೂರನಾಡ್, ಮಾದಾಪುರ, ವಿರಾಜಪೇಟೆ ಟಿ. ಬಿ. ಆಸ್ಪತ್ರೆಗಳಲ್ಲಿ ವಿದ್ಯುಚ್ಛಕ್ತಿ ಇಲ್ಲ. ಈ ಆಸ್ಪತ್ರೆಗಳ ಸಮೀಪದಲ್ಲಿಯೇ ಲೈಟ್ ಕಂಬ ಇದ್ದರೂ ಸಹ ಕಳೆದ 7-8 ವರ್ಷಗಳಿಂದ ಲೈಟ್ ಕೊಟ್ಟಿಲ್ಲ. ವಿರಾಜಪೇಟೆ ಟಿ. ಬಿ. ವಾರ್ಡಿನ ಬಗ್ಗೆ ಹೇಳಬೇಕೆಂದರೆ ಅಲ್ಲಿ ಸರಿಯಾದ ಕಕ್ಕಸ್ ವ್ಯವಸ್ಥೆ ಇಲ್ಲ. ಕಕ್ಕಸ್‌ಗಳಲ್ಲಿ ಟಿನ್ ಇಟ್ಟು ದಿನವೂ ಬದಲಾಯಿಸುವ ಪದ್ಧತಿ ಇದೆ. ಇದರಿಂದ ಹೊಸ ರೋಗಗಳು ಹರಡುವುದಕ್ಕೆ ಅವಕಾಶವಾಗುತ್ತದೆ. ಹೋದ ಸಾರಿ ಹಿಂದಿನ ಆರೋಗ್ಯ ಸಚಿವರಾಗಿದ್ದ ಶ್ರೀ ಪುಟ್ಟಸ್ವಾಮಿಯವರು ಅಲ್ಲಿಗೆ ಬಂದಿದ್ದಾಗ ಅವರಿಗೆ ಈ ಒಂದು ಪದ್ಧತಿಯನ್ನು ತೋರಿಸಿದಾಗ, ಅವರು ಈ ರೀತಿಯ ಒಂದು ಪದ್ಧತಿಯನ್ನು ನಾನು ನೋಡಿಲ್ಲ, ಇದನ್ನು ಸರಿಪಡಿಸಲಿಕ್ಕೆ 15 ದಿವಸಗಳೊಳಗಾಗಿ ಇಲಾಖೆಯ ಡೈರೆಕ್ಟರನ್ನು ಕಳಿಸುತ್ತೇನೆಂದು ಹೇಳಿದ್ದರು. ಅವರು ಕಣ್ಣಿನಲ್ಲಿ ನೋಡಿದಂಥ ವಿಚಾರ, ಈವರೆಗೆ ಅದನ್ನು ಸರಿಪಡಿಸುವ ಪ್ರಯತ್ನ ಮಾಡಿಲ್ಲ. ಈಗಿನ ಮಾನ್ಯ ಆರೋಗ್ಯ ಮಂತ್ರಿಗಳಾದರೂ ಕೂಡ ನಮ್ಮ ಕಡೆಗೆ ಬಂದು, ಅಲ್ಲಿನ ಪರಿಸ್ಥಿತಿಯನ್ನು ಗಮನಿಸಿ ಇದನ್ನು ತುರ್ತಾಗಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

5-00 P. M.

ಪ್ರಾಥಮಿಕ ಶಾಲೆಗಳನ್ನು ತುಂಬ ತೆರೆದಿದ್ದೇವೆ ಎಂದು ರಾಜ್ಯಪಾಲರು ಹೇಳಿದ್ದಾರೆ. ಕೊಡಗಿನಲ್ಲಿ ಏನಾಗಿದೆ ಎಂದರೆ ಪ್ರಾಥಮಿಕ ಶಾಲೆಗಳನ್ನು ತೆರೆದಿದ್ದಾರೆ. ಆದರೆ ಅಲ್ಲಿ ಉಪಾಧ್ಯಾಯರೇ ಇಲ್ಲದಿದ್ದರೆ ಏನು ಪ್ರಯೋಜನ? ಡಿವಿಜನಲ್ ಲೆವೆಲ್ ರಿಕ್ರೂಟ್‌ಮೆಂಟ್ ಕಮಿಟಿಯಿಂದ ಅನೇಕ ಉಪಾಧ್ಯಾಯರುಗಳ ನೇಮಕವಾಯಿತು. ಆ ಸಂದರ್ಭದಲ್ಲಿ ಕೆಲವರು ಅಗ್ರೀವ್ಡ್ ಉಪಾಧ್ಯಾಯರು ಹೈಕೋರ್ಟಿಗೆ ರಿಟ್ ಹಾಕಿದ್ದರಿಂದ ಕೆಲಸ ಮಾಡಿಕೊಂಡಿರತಕ್ಕ ಉಪಾಧ್ಯಾಯರುಗಳು ಕೂಡ ಮನೆಗೆ ಹೋಗಬೇಕಾಯಿತು. ಈಗ 160 ಉಪಾಧ್ಯಾಯರುಗಳ ಸ್ಥಾನ ಖಾಲಿ ಇದೆ. ಹೈಕೋರ್ಟಿನಲ್ಲಿ ಈ ವಿಷಯ ತೀರ್ಮಾನವಾಗಬೇಕಾದರೆ ಒಂದು ವರ್ಷ ಹೋಗಬಹುದು, ಎರಡು ವರ್ಷ ಹೋಗಬಹುದು. ಯಾವಾಗ ತೀರ್ಮಾನವಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆ ಸಮಯದ ತನಕ ವಿದ್ಯಾರ್ಥಿಗಳ ಗತಿ ಏನು? ಇದಕ್ಕೆ ಯಾವುದಾದರೂ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಹೈಕೋರ್ಟಿಗೆ ರಿಟ್ ಹೋಗಿದ್ದರೂ ಕೂಡ ಉಪಾಧ್ಯಾಯರಿಲ್ಲದೆ ಇದ್ದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದರಿಂದ ಅದಕ್ಕೆ ಯಾವುದಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕು. ಹಾಗೆ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಿದೆ. ಹೈಕೋರ್ಟಿಗೆ ರಿಟ್ ಹಾಕಿ, ಸ್ಟೇ ಆರ್ಡರ್ ಕೊಟ್ಟಿದ್ದರೆ ಅದನ್ನು ವೆಕೇಟ್ ಮಾಡಿಸಿ, ತಾತ್ಕಾಲಿಕವಾಗಿ ಉಪಾಧ್ಯಾಯರುಗಳನ್ನು ನೇಮಕ ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಈ ತನಕ ಹಾಗೆ ಮಾಡದೆ ಸರ್ಕಾರ ದೊಡ್ಡ ಅಪರಾಧ ಮಾಡಿದೆ ಎಂದು ಹೇಳಬೇಕಾಗಿದೆ. ಈ ವಿಚಾರವನ್ನೂ ಮತ್ತು ನಾನು ಹೇಳಿದ ಇತರ ಎಲ್ಲ ವಿಚಾರಗಳನ್ನೂ ಸರ್ಕಾರದವರು ತೀವ್ರವಾಗಿ ಪರಿಶೀಲಿಸಿ, ಅವುಗಳ ಕಡೆಗೆ ಗಮನ ಹರಿಸಿ ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ, ನನಗೆ ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಚಿಕ್ಕೇಗೌಡ (ಗುಬ್ಬಿ).—ಅಧ್ಯಕ್ಷರೇ, ಮೊದಲನೆಯದಾಗಿ ನನ್ನ ಶರಣು, ಶರಣಾರ್ತಿಗಳನ್ನು ಸಲ್ಲಿಸುತ್ತೇನೆ. ನಮ್ಮರಾಜ್ಯಪಾಲರು 13ನೇ ತಾರೀಖಿನ ದಿವಸ ಭಾಷಣ ಮಾಡಿ ಎಲ್ಲ ವಿಚಾರವನ್ನೂ ಕೂಲಂಕಷವಾಗಿ ಕೊಟ್ಟಿರುತ್ತಾರೆ. ಆ ವಿಚಾರಗಳನ್ನು ನಾನು ಅನುಮೋದಿಸುತ್ತಾ ನನ್ನ ಶರಣಾರ್ತಿಗಳನ್ನು ಅರ್ಪಿಸುತ್ತೇನೆ. ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡುವುದಕ್ಕೆ ಮೊದಲು ಕೆಲವು ವಿಚಾರಗಳನ್ನು ನನಗೆ ತಿಳಿದುದನ್ನು ಹೇಳಬೇಕೆಂದು ನನ್ನ ಅಭಿಪ್ರಾಯವಿದೆ. ನಾನು ಅಷ್ಟು ವಿದ್ಯಾವಂತನಲ್ಲ, ನಾನು ಯಾವತ್ತಿಗೂ ಭಾಷಣ ಮಾಡಿಲ್ಲ. ಏನಾದರೂ ವ್ಯತ್ಯಾಸ ಬಂದರೆ ಕ್ಷಮಿಸಬೇಕಾಗಿ ಪ್ರಾರ್ಥನೆ.

ಹಿಂದೆ 100—150 ವರ್ಷಗಳ ಕಾಲ ಬ್ರಿಟಿಷರ ಸರ್ಕಾರದಲ್ಲಿ ನಾವು ಸಿಕ್ಕಿಕೊಂಡಿದ್ದೆವು. ಈಗ ನಾವೇ ಕಾರುಬಾರು ಮಾಡುವುದಕ್ಕೆ ಅವಕಾಶವಾಗಿದೆ. ಮಹಾತ್ಮ ಗಾಂಧಿ ಅವರು, ನೆಹರೂ ಅವರು, ಸುಭಾಸ್ ಚಂದ್ರ ಬೋಸರು ಮತ್ತು ಇತರರು ಬಹಳ ಕಷ್ಟಪಟ್ಟು ಸ್ವಾತಂತ್ರ್ಯವನ್ನು ಪಡೆಯಬೇಕೆಂದು ಪ್ರಾಣ ತ್ಯಾಗ ಮಾಡಿ ನಮಗೆ ಸ್ವರಾಜ್ಯಸಂಪಾದನೆ ಮಾಡಿಕೊಟ್ಟರು. ಕರ್ಣಾಟಕಕ್ಕೆ ಈಚೆಗೆ ಮಂತ್ರಿಗಳಾಗಿ ಬಂದಂಥ ಮಾನ್ಯ ಕೆ. ಹನುಮಂತಯ್ಯನವರು ಈ ವಿಧಾನ ಸೌಧವನ್ನು ಕಟ್ಟಿಸಿ ಸದಸ್ಯರು ಕುಳಿತುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ಅವರನ್ನು ವಂದಿಸಬೇಕಾಗಿದೆ. ಪ್ರಜಾಸತ್ತೆಯ ಪ್ರಕಾರ ಯಾವ ಕಾಲದಲ್ಲಿಯೂ ಮಾಡದಂಥ ಕೆಲಸಕಾರ್ಯಗಳನ್ನು ಸರ್ವರೂ ಒಂದೇ ಎನ್ನುವ ಭಾವನೆಯನ್ನಿಟ್ಟು ಕಾರುಬಾರು ಮಾಡಿಕೊಂಡು ಬಂದಿದ್ದಾರೆ; ಹಿಂದೆ ಎಂದೂ ಆಗದೆ ಇರುವ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ. ಕರ್ಣಾಟಕದ ಮುಖಂಡರಾಗಿ ಮಾನ್ಯ ನಿಜಲಿಂಗಪ್ಪನವರು ಬಹಳ ದುಡಿದು ಕರ್ಣಾಟಕ ರಾಜ್ಯವನ್ನು ಎಲ್ಲರ ಸಹಾಯದಿಂದ ಕಟ್ಟಿದರು. ಸ್ವರಾಜ್ಯ ಬಂದ ಮೇಲೆ ದ್ವಾಪರ ಯುಗದಲ್ಲಿ ಕೌರವರ ಪಡೆ ಇದ್ದ ಹಾಗೆ ನಮ್ಮಲ್ಲಿ ಎದುರು ಪಕ್ಷ ಕೂಡ ಬಂತು. ಧರ್ಮರಾಯನ ಸಭೆ, ಕೌರವರ ಸಭೆ ಎಂದು ಹೇಳುವ ಹಾಗೆ ಮಾನ್ಯ ಚೆನ್ನಯ್ಯನವರು ಎದುರು ಪಕ್ಷದಲ್ಲಿ ಬಂದಿದ್ದಾರೆ. ಕೌರವರ ಪಕ್ಷದಲ್ಲಿ ಶಿವಪ್ಪನವರು ಕೌರವರು, ಸಿದ್ಧವೀರಪ್ಪನವರು ದುಶ್ಶಾಸನ, ಚೆನ್ನಬಸಪ್ಪನವರು ಕರ್ಣ. ಕೌರವರು 101 ಜನರಿದ್ದರೆ ವಿರೋಧ ಪಕ್ಷದವರು ಇಲ್ಲಿ 89 ಜನ ಮಾತ್ರ ಇದ್ದಾರೆ. ಧರ್ಮದಿಂದ ಕಾಂಗ್ರೆಸ್ ಪಕ್ಷದವರು ರಾಜ್ಯ ಆಳಿಕೊಂಡು ಬಂದರೆ, ಅದರಲ್ಲಿ ತಪ್ಪುಗಳಿಲ್ಲದೆ ಇದ್ದರೂ ಕೂಡ ತಪ್ಪು ಹುಡುಕಿ ವ್ಯಾಜ್ಯ ಮಾಡುವುದೇ ಅವರ ಕರ್ತವ್ಯವಾಗಿದೆ. ದ್ರೌಪದಿ ವಸ್ತ್ರಾಪಹರಣವಾದಂತೆ ಇವರು ಏನೂ ಮಾಡಿಲ್ಲ, ಈ ಸಭೆಯ ಮರ್ಯಾದೆಯನ್ನು ಉಳಿಸಿಕೊಟ್ಟಿದ್ದಾರೆ. ಮಾನ್ಯ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾದಮೇಲೆ ಕರ್ಣಾಟಕಕ್ಕೆ ಕೀರ್ತಿಯನ್ನು ತಂದಿದ್ದಾರೆ. ಅವರು ಮುಖ್ಯ ಮಂತ್ರಿ ಸ್ಥಾನವನ್ನು ಬಿಡುವ ಕಾಲದಲ್ಲಿ ವೀರೇಂದ್ರ ಪಾಟೀಲರನ್ನು ಮುಖ್ಯ ಮಂತ್ರಿಗಳಾಗಿ ಮಾಡಿದ್ದಾರೆ. ಅವರು ಬಹಳ ಹುರುಪಿನಲ್ಲಿದ್ದಾರೆ. ಅವರು ಅನೇಕ ಜನ ತರುಣರನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಂಡು ರಾಜ್ಯಭಾರವನ್ನು ಚೆನ್ನಾಗಿ ಮತ್ತು ದಿಟ್ಟತನದಿಂದ ಮಾಡುತ್ತಿದ್ದಾರೆ. ಮಂತ್ರಿಮಂಡಲದಲ್ಲಿ ಯಜಮಾನರೂ ಇರಲಿ ಎಂದು ಮಾನ್ಯರಾದ ದೊಡ್ಡ ಮೇಟಿ ಅವರು, ಕೌಜಲಗಿ ಅವರು ಹೀಗೆ ಮೂರು ನಾಲ್ಕು ಜನ ಹಿರಿಯರನ್ನು ತೆಗೆದುಕೊಂಡಿದ್ದಾರೆ. ಇವರು ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದರೂ ಎದುರು ಪಕ್ಷದವರು ಕೌರವರ ದೃಷ್ಟಿಯಿಂದ, ಕಾಮಾಲೆ ರೋಗದವರಿಗೆ ಯಾರನ್ನು ಕಂಡರೂ ಅರಸಿನದ ಬಣ್ಣದಂತೆ ಕಾಣುವಂತೆ ಹೇಳುತ್ತಾರೆ ಇನ್ನೂ ಚೆನ್ನಾಗಿ ಕೆಲಸ ಮಾಡಲಿ, ಇನ್ನೂ ಮುಂದುವರಿಯಲಿ ಎಂದು ಅವರು ತಪ್ಪುಗಳನ್ನು ಎತ್ತಿ ತೋರಿಸುತ್ತಿದ್ದಾರೆಂದು ನಾನಾದರೂ ಭಾವಿಸುತ್ತೇನೆ.

ಎದುರು ಪಕ್ಷದವರು ಕಾರುಬಾರು ನಡೆಸತಕ್ಕ ಸರ್ಕಾರವನ್ನು ಬಯ್ಯಬೇಕಾದರೆ ಎಚ್ಚರಿಕೆಯಿಂದ ಬಯ್ಯಿರಿ. ಬಯ್ಯುವಾಗ ಸವಿನುಡಿಯಿಂದ ಬಯ್ಯಿರಿ. ಇವರು ಬಯ್ಯುವುದನ್ನು ನೋಡಿದರೆ ನನಗೆ ಬಹಳ ನಾಚಿಕೆಯಾಗುತ್ತದೆ.

ಶ್ರೀ ಅಜೀಜ್‌ಸೇಟ್‌ರವರು ಬಹಳ ಬುದ್ಧಿವಂತರು. ಅವರಿಗೆ ನಾನು ಜಾಸ್ತಿ ಹೇಳಲಾರೆ. ಪಾಂಡವರ ಮೇಲೆ ಕೌರವರ ಹೊಡೆತಗಳು ಬೀಳುತ್ತವೆ. ಕೌರವರು ಎಂದರೆ ವಿರೋಧ ಪಕ್ಷದವರು. ಪಾಂಡವರು ಎಂದರೆ ಆಳುವ ಪಕ್ಷದವರು. ನಾನಂತೂ ಎಂದೂ ಜೈಲಿಗೆ ಹೋಗಿಲ್ಲ. ಇದರ ಬಗ್ಗೆ ನಾನು ಹೆಚ್ಚು ಹೇಳಲಾರೆ. ನಮ್ಮ ರಾಜ್ಯಪಾಲರು ಅಭಾವ ಪರಿಸ್ಥಿತಿ ಕೆಲಸ ಕಾರ್ಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ 3—4 ವರ್ಷಗಳಿಂದಲೂ ಮಳೆ ಇಲ್ಲದೆ ವ್ಯವಸಾಯಗಾರರು ಬಹಳ ಕಷ್ಟಪಡುತ್ತಿದ್ದಾರೆ. ನಮ್ಮ ಸರ್ಕಾರದವರು ಫ್ಯಾಮಿನ್ ರಿಲೀಫ್ ವರ್ಕ್‌ನಲ್ಲಿ ಬೇಕಾದಷ್ಟು ಕೆಲಸ ಮಾಡಿದ್ದಾರೆ. ಇನ್ನು ಮುಂದೂ ಮಾಡುತ್ತಾರೆ. ಕೆಲವು ಕಡೆ ಗಂಜಿ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು. ಮಳೆ ಸರಿಯಾಗಿ ಆಗದೇ ಇರುವುದರಿಂದ ರಿಲೀಫ್

ವರ್ಕ್ಸ್ ಕೆಲಸಗಳಿಗೆ ಇನ್ನೂ ಸ್ವಲ್ಪ ದುಡ್ಡು ಕೊಡಿಸಬೇಕು. ಪ್ರತಿಯೊಂದು ಸಂಸಾರಕ್ಕೂ ಒಂದು ಬಾವಿಯನ್ನು ತೋಡಿಸಿಕೊಡಬೇಕು. ಬಾವಿಯನ್ನು ತೆಗೆಯಲು ಅಡವಾನ್ ಬ್ಯಾಂಕ್‌ನವರು ಕೆಲವರಿಗೆ ಸಾಲ ಕೊಟ್ಟಿದ್ದಾರೆ. ಮಳೆಗಾಲದಲ್ಲಿ ಬ್ಯಾಂಕ್‌ನವರು ದುಡ್ಡು ಕೊಡುತ್ತಾರೆ. ಈಗ ಬಾವಿ ತೆಗೆಯುವ ಕಾಲದಲ್ಲಿ ದುಡ್ಡು ಕೊಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಇದು ಬಹಳ ತೊಂದರೆಯಾಗುವುದರಿಂದ ಇದನ್ನು ಪರಿಶೀಲನೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆಯ ವಿಚಾರ. ಈಗ ಜನ ತೋಟ ಮಾಡುತ್ತಾ ಇರುವುದು ಅದು ಇನ್ನೂ ಸಾಲದು. ಕೆಲವು ಮರ, ಸಸಿ ಇವುಗಳಿಗೆ ಖಾಯಿಲೆ ಬೀಳುತ್ತಾಇದೆ. ಅದಕ್ಕೆ ಇನ್ನೂ ಸರಿಯಾದ ಔಷದ ಕಂಡುಹಿಡಿದಿಲ್ಲ. ನನ್ನ ಕ್ಷೇತ್ರದಲ್ಲಿ ಅಡಿಕೆ, ತೆಂಗು ಬೆಳೆಯುತ್ತಾರೆ. ಅದನ್ನು ಬೆಳೆಸಬೇಕಾದರೆ 8–10 ವರ್ಷ ಕಷ್ಟಪಡಬೇಕು. ನಾನೂ ಅನುಭವಿಸಿದ್ದೇನೆ. ಸಂಬಂಧಪಟ್ಟ ಇಲಾಖೆಯಲ್ಲೂ ಅನುಭವಿಗಳು ಇದ್ದಾರೆ. ಆದುದರಿಂದ ವ್ಯವಸಾಯಗಾರರಮೇಲೆ ದೃಷ್ಟಿ ಇಟ್ಟುಕೊಂಡು ಮರಗಳಿಗೆ ರೋಗ ಬರುವುದನ್ನು ತಡೆಗಟ್ಟಲು ನಿವಾರಣೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ದೇಶಕ್ಕೆ ಕರ್ಣಾಟಕ ಎಂದು ಹೆಸರಿಡಬೇಕೆಂದು ಬಹಳ ಜನ ಕಷ್ಟಪಡುತ್ತಿದ್ದಾರೆ. ಆದರೆ ಅನೇಕ ಸದಸ್ಯರು ಕನ್ನಡ ಬರುತ್ತಿದ್ದರೂ ಇಂಗ್ಲೀಷಿನಲ್ಲೇ ಮಾತನಾಡುತ್ತಾರೆ. ನಾನು ಕನ್ನಡದವನು. ಇಂಗ್ಲೀಷ್ ಬರುವುದಿಲ್ಲ. ಕನ್ನಡ ರಾಜ್ಯ, ಕರ್ನಾಟಕ ರಾಜ್ಯ ಎಂದು ಹೇಳುತ್ತಾರೆಯೋ ಅಂಥಾವರು ಕನ್ನಡದಲ್ಲಿ ಮಾತನಾಡುವುದಕ್ಕೆ ಏನು ಅಸಮಾಧಾನವಿದೆ. ಕನ್ನಡವನ್ನು ರಾಜ್ಯ ಭಾಷೆಯನ್ನಾಗಿ ಮಾಡಿ, ಸದಸ್ಯರೆಲ್ಲಾ ಕನ್ನಡದಲ್ಲೇ ಮಾತನಾಡುವಂತೆ ಅಧ್ಯಕ್ಷರು ಅಪ್ಪಣೆ ಕೊಡಬೇಕು. ಎಲ್ಲ ವ್ಯವಹಾರದಲ್ಲೂ ಕನ್ನಡದಲ್ಲೇ ನಡೆಯುವಂತೆ ಮಾಡಿದರೆ ಆಗ ಜನಗಳಿಗೆ ಅನುಕೂಲವಾಗುತ್ತದೆ. ಈಗಿನ ವಿದ್ಯಾಪ್ರಚಾರ ಒಂದೇ ಸಮನಾಗಿದೆಯೇ ಎಂದು ಕೇಳುತ್ತೇನೆ? ಮೊದಲು ಪ್ರೈಮರಿ ಸ್ಕೂಲ್‌ನಲ್ಲಿ ಅ, ಆ, ಇ, ಈ ಎಂದು ಹೇಳಿಕೊಡುತ್ತಿದ್ದರು. ಈಗ ಮೊದಲನೇ ಪಾಠದಲ್ಲೇ ಆಟ, ಪಾಠ, ಊಟ, ಓಟ, ಎಂದು ಹೇಳಿಕೊಡುತ್ತಾರೆ, ಇಂಗ್ಲೀಷಿನಲ್ಲಿ ಎ. ಬಿ. ಸಿ. ಡಿ. ಹೇಳಿ ಕೊಡುವ ಬದಲಾಗಿ ಮೊದಲನೇ ತರಗತಿಯಿಂದಲೇ, ಆಪಲ್. ಬಾಯ್, ಕ್ಯಾಟ್, ಡಾಗ್ ಈ ರೀತಿಯಾದ ವಿದ್ಯಾಭ್ಯಾಸ ಕ್ರಮವಿದೆ. ಅದೇ ರೀತಿ ಕನ್ನಡದಲ್ಲಿಯೂ ಮಾಡಿದರೆ ಕನ್ನಡಕ್ಕೆ ಉತ್ತೇಜನ ಸಿಕ್ಕುವಂತಾಗುತ್ತದೆಯೆ? ಹಿಂದೆ ವ್ಯಾಕರಣ ಬದ್ಧವಾದ ಕಾಗುಣಿತವನ್ನು ಹೇಳಿಕೊಡುತ್ತಿದ್ದರು. ಇದನ್ನು ತಿಳಿಸದೆ ಮುಂದಕ್ಕೆ ಹೋಗುತ್ತಿರಲಿಲ್ಲ. ಆದುದರಿಂದ ಇದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ.

ಇನ್ನು ರೈತರಿಗೆ ಮುಖ್ಯವಾಗಿ ಬೇಕಾದ್ದು ವಿದ್ಯುಚ್ಛಕ್ತಿ. ಈಗ ಕರೆಂಟನ್ನು ಬೊಂಬಾಯಿಗೆ ಕೊಡುತ್ತಿದ್ದೀರಿ. ಆಹಾರಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಪ್ರತಿಯೊಂದು ಸಂಸಾರಕ್ಕೂ ಬಾವಿಗಳನ್ನು ತೆಗೆಸಬೇಕು, ಪಂಪುಸೆಟ್ಟು ಕೊಡಬೇಕು, ವಿದ್ಯುಚ್ಛಕ್ತಿ ಕೊಡಬೇಕು. ಈಗ ನಮ್ಮ ತಾಲ್ಲೂಕಿನಲ್ಲಿ 300 ಬಾವಿಗಳು ಇವೆ. ಇನ್ನೂ ಜಾಸ್ತಿ ಬಾವಿಗಳನ್ನು ಸ್ಥಾಪನೆ ಮಾಡಬೇಕು. ಈ ರೀತಿಮಾಡಿದರೆ ರೈತರಿಗೆ ಹೆಚ್ಚು ಉತ್ತೇಜನ ಕೊಟ್ಟಂತಾಗುತ್ತದೆ. ಈ ಸಾರಿ ನಮ್ಮ ಕಡೆ ಮುಸುಕಿನ ಜೋಳ ಬೆಳೆದಿದ್ದಾರೆ, ಆದುದರಿಂದ ಅಹಾರ ಅಭಾವ ಪರಿಸ್ಥಿತಿ ಬಹಳ ಕಡಿಮೆಯಾಗಿದೆ. ಈಗ ರೈತರಿಗೆ ಬಾವಿಗೆ ಕೊಡತಕ್ಕ ಸಾಲ 5 ಸಾವಿರ ರೂಪಾಯಿ ಸಾಲದು. ಹತ್ತು ಸಾವಿರ ಕೊಡಬೇಕು. ಆಹಾರ ಹೆಚ್ಚು ಬೆಳೆಯಬೇಕು ಎಂದು ಹೇಳುತ್ತಿದ್ದಾರೆ. ಆದುದರಿಂದ ಇದನ್ನು ಪರಿಶೀಲಿಸಿ ಹೆಚ್ಚು ಹೆಚ್ಚು ಆಹಾರ ಬೆಳೆಯಲು ರೈತರಿಗೆ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಸಭಾಪತಿಗಳೇ, ದೇಶದಲ್ಲಿ ಅತಿ ಮುಖ್ಯವಾದ ಆದರಲ್ಲಿಯೂ ಲಕ್ಷಾಂತರ ಜನರು ಈ ದೇಶಕ್ಕೆ ಬೆನ್ನೆಲುಬಾಗಿರತಕ್ಕ ರೈತರು ಅವಲಂಬಿಸಿರುವ ವ್ಯವಸಾಯದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಸರ್ಕಾರದವರು ರೈತರ ಸ್ಥಿತಿಯನ್ನು ಮತ್ತು ಆಹಾರದ ಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಅನೇಕ ಯೋಜನೆಗಳನ್ನು ಮಾಡಿದ್ದಾರೆ. ಆ ಯೋಜನೆಗಳಿಂದ ಏನಾದರೂ ಅನುಕೂಲ ನೇರವಾಗಿ ರೈತರಿಗೆ ಇಲ್ಲಿಯವರೆಗೂ ತಲುಪಿವೆಯೇ ಎಂಬುದನ್ನು ನೋಡುವುದಕ್ಕೆ ಹೋಗಿಲ್ಲವೆಂದು ಕಾಣುತ್ತದೆ. ರೈತರಿಗೆ ಬೇಕಾದ ಬಾವಿಗಳನ್ನು, ಸಣ್ಣ ಕೆರೆಗಳನ್ನು ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸುವುದರ ಮೂಲಕ ಅವರ ಸ್ಥಿತಿಯನ್ನು ಉತ್ತಮಪಡಿಸುತ್ತೇವೆಂದು ಹೇಳಿದ್ದರೂ ರೈತನಿಗೆ ಏನೂ ಪ್ರಯೋಜನ ಆಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳಲ್ಲಿ ಹೋಗಿ ಕೇಳಿದಾಗ ಇನ್ನೂ ಸರ್ಕಾರದ ಆಜ್ಞೆ ಬಂದಿಲ್ಲ

(ಶ್ರೀ ಕೆ. ಎಂ. ತಮ್ಮಯ್ಯ)

ಎಂದು ಹೇಳುತ್ತಿರುವುದನ್ನು ಕೇಳಿದ್ದೇವೆ. ಈ ರೀತಿ ಮಾಡುವುದರಿಂದ ದೇಶದಲ್ಲಿ ವ್ಯವಸಾಯ ವನ್ನು ಅಭಿವೃದ್ಧಿ ಪಡಿಸುವುದು ಸಾಧ್ಯವೇ, ಈ ಯೋಜನೆಗಳ ಪ್ರಯೋಜನ ರೈತರಿಗೆ ನೇರವಾಗಿ ಹೋಗುತ್ತಿವೆಯೇ, ಎನ್ನುವುದನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಯಾವ ತಾಲ್ಲೂಕನ್ನು ತೆಗೆದುಕೊಂಡರೂ ವ್ಯವಸಾಯಕ್ಕೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂದು ಯೋಚನೆ ಮಾಡಬೇಕಾಗಿದೆ.

ವಿದ್ಯಾ ಇಲಾಖೆಯಲ್ಲಿ ಸರ್ಕಾರದವರು ಪಾಲಿಟೆಕ್ನಿಕ್ಸ್ ಮುಂತಾದ ಕಾಲೇಜು ಪ್ರಾರಂಭ ಮಾಡುವುದನ್ನು ಬಿಟ್ಟು ಪ್ರತಿ ತಾಲ್ಲೂಕಿನಲ್ಲಿಯೂ ವ್ಯವಸಾಯ ಶಾಲೆಗಳನ್ನು ಮಾಡುವುದರ ಮೂಲಕ ಅನೇಕರಿಗೆ ಅನುಕೂಲ ಮಾಡಬಹುದು ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ವ್ಯವಸಾಯ ಕಾರ್ಮಿಕರ ಸ್ಥಿತಿಯನ್ನು ನೋಡಿದರೆ ಅದು ಬಹಳ ಶೋಚನೀಯ ಎಂದು ಹೇಳಬೇಕಾಗಿದೆ. ಕೈಗಾರಿಕಾ ಕಾರ್ಮಿಕರಿಗೆ ಅನೇಕ ಸವಲತ್ತುಗಳನ್ನು ಒದಗಿಸಿದ್ದಾರೆ. ಮೆಡಿಕಲ್ ಏಡ್ ಜೀವವಿಮೆ ಅನುಕೂಲ ಮಾಡಿಕೊಟ್ಟಿದ್ದಾರೆ. ಆದರೆ ವ್ಯವಸಾಯ ಕಾರ್ಮಿಕನಿಗೆ ಏನು ಕೊಟ್ಟಿದ್ದಾರೆ ಎಂದು ಯೋಚನೆ ಮಾಡಬೇಕು. ಅವನಿಗೆ ಒಂದು ತಿಂಗಳಿನಲ್ಲಿ 25 ದಿವಸ ಮಾತ್ರ ಕೂಲಿ ಸಿಕ್ಕುತ್ತದೆ. ಅವನಿಗೆ ಒಂದು ದಿವಸಕ್ಕೆ ಕೊಡುವುದು ಒಂದು ರೂಪಾಯಿ. ಅದು ಒಂದು ಹೊತ್ತಿಗೂ ಸಾಲದು. ಮತ್ತೆ ಅವನಿಗೆ ವರ್ಷದ ಹನ್ನೆರಡು ತಿಂಗಳೂ ಕೆಲಸ ಸಿಕ್ಕುವುದೇ ಇಲ್ಲ. ಅವರು ನಿಮ್ಮ ಮೇಲೆ ದಂಗೆ ಎದ್ದರೆ ಸರ್ಕಾರದ ಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಿದಹಾಗೆ ಕಾಣುವುದಿಲ್ಲ. ಕೋಟ್ಯಾಂತರ ಜನರ ಸ್ಥಿತಿ ತಿನ್ನುವುದಕ್ಕೆ ಅನ್ನವಿಲ್ಲದೆ, ಉಡುವುದಕ್ಕೆ ಬಟ್ಟೆ ಇಲ್ಲದೆ ಅವರು ದೊಡ್ಡ ದೊಡ್ಡ ಜಮೀನ್ದಾರರ ಮನೆಗಳಲ್ಲಿ ಊಳಿಗದವರಾಗಿ ಕೆಲಸ ಮಾಡುತ್ತಿದ್ದಾರೆ. ಸಮಾಜ ಕಲ್ಯಾಣ ಎಂದು ಅನೇಕರು ಹೇಳುತ್ತಿದ್ದರೂ ಕೂಡ ಈ ಕಾರ್ಮಿಕರಿಗೆ ಏನೂ ಸಹಾಯ ಆಗಿಲ್ಲ. ಈ ರೀತಿ ಹೆಚ್ಚಾಗಿ ಇರುವವರು ಹರಿಜನರು, ಗಿರಿಜನರು ಮತ್ತು ಇತರ ಹಿಂದುಳಿದ ಪಂಗಡಗಳವರು. ಇವರ ವಿಚಾರದಲ್ಲಿ ಯೋಚನೆ ಮಾಡುತ್ತಿಲ್ಲ. ಹಾಸ್ಟಲುಗಳನ್ನು ತೆರೆಯಬೇಕು, ಜಮೀನು ಹಂಚಬೇಕು, ಹೀಗೆ ಮಾಡುವುದರಿಂದ ಅವರ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಹೇಳುತ್ತಿದ್ದಾರೆ. ಜಮೀನಿಲ್ಲದ ಕಾರ್ಮಿಕನ ಸ್ಥಿತಿ ಏನು ಮಾಡುತ್ತಾರೆ ಎನ್ನುವುದನ್ನು ಹೇಳಿಲ್ಲ. ದೇಶದಲ್ಲಿರುವ ರೈತ ಕಾರ್ಮಿಕರ ಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ವ್ಯವಸಾಯವನ್ನು ಅಭಿವೃದ್ಧಿ ಮಾಡುವುದಕ್ಕೆ ಮತ್ತು ಅದರಲ್ಲಿ ತೊಡಗಿರುವವರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಬಯಸುತ್ತೇನೆ.

ಪ್ರತಿ ಹಳ್ಳಿಗಳಲ್ಲಿ ಕೂಡ ಕಾರ್ಮಿಕರಿಗೆ ಏನೇನು ಸವಲತ್ತುಗಳನ್ನು ಒದಗಿಸಬೇಕೋ ಅದನ್ನೆಲ್ಲಾ ಮಾಡುವುದು ಒಳ್ಳೆಯದು. ಪಟ್ಟಣಗಳಲ್ಲಿ ಕೈಗಾರಿಕಾ ಕಾರ್ಮಿಕರಿಗೆ ಏನೇನು ಸವಲತ್ತುಗಳನ್ನು ಒದಗಿಸಲಾಗಿದೆಯೋ ಅದನ್ನು ಇತರ ಕಾರ್ಮಿಕರಿಗೂ ಒದಗಿಸಿಕೊಟ್ಟರೆ ವ್ಯವಸಾಯಾಭಿವೃದ್ಧಿ ಆಗುವುದರಲ್ಲಿ ಸಂದೇಹವಿಲ್ಲ ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ವ್ಯವಸಾಯದ ಬಾವಿಗಳಿಗಾಗಿ ನಾಲ್ಕು ಸಾವಿರ, ಐದು ಸಾವಿರ ರೂಪಾಯಿ ಕೊಡುತ್ತಿದ್ದಾರೆ. ಅಷ್ಟು ಹಣವನ್ನು ಖರ್ಚು ಮಾಡಿ, ಬಾವಿಯಲ್ಲಿ ನೀರು ಬರಲಿಲ್ಲ ಎಂದು ಪುನಃ ಹೆಚ್ಚು ಹಣಕ್ಕಾಗಿ ಅರ್ಜಿ ಹಾಕಿದರೆ ಎರಡು ವರ್ಷವಾದರೂ ಕೂಡ ತೀರ್ಮಾನವೇ ಆಗುವುದಿಲ್ಲ. ಇದರಿಂದ ರೈತ ನಾಲ್ಕೈದುಸಾವಿರ ರೂಪಾಯಿ ಸಾಲಗಾರನಾದನೇ ವಿನಾ ಬಾವಿ ತೆಗೆದು, ನೀರನ್ನು ಉಪಯೋಗಿಸಿ, ಬೆಳೆಯನ್ನು ಬೆಳೆದು, ಸಾಲವನ್ನು ತೀರಿಸುವ ಸ್ಥಿತಿಗೆ ಬರುವಹಾಗೆ ಇಲ್ಲ. ಇದನ್ನೆಲ್ಲ ಪರಿಗಣಿಸಬೇಕು.

ವ್ಯವಸಾಯದ ಇಲಾಖೆಯಲ್ಲಿ ಟ್ರಾಕ್ಟರುಗಳಿವೆ. ರೈತನು ಅದಕ್ಕೆ ಅರ್ಜಿಹಾಕಿದರೆ ಒಂದು ವರ್ಷವಾದರೂ ಸಿಕ್ಕುವುದಿಲ್ಲ. ಅನೇಕ ಹೊಸ ತರಹ ತಳಿ ಬೀಜವನ್ನು ರೈತನಿಗೆ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಅದು ಯಾವುದೂ ರೈತನಿಗೆ ಹೋಗುವುದಿಲ್ಲ. ಅಧಿಕಾರಿಗಳ ಮನೆಗೆ ಬತ್ತ, ರಾಗಿ, ಗೋಧಿ ಇವೆಲ್ಲ ಹೋಗುತ್ತವೆ. ಸರ್ಕಾರದ ಅಧಿಕಾರಿಗಳಿಗೆ ಸರ್ಕಾರ ಮಾಡಿರುವ ಕಾನೂನಿನ ಭಯವಿಲ್ಲ. ಎಂದು ಇದರಿಂದ ಗೊತ್ತಾಗುತ್ತದೆ. ಇಂಥ ವಿಚಾರಗಳನ್ನು ನಾವು ಸರ್ಕಾರದವರ ಗಮನಕ್ಕೆ ತಂದಾಗ ತಕ್ಷಣ ಏನಾದರೂ ನಡವಳಿಕೆಗಳನ್ನು ನಡೆಸಿದರೆ ಆ ರೀತಿಯ ತೊಂದರೆಗಳು ಬರುವುದಿಲ್ಲ. ಅನೇಕ ಸೊಸೈಟಿಗಳಲ್ಲಿ ರೈತರಿಗೆ ಹಂಚುವುದಕ್ಕೆ ಗೊಬ್ಬರವನ್ನು

ಕೊಟ್ಟಿದ್ದಾರೆ. ಗೊಬ್ಬರದ ವಿಲೇವಾರಿ ಏನೋ ಆಗಿದೆ. ಆದರೆ ಅದೆಲ್ಲ ರೈತನಿಗೆ ಸಿಕ್ಕದೆ ಬೇರೆ ಯಾರಿಗೋ ಮಾರಾಟವಾಗಿದೆ. ಇದನ್ನೆಲ್ಲಾ ಸರ್ಕಾರಕ್ಕೆ ತಿಳಿಸಿದರೂ ಅಂಥವರಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ರೈತನಿಗಾಗಿ ಸರ್ಕಾರದವರು ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಈ ಹಣ ಅವರಿಗೆ ನೇರವಾಗಿ ತಲುಪುವುದಿಲ್ಲ ಎನ್ನುವ ಭಾವನೆ ಬಂದಿದೆ. ರೈತನಿಗೆ ಸಾಲ ಕೊಟ್ಟು ಅವರನ್ನು ಸಾಲಗಾರರನ್ನಾಗಿ ಮಾಡಿದ್ದಾರೆ. ಅವನ ಸ್ಥಿತಿ ಏನೂ ಉತ್ತಮವಾಗಿಲ್ಲ. ರೈತನಿಗಾಗಿ ಏನೇನು ಸಾಲಗಳನ್ನು ಒದಗಿಸುತ್ತೇವೆಂದು ಹೇಳುತ್ತಾರೆಯೋ ಅದರಲ್ಲಿ ಅರ್ಧ ಭಾಗ ಮಧ್ಯಸ್ಥಗಾರರಿಗೆ ಹೋಗಿ ಉಳಿದ ಅರ್ಧ ಭಾಗ ಮುಟ್ಟಬೇಕಾದರೂ ಕೂಡ ಒಂದೆರಡು ತಿಂಗಳು ಕಳೆಯಬೇಕು. ಆ ರೀತಿ ಮಾಡದೆ ಅವನಿಗೆ ಎಷ್ಟು ಸಾಲವಿದೆ ಅದನ್ನು ತೀರಿಸುವ ವ್ಯವಸ್ಥೆಯನ್ನು ಮಾಡಬೇಕು ; ಮತ್ತು ಅದಕ್ಕಾಗಿ ದೀರ್ಘಾವಧಿ ಸಾಲಗಳನ್ನು ಕೊಡಬೇಕು ! ಅಲ್ಪಾವಧಿ ಸಾಲ, ಆಬಾದು ಸಾಲ ಇವುಗಳಿಂದ ಸಾಲ ತೆಗೆದುಕೊಂಡು ಇನ್ನೊಂದು ಸಾಲವನ್ನು ತೀರಿಸುವುದಕ್ಕಾಗುತ್ತದೆಯೇ ಹೊರತು ರೈತನ ಸ್ಥಿತಿ ಉತ್ತಮಗೊಳ್ಳುವುದಕ್ಕೆ ಅನುಕೂಲವಾಗುವುದಿಲ್ಲ. ಮೊದಲು ವ್ಯವಸಾಯ ಕಾರ್ಮಿಕರ ಸ್ಥಿತಿಯನ್ನು ಉತ್ತಮಪಡಿಸಬೇಕು. ಇಲ್ಲದೆ ಹೋದರೆ ಕಮ್ಯುನಿಸ್ಟರು ಗ್ರಾಮಾಂತರ ಪ್ರದೇಶಗಳಿಗೂ ಹೋಗಬಹುದು. ಈಗ ಲಕ್ಷಾಂತರ ಜನ ಯುವಕರು ಕೆಲಸವಿಲ್ಲದೆ ಇದ್ದಾರೆ. ಅವರು ಆರ್ಗನೈಜ್ ಮಾಡಿಕೊಂಡು ಗ್ರಾಮಾಂತರ ಭಾಗಗಳಿಗೆ ಹೋದರೆ ನಕ್ಸಲೀಯರ ತೊಂದರೆ ಕೇರಳದಲ್ಲಿ ಆದುದಕ್ಕಿಂತ ಹೆಚ್ಚಾಗಿ ನಮ್ಮ ದೇಶದಲ್ಲಿ ಆಗುತ್ತದೆ. ವ್ಯವಸಾಯ ಕಾರ್ಮಿಕರ ಸ್ಥಿತಿಯನ್ನು ಉತ್ತಮಪಡಿಸದೆ ಹೋದರೆ ಒಂದಾನೊಂದು ದಿವಸ ಸರ್ಕಾರದಮೇಲೆ ಯುವಕ ರೈತರು ದಂಗೆ ಏಳುವುದರಲ್ಲಿ ಅಭ್ಯಂತರವಿಲ್ಲ.

ಸಮಾಜಕಲ್ಯಾಣದ ವಿಚಾರವಾಗಿ ಹೇಳಬೇಕೆಂದರೆ, ಹೆಣ್ಣು ಮಕ್ಕಳ ಸ್ಥಿತಿಯನ್ನು ಹೇಳುವುದಕ್ಕಾಗುವುದಿಲ್ಲ. ಅಧಿಕಾರಿಗಳ ಕೈಕೆಳಗೆ ಹೇಳಿದ ರೀತಿಯಲ್ಲಿ ನಡೆದುಕೊಂಡರೆ ಕೆಲಸ ಉಳಿಯುತ್ತದೆ, ಇಲ್ಲದೆ ಹೋದರೆ ಕೆಲಸದಲ್ಲಿ ಉಳಿಯುವುದಕ್ಕೆ ಅವಕಾಶವಿಲ್ಲ. ಹೆಣ್ಣು ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಹೆಂಗಸರಿಗೇ ಅಧಿಕಾರ ಕೊಡಿ. ಹೆಂಗಸರು ಅಧಿಕಾರಿಗಳಾಗಿಲ್ಲದ ಕಡೆ ಹೆಣ್ಣು ಮಕ್ಕಳನ್ನು ಹಾಕಬೇಡಿ. ಹೀಗೆ ಮಾಡುವುದರಿಂದ ಹೆಣ್ಣು ಮಕ್ಕಳು ನ್ಯಾಯವಾಗಿ, ಶೀಲವಂತರಾಗಿ ಬಾಳುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಕಳಕಳಿಯಿಂದ ಹೇಳಬಯಸುತ್ತೇನೆ.

ಚಲನಚಿತ್ರ ಸಂಬಂಧದಲ್ಲಿ ನಟರಿಗೆ, ಡೈರೆಕ್ಟರುಗಳಿಗೆ ಸಬ್ಸಿಡಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಕೆಲವು ಚಿತ್ರಗಳಿಗೆ ಸಹಾಯಧನವನ್ನು ಕೊಟ್ಟಿದ್ದಾರೆ. ಹಾಗೆ ಕೊಡುವಾಗ ಕಲೆಯಲ್ಲಿ ನುರಿತವರಿಗೆ, ಕಲೆಯಲ್ಲಿ ನಿಷ್ಣಾತರಾದವರಿಗೆ ಮಾತ್ರ ಕೊಡಬೇಕು. 10 ಚಿತ್ರಗಳಲ್ಲಿ ಪಾತ್ರ ವಹಿಸಿದ್ದಾರೆಂದಾಗಲೀ, ನೂರು ಚಿತ್ರಗಳಲ್ಲಿ ಡೈರೆಕ್ಟರಾಗಿ ಕೆಲಸ ಮಾಡಿದ್ದಾರೆಂದಾಗಲೀ ಸಬ್ಸಿಡಿಯನ್ನು ಕೊಟ್ಟರೆ ಕಲೆಯನ್ನು ಉಳಿಸಿದ ಹಾಗೆ ಆಗುವುದಿಲ್ಲ. ಕಲೆಯನ್ನು ಅರಿತು ಅದರಲ್ಲಿ ನುರಿತವರಿಗೆ ಕನ್ನಡ ಚಿತ್ರಗಳನ್ನು ತಯಾರು ಮಾಡುವವರಿಗೆ ಸಹಾಯ ಧನವನ್ನು ಕೊಟ್ಟರೆ ಕನ್ನಡ ಚಿತ್ರಗಳು ಹೆಚ್ಚು ಮುಂದುವರಿಯುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಸಭಾಧಿಪತಿಗಳೇ, ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ರಾಜ್ಯಪಾಲರು ನೀಡಿದ ಭಾಷಣದ ಮೇಲೆ ಪ್ರತಿಕ್ರಿಯೆ ವ್ಯಕ್ತ ಪಡಿಸುತ್ತ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡ ಬಯಸುತ್ತೇನೆ. ರಾಜ್ಯಪಾಲರ ಭಾಷಣ 42 ಪುಟಗಳನ್ನುಳ್ಳಂಥ ಈ ಪುಸ್ತಕವನ್ನು ಮೊದಲಿನಿಂದ ಕೊನೆಯವರೆಗೂ ನೋಡಿದರೆ ಅದರಲ್ಲಿ ಯಾವ ಆಕರ್ಷಣೀಯವಾದ ಹೊಸ ವಿಚಾರವಾಗಲೀ, ಅಥವಾ ಭಾವನೆಗಳಾಗಲೀ ಕಂಡು ಬರುವುದಿಲ್ಲ. ಇದು ಶಾಲೆಗೆ ಹೋಗತಕ್ಕ ಬಾಲಕನಿಗೆ ಕೊಟ್ಟ ಪಠ್ಯಪುಸ್ತಕದಂತೆ ಇದೆ. ಇದರಲ್ಲಿ ಇದುವರೆಗೂ ಆಗಿರತಕ್ಕ ಮತ್ತು ಆಗಬೇಕಾದ ಕೆಲಸಗಳ ಪಟ್ಟಿಯನ್ನು ಕೊಟ್ಟಿದ್ದಾರೆಯೇ ಹೊರತು ಇದರಲ್ಲಿ ಯಾವ ಆಕರ್ಷಣೀಯವಾದ ವಿಚಾರವಾಗಲೀ ಸಾಧನೆಯಾಗಲೀ ಒಳಗೊಂಡಿಲ್ಲದೆ ಇರುವುದು ತುಂಬ ವಿಷಾದಕರವಾಗಿದೆ. ಒಂದು ವಿಷಯವನ್ನು ಮಾತ್ರ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಅದು ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ನಡೆದ ಚುನಾವಣೆ ವಿಷಯ. ಚುನಾವಣೆಗಳ ವಿಷಯವನ್ನು ನೋಡಿದರೆ ನಿಜವಾಗಿಯೂ ಕೂಡ ಯಾರಿಗಾದರೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರಿಗೆ ಅಯ್ಯೋ ಅನ್ನಿಸುತ್ತದೆ. ಏಕೆಂದರೆ ಈ ಚುನಾವಣೆಗಳು ನಮ್ಮ ರಾಜ್ಯದಲ್ಲಿ ನಡೆದಿರುವುದನ್ನು ನೋಡಿದರೆ ಯಾವರೀತಿಯಿಂದಲೂ ನಿಷ್ಪಕ್ಷಪಾತವಾಗಿ, ನ್ಯಾಯವಾಗಿ ನಡೆದಿವೆಯೇ ಎಂದರೆ ಬಹಳಮಟ್ಟಿಗೆ ಸಂದೇಹ ಉಂಟಾಗತಕ್ಕ ರೀತಿಯಲ್ಲಿ ಚುನಾವಣೆಗಳು ನಡೆದಿವೆ. ಏಕೆಂದರೆ ಹಣ,

(ಶ್ರೀ ಎಂ. ಮಲ್ಲಪ್ಪ)

ಹೆಂಡ, ಪ್ರಭಾವ, ಅಧಿಕಾರಿಗಳ ಪಕ್ಷಪಾತ ಧೋರಣೆ ಮುಂತಾದುವು ಪ್ರಜಾಪ್ರಭುತ್ವಕ್ಕೆ ಕಂಟಕವಾಗಿವೆ. ಸರಕಾರದ ಹಸ್ತಕ್ಷೇಪ ಇದೆಯೋ, ಇಲ್ಲವೋ ಅದು ಬೇರೆ. ಆದರೆ ಅಧಿಕಾರಿಗಳು ನೀತಿಯುತವಾಗಿ, ನ್ಯಾಯವಾಗಿ ನಡೆದುಕೊಂಡಿಲ್ಲ. ಈ ಚುನಾವಣೆಯಲ್ಲಿ ಭಾಗವಹಿಸಿದ ಒಬ್ಬೊಬ್ಬ ಓಟುದಾರರೂ ಹತ್ತಾರು ಸಲ ಓಟುಮಾಡಿದ್ದಾರೆ. ಇದನ್ನು ಹೆಚ್ಚಾಗಿ ಪ್ರಸ್ತಾಪ ಮಾಡಬೇಕಾಗಿಲ್ಲ. ಇದನ್ನು ಕಾಂಗ್ರೆಸ್ಸಿನ ಶ್ರೀಮತಿ ನಾಗರತ್ನಮ್ಮನವರೇ ಹೇಳಿದ್ದಾರೆ. ಮುನಿಸಿಪಲ್ ಚುನಾವಣೆಯಲ್ಲಿ, ಅಥವ ಜನರಲ್ ಎಲೆಕ್ಷನ್ನಿನಲ್ಲಿ ಒಬ್ಬ ಓಟುದಾರ ಒಳಗೆ ಹೋಗಿ ಓಟುಮಾಡಿದರೆ ಮಸಿಯಲ್ಲಿ ಚುಕ್ಕೆ ಇಟ್ಟು ಗುರುತುಮಾಡುತ್ತಿದ್ದರು. ಆದರೆ ಈ ಚುನಾವಣೆಯಲ್ಲೇಕೆ ಹಾಗೆ ಓಟು ಮಾಡಿದವರಿಗೆ ಗುರುತುಮಾಡಲಿಲ್ಲ? ಏಕೆ ಹಾಗೆ ಮಾಡಿ ಫ್ರಾಡ್ ಮಾಡುವುದನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡಲಿಲ್ಲ? ಅದಕ್ಕೆ ತಕ್ಕಂತೆ ಏಕೆ ಚುನಾವಣಾ ಕಾನೂನನ್ನು ಬದಲಾಯಿಸಲಿಲ್ಲ? ನಮ್ಮದು ಪ್ರಜಾಪ್ರಭುತ್ವ. ಇದರಲ್ಲಿ ಯಾರೇ ಗೆಲ್ಲಲಿ, ಯಾರೇ ಸೋಲಲಿ, ಚುನಾವಣೆ ನ್ಯಾಯವಾಗಿ ನಡೆಯುತ್ತದೆ, ನಿಷ್ಪಕ್ಷಪಾತವಾಗಿ ನಡೆಯುತ್ತದೆ ಎಂಬ ನಂಬಿಕೆ ಜನರಿಗುಂಟಾಗಬೇಕು. ನಂಬಿಕೆ ಈಗ ಅಳಿಸಿಹೋಗಿದೆ. ಈ ಬಗ್ಗೆ ಯೋಚನೆಮಾಡಬೇಕಾದ್ದು ಅವಶ್ಯಕ ಎಂದು ಈ ಸಮಯದಲ್ಲಿ ಹೇಳುತ್ತೇನೆ.

5-30 P.M.

ಇದರಲ್ಲಿ ಮಹಾಜನ್ ವರದಿಯ ವಿಷಯ ಕೂಡ ಪ್ರಸ್ತಾಪಿಸಲ್ಪಟ್ಟಿದೆ. 4-11-1967ರಲ್ಲಿ ಇದರ ಪ್ರಸ್ತಾಪ ಬಂದು ಇದೇ ಸಭೆಯಲ್ಲಿ ನಿರ್ಣಯವಾಗಿ ವರ್ಷ ಕಳೆದರೂ ಕೇಂದ್ರ ಸರಕಾರ ಯಾವ ತೀರ್ಮಾನವನ್ನೂ ಕೈಗೊಂಡಿಲ್ಲ. ನಮ್ಮ ಸರಕಾರ ದಿಟ್ಟತನದಿಂದ ಧೈರ್ಯದಿಂದ ಇದನ್ನು ವಿರೋಧಿಸಿ ಕೇಂದ್ರ ಸರಕಾರ ಒಂದು ನಿರ್ದಿಷ್ಟ ತೀರ್ಮಾನ ಕೈಗೊಳ್ಳುವಂತೆ ಅವರಲ್ಲಿ ಒತ್ತಾಯ ಮಾಡಬೇಕು ಮತ್ತು ಈ ಬಗ್ಗೆ ದಿಟ್ಟತನದ ಹಾದಿ ಹಿಡಿಯಬೇಕು, ಯಾವುದಕ್ಕೂ ಜಗ್ಗಬಾರದು. ಈ ಸಭೆಯಲ್ಲಿ ಪಕ್ಷಭೇದವಿಲ್ಲದೆ ಎಲ್ಲರೂ ಮಹಾಜನ್ ವರದಿಯನ್ನು ಒಪ್ಪಬೇಕು, ಐತೀರ್ಪೆಂದು ಪರಿಗಣಿಸಬೇಕು, ಕೇಂದ್ರ ಸರಕಾರ ಜಾರಿಗೆ ಕೊಡಬೇಕು, ಎಂದು ತಿಳಿಸಬೇಕು. ಒಂದುವೇಳೆ ಕೇಂದ್ರ ಸರಕಾರ ಇದಕ್ಕೆ ಒಪ್ಪಿ ಜಾರಿಗೆ ಕೊಡದಿದ್ದರೆ ತಾತ್ಸಾರ ಭಾವನೆ ತೋರಿಸಿದರೆ ನಮ್ಮ ಸರಕಾರ ಒಂದು ನೋಟೀಸ್ ಕೊಟ್ಟು ಇಷ್ಟು ಕಾಲದೊಳಗಾಗಿ ಜಾರಿಗೆ ಕೊಡದಿದ್ದರೆ ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ಹೇಳಬೇಕು ಎಂದು ಸೂಚಿಸುತ್ತೇನೆ.

1969ನೆಯ ಇಸವಿಯಲ್ಲಿ ಗಾಂಧಿ ಶತಾಬ್ದಿಯನ್ನು ಆಚರಿಸುವವರಾಗಿದ್ದಾರೆ. ಈ ಸಮಯದಲ್ಲಿ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಬೇಕು, ಕನ್ನಡವನ್ನು ರಾಜ್ಯಭಾಷೆ ಮಾಡಬೇಕು ಎಂದು ಹೇಳುವುದನ್ನು ಕಾರ್ಯಗತಮಾಡಬೇಕು.

ಅಭಾವ ಕಾಮಗಾರಿಗಳಿಗೆ ಸರಕಾರ ಕೋಟಿಗಟ್ಟಲೆ ಖರ್ಚುಮಾಡುತ್ತಿದೆ, ಅಲ್ಲಲ್ಲಿ ರಸ್ತೆಗಳನ್ನು ಮಾಡಿದೆ, ಚರಂಡಿಗಳನ್ನು ನಿರ್ಮಿಸಿದೆ, ಹಣ ಖರ್ಚಾಗಿದೆ, ಕೇಳಿದರೆ ಒಂದೊಂದು ತಾಲ್ಲೂಕಿನಲ್ಲಿ 3-4 ಲಕ್ಷ ಖರ್ಚಾಗಿದೆ ಎಂದು ಹೇಳುತ್ತಾರೆ. ಆದರೆ ಇದರಿಂದ ರೈತರಿಗೆ ನೆರವು ಆಗಿದೆಯೇ, ಸಹಾಯವಾಗಿದೆಯೇ ಅಂದರೆ ಇಲ್ಲ. ಏಕೆಂದರೆ ಇಂದು ವಿಶೇಷವಾಗಿ ರೈತರಿಗೆ ಉಪಯೋಗವಾಗುವ ಯೋಜನೆ ಮಾಡಿ ಸರಕಾರ ಹಣ ಖರ್ಚುಮಾಡಿದ್ದರೆ ನಿಜವಾಗಿಯೂ ಬಡವರ ಉದ್ಧಾರವಾಗುತ್ತಿತ್ತು; ಬಹಳ ಅನುಕೂಲವಾಗುತ್ತಿತ್ತು. ಒಂದು ಸಲಹೆ ಈ ಸಮಯದಲ್ಲಿ ಸರಕಾರಕ್ಕೆ ಕೊಡುತ್ತೇನೆ. ಇಂದು ಹಣ ಎಷ್ಟೋ ಖರ್ಚುಮಾಡಿರಬಹುದು, ಅದರಿಂದ ಏನಾದರೂ ಅನುಕೂಲವಾಗಿರಬಹುದು. ಆದರೆ ನೀರಾವರಿ ಯೋಜನೆ ಕೈಕೊಂಡು ಬಾವಿಗಳನ್ನು ತೆಗೆಯಲು ಸಹಾಯ ಮಾಡಿದ್ದರೆ ವಿಶೇಷ ಅನುಕೂಲವಾಗುತ್ತಿತ್ತು. ಸಣ್ಣಪುಟ್ಟ ರೈತರಿಗೆ ಬಾವಿ ತೆಗೆದು ಖುಷ್ಕಿ ಜಮೀನಿನಲ್ಲಿ ತರಿ ಬೆಳೆ ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದರೆ ಅದರಿಂದ ಅವರ ಆರ್ಥಿಕ ಮಟ್ಟ ಸುಧಾರಿಸಿ ಅನುಕೂಲವಾಗುತ್ತಿತ್ತು. ಕಳೆದ ಅಧಿವೇಶನದಲ್ಲಿ ಬಡ್ಜೆಟ್ ಸೆಷನ್‌ನಲ್ಲಿ ಇಲ್ಲಿ ಪ್ರತಿ ಜಿಲ್ಲೆಗೆ ನೂರು ನೀರಾವರಿ ಬಾವಿಗಳನ್ನು ಮಂಜೂರು ಮಾಡುವುದಾಗಿ ಹೇಳಿದ್ದರು. ಆದರೆ ಜಿಲ್ಲೆಗೆ 10-12 ಬಾವಿಗಳನ್ನು ಮಾತ್ರ ತೆಗೆಯಲು ಅವಕಾಶ ಕೊಡಲಾಗಿದೆ. ಕೇಳಿದರೆ ಹಣವಿಲ್ಲವೆಂದು ಹೇಳುತ್ತಾರೆ. ಇಲ್ಲಿ ಬೇಕಾದಷ್ಟು ಹಣ ನೀರಾವರಿ ಬಾವಿಗಳಿಗೆ ಕೊಟ್ಟಿರುವುದಾಗಿ ಹೇಳುತ್ತಾರೆ. ಸ್ಥಳದಲ್ಲಿ ಕೇಳಿದರೆ ಹಣ ಬಂದಿಲ್ಲ, ಡಿವಿಜನಲ್ ಕಮೀಷನರು ರಿಲೀಜ್ ಮಾಡಿಲ್ಲ ಅಥವ ಸರಕಾರ ಈ ಕೆಲಸ ನಿಲ್ಲಿಸಿದೆ ಎಂದು ಹೇಳುತ್ತಾರೆ. ರಸ್ತೆ ಕೆಲಸ ನಿಲ್ಲಿಸಿ ಅಭಾವ ಪ್ರದೇಶಗಳಲ್ಲಿ ಕನಿಷ್ಠ ಜಿಲ್ಲೆಗೆ

ನೂರು ಬಾವಿಗಳಿಗಾದರೂ ಅವಕಾಶ ಕೊಡಬೇಕು. ಹೀಗೆ ಮಾಡಿ ಹಣ ಖರ್ಚುಮಾಡಿದರೆ ಶಾಶ್ವತ ವಾದ ಅನುಕೂಲವಾಗುತ್ತದೆ. ಇದಕ್ಕೆ ತಕ್ಕಷ್ಟು ಹಣ ಒದಗಿಸಬೇಕು. ಹಾಗೆ ಮಾಡಿದರೆ ನಿಜ ವಾಗಿಯೂ ರೈತರಿಗೆ ನೆರವಾಗುತ್ತದೆ. ಇದಲ್ಲದೆ ಎಲ್ಲಿ ಯಾವರೀತಿ ಶಾಶ್ವತವಾದ ಪರಿಹಾರ ಕೊಡಬಹುದು, ಯಾವುದನ್ನು ಮಾಡಿದರೆ ರೈತರಿಗೆ ತಮ್ಮ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳಲು ಅನುಕೂಲವಾಗುತ್ತದೆ ಎಂದು ನೋಡಿ ಅದಕ್ಕೆ ತಕ್ಕ ಯೋಜನೆ ತಯಾರಿಸಿ ಅದಕ್ಕೆ ಬೇಕಾಗುವ ಹಣವನ್ನು ಮುಡುಪಾಗಿಟ್ಟು ಖರ್ಚುಮಾಡಿದರೆ ರೈತರಿಗೆ ಸಹಾಯವಾಗಿ ಅಭಾವ ಕಾಮಗಾರಿ ಗಾಗಿ ಖರ್ಚುಮಾಡುವುದೂ ಸಾರ್ಥಕವಾಗುತ್ತದೆ.

ಭೂಸುಧಾರಣೆ ಜಾರಿಗೆ ಬಂದು ಅನೇಕ ವರ್ಷಗಳಾಗಿವೆ. ಆದರೆ ಗೊಂದಲು ಹೆಚ್ಚಾಗು ತ್ತಿದೆಯೇ ಹೊರತು ಉಳುವವರೇ ಹೊಲದ ಒಡೆಯರಾಗಲು ಅವಕಾಶವಾಗಿಲ್ಲ, ಸುಧಾರಣೆಯ ತತ್ವ ಜಾರಿಗೆ ಬಂದಿಲ್ಲ. ಇದನ್ನು ನಿಜವಾಗಿಯೂ ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದಲ್ಲದೆ ರೈತರಿಗೂ ಮತ್ತು ಭೂಮಿಯ ಒಡೆಯರಿಗೂ ಇರುವ ಸಂಬಂದ ಇತ್ಯರ್ಥಮಾಡುವುದಕ್ಕೆ ರೆವೆನ್ಯೂ ಟ್ರಬ್ಯೂನಲ್‌ಗೆ ಹೋಗಬೇಕಾದರೆ 50-60 ಮೈಲಿಗಳ ದೂರ ಹೋಗಬೇಕು. ಈಗಿರುವ ಟ್ರಬ್ಯೂನಲ್ಲಿಗೆ ಹೋಗಬೇಕಾದರೆ ಸಣ್ಣಪುಟ್ಟ ವ್ಯಾಜ್ಯ ಪರಿಹರಿಸಿಕೊಳ್ಳಲು ಹಣವನ್ನೂ ಹೆಚ್ಚಾಗಿ ಖರ್ಚುಮಾಡಬೇಕು ಕಾಲವೂ ಹೆಚ್ಚಾಗಿ ಬೇಕು. ಇದಕ್ಕಾಗಿ ಮುನ್ಸೀಫ್ ಕೋರ್ಟಿಗೆ ಈ ವ್ಯವಹಾರಗಳನ್ನು ಇತ್ಯರ್ಥ ಮಾಡಲು ಅವಕಾಶ ಕೊಟ್ಟರೆ ರೈತರಿಗೆ ಅನುಕೂಲವಾಗುವುದು. ಆದುದರಿಂದ ಜಾಗ್ರತೆ ಈ ಬಗ್ಗೆ ತೀರ್ಮಾನ ಮಾಡಿ ಅನುಕೂಲ ಕಲ್ಪಿಸಿಕೊಡಬೇಕು.

ಯೋಜನೆ ಬಗ್ಗೆ ಕೂಡ ಪ್ರಸ್ತಾಪವಿದೆ. ನೀರಾವರಿ ಯೋಜನೆ, ವಿದ್ಯುತ್ ಯೋಜನೆ, ವ್ಯವಸಾಯ ಸಂಪತ್ತನ್ನು ಹೆಚ್ಚಿಸುವ ಯೋಜನೆ ಮುಂತಾದ್ದು ಇವೆ. ಇದಕ್ಕೆ ಸಾಕಾದಷ್ಟು ಹಣ ಕೊಟ್ಟು ಕಾರ್ಯಗತ ಮಾಡಿದರೆ ಬಡ ರೈತರಿಗೆ ಅನುಕೂಲವಾಗುತ್ತದೆ. ನಮ್ಮದು ವ್ಯವಸಾಯ ಪ್ರಧಾನವಾದ ದೇಶ, ವ್ಯವಸಾಯಗಾರರ ಸ್ಥಿತಿ ಉತ್ತಮವಾಗದೆ ದೇಶದ ಸ್ಥಿತಿ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಉತ್ತಮವಾಗುವುದಕ್ಕೆ ಅವಕಾಶವಿಲ್ಲ. ಇದಕ್ಕಾಗಿ ರೈತರಿಗೆ ಹೆಚ್ಚುಹೆಚ್ಚಾಗಿ ಅನುಕೂಲವಾಗುವ ಯೋಜನೆಗಳನ್ನು ಹೆಚ್ಚುಹೆಚ್ಚಾಗಿ ಮಾಡಬೇಕು. ವ್ಯವಸಾಯಗಾರನ ಸ್ಥಿತಿ ಉತ್ತಮವಾಗಬೇಕಾದರೆ ಉತ್ಪತ್ತಿ ಹೆಚ್ಚಬೇಕು, ಬೆಳೆಗೆ ನ್ಯಾಯವಾದ ಬೆಲೆ ದೊರೆಯಬೇಕು. ಇದನ್ನು ಗಮನಿಸಿ ಸರ್ಕಾರ ಸರಿಯಾಗಿ ಸಹಾಯಮಾಡಬೇಕು ಎಲ್ಲೆಲ್ಲಿ ವ್ಯವಸಾಯಕ್ಕೆ ಯೋಗ್ಯ ವಾದ ಜಮೀನಿದೆ ಎಂಬುದನ್ನು ನೋಡಿ ಧ್ಯವಷ್ಟೆರು ಏನು ಬೆಳೆಯಬಹುದೋ ಅದಕ್ಕೆ ಉತ್ತೇಜನ ಕೊಡಬೇಕು. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಳ್ಳೆಯ ಅಡಿಕೆ ಬೆಳೆಯಲು ಅವಕಾಶವಿದೆ. ಆದರೆ ತೋಟಗಾರಿಕೆ ಇಲಾಖೆ ಅದಕ್ಕೆ ಉತ್ತೇಜನ ಕೊಡಬೇಕು. ಇದನ್ನು ಗಮನಿಸಿ ಅವಕಾಶ ಮಾಡಿದರೆ ರೈತರಿಗೆ ಅನುಕೂಲವಾಗಿ ಆರ್ಥಿಕಮಟ್ಟ ಹೆಚ್ಚುತ್ತದೆ, ದೇಶದ ಉತ್ಪತ್ತಿಯೂ ಹೆಚ್ಚುತ್ತದೆ.

ಪಶುಸಂಗೋಪನೆ ವಿಷಯ. ಈಗ ಎಷ್ಟೋ ಹಣವನ್ನು ಖರ್ಚುಮಾಡಿ ಸಂಶೋಧನೆ ನಡೆಸು ತ್ತಿದ್ದರೂ ಕೂಡ ದನಗಳಿಗೆ ಬರುವ ಕಾಯಿಲೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ಕೇಳಿದರೆ ಚುಚ್ಚುಮದ್ದು ಮುಂತಾದ್ದಿಲ್ಲವೆಂದು ಹೇಳುತ್ತಾರೆ. ಔಷಧಿ ಸಕಾಲದಲ್ಲಿ ದೊರೆಯುದೆ ಆಕಳು, ಎತ್ತು ಮುಂತಾದುವು ಸತ್ತುಹೋದರೆ ರೈತರ ಗತಿಯೇನು ? ರೋಗವನ್ನು ತಡೆಗಟ್ಟಲು ಸಂಶೋಧನೆ ಮಾಡಿ ರೋಗ ಬರದಂತೆ ಮಾಡಬೇಕು. ರೈತನ ಅಭಿವೃದ್ಧಿಯಾಗಬೇಕಾದರೆ ಪಸುಸಂಪತ್ತು ಅಭಿವೃದ್ಧಿಯಾಗಬೇಕು. ಸರ್ಕಾರದವರು ರೋಗಗಳು ಆಗಾಗ್ಗೆ ಬರುವುದನ್ನು ತಡೆಗಟ್ಟಬೇಕು.

ಪ್ರಾಥಮಿಕ ಶಿಕ್ಷಣದ ಮಟ್ಟವನ್ನು ಸುಧಾರಿಸಬೇಕು ಇಲ್ಲದೇ ಇದ್ದರೆ ಯಾವ ಪ್ರಯೋಜನವೂ ಆಗಲಿಕ್ಕಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟೋ ಕಡೆ ನುರಿತ, ತರಬೇತು ಪಡೆದ ಶಿಕ್ಷಕರು ಇಲ್ಲ. ಅದರಿಂದ ಬಹಳ ತೊಂದರೆಯಾಗಿದೆ. ಗ್ರಾಮಾಂತರಗಳಲ್ಲಿ ಹೆಚ್ಚು ಹೆಚ್ಚು ಶಾಲಾಕಟ್ಟಡಗಳು ಮತ್ತು ತರಬೇತು ಹೊಂದಿದ ಶಿಕ್ಷಕರನ್ನು ಕೊಟ್ಟು ಶಿಕ್ಷಣ ಸುಧಾರಣೆ ಮತ್ತು ಮಟ್ಟ ಹೆಚ್ಚು ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ನೀರಾವರಿ ಸೌಲಭ್ಯವನ್ನು ಒದಗಿಸಬೇಕು. ಮಲೆನಾಡು ಜಿಲ್ಲೆಗಳಲ್ಲಂತೂ ಇದು ಏನೇನೂ ಸಾಲದು ಎಂದರೆ ಅತಿಶಯೋಕ್ತಿಯಲ್ಲ. ಹತ್ತಾರು ವರ್ಷಗಳಿಂದ ಒಡೆದು ಹೋದ ಕೆರೆಗಳ ರಿಪೇರಿ ಯಾಗಿಲ್ಲ. ಹೊಸ ಕೆರೆಗಳ ನಿರ್ಮಾಣವಾಗಬೇಕಾಗಿದ್ದರೆ ಹಣ ಇಲ್ಲ ಎಂದು ಹೇಳುತ್ತೀರಿ. ಈ ರೀತಿಯಾದರೆ ಇನ್ನು ಎಷ್ಟು ವರ್ಷಗಳ ಕಾಲ ಈ ರೀತಿ ಮುಂದುವರಿಯಲಿಕ್ಕೆ ಸಾಧ್ಯ ಎಂದು

(ಶ್ರೀ ಎಂ. ಮಲ್ಲಪ್ಪ)

ಕೇಳುತ್ತೇನೆ. ಒಂದು ಕಡೆ ವ್ಯವಸಾಯೋತ್ಪನ್ನ ಹೆಚ್ಚಾಗಬೇಕೆಂದು ಹೇಳುತ್ತೇವೆ, ಅದಕ್ಕೆ ತಕ್ಕಂತೆ ಸಾಕಾದಷ್ಟು ನೀರನ್ನು ಒದಗಿಸುವ ಒಂದು ನಿರ್ದಿಷ್ಟವಾದ ನೀತಿಯನ್ನು ಅಳವಡಿಸಿಕೊಂಡು ಹಣವನ್ನು ಒದಗಿಸಬೇಕು. ಈಗ ಯಾವ ಒಂದು ನೀರಿನ ಅನುಕೂಲವಾಗಬೇಕೋ ಅದು ಆಗುತ್ತಿಲ್ಲ ಎಂಬ ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಕುಟುಂಬ ಯೋಜನೆಯ ವಿಷಯದಲ್ಲಿ ರಾಜ್ಯಪಾಲರು ಹೇಳಿದ್ದಾರೆ. ಗ್ರಾಮಾಂತರಗಳಲ್ಲಿ ಇವತ್ತಿನ ದಿವಸ ಒಬ್ಬ ಡಾಕ್ಟರನ್ನು ಕಳುಹಿಸಬೇಕೆಂದರೆ ಆಗುತ್ತಿಲ್ಲ, ಮೂರು ವರ್ಷಗಳಾದರೂ ಕೂಡ ಅಲ್ಲಿನ ಆಸ್ಪತ್ರೆಗಳಿಗೆ ಡಾಕ್ಟರುಗಳು ಬರುತ್ತಿಲ್ಲ. ಇವತ್ತು ಪಟ್ಟಣಗಳಲ್ಲಿ ಡಾಕ್ಟರುಗಳು ಇಲ್ಲದೇ ಇದ್ದರೆ ಪ್ರೈವೇಟ್ ಡಾಕ್ಟರುಗಳ ಹತ್ತಿರ ಹೋಗಿ ಅವರಿಂದ ವೈದ್ಯಕೀಯ ಸಹಾಯ ಪಡೆಯಬಹುದು. ಗ್ರಾಮಾಂತರಗಳ ಕಡೆ ಅಂತಹ ಸೌಲಭ್ಯ ಸಿಕ್ಕುವುದಿಲ್ಲ. ಆದ್ದರಿಂದ ಈ ಒಂದು ಸೌಲಭ್ಯವನ್ನು ಒದಗಿಸುವುದರ ಕಡೆ ಹೆಚ್ಚು ಗಮನವನ್ನು ಕೊಡಬೇಕೆಂದು ಹೇಳುತ್ತೇನೆ.

ನೀರು ಸರಬರಾಯಿ ವಿಷಯದಲ್ಲಿ ನಾನು ಪ್ರಶ್ನೆ ಕೇಳಿದ್ದೆ. ನಮ್ಮ ಜಿಲ್ಲೆಯಲ್ಲಿ ಸುಮಾರು 700 ಗ್ರಾಮಗಳಿಗೆ ನೀರಿನ ಸೌಕರ್ಯವನ್ನು ಕಲ್ಪಿಸಿಕೊಡಬೇಕಾಗಿದೆ. ಅಲ್ಲಿ ಕುಡಿಯುವ ನೀರಿನ ಬಾವಿ ಇಲ್ಲ. ಅದಕ್ಕೆ ಕೊಡತಕ್ಕ ಹಣ 3 ಲಕ್ಷ ರೂಪಾಯಿ ಎಂದು ಹೇಳುತ್ತೀರಿ. ಗಾಂಧೀಜಿಯವರ ಶತಾಬ್ಧಿಯ ವರ್ಷವಾದ ಈ ವರ್ಷದಲ್ಲಾದರೂ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳ ಸೌಕರ್ಯವನ್ನು ಮಾಡಿ ಕೊಡುತ್ತೀರಿ ಎಂದು ನಂಬಿದ್ದೇನೆ.

ಪ್ರವಾಸೋದ್ಯಮದ ವಿಚಾರ. ಅದಕ್ಕೆ ಹೆಚ್ಚು ಹಣವನ್ನು ಒದಗಿಸಿಲ್ಲ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಮ್ಮಣ್ಣುಗುಂಡಿ ಪ್ರದೇಶ ಪ್ರಕೃತಿ ದತ್ತವಾದ ನೈಸರ್ಗಿಕ ಪ್ರದೇಶ, ಹೆಚ್ಚು ಹಣ ಖರ್ಚು ಮಾಡಬೇಕಾಗಿಲ್ಲ. ಅದನ್ನು ಅಭಿವೃದ್ಧಿಪಡಿಸಿದರೆ ಸರ್ಕಾರದವರಿಗೆ ಎಷ್ಟೋ ಆದಾಯ ಬರುತ್ತದೆ ಆ ದೆಶೆಯಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಸರ್ಕಾರದ ಆಡಳಿತದ ದಕ್ಷತೆಯ ವಿಚಾರದಲ್ಲಿ, ನಿರುದ್ಯೋಗ ನಿವಾರಣೆ ವಿಚಾರದಲ್ಲಿ, ಆಹಾರದ ಅಭಾವ ನಿವಾರಣೆಯ ವಿಚಾರದಲ್ಲಿ ಸರ್ಕಾರದವರು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡಬೇಕೆಂದು ಈ ಸಮಯದಲ್ಲಿ ಹೇಳಿ ನನಗೆ ಒಂದೆರಡು ಮಾತುಗಳನ್ನಾಡುವ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ನಾಡಗೌಡ (ಮುಧೋಳ).—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣದ ಮೇಲೆ ವಂದನೆಗಳನ್ನು ಸಲ್ಲಿಸುವ ನಿರ್ಣಯವನ್ನು ಕುರಿತು ಅದಕ್ಕೆ ವಿರೋಧವಾಗಿ ನಾಲ್ಕು ಮಾತುಗಳನ್ನು ನಾನೀಗ ತಮ್ಮ ಮುಂದೆ ಇಡಬಯಸುತ್ತಾ ಇದ್ದೇನೆ. ರಾಜ್ಯ ಪಾಲರು ತಮ್ಮ ಭಾಷಣದಲ್ಲಿ ಈ ಸರ್ಕಾರ ಈ ವರ್ಷ ಸಾಧಿಸಿದ ಅತ್ಯಂತ ಮಹತ್ವದ ಘಟನೆಗಳಲ್ಲಿ ತಾಲ್ಲೂಕು ಬೋರ್ಡು ಚುನಾವಣೆ ಅಗ್ರಸ್ಥಾನವನ್ನು ಪಡೆದಿದೆ ಎಂದು ಹೇಳಿ ಇದನ್ನು ಅವರು ವ್ಯಂಗ್ಯವಾಗಿ ಆಡಿದ್ದಾರೋ ಅಥವಾ ಸತ್ಯಸಂಗತಿಯನ್ನು ನುಡಿದಿದ್ದಾರೋ ಎಂಬುದನ್ನು ಯಾವ ಒಬ್ಬ ಸದಸ್ಯರೂ ಅರಿತುಕೊಂಡಿಲ್ಲ. ಏಕೆಂದರೆ 4 ವರ್ಷಕ್ಕೆ ಒಮ್ಮೆ ತಾಲ್ಲೂಕು ಬೋರ್ಡು ಚುನಾವಣೆಯಾಗಬೇಕಾಗಿದ್ದ ಸಮಯದಲ್ಲಿ 9 ವರ್ಷಕ್ಕೆ ಒಂದು ಸಲ ಚುನಾವಣೆಯಾಗುತ್ತಾ ಇದೆ. ಷಹಬಾಸ್ ಮಂತ್ರಿಗಳೇ ಎಂದು ಹೇಳೋಣವೇ; ಅಧಕ್ಕೇನೂ ಅಭ್ಯಂತರವಿಲ್ಲ. ತಾಲ್ಲೂಕು ಬೋರ್ಡುಗಳ ಚುನಾವಣೆಯನ್ನು 9 ವರ್ಷಗಳ ನಂತರವಾದರೂ ಕೂಡ ಮಾಡಿ ಪೂರೈಸಿದಿರಿ ಶಹಬಾಸ್ ಅಂತ ಹೇಳಿ ಒಂದು ರೀತಿ ಯಿಂದ ನೋಡಿದರೆ ವ್ಯಂಗ್ಯವಾಗಿ ರಾಜ್ಯಪಾಲರು ಈ ಮಾತನ್ನು ಆಡಿದ್ದಾರೆ ಎಂದು ನನಗೆ ಅರ್ಥ ವಾಗುತ್ತದೆ. ತಾಲ್ಲೂಕು ಬೋರ್ಡು ಚುನಾವಣೆಗಳ ವಿಷಯದಲ್ಲಿ ನಾನು ಹಿಂದಿನ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಅರಿಕೆ ಮಾಡಿಕೊಂಡಿದ್ದೆ. ತಾಲ್ಲೂಕು ಬೋರ್ಡು ಚುನಾವಣೆಗಳು ಬಂದಿವೆ, ಬರಗಾಲ ಮೇಲ್ವಿಚಾರಣೆಗೆ ಒಂದೊಂದು ಜಿಲ್ಲೆಯನ್ನು ಒಬ್ಬೊಬ್ಬ ಮಂತ್ರಿಗೆ ವಹಿಸಿ ಕೊಡಬೇಕೆಂದು ಠರಾವು ಮಾಡಿರುವ ಪ್ರಕಾರ ದಯಮಾಡಿ ನಮ್ಮ ಜಿಲ್ಲೆಗೆ ಶ್ರೀಮಾನ್ ನಾಡಗೌಡ ರನ್ನು ಹಾಕಬೇಡಿರಿ ಎಂದು ಹೇಳಿದ್ದು ಅವರಿಗೆ ಜ್ಞಾಪಕ ಇದೆಯೋ ಇಲ್ಲವೋ ಗೊತ್ತಿಲ್ಲ. ನಮ್ಮ ದುರ್‌ದೈವವೋ ಏನೋ ನಮ್ಮ ಜಿಲ್ಲೆಯನ್ನು ಅವರ ಕೈಗೇ ಕೊಟ್ಟುಬಿಟ್ಟಿರಿ. ಬರಗಾಲ ಕಾಂಗಾರಿ ನಡೆಯುವಾಗ ಚುನಾವಣಾ ಪ್ರಚಾರ ಮಾಡಲಿಕ್ಕೆ ಅವರೇ ಬಂದಿದ್ದರು, ಅಲ್ಲದ ಸಲ್ಲದ ಮಾತು ಗಳನ್ನು ಕೆಲವು ಹಳ್ಳಿಗಳಲ್ಲಿ ಕಾಂಗ್ರೆಸ್ಸಿಗೆ ವಿರೋಧವಾದರೆ ನಿಮ್ಮ ಹಳ್ಳಿ ಏನೇನೂ ಸುಧಾರಣೆ ಯಾಗುವುದಿಲ್ಲ ಎಂದು ವಗೈರೆ ಹೇಳಿದರಂತೆ. ಮುಖ್ಯವಾಗಿ ಹೇಳಬೇಕಾದರೆ ಅವರ ಕೋಲಾರ ಜಿಲ್ಲೆಯಲ್ಲಿ ಒಂದು ಕಡೆಯಲ್ಲಿ ಮಾತನಾಡುವಾಗ ಸಹಕಾರ ಸಂಘಗಳ ಅಭಿವೃದ್ಧಿ ಮುಂದುವರಿದಿಲ್ಲ

ನಮ್ಮ ದೇಶದಲ್ಲಿ ಪ್ರಜಾಸತ್ತೆಯನ್ನು ಶಾಶ್ವತವಾಗಿ ಉಳಿಸಿಕೊಳ್ಳುವಂತಹ ಹೊಣೆಗಾರಿಕೆ ನಿಮ್ಮ ಮೇಲೆ ಇದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಶ್ರೀಮಾನ್ ನಾಡಗೌಡರು ಹೇಳುವುದು ಒಂದು ನಡೆಯುವುದು ಒಂದು ಅಂತ ಅನ್ನುವುದಕ್ಕೆ ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ. ವಿಜಾಪುರ ಜಿಲ್ಲೆಯಲ್ಲಿ 3ನೇ ತಾರೀಖಿನಿಂದ 8ನೇ ತಾರೀಖಿನವರೆಗೆ ನಾಮಿನೇಷನ್ ಪೇಪರ್ಸ್ ಫೈಲ್ ಮಾಡಬೇಕೆಂದು ನಿಗದಿ ಮಾಡಿದ್ದರು. 4ನೇ ತಾರೀಖು ಕೇಳಿದಾಗ ಸ್ವಲ್ಪ ಗಂಟು ಇದೆ ಮುಂದೆ ಹೋಗುವ ಲಕ್ಷಣ ಇದೆ ಸ್ವಲ್ಪ ತಡೆಯಿರಿ ಅಂತ ಹೇಳಿದರು. ಡೆಪ್ಯೂಟಿ ಕಮೀಷನರನ್ನು ಬೆಂಗಳೂರಿಗೆ ಕರೆಸಿಕೊಂಡು ಅವರ ಕಡೆಯಿಂದ ಕ್ಯಾಲೆಂಡರ್ ಆಫ್ ಇವೆಂಟ್ಸ್ 3ನೇ ತಾರೀಖಿಗೆ ಬದಲಾಗಿ 10ನೇ ತಾರೀಖು ಪ್ರಸಿದ್ಧಿ ಮಾಡ್ರಿ ಅಂತ ಟೆಲಿಗ್ರಾಂ ಕೊಡಿಸಿದ್ದಾರೆ. ಡೆಪ್ಯೂಟಿ ಕಮೀಷನರನ್ನು ತಮ್ಮ ಕೈಗೊಂಬೆಯನ್ನಾಗಿ ಮಾಡಿಕೊಂಡು ಕಾಂಗ್ರೆಸ್ ಸರ್ಕಾರದವರು ಈ ರೀತಿಯಾಗಿ ಬಳಸುತ್ತಾ ಹೋದರೆ ಒಳ್ಳೆಯದಾಗುವುದಿಲ್ಲ. ಅವರು ಮಾಡಿದ್ದು ಒಪ್ಪೋ, ತಪ್ಪೋ ಎಂದು ಹೇಳಿ ಅವರ ಹಣೆಬರಹವನ್ನು ಬರೆಯುವಂತಹ ರಿಟ್ ಪಿಟಿಷನ್‌ಗಳು ತಕ್ಷಣದಲ್ಲೇ ಹೋಗುವಂತಹ ಒಂದು ಸಿದ್ಧತೆಯಲ್ಲಿ ಇದೆ. ಈ ಒಂದು ವಿಷಯದಲ್ಲಿ ನಾನು ಹೆಚ್ಚಾಗಿ ಹೇಳುವುದಿಲ್ಲ. ತಾಲ್ಲೂಕು ಬೋರ್ಡು ಚುನಾವಣೆಯಲ್ಲಿ ಅನುಸರಿಸಿರತಕ್ಕ ನೀತಿಯನ್ನು ನೋಡಿದರೆ, ನಿಜವಾಗಿಯೂ ಪ್ರಜಾಪ್ರಭುತ್ವ ನಮ್ಮಲ್ಲಿ ಉಳಿಯಬೇಕಾಗಿದ್ದರೆ ತಾವು ಅನುಸರಿಸಿರತಕ್ಕ ಕ್ರಮ ಖಂಡಿತವಾಗಿಯೂ ಸರಿಯಿಲ್ಲ. ಬೋಲ್‌ಷವಿಸಂ ಅಥವಾ ನಾಜಿಜಂ ಒಂದು ಪಕ್ಷದಂತೆ ಒಂದು ರೀತಿಯಾಗಿ ಕಾಯಿದೆಗಳನ್ನು ಮಾಡಿಕೊಂಡು ಜನರ ಅವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸುಧಾರಣೆಗಳನ್ನಾದರೂ ಮಾಡುತ್ತಾರೆ. ಆದರೆ ನಮ್ಮಲ್ಲಿರುವುದು ಪ್ರಜಾಪ್ರಭುತ್ವ ಈ ಪ್ರಜಾಪ್ರಭುತ್ವದಲ್ಲಿ ನಡೆಯುತ್ತಿರುವ ರೀತಿನೀತಿಗಳನ್ನು ನೋಡಿದರೆ ಇದಕ್ಕೆ ಅಳಿಗಾಲವೇ ಹೊರತು ಉಳಿಗಾಲವಿಲ್ಲ ಅನ್ನುವಂತಹದು ಈ ತಾಲ್ಲೂಕು ಬೋರ್ಡು ಚುನಾವಣೆಗಳು ಕೈ ಎತ್ತಿ ಹೇಳುತ್ತಾ ಇವೆ.

ಇನ್ನು ನಮ್ಮ ಪಂಚವಾರ್ಷಿಕ ಯೋಜನೆಗಳನ್ನು ಕುರಿತು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಲಪ್ರಭ ಘಟಪ್ರಭ ಯೋಜನೆಗಳ ವಿಷಯ ಸರ್ಕಾರದವರು ಹೇಳುತ್ತಲೇ ಇದ್ದಾರೆ ನಾವು ಕೇಳುತ್ತಲೇ ಇದ್ದೇವೆ. ಇದೇ ರೀತಿ ಎಷ್ಟೋ ಯೋಜನೆಗಳ ವಿಚಾರವನ್ನು ಇಲ್ಲಿ ಉಲ್ಲೇಖ ಮಾಡಿದ್ದಾರೆ. ಕೃಷ್ಣಾ ಯೋಜನೆಯ ಬಗ್ಗೆ ಕೂಡ ಹೇಳಿದ್ದಾರೆ. ಅವುಗಳಿಗೆ ಅಪಾರವಾಗಿ ಹಣವನ್ನೂ ಕೂಡ ಖರ್ಚು ಮಾಡುತ್ತಿರುವುದಾಗಿ ಹೇಳಿದ್ದಾರೆ. ಆದರೆ ಇವು ಯಾವದರಿಂದಲೂ ನಮಗೆ ಶೀಘ್ರವಾಗಿ ಫಲಬರುವುದಿಲ್ಲ. ನಮಗೆ ಯಾವುದರಿಂದ ಜಾಗ್ರತೆಯಾಗಿ ಫಲಬರುತ್ತದೋ ಅಂಥಾ ಹಿಡುಕಲ್ ಯೋಜನೆಯನ್ನು ಕೈಗೊಳ್ಳಿ ಎಂದರೆ, ಅದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ. ಅಲ್ಲಿ ಶೀಘ್ರವಾಗಿ ಬಲದಂಡೆಯನಾಲೆಯನ್ನು ಅಗಿಸುವುದಕ್ಕೆ ಪ್ರಯತ್ನ ಮಾಡಿದರೆ ಅಲ್ಲಿ ಆ ಅಣೆಕಟ್ಟು ಮುಗಿಯುವುದರಲ್ಲೇ ನಮಗೆ ಅದರ ಸಂಪೂರ್ಣ ಫಲ ಬರುತ್ತದೆ. ಮುಖ್ಯ ಮಂತ್ರಿಗಳು ಇದಕ್ಕೆ ಗಮನಕೊಡಬೇಕು.

ಇನ್ನು ಎಲೆಕ್ಟ್ರಿಸಿಟಿ ಕೊಡತಕ್ಕ ವಿಚಾರ ಮತ್ತು ನೀರಾವರಿ ಯೋಜನೆಗಳ ವಿಚಾರಕ್ಕೆ ಬಂದರೆ ಈ ದಿವಸ ರಾಜ್ಯದಲ್ಲಿ ಆಹಾರಕ್ಕೆ ಕುಗ್ರಾಮವಿದ್ದರೂ ರೈತರಿಗೆ ಹೆಚ್ಚು ಬೆಳೆ ಬೆಳೆಯಲು ವಿದ್ಯುಚ್ಛಕ್ತಿಯನ್ನು ಕೊಡುತ್ತಿಲ್ಲ. ಸಾಕಷ್ಟು ಪಂಪ್‌ಸೆಟ್ಟುಗಳನ್ನು ಕೊಡುತ್ತಿಲ್ಲ. ನಮ್ಮ ಬಾಗಲ್‌ಕೋಟೆ ತಾಲ್ಲೂಕಿನಲ್ಲಿ ಒಬ್ಬ ಸ್ಪೆಷಲ್ ಎಗ್ಜಿಕ್ಯುಟೀವ್ ಇಂಜಿನಿಯರ್ ಇದ್ದಾರೆ. ಅವರು ಕೆಲವು ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಿದ್ದಾರೆ. ಆದರೆ ಇನ್ನು ಕೆಲವು ಬಾವಿಗಳು ಅಂದರೆ ಯಾವ ಬಾವಿಗೆ ಹಾಲಿ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೋ ಅಂಥಾ ಬಾವಿಗೆ ಕೇವಲ 10–15 ಮಾರುಗಳಲ್ಲಿರತಕ್ಕ ಬಾವಿಗಳಿಗೆ ರೈತರು ಪಂಪ್‌ಸೆಟ್ಟನ್ನು ಹಾಕಿಕೊಂಡು ವಿದ್ಯುಚ್ಛಕ್ತಿಯನ್ನು ಕೊಡಿ ಎಂದರೆ ಅದು ಪ್ರಯಾರ್ಟಿ ಲಿಸ್ಟಿನಲ್ಲಿ ಇಲ್ಲ, ಅದರಿಂದ ಆದಕ್ಕೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕೆ ಯಾವ ಹೆಚ್ಚಿನ ಕಂಬ ವಗೈರೆಗಳು ಬೇಕಾಗುವುದಿಲ್ಲ. ಆದಾಗ್ಯೂ ಅಂಥ ಕಡೆಗಳಿಗೆ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಮೆಟೀರಿಯಲ್ಸ್ ಇಲ್ಲ ಎಂದು ಹೇಳುತ್ತಿದ್ದಾರೆ. ಇನ್ನೂ ಒತ್ತಾಯ ಮಾಡಿದರೆ ಹಾಗೆ ಒಂದು ಆರ್ಡರನ್ನು ಕೆಲಸ ಕೈಗೊಳ್ಳಬೇಕಾದರೆ ಆ ಅಧಿಕಾರ ನಮಗಿಲ್ಲ; ನೀವು ಛೇರ್ಮನ್ನರಿಗೆ ಒಂದು ಅರ್ಜಿಕೊಡಿ ಅವರು ಒಪ್ಪಿದರೆ ಆಗಬಹುದು ಎಂದು ಹೇಳುತ್ತಿದ್ದಾರೆ. ಇದು ಜನರನ್ನು ಸೋಮಾರಿಗಳಾಗಿ ಮಾಡತಕ್ಕ ವಿಧಾನ. ದುಡಿಯತಕ್ಕ ಜನಕ್ಕೆ ಪ್ರೋತ್ಸಾಹವಿಲ್ಲ. ಜೇಡ ಯಾವ ರೀತಿ ತಾನೇ ಒಂದು ಬಲೆಯನ್ನು ನೈಯ್ದು ಅದರಲ್ಲಿ ತಾನೇ ಸಿಕ್ಕಿಕೊಂಡು ಹೇಗೆ ಪ್ರಾಣ ಬಿಟ್ಟಿತೋ ಹಾಗೆ ಈ ಸರ್ಕಾರದವರು ತಮ್ಮದೇ ಆದ ಆಜ್ಞೆಗಳನ್ನು ಮಾಡಿ ತನ್ಮೂಲಕ ತಾವೇ ದೇಶದ ಅಭ್ಯುದಯನ್ನು ಹಾಳುಮಾಡುತ್ತಿದ್ದಾರೆ. ಹೀಗೆ ಅಲ್ಲಸಲ್ಲದ ಆಜ್ಞೆಗಳನ್ನು ಕಿತ್ತುಹಾಕಬೇಕು ಮಾನ್ಯ ಮುಖ್ಯ ಮಂತ್ರಿಗಳು ಇತ್ತ ಕಡೆಗೆ ತಮ್ಮ ಗಮನಕೊಡಬೇಕೆಂದು ಪ್ರಾರ್ಥಿಸುತ್ತೇನೆ.

(ಶ್ರೀ ಕೆ. ಪಿ. ನಾಡಗೌಡ)

ಇನ್ನು ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳ ಸಂಖ್ಯೆ ಬಹಳ ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಇರಬಹುದು. ಆದರೆ ವಿದ್ಯದ ಮಟ್ಟ ಕೆಳಕ್ಕೆ ಹೋಗುತ್ತಿದೆ. ಆದರೆ ನಮ್ಮ ವಿದ್ಯಾಮಂತ್ರಿಗಳು ಅಂದರೆ ಕ್ಯಾಬಿನೆಟ್‌ರ್‍ಯಾಂಕಿನ ವಿದ್ಯಾ ಮಂತ್ರಿಗಳು ಅದೇಕೋ ನಮ್ಮ ಬಿಜಾಪುರಕ್ಕೆ ಮಾತ್ರ ಬರುತ್ತಿಲ್ಲ. ಅವರು ತಮ್ಮ ಅಧಿಕಾರವನ್ನೆಲ್ಲಾ ಶ್ರೀ ಪಿ. ಎಂ. ನಾಡಗೌಡರಿಗೆ ವಹಿಸಿಕೊಟ್ಟಿರುವಂತೆ ನನಗೆ ಭಾಸವಾಗುತ್ತಿದೆ. ಈ ಶ್ರೀ ನಾಡಗೌಡರು ನಮ್ಮ ಜಿಲ್ಲೆಯಲ್ಲಿ ಸುಮಾರು 18 ವರ್ಷಗಳ ಕಾಲ ಸ್ಕೂಲ್‌ಬೋರ್ಡ್ ಅಧ್ಯಕ್ಷರಾಗಿದ್ದರು. ಅವರಿಗೆ ಇಲ್ಲಿ ಗೊತ್ತಿಲ್ಲದ ಉಪಧ್ಯಾಯರೇ ಇಲ್ಲ. ಈ ಸಚಿವರಿಗೆ ಎಲ್ಲರಲ್ಲೂ ಒಂದೇ ಸಮನಾದ ಪ್ರೀತಿ. ಹೀಗಾಗಿ ಅಲ್ಲಿ ಅನೇಕರು ಕಳೆದ 20 ವರ್ಷಗಳಿಂದಲೂ ತಮ್ಮ ತಮ್ಮ ಊರುಗಳಲ್ಲೇ ತಾವು ಉಪಧ್ಯಾಯರಾಗಿ ಕಾಲವನ್ನು ಕಳೆದಿದ್ದಾರೆ. ಅಷ್ಟು ಕಾಲ ಅವರು ಆ ಶಾಲೆಗಳ ಕಡೆಗೇನೂ ತಮ್ಮ ಗಮನಕೊಟ್ಟಿಲ್ಲ. ಅವರ ಗಮನವೆಲ್ಲಾ ಅವರ ಹೊಲ ಮನೆಗಳಕಡೆಗಿತ್ತು. ಹೀಗಾಗಿ ಅಲ್ಲಿ ಶಾಲೆಗಳೆಲ್ಲಾ ಹೀನಸ್ಥಿತಿಗೆ ಬರುತ್ತಿವೆ. ಅವರನ್ನು ಬೇರೆಕಡೆಗೆ ವರ್ಗಾಯಿಸಬೇಕೆಂದು ಊರಿನ ಗೌಡರೂ, ಹಿರಿಯರೂ, ಮತ್ತು ಛೇರ್ಮನ್ನರೂ ಎಷ್ಟು ಹೇಳಿದರೂ ಆ ಕಾರ್ಯ ನಡೆಯುತ್ತಿಲ್ಲ. ಆದ್ದರಿಂದ ನಮ್ಮ ವಿದ್ಯಾಮಂತ್ರಿಗಳು ಇನ್ನೂ ತರುಣರು ಒಳ್ಳೆಯ ವಿದ್ಯಾವಂತರು ಬುದ್ಧಿವಂತರು ಸೂಕ್ಷ್ಮ ಮತಿಗಳು ಅವರು ಇತ್ತಕಡೆಗೆ ಹೆಚ್ಚಿನ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಆ ಬಿಜಾಪುರ ಜಿಲ್ಲೆಯ ಜನರು ರಾಜ್ಯದ ಕಲ್ಯಾಣವನ್ನು ಬಯಸತಕ್ಕಂಥ ಜನರು. ಬಸವೇಶ್ವರನು ಹುಟ್ಟಿದಂಥ ಕ್ಷೇತ್ರ. ಅಲ್ಲಿ ಕೆಲವು ಕೆಲಸಗಳು ನಡೆಯುತ್ತಿವೆ. ಆ ಕ್ಷೇತ್ರದಲ್ಲಿ ವಿದ್ಯಾಮಂತ್ರಿಗಳ ಹೆಸರನ್ನು ಕೆಡಿಸತಕ್ಕ ಕಾರ್ಯಗಳು ನಡೆಯುತ್ತಿವೆ. ಅದಕ್ಕೆ ಅವಕಾಶ ಕೊಡಬಾರದು. ಈ ದಿವಸ ನಾವು ಪ್ರಾಥಮಿಕ ಶಿಕ್ಷಣದ ಕಡೆಗೆ ಅಲಕ್ಷ್ಯ ತೋರಿಸಿದರೆ ನಾಳೆ ರಾಜ್ಯಕ್ಕೆ ಮುಖ್ಯ ಮಂತ್ರಿಯಾಗತಕ್ಕವರಿಗೂ ಒಳ್ಳೆಯ ಶಿಕ್ಷಣ ದೊರೆಯದೆ ಅವರೂ ಕೂಡ ಮುಂದೆ ಒಳ್ಳೆಯ ಮಂತ್ರಿ ಆಗುವುದಿಲ್ಲ. ಕಾರಣ ಅವರಿಗೆ ಬಾಲ್ಯದಲ್ಲಿ ಒಳ್ಳೆಯ ವಿದ್ಯಾಭ್ಯಾಸ ನಡೆದಿರುವುದಿಲ್ಲ. ಆದ್ದರಿಂದ ಸರ್ಕಾರದವರು ನಮ್ಮಲ್ಲಿ ಯಾವ ಯಾವಲ್ಲಿ ಈ ಉಪಾಧ್ಯಾಯರು 10 ವರ್ಷಗಳಿಗೂ ಮೇಲ್ಪಟ್ಟು ಒಂದು ಕಡೆ ಇರುತ್ತಾರೋ ಅಂಥವರನ್ನೆಲ್ಲಾ ಕೂಡಲೆ ಅಲ್ಲಿಂದ ಬೇರೆ ಕಡೆಗೆ ವರ್ಗಾಯಿಸುವಂತೆ ತಾಲ್ಲೂಕ್ ಬೋಡ್ ಅಧ್ಯಕ್ಷರಿಗೆ ತಾಕೀತ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ವಿಚಾರ : ನಮ್ಮ ಭಾಗದ ಜಮಖಂಡಿಯಲ್ಲಿ ಒಬ್ಬ ಸಿ.ಪಿ.ಐ. ಕಳೆದ 3 ವರ್ಷಗಳಿಂದ ಅಲ್ಲೇ ಇದ್ದಾರೆ. ಮೊದಲು ಮೊದಲು ಆವರನ್ನು ಜನ ಬಹಳ ದಕ್ಷರು ಬುದ್ಧಿವಂತರು ಎಂದು ಹೇಳುತ್ತಿದ್ದರು. ಇವರ ಹೆಸರು ಹಬ್ಬಿ ಎಂತ. ಇವರ ಮಾವನವರ ಹೆಸರು ಕುಬ್ಸದ್ ಎಂತ. ಈ ಕುಬ್ಸದ್ ಎನ್ನತಕ್ಕವರು ಹುಬ್ಬಳ್ಳಿಯಲ್ಲಿರತಕ್ಕ ಅಕ್ಕಾಸಾಹೇಬ್ ಎಂಬ ಹೆಣ್ಣು ಮಗುವನ್ನು ಹೊಡೆದು ಬಡಿದು, ಅವರಿಂದ ಒಂದು ಪವರ್ ಆಫ್ ಆಟಾರ್ನಿಯನ್ನು ಬರೆಸಿಕೊಂಡಿದ್ದಾರೆ. ಅದರಮೂಲಕ ಕುಬ್ಸದ್ ಎನ್ನತಕ್ಕವರು ಆ ಅಕ್ಕಾಸಾಹೇಬರ 50, 60 ಸಾವಿರ ಬೆಲೆ ಬಾಳತಕ್ಕ ಜಮೀನನ್ನು 4—5 ಸಾವಿರ ರೂಪಾಯಿಗಳನ್ನು ಲಂಚಕೊಟ್ಟು ಅವರ ಹೆಸರಿನಲ್ಲಿ ಬರೆಸಿಕೊಂಡಿದ್ದಾರೆ. ಅಲ್ಲಿ ಆ ಜಮೀನಿಗೆ ಬೆಳೆಯನ್ನಿಟ್ಟಿದ್ದಾಗ ಒಂದಾವರ್ತಿ ಹಸೀ ಗೋಧಿ ಹುಲ್ಲನ್ನೆಲ್ಲಾ ಕಿತ್ತುಹಾಕಿದರು. ಅದರ ಬಗ್ಗೆ ಅಲ್ಲಿ ಪೋಲೀಸರ ಕುಮ್ಮಕ್ಕು ಬಹಳವಾಗಿದೆ. ಆ ಹಬ್ಬಿ ಎನ್ನತಕ್ಕವರನ್ನು ಬೇರೆ ಕಡೆ ವರ್ಗಾಯಿಸಿ ಎಂದರೆ ಯಾರೂ ಅದಕ್ಕೆ ಕಿವಿಕೊಡುತ್ತಿಲ್ಲ. ನಾನು ಕೇಳುವುದಿಷ್ಟೆ ಅವರನ್ನು ನಾನು ಸಸ್ಪೆಂಡ್ ಮಾಡಿ ಇಲ್ಲವೇ ಡಿಸ್‌ಮಿಸ್ ಮಾಡಿ ಎಂದು ಕೇಳುತ್ತಿಲ್ಲ. ನಾನು ಕೇಳುತ್ತಿರುವುದು ಅವರನ್ನು ಬೇರೆ ಜಿಲ್ಲೆಗೆ ವರ್ಗಮಾಡಿ ಎಂದು. ಹಾಗೆ ಮಾಡಿದರೆ ಅಲ್ಲಿ ಅನೇಕ ಬಡಬಗ್ಗರ ಮನೆಗಳು ಉಳಿಯುತ್ತವೆ; ಆ ಅಕ್ಕಾಸಾಹೇಬರ ಮನೆಯೂ ಉಳಿಯುತ್ತದೆ.

ಇನ್ನು ಈ ವರ್ಷದಲ್ಲಿ ಗಾಂಧಿ ಶತಮಾನೋತ್ಸವವನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಹೆಚ್ಚು ಕೈಗಾರಿಕೆಗಳನ್ನು ಬೆಳೆಸಬೇಕೆಂದು ಹೇಳುತ್ತಾರೆ. ಇಲ್ಲಿ ಹಾಗೆ ಔದ್ಯೋಗೀಕರಣವಾದರೆ ಮುಂದೆ ನಿರುದ್ಯೋಗಿಗಳ ಸಂಖ್ಯೆ ದೇಶದಲ್ಲಿ ಹೆಚ್ಚುತ್ತದೆ. ಅದಕ್ಕಾಗಿ ನಾನು ಈ ಸರ್ಕಾರದವರಿಗೆ ಸಲಹೆಮಾಡುವುದೇನೆಂದರೆ—ಕ್ಯಾಜುಯಲ್ ಆಗಿಯಾದೂ ಆ ಜೆ. ಸಿ. ಕುಮಾರಪ್ಪ ಎನ್ನತಕ್ಕವರು ಬರೆದಿರುವ ಎಕಾನಮಿ ಮೆಜರ್ಸ್ ಮತ್ತು ವಿಲೇಜ್‌ಮೂವ್‌ಮೆಂಟ್ ಎಂಬ ಎರಡು ಪುಸ್ತಕಗಳನ್ನು ಓದಬೇಕೆಂದು ಹೇಳುತ್ತೇನೆ. ಅದರಲ್ಲಿ ಸೂಚಿಸಿರತಕ್ಕ ಪ್ರಕಾರ ಸಾಧ್ಯವಾದ ಕಡೆಗಳಲ್ಲೆಲ್ಲಾ ಗ್ರಾಮಕೈಗಾರಿಕೆಗಳನ್ನು ಸ್ಥಾಪಿಸಿ ಜನರಿಗೆ ದುಡಿಯುವುದಕ್ಕೆ ಒಂದು ದಾರಿ ತೋರಿಸಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P.M.

†ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಸನ್ಮಾನ್ಯ ಸಭಾಪತಿಗಳೇ, ಈ ದೇಶ ಇನ್ನೂ ನಾನಾ ವಿಧವಾದಂಥ ಕಠಿಣ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇಂತಹ ಸಮಸ್ಯೆಗಳ ಪರಿಹಾರಕ್ಕೆ ಏನೊಂದೂ ಸಲಹೆಗಳನ್ನು ಸೂಚಿಸದೇ ಇರುವುದು ಬಹಳ ವಿಷಾದಕರವಾಗಿದೆ.

ಸ್ವಾಮಿ, ಕೋಲಾರ ಜಿಲ್ಲೆ ಸದಾಕಾಲವೂ ಅಭಾವ ಪೀಡಿತ ಪ್ರದೇಶವಾಗಿದೆ. ಅಲ್ಲಿಯ ಜನರು ಬಹಳ ಕಷ್ಟಪಡುತ್ತಿದ್ದಾರೆ. ಅದು ಸರ್ಕಾರಕ್ಕೆ ಚೆನ್ನಾಗಿ ಗೊತ್ತಿದೆ. ಆದರೆ ಈಗತಾನೇ 75 ಲಕ್ಷ ರೂಪಾಯಿಗಳಷ್ಟು ಕಂದಾಯ ಬಾಕಿಯನ್ನು ವಸೂಲುಮಾಡುವಸಲುವಾಗಿ ಅಧಿಕಾರಿಗಳು ಆ ಬಗ್ಗೆ ತಗಾದೆ ಮಾಡುತ್ತಿರುವುದರಿಂದ ಅಲ್ಲಿನ ಜನರಿಗೆ ಬಹಳ ತೊಂದರೆಯಾಗಿದೆ. 1965-66ನೇ ಸಾಲಿನಿಂದ ಇದುವರೆಗೆ ಅಲ್ಲಿ ಮಳೆಬೆಳೆ ಇಲ್ಲ. ರೆಮಿಷನ್ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಕ್ಕೆ ಇದುವರೆಗೂ ಒಂದು ನೋಟಿಫಿಕೇಷನ್ ಹೊರಬಿದ್ದಿಲ್ಲ. ಉತ್ತರ ಕನ್ನಡ ಜಿಲ್ಲೆಯ ವಿಷಯ ಮಾತ್ರ ಇದೆ. ಕೋಲಾರ ಜಿಲ್ಲೆಯ ವಿಷಯವಾಗಿ ಏನೊಂದು ಪ್ರಸ್ತಾಪವಿಲ್ಲ. ಹಿಂದೆ ಸರ್ಕಾರದಲ್ಲಿ ಆರ್ಡರ್ ಆಗಿ ಉಳಿದಿರತಕ್ಕ ರೆಮಿಷನ್ ಮಂಜೂರುಮಾಡಿ, ನಿವ್ವಳಕಂದಾಯವನ್ನು ವಸೂಲುಮಾಡಲಿ, ಅದಕ್ಕೆ ಒಪ್ಪುತ್ತೇವೆಂದು ಹೇಳಿದ್ದರೂ ಇದುವರೆಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಈ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳಬೇಕು.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಅಭಾವ ಪರಿಹಾರ ಕಾಮಗಾರಿಗಳ ವಿಷಯವನ್ನು ಪ್ರಸ್ತಾಪಮಾಡಿದೆ. ಸರ್ಕಾರದವರು ಆರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಜನಗಳಿಗೆ ಮಹತ್ವದ ಉಪಕಾರವನ್ನು ಮಾಡಿದ್ದಕ್ಕೆ ನಾನು ಸರ್ಕಾರಕ್ಕೆ ವಂದಿಸುತ್ತೇನೆ. ಈ ಆರುಕೋಟಿ ರೂಪಾಯಿಗಳನ್ನು ಬಡವರಿಗೆ ಕೊಟ್ಟಿದೆಯೆಂದು ಹೇಳುತ್ತಾರೆ. ನಿಜವಾಗಿ ಅದು ಬಡವರಿಗೆ ಸೇರುತ್ತಾ ಇಲ್ಲ. ಈ ವಿಚಾರ ಸರ್ಕಾರಕ್ಕೂ ಗೊತ್ತಿದೆ. ಆದರೂ ಸಹ ಸರ್ಕಾರದವರು ಈ ವಿಷಯದಲ್ಲಿ ಇರತಕ್ಕ ಕೆಟ್ಟ ಪದ್ಧತಿಯನ್ನು ತಪ್ಪಿಸಲು ಏನೊಂದು ಕ್ರಮವನ್ನು ತೆಗೆದುಕೊಳ್ಳದೇ ಇರುವುದು ವಿಷಾದದ ಸಂಗತಿ. ಮತ್ತೆ ಪರಿಹಾರ ಕಾಮಗಾರಿಗಳನ್ನು ಕೊಡಿ ಎಂಬುದಾಗಿ ಈ ಸಾರಿಯೂ ಕೇಳಬೇಕಾಗಿದೆ. ಕೋಲಾರ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಪ್ರಾಪ್ತವಾಗಿದೆ, ಮಳೆಬೆಳೆ ಇಲ್ಲವೆಂದು ಈ ಸಭೆಯಲ್ಲಿ ನಾನು ಪದೇ ಪದೇ ಹೇಳುತ್ತಿದ್ದರೂ ಅದರಿಂದೇನೂ ಪ್ರಯೋಜನವಾಗಿಲ್ಲ. ಕಳೆದ ವರ್ಷದ ಬೆಳೆ ಕೇವಲ ಒಂದೂವರೆತಿಂಗಳಿಗೆ ಆಗುವುದಿಲ್ಲ. ಸರ್ಕಾರವನ್ನು ಮತ್ತೆ ಕೈಚಾಚಿ ಬೇಡತಕ್ಕಂಥ ಕೋಲಾರ ಜಿಲ್ಲೆಯ ವಿಚಾರದಲ್ಲಿ ರಾಜ್ಯಪಾಲರು ಏನೊಂದೂ ಪ್ರಸ್ತಾಪಮಾಡಲಿಲ್ಲ. ಅನೇಕ ಕಾಮಗಾರಿಗಳಿಗೆ ಹಣವನ್ನು ಇನ್ನೂ ಪಾವತಿಮಾಡಬೇಕಾಗಿದೆ ಅದನ್ನು ಇನ್ನೂ ಸರ್ಕಾರ ಮಂಜೂರುಮಾಡಬೇಕಾಗಿದೆ. ಸದಾಕಾಲವೂ ಇವರು ಹಂಗಾಮಿ ಪರಿಹಾರಮಾಡುವುದೇ ಹೊರತು ಶಾಶ್ವತವಾದ ಪರಿಹಾರಕಾಮಗಾರಿಗಳನ್ನು ಜಾಗ್ರತೆಯಾಗಿ ತೆಗೆದುಕೊಳ್ಳುತ್ತಾ ಇಲ್ಲ. ಸರ್ಕಾರದವರು ದೊಡ್ಡದೊಡ್ಡ ಯೋಜನೆಗಳನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅಲ್ಲಿ ಹಣ ಮಂಜೂರಾಗುತ್ತದೆ, ಬರುತ್ತದೆ. ಇನ್ನು ಹೆಚ್ಚಿನ ಶಿಫಾರಸ್ಸುಗಳನ್ನು ಬೇರೆ ಮಾಡಿದ್ದಾರೆ. ನಮ್ಮ ಯೋಜನೆ ಯಾವರೀತಿ ಇದೆ, ಅದರ ರೂಪರೇಷೆಗಳೇನು ಎಂಬುದು ಸರಿಯಾಗಿ ಗೊತ್ತಾಗುವುದಿಲ್ಲ. ಒಟ್ಟಿನಲ್ಲಿ ಶಾಶ್ವತವಾದ ಪರಿಹಾರ ಕಾಮಗಾರಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ನಾನು ಸರ್ಕಾರದವರನ್ನು ಒತ್ತಾಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ಶ್ರೀ ತಮ್ಮಣ್ಣನವರು ಒಂದು ವಿಷಯವನ್ನು ಹೇಳಿದರು. ನಾನು ಅವಕಾಶ ಸಿಕ್ಕಿದಾಗ ಅದರ ಬಗ್ಗೆ ಮಾತನಾಡುತ್ತೇನೆ. ಪ್ರಜಾಸಂಖ್ಯೆಯಲ್ಲಿ ಒಂದು ಭಾಗ ಸರ್ಕಾರಿ ನೌಕರರು. ಅವರಿಗೆ ಈಗ ಕೊಡುತ್ತಿರುವ ಸಂಬಳ ಸಾಲದು, ಹೆಚ್ಚಿಗೆ ಕೊಡಬೇಕು ಎಂದು ಅವರು ಕೇಳುತ್ತಾರೆ. ಅದಕ್ಕಾಗಿ ತುಕೋಳ್ ಕಮಿಷನ್ ಅವರು ಒಂದು ವರದಿಯನ್ನು ಒಪ್ಪಿಸಿದ್ದಾರೆ. ಅದನ್ನು ಸರ್ಕಾರದವರು ಮುಂದೆ ಪರಿಶೀಲಿಸುತ್ತಾರೆ. ಆದರೆ ದಿನೇದಿನೇ ಜೀವನವೆಚ್ಚ ಜಾಸ್ತಿಯಾಗುತ್ತಿರುವುದರಿಂದ ಅವರಿಗೆ ಹೆಚ್ಚಿಗೆ ಸಂಬಳವನ್ನು ಕೊಡಬೇಕು. ಅವರಿಗೆ ಸಲ್ಲಬೇಕಾದುದನ್ನು ಸಲ್ಲಿಸಬೇಕು. ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಶೇಕಡ ಒಂದು ಭಾಗ ಇರುವ ಸರ್ಕಾರಿ ನೌಕರರ ವಿಷಯದಲ್ಲಿ ಇಷ್ಟೊಂದು ಅನುತಾಪ ಸೂಚಿಸುವಾಗ, ಶೇಕಡ 20 ಭಾಗದಷ್ಟು ಇರುವ ವ್ಯವಸಾಯ ಕಾರ್ಮಿಕರ ಪಾಡೇನು, ಅವರ ವಿಷಯದಲ್ಲಿ ಏನಾದರೂ ಗಮನಹರಿಸಿದ್ದೀರಾ ಅಂದರೆ ಖಂಡಿತ ಇಲ್ಲ. ಈಗ್ಗೆ ಪ್ರಜಾಪ್ರಭುತ್ವ ಬಂದು 21 ವರ್ಷಗಳಾದುವು. ಪೂಜ್ಯ ಮಹಾತ್ಮ ಗಾಂಧಿಯವರು ಎಷ್ಟೋಸಾರಿ ಅವರ ಆದೇಶವನ್ನು ನೀಡಿದ್ದಾರೆ. ಅದು ನಮ್ಮ ರಾಜ್ಯಾಂಗದಲ್ಲಿಯೂ ನಿರೂಪ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ವಾಗಿದೆ. ಕನಿಷ್ಟಪರಿಮಿತಿಯಿಂದ ಪ್ರತಿಯೊಬ್ಬರೂ ಜೀವನ ನಡೆಸಬೇಕು, ಯಾವರೀತಿ ಜೀವನ ನಡೆಸಬೇಕೆಂಬುದನ್ನು ರಾಜ್ಯಾಂಗದಲ್ಲಿ ಹೇಳಿದ್ದಾರೆ. ಈ ಸಭೆಯಲ್ಲಿ ನಾವು ಪದೇ ಪದೇ ಲೋಕಾಭಿರಾಮನಾಗಿ ನಮ್ಮ ಮನಸ್ಸಿನಲ್ಲಿರುವ ಸಂಕಟವನ್ನು ಹೇಳುತ್ತಿದ್ದೇವೆ. ಅವರೂ ಕೇಳುತ್ತಿದ್ದಾರೆ. ಆದರೂ ಅವರು ಕರ್ತವ್ಯ ಲೋಪಕ್ಕೆ ತುತ್ತಾಗಿದ್ದಾರೆ. ಬಡವರ ಹಣವನ್ನು ಹೀಗೆಯೇ ಇನ್ನೆಷ್ಟು ಕಾಲ ದುರುಪಯೋಗ ಪಡಿಸಿಕೊಂಡು ಮುಂದುವರಿಸುತ್ತೀರಿ ? ನಮ್ಮ ನೆರೆಹೊರೆಯ ಪ್ರಾಂತಗಳಲ್ಲಿ ಹಸಿದ ಮನುಷ್ಯನ ವಿಷಯದಲ್ಲಿ ಬಹಳ ಕಾಲದಿಂದ ರಿಹ್ಯಾಬಿಲಿಟೇಷನ್ ಸ್ಕೀಂ ಮುಂದುವರಿಯುತ್ತಿದೆ. ಆಂಧ್ರದಲ್ಲಿ, ತೆಲಂಗಾಣದಲ್ಲಿ ಅದರ ಬಗ್ಗೆ ಏನು ಆಗುತ್ತಿದೆಯೆಂಬುದನ್ನು ನೋಡಬೇಕು. ಮೈಸೂರು ದೇಶದಲ್ಲಿ ಬಡವನ ಪಾಲಿಗೆ ಯಾರೂ ದಿಕ್ಕು ಬೇಡವೇ ? ಇದು ಕಷ್ಟಕರವಾದ ವಿಷಯ. ಇದಕ್ಕೆ ನಿಜವಾಗಿಯೂ ಕೂಡ ಒಂದು ಸುವ್ಯವಸ್ಥಿತವಾದ ಹಾಗೂ ಸಮಗ್ರವಾದ ಯೋಜನೆ ಬೇಕು. ಅಂತಹ ಒಂದು ಯೋಜನೆಯನ್ನು ಸರ್ಕಾರದವರು ತಯಾರು ಮಾಡಬೇಕೆಂದು ಹೇಳುತ್ತೇನೆ. ಇನ್ನು ಹತ್ತು ವರ್ಷಗಳಲ್ಲಾದರೂ ಈ ಕಷ್ಟ ಪರಿಹಾರವಾಗಿ ಈ ದೇಶದಲ್ಲಿ ನತದೃಷ್ಟ ಬಡವರು ಚೆನ್ನಾಗಿ ಜೀವನ ಮಾಡುವ ಹಾಗೆ ಮಾಡಬೇಕು. ಆಗ ನಿಜವಾಗಿ ರಾಮರಾಜ್ಯವಾಗುತ್ತದೆ. ಮಹಾತ್ಮ ಗಾಂಧಿಯವರ ಆಶಯವನ್ನು ಪರಿಪೂರ್ಣವಾಗಿ ಆಚರಿಸಿದಂತಾಗುತ್ತದೆ. ಅದರಲ್ಲಿಯೂ ಮಹಾತ್ಮ ಗಾಂಧಿಯವರ ಶತಾಬ್ದಿ ಉತ್ಸವವನ್ನು ಆಚರಣೆ ಮಾಡುವಾಗ ಬಹಳ ಬುದ್ಧಿವಂತರೂ ಹಾಗೂ ದಕ್ಷರೂ ಆಗಿರತಕ್ಕ ನಮ್ಮ ಮೆಚ್ಚಿನ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಇಂತಹ ಯೋಜನೆಯನ್ನು ನಿರೂಪಿಸಿದರೆ ಬಹಳ ಕೀರ್ತಿಗೆ ಪಾತ್ರರಾಗುತ್ತಾರೆ. ಮಹಾತ್ಮ ಗಾಂಧಿಯವರಿಗೆ ನಿಜವಾಗಿ ತಮ್ಮ ಕೃತಜ್ಞತೆಯನ್ನು ಅರ್ಪಿಸಿದಂತಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈಗಲೇ ಮನಸ್ಸುಮಾಡಿ ಮುಂದಿನ ಆಯವ್ಯಯ ಅಧಿವೇಶನದೊಳಗಾಗಿ ಅಂತಹ ಒಂದು ಯೋಜನೆಯನ್ನು ಮಾಡಿಸಬೇಕು. ಅರಣ್ಯ ಶಾಖೆಯ ಸಚಿವರು ನಮ್ಮಲ್ಲಿಗೆ ಬಂದು ಅಲ್ಲಿನ ಪರಿಸ್ಥಿತಿಯನ್ನು ಬಹಳ ಚೆನ್ನಾಗಿ ಮನಗಂಡಿದ್ದಾರೆ. ನಮ್ಮ ತಾಲ್ಲೂಕಿಗೆ ಬಂದು ಅಲ್ಲಿನ ಬಡತನ ಪರಿಸ್ಥಿತಿ ಹೋಗಬೇಕೆಂದು ಹೇಳಿದ್ದಾರೆ. ಆದರೆ ಇದಿನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಎಷ್ಟುಮಟ್ಟಿಗೆ ನಮ್ಮ ತಾಲ್ಲೂಕಿನ ಕೆಲವು ಕಡೆಗಳಲ್ಲಿ ಕೂಲಿಗಾರರ ಸಂಖ್ಯೆ ಅಧಿಕವಾಗಿದೆ ಎಂಬುದನ್ನು ನೋಡಬೇಕು. ನಾನು ಸತ್ಯವಾದಂಥ ಮಾತನ್ನು ಇಲ್ಲಿ ಹೇಳುತ್ತಿದ್ದೇನೆ. ನಮ್ಮ ತಾಲ್ಲೂಕಿನ ಕೆಲವು ಹಳ್ಳಿಗಾಡಿನ ಪ್ರದೇಶಗಳಲ್ಲಿ ಒಪ್ಪತ್ತಿನ ಊಟಕ್ಕಾಗಿ ಕೂಲಿಗಾರರು ಒಂದು ದಿನವೆಲ್ಲಾ ದುಡಿಯುತ್ತಿದ್ದಾರೆ. ಶ್ರೀಮಂತರ ಮನೆಗೆ ಹೋಗಿ ಬೇಡಿ ಅವರು ತಿನ್ನಬೇಕು. ಅವರ ಸಂಸ್ಕೃತಿ, ಕಲ್ಚರ್ ಹೀಗಾಗಿದೆ. ಬಡವರಾದವರು ಶ್ರೀಮಂತರ ಮುಂದೆ ಮೈತುಂಬ ಬಟ್ಟೆ ಹಾಕಿಕೊಳ್ಳದೆ ಹೋಗಬೇಕಾಗಿದೆ. ಈ ರೀತಿಯಾದ ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿ ನಿಜವಾಗಿ ಆಗುತ್ತಿವೆ. ಇದರಿಂದ ಮಾನವನಾದವನಿಗೆ ತುಂಬಾ ನಾಚಿಕೆಯಾಗುತ್ತದೆ. ನಮ್ಮ ಒಳನಾಡಿನವರು, ನಮ್ಮೊಡನೆ ಇರುವವರು ಅವರು. ಈಗಲಾದರೂ ಸರ್ಕಾರದವರು ಮನಸ್ಸುಮಾಡಿ ಅವರ ಮೇಲ್ಮೆಗಾಗಿ ಒಂದು ವ್ಯವಸ್ಥಿತವಾದ ಯೋಜನೆಯನ್ನು ತಯಾರುಮಾಡಿ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯರೂಪಕ್ಕೆ ತರಬೇಕೆಂದು ನಾನು ಒತ್ತಾಯಪೂರ್ವಕವಾಗಿ ಪ್ರಾರ್ಥನೆಮಾಡುತ್ತೇನೆ.

ಇನ್ನು ಹಣದ ಅಭಾವ. ಅದಕ್ಕೋಸ್ಕರ ದೊಡ್ಡ ಲಾಟರಿ ಮಾಡಬೇಕು. ನೆರೆ ರಾಜ್ಯದಲ್ಲಿ ಲಾಟರಿ ಮಾಡಿ ಬೇಕಾದಷ್ಟು ಹಣವನ್ನು ಸಂಪಾದನೆ ಮಾಡುತ್ತಿದ್ದಾರೆ. ತಾವು ಏಕೆ ಆರೀತಿ ಮಾಡಬಾರದು ? ಆರ್ಥಿಕಮಂತ್ರಿಗಳು ಬಹಳ ಬುದ್ಧಿವಂತರು. ಅವರು ಏನು ಮಾಡುತ್ತಾರೆಂಬುದು ಗಜಗರ್ಭವಾಗಿದೆ. ಅದನ್ನು ಯಾವಾಗ ಮಾಡುತ್ತಾರೆಂಬುದು ಗೊತ್ತಾಗಲಿಲ್ಲ. ಆದಷ್ಟು ಜಾಗ್ರತೆಯಾಗಿ ಅದನ್ನು ಮಾಡಬೇಕು.

ಇನ್ನು ಆಹಾರದ ಅಭಾವ ವಿಷಯ. ಸರ್ಕಾರ ಇಲ್ಲದ ಜವಾಬ್ದಾರಿಯನ್ನು ತನ್ನ ತಲೆಯ ಮೇಲೆ ಹಾಕಿಕೊಂಡಿದೆ. ದೇಶದಲ್ಲಿರತಕ್ಕ ಪ್ರಜಾಸಂಖ್ಯೆಯ ಪೈಕಿ ವ್ಯವಸಾಯಗಾರರನ್ನು ಬಿಟ್ಟು ಕೇವಲ ಕೆಲವು ಜನ ಸುಖವಾಗಿರಬೇಕೆಂದು ಮಾಡುತ್ತಿದ್ದಾರೆ. ಆದರೆ ನತದೃಷ್ಟ ರೈತರು ಅವರಿಗಾಗಿ ಕಷ್ಟಪಡಬೇಕಾಗಿದೆ. ಈಗ ಬೆಳೆ ಹೋಯಿತು. ರೆಮಿಷನ್ ಕೊಡುತ್ತೇವೆ. ಕಂದಾಯ ಮುಂದಿನವರ್ಷ ಕೊಡುವಂತೆ ಮಾಡುತ್ತೇವೆಂದು ಹೇಳಿದರು. ಆದರೆ ಈಗ ಲುಕ್ಸಾನು ಪಡೆಯುವವರು ಯಾರು ? ಬೇರೆ ವೃತ್ತಿಮಾಡುವ ಜನ ಯಾವ ಮಟ್ಟದಲ್ಲಿ ಜೀವನ ಮಾಡುತ್ತಿದ್ದಾರೋ ಆ ಒಂದು ಮಟ್ಟದಲ್ಲಿ ರೈತನಾದವನು ಜೀವನ ಮಾಡುವುದಕ್ಕೆ ಆಗುತ್ತಾ ಇಲ್ಲ. ಅವನು ಬೆಳೆದಂಥ ಆಹಾರಪದಾರ್ಥಗಳಿಗೆ ಸರಿಯಾದ ಧಾರಣೆ ಕೊಡಬೇಕೆಂದರೆ ಅದನ್ನೂ ಕೂಡ ಕೊಡುತ್ತಾ ಇಲ್ಲ.

ದೇಶದಲ್ಲಿ ಇವತ್ತು ಎಲ್ಲರೂ ಒಂದೇ ಸಮಾನಾಗಿರಬೇಕು. ಒಬ್ಬನು ಯಾವ ರೀತಿ ಜೀವನ ಮಾಡುತ್ತಾನೆ, ಅದೇ ರೀತಿ ಇತರರೂ ಕೂಡ ಜೀವನ ಮಾಡಬೇಕು. ಇವತ್ತು ನಾಲ್ಕನೆಯ ದರ್ಜೆಯ ನೌಕರರ ಮಟ್ಟದಲ್ಲಿ ಒಂದು 50 ರೂಪಾಯಿ ಕಂದಾಯ ಕೊಡತಕ್ಕ ರೈತನು ಬದುಕಬೇಕಾದರೆ, ಅದು ನಿಜವಾಗಿಯೂ ಅವನ ಪುಣ್ಯವೆಂದು ಹೇಳಬೇಕಾಗುತ್ತದೆ. ಇವತ್ತು ಎಲ್ಲೆಲ್ಲಿ ಲೇಬರ್ ಕ್ಲಾಸ್ ಇದ್ದಾರೆ, ಇಂಡಸ್ಟ್ರಿಯಲ್ ಲೇಬರರ್ಸ್, ಮಿಲ್ ಕೂಲಿಗಾರರು ಇದ್ದಾರೆ, ಅಂಥ ಕಡೆ ಮೊದಲು ರೇಶನ್ ಜಾರಿಗೆ ತರುತ್ತಾರೆ. ಉದಾಹರಣೆಗೆ ಬೆಂಗಳೂರು, ಕೆ.ಜಿ.ಎಫ್. ಮುಂತಾದ ಕಡೆಗಳಲ್ಲಿ ಇದನ್ನು ಜಾರಿಗೆ ತರುತ್ತಾರೆ. ಜೊತೆಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸರ್ಕಾರದವರು ಆಹಾರವನ್ನು ಒದಗಿಸುತ್ತಿದ್ದಾರೆ. ಇಂದು ಬೆಂಗಳೂರು, ಮದ್ರಾಸಿನಲ್ಲಿ ಬಿನ್ನಿಮಿಲ್ಲು ಮತ್ತು ಇತರ ಕೈಗಾರಿಕೆಗಳು ಕೋಟ್ಯಾಂತರ ರೂಪಾಯಿ ಹಾಕಿ ನೂರಾರು ಎಕರೆ ಜಮೀನನ್ನು ಕೊಂಡುಕೊಂಡು ಕೈಗಾರಿಕೆಗಳನ್ನು ಮಾಡುತ್ತಿದ್ದಾರೆ. ಅಂಥ ಕಡೆ ಜಮೀನುಗಳಲ್ಲಿ ಬೆಳೆಯನ್ನು ತೆಗೆಯುವ ಒಂದು ಕಾರ್ಯಕ್ರಮವನ್ನು ಅವರ ಸಿಬ್ಬಂದಿಯವರಿಂದಲೇ ಮಾಡಿಕೊಂಡರೆ, ಆಹಾರ ಒದಗಿಸುವಂತಹ ಹೊಣೆಗಾರಿಕೆ ಸರ್ಕಾರದ ಮೇಲೆ ಇಲ್ಲದಂತಾಗುತ್ತದೆ. ಇದರಿಂದ ಆಹಾರಧಾನ್ಯಗಳ ಬೆಲೆಯೂ ಇಳಿಮುಖವಾಗುತ್ತದೆ. ಇದನ್ನು ದಯವಿಟ್ಟು ಸರ್ಕಾರದವರು ಮಾಡಬೇಕು. ಇನ್ನು ಕ್ರಾಪ್ ಇನ್‌ಶ್ಯೂರೆನ್ಸ್ ಮಾಡಬೇಕೆಂದಿದ್ದಾರೆ. ಅದನ್ನು ಪರಿಶೀಲಿಸಿ ಸೂಕ್ತವಾದ ಪರಿಹಾರವನ್ನು ರೈತರಿಗೆ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗ ಶ್ರೀ ವಿ. ಎನ್. ಪಾಟೀಲ್ ಅವರ ಹಾಫ್-ಆ್ಯನ್-ಅವರ್ ಡಿಸ್ಕಶನ್ ತೆಗೆದುಕೊಳ್ಳೋಣ.

Half-an-hour Discussion on Question No. 190 *re* : Arrest Warrants against Markhal and Bothagi Villagers.

SRI V. N. PATIL (Humnabad).—I want to raise on this occasion a discussion pertaining to an unfortunate incident that occurred in a village in Bidar District. This village is called by name Markhal. There is another village by name Bothagi near that unfortunate village. This unfortunate incident took place between these two villages. I very well remember on 22nd December 1967. I raised this topic in this august House. The then Food Minister who was temporarily in charge of the Home Portfolio assured me that he would look into this incident and see something will be done to set right the same. Atrocities have been committed on the people of Markhal. The ladies were dragged out of their houses. The then Chief Minister Mr. Nijalingappa was also requested in this connection and he assured me after the ladies from that village met him that action will be taken to settle the dispute between the two villages. The people affected are the poor Harijans of Bothagi village. These poor Harijans were asked to shift to a site near the Markhal village. They constructed temporary huts and some houses on the site. The villagers of that village picked up quarrel with these people and took objection that they should not construct houses because that site belongs to their village for grazing cattle and further objected as this land Gairan was not allotted for the housing colony by any legal authority as per law, as that was the only piece of land for grazing cattle for 3 villages, namely, Markhal, Shankargunjwadi and Bothagi. The huts erected on the site were brought down

(Sri V. N. Patil)

and all the innocent poor Harijans were rendered homeless. Even the Superintendent of Police was pursuaded to act in such a way that benefits the vested interests of the land-lord to save their land and to shift the Harijans to Markhal. The site which was sought originally by the Harijans belonged to some person in Bothagi and in order to save the land of the rich man of Bothagi village, and with the help of an elected representative of Bidar these poor Harijans of Bothagi were sent to put up their houses, in a site—a gomal site, which was the only land for grazing cattle for the villagers of Markhal and Shnakargunjwadi. The people of Markhal objected to the grazing land being given to. Bothagi people. Inspite of that they were pursuaded to go to that place. The Superintendent of Police, Bidar, was pursuaded to inaugurate it. The unfortunate rift was due to the fact that the site in which they erected the huts belongs to other village, Markhal. These huts were put unauthorisedly without even changing the Gairan Gomal land into an Gaothan land. The pursuasive method might have been adopted and instead the so called leader in collusion with the then Deputy Commissioner, Bidar, unauthorisedly enticed these poor people to shift to the other village boundary without the concurrence of the other village population, by making a grand show of inauguration by the Superintendent of Police, Bidar, making the poor houseless people and the Superintendent of Police as a scapegoat. Huts were razed to the ground level. But who is the person to be blamed for all these things? The owner of the land which was originally intended for house site in Bothagi pursuaded these people to go to that site of Markhal village. I am not questioning the bona fide need of these villagers because the original place was infit and fear of flood was there. What I am sincerely serious about is about the welfare of these people. Where they should go? Who is to look after the welfare of these people? The new Chief Minister was pleased to answer to my question that the entire male population of Markhal village has returned to the village. The thing is not like that. The entire male population was damn afraid of returning home as the complaint was given with the names of entire village male population as accused. About 74 persons are under trial in connection with this quarrel between these two villagers. Simply because they are the people of other village, the villagers of Markhal had taken an attitude against these people that our grazing land must be spared and if land is required we will give them land in our village, but not the only grazing land. The elected representative whom I do not wish to name here is bent upon fixing these people on that site alone. This is also one of the reasons. It is stated that a land measuring 5 acres is being allotted to these people as an alternative arrangement. Repeated assurance is being given every time. Human treatment is not being given to these Harijans even to this day. I want the Chief Minister to do justice to them. Because revengeful attitude between two villages is not conducive to good neighbourly relationship—one section

erecting a hut overnight and another village section pulling it down. This will lead to inhuman jealousy and hatred between two neighbourly villages. We must find a way out. Seventy-four persons have been charge-sheeted and are under trial. They have to go from one court to another. They are all poor peasants. The whole episode is an outcome on account of some momentous prejudices of one village against another. Unfortunately when there is a complaint against the entire village male population, it might be called even a technical dacoity. What did happen at Markhal ? The weaker section of the population became the victim of revengeful attitude of a devilish character. Huts were brought to ground level. The police could not side with this faction or that faction. They were left in a pitiable condition. When revengeful attitude is taken by one village against another and standing crops are looted by unsocial elements of other places in order to put the blame on either villages, it is not possible to maintain law and order. Even if some police men are posted, in the process of bringing the situation under control, they themselves may commit some mistakes. Several sheep were stolen, jawar was looted and standing crops were cut and looted in Markhal Village. Nights were the hells for those poor ladies of Markhal when the entire male population left the village due to mass arrests and beating as the complaint named the entire male population. This was the tale of horror of the Markhal and Bothgi Villages. Such was the condition there and the same condition is prevailing even today, though it is not of a greater magnitude and has come to a lesser magnitude. What I want to request the Hon. Chief Minister is that he should pay a kind visit to that area, meet the representatives and elders of both the villages and pursuade them to come together. The temporary huts of the Harijan families were razed to ground level and so some immediate arrangement should be made on humanitarian consideration to provide funds to give relief to the Harijans to put up small houses, irrespective of the fact whether there is budget provision or not. It is our duty to see that something is done for them. At least some zinc sheets together with a cash amount of Rs. 500 should be given to each Harijan family to enable them to raise four walls for a room and a kitchen to enable them to have some respectable human life and it should also be seen that no revengeful acts take place between the two villages by persuasive methods. It is also equally necessary that the cases filed against the 74 persons should be withdrawn in the interest of peace between the two villages because it was neither pre-planned nor intentionally done. For more than one year and few months the cases have been pending and the lawyers can go on arguing these cases. In the meantime, the revengeful attitude continues. There seems to be no end to these cases. If there is conviction, they will go in appeal and if there is no conviction, the Public Prosecutor may ask the Government to go in appeal and endless bitterness between the two villages will continue. So, forthwith some arrangement must be made to build some huts for the poor Harijans by granting Rs.500 to each familly and providing them the necessary zinc sheets. The Deputy

(SRI V. N. PATIL)

Commissioner may be instructed to see that every pie that is to be granted to them is honestly spent without the benefit going to the middle men. Now the very name Markhal is poison to the villagers of Bothagi and vice versa ; there is no love lost between them and something must be done to remove the animosity between the people of these two villages. Social education is necessary for socially backward people but by social education this problem cannot be tackled early as it takes a long time to bear fruit and this is an urgent problem to be tackled forthwith failing which petty prejudices between the illiterate rural poor between the two villages will ruin them by the circumstances which are taking them away poles apart. In order to bring down the tempers between the people of these two villages, the *danda* is no solution. It may punish but what about the revengeful attitude that is still there between the two sections of the population ? The best thing is that irrespective of party affiliation the problem should be tackled on humanitarian consideration. I submit to this House and through the Speaker to the Government that some decent amount should be granted to these villagers who have lost their huts and the cases against those 74 persons should be withdrawn so that the animosity turns to friendship and mutual fraternity and co-operation develops between them in order to build up the rural agricultural economy which now is resulting in mutual destruction. So, it is necessary to create an atmosphere of co-existence giving a good-bye to hate and suspicion. Out of these 71 persons almost all of them are poor peasants and agriculturists and it is too hard for them to face trial. In order to bring peace between these two villagers, I request the Hon. Chief Minister to consider sympathetically this proposal of mine. The then Foodin Mister Sri Jatti gave an assurance that he would visit the villages and the people of both the villages did wait with garlands to make a representation to him but due to certain reasons he could not visit. I now invite the Hon. Chief Minister to pay a visit and bring about peace in that place for giving relief to Harijans and unite the two sister villages fallen against each other by withdrawing the cases.

† ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಈ ಪ್ರಕರಣದ ಬಗ್ಗೆ ಮಾನ್ಯ ಸದಸ್ಯರು ಅರ್ಧಗಂಟೆ ಚರ್ಚೆಯ ಸಮಯದಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ಮಾನ್ಯ ಸಭೆಗೆ ಪೂರ್ತಿ ವಿಚಾರಗಳನ್ನು ಈ ಪ್ರಕರಣದ ಬಗ್ಗೆ ತಿಳಿಸುವುದು ಅವಶ್ಯ ಮತ್ತು ಉಚಿತ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ಈ ಪ್ರಕರಣದ ಬಗ್ಗೆ ಅವಶ್ಯವಾದ ವಿಚಾರಗಳನ್ನು ಈ ಮಾನ್ಯ ಸಭೆಯ ಮುಂದೆ ಇಡುತ್ತೇನೆ. ಬೋತ್ಗಿಹಳ್ಳಿ ನದಿ ದಂಡೆಯಲ್ಲಿ ಇದೆ. ಕೆಲವು ಹರಿಜನರ ಮನೆಗಳು ಆ ನದಿ ದಡದಲ್ಲಿ ಇವೆ. ಬಹುಶಃ ಫ್ಲಡ್ಸ್ ಬಂದಾಗ ಅವರ ಮನೆಗಳಿಗೆ ನೀರು ನುಗ್ಗುತ್ತದೆಯೋ ಏನೋ ಗೊತ್ತಿಲ್ಲ. ಆ ಮನೆಗಳಲ್ಲಿರತಕ್ಕ ಹರಿಜನರು ಡೆಪ್ಯುಟಿ ಕಮೀಷನರ ಹತ್ತಿರ ಹೋಗಿ ನದಿಯಲ್ಲಿ ಪ್ರವಾಹ ಬಂದಾಗ ನೀರು ಆ ಮನೆಗಳಿಗೆ ನುಗ್ಗುತ್ತದೆ ಆದ್ದರಿಂದ ನಾವು ಮನೆಗಳಲ್ಲಿ ಇರುವುದಕ್ಕೆ ಆಗುವುದಿಲ್ಲ, ನಮಗೆ ಮತ್ತೊಂದು ಜಾಗ ತೋರಿಸಿಕೊಡಿ. ನಾವು ಅಲ್ಲಿಗೆ ಹೋಗಿ ವಾಸಮಾಡುವುದಕ್ಕೆ ತಯಾರಾಗಿದ್ದೇವೆ ಎಂದು ಅವರು ಡೆಪ್ಯುಟಿ ಕಮೀಷನರನ್ನು ಕೇಳಿಕೊಂಡಿದ್ದಾರೆ. ಡೆಪ್ಯುಟಿ ಕಮೀಷನರು ಮಾರ್ಕಾಲ್ ಗ್ರಾಮದ ಬಳಿ ಇದ್ದ 47 ಎಕರೆ ಗೋಮಾಳದ ಜಮೀನಿನಲ್ಲಿ ಯಾರಿಗೂ ಸಂಬಂಧವಿಲ್ಲವೆ ಇರುವ ಮತ್ತು ಊರಿಗೂ ಸಂಬಂಧವಿಲ್ಲದೇ ಇರುವ 10 ಎಕರೆ ಜಮೀನನ್ನು

ಮಂಜೂರು ಮಾಡಿಕೊಟ್ಟು ಅಲ್ಲಿ ಆ ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಿ ಎಂದು ಹೇಳಿದ್ದಾರೆ. ಅದು ಆದಮೇಲೆ ಅಲ್ಲಿ ಕೆಲವು ಜನಗಳು ಮನೆಗಳನ್ನು ಕಟ್ಟಿಕೊಂಡರು, ಕೆಲವರು ಮನೆಗಳನ್ನು ಕಟ್ಟಬೇಕು ಎನ್ನುವ ಪ್ರಯತ್ನದಲ್ಲಿ ಇದ್ದಾಗ ಮಾರ್ಕಲ್ ಗ್ರಾಮದ ಕೆಲವರು ಗುಂಪು ಸೇರಿಕೊಂಡು 24-10-67ನೇ ತಾರೀಖು ಬೆಳಿಗ್ಗೆ 7-9 ಗಂಟೆಯ ಮಧ್ಯದಲ್ಲಿ ಲಾಟಿ ಮತ್ತು ಆಯುಧಗಳನ್ನು ಹಿಡಿದುಕೊಂಡು ಹೋಗಿ ಯಾರು ಯಾರು ಆ ಗೋಮಾಳದಲ್ಲಿ ಡೆಪ್ಯುಟಿ ಕಮೀಷನರು ಕೊಟ್ಟಿದ್ದಂತಹ ಜಾಗದಲ್ಲಿ ಬಂದು ಮನೆಗಳನ್ನು ಕಟ್ಟಿಸಿಕೊಂಡಿದ್ದರೋ ಆ ಮನೆಗಳನ್ನು ಅವರು ಲೂಟಿ ಮಾಡಿದರು. ಈ ರೀತಿ ನಮ್ಮ ಹತ್ತಿರ ರಿಪೋರ್ಟ್ ಬಂದಿದೆ ಅದನ್ನು ನಾನು ಹೇಳುತ್ತಿದ್ದೇನೆ, ಏತಕ್ಕೆಂದರೆ ಇದು ಕೋರ್ಟಿನಲ್ಲಿ ಕೇಸು ನಡೆಯುತ್ತಿದೆ. ಆದ್ದರಿಂದ it is alleged ಆದರೆ it is a fact ಎಂದು ಹೇಳುವುದಕ್ಕಾಗುವುದಿಲ್ಲ.

6-30 P.M.

ಬೊತಗಿ ಹಳ್ಳಿಯ ಕೆಲವರು ಮಾರ್ಕಲ್ ಹಳ್ಳಿಯಲ್ಲಿ ಮನೆ ಕಟ್ಟಿಕೊಂಡಮೇಲೆ ಒಂದು ದಿನ ಮಾರ್ಕಲ್ ಹಳ್ಳಿಯ ಕೆಲವರು ಇವರ ಮನೆಗಳಿಗೆ ನುಗ್ಗಿ ಒಡವೆಗಳನ್ನು ಲೂಟಿ ಮಾಡಿದರು. ಕೆಲವು ಸಾಮಾನುಗಳಿಗೆ ಮತ್ತು ಮನೆಗಳಿಗೆ ಬೆಂಕಿ ಹಚ್ಚಿದರು.

Sri K. H. PATIL.—Now I understand from the Chief Minister that the case is *sub judice*. If so, what the Chief Minister might say here might influence the judiciary.

Mr. DEPUTY SPEAKER.—He is going to state only the known and alleged facts. He is not going into the merits of the case.

Sri K. H. PATIL.—Even there, it is for the judiciary and courts to determine which is a fact. It is not for the Chief Minister to disclose any facts here.

ಶ್ರೀ ವೀರೇಂದ್ರ ಪಾಟೀಲ್.—ಪೋಲೀಸರಿಗೆ ಏನು ಒಂದು ಕಂಪ್ಲೇಂಟ್ ಬಂದಿದೆ, ಅದರ ಆಧಾರದ ಮೇಲೆ, ಅದರಲ್ಲಿ ಏನೇನು ಬರೆದಿದ್ದಾರೆಯೋ ಅದನ್ನು ಮಾತ್ರ ಹೇಳುತ್ತಿದ್ದೇನೆ. ಈಗ ನಾನು ಹೇಳುತ್ತಿರುವುದೆಲ್ಲಾ ಸತ್ಯಾಂಶವೆಂದು ನಾನು ಹೇಳುತ್ತಿಲ್ಲ. ಮಾನ್ಯ ಸದಸ್ಯರಿಗೆ ಏನು ಆಗಿದೆ ಎಂಬುದು ತಿಳಿಯಬೇಕು ಎಂಬುದಾಗಿ ಹೇಳುತ್ತಿದ್ದೇನೆ. ಈ ರೀತಿಯಾದ ಮೇಲೆ ಕಂಪ್ಲೇಂಟ್ ಚಿಡುಗುಪ್ಪಾ ಪೋಲೀಸ್ ಸ್ಟೇಷನ್‌ಗೆ ಬಂತು. ಕ್ರಿಮಿನಲ್ 148, 332, 149, 427 ಇಂಡಿಯನ್ ಪೀನಲ್ ಕೋಡ್ ಪ್ರಕಾರ ಕೇಸ್ ರಿಜಿಸ್ಟರ್ ಆಯಿತು. ಕಂಪ್ಲೇಂಟ್‌ನಲ್ಲಿ ಆ ಊರಿನಲ್ಲಿದ್ದ ಗಂಡಸರ ಹೆಸರುಗಳನ್ನೆಲ್ಲಾ ಬರೆದಿದ್ದರು. ಆದಕಾರಣ ಆ ಗಂಡಸರು ನಮ್ಮ ಮೇಲೆ ಕೇಸ್ ರಿಜಿಸ್ಟರ್ ಆಗಿದೆ, ಪೋಲೀಸರು ಬಂದು ಕರೆದುಕೊಂಡು ಹೋಗುತ್ತಾರೆಂದು ತಿಳಿದುಕೊಂಡು ಆ ಊರನ್ನೇ ಬಿಟ್ಟರು. ಮಾನ್ಯ ಸದಸ್ಯರು ಹೇಳಿದರು, ಎರಡನೆಯವರು ಪೋಲೀಸರನ್ನು ಆ ಊರಿಗೆ ಕರೆದುಕೊಂಡು ಹೋಗಿ ಲೂಟಿ ಮಾಡಿದ್ದಾರೆಂದು, ಅದು ನನಗೆ ಗೊತ್ತಿಲ್ಲ. ಈ ರೀತಿ ಗಲಾಟೆಯಾದ ಮೇಲೆ ಆರಮ್ಡ್ ಪೋಲೀಸ್ ಹೋಯಿತು. ನಂತರ ಶಾಂತಿಯನ್ನು ಉಂಟುಮಾಡುವುದಕ್ಕೆ ಸಾಕಷ್ಟು ಮಟ್ಟಿಗೆ ಪ್ರಯತ್ನ ಮಾಡಿ, ನಂತರ ಇನ್‌ವೆಸ್ಟಿಗೇಷನ್ ಮಾಡಿ 78 ಜನರಮೇಲೆ ಇಂಡಿಯನ್ ಪೀನಲ್ ಕೋಡ್ ಪ್ರಕಾರ ಚಾರ್ಜ್‌ಷೀಟ್ ಹಾಕಿದ್ದಾರೆ. 41 ಜನರನ್ನು ಅರೆಸ್ಟ್ ಮಾಡಿದರು. 78 ಜನರಲ್ಲಿ 37 ಜನರು ಕೋರ್ಟಿಗೆ ಹಾಜರಾದರು. ಕೆಳಗಿನ ಕೋರ್ಟಿನಲ್ಲಿ ಟ್ರಯಲ್ ಆಗಿ ಸೆಷನ್ ಕೋರ್ಟಿಗೆ ಕಮಿಟ್ ಆಗಿದೆ. ಈಗ ವಿಚಾರಣೆ ನಡೆಯುತ್ತಿದೆ. ಈ ಮಧ್ಯೆ ಜಿಲ್ಲಾಧಿಕಾರಿಗಳು ಆ ಹಳ್ಳಿಗೆ ಹೋಗಿ ಶಾಂತ ವಾತಾವರಣ ನಿರ್ಮಾಣ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇಲ್ಲಿ ಬರುವಂತಹ ಪ್ರಶ್ನೆಯೆಂದರೆ ಎರಡನೆಯ ಹಳ್ಳಿಯವರು ಬಂದು ನಮ್ಮ ಹಳ್ಳಿಯ ಗೋಮಾಳದಲ್ಲಿ ನೆಲೆಸಿದರೆಂದು, ಆ ಹಳ್ಳಿಯವರು ಅವರಮೇಲೆ ಅತ್ಯಾಚಾರ ಮಾಡಿದರು. ಆಗ ವಾತಾವರಣ ಹದಗೆಟ್ಟು ಗದ್ದಲವಾಯಿತು. ಈಗ ಅಧಿಕಾರಿಗಳು ಶಾಂತ ವಾತಾವರಣವನ್ನು ಉಂಟುಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮಾರ್ಕಲ್ ಹಳ್ಳಿಯಲ್ಲಿ ಅವರು ಇರುವುದಕ್ಕೆ ಆಗುವುದಿಲ್ಲವೆಂದು ಮಾನ್ಯ ಸದಸ್ಯರು ಹೇಳಿದಮೇಲೆ ಅವರನ್ನು ಎರಡನೆಯ ಕಡೆ ನೆಲೆಸುವುದಕ್ಕೆ ಏರ್ಪಾಡು ನಡೆಯುತ್ತಿದೆ. ಲ್ಯಾಂಡ್ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ನಡೆಯುತ್ತಿದೆ. ಇವತ್ತು ಯಾರೂ ಸಹ ಕೂಡಲೇ ಭೂಮಿ ಬಿಟ್ಟುಕೊಡುವುದಕ್ಕೆ ತಯಾರಿಲ್ಲ. ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಭೂಮಿಯನ್ನು ಪಡೆದುಕೊಂಡು ನಂತರ ಇವರನ್ನು ಸೆಟಲ್ ಮಾಡಬೇಕಾಗುತ್ತದೆ. ಈ ಕಾರ್ಯ ನಡೆಯುತ್ತಿದೆ.

(ಶ್ರೀ ವೀರೇಂದ್ರ ಪಾಟೀಲ್)

ಇದಕ್ಕೆ ಮಾನ್ಯ ಸದಸ್ಯರು ಸಹ ಸಹಾಯ ಮಾಡಬೇಕು. ನೀವೇ ಬಂದು ನೋಡಿ ಸಹಾಯ ಮಾಡಿ ಎಂದು ಮಾನ್ಯ ಸದಸ್ಯರು ಹೇಳಿದರು. ಅಲ್ಲಿಗೆ ನಾನು ಬರುವುದಕ್ಕೆ ಸಾಕಷ್ಟು ಸಮಯ ಸಿಗುವುದಿಲ್ಲ. ನಮ್ಮ ಡೆಪ್ಯೂಟಿ ಮಿನಿಸ್ಟರ್ ಅದೇ ಜಿಲ್ಲೆಯವರಾಗಿದ್ದಾರೆ. ಈ ಸಭೆ ಮುಗಿದಮೇಲೆ ಅವರನ್ನು ಕಳಿಸಿ ಎರಡು ಕಡೆಯವರಿಗೂ ಸಾಮರಸ್ಯ ಉಂಟುಮಾಡುವುದಕ್ಕೆ ಅವರಿಗೆ ಹೇಳುತ್ತೇನೆ. ಗೋಮಾಳ ಲ್ಯಾಂಡ್‌ನ್ನು ಹರಿಜನರಿಗೆ ಕೊಟ್ಟರೆ ಬೇರೆಯವರು ಮೈಮೇಲೆ ಬಂದು ಬೀಳುತ್ತಾರೆಂದು ಮಾನ್ಯ ಸದಸ್ಯರು ಹೇಳುತ್ತಾರೆ. ಆ ಕಾರಣಕ್ಕಾಗಿ ವರ್ಷವೆಲ್ಲಾ ಪೋಲೀಸ್ ಪ್ರೊಟೆಕ್ಷನ್ ಕೊಡುವುದಕ್ಕಾಗುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಬಂದಿರುವುದರಿಂದ ಯಾವುದಾದರೂ ಒಂದು ಹಾದಿಯನ್ನು ಹುಡುಕಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಅದರಂತೆ ಡಿ.ಸಿ. ಅವರಿಗೆ ಮತ್ತು ಎಸ್.ಪಿ. ಅವರಿಗೆ ಹೇಳುತ್ತೇನೆ. ಈ ಕೂಡಲೆ ಅವರನ್ನು ಎರಡನೇ ಕಡೆ ಸೆಟಲ್ ಮಾಡುವುದಕ್ಕೆ ಜಾಗವಿಲ್ಲ. ಅವರಿಗೆ ಬೇಕಾಗಿರುವ ಜಾಗವನ್ನು ಕೊಡಿಸುವುದಕ್ಕೆ ಮಾನ್ಯ ಸದಸ್ಯರು ಮತ್ತು ಆ ಪ್ರದೇಶದ ಪ್ರತಿನಿಧಿಗಳು ಸಹ ಪ್ರಯತ್ನ ಮಾಡಬೇಕು. ನಮ್ಮ ಕಷ್ಟ ಏನಾಗಿದೆಯೆಂದರೆ, ಲ್ಯಾಂಡ್ ಆಕ್ವೈರ್ ಮಾಡಿಕೊಳ್ಳುವುದರಲ್ಲಿ ಸ್ವಲ್ಪ ತಪ್ಪುಮಾಡಿದರೂ ಸಹ ಸಂಬಂಧಪಟ್ಟವರು ಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತರುತ್ತಾರೆ. ಆದ್ದರಿಂದ ಈ ವಿಚಾರದಲ್ಲಿ ಯಾವುದೇ ಪಾರ್ಟಿಯು, ಪಕ್ಷದ ಕಲರ್ ಕೊಡದೆ ಪ್ರಯತ್ನ ಮಾಡಿದರೆ ಸಾಧ್ಯವಾಗುತ್ತದೆ. ಅವರನ್ನು ಸೆಟಲ್ ಮಾಡುವುದಕ್ಕೆ ಏನು ಒಂದು ಪ್ರಯತ್ನ ಮಾಡಬೇಕಾಗಿದೆಯೋ ಅದನ್ನು ಮಾಡುತ್ತೇವೆ. ನಮ್ಮ ಡೆಪ್ಯುಟಿ ಮಂತ್ರಿಗಳನ್ನು ಅಲ್ಲಿಗೆ ಕಳಿಸಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಅಲ್ಲಿಯ ಪ್ರತಿನಿಧಿಗಳ ಜೊತೆಯಲ್ಲಿ ಮಾತನಾಡಿ ಒಂದು ಶಾಂತ ವಾತಾವರಣವನ್ನು ಏರ್ಪಾಟು ಮಾಡುವುದಕ್ಕೆ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಇಲ್ಲಿಯ ಜನರ ಮೇಲಿರುವ ಕೇಸಸ್‌ಗಳನ್ನು ವಿತ್‌ಡ್ರಾ ಮಾಡಬೇಕೆಂದು ಕೇಳಿದರು. ಈವೊತ್ತು ಹೇಳುವುದಕ್ಕೆ ಸಾಧ್ಯವಿಲ್ಲ. ಕೇಸ್ ಈಗ ಸೆಷನ್ ಕೋರ್ಟಿಗೆ ಹೋಗಿದೆ. ಡಿ.ಸಿ. ಮತ್ತು ಎಸ್.ಪಿ. ಅವರು ಏನು ಹೇಳುತ್ತಾರೆ ಎಂಬುದನ್ನು ತಿಳಿದುಕೊಳ್ಳದೆ ನಾನು ಏನೂ ಈಗ ಹೇಳುವುದಕ್ಕಾಗುವುದಿಲ್ಲ. ಅವರನ್ನು ಸೆಟಲ್ ಮಾಡುವುದಕ್ಕೆ ಮತ್ತು ಎರಡು ಕಡೆಯವರನ್ನು ಒಂದುಗೂಡಿಸಿ ಅವರಲ್ಲಿ ಸಾಮರಸ್ಯ ಉಂಟುಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಆ ಪ್ರಯತ್ನ ಮಾಡುತ್ತೇವೆ. ಇಷ್ಟು ಮಾತ್ರ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

Mr. DEPUTY SPEAKER.—The House will now adjourn and meet tomorrow at 12 NOON.

The House adjourned at Forty Minutes past Six of the Clock to meet again at Twelve of the Clock, on Thursday, 23rd January 1969.

WD 11998—GPB—600—17-4-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 23rd January 1969

The House met in the Assembly Chamber, Vidhana Soudha, Bangalore, at Twelve of the Clock.

Mr. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

SRI M. NAGAPPA.—Sir, before I put my question, I request the Chair to have the Question Hour between 1 P.M. and 2 P.M. when all Members will be present.

MR. SPEAKER.—The question Hour is between Twelve and One. Hon. Member may put his Question. We will take up questions which were held over yesterday.

M.S.R.T.C. Division and Divisional Workshop at Raichur

375. SRI M. NAGAPPA (Raichur).—

Will the Minister for Transport be pleased to state :—

(*a*) whether there is any scheme before Mysore State Road Transport Corporation to open a M.S.R.T.C. Division at Raichur with the Divisional Workshop ;

(*b*) whether it is not a fact that every district headquarter except Raichur District is provided with the Divisional Office and Workshop ;

(*c*) if so, the reasons for not opening such Division in Raichnr District ;

(*d*) whether it is a fact that there was a Divisional Office and Workshop in 1957-58 in Raichur but it was shifted to Gulbarga ;

(*e*) whether they would assure that the Divisional Office with Workshop will be opened by the end of March 1969 at Raichur ?

Sri H. C. BORIAH (Deputy Minister for Transport).—

(*a*) No.

(*b*) No.

(*c*) Does not arise in view of reply to clause (*b*) of the question.

(*d*) Yes.

(*e*) No.

ಶ್ರೀ ಎಂ. ನಾಗಪ್ಪ.—ರಾಯಚೂರಿನಲ್ಲಿ ಮೊದಲು ಡಿವಿಜನಲ್ ಆಫೀಸ್ ಮತ್ತು ವರ್ಕ್ ಷಾಪ್ ಇತ್ತು. ಅವುಗಳನ್ನು ಈಗ ಗುಲ್ಬರ್ಗಕ್ಕೆ ವರ್ಗಾಯಿಸಲು ಸಕಾರಣಗಳು ಏನಿತ್ತು ಎಂಬುದನ್ನು ಹೇಳುತ್ತೀರಾ ?

† ಶ್ರೀ ಎಚ್. ಸಿ. ಬೋರಯ್ಯ.—ಗುಲ್ಬರ್ಗದಲ್ಲಿ ಡಿವಿಜನಲ್ ಆಫೀಸನ್ನು ತೆಗೆದಿದ್ದೇವೆ. ಡಿವಿಜನಲ್ ಆಫೀಸ್ ಇರುವ ಕಡೆಯಲ್ಲಿ ಅಡ್ಮಿನಿಸ್ಟ್ರೇಟಿವ್ ಆಫೀಸ್ ಮತ್ತು ಸಂಬಂಧಪಟ್ಟ ವರ್ಕ್ ಷಾಪ್ ಇರಬೇಕಾಗುತ್ತದೆ. ಆದಕಾರಣ ರಾಯಚೂರಿನಿಂದ ಗುಲ್ಬರ್ಗಕ್ಕೆ ವರ್ಗಾಯಿಸಲಾಯಿತು.

ಶ್ರೀ ಎಂ. ನಾಗಪ್ಪ.—ರಾಯಚೂರಿನಿಂದ ಕೊಪ್ಪಳ ತಾಲ್ಲೂಕಿಗೆ 127 ಮೈಲಿಗಳ ಲಾಂಗ್ ರೂಟ್ ಇರುವುದರಿಂದ ರಾಯಚೂರಿನಲ್ಲಿಯೇ ಒಂದು ಡಿವಿಜನಲ್ ಆಫೀಸನ್ನು ಪ್ರಾರಂಭ ಮಾಡಲು ಸಾಧ್ಯವಿಲ್ಲವೇ ?

ಶ್ರೀ ಎಚ್. ಸಿ. ಬೋರಯ್ಯ.—ಡಿವಿಜನಲ್ ಆಫೀಸ್ ಪ್ರಾರಂಭ ಮಾಡಬೇಕಾದರೆ ಕೆಲವು ಕಾರಣಗಳು ಇರುತ್ತವೆ. ಆಪರೇಷನಲ್ ಕನ್‌ವೀನಿಯನ್ಸ್ ಮತ್ತು ಬೆಟರ್ ಕಂಟ್ರೋಲ್ ಇರಬೇಕು ಇವೆರಡಕ್ಕೂ ಗುಲ್ಬರ್ಗ ಮಧ್ಯಪ್ರದೇಶವಾಗಿರುವುದರಿಂದ ಅಲ್ಲಿ ಡಿವಿಜನಲ್ ಆಫೀಸನ್ನು ಮಾಡಿದ್ದೇವೆ.

ಶ್ರೀ ಎಂ. ನಾಗಪ್ಪ.—ಈಗ ಬಳ್ಳಾರಿಯಲ್ಲಿ ಒಂದು ಡಿವಿಜನಲ್ ಆಫೀಸನ್ನು ಮಾಡಿದ್ದೀರಿ. ರಾಯಚೂರಿನ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಹೋಗಬೇಕಾದರೆ 128 ಮೈಲಿಗಳಾಗುತ್ತವೆ. ಈ ಲಾಂಗ್ ರೂಟ್‌ಗಳಲ್ಲಿ ಬಸ್‌ಗಳು ಕಾಲಕ್ಕೆ ಸರಿಯಾಗಿ ಓಡುತ್ತಿಲ್ಲ. ಸರಿಯಾದ ವ್ಯವಸ್ಥೆ ಇಲ್ಲ. ಆದಕಾರಣ ರಾಯಚೂರಿನಲ್ಲಿಯೂ ಒಂದು ಡಿವಿಜನಲ್ ಆಫೀಸ್ ಮತ್ತು ಒಂದು ವರ್ಕ್‌ಷಾಪನ್ನು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಈ ಪ್ರಶ್ನೆ ಯಾವಾಗ ಉದ್ಭವಿಸುತ್ತದೆಯೆಂದರೆ, ಕೊಪ್ಪಳ್ ಭಾಗ ಮತ್ತು ಬಿದರ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದಮೇಲೆ. ಆ ಸಮಯದಲ್ಲಿ ರಾಯಚೂರಿನಲ್ಲಿ ಡಿವಿಜನಲ್ ಆಫೀಸ್ ಮತ್ತು ವರ್ಕ್‌ಷಾಪನ್ನು ತೆಗೆಯಲು ಆಲೋಚನೆ ಮಾಡಲಾಗುತ್ತದೆ.

Shifting of Local Fund Dispensary

418. Sri V. L. SIVAPPA (Tiptur).—

Will the Minister for Health be pleased to state :—

(*a*) whether the Taluk Board, Tiptur, had requested by a resolution that the Local Fund Dispensary of Biligere be transferred and be situated at "Kuppal Village" in view of Biligere getting a Health Unit ;

(*b*) whether it has come to the notice of Government that no dispensary is given to Kuppal even though 2 years have lapsed after the Taluk Board made the request ;

(*c*) whether the Government would expedite the matter at least now ?

† Indicates that the speeches or remarks have not been revised by the member concerned.

SRI Y. RAMAKRISHNA (Minister for Health).—

(*a*) No. The Taluk Development Board, Tiptur has now informed the Directorate of Health Services on 5th September 1968 that they have resolved in their meeting held on 17th August 1968 for shifting the R.S.L.F. Dispensary of Biligere to Kuppal Village.

(*b*) Does not arise in view of reply to clause (*a*) above.

(*c*) Yes, provided the necessary proposal as per Government Circular No. PLM 502 PPS 62, dated 20th February 1963 is received from the Taluk Development Board.

ಶ್ರೀ ವಿ. ಎರ್‌. ಶಿವಪ್ಪ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಈ ಬಗ್ಗೆ ಎರಡು ವರ್ಷದ ಹಿಂದೆಯೇ ಒಂದು ನಿರ್ಣಯ ಮಾಡಲಾಗಿತ್ತು. ಆದರೆ ತಾವು ತಮ್ಮ ಉತ್ತರದಲ್ಲಿ 17-8-1968ರಲ್ಲಿ ನಿರ್ಣಯ ಮಾಡಿ ತಿಳಿಸಿರುತ್ತಾರೆಂದು ಹೇಳಿದ್ದೀರಿ. ಆ ನಿರ್ಣಯ ಏನು ಎಂಬುದನ್ನು ಹೇಳುತ್ತೀರಾ ?

†ಶ್ರೀ ವೈ. ರಾಮಕೃಷ್ಣ.—ತಾವು ಮೊದಲೇ ನಿರ್ಣಯ ಮಾಡಿರಬಹುದು, ಆದರೆ ಸರ್ಕಾರಕ್ಕೆ ಕಳಿಸದೇ ಇರಬಹುದು. ಈಗ ಸರ್ಕಾರಕ್ಕೆ ಏನು ಒಂದು ನಿರ್ಣಯ ಬಂದಿದೆ ಅದರ ತಾರೀಖನ್ನು ತಿಳಿಸಿದ್ದೇನೆ.

ಶ್ರೀ ವಿ. ಎರ್‌. ಶಿವಪ್ಪ.—ತಾರೀಖು 17-8-1968ರಲ್ಲಿ ಏನು ನಿರ್ಣಯ ಮಾಡಿ ಕಳಿಸಿದ್ದಾರೆಂಬುದನ್ನು ತಿಳಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ನಿರ್ಣಯ ಮಾಡಿದ್ದೇವೆಂದು ಮಾತ್ರ ತಿಳಿಸಿದ್ದಾರೆ.

ಶ್ರೀ ವಿ. ಎರ್‌. ಶಿವಪ್ಪ.—ಈ ಭಾಗದ 8 ಮೈಲಿಯ ಸುತ್ತಳತೆಯಲ್ಲಿ ಯಾವ ಒಂದು ಆಸ್ಪತ್ರೆಯೂ ಇಲ್ಲ. ಆದ್ದರಿಂದ ಈ ಗ್ರಾಮಕ್ಕೆ ಈಗಲಾದರೂ ಒಂದು ಔಷಧಾಲಯವನ್ನು ಕೊಡುವುದಕ್ಕೆ ತ್ವರಿತವಾಗಿ ಏರ್ಪಾಡು ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಅಲ್ಲಿಗೆ ಕೊಡಬೇಕಾಗಿರುವ ಆಸ್ಪತ್ರೆಗೆ ಆಗುವ ಖರ್ಚಿನಲ್ಲಿ 50 ರಷ್ಟನ್ನು ತಾಲ್ಲೂಕ್‌ ಬೋರ್ಡಿನವರು ಕೊಡುತ್ತೇವೆಂದು ಒಂದು ನಿರ್ಣಯ ಮಾಡಿಕಳಿಸಿದರೆ ನಾವು ಕೊಡುವುದಕ್ಕೆ ಸಿದ್ಧವಾಗಿದ್ದೇವೆ.

MR. SPEAKER.—Held over Question No. 431, but the hon. member is not here. Next question from Seventh List.

Nationalisation of Bus Routes

204. SRI ABDUL KHUDUS ANWAR (Bhadravathi).—

Will the Minister for Transport be pleased to state :—

(*a*) the number of private bus concerns that are effected due to the Nationalisation in Mangalore and Shimoga Districts ;

(*b*) the number of employees unemployed due to Nationalisation ;

(*c*) the number of such employees re-employed in M.S.R.T.C. ;

(*d*) whether the concerned Minister had assured that all such employees will be re-employeed in M.S.R.T.C. ;

(*e*) if so, whether they would implement the same ?

Sri H. C. BORIAH (Deputy Minister for Transport).—

(*a*) 201 operators (22 fully and rest partially).

(*b*) and (*c*) Information is not available.

(*d*) No.

(*e*) Does not arise in view of reply to clause (*d*).

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್.—ವಿವರಗಳು ಸಿಗುವುದಿಲ್ಲ ಎಂದು ಹೇಳಿದ್ದೀರಿ. ಇದರಲ್ಲಿ ಒಟ್ಟು 820 ಜನ ನಿರುದ್ಯೋಗಿಗಳಾಗಿದ್ದಾರೆ, ಇವರ ಬಗ್ಗೆ ನಾನು ಕೇಳುತ್ತಿರುವುದು.

†ಶ್ರೀ ಹೆಚ್. ಸಿ. ಬೋರಯ್ಯ.—ಎಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ ಎನ್ನುವ ವಿವರಗಳನ್ನು ಕೊಡಲು ಆಗುವುದಿಲ್ಲ. ಇದು ಸಿಗುವುದೂ ಕಷ್ಟ. ಇದರಲ್ಲಿ ಮಂಗಳೂರು ಪ್ಯಾಕೆಟ್ ರಾಷ್ಟ್ರೀಕರಣ ಮಾಡಿದಾಗ 366 ಜನಕ್ಕೆ ತೊಂದರೆಯಾಗಿದೆ. ಇದರಲ್ಲಿ ರಾಷ್ಟ್ರೀಕರಣ ಮಾಡಿದಾಗ 122 ಜನರನ್ನು ಇಲ್ಲಿ ಕೆಲಸಕ್ಕೆ ನೇಮಿಸಲಾಯಿತು. 244 ಜನ ಖಾಸಗಿ ಬಸ್ಸುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಶಿವಮೊಗ್ಗಾ ವಿಭಾಗದಲ್ಲಿ 56 ಜನಕ್ಕೆ ತೊಂದರೆಯಾಯಿತು ಮತ್ತು ಇದರಲ್ಲಿ 39 ಜನರನ್ನು ರಾಷ್ಟ್ರೀಕರಣವಾದಾಗ ಸೇರಿಸಲಾಗಿದೆ. ಹಾಗೆ ತುಮಕೂರು ಜಿಲ್ಲೆಯ 139 ಜನರನ್ನು ಸೇರಿಸಲಾಗಿದೆ ಎಂದು ತಿಳಿದು ಬಂದಿದೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್.—ನಾವು ಸರಿಯಾದ ಅಂಕಿಗಳನ್ನು ಕೊಟ್ಟರೆ ಅವರೆಲ್ಲರಿಗೂ ಕೆಲಸಗಳನ್ನು ಒದಗಿಸಿಕೊಡುತ್ತೀರಾ ?

ಶ್ರೀ ಹೆಚ್. ಸಿ. ಬೋರಯ್ಯ.—ನಾವು ಯಾರನ್ನೂ ನೇಮಕ ಮಾಡುವ ಹಾಗಿಲ್ಲ. ಯಾರಾದರೂ ಕೆಲಸವಿಲ್ಲದೆ ತೊಂದರೆಯಾಗಿದೆ ಎಂದು ಇದ್ದರೆ ನಾವು 8-11-1968ರಲ್ಲಿ ನೋಟಿಫಿಕೇಷನ್ 6ರಲ್ಲಿ ಹೇಳಿರುವಂತೆ ಅರ್ಜಿಗಳನ್ನು ಹಾಕಿದರೆ ಆಗ ಅವರ ಕೇಸುಗಳನ್ನು ಪರಿಶೀಲಿಸಬಹುದು. ಇದಕ್ಕೆ ಡಿಸೆಂಬರು 15ನೇ ತಾರೀಖು ಕೊನೆ ದಿನವಾಗಿತ್ತು. ಈಗ ಎಷ್ಟೋ ಅರ್ಜಿಗಳು ಬಂದಿವೆ. ಇವನ್ನು ಪರಿಶೀಲನೆ ಮಾಡಿ ಅರ್ಹರಾಗಿರುವವರನ್ನು ನೇಮಕ ಮಾಡಬಹುದು.

ಶ್ರೀ ಕೆ. ಹೆಚ್. ಶ್ರೀನಿವಾಸ.—ಖಾಸಗಿ ಬಸ್ಸುಗಳಿದ್ದ ಕಡೆಯಲ್ಲಿ ರಾಷ್ಟ್ರೀಕರಣ ಮಾಡಿದಾಗ ಅಲ್ಲಿನ ನೌಕರರುಗಳಿಗೆ ಬೇರೆ ಉದ್ಯೋಗಗಳನ್ನು ಕೊಡಿಸಿಕೊಡುವುದರಲ್ಲಿ ಸರಕಾರದ ನಿರ್ದಿಷ್ಟ ನೀತಿ ಏನಿದೆ ಅದನ್ನು ಸ್ಪಷ್ಟಪಡಿಸುತ್ತೀರಾ ?

ಶ್ರೀ ಹೆಚ್. ಸಿ. ಬೋರಯ್ಯ.—ರಾಷ್ಟ್ರೀಕರಣವಾದೊಡನೆ ಎಲ್ಲ ನೌಕರರುಗಳಿಗೂ ಉದ್ಯೋಗಗಳನ್ನು ಒದಗಿಸುತ್ತೇವೆ ಎನ್ನುವ ಯೋಚನೆ ಇಟ್ಟುಕೊಂಡಿಲ್ಲ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಎರಡು ಪಾಕೆಟ್ಟುಗಳನ್ನು ನ್ಯಾಷನಲೈಸು ಮಾಡಲು ಸರಕಾರಕ್ಕೆ ಆದ ವೆಚ್ಚವೆಷ್ಟು ಮತ್ತು ಈಗ 201 ಆಪರೇಟರುಗಳಿದ್ದಾರೆ ಎಂದು ಹೇಳಿದ್ದೀರಿ. ಇವರಿಗೆಲ್ಲ ಒಟ್ಟು ತಗಲುವ ವೆಚ್ಚವೆಷ್ಟು?

ಶ್ರೀ ಹೆಚ್. ಸಿ. ಬೋರಯ್ಯ.—ಇದು ಬಹಳ ವಿವರಗಳನ್ನು ಕೊಡಬೇಕಾಗುತ್ತೆ. ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಆಗ ವಿವರಗಳನ್ನು ಒದಗಿಸುತ್ತೇನೆ.

Sri M. NAGAPPA.—I have given notice of an adjournment motion pertaining to the Hubli incident, two hours before the sitting of the House according to the rules. I may be given consent to move it.

Mr. SPEAKER.—I shall look into it.

Notice of a question of privilege against the Deputy Minister for Health

Sri M. NAGAPPA.—I have sent notice of a privilege motion against the Hon. Deputy Minister for Health on the ground that he has given a false, misleading and untruthful statement on the floor of the House. So I may be given consent to raise that matter on the floor of the House. I may state the facts very briefly.

Mr. SPEAKER.—I know the facts.

†Sri M. NAGAPPA.—I shall state it very briefly. On 17th January 1969 when a question was put whether the Director of Health Services does not go on tour the Hon. Deputy Minister for Health said that he does not go on tour and there is no definite rule that he has to undertake tour and that if there is any urgent need he will undertake a tour. This was the answer that he gave. Later on, this matter was again brought to the notice of the Minister for Health. I refer to the question put by the Speaker himself to the Hon. Deputy Minister on 20th January 1968, "Is that what you stated is correct?" To that the Hon. Deputy Minister said: "Yes, it is correct." There is also a statement made by the Hon. Minister for Health Sri Y. Ramakrishna that there is a Government order on the basis of which the Director of Health Services has to undertake tour for 10 days. This means that the Deputy Minister has made a false statement, a misleading and untruthful statement. He has misled the House by saying that there are no circulars that the Director of Health Services has to undertake tour for 10 days.

Mr. SPEAKER.—The matter is fresh in the minds of hon. Members.

Sri M. NAGAPPA.—There is the case of Stelvia when she wrote a letter to Dr. Lohia that a certain Central Minister whom she met had given an assurance in writing. When the concerned Minister said that he had not given any such assurance, the letter was produced and it was proved that there was a contradictory and untrue statement by the Minister and on that account consent was given for moving the privilage motion on the ground of making a contradiatory and untrue statement.

Similarly, Sir, you know the case of Profumo in which also there was a contradictory statement by the Minister. On the strength of

these precedents, I hope the Chair will give me permission to move my motion of breach of privilage against the Hon. Deputy Minister for Health.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಆರೋಗ್ಯ ಖಾತೆಯ ಉಪಮಂತ್ರಿಗಳ ವಿರುದ್ಧ ಒಂದು ಹಕ್ಕುಬಾಧ್ಯತೆಯ ನೋಟೀಸನ್ನು ರೂಲ್ 177ರ ಪ್ರಕಾರ ಕಳಿಸಿದ್ದೆ. ಅದಕ್ಕೆ ಕಾರಣ ಈಗ ಮಾನ್ಯ ನಾಗಪ್ಪನವರು ಹೇಳಿದ ಕಾರಣವೂ ಹೌದು. ಅಲ್ಲದೆ ಇನ್ನೂ ಒಂದು ಪ್ರಬಲವಾದ ಕಾರಣವಿದೆ. 17-1-69ರಲ್ಲಿ ಪ್ರಶ್ನೆಗೆ ಉತ್ತರ ಕೊಡಬೇಕಾದರೆ ಮಾನ್ಯ ಉಪಮಂತ್ರಿಗಳು ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಒಂದು ತಿಂಗಳಿನಲ್ಲಿ ಎಷ್ಟು ದಿವಸ ಟೂರ್ ಮಾಡಬೇಕು ಎನ್ನುವ ಬಗ್ಗೆ ರೂಲ್ ಇಲ್ಲ ಎನ್ನುವ ಉತ್ತರವನ್ನು ಕೊಟ್ಟರು. ಅದೇ ದಿನ ಮಾನ್ಯ ಆರೋಗ್ಯ ಖಾತೆಯ ಮಂತ್ರಿಗಳು ಒಂದು ತಿಂಗಳಲ್ಲಿ ಹತ್ತು ದಿವಸಗಳಿಗೆ ಹೆಚ್ಚಿಲ್ಲದಂತೆ ಟೂರ್ ಮಾಡಬೇಕು ಎನ್ನುವ ನಿಯಮವಿದೆ ಎನ್ನುವ ಉತ್ತರ ಕೊಟ್ಟರು. ಅದರ ಅರ್ಥ ಏನಾಗುತ್ತದೆ ಎಂದರೆ ಮಾನ್ಯ ಆರೋಗ್ಯ ಉಪಮಂತ್ರಿಗಳು ಕೊಟ್ಟ ಉತ್ತರಕ್ಕೂ ಮಾನ್ಯ ಆರೋಗ್ಯ ಖಾತೆ ಮಂತ್ರಿಗಳು ಕೊಟ್ಟ ಉತ್ತರಕ್ಕೂ ವ್ಯತ್ಯಾಸವಿದೆ. ಈ ಬಗ್ಗೆ ಸ್ವಲ್ಪ ಚರ್ಚೆಯಾದ ನಂತರ ಆ ವಿಷಯ ಆ ದಿನ ಅಲ್ಲಿಗೇ ಮುಕ್ತಾಯ ಆಯಿತು. 20ನೇ ತಾರೀಖು ಅದೇ ಪ್ರಶ್ನೆ ಪ್ರಿವಿಲೆಜ್ ಮೋಷನ್ ರೂಪದಲ್ಲಿ ಸಭೆಯ ಮುಂದೆ ಬಂದಾಗ ಪುನಃ ಆರೋಗ್ಯ ಖಾತೆ ಉಪಮಂತ್ರಿಗಳು ಒಂದು ಉತ್ತರವನ್ನು ಈ ಸಭೆಗೆ ಕೊಟ್ಟಿದ್ದಾರೆ. ಏನೆಂದರೆ ನಾನು ಈ ಸಭೆಗೆ ಬರಬೇಕಾದರೆ ಯಾವತ್ತಿಗೂ ಕೂಡ ಕಾನೂನುಗಳನ್ನು ಮತ್ತು ನಿಯಮಗಳನ್ನು ಓದಿಕೊಂಡೇ ಬರುತ್ತೇನೆ, ಇಲ್ಲದೆ ಇದ್ದರೆ ಬರುವುದಿಲ್ಲ ಎನ್ನುವ ಅರ್ಥದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲದೆ ನಾನು ಹೇಳಿದ್ದೇ ಸರಿ ಎಂದು ಕೂಡ ಅಸರ್ಟ್ ಮಾಡಿದ್ದಾರೆ ಅದರ ಅರ್ಥವೇನೆಂದರೆ ಅವರು ಈ ಸದನಕ್ಕೆ ಬರಬೇಕಾದರೆ ಮಂತ್ರಿಯಾಗಿ ಕಾನೂನನ್ನು ತಿಳಿದುಕೊಂಡು ನಿಯಮವನ್ನು ತಿಳಿದುಕೊಂಡೇ ಬರುತ್ತೇನೆ ಎನ್ನುವುದು.

ಎರಡನೆಯದು ನಿಯಮಗಳನ್ನು ತಿಳಿದುಕೊಂಡ ಮೇಲೆ ಉತ್ತರ ಕೊಡಬೇಕಾದರೆ ನಿಯಮಗಳ ಆಧಾರದ ಮೇಲೆಯೇ ಉತ್ತರ ಕೊಡುತ್ತಾರೆ.

ಮೂರನೆಯದು ನಿಯಮ ಗೊತ್ತಿದ್ದರೂ ಕೂಡ 10 ದಿವಸ ಟೂರ್ ಮಾಡಬೇಕೆಂದು ಅವರೇ ಹೇಳುವ ಪ್ರಕಾರ ಗೊತ್ತಿದ್ದರೂ ಕೂಡ ಏನೂ ಇಲ್ಲ ಎನ್ನತಕ್ಕ ಮಾತನ್ನು ಒತ್ತಿ ಹೇಳಿದ್ದಾರೆ. ಆದರೂ ಕೂಡ ಈ ಸದನದಲ್ಲಿ ಅವರು ನಿಯಮವಿಲ್ಲ ಎಂದು ಹೇಳಿದ್ದು ಎಲ್ಲರಿಗೂ ಗೊತ್ತಿದೆ, ಅದು ಅವರು ಕೊಟ್ಟಿರುವ ಉತ್ತರದಲ್ಲೇ ಇದೆ. ಉಪಮಂತ್ರಿಗಳು ಏಕೆ ಇಂಥ ಉತ್ತರ ಕೊಡುತ್ತಾರೆ ಎಂಬುದು ಗೊತ್ತಿದೆ. ಅವರ ಚರಿತ್ರೆ ಸ್ವಲ್ಪ ನೋಡಬೇಕು.

ಅಧ್ಯಕ್ಷರು.—ಚರಿತ್ರೆ ವಿಷಯ ಹೇಳಕೂಡದು.

ಶ್ರೀ ಎಸ್. ಬಂಗಾರಪ್ಪ.—ಶ್ರೀ ಬಸವಣ್ಣಪ್ಪನವರು ವಿರೋಧ ಪಕ್ಷದಿಂದ, ಸಂಯುಕ್ತ ಪಕ್ಷದಿಂದ ಚುನಾವಣೆಗೆ ನಿಂತಿದ್ದರು. ಜನರಿಗೆ ಅದೇ ಪಕ್ಷದಲ್ಲಿರುವುದಾಗಿ ಮಾತು ಕೊಟ್ಟಿದ್ದರು.

Mr. SPEAKER.—The hon. member is abusing the opportunity given to him. That is not fair, he may talk only about the privilege motion.

Sri S. BANGARAPPA.—Can't the Chair bear with me for a minute ?

Mr. SPEAKER.—I am objecting to the subject matter of the member's speech.

ಶ್ರೀ ಎಸ್. ಬಂಗಾರಪ್ಪ.—ಸ್ವಲ್ಪ ಚರಿತ್ರೆ ವಿಚಾರ ಹೇಳಬೇಕಾಗಿದೆ.

ಅಧ್ಯಕ್ಷರು.—ಅದನ್ನು ಹೇಳಬೇಡಿ. How the Hon. Deputy Minister was elected, etc. is not relevant. The Chair cannot permit any reference to the personal character of the Deputy Minister.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನನಗೆ ಹೇಳುವುದಕ್ಕೆ ಸ್ವಲ್ಪ ಅವಕಾಶ ಕೊಟ್ಟರೆ ನಾನು ಏನು ಹೇಳುತ್ತೇನೆಂಬುದು ಗೊತ್ತಾಗುತ್ತದೆ. ಇನ್ನೊಂದು ಐದು ನಿಮಿಷ ಕೊಡಿ ; ಮುಗಿಸುತ್ತೇನೆ.

Mr. SPEAKER.—The member had requested me yesterday to give him time not exceeding 5 minutes to raise a question of privilege in the House. Now, the hon. Member has taken more than 10 minutes. I request him to honour his own words.

ಶ್ರೀ ಎಸ್. ಬಂಗಾರಪ್ಪ.—ಹೇಳಿಕೆ ಕೊಡಬೇಕಾದರೆ ನಿಯಮ ಗೊತ್ತಿದ್ದರೂ ಪ್ರಜ್ಞೆಯಿದ್ದರೂ ಮಿಸ್ ಲೀಡ್ ಮಾಡುವುದಕ್ಕೆ ಈ ಸದನವನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಆ ಪರ್ಪಸ್ ಇಟ್ಟುಕೊಂಡು ಅವರು ಅಸರ್ಟ್ ಮಾಡಿದ್ದಾರೆ.

Mr. SPEAKER.—The hon. member should confine himself to the answers given by the hon. Deputy Minister and not refer to any other matter.

ಶ್ರೀ ಎಸ್. ಬಂಗಾರಪ್ಪ.—ನಾನು ಬ್ರೀಚ್ ಆಫ್ ಪ್ರಿವಿಲೇಜ್ ಆಗಿದೆಯೆಂದು ಒಂದು ಸೂಚನೆ ಕೊಟ್ಟಿದ್ದೇನೆ; ಪ್ರಶ್ನೋತ್ತರವಾಗಿದ್ದರೆ ಕೇಳಿಕೊಂಡು ಹೋಗಬಹುದಾಗಿತ್ತು. ಈ ಸದನವನ್ನು ತಪ್ಪುದಾರಿಗೇಕೆ ಎಳೆಯಬೇಕೆಂಬ ಉದ್ದೇಶವಿತ್ತು, ಅದಕ್ಕೆ ಕಾರಣವೇನು ಎಂಬುದನ್ನು ಹೇಳುತ್ತಿದ್ದೇನೆ. ಅವರ ರಾಜಕೀಯ ಹಿನ್ನೆಲೆ......

Mr. SPEAKER.—That is not relevant.

ಶ್ರೀ ಎಸ್. ಬಂಗಾರಪ್ಪ.—ಹೊಲಸು ರಾಜಕೀಯದಿಂದ ಅಸತ್ಯವಾದ......

ಅಧ್ಯಕ್ಷರು.—ಮಾನ್ಯ ಸದಸ್ಯರ ಭಾಷಣವನ್ನು ರಿಕಾರ್ಡ್ ಮಾಡಬೇಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳಿದ್ದು ಸರಿ ಅಂತ ಅಸರ್ಟ್ ಮಾಡಿದರು. ಅಂತಹವರಿಗೆ ರಾಜಕೀಯದಲ್ಲಿ ಬುದ್ಧಿ ಕಲಿಸಬೇಕಾಗುತ್ತದೆ. ಸೆಕ್ಷನ್ 177 ರ ಪ್ರಕಾರ ಬ್ರೀಚ್ ಆಫ್ ಪ್ರಿವಿಲೇಜ್ ಅಂತ ಹೇಳಿ ತಾವು ಕನ್‌ಸಿಡರ್ ಮಾಡುವುದಕ್ಕೆ ಸಕಾರಣ ಇದೆ, ಆದ್ದರಿಂದ ದಯವಿಟ್ಟು ತಾವು ಅದನ್ನು ಮಂಡಿಸುವುದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

Sri J. P. SARVESH (Serum).—Sir, I want to make a very important submission.

Mr. SPEAKER.—I shall permit only those Members who hav given notice.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಒಂದು ಕ್ರಿಯಾಲೋಪ, ಸ್ವಾಮಿ, ನೋಟೀಸ್ ಕೊಟ್ಟು ಮೊದಲೇ ತಿಳಿಸಿದವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳುತ್ತೀರಿ. ಇದು ರೂಲಿಂಗ್ ಆಗಿ ಸರ್ವವಿಧದಲ್ಲೂ ಅನ್ವಯಿಸುವುದಾದರೆ ನಾವು ಈ ಸಭೆಯಲ್ಲಿ ಬಂದು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ನಮ್ಮ ಹಕ್ಕಿಗೆ ಚ್ಯುತಿ ಬಂದ ಹಾಗಾಗುತ್ತದೆ ಆದ್ದರಿಂದ ತಾವು ಆ ರೀತಿ ಅಪ್ಪಣೆ ಕೊಡಿಸಬಾರದು ಎಂಬುದು ನನ್ನ ಪಾಯಿಂಟ್ ಆಫ್ ಆರ್ಡರ್.

Mr. SPEAKER.—The Point of Order is that the Members should not be prevented from expressing their views on the question of giving consent by the Chair, to a privilege motion. The position is that a motion can come up for discussion in this House only after the consent is given. Hon. Members who had given notice of this privilege motion were heard in my chamber and I had told them that the consent is refused. Then, the hon. Members said that they should be formally permitted to raise the motion in the House and hear my decision given thereon. Unless consent is given, hon. Members cannot participate in the discussion. Now I am only giving an opportunity to those Members who had given notice of the motion to raise it. Under the rules, others cannot be given an opportunity to speak. That is my Ruling and it should be respected.

†ಶ್ರೀ ಎಂ. ಎಸ್. ಕೃಷ್ಣನ್.—17 ನೇ ತಾರೀಖು ಮಾನ್ಯ ಉಪಮಂತ್ರಿಗಳು ಮಾತನಾಡಿ ಏನೊಂದು ರೂಲ್ ಇಲ್ಲ ಎಂದು ಹೇಳಿದರು ಮಾನ್ಯ ರಾಮಕೃಷ್ಣ ಅವರು ಅದನ್ನು ಕರೆಕ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಿದರು, ಇದು ಮಿಸ್ ಲೀಡಿಂಗ್ ಆಗುತ್ತದೆ ಅನ್ನುವುದು ಒಂದು ವಿಷಯ. ಇನ್ನೊಂದು ವಿಷಯ ಎಂದರೆ ಹತ್ತು ದಿವಸ ಅನ್ನುವುದನ್ನೂ ಕೂಡ ಇದ್ದರೂ ಇರಬಹುದು ಅನ್ನುವ ರೀತಿಯಲ್ಲಿ ಮಾತನಾಡಿದರು. ಕರೆಕ್ಟ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ ಎಂದು ಹೇಳಿದರೆ ಕರೆಕ್ಷನ್ ಪ್ರಶ್ನೆ ಏನೂ ಇಲ್ಲ ನನಗೆ ಎಲ್ಲಾ ವಿಷಯವೂ ಗೊತ್ತಿದೆ ಎಂದು ಶ್ರೀಮಾನ್ ಬಸವಣ್ಣಪ್ಪನವರು ಹೇಳಿದರು ಇದು ಎರಡನೇ ಬ್ರೀಚ್ ಕಮಿಟ್ ಮಾಡುತ್ತಾ ಇದ್ದಾರೆ ಎಂದು ಹೇಳುತ್ತಾ ಇದ್ದೇನೆ. ಅವರು ಅದನ್ನು ಕರೆಕ್ಟ್ ಮಾಡಿಕೊಳ್ಳಬೇಕಾಗಿತ್ತು ಆದರೆ ಹಾಗೆ ಅವರು ಕರೆಕ್ಟ್ ಮಾಡಿಕೊಳ್ಳಲಿಲ್ಲ. ಅವರು ಮೊದಲೇನು ಹೇಳಿದ್ದರೋ ಅದೇ ಸರಿಯಾದ್ದು ಎಂದು ಹೇಳಿ ಅವರು ಮಾಡಿದ್ದ ತಪ್ಪನ್ನೇ ಮತ್ತೆ ಸಾಧಿಸಿದ್ದಾರೆ. ಅವರು ಹಾಗೆ ಮಾಡಿದ್ದು ಸರಿಯಲ್ಲ. ಅವರು ಮಾಡಿರತಕ್ಕ ಹೇಳಿಕೆ ಬಹಳ ಅಪಥ್ಯವಾದದ್ದು. ಆದುದರಿಂದ ಈ ವಿಚಾರವನ್ನು ಪ್ರಿವಿಲೇಜ್ ಸಮಿತಿಯ ಮುಂದೆ ತರಲು ನಾನು ಈ ಒಂದು ಮೋಷನ್ ಮೂವ್ ಮಾಡಬೇಕಾಗಿದೆ. ಅದಕ್ಕೆ ಅಧ್ಯಕ್ಷರು ನನಗೆ ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The Hon. Membar Sri M. S. Krishnan is repeating what was already stated by Sri Nagappa. Therefore, to that extent, the time of the Hon. House is lost.

Sri K. H. PATIL (Hubli).—Sir, I have a fresh Point to be added with regard to the consent and how the Speaker should deal with it......

Mr. SPEAKER.—I know that and that has also been brought to the notice of the hon. Members. Members should remembr that every minute spent in the House cost thousands of rupees to the Public exchequer. Therefore, the time of the Hon. House should be utilised profitably.

Sri K. H. PATIL.—Sir, I have a right of raising a point of Order. Can you curtail my liberty ?

Mr. SPEAKER.—The member wants to speak on the principles of giving consent by the Chair. That cannot form part of a point of Order. If he wants to enlighten me, I invite him to my Chamber or to my house and I shall be glad to hear him over a cup of Tea.

Sri K. H. PATIL.—In your Chamber I have no right to raise a Point of Order. I have that right only on the floor of the House. In your Chamber I may be able to convince you on other matters.

Mr. SPEAKER.—The member may state his point in a minute.

†**Sri K. H. PATIL.**—The Speaker, while giving consent has to see whether the motion is in order and whether there is a *prima facie* case for a privilege. With regard to my privilege motion, certainly the Chair was on the right point to advise me that it is not a breach of privilege. But, here, in this case, the Deputy Minister was given an opportunity to correct himself. If he had corrected himself, my friends would have not so much justified in raising the privilege issue. He did not do that. In spite of that if the motion is not carried with the consent of the Speaker, we will be under the impression that we are losing our right of raising a privilege motion. Can the Speaker say that consent is withheld ? Certainly not. Consent should be given to see, that unnecessary privileges are not brought before the House. I am sure, under your able guidance the privileges of this House will be

(SRI K. H. PATIL)

safeguarded. The Deputy Minister having committed a mistake once had no courage or courtesy to correct himself, and in spite of the advice given by the Chair, he wanted to repeat the same thing, which is far from truth. Therefore, he should be dealt with by the Privilege Committee. I would appeal to the Chair to give consent to this motion.

1-30 P.M.

MR. SPEAKER.—The Hon. Member seems to teach the Chair.

SRI K. H. PATIL.—No Sir, I am attempting to pursuade the Chair.

MR. SPEAKER.—It is not the function of the Members to teach or tender advice to the Speaker. Therefore, there is no point of order. Now, if the hon. Deputy Minister for Health wants to say anything, he may do so.

SRI G. BASAVANNAPPA (Deputy Minister for Health).—The statement made by me on 17th and 20th with regard to the tour of the Director of Health Services is in accordance with the Government Order No. GAD 2 SDN......October 1965. As per the latest Circular, the Director of Health Services has to tour for 10 days in a month. Therefore I stand corrected.

SRI K. H. PATIL.—It should be referred to the Privilege Committee for enquiry.

SRI M. NAGAPPA.—I want to know whether he regrets or stands corrected.

SRI G. BASAVANNAPPA.—I stant corrected.

MR. SPEAKER.—Does the Deputy Minister regret for the statement made ?

SRI G. BASAVANNAPPA.—Yes, Sir. I regret.

SRI S. SIVAPPA (Sravanabelgola).—The Deputy Minister has corrected himself and also regretted for the statement made. Therefore the matter may be dropped.

MR. SPEAKER.—Since he has expressed regret the matter is dropped according to the wishes of the House.

SRI J. P. SARVESH.—I have got two short notice questions. May I know whether these questions would be taken up before the Assembly closes ?

MR. SPEAKER.—I shall try to find out.

Speaker's Ruling *re*: allotment of seats to Members joining another Party

SRI M. NAGAPPA.—You were pleased to say on the other day that you will give a ruling on seating arrangement for Memberss. Will you kindly give your ruling ?

MR. SPEAKER.—Yes. Sri M. Nagappa and Sri D. B. Kalmankar have sought to raise a matter other than a point of order under Rule 312, regarding certain changes in the allotment of seats to some Hon'ble Members under Rule 4.

Incidentally they have, while referring to certain principles and conventions which in their opinion should regulate the allotment of seats, requested the Chair to clarify the reasons, principles and conventions on the basis of which, the allotment of seats for members was changed.

Though Rule 4 gives unfettered discretion to the Speaker in the allotment of seats, he is guided in the matter by well established conventions and principles.

The issue involves recognition of political parties and groups in the Assembly and allotment of seats to their members so that they might function conveniently and efficiently.

It has been a time-honoured convention that the Ruling Party is allotted seats on the Right side of the Chair and the Opposition on the Left side. The second convention is that, as far as possible a compact block of seats should be allotted to the parties and groups and to leave the individual allotment of seats to members to the party leadership. While allotting compact blocks, the strength of the party or group membership is taken into consideration. These conventions have been followed in this Hon. House also. The immediate provocation for the Hon. Members Sri Nagappa and Sri D. B. Kalmankar is the change in the allotment of seats to some Hon. Members who have severed their connection with their erstwhile party and joined the Ruling Party.

It is not for the Chair to consider the reasons or justification about the change in the party alignment for effecting changes in the allotment of seats. It is for the Chair to be satisfied about the resignation from the erstwhile party or group and about joining or admission to a new party or group, before allotting new seats. This matter came up before the Presiding Officers' Conference recently held at Trivandrum. This Conference has taken a decision which is as follows:

"In case a member of one Party or Group subsequently chooses to change his party or group affiliation, he must write to the Speaker accordingly. If the Speaker is satisfied that the decision has been duly communicated in writing by the member to the Party or Group from which he has severed

(MR. SPEAKER)

his loyalty and the party or group which he has joined has communicated in writing its acceptance of his membership to the Speaker, he may recognise the change. The Committee further recommend that these principles should be followed in all State Legislature in the matter of giving recognition to a composite Party or Group or to a party or group composed of different Parties or groups".

I have followed these principles in effecting changes in the allotment of seats. The Hon. Members have stated in writing that they have resigned from the erstwhile party or group and joined the Ruling Party. I have also received communication from the Leader of the Ruling Party for having admitted them to his Party.

In view of the statement, the matter does not admit of any further discussion and it should be closed.

Sri M. NAGAPPA.—What about another ruling which you promised to give on my point of order on the other day ?

Mr. SPEAKER.—I shall try to give it at the end of the day or tomorrow.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ತಾವು ಈಗ ರೂಲಿಂಗ್ ಕೊಟ್ರಿ. ನಾನು ನಿನ್ನೆ ಪಕ್ಷಾಂತರ ಮಾಡಿದವರಿಗೆ ಬಹುಮಾನವಾಗಿ ಕರಿಮಣಿ, ಬಿಚ್ಚೋಲೆ ಮುಂತಾದುವುಗಳನ್ನು ಕಳಿಸಿಕೊಟ್ಟಿದ್ದೆ. ಅದನ್ನು ಅವರಿಗೆ ಕಳಿಸಿದ್ದೀರಾ ?

Mr. SPEAKER.—Members are not permitted to send such articles. It is a breach of parliamentary decency.

ಶ್ರೀ ಎಸ್. ಬಂಗಾರಪ್ಪ.—ತಾವು ಕೊಟ್ಟ ರೂಲಿಂಗನ್ನು ಸಂಪೂರ್ಣವಾಗಿ ಕೇಳಿದೆ. ನಮ್ಮ ಮುಖ್ಯಮಂತ್ರಿಯವರು ಮೊನ್ನೆ ಓರಿಯೆಂಟೇಶನ್ ಕಾನ್‌ಫರೆನ್ಸಿನಲ್ಲಿ ಹೇಳಿದ್ದಾರೆ—ಪಕ್ಷಾಂತರ ಪಿಡುಗು ಇರಬಾರದು, ಆ ರೀತಿ ಯಾರು ಬರುತ್ತಾರೆ, ಅವರನ್ನು ಅಡ್ಮಿಟ್ ಮಾಡಬಾರದು ಎಂದು. ಶ್ರೀ ರಾಮಕೃಷ್ಣ ಹೆಗ್ಗಡೆಯವರೂ ಹೇಳಿಕೆ ಕೊಟ್ಟಿದ್ದಾರೆ. ಆದರೆ, ಈಗ ಇಲ್ಲಿ ಅವರನ್ನು ಹೇಗೆ ಇವರು ಅಡ್ಮಿಟ್ ಮಾಡಿಕೊಂಡಿದ್ದಾರೆ ? * * * *

Mr. SPEAKER.—Further remarks need not be recorded. The member as utilised the time of the House in a wrong manner. Now we will go to the next item in the agenda.

Leave of Absence to Sri C. M. Churchihalmath—Grant of.

Mr. SPEAKER.—I have received a letter dated 21st Junuary 1969 from Dr. C. M. Churchihalmath, Member, Legislative Assembly, requesting for leave of absence under rule 188 of the Rules of Procedure from attending the current sittings of the House from 25th Junuary 1969.

---

* * * * Matter not recorded as ordered by the Chair.

Is it the pleasure of the House that permission be granted to Dr. C. M. Churchihalmath for remaining absent from 25th January 1969 from the current sittings of the House ?

HON'BLE MEMBERS.—Yes.

Mr. SPEAKER.—Permission to remain absent is granted.

MOTION OF THANKS TO THE GOVERNOR'S ADDRESS

(Debate continued)

Mr. SPEAKER.—Now, we will take up debate on the Motion of Thanks to the Governor's Address. Sri Venkatagiriyappa may begin his speech.

Sri K. PUTTASWAMY (Minister for Law, Labour and Parliamentary Affairs).—Sir, yesterday it was agreed that the debate on the Motion of Thanks would conclude at 2 P. M. and the Government would commence its reply at 2 P. M.

Sri S. SIVAPPA.—Sir, since we have already spent sometime for other business, and now it is nearly 1-45 P. M. I would suggest that the debate may go on till 2-45 P. M. and the Government commence their reply at 2-45 P. M. and finish by 4 P. M. or if they want they could have some more time.

Sri K. PUTTASWAMY.—Sir, I am sorry I do not want to enter into a controversy with the Hon'ble Leader of the Opposition on the floor of the House. But it is certainly not charitable on the part of the Leader of Opposition to say that the Government may finish their reply by 4 O' clock. Whenever we come to an understanding we do so, after taking into consideration the state of business before the Assembly. I would very much like the Hon. Leader of the Opposition and other hon. Members to kindly respect to that understanding, arrived at in the House.

Mr. SPEAKER.—It was of course agreed between the two sections of the House that the debate on Governor's Address should conclude at 2 O' Clock today and the Government should be given two hours time for reply. Unfortunately some time of the house has been utilised for some other business.

Sri D. B. KALMANKAR.—Sir, on a point of order.

Mr. SPEAKER.—When the Chair is speaking there can be no point of order.

Now, I think, the debate may go on till 2-45 P.M. and from 2-45 P.M. onwards the Government may take two hours for their reply.

Now, Sri Venkatagiriyappa may begin his speech.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಈ ರಾಜ್ಯಪಾಲರ ಭಾಷಣವನ್ನು ಓದಿದಮೇಲೆ, ಈ ಮೈಸೂರು ರಾಜ್ಯದ ಎಲ್ಲಾ ಸ್ಥಿತಿಗತಿಗಳು ಕೂಡ ಬಹಳ ಚೆನ್ನಾಗಿವೆಯೆಂದು ಹೇಳಿರುವುದು ತಿಳಿದುಬಂತು. ಆಹಾರ ಪರಿಸ್ಥಿತಿಯಲ್ಲಿ ಆಗಲೀ ಕಾನೂನಿನ ಪರಿಸ್ಥಿತಿಯಲ್ಲಿ ಆಗಲೀ ಇತರ ಎಲ್ಲಾ ವಿಷಯಗಳಲ್ಲಿಯೂ ಕೂಡ ಮೈಸೂರು ರಾಜ್ಯ ಬಹಳ ಚೆನ್ನಾಗಿದೆ ಎನ್ನುವ ಧಾಟಿಯಲ್ಲಿ ಮಾನ್ಯ ರಾಜ್ಯಪಾಲರು ಈ ಸಭೆಯ ಮುಂದೆ ತಿಳಿಸಿದ್ದಾರೆ. ಈ ರಾಜ್ಯದಲ್ಲಿ ನಡೆದಿರುವ ವಾಸ್ತವಾಂಶಗಳನ್ನು ರಾಜ್ಯಪಾಲರು ತಮ್ಮ ಭಾಷದಲ್ಲಿ ಹೇಳಿದ್ದಾರೆ.

[MR. DEPUTY SPEAKER in the Chair].

ಈ ಹೊಸ ಮಂತ್ರಿಮಂಡಲ ಬಂದಮೇಲೆ ತಾಲ್ಲೂಕ್‌ಬೋರ್ಡ್ ಚುನಾವಣೆಯನ್ನು ನಡೆಸಿರುವ ಬಗ್ಗೆ ರಾಜ್ಯಪಾಲರು ತಮ್ಮ ಭಾಷದಲ್ಲಿ ಒಂದು ಮಹತ್ವವಾದ ಘಟನೆ ಎಂದು ತಿಳಿಸಿದ್ದಾರೆ. ಈ ಅತ್ಯಂತ ಮಹತ್ವಪೂರ್ಣವಾದ ತಾಲ್ಲೂಕ್ ಬೋರ್ಡ್ ಚುನಾವಣೆಗಳನ್ನು ಯಾವ ರೀತಿಯಲ್ಲಿ ಅಧಿಕಾರದಲ್ಲಿರತಕ್ಕಂಥ ಕಾಂಗ್ರೆಸ್ ಪಕ್ಷದವರು ನಡೆಸಿದವರು ಎಂಬುದು ಬಹಳ ಮುಖ್ಯವಾದ ವಿಷಯ. ನಿಷ್ಪಕ್ಷಪಾತವಾಗಿ ತಾಲ್ಲೂಕ್ ಬೋರ್ಡ್ ಚುನಾವಣೆಗಳನ್ನು ಈ ಸರ್ಕಾರದವರು ನಡೆಸಿ ಗೆದ್ದಿಲ್ಲ. ತಾಲ್ಲೂಕ್‌ಬೋರ್ಡ್‌ಗಳ ಆಡಳಿತವನ್ನು ತಾವೇ ತೆಗೆದುಕೊಳ್ಳುವುದಕ್ಕೆ ಏನು ಮಾಡುವುದಕ್ಕೂ ತಯಾರಾಗಿದ್ದರು. ಯಾರು ಪ್ರಜಾಪ್ರಭುತ್ವದ ಪರಂಪರೆಯನ್ನು ಸರಿಯಾಗಿ ನಡೆಸಿಕೊಂಡು ಬರಬೇಕೋ ಅಂತಹವರೇ ಈ ದಿನ ಗೂಂಡಾವರ್ತಿಗಳಂತೆ ಈ ಚುನಾವಣೆಯಲ್ಲಿ ಹೊನ್ನಿನ ಸುರಿಮಳೆಯನ್ನೇ ಸುರಿಸಿದ್ದಾರೆ. ಜನರಲ್ ಎಲಕ್ಷನ್ ಸಹ ಈ ರೀತಿ ನಡೆಯಲಿಲ್ಲ. ಆ ಒಂದು ರೀತಿಯಲ್ಲಿ ನಡೆಸಿ ಈ ಕಾಂಗ್ರೆಸ್‌ನವರು ಚುನಾವಣೆಯಲ್ಲಿ ಗೆದ್ದಿದ್ದಾರೆ ಕ್ಷಾಮ ಪರಿಹಾರಕ್ಕೋಸ್ಕರವಾಗಿ ಸರ್ಕಾರದವರು ಕೊಟ್ಟಂತಹ ಹಣವನ್ನು ತಾಲ್ಲೂಕ್ ಬೋರ್ಡ್ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷದವರು ಖರ್ಚುಮಾಡಿದ್ದಾರೆ. ಕೋಲಾರ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಸರ್ಕಾರ ಆ ಜಿಲ್ಲೆಯ ಕ್ಷಾಮ ಪರಿಹಾರದ ಕೆಲಸಕ್ಕೆ ಮೇಲ್ವಿಚಾರಣೆ ನೋಡಿಕೊಳ್ಳಲು ಈ ರಾಜ್ಯದ ರಾಜ್ಯಸಚಿವರಾದ ಶ್ರೀ ಲಿಂಗಾರೆಡ್ಡಿಯವರಿಗೆ ಒಪ್ಪಿಸಿತ್ತು. ಆ ರೀತಿ ಒಪ್ಪಿಸಿದ ದಿನದಿಂದ ಇಂದಿನವರೆಗೂ ಕೂಡ ಅವರು ಸರ್ಕಾರದವರು ಕ್ಷಾಮಪರಿಹಾರಕ್ಕಾಗಿ ಕೊಟ್ಟಿದ್ದ ಹಣವನ್ನು ತಾಲ್ಲೂಕ್‌ಬೋರ್ಡ್ ಚುನಾವಣೆಗಳಲ್ಲಿ ಕಾಂಗ್ರೆಸ್‌ಪಕ್ಷದವರು ಅಧಿಕಾರ ಗಳಿಸಿಕೊಳ್ಳುವುದಕ್ಕೆ ಉಪಯೋಗಿಸುವುದರಲ್ಲಿ ಆಸಕ್ತರಾಗಿದ್ದರು. ಈ ಹಣದಿಂದ ನಿಜವಾಗಿಯೂ ಬಡವರಿಗೆ ಅನುಕೂಲವಾಗಲಿಲ್ಲ. ಮಾಲೂರು ತಾಲ್ಲೂಕ್‌ನಲ್ಲಿ ಚುನಾವಣೆಯಲ್ಲಿ ಗೆಲ್ಲಬೇಕೆಂದು ಮೂರು ಲಕ್ಷ ರೂಪಾಯಿಗಳ ಒಂದು ಕೆಲಸವನ್ನು ಪ್ರಾರಂಭ ಮಾಡಿದರು. ಇಲ್ಲಿ ಕಾಂಗ್ರೆಸ್ಸು ಪಕ್ಷದವರು ತಮ್ಮ ಪಕ್ಷ ಗೆಲ್ಲುವುದಕ್ಕೆ ಸಾಧ್ಯವಿಲ್ಲ ಎಂದು ಯಾವಾಗ ಅವರಿಗೆ ಮನವರಿಕೆಯಾಯಿತೋ ಅದಕ್ಕೆ ನಮ್ಮ ಸರಕಾರದ ಮಂತ್ರಿಗಳಾದ ಶ್ರೀ ಲಿಂಗಾರೆಡ್ಡಿಯವರು ಇದಕ್ಕೆ ಏನೇನು ಮಾಡಬೇಕೋ ಅವನ್ನೆಲ್ಲಾ ಮಾಡಬೇಕು ಎಂದು ಒಂದು ರೀತಿಯಾದ ಆದೇಶ ಕೊಟ್ಟು ಮತ್ತು ಇಲ್ಲಿ ಕ್ಷಾಮ ಪರಿಹಾರಕ್ಕಾಗಿ ಕೊಟ್ಟ ಹಣವನ್ನೆಲ್ಲಾ ತಮಗೆ ಬೇಕಾದವರಿಗೆ ಕೆರೆ ಕಟ್ಟೆ ಕಟ್ಟಿಕೊಳ್ಳುವುದಕ್ಕಾಗಿ ಸಹಾಯ ಮಾಡುತ್ತೇವೆ ಎಂದು ಹೇಳಿ ಬಂದಿದ್ದಾರೆ ಮತ್ತು ಇಲ್ಲ ಇದುವರೆಗೆ ಆ ಜನಕ್ಕೆ ಹಣವನ್ನು ಕೊಟ್ಟಿಲ್ಲ. ಇದನ್ನು ರೆವೆನ್ಯೂ ಮಂತ್ರಿಗಳ ಮೂಲಕ ಕೊಡಿಸುವ ಪ್ರಯತ್ನದಲ್ಲಿದ್ದಾರೆ. ಇವರು ಸರಕಾರದ ಹಣವನ್ನು ಸ್ವಂತ ಮನೆಯ ಆಸ್ತಿಯಂತೆ ಖರ್ಚು ಮಾಡುತ್ತಿದ್ದಾರೆ. ಕೋಲಾರ ಜಿಲ್ಲೆಗೆ ಎಷ್ಟು ಹಣವನ್ನು ಕ್ಷಾಮ ಪರಿಹಾರ ಕಾರ್ಯಗಳಿಗಾಗಿ ಕೊಟ್ಟಿದ್ದಾರೋ ಅದನ್ನು ಇಲ್ಲಿನ ಡೆಪ್ಯುಟಿ ಕಮಿಷನರವರ ಮೂಲಕ ಕೊಟ್ಟಿರುತ್ತಾರೆ. ಇವರು ಬೇರೆ ಬೇರೆ ತಾಲ್ಲೂಕುಗಳಿಗೆ ಇಷ್ಟು ಹಣ ಎಂದು ಹಂಚುತ್ತಾರೆ. ಆದರೆ ಇಲ್ಲ ಆ ರೀತಿ ಮಾಡಲು ಅವಕಾಶ ಕೊಡದೆ ಮಾಲೂರಿಗೆ ಮಾನ್ಯ ಮಂತ್ರಿಗಳಾದ ಶ್ರೀ ಲಿಂಗಾರೆಡ್ಡಿಯವರು ಸ್ವತಃ ಬಂದು ಇಲ್ಲ ಚುನಾವಣೆಗಳಾಗುವವರೆಗೆ ಇದ್ದು ಇಲ್ಲಿ ಸುಮಾರು ಮೂರು ಲಕ್ಷ ರೂಪಾಯಿಗಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಇದಕ್ಕೆ ಹಣವನ್ನು ಈಚೆಗೆ ಕೊಡಿಸುವ ಪ್ರಯತ್ನ ಕೂಡ ಮಾಡಿದ್ದಾರೆ. ಈ ಮಂತ್ರಿಗಳ ಸ್ಥಾನಮಾನವೇನು ಎನ್ನುವುದನ್ನೂ ಗಮನಕ್ಕೆ ತೆಗೆದುಕೊಳ್ಳದೆ ಸರಕಾರದ ಬೊಕ್ಕಸದಿಂದ ಈ ರೀತಿ ಹಣವನ್ನು ಚುನಾವಣೆಗಳಿಗಾಗಿ ಖರ್ಚು ಮಾಡುವುದು ಸರಿಯೇ ಎಂದು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಇಷ್ಟೆಲ್ಲಾ ಖರ್ಚು ಮಾಡಿ ಇಂದು ತಾಲ್ಲೂಕು ಬೋರ್ಡುಗಳ ಚುನಾವಣೆಗಳಲ್ಲಿ ನಾವು ಗೆದ್ದು ಬಂದಿದ್ದೇವೆ ಎಂದು ಹೇಳುತ್ತಾರೆ. ಇವರು ಮಾಡಿರುವ ಒಂದೊಂದು ಕೆಲಸಗಳನ್ನೂ ನೋಡಿದರೆ ಇವರನ್ನು ಯಾರೂ ಕೇಳುವರೇ ಇಲ್ಲ. ಬಾಗೇಪಲ್ಲಿ ತಾಲ್ಲೂಕಿನ ಒಂದು ಕ್ಷೇತ್ರದಲ್ಲಿ ಅಧ್ಯಕ್ಷರ ಚುನಾವಣೆಯಾಗಬೇಕಾಗಿತ್ತು. ಇಲ್ಲಿಗೆ ಶಂಕರರೆಡ್ಡಿ ಎನ್ನುವವರು ಅಧ್ಯಕ್ಷರಾಗಿ ಚುನಾವಣೆಯಾಗಬೇಕಾಗಿತ್ತು. ಇವರು ಆಡಳಿತ ಪಕ್ಷದವರಲ್ಲ ಎಂದು

ಇವರಿಗೆ ಇಲ್ಲದ ತೊಂದರೆಗಳನ್ನು ಮಾಡುವುದಕ್ಕಾಗಿ ಇಲ್ಲಿದ್ದ ಸೇತುವೆಗಳನ್ನು, ಕಾಂಗ್ರೆಸ್ಸು ಮುಖಂಡರು ಪೋಲೀಸಿನವರ ಬೆಂಬಲದಿಂದ ಒಡೆಸಿ ಹಾಕಿಸಿ ಇಲ್ಲದ ಕಿರುಕುಳಗಳನ್ನು ಕೊಡುತ್ತಿದ್ದಾರೆ. ಈ ದಿವಸ ನಮ್ಮಲ್ಲಿ ಅಧಿಕಾರ ಇದೆ ಎಂದು ತಮಗೆ ಬೇಕಾದ ಹಾಗೆ ಕೆಲಸಗಳನ್ನು ಮಾಡಬಹುದು ಎಂದು ಇಲ್ಲಿಗೆ ಕ್ಷಾಮ ಪರಿಹಾರಕ್ಕೆಂದು ಕೊಟ್ಟ ಹಣವನ್ನು ಇಲ್ಲಿ ನಡೆಯುವ ತಾಲ್ಲೂಕು ಬೋರ್ಡುಗಳ ಚುನಾವಣೆಗಳಿಗಾಗಿ ಉಪಯೋಗಿಸಿದ್ದಾರೆ. ಈ ರೀತಿ ಅನ್ಯಾಯ ಮಾಡಿ ದೇಶದ ಹಣವನ್ನು ಹಾಳುಮಾಡುತ್ತಿದ್ದರೆ ದೇಶದ ಪ್ರಜಾ ಪ್ರಭುತ್ವ ಉಳಿದೀತೇ? ಇಂತಹ ಅಕ್ರಮ ನೀತಿಗಳಿಂದ ತಾಲ್ಲೂಕು ಬೋರ್ಡು ಚುನಾವಣೆಗಳಲ್ಲಿ ನಾವು ಹೆಚ್ಚು ಸಂಖ್ಯೆಯಲ್ಲಿ ಬಂದಿದ್ದೇವೆ ಎಂದು ಹೇಳುತ್ತಿದ್ದಾರೆ. ಕೇವಲ 31 ಕಡೆಗಳಲ್ಲಿ ಮಾತ್ರ ವಿರೋಧ ಪಕ್ಷದವರು ಚುನಾವಣೆಗಳಲ್ಲಿ ಬಂದಿದ್ದಾರೆ ಇತರ ಕಡೆಗಳಲ್ಲಿ ಕಾಂಗ್ರೆಸ್ಸಿನವರೇ ಬಂದಿದ್ದಾರೆ ಎಂದು ಹೇಳಿದರು. ಇಲ್ಲಿ ಹೇಗೆ ಬಂದಿದ್ದಾರೆ ಎನ್ನುವುದು ಎಲ್ಲರಿಗೂ ಈಗ ಗೊತ್ತಾಗಿದೆ. ಇವೊತ್ತು ಮಹಾತ್ಮ ಗಾಂಧೀಜಿಯವರು ಏನಾದರೂ ಬದುಕಿದ್ದರೆ ಮತ್ತು ಅವರು ಇಂತಹ ಕಾಂಗ್ರೆಸ್ಸು ಪಕ್ಷದವರೂ ನಡೆಸಿದ ತಾಲ್ಲೂಕು ಬೋರ್ಡುಗಳ ಚುನಾವಣೆಗಳನ್ನು ನೋಡಿದ್ದಿದ್ದರೆ ಮತ್ತು ಹೀಗೆ 30-40 ಸಾವಿರದಷ್ಟು ಖರ್ಚು ಮಾಡಿರುವುದನ್ನು ನೋಡಿದ್ದರೆ ಖಂಡಿತ ಅವರು ತುಂಬ ದುಃಖ ಪಡುತ್ತಿದ್ದರು. ಈ ರೀತಿ ಹೇರಳವಾಗಿ ದುಡ್ಡು ಖರ್ಚು ಮಾಡಿ ಕಾಂಗ್ರೆಸ್ಸು ಪಕ್ಷ ಚುನಾವಣೆಯಲ್ಲಿ ಗೆದ್ದರೆ ಅದು ಖಂಡಿತ ನ್ಯಾಯವಾದ ಮಾರ್ಗವಲ್ಲ. ಹೀಗಾದರೆ ಜನರು ತಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿ ಕೊಳ್ಳುವುದೇ ಕಷ್ಟ ವಾಗುತ್ತದೆ. ಇನ್ನು ಮುಂದೆ ವಿರೋಧ ಪಕ್ಷದವರು ಚುನಾವಣೆಗಳಲ್ಲಿ ನಿಂತು ಗೆಲ್ಲಬೇಕಾದರೆ ಸಶಸ್ತ್ರರಾಗಿ ನಕ್ಸಲ್‌ಬಾರಿಯಂತೆ ಚುನಾವಣೆಗಳನ್ನು ಎದುರಿಸಬೇಕಾಗಿ ಬರಬಹುದು. ಈ ರೀತಿಯಾಗಿ ಆಡಳಿತ ಪಕ್ಷದವರು ಮುಂದುವರಿಯುವುದಾದರೆ ಖಂಡಿತ ಇವರು ಮುಂದುವರಿಯಲಾರರು. ನಮ್ಮ ಕ್ಷೇತ್ರದವರಾದ ಶ್ರೀಮಾನ್ ಲಂಗಾರೆಡ್ಡಿಯವರೇ ಸ್ವತಃ ಬಂದು ಇಂತಹ ಚುನಾವಣೆಗಳಲ್ಲಿ ಭಾಗವಹಿಸಿ ಹೇರಳವಾಗಿ ಹಣವನ್ನು ಖರ್ಚು ಮಾಡಿದ್ದಾರೆ. ಇಲ್ಲಿಗೆ ಮೈನರು ಇರಿಗೇಷನ್‌ಗಾಗಿ ಕೊಟ್ಟ ಹಣವನ್ನು ಹೊಸ ಕೆರೆಗಳನ್ನು ಕಟ್ಟಲು ಕೆಲವರಿಗೆ 70-80 ಸಾವಿರದಷ್ಟು ಹಣ ಕೊಟ್ಟಿದ್ದಾರೆ. ಮತ್ತು ಜನಕ್ಕೆ ಬಹಳ ಅನ್ಯಾಯ ಮಾಡಿದ್ದಾರೆ ಇಲ್ಲಿಗೆ ಕ್ಷಾಮ ಪರಿಹಾರಕ್ಕಾಗಿ ಕೊಟ್ಟ ಹಣದಲ್ಲಿ ಅರ್ಧದಷ್ಟನ್ನು ಚುನಾವಣೆಗಳಿಗಾಗಿ ಖರ್ಚು ಮಾಡಿದ್ದಾರೆ. ಇದರ ಬಗ್ಗೆ ಸರಕಾರ ಕೂಡಲೇ ವಿಚಾರಣೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಈ ದಿವಸ ಸರ್ಕಾರದವರು ಮಾತೆತ್ತಿದರೆ ಬೆಲೆಗಳೆಲ್ಲಾ ಕಡಿಮೆ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಬೆಲೆಗಳೆಲ್ಲಾ ಏರುತ್ತಾ ಇವೆ. ನಿರುದ್ಯೋಗವೂ ಬೆಳೆಯುತ್ತಾ ಇದೆ. ಈ ಪರಿಸ್ಥಿತಿ ಇರುವಾಗ ಜನಗಳು ಒಂದಕ್ಕೆರಡರಷ್ಟು ಕೊಟ್ಟು ಕೊಂಡುಕೊಳ್ಳಲು ಸಾಧ್ಯವೇ? ಇಷ್ಟರವರೆಗೂ ಕಾದರೂ ಒಳ್ಳೆಯ ಸ್ಥಿತಿ ಬರಲಿಲ್ಲ. ಜನತೆಯು ಒಳ್ಳೆಯ ಜೀವನ ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಒಂದು ತಪ್ಪು ನೀತಿಯನ್ನು ಅನುಸರಿಸಿದ್ದಾರೆ. ಆಹಾರ ಧಾನ್ಯಗಳ ವ್ಯಾಪಾರವಾಗಲಿ, ಬ್ಯಾಂಕುಗಳ ರಾಷ್ಟ್ರೀಕರಣವಾಗಲಿ ಮಾಡುವುದನ್ನು ಬಂಡವಾಳಶಾಹಿಗಳ ಧೋರಣೆ ರೀತಿ ಅನುಸರಿಸುತ್ತಿದ್ದಾರೆ. ಇವೆಲ್ಲಾ ರಾಷ್ಟ್ರೀಕರಣವಾಗಲು ಕೇಂದ್ರ ಸರ್ಕಾರದವರನ್ನು ಒತ್ತಾಯಪಡಿಸಿ. ಆದುದರಿಂದ ಕೇರಳ ಸರ್ಕಾರದವರು ಕೇಂದ್ರ ಸರ್ಕಾರದವರ ಮೇಲೆ ಯಾವ ಧಾಟಿಯಲ್ಲಿ ಇದ್ದಾರೋ ಅದೇ ಧಾಟಿಯಲ್ಲಿ ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಬೇಕು. ಇಲ್ಲದಿದ್ದರೆ ನಿಮ್ಮ ಮೇಲೆ ಅನುಮಾನ ಬರುತ್ತದೆ. ಸಮತಾವಾದಿ ಸಮಾಜದ ಧೋರಣೆಯನ್ನು ಅನುಷ್ಠಾನಕ್ಕೆ ತರಬೇಕು. ಹಾಗಾದರೆ ನಿರುದ್ಯೋಗವನ್ನು ಹಿಡಿತದಲ್ಲಿ ಇಡಲು ಅನುಕೂಲವಾಗುತ್ತದೆ. ಇದಕ್ಕೆ ನಮ್ಮ ರಾಜ್ಯ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ.

ಇನ್ನು ಭೂಸುಧಾರಣೆ ವಿಷಯ ಹೇಳುವುದಾದರೆ ಇದರಲ್ಲಿ ಅನಾವಶ್ಯಕವಾದ ಕಾಲ ವಿಳಂಬವಾಗುತ್ತಾ ಇದೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಕೂಡ ಉಳುವವನಿಗೆ ಹೊಲ. ಅದಕ್ಕೋಸ್ಕರ ನಾವು ಬದುಕಿರುವುದು ಎಂದು ಕಾಂಗ್ರೆಸ್ಸಿನವರು ಹೇಳುತ್ತಾ ಇದ್ದರು. ಆದರೆ ಈ ಕಾರ್ಯ ನಿಧಾನವಾಗುತ್ತಾ ಇದೆ. ಇದಕ್ಕೆ ಪಂಚಾಯಿತಿ ಸಹಕಾರ ಬೇಕು ಎಂದು ಹೇಳುತ್ತಾರೆ. ರಾಜ್ಯ ಸರಕಾರದ ಉದ್ದೇಶ ಏನು ಇದೆಯೋ ಗೊತ್ತಾಗುವುದಿಲ್ಲ. ಪಂಚಾಯಿತಿಯಲ್ಲಿ ದೊಡ್ಡ ದೊಡ್ಡ ಶ್ರೀಮಂತರಿದ್ದಾರೆ. ಭೂಸುಧಾರಣಾ ಕ್ರಮವನ್ನು ಜಾರಿಗೆ ತರುವ ಕೆಲಸ ಅವರಿಗೆ ಕೊಟ್ಟರೆ ಅವರು ತಮ್ಮ ಭದ್ರತೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಮಹಾತ್ಮಾ ಗಾಂಧೀಜಿಯವರು ಸವರ್ಣ ಹಿಂದುಗಳಿಗೆ ದೇಶದ ಅಧಿಕಾರವನ್ನು ಕೊಟ್ಟು ಹರಿಜನರಿಗೆ ಒಳ್ಳೆಯದು ಮಾಡಬೇಕೆಂದು ಹೇಳುತ್ತಾ ಇದ್ದರು. ಇಂದಿಗೆ 20 ವರ್ಷಗಳಾದರೂ, ಇನ್ನೂ ಹರಿಜನರಿಗೆ

(ಶ್ರೀ ಪಿ. ವೆಂಕಟಗಿರಿಯಪ್ಪ)

ದೇವಸ್ಥಾನಗಳಿಗೆ ಪ್ರವೇಶ ಸಿಕ್ಕುತ್ತಾ ಇಲ್ಲ. ಭೂಸುಧಾರಣೆ ಮಾಡುತ್ತೇವೆಂದು ಹೊರಟ್ಟಿದ್ದೀರಿ, ಆದರೆ ಸಾಮಾನ್ಯ ರೈತನಿಗೆ ಏನೂ ಸಹಾಯ ಸಿಗುತ್ತಾ ಇಲ್ಲ. ಆದುದರಿಂದ ವ್ಯವಸಾಯ ಅಭಿವೃದ್ಧಿ ಮಾಡಲು, ರೈತವರ್ಗದವರಿಗೆ ಸಹಾಯಮಾಡಲು ಕೂಡಲೇ ಸೂಕ್ತ ಕ್ರಮ ತೆಗೆದು ಕೊಳ್ಳಬೇಕೆಂದು ತಿಳಿಸಬಯಸುತ್ತೇನೆ.

ಇನ್ನು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಗೆ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಮೈಸೂರು ರಾಜ್ಯದಲ್ಲಿ ಕೋಲಾರ, ಬಿಜಾಪುರ ಇಂಥ ಕಡೆಗಳಲ್ಲಿ ಯಾವುದಾದರೂ ಮೇಜರ್ ಅಥವಾ ಮೈನರ್ ಇರ್ರಿಗೇಷನ್ ಪ್ರಾಜೆಕ್ಟ್ ಆಗಲಿ ಮಾಡುವುದಕ್ಕೆ ಅವಕಾಶವಿಲ್ಲ. ಇಷ್ಟೊಂದು ಹಣವನ್ನು ಪ್ರಾಜೆಕ್ಟ್‌ಗಳಿಗೆ ಖರ್ಚು ಮಾಡುತ್ತಾ ಇರುವಾಗ ಕೋಲಾರ ಜಿಲ್ಲೆಯಲ್ಲಿ ಬಾವಿಗಳಿಗೂ ಹೆಚ್ಚು ಹಣ ಕೊಡದೆ ಇದ್ದೀರಿ. ಮತ್ತು ಯಾವ ಬ್ಯಾಂಕ್‌ನವರು 100 ಕ್ಕೆ 90 ಭಾಗ ವಸೂಲ್ ಮಾಡುವುದಿಲ್ಲವೋ ಅವರಿಗೆ ಪುನಃ ಸಾಲ ಕೊಡುವುದಕ್ಕಾಗುವುದಿಲ್ಲ ಎಂದು ಕಟ್ಟುನಿಟ್ಟಾಗಿ ಒಂದು ತೀರ್ಮಾನ ಮಾಡಿಕೊಂಡಿದ್ದೀರಿ.

2-00 P.M.

ಇದರಿಂದ ಸುಮಾರು ಮೈಸೂರು ರಾಜ್ಯದ ಅರ್ಧ ತಾಲ್ಲೂಕುಗಳಿಗೆ ಯಾವ ಹಣವೂ ಸಿಕ್ಕು ವುದಕ್ಕೆ ಅವಕಾಶವಿಲ್ಲ. ಒಂದು ವರ್ಷದಲ್ಲಿ ಒಂದು ತಾಲ್ಲೂಕಿನಲ್ಲಿ ಯಾರಾದರೂ 200 ಜನ ಸಾಲ ತೆಗೆದುಕೊಂಡಿದ್ದು, ಅದನ್ನು ಯಾವ ಯಾವ ಬಾಬುಗಳಿಗೋ ಖರ್ಚು ಮಾಡಿದ್ದು, ಅದನ್ನು ವಾಪಸು ಕೊಡದೆ ಇದ್ದರೆ, ಅಂಥವರಿಂದ ಬರಬೇಕಾದ ಬಾಕಿಯನ್ನು ವಸೂಲ್ಮಾಡಿಕೊಳ್ಳಲು ಬೇಕಾದ ಕ್ರಮ ಗಳನ್ನು ತೆಗೆದುಕೊಳ್ಳಬೇಕು. ಸಹಕಾರ ಇಲಾಖೆ ಇದೆ, ಅವರು ಕ್ರಮ ತೆಗೆದುಕೊಂಡು ಬಾಕಿ ಇರುವವರ ಜಮೀನನ್ನು ಹರಾಜು ಮಾಡಬಹುದು. ಹಾಗೆ ಮಾಡದೆ 200 ಜನ ಸಾಲ ತೆಗೆದು ಕೊಂಡಿದ್ದು ಅವರಲ್ಲಿ ಕೆಲವರು ವಾಪಸು ಕೊಟ್ಟಿಲ್ಲವೆಂಬ ಕಾರಣದ ಮೇಲೆ ಆ ತಾಲ್ಲೂಕಿನಲ್ಲಿ ಯಾರಿಗೂ ಸಾಲ ಕೊಡುವುದಿಲ್ಲ ಎನ್ನುವುದು ನ್ಯಾಯವಾದುದಲ್ಲ. ಅದೂ ಅಲ್ಲದೆ ಒಂದೇ ವರ್ಷ ಎಲ್ಲ ಬಾಕಿಯನ್ನೂ ವಸೂಲ್ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಕನಿಷ್ಟಪಕ್ಷ 50 ಭಾಗ ಹಣ ವಸೂಲು ಮಾಡಿದ್ದರೆ ಅಂಥ ಬ್ಯಾಂಕುಗಳಿಗೆ ಖಂಡಿತವಾಗಿಯೂ ಪುನಃ ಸಾಲ ಕೊಡುವುದಕ್ಕೆ ಸರ್ಕಾರದವರು ಏರ್ಪಾಟು ಮಾಡಬೇಕು. ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದು ಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†SRI N. B. SIRDESAI (Khanapur).—Mr. Speaker, Sir, I rise to oppose and make certain observations on the address delivered by the Governor. While placing an account of some of the outstanding events in the State, he has referred to the Taluk Board elections and stated that the Taluk Board elections were one of the most important events and the elections went off in an orderly and peacefull manner. Further he has stated that the Government is continuously alive to the problem of strengthening Panchayat Raj institutions to enable them to serve rural communities in an effective manner. While saying this he has shrewdly avoided to tell us whether his Government is going to introduce Zilla Parishads in the State. When the Taluk Board elections were conducted the Congress party, that is, the ruling party followed some corrupt practices. I can quote many examples of the corrupt practices followed by the ruling party. But, for the information of this House I can quote only one intance from my constituency. There is a village by name Nilavadi which is the headquarters of grama panchayat. There, one of the polling officers got the polling box in one room and asked the polling agent of the M. E. S. party to sit outside. The polling box was not visible. The polling officer followed corrupt practice and induced the voters to put stamp on the symbol of Congress Party candidate and

he himself put stamp on that symbol and thus they secured 250 votes fraudulently. When I came to know of it, I went to the place and I enquired with the Presiding Officer. The Presiding officer stated that as an M. L. A. he would not respect me but as a leading gentleman of taluk he would respect me. I pointed out the rules under which an officer following corrupt practices could be punished with fine and imprisonment. Then he kept quiet and apologised to me and I came back. Like that the Congress Party has spent a lot of money. They have supplied liquor bottles and given false promises and assurances to the voters. But they were all of no avail. They could not secure majority in the taluk board. The M. E. S. party got majority in spite of such mean efforts. This Government believes that India is a republic and democratic country. Then, why should this Government not adopt the decentralisation policy ? Under the garb of decentralisation the Government is centralising powers. They have delegated wide powers to the officers and the panchayat institutions at present have to depend on the officials for administration and technical sanctions. How can they serve the rural community in a better way ? If this Government is not going to decentralise powers, then how is it possible to strengthen the panchayat institutions ? The other States in India are making headway in decentralisation of powers, so I fail to understand why this State alone is lagging behind in decentralisation of powers. Gandhiji had dreamt of Gram Raj, i. e., village republic. But this Government instead of forming gramaraj and instead of delegating more powers to the panchayat institutions, they are delegating more powers to their officers and thereby they are curtailing the rights of citizens.

With reference to the boundry dispute, the Governor has stated that Mahajan Commission gave the report after thorough enquiry and that the Mysore legislature has resolved to urge the India Government to implement recommendations of the report in toto. But he has forgotton to note that the members of the M. E. S. party who represent mojority of the people of that area have not voted for the resolution. They have never supported the resolution. This Government believes that India is a Republic. Then why should it pass a resolution against the wishes of the majority of the people ? In a democratic set up the wishes of the people must be respected and no Government can pass any resolution against the wishes of the majority of the people. The attitude of this Government is undemocratic and unjust in urging the Central Government to implement the Mahajan Commission report. I remember one of the members on the other side tried to condemn the Maharashtra Government by saying that the attitude of that Government was like that of Viswamitra a great sage in olden days who had an illegitimate child from a fairy and who at the time of confirmation denied that the child was his own, like that Maharashtra Government is denying the recommendations made by Mahajan though it had consented to the appointment of the boundary commission. There is vast difference between consenting to the appointment of the commission and acceptance

(SRI N. B. SIRDESAI)

of its recommendations. Mr. Mahajan himself had stated that he was to submit the recommendations and the Government of India was to give a final decision. Now also it is upto the Government of India to give a final decision. So it is no use in condemning the Government of Maharashtra. Neither the Maharashtra Government nor the State of Mysore have got any right to pass any resolution against the wishes of the people. The Maharashtra Government had also consented to the appointment of the Commission against the wishes of the people in the border area. The people of the border area have not consented to the appointment of the Boundry Commission.

We agree that Mahatmaji lived and gave up his life for the establishment of a social order in which there will be equality of status and opportunity for all citizens in India irrespective of caste, creed or religion. Now may I ask whether this Government is following the high ideals of Gandhiji, which are enshrined in the Constitution of India? While giving Government jobs and extending Government concessions, those ideals are not followed by this Government and caste, creed, community and religion are taken into consideration by this Government. I fail to understand how this Government can celebrate the Centenary of Mahatmaji in a fitting manner and how the soul of the departed Father of the Nation would be pleased and satisfied and with what face the Centenary would be celebrated by this Government?

The Governor has admitted that the seasonal conditions were bad in 1968 and for the fourth year in succession. He has also admitted that failure of rains in July and August had brought in severe agricultural distress in 136 Taluks comprising of 16,000 villages. During the last Session I had brought to the notice of this hon. House and to the notice of this Government that my Taluk was equally affected by these seassonal conditions because of the failure of rains and hence the same scarcity relief works should be undertaken in my Taluk also. In spite of my request and on the contrary, this year the officials of this Government are recovering levy by force and no exemption from levy is being granted to the people of my Taluk though the lands in my Taluk are rainfed and of low productivity. Justice is being done to the Kannadiga people and injustice is being done to the Marathi people: that is the attituded of this Government.

As regards implementation of Mysore Land Revenue Reforms Act, the Governor has stated that it is in progress. The Government has established the occupancy rights to the tenants in respect of lands belonging to the landlords. But what about lands belonging to the Revenue Department? While establishing rights over these Revenue lands, they are recovering T. T. fine from the tenants who are in possession of those lands since 1956 for the last ten to twelve years. Those tenants have been regularly paying land revenue and rent to the

Government. They have been dispossessed and Government have treated those tenants as unauthorised cultivators. Such is the treatment given to our people by this Government.

One word about the co-operative movement. In our Taluk, the Government is not extending co-operatives.

Mr. DEPUTY SPEAKER.—The hon. member will have another chance and he may then cover the other points. Now there is no time. So he may conclude his speech.

Sri N. B. SIRDESAI.—If you do not wish to give me any more time, I thank the Chair and conclude.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ತಾನೆ ನಾವು ಬಹಳ ಮುಖ್ಯವಾದ ಈ ಅವಿಶ್ವಾಸ ನಿರ್ಣಯದ ಮೇಲೆ ಮುಖ್ಯಮಂತ್ರಿಗಳು ಕೊಟ್ಟಂಥ ತೀರ್ಮಾನವನ್ನು ಕೇಳಿದೆವು. ಅವರು ಬಹಳ ಸೂಕ್ಷ್ಮಮತಿಗಳು ಅಂತ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅವರು ಶ್ರೇಷ್ಠ ನ್ಯಾಯಾಲಯದಲ್ಲಿ ನಡೆದಂತಹ ಪ್ರಸಂಗಗಳನ್ನು ಮತ್ತು ಮೈಸೂರು ರಾಜ್ಯದ ಹೈಕೋರ್ಟಿನಲ್ಲಿ ನಡೆದ ತೀರ್ಮಾನದ ಸಂದರ್ಭದಲ್ಲಿ ನಡೆದಂತಹ ಕೆಲವು ಪ್ರಸಂಗಗಳನ್ನು ಎತ್ತಿಕೊಂಡು ನಮಗೆ ಅರ್ಥವಾಗುವುದು ಕಷ್ಟ ಅನ್ನುವ ಹಾಗೆ ಬಹಳ ಸೂಕ್ಷ್ಮವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅಂತಹ ಸೂಕ್ಷ್ಮಮತಿಗಳು ಈ ಪ್ರಜಾಪ್ರಭುತ್ವದ ಧರ್ಮ ಸೂಕ್ಷ್ಮವನ್ನು ತಿಳಿದುಕೊಂಡಿದ್ದರೆ ಬಹಳ ಚೆನ್ನಾಗಿತ್ತು. ಪ್ರಜಾಪ್ರಭುತ್ವದಲ್ಲಿ ಕೇವಲ ಅವರು ಸಂಖ್ಯೆಯ ಆಧಾರದ ಮೇಲೆ ನಮ್ಮ ಬಲ ನಿಂತಿದೆ ಎಂದು ಹೇಳುವುದು ತೀರ ಕೆಟ್ಟ ಕಡೆಯ ಮಾರ್ಗ ಎಂದು ಹೇಳುತ್ತೇನೆ. ಯಾವಾಗ ಒಂದು ಶ್ರೇಷ್ಠನ್ಯಾಯಾಲಯ ಇವರ ವಿಚಾರದಲ್ಲಿ ಅನುಮಾನವನ್ನು ವ್ಯಕ್ತಪಡಿಸಿರುವಾಗ ಇವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿದ್ದರೆ ಇವರ ಸೂಕ್ಷ್ಮಮತಿಗೆ ಇದೂ ಕೂಡ ಒಂದು ಹೆಚ್ಚಿನ ಮೆರುಗನ್ನು ಕೊಟ್ಟ ಹಾಗೆ ಆಗುತ್ತಿತ್ತು. ಆದರೆ ಇದೇ ವಿಚಾರದಲ್ಲಿ ರಾಜೀನಾಮೆಯನ್ನು ಕೊಟ್ಟಿದ್ದ ಶ್ರೀಮಾನ್ ರಾಮಕೃಷ್ಣಹೆಗ್ಡೆಯವರನ್ನು ನಾವು ಅಭಿನಂದಿಸಬೇಕಾಗಿದೆ. ಒಂದು ಶ್ರೇಷ್ಠ ನ್ಯಾಯಾಲಯ ಯಾವಾಗ ಇವರ ಬಗ್ಗೆ ಒಂದು ಅನುಮಾನವನ್ನು ವ್ಯಕ್ತಪಡಿಸಿತೋ ಆ ಕೂಡಲೇ ಅವರು ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅದು ಅವರಲ್ಲಿರತಕ್ಕ ದೊಡ್ಡತನವನ್ನು ತೋರಿಸುತ್ತಿದೆ ಎಂದು ನಾನು ಭಾವಿಸುತ್ತೇನೆ. ಅವರು ರಾಜೀನಾಮೆ ಕೊಟ್ಟ ಹಾಗೆ ಈ ಸೂಕ್ಷ್ಮಮತಿಗಳೂ ರಾಜೀನಾಮೆ ಕೊಟ್ಟಿದ್ದರೆ ಇವರಿಗೆ ಪ್ರಜಾಪ್ರಭುತ್ವ ಧರ್ಮದಲ್ಲಿ ಒಂದು ಸೂಕ್ಷ್ಮ ತಿಳುವಳಿಕೆ ಇದೆ ಎಂದು ನಾನು ತಿಳಿದುಕೊಳ್ಳುತ್ತಿದ್ದೆ. ಆದರೆ ಇದೇ ವಿಚಾರದಲ್ಲಿ ಇನ್ನೇ ಮುಖ್ಯ ಮಂತ್ರಿಗಳಾಗಿದ್ದವರು ಈ ದಿವಸ ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿತಕ್ಕ ಶ್ರೀ ಎಸ್. ನಿಜಲಿಂಗಪ್ಪನವರು ಯಾವಾಗಲೂ ಮಾತೆತ್ತಿದರೆ ಪ್ರಜಾಪ್ರಭುತ್ವ, ಧರ್ಮ—ಮಹಾತ್ಮಾ ಗಾಂಧಿ ಮತ್ತು ಪಕ್ಷಾಂತರ—ಈ ಮೂರರ ವಿಚಾರದಲ್ಲಿ ಬಹಳವಾಗಿ ಮಾತನಾಡುತ್ತಿದ್ದಾರೆ. ರಾಷ್ಟ್ರದಲ್ಲಿರತಕ್ಕ ಒಂದು ಶ್ರೇಷ್ಠ ನ್ಯಾಯಾಲಯ ಕೊಟ್ಟಿರತಕ್ಕ ತೀರ್ಪನ್ನು ಮಾನ್ಯತೆ ಮಾಡದೆ ಇರತಕ್ಕವರಿಗೆ ಪ್ರಜಾಪ್ರಭುತ್ವದ ತತ್ವಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರಿಗೆ ಯಾವ ಅಧಿಕಾರವೂ ಇಲ್ಲವೆಂದು ನಾನು ಹೇಳುತ್ತೇನೆ. ಇನ್ನು ಮಹಾತ್ಮಾ ಗಾಂಧಿ ಹೆಸರನ್ನು ಎತ್ತತಕ್ಕವರಿಗೆ ನಾನು ಹೇಳುವುದೇನೆಂದರೆ ಯಾರು ಆ ಮಹಾತ್ಮ ಗಾಂಧಿಗೆ ಬಹಳ ಅಪ್ರಿಯವಾಗಿದ್ದ ಪಾನ ಅಥವಾ ಕುಡಿತವನ್ನು ಮತ್ತೆ ಜಾರಿಗೆ ತಂದಿದ್ದಾರೋ ಅವರಿಗೆ ಆ ಮಹಾತ್ಮನ ಹೆಸರನ್ನು ಎತ್ತುವುದಕ್ಕೆ ಯೋಗ್ಯತೆಯಿಲ್ಲ ಎಂದು ಹೇಳುತ್ತೇನೆ. ಈ ದಿವಸ ದೇಶದಲ್ಲಿ ಆ ಪಾನ ನಿರೋಧವನ್ನು ಜಾರಿಗೆ ತರುವುದಕ್ಕೆ ಶ್ರೀಮಾನ್ ನಿಜಲಿಂಗಪ್ಪನವರಿಗೂ ಮತ್ತು ಇಲ್ಲಿರತಕ್ಕ ವೀರೇಂದ್ರ ಪಾಟೀಲರಿಗೂ ಇಷ್ಟವಿಲ್ಲ ; ಅದರ ಬಗ್ಗೆ ಈ ಮಂತ್ರಿ ಮಂಡಲಕ್ಕೆ ಮನ್ನಣೆಯಿಲ್ಲ. ಹೀಗೆ ತ್ರಿಕರಣ ಶುದ್ಧಿ ಇಲ್ಲದ ಜನರು ಈ ಮೂರು ಹೆಸರುಗಳನ್ನು ಎತ್ತುತ್ತಿರುವುದು ಸರಿಯಲ್ಲ. ಅವರ ಬಾಯಲ್ಲಿ ಬೆಳಗಾದರೆ ಪಕ್ಷಾಂತರದ ಮಾತೇ. ಆದರೆ ಈ ಪಕ್ಷಾಂತರ ಅನ್ನುವುದು ಮೊಟ್ಟಮೊದಲನೇಯದಾಗಿ ಈಗಿನ ಶ್ರೀ ವೀರೇಂದ್ರ ಪಾಟೀಲರ ಮಂತ್ರಿತ್ವದ ಕಾಲದಲ್ಲೇ ಅವರಿಂದಲೇ ಪ್ರಾರಂಭವಾಗಿದೆ. ಇದು ಮೊದಲು ಹುಟ್ಟಿದ್ದೇ ಅಲ್ಲ. ಅಷ್ಟಾದರೂ ಅವರು ಪಕ್ಷಾಂತರದ ಮಾತನ್ನು ಆಡಿದ್ದೂ ಆಡಿದ್ದೇ. ಕಾಂಗ್ರೆಸ್ಸಿನವರೇ ಭಾರತಾದ್ಯಂತ ಇದಕ್ಕೆ ಕುಮ್ಮಕ್ಕನ್ನು ಕೊಡುತ್ತಿದ್ದಾರೆ. ಇಷ್ಟು ಧರ್ಮ ಸೂಕ್ಷ್ಮ ಹೇಳತಕ್ಕವರಿಗೆ ಅವರ ಪಕ್ಷದಲ್ಲಿ ಪಕ್ಷಾಂತರ ಆಗತಕ್ಕವರನ್ನು ಕಿತ್ತು ಹಾಕುವುದಕ್ಕೆ ಅವರಿಗೆ ಶಕ್ತಿಯಿಲ್ಲ. ಹಾಗೆ ಇಷ್ಟು ಮಂದಗತಿಯಲ್ಲಿರತಕ್ಕ ಈ ಅಧಿಕಾರದಲ್ಲಿರತಕ್ಕ ಜನರನ್ನು ನಾವು ಇಲ್ಲಿ ಕುಳಿತು ಧರ್ಮ ಸೂಕ್ಷ್ಮವಾದ ವಿಚಾರಗಳನ್ನು ಹೇಳಿ ಇವರನ್ನು ಇಲ್ಲಿಂದ ಕಿತ್ತು ಹಾಕು

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ವುದಕ್ಕೆ ಸಾಧ್ಯವಿಲ್ಲವಾಗಿ ಕಾಣುತ್ತಿಲ್ಲ. ಇದಕ್ಕಾಗಿ ನಾವು ಬೇರೆ ಒಂದು ಮಾರ್ಗವನ್ನು ಹುಡುಕಬೇಕಾಗುತ್ತದೆ. ನಾವು ನಮಗೆ ಇರತಕ್ಕ ಅಂಥಾ ಆ ಒಂದು ಮಾರ್ಗ ಎಂದರೆ ಅದು ಮತ್ತೆ ಹಿಂಸಾಮಾರ್ಗವನ್ನು ಹಿಡಿಯಬೇಕಾಗುತ್ತದೆ. ನಾವಿನ್ನು ಈ ವಿಷಯವನ್ನು ಇಲ್ಲಿಗೇ ಕೈಬಿಡುತ್ತೇನೆ; ಇದನ್ನು ಹೆಚ್ಚಿಗೆ ಲಂಬಿಸುವುದಕ್ಕೆ ಹೋಗುವುದಿಲ್ಲ.

ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇತ್ತೀಚೆಗೆ ನಡೆದ ತಾಲ್ಲೂಕ್ ಬೋರ್ಡ್‌ಗಳ ಹಾಗೂ ಗ್ರಾಮ ಪಂಚಾಯಿತಿಗಳ ಚುನಾವಣೆಯನ್ನು ಕುರಿತು ಕೆಲವು ಮಾತುಗಳನ್ನಾಡಿದ್ದಾರೆ. ಇದನ್ನು ಒಂದು ದೊಡ್ಡ ಘಟನೆ ಎಂದು ಅವರು ಹೇಳಿದ್ದಾರೆ. ಈ ಚುನಾವಣೆಗಳು ಹೇಗೆ ನಡೆದವು ಎಂಬುದನ್ನು ಮಾನ್ಯ ಸಿದ್ಧವೀರಪ್ಪನವರು ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದ ಹಾಗೆ ಅವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಅದೇ ರೀತಿ ನಾನು ನಮ್ಮ ಜಿಲ್ಲೆಯಾದ ತುಮಕೂರಿನ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿವೆ. ಮಾನ್ಯ ಸಿದ್ಧವೀರಪ್ಪನವರು ಹೇಳಿದ್ದನ್ನು ಕೇಳಿದರೆ ಎಷ್ಟೋ ಆಳವಾಗಿ ಇದರ ಪ್ರಸ್ತಾಪ ಮಾಡಿದಂತಾಯಿತು ಅಂತ ಇದ್ದರೆ ನಮ್ಮ ಜಿಲ್ಲೆಯಲ್ಲಿ ಒಬ್ಬ ಡೆಪ್ಯುಟಿ ಮಿನಿಸ್ಟರು ಜಿಲ್ಲೆಯ ಎಲ್ಲಾ ಚುನಾವಣೆಗಳೂ ಮುಗಿಯುವವರೆಗೂ ಅಲ್ಲೇ ಇದ್ದರು. ಅವರು ಕಳೆದ ನವಂಬರ್ ತಿಂಗಳಲ್ಲಿ ಅವರು ನಮ್ಮ ಕುಣಿಗಲ್ ತಾಲ್ಲೂಕ್ ಒಂದರಲ್ಲೇ 25 ದಿವಸಗಳ ಕ್ಯಾಂಪ್ ಮಾಡಿದ್ದರು. ಅವರು ಮಾಡಿದ ಟೂರುಗಳಲ್ಲಿ ಅಫಿಷಿಯಲ್ ಯಾವುದೋ ಅನ್‌ಅಫಿಷಿಯಲ್ ಯಾವುದೋ ಒಂದೂ ಗೊತ್ತಾಗುತ್ತಿಲ್ಲ. ಮೊದಲು ಅವರು ಟೂರ್ ಬರುವುದಕ್ಕೆ ಮುನ್ನ ಒಂದು ಅವರ ಟೂರ್ ಪ್ರೋಗ್ರಾಮು ನಮಗೆಲ್ಲರಿಗೂ ಬರುತ್ತಿತ್ತು. ಈಗ ನಮಗೆ ಅಂಥ ನಕಲುಗಳೇನೂ ಬರುತ್ತಿಲ್ಲ. ನಾವು ಅಲ್ಲಿ ಸದಸ್ಯರಾಗಿದ್ದರೂ ಅವರ ಲೆಕ್ಕಕ್ಕೆ ಇಲ್ಲ. ಅವರು ಜನ ಸೇರಿದ ಕಡೆಯೇ ಒಂದು ಮಾತು ತಾಲ್ಲೂಕು ಪ್ರವಾಸಿಮಂದಿರದಲ್ಲಿ ಮುಖಂಡರನ್ನು ಸೇರಿಸಿ, ನನ್ನ ಹತ್ತಿರ ಹಣವಿದೆ, ನೆಣ ಇದೆ, ಅಧಿಕಾರ ಇವೆ, ನೀವು ಏನು ಮಾಡಿದರೂ ನಾವು ನೋಡಿಕೊಳ್ಳುತ್ತೇವೆ, ನೀವು ಯಾರಿಗೂ ಹೆದರಬೇಕಾಗಿಲ್ಲ, ಧಾರಾಳವಾಗಿ ಖರ್ಚುಮಾಡಿ, ಯಾರು ಏನು ಬೇಕಾದರೂ ಮಾಡಿಕೊಳ್ಳಲಿ, ನಾನು ನೋಡಿಕೊಳ್ಳುತ್ತೇನೆ, ಪೋಲೀಸ್ ಸಿಬ್ಬಂದಿ ಕೊಡುತ್ತೇನೆಂದು ಇವರ ಭಾಷಣ. ಅವರು ಪ್ರತಿನಿತ್ಯ ಸಂಚಾರ ಮಾಡುವಾಗ ಅವರ ಜೊತೆಯಲ್ಲಿ ಪೋಲೀಸ್ ವ್ಯಾನ್. ಅದೂ ರಾತ್ರಿ ಹೊತ್ತು ಇವರ ಸಂಚಾರ. ಪೋಲೀಸರಿಗೆ ಊಟವಿಲ್ಲ. ಇವರಿಗೆ ಚೊಕ್ಕ ಭೋಜನ ಚೆನ್ನಾಗಿ ನಡೆಯುತ್ತಿತ್ತು. ಅಲ್ಲಿ ಒಂದು ನಾಗಸಂದ್ರ ಗ್ರಾಮ. ಅಲ್ಲಿ ಪ್ರಜಾಸೋಷಿಯಲಿಸ್ಟ್ ಪಕ್ಷದ ಸಬ್‌ಕಮಿಟಿ ಸೇರಿತ್ತು. ಆಗ ಲೋಕ ಸಭೆಯ ಸದಸ್ಯರಾದ ಮಾನ್ಯ ಶ್ರೀ ಲಕ್ಕಪ್ಪನವರು ಭಾಷಣ ಮಾಡಬೇಕಾಗಿತ್ತು. ಅದೇ ಕಾಲದಲ್ಲಿ ಮಾನ್ಯ ಉಪ ಮಂತ್ರಿಗಳು ಬರುತ್ತಿದ್ದಾರೆ ಎಂಬುದಾಗಿ ಹೇಳಿ ಅಲ್ಲಿಗೆ ಬಂದು ಅವರ ಭಾಷಣಕ್ಕೆ ಅಡ್ಡಿ ಮಾಡಿದರು ಆಗ ಪ್ರಜಾಸೋಷಿಯಲಿಸ್ಟ್ ಪಕ್ಷದ ಅಧ್ಯಕ್ಷರು ಅಡ್ಡಿ ಮಾಡಬೇಡಿ, ನಮ್ಮ ಸಭೆ ನಡೆಯಲಿ, ಮೊದಲು ಕಾರ್ಯಕ್ರಮ ನಮ್ಮದು ನಡೆಯಲಿ, ಆಮೇಲೆ ನಿಮ್ಮದಾಗಲಿ ಎಂದು ಹೇಳಿದರು. ಆ ರೀತಿ ಕೇಳಿದ ಮೇಲೆ ಗಲಾಟೆಯಾಯಿತು, ಪ್ರಜಾಸೋಷಿಯಲಿಸ್ಟ್ ಪಕ್ಷದವರ ಲೌಡ್ ಸ್ಪೀಕರ್ ಸೆಟ್, ಅವರ ಹಸ್ತ ಪತ್ರಿಕೆಗಳನ್ನು, ಚಪ್ಪರ ತೋರಣಗಳನ್ನು ಕಿತ್ತು ಹಾಕಿದರು. ಈ ವಿಷಯವನ್ನು ಅಲ್ಲಿನ ಪೋಲೀಸ್‌ನವರಿಗೆ ದೂರು ಕೊಟ್ಟರೂ ಏನೂ ಆಗಿಲ್ಲ. ಆದ್ದರಿಂದ ಮಾನ್ಯ ಉಪ ಮಂತ್ರಿಗಳು ಮೊದಲು ಅಪರಾಧಿ. ಕೇಸ ಹಾಕದಿದ್ದರೆ ಯಾರು ಕೇಳುವುದು, ಪೋಲೀಸಿನವರಿಗೆ ಕೇಸು ಹಾಕಬೇಡಿ ಎಂದು ಹೇಳುತ್ತೇನೆಂದು ಹೇಳಿದ್ದಾರೆ. ಇದು ಈವೊತ್ತು ನಡೆಯುತ್ತಿರುವ ವಿದ್ಯಮಾನ. ಇದು ಒಂದೇ ಅಲ್ಲ. ಇಂತಹವು ಇನ್ನೂ ಅನೇಕವಿವೆ.

ಇನ್ನೊಂದು ವಿಷಯ. ಇವರು ಹಿಂದೆ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರಾಗಿ ಇದ್ದರು. ಜಿಡ್ಡಗೆರೆ ಗ್ರಾಮ ಪಂಚಾಯತಿಯ ಅಧ್ಯಕ್ಷ ಚುನಾವಣೆಯ ದಿವಸ ಇವರು 500 ಜನರನ್ನು ಕರೆದುಕೊಂಡು ಹೋಗಿದ್ದರು. ಏಕೆಂದರೆ 12 ಜನ ಸದಸ್ಯರ ಪೈಕಿ ವಿರೋಧ ಪಕ್ಷದ 9 ಜನರು ಗೆದ್ದಿದ್ದರು. 3 ಜನರು ಇವರ ಪಕ್ಷದವರು ಗೆದ್ದಿದ್ದರು. ಆ 9 ಜನರನ್ನು ಅವರ ಮನೆಯಲ್ಲಿ ಸೇರಿಸಿಕೊಂಡು ತಮ್ಮವರಿಗೆ ಚುನಾಯಿಸಬೇಕೆಂದು ಕೈಕಾಲು ಹಿಡಿದರು. ಕೇವಲ 300 ಜನರು ಇರತಕ್ಕ ಪ್ರಜಾ ಸಂಖ್ಯೆ ಇರುವ ಊರಿಗೆ 500 ಜನರನ್ನು ಕರೆದುಕೊಂಡು ಹೋಗಿದ್ದರು. ಆದರೂ ಅವರ ವಿರೋಧವಾಗಿಯೇ ಅವರು ಓಟುಮಾಡಿದ್ದಾರೆ.

ಇನ್ನೊಂದು ವಿಷಯ. ಗುಬ್ಬಿ ತಾಲ್ಲೂಕಿನಲ್ಲಿ ಅಧ್ಯಕ್ಷ ಚುನಾವಣೆ ನಡೆಯಿತು. ಅಲ್ಲಿ ಒಬ್ಬ ತಾಲ್ಲೂಕು ಬೋರ್ಡ್ ಸದಸ್ಯ ಸ್ವತಂತ್ರವಾಗಿ ಗೆದ್ದಿದ್ದರು. ಅವರನ್ನು ಒಂದು ಕೊಠಡಿಯೊಳಗೆ

ಕೂಡಿಕೊಂಡು ಇಟ್ಟುಕೊಂಡಿದ್ದರು. ಆಗ ನಮ್ಮ ಸದಸ್ಯರು ಹೋಗಿ ಪೋಲೀಸ್‌ನವರಿಗೆ ದೂರು ಕೊಟ್ಟರೂ ಏನೂ ಆಗಿಲ್ಲ. ಆಗ ನಾವು ಆ ಬಾಗಿಲನ್ನು ಒಡೆದು ಅವರನ್ನು ಈಚೆಗೆ ಕರೆದುಕೊಂಡು ಹೋಗಬೇಕಾಯಿತು.

ಇನ್ನೊಂದು ಇದೇ ಮಾನ್ಯ ಉಪಮಂತ್ರಿಗಳು ಕಾಂಗ್ರೆಸ್ ಆಫೀಸಿನಲ್ಲಿ ಬದರೆಯ ಒಬ್ಬ ಹರಿಜನ ಸದಸ್ಯರನ್ನು ಬೀಗಹಾಕಿ ಇಟ್ಟುಕೊಂಡಿದ್ದರು. ಇದು ಇವರು ಮಾಡುವಂಥ ಕೆಲಸಗಳ ವೈಖರಿ.

ಇನ್ನು ನಾಗಸಂದ್ರದ ಹತ್ತಿರ ಹೈಲೆವಲ್ ಕಾಜ್‌ವೇ ಕಟ್ಟಬೇಕೆಂದು 10 ಸಾವಿರ ರೂಪಾಯಿಗಳನ್ನು ಡ್ರಾ ಮಾಡಿದ್ದರೂ ಇನ್ನೂ ಆ ಕೆಲಸ ನಡೆಯಲಿಲ್ಲ. ಈ ವಿಚಾರದಲ್ಲಿ ವಿಜಿಲೆನ್ಸ್ ಕಮಿಷನರ್‌ಗೆ ಬರೆದರೆ, ಮಾನ್ಯ ಉಪಮಂತ್ರಿಗಳು ಅದನ್ನು ವಿಚಾರಣೆ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿದ್ದಾರೆ. ಇಂಥಾದ್ದಕ್ಕೆ ನಮಗೆ ರಕ್ಷಣೆ ಹೇಗೆ, ನ್ಯಾಯ ಹೇಗೆ ಸಿಗುವುದು ?

ನಮ್ಮ ತಾಲ್ಲೂಕಿನಲ್ಲಿ ಇನ್ನೊಂದು ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿರತಕ್ಕ ಶಾಲಾ ಕಟ್ಟಡಗಳಿಗೆ ಸುಣ್ಣ ಬಣ್ಣ ಹಾಕುವುದಕ್ಕೆ 10 ಸಾವಿರ ರೂಪಾಯಿಗಳು ಖರ್ಚು ಆಗಿದ್ದರೂ ಅಲ್ಲಿ ಕೆಲಸ ನಡೆಯಲಿಲ್ಲ. ಇದರ ಬಗ್ಗೆ ದೂರನ್ನು ವಿಜಿಲೆನ್ಸ್ ಕಮಿಷನರ್‌ಗೆ ಕಳುಹಿಸಿದರೆ ಅದನ್ನು ವಿಚಾರ ಮಾಡಬೇಡಿ ಎಂಬುದಾಗಿ ಅಪ್ಪಣೆಮಾಡಿದ್ದಾರೆ. ಅಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಲೆವಲ್‌ನಲ್ಲಿರತಕ್ಕ ಎಲ್ಲಾ ಅಧಿಕಾರಿಗಳ ಮೇಲೆ ಇವರದೇ ಸರ್ವಾಧಿಕಾರ ಆಗಿದೆ. ಅಲ್ಲಿ ಅನೇಕ ರೀತಿಯಲ್ಲಿ ಅವರನ್ನು ಬೆಳೆಸುತ್ತಿದ್ದಾರೆ ಹೀಗೆಯೇ ಅಲ್ಲಿ ನಡೆದಿರುವ ವಿದ್ಯಮಾನ.

ಇನ್ನು ಕೆಲವು ಸೊಸೈಟಿಗಳಿಗೆ ಆಹಾರಪದಾರ್ಥಗಳನ್ನು ಕೊಡಿ ಎಂದು ಹೇಳಿದರೆ ಕೆಲವಕ್ಕೆ ಕೊಡುತ್ತಿದ್ದಾರೆ, ಇನ್ನು ಕೆಲವಕ್ಕೆ ಕೊಡುತ್ತಾ ಇಲ್ಲ. ಹೀಗೆ ಇವರ ವಿದ್ಯಮಾನಗಳು ನಡೆಯುತ್ತಿವೆ. ಕೆಲವು ಸೊಸೈಟಿಗಳಿಗೆ ಆಹಾರ ಪದಾರ್ಥಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಹೊನ್ನಾಚನ ಹಳ್ಳಿ ಮಿಲ್ಕ್ ಕೋ-ಆಪರೇಟಿವ್ ಸೊಸೈಟಿಗೆ ಆಹಾರಧಾನ್ಯ ಕೊಡಬೇಡಿ ಎಂದು ಹೇಳುತ್ತಾರೆ, ಆದರೆ ನೀಲಸಂದ್ರ ಮಿಲ್ಕ್ ಕೋಆಪರೇಟಿವ್ ಸೊಸೈಟಿಗೆ ಕೊಡಿಸಿದ್ದಾರೆ. ಇವರು ಹೇಳಿದ ಹಾಗೆ ಪ್ರತಿ ಅಧಿಕಾರಿಗಳು ಕೇಳಿದರೆ ಅವರಿಗೆ ಕ್ಷೇಮ ಇದೆ, ಇಲ್ಲದಿದ್ದರೆ ಯಾವ ಅಧಿಕಾರಿಗಳಿಗೂ ಕ್ಷೇಮ ಇಲ್ಲ. ಈ ರೀತಿ ತಾಲ್ಲೂಕು ಬೋರ್ಡು ಚುನಾವಣೆಗಳನ್ನು ನಡೆಸಿರತಕ್ಕ ವಿದ್ಯಮಾನ. ಶ್ರೀಮಾನ್ ನಿಜಲಿಂಗಪ್ಪನವರು ವಿರೋಧ ಪಕ್ಷ ನಿರ್ನಾಮವಾಗಿದೆ, ಅದನ್ನು ಬಲಪಡಿಸುವುದಕ್ಕೆ ನಾನೇ ಬಂದು ಬಲಕೊಡುತ್ತೇನೆ ಎಂದು ಹೇಳಿದ್ದಾರೆ. ನೀವು ಮೋಸ ಹೋದಿರಿ ! ಇವರು ಧೃತರಾಷ್ಟ್ರನು ಭೀಮನಿಗೆ ತೋರಿಸಿದ ಪ್ರೇಮವನ್ನು ತೋರಿಸುತ್ತಿದ್ದಾರೆ.

ಇನ್ನೊಂದು ವಿಷಯ. ಸಹಕಾರ ಸಂಘಗಳ ವಿಚಾರದಲ್ಲಿ ಬಹಳ ಪ್ರಸ್ತಾಪ ಮಾಡಿದ್ದಾರೆ. ನಿನ್ನೆಯ ದಿನ ಒಂದು ಪ್ರಶ್ನೆಗೆ ಉತ್ತರ ಬಂದಿದೆ—ಮಂಡ್ಯ ಜಿಲ್ಲೆಯಲ್ಲಿ 238 ಡಿಫಂಕ್ಟ್ ಸೊಸೈಟಿಗಳಿವೆ ಎಂದು. ಪ್ರತಿ ಜಿಲ್ಲೆಯಲ್ಲೂ ಇದು ನಡೆದಿವೆ. ಎಲ್ಲಿ ಕಾಂಗ್ರೆಸ್ಸಲ್ಲದೆ ಬೇರೆಯವರಿದ್ದಾರೋ ಅಂಥವರಿಗೆ ಉಳಿಗಾಲವಿದೆ. ನಾನು ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ. ಕುಣಿಗಲ್‌ನಲ್ಲಿ ಮಾಗಡಿಪಾಳ್ಯ ಸ್ಮಿತಿ ಕ್ರಾಫ್ಟ್ಸ್ ಕೋಆಪರೇಟಿವ್ ಸೊಸೈಟಿಗೆ, ನಮ್ಮ ಡೆಪ್ಯೂಟಿ ಮಂತ್ರಿಯವರಾದ ಶ್ರೀ ತಮ್ಮಣ್ಣನವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರಾಗಿದ್ದಾಗ 3,400 ರೂಪಾಯಿ ದುರುಪಯೋಗವಾಗಿದೆ. ಇದನ್ನು ಆಡಿಟರ್ ಸ್ಪಷ್ಟವಾಗಿ ವರದಿ ಮಾಡಿದ್ದಾರೆ. ಆ ವರದಿ ಮಾಡಿ ತುಮಕೂರಿನ ಸ್ಪೆಶಲ್ ಆಡಿಟರಿಗೆ ಒಂದು ಕಾಗದವನ್ನು ಬರೆದಿದ್ದಾರೆ. ಅದು ಈ ರೀತಿ ಇದೆ.—

"To

Sri T. Chandrashekaraiah,
Special Auditor,
Tumkur.

Dear Sir,

Sub.—Final Audit of accounts for the year 1966-67 of Magadipalya Smithy Grafts Co-operative Society, Kunigal Taluk, District Co-operative Central Bank, Ltd., S/B Accounts drawn not accounted for special report—submission—regarding.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

I visited the Magadipalya Smithy and Craft Co-operative Society Ltd., Kunigal Taluk for final audit of account for the year 1966-67 on 28th December 1967 during course of my audit and observation I found the following item of irregularities or as like misappropriated funds of the Society by Sri G. Thammanna, President of the above society.

A some of Rs. 3,400 drawn by Sri G. Thammanna, President under the cheques from D.C.C. Bank Branch Office, Kunigal from the cited society savings bank accounts.

1	5-11-1966	to self	ch. No.	04776	Rs. 300.00
2	28-11-1966	,,	,,	0421	Rs. 1500.00
3	3-1-1967	,,	,,	0422	Rs. 1600.00
					Rs. 3.400.00

Remained unaccounted in the society cash book and the proceeds misappropriated. The President of the society is held responsible as he has drawn the said sum of Rs. 3,400 from the D.C.C. Bank himself. The D.C.C. Bank pass book extract copy of which is enclosed herewith appended.

I request your goodself to take immediate needful action is recovering the same with interest at 9 per cent and I solicit your kind instructions in this behalf, for your favour of perusal and needful.

Yours faithfully,
(Sd.) C. S. Ramaiah.

ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇಂಥ ಒಬ್ಬ ದೊಡ್ಡ ಮನುಷ್ಯರನ್ನು ತಾವು ಮಂತ್ರಿಮಂಡಲದಲ್ಲಿ ಇಟ್ಟುಕೊಂಡರೆ ತಮಗೆ ಇವರಿಂದ ಗೌರವ ಬರುತ್ತದೆಯೇ, ಪ್ರಜಾಪ್ರಭುತ್ವಕ್ಕೆ ಗೌರವ ತರುತ್ತದೆಯೇ ಎಂದು.

2-30 P. M.

ಇದು ಆಲೋಚನೆ ಮಾಡಬೇಕಾದ ಮುಖ್ಯ ವಿಷಯ. ಅನೇಕ ಪ್ರಸಂಗಗಳು ಇರಬಹುದು. ನನಗೆ ಗೊತ್ತಿರುವ ಒಂದು ಪ್ರಸಂಗವನ್ನು ಈ ಮಾನ್ಯ ಸಭೆಯ ಗಮನಕ್ಕೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಮಾನ್ಯ ಅಧ್ಯಕ್ಷರ ಮುಖಾಂತರ ತರುತ್ತೇನೆ. ನಮ್ಮಲ್ಲಿ ನಡೆದಿರತಕ್ಕ ಕೆಲಸದ ವಿಷಯದಲ್ಲಿ ಶ್ರೀಮಾನ್ ಸಿದ್ಧವೀರಪ್ಪನವರು ಮಾತನಾಡುತ್ತಾ ಕಾಂಗ್ರೆಸ್ ಪಕ್ಷವನ್ನು ಪಾಂಡವೀ ಸೈನ್ಯಕ್ಕೆ ಹೋಲಿಸಿದರು. ನನ್ನ ಅಭಿಪ್ರಾಯದಲ್ಲಿ ಈ ಕಾಂಗ್ರೆಸ್ ಪಕ್ಷವನ್ನು ಕುರುಸೈನ್ಯ ಎಂದು ಹೇಳಬಹುದು. ಕುರುಸೈನ್ಯದಲ್ಲಿ ಭೀಷ್ಮ, ದ್ರೋಣ, ಅಶ್ವತ್ಥಾಮ ಮುಂತಾದವರು ಇದ್ದಾರೆ. ಭೀಷ್ಮನನ್ನು ಜಯಿಸಲು ಕೃಷ್ಣ ಗುಟ್ಟು ತಿಳಿಯಲು ಧರ್ಮರಾಯನನ್ನು ಕಳುಹಿಸಿ ಅದರಿಂದ ಕೌರವ ಸೈನ್ಯ ನಾಶವಾಗಿದೆ. ಹಾಗೆ ಕಾಂಗ್ರೆಸ್ ಪಕ್ಷದಲ್ಲಿ ಯಾರಾದರೂ ಭೀಷ್ಮ ಇದ್ದರೆ ಅವರು ಕುರು ಸೈನ್ಯವನ್ನು ನಾಶ ಮಾಡುವುದಕ್ಕೆ ಸಹಾಯ ಮಾಡಲಿ ನಾಶ ಮಾಡುವ ಕ್ರಮವನ್ನು ಮೊದಲು ಹೇಳಲಿ ಇಷ್ಟು ವಿಷಯಗಳನ್ನು ಸೂಚನೆ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್.—ಸನ್ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸುವ ಸೂಚನೆಗೆ ನಾನು ಕೆಲವು ತಿದ್ದುಪಡಿಗಳನ್ನು ಕಳುಹಿಸಿದ್ದೇನೆ. ಈ ತಿದ್ದುಪಡಿಗಳನ್ನು ಬೆಂಬಲಿಸುತ್ತಾ ನಾನು ಕೆಲವಾರು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಮೊನ್ನೆತಾನೆ ನಡೆದ ತಾಲ್ಲೂಕು ಬೋರ್ಡುಗಳ ಚುನಾವಣೆಯ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರು ಮಂತ್ರಿಮಂಡಲದ ವಿಷಯದಲ್ಲಿ ನಾನು ಈಗ ಯಾವುದೇ ರೀತಿಯಲ್ಲಿ ಮಾತನಾಡುವುದಿಲ್ಲ. ಆ ವಿಷಯದಲ್ಲಿ ನಾವು ಇನ್ನೂ ಕೆಲವು ಕಾಲ ಕಾಯ ಬೇಕಾಗುತ್ತದೆ. ಆದರೆ ಕೆಲವು ಮಾತುಗಳನ್ನು ಅವರ ಗಮನಕ್ಕೆ ತರುವುದು ಅವಶ್ಯಕ. ಮಾನ್ಯ ಮುಖ್ಯ ಮಂತ್ರಿಗಳ ಸಹೋದ್ಯೋಗಿಗಳು ಒಬ್ಬರು ಅವರ ಹೆಸರನ್ನು ಕೆಡಿಸುತ್ತಿದ್ದಾರೆಂಬುದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈಗತಾನೆ ನಡೆದ ಚುನಾವಣೆಯಲ್ಲಿ ಏನು ತಪ್ಪು ಮಾಡಿದ್ದಾರೆ ಅದಕ್ಕಿಂತಲೂ ಹೆಚ್ಚಾದ ಅನೇಕ ತಪ್ಪುಗಳನ್ನು ಮಾಡಿದ್ದಾರೆ. ಒಂದು ಮಾತನ್ನು ಹೇಳುತ್ತೇನೆ. ಅಭಿವೃದ್ಧಿ ಶಾಖೆಯ ಮಂತ್ರಿಗಳಾದ ಶ್ರೀಮಾನ್ ನಾಡಗೌಡರು ಬಾಗಲಕೋಟೆಯಲ್ಲಿ ಮಾಡತಕ್ಕ ಅನ್ಯಾಯ, ಅತ್ಯಾಚಾರ ಅನಾಚಾರ ಗಳನ್ನು ಅವರ ಪಕ್ಷದ ಸದಸ್ಯರಾದ ಶ್ರೀ ಬಿ. ಟಿ. ಮುರ್ನಾಳ್ ಅವರಿಂದ ತಿಳಿದುಕೊಂಡರೆ ಗೊತ್ತಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರಪಾಟೀಲರು ಆ ವಿಚಾರಗಳನ್ನು ತಿಳಿದುಕೊಂಡಿದ್ದರೂ ಸಹ ಸುಮ್ಮನೆ ಕುಳಿತುಕೊಂಡಿದ್ದಾರೆ. ಈ ರೀತಿ ಇವರು ಮಾಡಿದರೆ ಜನ ಏನೆಂದಾರು ? ಚುನಾವಣೆಯಲ್ಲಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಭಾರತ್ ಸೇವಕ್ ಸಮಾಜದವರು ಕೊಟ್ಟಂಥಹ ಕಾಳುಗಳನ್ನು ತಮಗೆ ಬೇಕಾದವರಿಗೆ ವಿತರಣೆ ಮಾಡಿ ಚುನಾವಣೆಯಲ್ಲಿ ಓಟುಗಳಿಸಿದ್ದಾರೆ ; ಮತ್ತು ಈ ಕಾಳುಗಳನ್ನು ಹಂಚುವ ಬಗ್ಗೆ ದುರು ಪಯೋಗ ಮಾಡಿದ್ದಾರೆ. ಈ ವಿಚಾರದಲ್ಲಿ ತನಿಖೆ ಆಗಬೇಕೆಂದು ನಾನು ಹೇಳುತ್ತೇನೆ.

ಕೋ-ಆಪರೇಟಿವ್ ಸೊಸೈಟಿಗಳ ವಿಷಯದಲ್ಲಿ ಹೇಳಬೇಕಾಗಿದ್ದರೆ ಹಿಂದೆ ಶ್ರೀ ರಾಮಕೃಷ್ಣ ಹೆಗಡೆಯವರು ಕೋ-ಆಪರೇಷನ್, ಮತ್ತು ಡೆವಲಪ್‌ಮೆಂಟ್ ಮಂತ್ರಿಗಳಾಗಿದ್ದಾಗ ಮೈಸೂರು ರಾಜ್ಯದಲ್ಲಿ ಸಹಕಾರ ಚಳುವಳಿ ಬಹಳ ಅಭ್ಯುದಯವನ್ನು ಹೊಂದಿ ಬಹಳ ಚೆನ್ನಾಗಿ ನಡೆಯುತ್ತಿತ್ತು. ಅದು ಈವೊತ್ತು ನಿರರ್ಥಕವಾಗಿದೆ. ಈವೊತ್ತು ನಮ್ಮ ರಾಜ್ಯದಲ್ಲಿ ಅನೇಕ ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ. ಶ್ರೀಮಾನ್ ನಾಡಗೌಡರು ಸ್ಕೂಲ್ ಬೋರ್ಡಿನಲ್ಲಿ ಇದ್ದಾಗ್ಯೆ ಮಾಡಿದಂತೆ ಇಲ್ಲಿಯೂ ಎಂದರೆ ಸಹಕಾರಿ ಇಲಾಖೆ ಮತ್ತು ಪಂಚಾಯಿತಿ ರಾಜ್ಯದಲ್ಲೂ ಮಾಡು ತ್ತಿದ್ದಾರೆ. ಇವರು ಈ ಸಹಕಾರ ಸಂಸ್ಥೆಗಳನ್ನು ನಡೆಸುವಾಗ ಕೆ. ಎಚ್. ಪಾಟೀಲರು ಮತ್ತೆ ಕೆಲವರು ಇವರ ಜೊತೆಯಲ್ಲಿ ಸಹಕರಿಸಲಿಲ್ಲವೆಂದು ತೊಂದರೆ ಕೊಡುತ್ತಾರೆ. ಇಂಥವರ ಕೈಯಲ್ಲಿ ಬದುಕಿರುವುದಕ್ಕಿಂತಲೂ ಸತ್ತು ಹೋದರೆ ನೆಟ್ಟಗಾಗುತ್ತದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ಗ್ರಾಮಾಂತರ).—ಸಾಯುವುದಕ್ಕೆ ಬಿಡುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಸುಸೂತ್ರವಾಗಿ ಸತ್ತರೆ ಅದಾದರೂ ಪುಣ್ಯ. ಆದರೆ ಇವರು ಪಿನ್ನು ಚುಚ್ಚಿ ಹಿಂಸೆ ಮಾಡುತ್ತಾರೆ. ಬಾಗಲಕೋಟೆ ಬಸವೇಶ್ವರ ಸಂಘದಲ್ಲಿ ಯಾರು ಅಧ್ಯಕ್ಷ ರಾಗಿದ್ದರೋ ಅವರೇ ಎಂದರೆ ಶ್ರೀಮಾನ್ ಪಿ. ಎಂ. ನಾಡಗೌಡರು ಇವೊತ್ತು ಸಹಕಾರಿ ಶಾಖೆಯ ಮಂತ್ರಿಗಳಾಗಿದ್ದಾರೆ. ಅವರು ಬಾಗಲಕೋಟೆ ಬಸವೇಶ್ವರ ಸಂಘಕ್ಕೆ ಸಾವಿರಾರು ರೂಪಾಯಿ ಗಳನ್ನು ಮಂಜೂರು ಮಾಡಿದ್ದಾರೆ. ಆದರೆ ರಾಮಕೃಷ್ಣಹೆಗಡೆಯವರ ಆಶೀರ್ವಾದವನ್ನು ಪಡೆದ ಗದುಗಿನ ಶಿಕ್ಷಣ ಸಂಸ್ಥೆಗೆ ಹಣವನ್ನು ಮಂಜೂರು ಮಾಡಬೇಕೆಂದು ಕೇಳಿದಾಗ ಅದಕ್ಕೆ ಕಾಯಿದೆ ಅಡ್ಡ ಬಂದಿದೆ. ಇದರಲ್ಲಿ ಪಕ್ಷಪಾತ ಇದೆಯೋ ಅಥವಾ ಇಲ್ಲವೇ ಎಂಬುದನ್ನು ತಾವು ಯೋಚನೆ ಮಾಡಬೇಕು. ಇದಕ್ಕೆ ಬೇಕಾದರೆ ನಾನು ಡಾಕ್ಯುಮೆಂಟರಿ ಎವಿಡೆನ್ಸ್ ಪ್ರೊಡ್ಯೂಸ್ ಮಾಡುತ್ತೇನೆ. ನಮ್ಮ ಗದುಗಿನ ಶಿಕ್ಷಣ ಸಂಸ್ಥೆಗೆ ಹಣದ ಅವಶ್ಯಕತೆ ಇಲ್ಲ ಗದುಗಿನ ನೂರಾರು ಜನ ವ್ಯಾಪಾರಸ್ಥರು ಆ ಸಂಘಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕೂಡಿಸಿಕೊಡುತ್ತೇವೆ ಬನ್ನಿ ಎಂದು ಹೇಳುತ್ತಿದ್ದಾರೆ. ಈ ದೃಷ್ಟಿಯಿಂದ ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ, ಚುನಾವಣೆಯಲ್ಲಿ ಹಾಗೂ ಸಹಕಾರ ಸಂಘಗಳಲ್ಲಿ ಹಣದ ದುರುಪಯೋಗ ಏನು ನಡೆದಿದೆ ಅದರ ಬಗ್ಗೆ ತನಿಖೆ ಮಾಡಲೇಬೇಕು. ನಿಜವಾಗಿಯೂ ನಿಮ್ಮಲ್ಲಿ ದೇಶವನ್ನು ಉದ್ಧಾರ ಮಾಡಬೇಕೆಂಬ ಭಾವನೆ ಇದೆಯೇ ? ನಿಮ್ಮಲ್ಲಿ ಒಂದು ಆದರ್ಶ ಇದೆಯೇ ? ನಿಮಗೆ ಬೇಕಾದಂತಹ ಆದರ್ಶವನ್ನು ಇಟ್ಟುಕೊಂಡು ನಿಮಗೆ ಬೇಕಾದವರಿಗೆ ಸಹಾಯ ಮಾಡಿ ಬೇಡವಾದವರಿಗೆ ಕೆಡಕು ಮಾಡಿದ್ದೀರಿ. ತರುಣರಾದ ಮುಖ್ಯ ಮಂತ್ರಿಗಳು ಬಹಳ ಚೆನ್ನಾಗಿ ಆಡಳಿತ ಮಾಡುತ್ತಾರೆ, ಬಹಳ ನಿಷ್ಠೆಯಿಂದ ಕೆಲಸ ಮಾಡುತ್ತಾರೆ ಎನ್ನುವ ಭಾವನೆ ಜನತೆಯಲ್ಲಿ ಇರುವಾಗ ಶ್ರೀಮಾನ್ ನಾಡಗೌಡರು

(ಶ್ರೀ ಕೆ. ಎಚ್. ಪಾಟೀಲ್)

ಇಂಥಾ ಅನ್ಯಾಯಗಳನ್ನು ಮಾಡಿ ಅವರ ಹೆಸರನ್ನು ಕೆಡಿಸುತ್ತಿದ್ದಾರೆ. ಶ್ರೀಮಾನ್ ನಾಡಗೌಡರು ಬಾಗಲಕೋಟೆಯಲ್ಲಿ ಏನೇನು ಅನ್ಯಾಯ, ಅತ್ಯಾಚಾರ, ಅನಾಚಾರ ಮಾಡಿದ್ದಾರೆಂಬ ಬಗ್ಗೆ ಒಂದು ಎನ್‌ಕ್ವೈರಿ ಕಮಿಷನ್ ನೇಮಿಸಿ, ಅದಕ್ಕೆ ಬೇಕಾದ ಸಾಕ್ಷಿಗಳನ್ನು ನಾವು ಒದಗಿಸುತ್ತೇವೆ. ಅವರು ನಿರಪರಾಧಿಯೆಂದು ತೀರ್ಮಾನವಾದರೆ ನಾನು ಈ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ನಾನು ಗದುಗಿನಲ್ಲಿ ಆಯಿಲ್ ಪ್ರೋಸೆಸಿಂಗ್ ಕೋ ಅಪರೇಟೀವ್ ಸಂಸ್ಥೆಯ ಅಧ್ಯಕ್ಷನಾಗಿದ್ದಾಗ ಬ್ಯಾಂಕಿನಿಂದ ಹಣ ಪಡೆಯುವುದಕ್ಕೆ ಟೆಂಪರರಿ ಗ್ಯಾರಂಟಿ ಕೊಡಬೇಕೆಂದು ಸರ್ಕಾರದವರನ್ನು ಕೇಳಿದಾಗ ಗ್ಯಾರಂಟಿ ಕೊಡಲಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ನನ್ನ ಮೇಲಿನ ದ್ವೇಷದಿಂದ ಅದಕ್ಕೆ ಗ್ಯಾರಂಟಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ತಮಗೆ ಯಾರು ಬೇಕೋ ಅಂಥವರಿಗೆ ಸಹಾಯ ಮಾಡುವುದು, ಬೇಡವಾದವರಿಗೆ ಬಿಡುವುದು ಈ ಪ್ರಕಾರವಾಗಿ ಇವರು ಆಡಳಿತವನ್ನು ನಡೆಸಿಕೊಂಡು ಬಂದಿದ್ದಾರೆ. ನಮ್ಮನ್ನು ಕೇಳುವ ಭೂಪ ಯಾರಿದ್ದಾರೆ ಎಂಬ ಭಾವನೆ ನಿಮ್ಮಲ್ಲಿ ಇದೆ. ತಮ್ಮಲ್ಲಿ ವಿವೇಕ ಏನಾದರೂ ಇದ್ದರೆ ನಾನು ಹೇಳುವ ವಿಚಾರದ ಬಗ್ಗೆ ಯೋಚನೆ ಮಾಡಿ ತನಿಖೆ ಮಾಡಿ ನೋಡಿ. ಅಲ್ಲಿಯ ಅಧಿಕಾರಿಗಳಲ್ಲಿ ಬಹಳಷ್ಟು ದರ್ಪ ಇದೆ. ತಮ್ಮನ್ನು ಕೇಳುವವರೇ ಇಲ್ಲ ಎಂದುಕೊಂಡಿದ್ದಾರೆ. ಈವೊತ್ತಿನ ದಿವಸ ತಾವು ವಿರೋಧಪಕ್ಷದ ಕೈಯಲ್ಲಿರುವ ಸಂಸ್ಥೆಗಳನ್ನು ತುಳಿಯುತ್ತಿದ್ದೀರಿ. ವಿರೋಧಪಕ್ಷದವರ ಕೈಯಲ್ಲಿರುವ ಸಂಸ್ಥೆಗಳಿಗೆ ಹಣದ ಸಹಾಯ ಮಾಡಿಕೊಡಿ ಎಂದು ನಾನು ಕೇಳುತ್ತಿಲ್ಲ. ನಮ್ಮ ಭಾಗದ ಕೋ-ಅಪರೇಟಿವ್ ಕ್ಯಾಟಲ್ ಫೀಡ್ ಪ್ರೋಸೆಸಿಂಗ್ ಸೊಸೈಟಿಯ ಬಗ್ಗೆ ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಪ್ಪನವರು ನಾನು ಆ ಸೊಸೈಟಿಗೆ ಭೇಟಿ ಕೊಡುವವರೆಗೆ ಹಣದ ಸಹಾಯ ಕೊಡಬಾರದೆಂದು ಹೇಳಿದ್ದರು. ಈ ರೀತಿ ಮಾಡುವುದು ಸರಿಯಲ್ಲ. ಸ್ವಾಮಿ, ತಮ್ಮ ಮೂಲಕ ಶ್ರೀಮಾನ್ ವೀರೇಂದ್ರಪಾಟೀಲರಿಗೆ ನಿವೇದನೆ, ಮಾಡುತ್ತೇನೆ, ಏನೆಂದರೆ ಇನ್ನು ಮುಂದೆಯಾದರೂ ಸಹ ಜನರಿಗೆ ನ್ಯಾಯ ದೊರಕುವಂತೆ ಭರವಸೆ ಕೊಡಬೇಕು ಎಂದು ಜೆಸ್ಟೀಸ್ ಈಸ್ ಸೋಲ್ಡ್ ಎಂದು ಆಗಬಾರದು. ಆ ರೀತಿಯಾದರೆ ನಾವುಗಳು ಕೆಂಪುಬಂಗಲೆಗೆ ಹೋಗಬೇಕಾಗುತ್ತದೆ. ಜನರಿಗೆ ಸರಿಯಾದ ನ್ಯಾಯ ಸರ್ಕಾರದಿಂದ ಸಿಗದೆ ಕಳೆದ 22 ದಿವಸಗಳಲ್ಲಿ 450ಕ್ಕೂ ಮೀರಿ ರಿಟ್ ಅರ್ಜಿಗಳು ಹೈಕೋರ್ಟಿಗೆ ಹೋಗಿವೆ. ಗದಗಿನ ಮುನಿಸಿಪಾಲಿಟಿಗೆ ಇನ್ನೂ ಚುನಾವಣೆ ನಡೆಸಿಲ್ಲ. ಇನ್ನೂ ಆಡಳಿತಾಧಿಕಾರಿಯನ್ನೇ ಮುಂದುವರಿಸಿದ್ದಾರೆ. ಚುನಾವಣೆ ನಡೆಸಿದರೆ ಕಾಂಗ್ರೆಸ್ಸೇತರರೇ ಆರಿಸಿ ಬರುವರೆಂದು ಸರ್ಕಾರದವರು ತಿಳಿದು ಆಡಳಿತಾಧಿಕಾರಿಯನ್ನು ಮುಂದುವರಿಸಿದ್ದಾರೆ. ಈ ಅಧಿಕಾರಿಯಾದರೂ ಸಹ ಸರಿಯಾಗಿ ವರ್ತಿಸುತ್ತಿಲ್ಲ. ಗದಗಿನಲ್ಲಿ ಒಬ್ಬ ಶ್ರೀಮಂತನಿಗೆ ತನ್ನ ಜಮೀನಿನಲ್ಲಿ ಗೋಡೆಯನ್ನು ಕಟ್ಟಿಸುವುದಕ್ಕೆ ಈ ಅಧಿಕಾರಿ ಅಪ್ಪಣೆ ಕೊಟ್ಟಿದ್ದಾರೆ. ಇದರಿಂದ ಅಲ್ಲಿದ್ದ ರಸ್ತೆಯು ಬಂದ್ ಆಯಿತು. ಇದರಿಂದ ನೂರಾರು ಕುಟುಂಬಗಳವರಿಗೆ ತೊಂದರೆಯಾಗಿದೆ. ಅವರಿಗೆ ಓಡಾಡುವುದಕ್ಕೆ ರಸ್ತೆ ಇಲ್ಲವಾಗಿದೆ. ಒಬ್ಬ ಶ್ರೀಮಂತನಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ನೂರಾರು ಕುಟುಂಬಗಳಿಗೆ ಅನ್ಯಾಯ ಮಾಡಿದ್ದಾರೆ. ಬಡಕುಟುಂಬಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ಇಚ್ಛೆ ತಮಗಿದ್ದರೆ ಆ ಗೋಡೆಯನ್ನು ಕೆಡವಿಸಲು ಮುನಿಸಿಪಾಲಿಟಿಯವರಿಗೆ ಹೇಳಬಹುದಾಗಿತ್ತು. ಆದರೆ ನಿಮ್ಮ ಬೆಂಬಲ ಕೋಟ್ಯಾಧೀಶ್ವರರ ಕಡೆಗೆ ಇದೆ. ಗದಗ ಮುನಿಸಿಪಾಲಿಟಿಯ ಚುನಾವಣೆ ನಡೆಸುವ ಶಕ್ತಿ ನಿಮಗಿಲ್ಲ. ಚುನಾವಣೆ ನಡೆಸಿದರೂ ಸಹ ಟಿ.ಡಿ.ಬಿ. ಗೆ ನಡೆಸಿದಂತೆ ನಡೆಸುತ್ತೀರಿ. ನಿಮ್ಮ ಮನಸ್ಸಿನಲ್ಲಿರುವುದನ್ನು ಜನರು ಇವತ್ತು ತಿಳಿದಿದ್ದಾರೆ. ನಾನು ಹೇಳಿದ ಎಲ್ಲಾ ವಿಷಯಗಳನ್ನು ಅರಿತುಕೊಂಡು ಮಂತ್ರಿಗಳು ಮೊದಲು ತಮ್ಮ ಪಾವಿತ್ರತೆಯನ್ನು ಕಾಯ್ದುಕೊಂಡರೆ ನಂತರ ಅಧಿಕಾರಿಗಳು ತಮ್ಮಿಂದ ತಾವೇ ಒಳ್ಳೆಯವರಾಗುತ್ತಾರೆಂದು ಕಳಕಳಿಯಿಂದ ಬಿನ್ನಹ ಮಾಡಿಕೊಂಡು ಈ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Sri K. PUTTASWAMY (Minister for Labour).—Sir, it was agreed that the debate should close at 2-15 p. m. and the reply will commence.

Mr. DEPUTY SPEAKER.—The reply will begin at 3 O'clock.

Sri V. N. PATIL (Humnabad).—Mr. Speaker, Sir, I do not propose to thank the Governor for the Address which he was kind enough to deliver. I can only say that His Excellency the Governor deserves all the sympathies and respect from this House, but not thanks, because

none of the socialistic policies are discussed in the Address. There is not even an iota to show that this Government will carry on some socialistic policies with regard to the benefits to the common man, land to the tiller and suppression of the attrocities that were being committed on the people. There is not even a hint to suggest what steps the Government has taken to tackle the problems of drinking water in villages where not a single well exists to quench atleast the thirst of the people in the drought sticken areas in the State. If at all, the funds in the name of Famine Relief are untilised, it has gone to the coffers and to the vested interests, but not to the villager, the common man. Hardly about four months back we had to face the worst drought conditions in the State in all the 19 districts, and prior to that, in the month of March in North Karnatak area and particularly in Bidar District the standing jawar crop was ruined and most of the villagers could not get even a quintal of jawar to their houses. Under such circumstances, a pious assurance was given by Chief Minister on the floor of this House, that no levy shall be collected from those agriculturists and no land revenue also shall be collected. But, the authorities have adopted harassing methods to collect the levy. Inspite of these pious assurances by the Chief Minister on the floor of this House, we see the panic and pathetic conditions of the agriculturists in the villages, their bullocks were auctioned, the zinc sheets of the sheds were removed and the belongings of the beedi shop owners were removed and auctioned. This happened at Mana Akheli to a poor shopkeeper by name Md. Khasheem whose shop was practically burgled by the Revenue Inspector in the name of taccavi recovery with false panchanama and undervalued estimation of the goods most of them not included in the list. Such was the condition in most of the north-Karnatak area districts. I appeal to the Government to postpone the collection of the long-standing taccavi loans which have accumulated for the last ten years on account of the unfortunate conditions there. More than 40 such auctions have taken place in Humnabad and Bhalki talukas and the same is the condition in other parts of the district. At Meenkeri one Veerappanna Kotgi's land is attached for the loan he took for well and which is a failure well. At Bemalkhed one Gurappa Hudadhali's land is attached for well loan recovery and to complete that failure well this poor man has spent 30 thousand rupees by raising loan. Government cannot wait for one more year to allow him to raise one crop to repay loan, sell the land and ruin him. This is the relief a poor peasant gets at your hands. The people are approaching the Deputy Commissioner to survey the crop, but no survey is being conducted by the Government, and after three months when the crop report will come that it was 'A' class crop, the agriculturists are made to pay the levy in full. I want to place a proposal before this House to insist upon the Government to instruct the Deputy Commissioners throughout the State immediately to have a survey of all standing crops, as to the percentage of crop, the condition of crop, etc., so that after harvest the poor agriculturists are not put to any difficulty. Those who

(Sri V. N. Patil)

have got sufficient grain must be made to pay the levy. How about the poor agriculturist who has not got even half a quintal of jawar in his house? Levy is being collected on the basis of previous rating, in which case the poor agriculturist has to purchase jawar in order to give levy to the Government. The Governor's Address does not contain even one word about the peasantry and agriculturists, the hardships they are facing, and the attempt, if any, the Government proposes to relieve the peasantry from this turmoil.

I do not know whom this Ministry is representing—whether it is the big landed agricultural class or whether the people who are holding some big industries and large portion of lands. I cannot understand the attitude of the Government. The Governor's Address does not contain a single word about those small agriculturists, landless workers who are in possession of the land for the last 20 to 30 years. They are regularly paying to the Government the SIVAI JAMABANDI assesment. Yet after 30 years continuous possession they are not the owners of that small holding. Exorbitant penalty is being levied on them. This accumulated amount of penalty known as tawan is sometimes hundred times the value of his small hut and household belonging and pay it to the Government. He will have to sell himself. Has this Government any proposal of starting slavery to repeat history? The Government have not taken any measures to make them the owners of such lands. Not even a word is found in the Governor's Address about these poor people. When that is the position, how the Governor deserves thanks? Personally speaking, the Governor is in favour of landless people and the poor agriculturists. But constitutionally he is bound to give an address as advised by the Council of Ministers. He has not been properly advised by the Council of Ministers as to what are all the common problems of to-day. He knows that the land should belong to the tiller. But who is to advise him? The Chief Minister says that he does not believe in socialism in excise contract auction matters. I ask whether you really believe in giving land to the tiller and whether you believe in distributing unoccupied surplus land to the landless? Can you take steps to write off the levy system, or exemt people who have no surplus production. The poor agriculturists are under Takavi loan arrears. Will you take steps to reduce the arrears by giving remission to certain extent in deserving cases where the purpose for which loan was taken has failed due to no fault of the agriculturists? On the other hand you are instructing your officers to collect the takavi loan arrears and levy by force. How can these poor folk give when they are starving? When they are struggling hard for their existance, from where they should bring? When such is the position, the poor agricultural peasantry cannot meet your abnormal demands. Nearly 70 per cent of the population of the State is depending upon agriculture. Are

you representing them? If you are really repres enting themyou would not have stooped to these methods. Some rotton jowar was distributed for consumption at Bidar proper town in some of the fair price shops. On 7th December 1968 at shop No. 10 under TAPCMSL Bidar alone 100 bags of worm eaten jawar was found being distributed. On the protest of some people it was sealed on 12th December 1968. It fell to the lot of a Municipal Councillor, Joshi to present the sample in the District Food Committee Meeting and that sample I present to this august House to show whether this Government considers the rural folk as human beigs and this shows the poorer section is being treated as animals. More than 800 quintals of jowar of this quality was distributed which was unfit for human consumption. It was brought to the notice of the Government. What action has been taken to punish those who are responsible for this distribution of rotton jowar in Bidar District?

Lastly, I want to come to the law and order situation. Privileges under the law and order does not belong to any political party. In any type of Government, the peace has to be maintained. Protection should be given to the citizen to whichever party he belongs. But what happened during the Taluk Board and Municipal election campaign in Bidar District? Our workers were wantonly attacked by Congressmen. The incidents that occurred during election were brought to the notice of the Chief Minister and we wanted protection. I have sent an S.O.S. from Bidar. But no action has been taken. The Opposition was attacked. The Opposition workers were attacked and obstructed with a view to carry on the election campaign. If the Opposition is attacked and obstructed, there cannot be fair election. Wine and violence were writ large by Congressmen. When I brought this to the notice of the Superintendent of Police, he was kind enought to inform me that he would do his best to maintain law and order and some protection would be given to the opposition. But what happended? Some people were axed in the very presence of the Sub-Inspector at Ghatboral village. He was unable to take any action. He was helpless. When these injured persons were taken to Humnabad Hospital profusely bleeding with axe injuries on head even the first aid was not given and they were not admitted by the Doctor there. All these persons were in a pathetic condition. The Surgeon there never obliged and he refused to give even the first aid. I got them removed to the Bidar Hospital where they were admitted and treatment was given to these unfortunate people. When the District Surgeon was able to admit these injured persons, why did this Doctor at Humnabad Hospital refused to give even the first aid? This is all the work of your Congress Party. Power at any cost has become your slogan. The attitude of the Government do not bring credit to the very principles of democracy. Do not dig the grave of democracy by your party's fascist methods. The corrupt attiude should be curbed down. As the Governor's address fails to mention this grave danger

(SRI V. N. PATIL)

to democracy we politely have to refuse to thank His Excellency the Governor and instead suggest amendments to his Address. With these words I conclude and thank the Chair.

†ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ವಿಮರ್ಶೆ ಮಾಡುತ್ತಿರುವಾಗ ಇದರಲ್ಲಿ ಒಂದು ವಿಚಾರ ಹೇಳಿದ್ದಾರೆ. ಅದು 1969 ನೇ ಇಸವಿಯಲ್ಲಿ ಗಾಂಧಿ ಶತಾಬ್ಧಿಯನ್ನು ಬಹಳ ಚೆನ್ನಾಗಿ ಆಚರಿಸುತ್ತೇವೆ ಎಂದು ಹೇಳಿದ್ದಾರೆ. ಆಡಳಿತ ಪಕ್ಷದವರು ಇಂತಹ ಮಹಾತ್ಮರ ಬಗ್ಗೆ ಮಾಡುತ್ತಿರುವ ಕೆಲಸ ಬಹಳ ಮೆಚ್ಚತಕ್ಕ ಕೆಲಸ. ಆದರೆ ಅವರು ಇಂದು ಮಾಡುತ್ತಿರುವ ಕೆಲಸಗಳನ್ನು ನೋಡುವುದಾದರೆ ಸಮಾಜವಾದ ಎಂದು ಏನು ಬಾಯಲ್ಲಿ ಹೇಳುತ್ತಾರೋ ಅದನ್ನು ಕಾರ್ಯರೂಪದಲ್ಲಿ ತರಲು ಅಸಮರ್ಥರಾಗಿದ್ದಾರೆ. ಇಂತಹ ಆಡಳಿತದವರು ಈ ಮಹಾವ್ಯಕ್ತಿಯ ಶತಾಬ್ಧಿಯನ್ನು ಆಚರಣೆಗೆ ತರುತ್ತೇವೆ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಎಷ್ಟು ಮಟ್ಟಿಗೆ ನಮ್ಮ ಮಂತ್ರಿ ಮಂಡಲದವರು ಕೆಲಸ ಮಾಡುತ್ತಿದ್ದಾರೆಂಬುದಕ್ಕೆ ಮಂತ್ರಿ ಮಂಡಲದಲ್ಲಿರುವ ನಮ್ಮ ಉಪ ಗೃಹ ಮಂತ್ರಿಗಳು ಎಂದರೆ ಶ್ರೀ ಮಾಣಿಕರಾವ್ ಪಾಟೀಲ್‌ರವರು ಒಂದು ಕಡೆ ಹೀಗೆ ಹೇಳುತ್ತಾರೆ. (ಇದು ಪ್ರಜಾವಾಣಿ ಪತ್ರಿಕೆಯಲ್ಲಿ 24-11-1968 ರಲ್ಲಿ ಪ್ರಕಟವಾಗಿದೆ) ವೇಶ್ಯಾವೃತ್ತಿಯ ಇತಿಹಾಸವನ್ನು ದೀರ್ಘವಾಗಿ ಪ್ರಸ್ತಾಪಿಸಿದ ಶ್ರೀ ಪಾಟೀಲ್‌ರವರು ನಾಗರಿಕತೆ ಆರಂಭವಾದಾಗಿನಿಂದಲೂ ಈ ವೃತ್ತಿ ಎಲ್ಲ ರಾಷ್ಟ್ರಗಳಲ್ಲಿಯೂ ಇದೆಯೆಂದೂ ಋಗ್ವೇದದಲ್ಲಿ ಕೂಡ ಇದರ ಪ್ರಸ್ತಾಪವಿದೆ ಎಂದೂ ಹೇಳಿ,......
ಇಂತಹ ಒಂದು ಸನ್ನಿವೇಶವನ್ನು ಮಹಾತ್ಮ ಗಾಂಧಿಯವರು ನೋಡಿದ್ದರೆ ಅವರಿಗೆ ಬಹಳ ಸಂತೋಷವಾಗುತ್ತಿತ್ತು. ಇವರು ಮುಂದೆ ಹೋಗಿ ಇನ್ನೂ ಏನು ಹೇಳುತ್ತಾರೆಂದರೆ:

''ವಿಜಯನಗರದ ಸಾಮ್ರಾಜ್ಯದಲ್ಲಿ ವೇಶ್ಯಾ ವೃತ್ತಿಯನ್ನು ಲೈಸನ್ಸ್ ನೀಡುವ ಮೂಲಕ ವೈದ್ಯಕೀಯ ಪರೀಕ್ಷೆ ನಡೆಸುವ ಮೂಲಕ ಕಾನೂನು ಬದ್ಧ ಮಾಡಲಾಯಿತು. ವಾಸ್ತವವಾಗಿ ಲೈಸನ್ಸ್ ಶುಲ್ಕವು ಸರಕಾರಕ್ಕೆ ಒಂದು ಆದಾಯ ಮೂಲವಾಗಿತ್ತು'' ಎಂದರು.

''ಈಗ, ಆಧುನಿಕ ಕಾಲದ ವೇಶ್ಯಾ ವೃತ್ತಿ ಸಮಸ್ಯೆಯನ್ನು ಉಪಸಚಿವರು ಪ್ರಸ್ತಾಪಿಸಿ ಕೊಂಪೆಗಳಲ್ಲಿ ವಾಸಿಸುವವರು, ಭಿಕ್ಷುಕರು, ಕಡಿಮೆ ಕೂಲಿಯ ಕೆಲಸಗಾರರು ಇವರುಗಳು ಈ ವೃತ್ತಿಗೆ ಸುಲಭವಾಗಿ ಎಳೆಯಲ್ಪಡುವವರೆಂದೂ ಎರಡು ಹೊತ್ತಿನ ಊಟಕ್ಕಾಗಿ ಅವರು ಈ ಅನಿಷ್ಟ ವೃತ್ತಿಗಿಳಿಯುವರೆಂದೂ ತಿಳಿಸಿದರು'' ಎಂದು ಇಲ್ಲಿ ಹೇಳಿದ್ದಾರೆ.

ಮಹಾತ್ಮಗಾಂಧಿಯವರಂತೆ ನಮ್ಮ ದೇಶದಲ್ಲಿ ಸರ್. ಎಂ. ವಿಶ್ವೇಶರಯ್ಯನವರಿದ್ದರು. ಇವರಂತಹ ವ್ಯಕ್ತಿಗಳು ಹಾಕಿಕೊಟ್ಟಂತಹ ಯಾವುದಾದರು ಒಂದು ಯೋಜನೆಯನ್ನು ನಮ್ಮ ದೇಶದಲ್ಲಿ ಆಚರಣೆಗೆ ತರುತ್ತಿದ್ದಾರೆಯೇ ? ಇದರಂತೆ ಯಾವ ಯಾವ ನಿರ್ದಿಷ್ಟ ಕೆಲಸಗಳನ್ನು ಮಾಡಬೇಕು ಎನ್ನುವುದನ್ನು ಹೇಳಿದ್ದಾರೆಯೇ ಎಂದರೆ ಏನೂ ಕಾಣುವುದಿಲ್ಲ. ಒಬ್ಬ ಮಗ ಒಂದು ಮನೆಯ ಸಂಸಾರದಲ್ಲಿ ಅವನ ತಂದೆ ಕಾಲವಾದ ಮೇಲೆ ಅವನ ತಾಯಿಯು ಮಾಡಿದ ಅಕೃತ್ಯಗಳನ್ನೆಲ್ಲಾ ಮುಚ್ಚಲು ಅವರ ತಂದೆಯ ಫೋಟೋವನ್ನು ಮುಂದಿಟ್ಟುಕೊಂಡು ಕೈಮುಗಿಯುತ್ತಾನೆ. ಅದರಂತೆ ಆಗಿದೆ ಇಲ್ಲಿನ ಸ್ಥಿತಿ.

3-00 P. M.

ಈಗ ಅನೇಕ ಕಡೆ ಕಳ್ಳತನ, ದರೋಡೆ ಶುರುವಾಗಿದೆ. ನಮ್ಮ ತಿಪಟೂರು ತಾಲ್ಲೂಕಿನಲ್ಲಿ 3 ತಿಂಗಳಲ್ಲಿ 30 ಮಕ್ಕಳು ಕಳುವು ಆಗಿವೆ. ಗಂಡು ಮಕ್ಕಳನ್ನು ಬಿಕ್ಷುಕರಿಗೆ ಮಾರಾಟ ಮಾಡುತ್ತಾರೆ, ಹೆಣ್ಣು ಮಕ್ಕಳನ್ನು ಉಪಗೃಹಮಂತ್ರಿಗಳು ಹೇಳಿದಹಾಗೆ ವೇಶ್ಯೆಯರಿಗೆ ಕೊಟ್ಟು ಬಿಡುತ್ತಾರೆ ಎಂದು ಜನಗಳು ಹೇಳುತ್ತಾರೆ. 30 ಮಕ್ಕಳು ಕಳುವಾಗಿದೆ ಎಂದು ಹೇಳಿದರೆ, ಬರೆದು ಕೊಡಿ ಎಂದು ಹೇಳುತ್ತಾರೆ. ಅದಕ್ಕೆ ಅವರು ಹೆದರಿಕೊಳ್ಳುತ್ತಾರೆ. ಹೀಗೆ ಅನೇಕ ಕಳ್ಳತನಗಳಾಗುತ್ತಿವೆ. ಇದನ್ನು ಕಂಡುಹಿಡಿಯಲು ನಮ್ಮ ಸರ್ಕಾರಕ್ಕೆ ಯೋಚನೆಯೇ ಇಲ್ಲ. ಮೊನ್ನೆ ದಿವಸ 5 ರೂಪಾಯಿ ಕಳ್ಳನೋಟು ಸಿಕ್ಕಿತು. ಅದನ್ನು ಇನ್ನೂ ನಿರ್ಮೂಲ ಮಾಡುವುದಕ್ಕಾಗಲಿಲ್ಲ ಇನ್ನು ಯಾವುದು ಮಾಡುತ್ತಾರೆ ? ಮುಖ್ಯ ಮಂತ್ರಿಗಳಿಗೆ ಭಯ ಎಂದು ಕಾಣುತ್ತದೆ. ಅವರಿಗೆ ಮತ್ತು ಅವರ ಗುಂಪಿಗೆ ಸಂಬಂದಪಟ್ಟದ್ದು ಏನು ಇದೆಯೋ, ಅದಕ್ಕೋಸ್ಕರ ಈ ಖಾತೆಯನ್ನು ಅವರೇ ಇಟ್ಟುಕೊಂಡಿದ್ದಾರೆ.

ಇನ್ನು ಸಹಕಾರದ ವಿಷಯವಾಗಿ ಹೇಳಿದ್ದಾರೆ. ಪ್ರಾಕ್ಟಿಕಲ್ ಆಗಿ ಜನರು ತೊಂದರೆಪಡುತ್ತಾ ಇದ್ದಾರೆ. ಕೇಂದ್ರೀಯ ಸಹಕಾರ ಭೂಅಭಿವೃದ್ಧಿ ಬ್ಯಾಂಕು ಈವರೆಗೆ 33,800 ಬಾವಿಗಳನ್ನು ಕಟ್ಟಲು ದೀರ್ಘಾವಧಿ ಸಾಲವನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ರೈತರು ಒಂದು ಮತ್ತು ಎರಡು ಇನ್‌ಸ್ಟಾಲ್‌ಮೆಂಟುಗಳನ್ನು ತೆಗೆದುಕೊಳ್ಳುತ್ತಾರೆ. ಬಾವಿ ಪೂರ್ತಿ ಯಾಗಿರುವುದಿಲ್ಲ ಅದನ್ನು ಪೂರ್ತಿ ಮಾಡಲು ಬೇರೆ ಕಡೆ ಸಾಲ ಸಿಕ್ಕುವುದಿಲ್ಲ. ಇಷ್ಟರಲ್ಲಿ ಬ್ಯಾಂಕಿನಿಂದ ಹಣ ಕಟ್ಟಿ ಎಂದು ನೋಟೀಸ್ ಕೊಡುತ್ತಾರೆ. ಪುನಃ ಬಾವಿ ತೆಗೆಯಲು ಹಣ ಸಿಕ್ಕುವುದಿಲ್ಲ. ಫೈನಲ್ ಬಿಲ್ ಆಗದೆ ಇದ್ದರೆ, ರೈತನ ಗತಿ ಏನಾಗುತ್ತದೆ ! ಸರ್ಕಾರ ಏನು ಸಹಾಯ ಮಾಡಿದಂತಾಗುತ್ತದೆ ? ಅವನು ಇದರಿಂದ ಕಷ್ಟಕ್ಕೆ ಸಿಕ್ಕಿದಂತಾಗುವುದಿಲ್ಲವೇ ? ಮೊದಲು ಅವನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿ. ಅವನಿಗೆ ಕೊಟ್ಟ ಸಾಲವನ್ನು ಬಿಟ್ಟುಬಿಡಿ ಎಂದು ಹೇಳುವುದಿಲ್ಲ. ಆವಷ್ಟುಮಟ್ಟಿಗೆ ಅವನಿಗೆ ರಿಯಾಯಿತಿ ತೋರಿಸಿ. ಇದರ ಬಗ್ಗೆ ಶ್ರೀಮಾನ್ ವೆಂಕಟಗಿರಿಯಪ್ಪನವರು ಹೇಳಿದರು. ಸೆಂಟ್ರಲ್ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಶೇಕಡ 90 ಭಾಗ ಕೊಟ್ಟಿದ್ದಾರೆ. ಆದರೆ ಪ್ರೈಮರಿ ಮಾರ್ಟ್‌ಗೇಜ್ ಬ್ಯಾಂಕ್‌ನವರು ಏನೂ ಕೊಡುತ್ತಾ ಇಲ್ಲ. ಅವನು ಅವರಿಗೆ ಒಂದಕ್ಕೆ ಎರಡರಷ್ಟು ಜಮೀನನ್ನು ಆಧಾರ ಮಾಡುತ್ತಾನೆ. ಆದರೂ ಒಂದು ಕಂತು ಕಟ್ಟದೇ ಹೋದರೆ ನೋಟೀಸ್ ಕೊಡುತ್ತಾರೆ. ಆರೀತಿ ಮಾಡಿ ಅವನನ್ನು ಕಷ್ಟಕ್ಕೆ ಸಿಕ್ಕಿಸಬೇಡಿ. ಅವನಿಗೆ ರಿಯಾಯಿತಿ ತೋರಿಸಿ. ಈಗ ನೀವು ಶೇಕಡ 90 ಪರ್ಸೆಂಟು ಸಾಲವನ್ನು ವಸೂಲ್ಮಾಡಬೇಕೆಂದು ಏನು ಒಂದು ರೂಲ್ ಮಾಡಿದ್ದಾರೋ ಅದನ್ನು 50 ಪರ್ಸೆಂಟಿಗೆ ಇಳಿಸಿ ಜನಗಳಿಗೆ ಸಾಲ ಸಿಕ್ಕುವ ವ್ಯವಸ್ಥೆಯನ್ನು ಮುಖ್ಯಮಂತ್ರಿಗಳು, ಹಣಕಾಸಿನ ಮಂತ್ರಿಗಳು, ಕೋಅಪರೇಷನ್ ಮಂತ್ರಿಗಳು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಪರಿಹಾರ ಕಾಮಗಾರಿಗಳ ವಿಷಯ. ನಮ್ಮ ಕಡೆ ಈಗಾಗಲೇ ಅದನ್ನು ನಿಲ್ಲಿಸಿ ಬಿಟ್ಟಿದ್ದೀರಿ. ತುಮಕೂರು ಜಿಲ್ಲೆಯಲ್ಲಿ 4 ದಿವಸ ಮಾತ್ರ 11, 12 ಇಂಚು ಮಳೆಯಾಯಿತು. ಜಮೀನು ಸ್ವಲ್ಪ ತೇವ ಆಗಿದೆ ಎಂದು ನಿಲ್ಲಿಸಿಬಿಟ್ಟಿದ್ದೀರಿ ಶಾಶ್ವತವಾದ ಖಾಯಂಪರಿಹಾರ ಕಾರ್ಯ ಭಾಗವಾಗಿ 64 ಫ್ಯಾಮಿನ್ ಹೆಡ್‌ನಲ್ಲಿ ಬಾವಿಗಳನ್ನು ತೆಗೆಸಬೇಕೆಂದು ಸರ್ಕಾರ ನಿಗದಿ ಮಾಡಿದೆ. ಅದಕ್ಕಾಗಿ ಸಾವಿರಾರು ಅರ್ಜಿಗಳೂ ಬಂದಿವೆ. ಈಗ ಬಾವಿಗಳನ್ನು ತೆಗೆಸುವುದಕ್ಕಾಗುವುದಿಲ್ಲ ಎಂದು ಏತಕ್ಕೆ ಹೇಳಿದಿರಿ ? ಬಾವಿಯಲ್ಲಿ ನೀರು ಬರದೇ ಇದ್ದರೆ ಸಾಲ ಕೊಟ್ಟಿದ್ದನ್ನು ಬಿಟ್ಟು ಬಿಡುತ್ತೀರಾ ! ಇನ್ನೊಂದು ವಿಷಯ ಏನೆಂದರೆ ಮಾಗಡಿ ಪಾಳ್ಯದ ಸೊಸೈಟಿಗೆ ಆಡಿಟರ್ ಹೋಗಿ ಅಲ್ಲಿರುವ ಪುಸ್ತಕಗಳನ್ನು ತಂದಿದ್ದಾರೆ. ಅವರಿಗೆ ಏನೂ ತೊಂದರೆಯಾಗದಂತೆ ನೋಡಿ ಕೊಳ್ಳಬೇಕೆಂದು ಹೇಳಿ, ನನಗೆ ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಸಿ. ಬೋರಯ್ಯ.—ಮಾನ್ಯ ಸಭಾಧ್ಯಕ್ಷರೇ, ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಅವಿಶ್ವಾಸ ಠರಾವಿನ ಮೇಲೆ ಜವಾಜು ಕೊಡುವ ಸಂದರ್ಭದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ವಿಷಯಗಳ ಬಗ್ಗೆ ರಾಜ್ಯಪಾಲರ ಭಾಷಣಕ್ಕೆ ಜವಾಬು ಕೊಡತಕ್ಕಂಥ ಕಾಲದಲ್ಲಿ ಜವಾಬು ಕೊಡುತ್ತಾರೆಂದು ಅರಿಕೆ ಮಾಡಿಕೊಂಡಿದ್ದು ಈ ಸಭೆಗೆ ಗೊತ್ತಿರಬಹುದು ಎಂದು ಅಂದುಕೊಂಡಿದ್ದೇನೆ.

ಮಾನ್ಯ ಸದಸ್ಯರಾದಂಥ ನಂಜೇಗೌಡರು ಎಂ. ಎಸ್. ಆರ್. ಟಿ. ಸಿ. ಮೇಲೂ ಮತ್ತು ಮಂತ್ರಿಗಳ ಮೇಲೂ ಕೆಲವು ಗುರುತರವಾದ ಅಪಾದನೆಗಳನ್ನು ಮಾಡಿದ್ದಾರೆ.

Point of order whether a Minister can reply to points raised in connection with No-confidence Motion already disposed of while replying to debate on Motion of Thanks.

SRI K. H. RANGANATH (Mudigere).—I rise to a point of order, Sir The Hon. Deputy Minister while opening his speech, he was pleased to say that he is now replying to the remarks made during the debate on the motion of no-confidence. He prefaced his speech by saying to that effect. In fact, the reply to the Motion of Thanks can only be given by

(SRI K. H. RANGANATH)

the Mover of the motion namely Sri D. M. Siddiah. In fact, we are not in the chapter of no-confidence. That chapter is over. Probably the Deputy Minister does not know many of the rules. It is not in order now for the Hon. Deputy Minister to reply to the debate that took place in respect of the no-confidence motion today. Now the reply has to be in respect of the Motion of Thanks.

SRI M. NAGAPPA.—In substantiating the point of order raised, I wish to draw attention to rule 288 of the Rules of Procedure, which clearly lays down that a Member while speaking shall not reflect on any determination of the Assembly except on a motion for rescinding it. The Hon. Chief Minister or any Minister who was replying to the debate on that particular motion, could have replied to all points raised. Otherwise, it only means that Governmennt has no answer to those points. That is the only inference that can be drawn. No member is entitled to speak about that motion because the debate is over and the House has also given its determination because it has been put to vote. Any attempt to reply to those points amounts to a reflection on the decision of the House. I therefore submit that the Hon. Deputy Minister may not be permitted to refer to those matters which have been discussed at the time of no-confidence motion.

MR. DEPUTY SPEAKER —The Minister will reply to the debate on Motion of Thanks. In the meanwhile he is not prevented from touching on other points.

SRI M. NAGAPPA.—Rule 288 (iv) says : that a Member should not reflect on any determination of the Assembly except on a motion for rescinding it.

SRI S. SIVAPPA.—Sir, the point before the House is the Motion of Thanks to the Governor. The Hon. Deputy Minister prefaced his speech by saying that he is going to reply to the points raised in connection with the no-confidence motion yesterday. That means that motion is still alive. But that motion has been already decided upon and disposed of.

SRI VEERENDRA PATIL.—Sir, I wish to submit to the Hon. House that yesterday when I was replying to the debate on the no-confidence motion in the beginning itself, I made it clear that several allegations were made and several observation were made but, I am going to confine myself only to one issue, that is, the judgement passed by the High Court and also the Supreme Court in regard to the excise sales in Myosre State. I also said that with the permission of the Chair, I am taking another opportunity because I knew that opportunity was going to come to me today while replying to the debate on the Motion of Thanks. I said so far as the other allegations and charges are concerned, I will reply to them today. Instead of my replying to all the points, I requested my colleagues to reply to some of the points. If I alone have to

reply to all the points, it will take a lot of time. I cannot dwell on those points in greater detail. That is why I have requested other Ministers and believe the Government has got every power to make a statement and clear the position in respect of allegations made on any Minister or the Government.

Sri K. H. PATIL.—Sir, the point is, that we are not guided by our wishes. We are to be guided by the rules of procedure. Yesterday, we had the no-confidence motion and that is over. It was put to vote and disposed of. It was decided by the House. In fact the Hon. Chief Minister did exercise the right of reply. Even rule 294 was applied. If he could not reply to some of the points raised yesterday, we can only draw the inference that the Government had nothing to say in the matter.

But during the Motion of Thanks to the Governor, he wants to reply to the points which were raised in the course of discussion on no-confidence motion. That would not be according to rules. That is not in order. That is my respectful submission.

Sri H. M. CHANNABASAPPA (Periyapatna).—Sir, it may be said that the Chief Minister yesterday evaded answering some of the serious allegations made against the Government at the time of the no-confidence motion. We cannot prevent him from saying anything he wants. Or he may not say. But now when the Motion of no-confidence is not before us, if a Member wants to speak and specifically says that he is replying to the points raised at the time of the no-confidence motion, to say the least, it becomes irrelevent, and it is not in order. I can see the force of the argument put forward by the Hon. Chair. We cannot prevent a member from saying what he wants or what he feels. But the Chair can prevent any member from saying what is irrelevant. What is relevant for discussion now is the points that have been referred by the Members of this House on the Motion of Thanks. If any Members wants to cover all subjects from Cape Camorin to Himalayas, it is certainly for the Chair to say that it is irrelevent and he may confine himself to the point at issue.

Sri K. H. PATIL.—Sir, I further raise the point that under the rules the Minister has no right of reply. That is the point I am trying to canvass here. The Hon. Chair has given a ruling yesterday. The right of reply vests under rule 294 only with the mover of the motion, who in this case is Sri D. M. Siddiah and he alone can have the right of reply. The Council of Ministers has no right of reply. At best they can seek your permission to speak or intervene in the debate. But it cannot be considered as reply and if Sri D. M. Siddaiah does exercise his right of reply, it has only to be inferred that these proceedings are recorded and there is no reply. This Ministry has no right of reply.

Mr. DEPUTY SPEAKER.—The Government has got a right of reply. Rule 22 provides for such a right of reply and I cannot curtail the right of reply of Government.

Sri K. PUTTASWAMY.—Sir, may I draw your attention to rule 22 ?

Sri D. M. SIDDAIAH.—In supporting the motion, the Minister has got a right of reply under Rule 22.

Sri K. H. PATIL.—It is only right of explanation and not a reply. If the Hon. Chief Minister wants to give an explanation, it can be done. Under rule 22 he has no right of reply. Under rule 294 any other member has a right of speaking with the permission of the Chair. That is what I am submitting. If the Chief Minister is now allowed, then Sri D. M. Siddiah will lose the right of reply.

[MR. SPEAKER in the Chair].

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ರಂಗನಾಥ್‌ರವರು ಕ್ರಿಯಾಲೋಪ ಎತ್ತಿದ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ. ನಿನ್ನೆ ಅವಿಶ್ವಾಸ ನಿರ್ಣಯ ತೀರ್ಮಾನವಾಗಿದೆ. ಸರಕಾರ ಉತ್ತರ ಕೊಡಬೇಕಾದರೆ ಅವರ ಅನುಕೂಲಕ್ಕೆ ತಕ್ಕಂತೆ ತನಗೆ ತಾಪತ್ರಯವಾಗುವ ಸಂಗತಿ ಬಿಟ್ಟು ಉಳಿದ ವಿಚಾರಗಳಿಗೆ ಉತ್ತರ ಕೊಟ್ಟಿರಬಹುದು. ಬಹುಶಃ ನಾವು ಮಾಡಿದ ಅಪಾದನೆಗಳಿಗೆಲ್ಲಾ ಉತ್ತರ ಕೊಡುವುದಕ್ಕೆ ಪ್ರಯತ್ನಪಟ್ಟಿದ್ದರೆ ಸರಕಾರದ ಪಕ್ಷದವರೂ ಸೇರಿ ಓಟ್‌ಡೌನ್ ಮಾಡುತ್ತಿದ್ದರೋ ಏನೋ. ನೆನ್ನೆ ಆ ಒಂದು ಭಯದಿಂದ ಪ್ರಬಲವಾದ ಅಪಾದನೆಗಳಿಗೆ ಉತ್ತರ ಕೊಡದೆ ಇವೇಡ್ ಮಾಡಿದರು. ಇವತ್ತು ಒಂದು ಗಂಡಾಂತರ ಕಳೆದಿದೆಯೆಂದು, ಅವಿಶ್ವಾಸ ನಿರ್ಣಯದ ಸಂದರ್ಭದಲ್ಲಿ ಮಾಡಿದ ಆಪಾದನೆಗಳಿಗೆ ಉತ್ತರ ಕೊಡುವುದಕ್ಕೆಪ್ರಾರಂಭಿಸಿದರೆ ನಾವು ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಈ ರೀತಿ ಉತ್ತರ ಕೊಟ್ಟರೆ ಈ ಸಭೆಯ ತೀರ್ಮಾನವೇನಾಗಿದೆ ಅದನ್ನು ಪ್ರಶ್ನೆಮಾಡಿದಂತಾಗುತ್ತದೆ. ಅದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ.

Sri M. S. KRISHNAN.—On a point of order, Sir. I have heard with attention what the Chief Minister stated. He could not answer all the allegations made by the members and that is why he reserved one point raised in the no-confidence motion and he wants to divide other points amongst other Ministers. During the no-confidence motion several other points were raised by members. My submission is, that the Chief Minister cannot do so. Why I am saying is, rule 22 says that the Chief Ministsr or any other Minister can explain. Rule 22 specifically provides for right of explanation on the motion of thanks and not on the no-confidence motion. In the circumstances the Chief Minister can reply by way of explanation. Secondly he can do or some other Minister may do but not both. Subsequently it also states "at the end of the discussion". It means one person can have the right of reply and not all persons. Supposing one Minister has to say something and he is permitted, the other Ministers also can be permitted. But that is not envisaged in rule 22. It specifically states Chief Minister or any other Minister and not all Ministers. That is the interpretation of rule 22. Then, the Chair also has to fix up the time.

Mr. SPEAKER.—I believe the member credits the Presiding Officer with intellegence enough to understand him.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ನಾನು ಈ ಸಭೆಯ ಕಾಲವನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ರೂಲ್ 25ರ ಪ್ರಕಾರ ಮಂತ್ರಿಮಂಡಲದ ಎಲ್ಲಾ ಸದಸ್ಯರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಿ, ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರಗಳಿಗೆ ಉತ್ತರವನ್ನು ಹೇಳುವುದಕ್ಕೂ ಮತ್ತು ಸರ್ಕಾರದ ನಿಲುವನ್ನು, ಧೋರಣೆಯನ್ನು ಈ ಸಮಯದಲ್ಲಿ ನಿರೂಪಿಸುವುದಕ್ಕೂ ಅವಕಾಶವಿದೆ.

Sri K. H. RANGANATH.—I want to make a clarification.

Mr. SPEAKER.—Does the member want to obstruct the hon. Minister ? I have permitted the Hon. Minister to state the views of the Government.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದಂತಹ ಕೃಷ್ಣನ್‌ರವರು ಕ್ರಿಯಾಲೋಪವನ್ನು ಎತ್ತಿದ್ದಾರೆ ಅದಕ್ಕೆ ಉತ್ತರವಾಗಿ ಹೇಳುತ್ತಾ ಇದ್ದೇನೆ.

Sri K. H. RANGANATH.—I want to say afew words before the hon. Minister speaks.

Mr. SPEAKER.—I request the hon. Member to allow the hon. Minister to finish his speech.

Sri K. H. RANGANATH.— He is misinterpreting. Let me explain the situation. My point of order was seized by the House and discussion was going on it. The point of order raised by me was quite different. The hon. Minister for Parliamentary Affairs was not present when I raised the point of order and dwelt on it.

Mr. SPEAKER.—At my request, the hon. Minister for Parliamentary Affairs is explaining the position. After I heard Sri M. S. Krishnan, I wanted to hear the hon. Minister also with respect to the point of order so that he might help the Chair. So the hon. Minister may be allowed to state the point of view of the Government first.

Sri K. H. RANGANATH.—My point is this: when my point of order is under discussion, can the Chair simultaneously allow another point of order ? Can you not kindly bear with me for a minute and allow me to explain the position ?

Mr. SPEAKER.—First let the hon. Minister finish his statement. Then I shall hear Sri Ranganath.

† ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ನಾನು ಏನು ಉದ್ದೇಶಪಟ್ಟಿದ್ದೆನೋ ಅದಕ್ಕೆ ಭಂಗ ಬರುತ್ತಾ ಇದೆ. ಮಾನ್ಯ ಸದಸ್ಯರಾದಂತಹ ಕೃಷ್ಣನ್‌ರವರು 22ನೇ ರೂಲ್ ಪ್ರಕಾರ ಕ್ರಿಯಾಲೋಪ ಲೋಪವನ್ನು ಎತ್ತಿದ್ದಾರೆ. ಅದರ ಪ್ರಕಾರ ಮುಖ್ಯಮಂತ್ರಿಯವರಾಗಲಿ ಅಥವಾ ಬೇರೆ ಯಾವುದಾದರೂ ಬೇರೆ ಮಂತ್ರಿಗಳನರಾಗಲಿ ತಮ್ಮ ಅಪ್ಪಣೆಯನ್ನು ಪಡೆದು ಈ ಸಭೆಯಲ್ಲಿ ಚರ್ಚೆಯಾದಂತಹ ಅಂಶಗಳಿಗೆ ಉತ್ತರ ರೂಪವಾಗಿ ತಮ್ಮ ನಿಲುವನ್ನು ಹೇಳಬಹುದು ಎಂದು ಹೇಳಿದ್ದಾರೆ. ಅದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಸ್ವಾಮಿ ಈ ರೂಲ್ 22ರ ಪ್ರಕಾರ ಮುಖ್ಯ ಮಂತ್ರಿಯವರು ಮತ್ತು ಅವರ ಸಹೋದ್ಯೋಗಿಗಳು ಮಂತ್ರಿಮಂಡಲದ ಎಲ್ಲಾ ಸದಸ್ಯರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಇದೆ. ಭಾಗವಹಿಸಿ ಮಾನ್ಯ ಸದಸ್ಯರು ಚರ್ಚೆಯಲ್ಲಿ ಹೇಳಿರತಕ್ಕ ಅಂಶಗಳಿಗೆ ಉತ್ತರವನ್ನು ಹೇಳುವುದಕ್ಕೂ ಮತ್ತು ಸರ್ಕಾರದ ಬಾಕಿ ಇತರ ವಿಚಾರಗಳಲ್ಲಿ ಸಾರ್ವನಿಕರ ಹಿತಾಸಕ್ತಿಗಳನ್ನು ಸಾಧಿಸುವುದಕ್ಕೆ ಬೇಕಾದಂತಹ ವಿಚಾರಗಳಲ್ಲಿ ಸರ್ಕಾರದ ನಿಲುವು ಏನು ಧೋರಣೆ ಏನು ಎಂಬುದನ್ನು ಹೇಳುವುದಕ್ಕೂ ಕೂಡ ಅವಕಾಶವಿದೆ ಅಂತ ನನ್ನ ತಿಳವಳಿಕೆ. ಆ ಕಾರಣದಿಂದ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಕೃಷ್ಣನ್‌ರವರು ಎತ್ತಿರತಕ್ಕ ಕ್ರಿಯಾಲೋಪ ಸರಿಯಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಕೆ. ಎಚ್. ರಂಗನಾಥ್.— ನಾನು ಮಾತನಾಡುವುದಕ್ಕಿಂತ ಮುಂಚೆ ತಮ್ಮ ರಕ್ಷಣೆಯನ್ನು ಕೇಳುತ್ತಾ ಇದ್ದೇನೆ. ಏಕೆಂದರೆ ಈ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರು ನಮ್ಮನ್ನು ಒಂದು ತರಹ ದುರುಗುಟ್ಟಿಕೊಂಡು ನೋಡುತ್ತಾರೆ, ಅದು ಸರಿಯಲ್ಲ. ನಾನು ಈ ಮನೆಯ ಸದಸ್ಯನಾಗಿ ಮಾತನಾಡುವಾಗ ಇಲ್ಲಿ ಮಾತನಾಡುವುದಕ್ಕೆ ನನಗೆ ಒಂದು ಹಕ್ಕು ಇದೆ. ಅವರೇನಾದರೂ ಆ ರೀತಿ ದುರುಗುಟ್ಟಿಕೊಂಡು ನೋಡುವುದಾದರೆ ಅವರ ಮನೆಯಲ್ಲಿ ನೋಡಿಕೊಳ್ಳಬಹುದು, I may be touchy. Even now, he is looking at me in that very fashion. You can see his face.

ಶ್ರೀ ಕೆ. ಪುಟ್ಟಸ್ವಾಮಿ.—ಹಸನ್ಮುಖಿಯಾಗಿಯೇ ನೋಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ದಯಮಾಡಿ ತಮ್ಮನ್ನು ಕೇಳಿಕೊಳ್ಳುತ್ತಾ ಇದ್ದೇನೆ, ತಾವು ಅವರಿಗೆ ತಿಳಿಸಬೇಕು. ಅವರು ಏನು ತಿಳಿದುಕೊಂಡಿದ್ದಾರೆ ಎಂದರೆ ನಾವೆಲ್ಲ ಕೆಲಸಕ್ಕೆ ಬಾರದವರು ಕಾಲಕಳೆಯುವುದಕ್ಕೆ ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಾ ಇದ್ದೇವೆ ಎಂಬ ಅಭಿಪ್ರಾಯವನ್ನು ಇಟ್ಟುಕೊಂಡು ಆ ರೀತಿ ನಮ್ಮ ಕಡೆಗೆ ನೋಡುತ್ತಾ ಇರುತ್ತಾರೆ, ಹಾಗೆ ಮಾಡಬಾರದು ಎಂದು ತಾವು ಅವರಿಗೆ ಹೇಳಬೇಕು.

Sri K, PUTTASWAMY.—The hon. Member seems to have mistaken me. There is no reason for me to stare at him or look at him.

Sri K. H. RANGANATH.—While the Hon. Deputy Minister for Transport and Tourism started replying today, he prefaced his speech by saying that he wanted to reply to some of the allegations made by the hon. Member Sri H. N. Nanje Gowda yesterday while speaking on the Motion of No-Confidence. Immediately I raised a point of order that to-day he could not do so because that Motion was not before the House, and the House, was not seized of it. The House is seized today only of the Motion of Thanks moved by Hon. Siddiah and in reply to that references made with regard to the Governor's Address could be replied and that the points raised during the speeches made on the No-Confidence Motions should not be replied. That was my point of order. My objection was that the Hon. Deputy Minister was not in order if he replied to the references made during the debate on the No-Confidence Motion. I was substantiating my point of order. In the meanwhile, the Hon. Minister for Parliamentary Affairs came to the House. Probably he might not have heard what was stated by the Deputy Minister for Transport in this House some time ago, The Hon. Member Sri M. S. Krishnan also might have come in the middle of my speech on my point of order. Sri Krishnan referred to rule 22 in respect of his point of order.

Sri K. PUTTASWAMY.—A point of personal explanation with the permission of the Chair. I am sorry Sri Ranganath has mistaken me.

Sri H. N. NANJE GOWDA.—When this point was raised, the Hon. Speaker was in his Chamber. This was raised under Rule 288 (4).

Sri K. PUTTASWAMY.—It is a point of personal explanation. If you permit me I want to say a few words.

I am sorry, the Hon Member Sri Ranganath has mistaken me. I am sorry to say that I was not aware of the fact that he had raised a point of order earlier. I came a bit late from the Hon. Speaker's Chambers. Then Sri M. S. Krishnan who had raised a point of order under Rule 22, was speaking. Then you were pleased to give permission to me to put forth Government's views and I spoke. In the meanwhile, Sri Ranganath sought your permission to explain his point of order, once again. Had I known earlier that the House was seized by his point of order, I would never have interfered. I think I have with humility enough recognized that every Member of this House is as respectable as any other, either the Chief Minister or even the presiding Officer. I never lack in my respect or regard for any hon Member of this House.

MR. SPEAKER.—I heard the Hon. Members Sri Krishnan and Sri Ranganath and the Hon. Minister for Parliamentary Affairs as to the scope of the answer to be given on behalf of the Government. This rule has been interpreted in the past in a particular manner. The previous proceedings show that replies were given not only by one Minister but by a number of Ministers on behalf of the Government and that position obtains not only here but in other legislatures also. The interpretation of the words ' Chief Minister or any other Minister' means Chief Minister and other Ministers. Though the singular is used, the singular includes the plural also unless there is anything in the context prohibiting it. So I do not find any force in the point raised by the Hon. Member Sri Krishnan.

The second question is when the bebate is complete ? Every Minister is a member of this House and if he wants to intervene in the debate, no rule prohibits him from intervening before the final reply is given. Therefore, if the hon. Ministers want to intervene, I think there would be no objection to it and the Chair cannot prevent them from intervening. So, there is also no force in this point raised by the Hon. Member Sri Krishnan.

As regards the contents of the reply, several matters are included in the Governor's Address. All those matters and the matters contained in the amendments tabled by hon. Members are before the House and if the Hon. Minister wants to reply to them, I think there is no rule to preclude him.

SRI K. H. RANGANATH.—Before the Chair completes the ruling, I whould like to submit the context in which the point of order was raised. The Hon. Deputy Minister prefaced his speech saying that he whould reply to the points raised by ths hon. Member Sri H. N. Nanje-Gowda yesterday on the no-confidence motion. Therefore, I raised the point of order. Now he cannot reply to the no-confidence motion since that is not before the House today.

MR. SPEAKER.—The reply can be with respect to the contents of the Governor's Address, the amendments Tabled by hon. Members and all the speeches made here.

SRI K. H. RANGANATH.—The Deputy Minister prefaced his speech by saying that he wanted to reply to the allegations made by the Hon. Member Sri Nanje Gowda on the no-confidence motion. Therefore, my point of order is that he would not be in order to reply to the motion of no-confidence which concluded yesterday itself. That motion is not before the House today.

SRI H. N. NANJE GOWDA.—The difficulty is that the Deputy Speaker was in the Chair when the Deputy Minister rose to reply and you have come now. Therefore, if you find it difficult to follow what happened in your absence, you may refer to proceedings.

SRI S. SIVAPPA.—A simple proposition has been made complex. The present motion is so comprehensive that the Deputy Minister could

(SRI S. SIVAPPA)

reply to any speech, but he prefaced his speech by saying that he would reply to the points raised in the no-confidence motion. Therefore the Deputy Minister has gone wrong.

ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ನನಗೆ ಸಂಬಂಧಪಟ್ಟ ವಿಷಯಗಳಿಗೆ ನಾನು ಉತ್ತರ ಕೊಟ್ಟೆ. ಇನ್ನುಳಿದ ವಿಚಾರಗಳಿಗೆ ಉತ್ತರ ಹೇಳುವುದಕ್ಕೆ ಅವರಿಗೆ ಅವಕಾಶ ಕೊಟ್ಟಿದೆ ಎಂಬ ಮಾತನ್ನು ಮುಖ್ಯ ಮಂತ್ರಿ ಹೇಳಿದ್ದಾರೆ ಅಧ್ಯಕ್ಷರು ಅದನ್ನೂ ಗಮನದಲ್ಲಿ ಇಟ್ಟುಕೊಳ್ಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ನಾನು ಅವಿಶ್ವಾಸನಿರ್ಣಯದ ಬಗ್ಗೆ ಉತ್ತರ ಕೊಡುವಾಗ ಎಕ್ಸೈಜ್ ಕೇಸಿನ ವಿಚಾರದಲ್ಲಿ ಮಾತ್ರ ನಾನು ಆ ಹೈಕೋರ್ಟಿನವರು ಮತ್ತು ಸುಪ್ರೀಂ ಕೋರ್ಟಿನವರೂ ಒಂದು ತೀರ್ಮಾನ ಕೊಟ್ಟಿದ್ದ ಕಾರಣ ಅದರ ಬಗ್ಗೆ ಮಾತನಾಡುತ್ತೇನೆ. ಎಲ್ಲಾ ವಿಷಯಗಳಿಗೂ ಉತ್ತರ ಕೊಡುವುದಕ್ಕೆ ಆಗ ಸಮಯ ಇರಲಿಲ್ಲ, ಆಪಾದನೆಯಲ್ಲಿ ಕಾವೇರಿ, ಹಾರಂಗಿ ಹೀಗೆ ಎಷ್ಟೋ ವಿಚಾರಗಳು ಬಂದಿದ್ದವು, ಆದರೆ ಸರ್ಕಾರದವರು ಉಳಿದ ವಿಚಾರಗಳ ಬಗ್ಗೆ ಯಾವಾಗ ಬೇಕಾದರೂ ಆ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶವಿದ್ದೇ ಇದೆ ಎಂದು ಹೇಳಿದ್ದೆ.

SRI H. N. NANJE GOWDA.—The Deputy Minister has conveniently avoided replying yesterday. If the reply had been given yesterday, the sense of the House would have been different. Sub-rule (v) of rule 288 says that a member while speaking shall not reflect on any determination of the Assembly except on a motion for rescinding it. The Assembly has already voted on the no-confidence motion. If the matters raised in the no-confidence motion were to be replied today, it means that we are reflecting on the determination of the Assembly.

MR. SPEAKER.—On the point whether there could be any debate on the motion of no-confidence which has been disposed of by this House, I have no doubt in my mind that the motion is over and no reference to that can be made now. But without making reference to the no-confidence motion the Hon. Ministers can refer to those matters in the course of their reply.

SRI K. H. PATIL.—I rise to a point of order, Sir. I recall to the memory of the Hon. Chair that yesterday a ruling has been given by the Chair that rule 294 is applicable to the Governor's Address. The motion has been moved by the hon. Member Sri Siddaiah and under rule 294 the right of reply is that of the hon'ble Member Sri Siddaiah. It does not mean that the Ministers cannot explain the position; they can do so with the permission of the Chair. They have started as if they have the right of reply; that is not so. They had certainly the right of explanation only with the permission of the Chair and that too after the mover has replied. Here the question is that the mover has not replied at all probably because he has nothing to reply and so the Government has no right to speak either by way of explanation or reply. Therefore, the Deputy Minister or the Chief Minister cannot be allowed to reply to this debate, and the motion may straightaway be put to vote and decision taken.

MR. SPEAKER.—I cannot prevent the Hon. Ministers from interven, ing in the debate before the mover Sri Siddiah has spoken. Of course, he will also reply.

Sri K. H. PATIL.—The Hon. Member Sri Siddaiah has not at all attempted to reply. Now that the Government has come forward to reply, he has lost the right which he had. Now the qnestion is whether these people have now got the right of reply or not. I say they have lost the right of reply.

Mr. SPEAKER.—Why does the Hon. member say so?

Sri K. H. PATIL.—When the Hon. Deputy Minister rose the Deputy Speaker was in the Chair and he called upon him to reply.

Mr. SPEAKER. -He might have intervened at that time.

Sri K. H. PATIL.—No. A point of order was raised then. It was then pointed out that he was replying.

Mr. SPEAKER.—The way of speech is peculiar to each member whether he be a member or a Minister. If he were to reply to the points raised by Sri K. H. Patil he might say "I want to reply to the points raised by Sri K.H. Patil." That does not mean that he was replying. I take it that he was only intervening in the debate.

Sri K. H. PATIL.—I accept that every member has got a right to make his speech in a particular way. I have no objection to that. But if they claim that they have got a right of reply, it is certainly against the rule because the rule is very clear on that point.

Mr. SPEAKER.—Nobody can prevent them from intervening in the debate.

Sri K. H. PATIL.—My point is that the right of reply cannot be given to the Government again because he has started his speech as a right of reply.

Mr. SPEAKER.— After the mover of the motion replies, if the Chief Minister again wants to reply he may do so with the permission of the Chair .

Now, the Deputy Minister, Sri H. C. Boraiah, may reply without making a refe ence to the no-confidence motion which was rejected by this House.

Motion of Thanks to the Governor's Address

(Continued)

ಶ್ರೀ ಎಚ್. ಸಿ. ಬೋರಯ್ಯ.—ಎಂ.ಎಸ್.ಆರ್.ಟಿ.ಸಿ.ಗೆ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಇಲ್ಲವೆಂದು ಏನು ಹೇಳಿದ್ದಾರೆಯೋ ಅದು ನಿಜವಾದುದಲ್ಲ. ಅದರ ಆಡಳಿತವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವುದಕ್ಕೆ ಮತ್ತು ದಕ್ಷತೆಯಿಂದ ಕೆಲಸ ಮಾಡಿಕೊಂಡು ಹೋಗುವುದಕ್ಕೆ ಬೇಕಾದಷ್ಟು ಕಾನೂನುಗಳನ್ನು ಮಾಡಿಕೊಂಡಿದ್ದಾರೆ. ಅದಕ್ಕೆ ಒಂದೆರಡು ಉದಾಹರಣೆಗಳೂ ಕೂಡ ಇವೆ. ಆಡಳಿತಕ್ಕೆ ಸಂಬಂಧಪಟ್ಟಂತೆ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಇವೆ. ಅಲ್ಲಿನ ನೌಕರರನ್ನು ನೇಮಕ ಮಾಡಿಕೊಳ್ಳುವುದಕ್ಕೂ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಸಹ ಇವೆ. ಹೀಗೆ ಪ್ರತಿಯೊಂದಕ್ಕೂ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಮಾಡಿಕೊಂಡು ದಕ್ಷತೆಯಿಂದ ಅಲ್ಲಿನ ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಮಂತ್ರಿಗಳು ಎಂ. ಎಸ್. ಆರ್. ಟಿ. ಸಿ. ಗೆ ಚೇರ್‌ಮನ್ ಆಗಿದ್ದಾರೆ. ಇದು ಭಾರತ ದೇಶದಲ್ಲಿ ಎಲ್ಲಿಯೂ ಇಲ್ಲ.

Sri H. N. NANJE GOWDA.—Just now the Chair gave a ruling that no matter which was referred to in the no-confidence motion should be referred to by the Deputy Minister, but he is referring to it.

Mr. SPEAKER.—I have not given that ruling. It must have been referred to in some amendment. I only said that he should not make a reference to the no-confidence motion and that without making any reference to that he can explain the position of the Government.

Sri H. N. NANJE GOWDA.—I was the only person who spoke about this on the no-confidence motion. Nobody referred to this in the discussion on the Governor's Address.

Mr. SPEAKER.—My ruling is that they need not make any reference to the no-confidence motion, but they can reply to the points referred to in the Governor's Address, in the amendments given by members to the motion of thanks and also in the speeches made in the course of the debate on the Governor's Address. The Minister is very well within his right to reply to the points with regard to the activities of the Road Transport Corporation.

Sri M. S. KRISHNAN.—You were pleased to rule that he could reply only to the points raised during the course of the debate on the Governor's Address, but the Deputy Minister is replying to the points raised during the debate on the no-confidence motion. This particular point was not referred to either in the amendments or in the speeches of members on the motion of thanks. You may please look into the records and allow him to refer to this only if you find that this point was referred to in the discussion on the Governor's Address by any member. I submit that till then you should not allow him to reply to this point.

Mr. SPEAKER.—There is no force in the point of order. The Hon. Deputy Minister may reply with regard to the working of the Road Transport Corporation.

Sri K. H. RANGANATH.—You may kindly see from the records whether these points were raised during the course of the debate on the Governor's Address and then only allow him to reply.

Mr. SPEAKER.—It is left to every Minister to choose the manner of his reply. Now the Deputy Minister can refer to the working of the Road Transport Corporation and fully explain Government's stand, but he should not make any reference to any speech made during the course of the no-confidence motion. Without making reference to that he can explain the working of the Road Transport Corporation.

4.00 P.M.

† ಶ್ರೀ ಎಚ್. ಸಿ. ಬೋರಯ್ಯ.—ನಮ್ಮ ಎಂ. ಎಸ್. ಆರ್. ಟಿ. ಸಿ. ಸ್ಥಾಪನೆಯಾದನಂತರ ಮಂತ್ರಿಗಳನ್ನು ಇದರ ಚೇರ್‌ಮೆನ್ ಆಗಿ ವ್ಯವಹಾರಗಳನ್ನು ನಡೆಸಿಕೊಂಡು ಬರುತ್ತಿದ್ದರು. ನಂತರ ಒಬ್ಬ ವೈಸ್ ಚೇರ್‌ಮೇನನ್ನು ಮಾಡಿದರು. ಇವರ ಉಪಯೋಗಕ್ಕೆ ಒಂದು ಕಾರನ್ನು ಕೊಟ್ಟಿದ್ದಾರೆ. ಅವಶ್ಯಕತೆ ಬಿದ್ದಾಗ ಅದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇವನ್ನೆಲ್ಲಾ

ಕಾನೂನು ಇಲ್ಲದೆ ಮಾಡುತ್ತಾ ಇಲ್ಲ. ಇವರಿಗೆ ಹೊರಗಡೆ ಹೋಗತಕ್ಕ ಸಂದರ್ಭಗಳು ಬಂದೇ ಬರುತ್ತವೆ. ಮದ್ರಾಸ್, ಬೊಂಬಾಯಿ ಮುಂತಾದ ಪ್ರಾಂತ್ಯಗಳಿಗೆ ಈ ಇಂಟರ್ ಸ್ಟೇಟ್ ಪರ್ಮಿಟ್ ಮುಂತಾದುವುಗಳಿಗೆ ಹೋಗಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೋಗುತ್ತಾರೆ. ಅಲ್ಲಿ ಹೋಗತಕ್ಕ ಕಾಲದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು, ಅಲ್ಲಿನ ಮಂತ್ರಿಗಳನ್ನು ಭೇಟಿ ಮಾಡಬೇಕಾಗುತ್ತದೆ. ಅದರ ಪ್ರಕಾರ ಮಂತ್ರಿಯವರು ಎಲ್ಲಿಯಾದರೂ ಹೋದರೆ ಅವರು ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತಾರೆ.

Sri H. N. NANJE GOWDA.—Supposing a Minister goes for a Conference and he may not attend the meeting, but draws the T.A.?

Mr. SPEAKER.—The Hon. Minister is not yielding. Any time consumed for interruption, be he a Minister or a Member, will be at the expense of the Member speaking.

ಶ್ರೀ ಎಚ್. ಸಿ. ಬೋರಯ್ಯ.—ಮತ್ತು ಮಂತ್ರಿಗಳು ಹಾಗೆ ಹೋಗುವಾಗ ತುಂಬಾ ಜವಾಬ್ದಾರಿಯುತವಾಗಿದ್ದಾರೆಂಬುದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕಾಗಿದೆ. ಎಲ್ಲಿಯಾದರೂ ಅವರು ಕಾರ್ಪೋರೇಷನ್ ಕೆಲಸಕ್ಕೆ ಹೋಗುತ್ತಾರೆ ಮತ್ತು ಮಾಡಿಕೊಂಡು ಬರುತ್ತಿದ್ದಾರೆ. ಅವರು ಯಾವ ರೀತಿಯಲ್ಲೂ ವಿಹಾರಾತ್ಮಕವಾಗಿ ಹೋಗುತ್ತಾ ಇಲ್ಲ. ಇನ್ನು ನಮ್ಮ ಎಂ. ಎಸ್. ಆರ್. ಟಿ. ಸಿ.ಯ ಆಡಳಿತವನ್ನು ಉತ್ತಮಪಡಿಸುವುದಕ್ಕೋಸ್ಕರ ಒಂದು ಬಿಸಿನೆಸ್ ಕನ್‌ಸಲ್ಟೇಟಿವ್ ಕಮಿಟಿ ಎಂದು ನೇಮಕ ಮಾಡಿತ್ತು. ಇದಕ್ಕೆ ಸುಮಾರು ಎರಡೂವರೆ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಅವರು ರಿಪೋರ್ಟು ಕೂಡ ಕೊಟ್ಟಿದ್ದಾರೆ. ಅದನ್ನೆಲ್ಲಾ ಪರಿಶೀಲನೆ ಮಾಡುತ್ತಿದ್ದಾರೆ; ಮತ್ತು ಅದರಲ್ಲಿ ಏನೇನು ಶಿಫಾರಸುಗಳು ಇವೆ ಅವುಗಳನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದೆ ಮತ್ತು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರ ಆಡಳಿತವನ್ನು ಉತ್ತಮಪಡಿಸುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆ. ಇನ್ನೂ ನಮ್ಮಲ್ಲಿ ಚೀಫ್ ಮೆಕ್ಯಾನಿಕಲ್ ಇಂಜಿನಿಯರ್ ಪೋಸ್ಟು ಇದೆ, ಆದರ ಬಗ್ಗೆ ಅದಕ್ಕೆ ಭರ್ತಿ ಮಾಡತಕ್ಕ ಕಾಲದಲ್ಲಿ ನಾವು ಅಡ್ವರ್ಟೈಸ್ ಮಾಡಿ ಆಲ್ ಇಂಡಿಯಾದಿಂದ ಬಂದಿರತಕ್ಕ ಅನೇಕರನ್ನು ಇಂಟರ್‌ವ್ಯೂ ಮಾಡಿ......

Sri K. H. PATIL.—Sir, may I bring to the notice of the Chair that Deputy Minister is reading something written by somebody else ? There should not be one rule to the Opposition and another rule to the Treasury Bench.

Mr. SPEAKER.—The rule is that the Members should not read. But, there is exception in respect of Ministers. They can read from a written statement or a written document.

Sri H. C. BORIAH.—Sir, I am only referring and speaking. ಅವರಿಗೆ 750 ರೂಪಾಯಿ ಮೊದಲು ಡೆಪ್ಯೂಟಿ ಮೆಕ್ಯಾನಿಕಲ್ ಇಂಜಿನಿಯರ್ ಆಗಿ ಬರುತ್ತಿತ್ತು. ಅವರಿಗೆ ನಂತರ ಕೇಡರ್ ರೂಲ್ಸ್ ಪ್ರಕಾರ 1,500 ರೂಪಾಯಿ ಕೊಡಬೇಕಾಗುತ್ತದೆ.

Sri H. N. NANJE GDWDA.—Sir, I rise to a Point of Order and my Point of Order is this. The Hon. Deputy Minister is saying regarding the appointment of the Chief Mechanical Engineer, which I referred to in the discussion on the 'No-confidence' motion. I alleged this particular instance, and I keep it with me. It is my privilege to see that I am not mistaken by the public. What I said was that in the interview the Government selected and helped their own henchmen. Please refer to page 1043 of the Mysore Civil List. What the Deputy Minister is saying is not in order. He is misleading this House, and his misleading the House is not in order.

Mr. SPEAKER.—The Hon. Member cannot intervene like that.

Sri H. N. NANJE GOWDA.—Sir, you were kind enough to give a Ruling that no matter referred to, in the 'No-confidence' motion should be replied. Since they have replied, I think, we have got a right to challenge this selection. Serial Number 1 was drawing a salary of Rs. 800 and serial number 2, Rs. 720. Some others had also applied. Now the Minister says that it was done according to the Cadre and Recruitment Rules. They have helped their own henchmen.

Mr. SPEAKER.—I have heard the hon. Member. I do not find any forc in his argument. I have allowed the Deputy Minister to speake about the working of the M.S.R.T.C. But the Hon. Minister should not rfere to the points in the 'No-confidence' motion.

† ಶ್ರೀ ಎಚ್. ಸಿ. ಬೋರಯ್ಯ.—ಅನೇಕ ಮಾನ್ಯಸದಸ್ಯರುಗಳು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ, ಅನೇಕ ವಿಧವಾದ ಆರೋಪಗಳನ್ನು ಮಾಡಿದ್ದಾರೆ. ಮಾನ್ಯ ಸದಸ್ಯರು ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಯಾವುದೇ ಕೆಲಸ ಮಾಡಬೇಕಾದರೂ, ರೂಲ್ಸ್ ಅಂಡ್ ರೆಗ್ಯುಲೇಶನ್ಸ್‌ಗೆ ಸರಿಯಾಗಿ ಎಂ. ಎಸ್. ಆರ್. ಟಿ .ಸಿ. ಯವರು ನಡಕೊಳ್ಳ ಬೇಕಾಗಿದೆ, ಮತ್ತು ಆ ರೀತಿ ನಡಕೊಳ್ಳುತ್ತಿದ್ದಾರೆ. ನಾವು ಯಾವುದಾದರೂ ನೇಮಕ ಮಾಡ ಬೇಕಾದರೆ ಅದನ್ನು ಸೆಲೆಕ್ಷನ್ ಅಥಾರಿಟಿ ಮಾಡಿಕೊಂಡು ಹೋಗುತ್ತಾರೆ. ಇನ್ನು ವರ್ಗದ ವಿಚಾರ ದಲ್ಲಿ ಯಾವಾಗಲೂ ಆಡಳಿತದ ಹಿತದೃಷ್ಟಿಯಿಂದ ವರ್ಗಗಳನ್ನು ಮಾಡುತ್ತಾರೆಯೇ ವಿನಹ ಬೇರೆ ರೀತಿಯಲ್ಲಿ ವರ್ಗಗಳನ್ನು ಮಾಡುವುದಕ್ಕೆ ಹೋಗುವುದಿಲ್ಲ ಮತ್ತು ಯಾವ ವಿಮ್ಸ್ ಅಂಡ್ ಫ್ಯಾನ್ಸೀಸ್ ಉಪಯೋಗ ಮಾಡುತ್ತಾ ಇಲ್ಲ. ಮತ್ತು ಕೆಲವರನ್ನು ಡಿಸ್‌ಮಿಸ್ ಮತ್ತು ಡಿಸ್ಚಾರ್ಜ್ ಮಾಡಿ ದ್ದೇವೆ. ಈಗ ಮಾಡಿದ್ದರಲ್ಲಿ ಪುನಃ ಹೊಸದಾಗಿ ನೇಮಕ ಮಾಡಿಕೊಂಡಿದ್ದೇವೆ. ಎರಡು ವರ್ಷ ಗಳಲ್ಲಿ 247 ಜನರನ್ನು ಮಾಡಿಕೊಂಡಿದ್ದೇವೆ. ಅವುಗಳನ್ನು ರೂಲ್ಸ್ ಅಂಡ್ ರೆಗ್ಯುಲೇಶನ್ಸ್ ಪದ್ಧತಿ ಗಳಿಗನುಗುಣವಾಗಿ ಮಾಡುತ್ತೇವೆಯೇ ವಿನಹ ಯಾವುದನ್ನೂ ಕಾನೂನುಗಳಿಗೆ ವಿರುದ್ಧವಾಗಿ ಮಾಡಲಿಲ್ಲ. ಇದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಮತ್ತು ಅವರನ್ನು ಪುನಃ ನೇಮಕ ಮಾಡಿದ್ದೇ ವಿನಹ ಪೂರ್ವದಲ್ಲಿದ್ದಂತಹ ಪದವಿಗಳಿಗೆ ನೇಮಕ ಮಾಡಿಕೊಂಡಿಲ್ಲ ಇನ್ನು ಬಾಡಿಗಳನ್ನು ಕಟ್ಟಬೇಕಾದರೆ, ಯಾವುದು ಯೋಗ್ಯವಾಗಿದೆ ಎಂಬುದನ್ನು ತಿಳಿದುಕೊಂಡು ಬಸ್ಸುಗಳಿಗೆ ಬಾಡಿ ಕಟ್ಟುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಅದೇ ರೀತಿ ಬೊಂಬಾಯಿಯ ದಯಾನಂದ್ ಕಂಪೆನಿಗೆ ಕೊಟ್ಟಿದ್ದೇವೆ. ಮತ್ತು ನಮ್ಮಲ್ಲಿ ಅನೇಕ ಲೀಗಲ್ ಪಾಯಿಂಟ್‌ಗಳು ಹುಟ್ಟುತ್ತಿರುವುದರಿಂದ ನಮ್ಮದೇ ಒಂದು ಇಲಾಖೆಯನ್ನು ಇಟ್ಟುಕೊಂಡಿದ್ದೇವೆ. ಅವರಿಗೆ ಸಾಕಾದಷ್ಟು ಕೆಲಸ ಇದೆ. ಆದ್ದರಿಂದ ಬೇರೆ ಲಾಯರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ ಎಂದು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಈ ಸಂಸ್ಥೆಗೆ 20 ಕೋಟಿ ರೂಪಾಯಿಗಳನ್ನು ಹಾಕಿರುವುದು ನಿಜ. ಇದರಿಂದ ನಮಗೆ 6. 24 ಪರ್ಸೆಂಟ್ ರಿಟರ್ನ್ ಬರುತ್ತದೆ. 1967-68 ನೇ ಸಾಲಿನಲ್ಲಿ 1 ಕೋಟಿ 31 ಲಕ್ಷ ರೂಪಾಯಿಗಳು ವರಮಾನವನ್ನು ನಾವು ಪಡೆದುಕೊಂಡಿದ್ದೇವೆಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ.

ಈ ಸಂಸ್ಥೆಯ ಆಡಳಿತದ ವಿಚಾರವಾಗಿ ಅನೇಕ ದೋಷಾರೋಪಣೆಗಳನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಆದರೆ ಆಡಳಿತ ನಡೆಯುವುದನ್ನು ನೋಡಿದರೆ ಇದು ಸುವ್ಯವಸ್ಥಿತವಾಗಿ ನಡೆದು ಕೊಂಡು ಹೋಗುತ್ತಿದೆ. ಏನಾದರೂ ನ್ಯೂನತೆಗಳು ಇದ್ದರೆ ಅವುಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವುಗಳನ್ನು ಹಾಗೆಯೇ ಬಿಟ್ಟುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಮನದಲ್ಲಿಟ್ಟು ಕೊಂಡು ಆಡಳಿತವನ್ನು ಸುಧಾರಿಸುವುದಕ್ಕೆ ನಾವು ಸರ್ವ ಪ್ರಯತ್ನವನ್ನೂ ಮಾಡುತ್ತೇವೆ.

ಆ ನಂತರ ಮಾನ್ಯ ಸದಸ್ಯರಾದ ಶ್ರೀ ಬಂಗಾರಪ್ಪನವರು ಮಾತನಾಡುತ್ತಾ ಎಂ. ಎಸ್. ಆರ್. ಟಿ. ಸಿ. ಯವರು ಒಂದು ಪ್ರೆಸ್ ಅನ್ನು ಕೊಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳಿದರು. ಅದು ನಮಗೆ ಉಪಯೋಗವಿಲ್ಲ. ಅದು ನಮಗೆ ಬೇಕಾಗಿಲ್ಲ ಎಂದು ಹೇಳಿ ದ್ದೇವೆ.

ಆಮೇಲೆ ಒಬ್ಬರು ಮಾನ್ಯ ಸದಸ್ಯರು ಗುಲ್ಬರ್ಗ ಡಿವಿಜನ್‌ನಲ್ಲಿ ಬಸ್ಸುಗಳ ಬ್ರೇಕ್ ಡೌನ್ ಜಾಸ್ತಿಯಾಗಿದೆ ಎಂದು ಹೇಳಿದರು. 1967-68 ನೇ ಸಾಲಿನಲ್ಲಿ 26 ಪರ್ಸೆಂಟ್ ಬ್ರೇಕ್‌ಡೌನ್

ಇದೆ. 1965–66 ನೇ ಸಾಲಿನಲ್ಲಿ 34 ಪರ್ಸೆಂಟ್ ಬ್ರೇಕ್‌ಡೌನ್ ಇತ್ತು. ಅಂಥಾದ್ದನ್ನು 26 ಪರ್ಸೆಂಟಿಗೆ ಇಳಿಸಿದ್ದೇವೆ. ಅದನ್ನು ಇನ್ನೂ ಉತ್ತಮಪಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಟೂರಿಸ್ಟ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಹಾಗೆ ಮಾನ್ಯ ಸದಸ್ಯರಾದ ಪುಟ್ಟ ರಂಗನಾಥ್ ಅವರು ಮಾತನಾಡುತ್ತಾ ಬೇಲೂರು ಮತ್ತು ಹಳೇಬೀಡುಗಳಲ್ಲಿ ಪ್ರವಾಸಿಗಳಿಗೆ ಸರಿಯಾದ ಸೌಲಭ್ಯವನ್ನು ಒದಗಿಸಿಕೊಟ್ಟಿಲ್ಲ ಎಂದು ಹೇಳಿದರು. ಈಗ ಆ ಸ್ಥಳದಲ್ಲಿ ಒಂದು ಪೆವಿಲಿಯನ್ ಕಟ್ಟಿದ್ದೇವೆ ರೆಸ್ಟ್ ಹೌಸ್ ಅನ್ನು ಕಟ್ಟುವ ಕೆಲಸ ನಡೆಯುತ್ತಿದೆ. ಇನ್ನೂ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಅಲ್ಲಿ ರೆಸ್ಟ್ ಹೌಸ್‌ಗಳನ್ನು ಕಟ್ಟತಕ್ಕ ಯೋಜನೆ ಇದೆ. ಹಳೇಬೀಡಿನಲ್ಲಿ ಒಂದು ಟಿ. ಬಿ. ಇದೆ. ಆಮೇಲೆ ಶ್ರೀಮಾನ್ ದೊಡ್ಡಬೋರೇಗೌಡರು ಕೆ. ಆರ್. ಎಸ್. ನಲ್ಲಿ ಪ್ರವಾಸಿಗಳಿಗೆ ಸರಿಯಾದ ಸೌಲಭ್ಯವನ್ನು ಒದಗಿಸಿಕೊಟ್ಟಿಲ್ಲ ಎಂದು ಹೇಳಿದರು. ಅಲ್ಲಿಗೆ ಬರತಕ್ಕ ಪ್ರವಾಸಿಗಳಿಗೆ ಅನುಕೂಲಮಾಡಿಕೊಡುವುದಕ್ಕೋಸ್ಕರ ರೆಸ್ಟ್ ಹೌಸ್‌ಗಳನ್ನು ಕಟ್ಟಿದ್ದೇವೆ. ಅದರಲ್ಲಿ ಒಂದು ದಿವಸಕ್ಕೆ 6 ರೂಪಾಯಿಗಳನ್ನು ಚಾರ್ಜ್ ಮಾಡುತ್ತಾರೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ಹೆಚ್ಚಿನ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ ಶ್ರೀರಂಗಪಟ್ಟಣದಲ್ಲಿಯೂ ಸಹ ಪ್ರವಾಸಿಗಳು ಬಂದರೆ ಅವರು ಇಳಿದುಕೊಳ್ಳುವುದಕ್ಕೆ ರೆಸ್ಟ್ ಹೌಸ್‌ಗಳನ್ನು ಕಟ್ಟಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಇಷ್ಟು ವಿಚಾರ ನನ್ನ ಇಲಾಖೆಗೆ ಸಂಬಂಧಪಟ್ಟದ್ದು ಆಯಿತು.

ಇನ್ನು ನನ್ನ ವೈಯ್ಯಕ್ತಿಕ ವಿಚಾರಕ್ಕೆ ಸಂಬಂಧಪಟ್ಟಹಾಗೆ ನಾನು ಒಂದು ಎಕ್ಸ್‌ಪ್ಲನೇಷನ್ ಹೇಳಬೇಕಾಗಿದೆ. ಅದು ಏನೆಂದರೆ ಶ್ರೀಮಾನ್ ಸಿದ್ದವೀರಪ್ಪನವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ಇರುವ ಕಾಲದಲ್ಲಿ ಅವರು ನನ್ನ ಮೇಲೆ ಕೆಲವು ಗುರುತರವಾದ ಆರೋಪಣೆಗಳನ್ನು ಮಾಡಿದ್ದಾರೆ. ನಾನು ತಾಲ್ಲೂಕು ಬೋರ್ಡ್ ಚುನಾವಣೆಗೆ ಹೋದಂತಹ ಕಾಲದಲ್ಲಿ ನಾನು ಶ್ರೀಮಾನ್ ಸಿದ್ದವೀರಪ್ಪನವರನ್ನು ಕಣ್ಣಿನಿಂದ ಕಾಣಲೂ ಇಲ್ಲ, ಎದುರುಬದುರು ಬರಲೂ ಇಲ್ಲ. ಒಬ್ಬ ಉಪಮಂತ್ರಿಗಳು ಚುನಾವಣೆಯ ಪ್ರಚಾರವನ್ನು ಮಾಡಿದ್ದನ್ನು ನಾನು ಕಣ್ಣಾರೆ ನೋಡಿದೆ ಎಂದು ಏನು ಅವರು ಅಪಾದನೆ ಮಾಡಿದ್ದಾರೆ ಅದು ಬಹಳ ದುರ್ದೈವ ಸಂಗತಿ. ನಾನು ಚುನಾವಣೆಯ ಪ್ರಚಾರಕ್ಕೆ ಹೋಗಬೇಕಾದರೆ ರಿಜರ್ವ್ ಪೋಲೀಸ್ ಅನ್ನು ತೆಗೆದುಕೊಂಡು ಹೋಗಿದ್ದೆ ಎಂದು ಹೇಳಿದ್ದಾರೆ. ಮತ್ತು ಅದನ್ನು ಪತ್ರಿಕೆಗೆ ಕೂಡ ಹೇಳಿಕೆ ಕೊಟ್ಟಿದ್ದೇನೆ ಎಂದು ಹೇಳಿದರು ನಾನು ರಿಜರ್ವ್ ಪೋಲೀಸ್ ತೆಗೆದುಕೊಂಡು ಹೋಗಿಲ್ಲ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ ಆಮೇಲೆ ನಾನು ಜನಗಳ ಕಾಲನ್ನು ಹಿಡಿದುಕೊಂಡು ನನ್ನ ಮರ್ಯಾದೆ ಉಳಿಯಬೇಕಾದರೆ ಕಾಂಗ್ರೆಸ್ಸಿಗೇ ಓಟುಕೊಡಬೇಕು ಇಲ್ಲದಿದ್ದರೆ ನನ್ನ ಮರ್ಯಾದೆ ಉಳಿಯುವುದಿಲ್ಲ ಎಂದು ನಾನು ಹೇಳಿದ್ದೇನೆ ಎಂದು ಹೇಳಿದ್ದಾರೆ. ನಾನು ಅಂಥಾ ಒಂದು ಮಟ್ಟಕ್ಕೆ ಇಳಿದು ಚುನಾವಣೆಯ ಪ್ರಚಾರವನ್ನು ಮಾಡುವುದಕ್ಕೆ ಹೋಗಿಲ್ಲ. ಪ್ರಚಾರ ಮಾಡುವುದಕ್ಕೆ ಬೇರೆ ಕ್ರಮಗಳು ಇವೆ. 1947 ರಿಂದ 1968 ನೇ ಇಸವಿಯವರೆಗೆ ಕಾಂಗ್ರೆಸ್ ಸರ್ಕಾರದವರು ದೇಶದಲ್ಲಿ ಸಾಧನೆ ಮಾಡಿರತಕ್ಕ ಕಾರ್ಯಗಳನ್ನು ಕಣ್ಣುಗಳಲ್ಲಿ ಎಲ್ಲೆಲ್ಲಿ ನೋಡಿದರೂ ಕಾಣುತ್ತಿವೆ ಎಂದು ನಾನು ಹೆಮ್ಮೆಯಿಂದ ಹೇಳಬೇಕಾಗುತ್ತದೆ. ಜನಗಳ ಕಾಲು ಹಿಡಿದುಕೊಳ್ಳುವುದಕ್ಕೆ, ಜಾಯಮಾತು ಉಪಯೋಗಿಸಿಕೊಳ್ಳುವುದಕ್ಕೆ ನಾವು ಹೋಗುವುದಿಲ್ಲ. ವಿರೋಧಪಕ್ಷದವರ ಹಾಗೆ ಏನೂ ಬಂಡವಾಳವಿಲ್ಲದೆ ಇರತಕ್ಕ ಜನ ಏನೂ ಕೆಲಸ ಮಾಡದೇ ಇರತಕ್ಕ ಜನ ಜನಗಳ ಕೈಕಾಲುಗಳನ್ನು ಹಿಡಿದುಕೊಳ್ಳುವುದಕ್ಕೆ ಹೋಗುತ್ತಾರೆಯೇ ವಿನಾ ನಾವು ಹೋಗುವುದಿಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಸ್ವಾಮಿ ಪಾಯಿಂಟ್ ಆಫ್ ಆರ್ಡರ್. ಏನೂ ಬಂಡವಾಳವಿಲ್ಲದವರೂ ಎಂದರೆ ಏನು ? ಈ ಪದವನ್ನು ಅವರು ಉಪಯೋಗಿಸಬಹುದೇ ?

MR. SPEAKER.—The Hon'ble Leader of the Opposition has taken objection to the word "Bandawala illadavaru" used by the Deputy Minister. The Members of the opposition have used more serious words than that. They should not be touchy about these things.

SRI K. H. RANGANATH.—If the House wants I can get those people to whom he has approached. He visited Chikkasiddavvanahalli. He says with some emotion that he has done so. I was in that Hobli during election. Mr. Siddaveerappa may not be available now. When he is

(SRI K. H. RANGANATH)

absent, he wants to make use of this occasion. I know the villages to where he had gone. He has made such appeal to those people.

Sri D. B. KALMANKAR.—He is misleading the House.

Mr. SPEAKER.—The Rule says that unless the hon'ble Member speaking yields, nobody should intervene; but on the other hand every member is bound to hear him whether he speaks sensibly or insensibly. This is the type of outlook every hon'ble Member should have. Opinions may differ and that is altogether a different thing. I request the hon'ble Member not to interupt him even if he says anything wrong.

I have heard Hon'ble Member Mr. Vatal Nagaraj using words like "papa" and all that. But the other day when the Hon. Minister of State Mr. Shankar Rao uttered the word "O ho" serious objection was taken by some Members. Therefore, I would request the hon'ble Members to avoid using such words hereafter.

ಶ್ರೀ ಎಸ್. ಶಿವಪ್ಪ.—ಮಾಡಿದ್ದರೆ ಮಾಡಿದ್ದೇನೆ ಎಂದು ಧೈರ್ಯವಾಗಿ ಹೇಳಿ. ಆ ರೀತಿ ಹೇಳಲಿಲ್ಲ ಎಂದು ತಾವು ಹೇಳುವುದು ಸರಿಯಲ್ಲ.

Mr. SPEAKER.—The Hon'ble Deputy Minister has the right to speak and every hon'ble Member is bound to hear his speech whether it is relevant or irrelevant.

ಶ್ರೀ ಎಚ್. ಸಿ. ಬೋರಯ್ಯ.—ವಿರೋಧಪಕ್ಷದ ಸದಸ್ಯರುಗಳು ಏನಾದರು ಮಾತನಾಡಿದರೆ ನಾವು ಕಿವಿಯಲ್ಲಿ ಹಾಕಿಕೊಂಡು ಸುಮ್ಮನೆ ಇರಬೇಕು.

(Several members rose to speak)

Mr. SPEAKER.—I have requested the hon'ble Members not to interrupt the Hon. Deputy Minister unnecessarily. Now the Hon. Deputy Minister may please proceed with his reply.

ಶ್ರೀ ಎಚ್. ಸಿ. ಬೋರಯ್ಯ.—ಅನಂತರ ಕೊಳಹಾಳ್ ಗ್ರಾಮದ ಜನರನ್ನು ಬಹಳ ಕೃತಜ್ಞತೆಯಿಂದ ನೆನೆಸಿಕೊಳ್ಳಬೇಕು. ಶ್ರೀಮಾನ್ ಸಿದ್ಧವೀರಪ್ಪನವರು ಈ ರೀತಿ ಹೇಳಿದ್ದಾರೆ:

"ಅವರು ಅಲ್ಲಿ ಜನಗಳನ್ನು ಓಟುಗಳನ್ನು ಕೇಳುವುದಕ್ಕೆ ಹೋದಾಗ ಅಣ್ಣಯ್ಯ,
ಅಪ್ಪಯ್ಯ ಎಂದು ಅವರ ಕಾಲನ್ನು ಹಿಡಿದುಕೊಂಡು ನಾನು ಒಬ್ಬನೇ ಅಲ್ಲ ನನ್ನ ಲಿಂಗ
ಕೂಡ ನಿನ್ನ ಕಾಲನ್ನು ಹಿಡಿದುಕೊಂಡಿದೆ ಆದ್ದರಿಂದ ನನಗೇ ಓಟು ಕೊಡಿ"

ಎಂದು ಹೇಳಿದ್ದಾರೆ, ನಾನು ಲಿಂಗಧಾರಿಯೇ ಅಲ್ಲ. ನಾನು ಅಲ್ಲಿ ಯಾರ ಕಾಲನ್ನೂ ಹಿಡಿದು ಕೊಳ್ಳುವುದಕ್ಕೆ ಹೋಗಲಿಲ್ಲ.

Sri K. H. RANGANATH.—Sir, the Hon'ble Deputy Minister is addressing individual members and not to the Chair.

Mr. SPEAKER.—There should be no interruption. I request the Hon'ble Deputy Minister to address the Chair. That rule applies to each and every member of this House.

ಶ್ರೀ ಎಚ್. ಸಿ. ಬೋರಯ್ಯ.—ಅಧ್ಯಕ್ಷರ ಮೂಲಕ ನಾನು ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಏನೆಂದರೆ ಅಲ್ಲಿ ನಡೆದಿರುವ ಅನೇಕ ವಿಚಾರಗಳನ್ನು ಇಲ್ಲಿ ಹೇಳುವುದು

ಸೂಕ್ತವಲ್ಲ ಎಂದು. ಆ ಗ್ರಾಮದ ಜನರು ಸರ್ಕಾರದ ಬಗ್ಗೆ ತಪ್ಪುಅಭಿಪ್ರಾಯ ಮಾಡಿಕೊಂಡಿದ್ದರು. ನಾವು ಅಲ್ಲಿಗೆ ಹೋದಾಗ ಅಲ್ಲಿಯ ಜನರು ವಿರೋಧಪಕ್ಷದವರ ಸಹವಾಸದಿಂದ ಸರ್ಕಾರದ ಬಗ್ಗೆ ತಪ್ಪು ತಿಳಿದುಕೊಂಡಿದ್ದೆವು, ಇನ್ನು ಆ ರೀತಿ ಮಾಡುವುದಿಲ್ಲ ಎಂದು ನಮಗೆ ಅಡ್ಡಬಿದ್ದರು. ಅದಕ್ಕೆ ನಾನು ವಿರೋಧಪಕ್ಷದಿಂದ ಅನುಕೂಲ ಪಡೆದಿದ್ದರೆ ಅದನ್ನು ವಾಪಸ್ ಕೊಟ್ಟು ನೀವು ನಿರ್ಭಯವಾಗಿರಿ ಎಂದು ಹೇಳಬೇಕಾಯಿತು. ಮುಂದೆ ಶ್ರೀಮಾನ್ ಸಿದ್ಧವೀರಪ್ಪನವರು ಈ ರೀತಿ ಹೇಳಿದ್ದಾರೆ.

> ''ನನಗೆ ಓಟು ಕೊಡಿ, ಆಮೇಲೆ ಪರಿಸ್ಥಿತಿ ಏನು ಎಂದು ನೋಡಿಕೊಳ್ಳುತ್ತೇನೆ, ಮಟ್ಟ ಹಾಕುತ್ತೇನೆ, ರಾಜ್ಯ ಸರ್ಕಾರ ನನ್ನ ಕೈಯಲ್ಲಿ ಇದೆ ಎಂದು''

ಯಾರೊಬ್ಬರು ಪ್ರಜಾಪ್ರಭುತ್ವವನ್ನು ಅರ್ಥ ಮಾಡಿಕೊಂಡಿರುತ್ತಾರೋ, ಸಾರ್ವಜನಿಕ ಸೇವೆಯಲ್ಲಿರುತ್ತಾರೋ ಅಂತಹವರು ಈ ರೀತಿ ಭಾಷಣ ಮಾಡುತ್ತಾರೆಂದು ನಾನು ತಿಳಿದು ಕೊಂಡಿಲ್ಲ. ನಾನು ಈ ರೀತಿ ಹೇಳಲಿಲ್ಲ. ಆ ರೀತಿ ಹೇಳುವುದಕ್ಕೆ ಕಾರಣವೂ ಇರಲಿಲ್ಲ. ಅಲ್ಲಿಯ ಜನ ಭಯಗ್ರಸ್ಥರಾಗಿದ್ದರು. ಬಾಯಲ್ಲಿ ಅಕ್ಕಿ ಹಾಕಿಕೊಂಡು ತಮ್ಮ ಕಷ್ಟಸುಖಗಳನ್ನು ಹೇಳಿ ಕೊಂಡರು. ಅದಕ್ಕೆ ನಾನು ನಿಮಗೆ ಏನಾದರು ತೊಂದರೆ ಬಂದರೆ ರಕ್ಷಣೆ ಕೊಡಲು ಸರ್ಕಾರ ಇದೆ. ರಕ್ಷಣೆ ಕೊಡುವುದಕ್ಕಾಗಿಯೇ ಸರ್ಕಾರ ಇರುವುದು ಎಂದು ಹೇಳಿದನೇ ಹೊರತು ಮಟ್ಟ ಹಾಕುತ್ತೇನೆ ಎಂದು ಹೇಳಲಿಲ್ಲ. ಇವತ್ತು ಸಹ ಹೇಳುತ್ತೇನೆ, ಜನರಿಗೆ ಏನಾದರು ತೊಂದರೆ ಯಾದರೆ ಸರಕಾರ ರಕ್ಷಣೆ ಕೊಡುತ್ತದೆ. ಮುಂದೆ ಶ್ರೀಮಾನ್ ಸಿದ್ಧವೀರಪ್ಪನವರು ಈ ರೀತಿ ಹೇಳುತ್ತಾರೆ :

> ''ಶ್ರೀಮಾನ್ ಹೋ. ಚಿ. ಬೋರಯ್ಯನವರ ಶಕ್ತಿ, ಮಟ್ಟಹಾಕತಕ್ಕಂಥ ಶಕ್ತಿ ಏನು ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ'' ಎಂದು.

ನಾವು ಪ್ರಜಾಪ್ರಭುತ್ವಕ್ಕೆ ಹೊಂದಿಕೊಂಡು ಹೋಗುವ ಜನರಾಗಿದ್ದೇವೆ. ನಾವು ಹೋಗುವ ಮಾರ್ಗ ಯಾವುದೆಂದರೆ ಜನಗಳಿಗೆ ಒಂದು ರಕ್ಷಣೆ ಮಾಡಿಕೊಂಡು ಹೋಗುವುದು. ಕಾನೂನು ಅಧಿಕಾರ ನಮ್ಮ ಕೈಯಲ್ಲಿ ಇದೆಯೆಂದು ನಮ್ಮ ಕೈಗೆ ತೆಗೆದುಕೊಂಡು ಜನರನ್ನು ಹಿಂಸೆಪಡಿಸುತ್ತಿಲ್ಲ. ಮುಂದೆ ಈ ರೀತಿ ಹೇಳುತ್ತಾರೆ :

> ''ಇವೊತ್ತು ಇವರು ಜಾತಿಯೆಂಬ ವಿಷ ಬೀಜವನ್ನು ಬಿತ್ತಿದ್ದಾರೆ. ಜಾತಿಯ ದ್ವೇಷ ವನ್ನು ತಂದಿಟ್ಟದ್ದಾರೆ'' ಎಂಬುದಾಗಿ

ಯಾರಾದರು ಅಲ್ಲಿಗೆ ಹೋಗಿ ನೋಡಲಿ. ವಿಷ ಬೀಜವನ್ನು ಬಿತ್ತಿದ್ದಾರೆಂದು ಹೇಳುತ್ತಾರೆ. ಶ್ರೀಮಾನ್ ಸಿದ್ಧವೀರಪ್ಪನವರು ಮಾಡಿರುವುದನ್ನು ನಾವು ನೋಡುವುದಾದರೆ ಅವರು ಜಾತಿಯ ವಿಷಬೀಜವನ್ನು ಬಿತ್ತಿದ್ದಾರೆಂದು ನಾನು ಹೇಳುತ್ತೇನೆ. ಆ ಭಾಗದಲ್ಲಿ ಯಾರು ಜಾತೀಯತೆಯನ್ನು ಬೆಳೆಸಿದ್ದಾರೋ ಅವರು ಅದರ ಫಲವನ್ನು ಊಟಮಾಡುತ್ತಾರೆ. ಜಾತಿಯನ್ನು ಇಲ್ಲಿ ತರುವುದು ಸೂಕ್ತವಲ್ಲ ಎಂದು ನಾನು ಹೇಳುತ್ತೇನೆ. ಚಿತ್ರದುರ್ಗ ಜಿಲ್ಲೆಯಲ್ಲಿ ಜಾತೀಯತೆ ಎಂಬ ಒಂದು ಪ್ರಚಾರ 1945 ರಿಂದ ಇದುವರೆಗೆ ನಡೆದಿದೆ ಎಂಬುದು ಎಲ್ಲರಿಗೂ ಗೊತ್ತು. ಈ ರೀತಿಯಿಂದ ನಡೆದರೆ ದೇಶದ ಕಲ್ಯಾಣವಾಗುವುದಿಲ್ಲ ಎಂದು ಹೇಳುತ್ತೇನೆ. ಮುಂದೆ ಈ ರೀತಿ ಹೇಳುತ್ತಾರೆ :

> '' ಈ ಚುನಾವಣೆಗಳೆಲ್ಲಾ ಒಲೆ ಮೇಲಿರುವ ಮೂರು ಗುಂಡುಗಳ ಹಾಗೆ ಜಾತಿ, ದುಡ್ಡು ಮತ್ತು ಹೆಂಡ ಇವುಗಳ ಮೇಲೆ ನಿಂತಿದೆ......

ಎಂಬುದಾಗಿ. ಇದನ್ನು ವಿಷಾದದಿಂದ ಹೇಳಬೇಕಾಗಿದೆ. ಇದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡ ಬೇಕಾಗಿಲ್ಲ. ಈ ಮೂರನ್ನು ಯಾರು ಉಪಯೋಗಿಸಿದ್ದಾರೆ ಎಂಬುದದನ್ನ ಇಲ್ಲಿ ಹೇಳುವುದಕ್ಕೆ ಅವಕಾಶವಿದೆ. ಆದರೆ ನಾನು ಪ್ರಸ್ತಾಪ ಮಾಡುವುದಿಲ್ಲ. ಕೊನೆಯಲ್ಲಿ ಒಂದು ಮಾತನ್ನು ನಮ್ಮ ಅಧಿಕಾರಿಗಳ ಬಗ್ಗೆ ಎಂದರೆ ಡೆಪ್ಯೂಟಿ ಕಮಿಷನರ್ ಹಾಗೂ ಅಸಿಸ್ಟೆಂಟ್ ಕಮಿಷನವರ ಬಗ್ಗೆ ಹೇಳಿದರು. ನಾನು ತಿಳಿದುಕೊಂಡಮಟ್ಟಿಗೆ ಅವರು ಉತ್ತಮವಾದ ಕೆಲಸಗಳನ್ನು ಮಾಡುತ್ತಿ ದ್ದಾರೆ ಮತ್ತು ಜನಾನುರಾಗಿಗಳೂ ಆಗಿದ್ದಾರೆ. ಇಂತಹವರ ಮೇಲೆ ಈ ರೀತಿಯಾಗಿ ಹೇಳುವುದು ಸರಿಯಲ್ಲವೆಂದು ಹೇಳಿ ಇಷ್ಟು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-30 P.M.

† ಶ್ರೀ ಬಿ. ಎಂ. ಪಾಟೀಲ್ (ನಗರಾಡಳಿತ ಶಾಖೆಯ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ವಂದನಾರ್ಪಣದ ನಿರ್ಣಯದ ಚರ್ಚೆಯಲ್ಲಿ ಮಾನ್ಯ ಸದಸ್ಯರನೇಕರು ನಗರಾಡಳಿತ ವಿಷಯಕ್ಕೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಮಾತನಾಡಿದ್ದಾರೆ ಮತ್ತು ಅ ನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಅವೆಲ್ಲ ಮಾತುಗಳಿಗೂ ಈ ಖಾತೆಗೆ ಸಂಬಂಧಪಟ್ಟಂತೆ ಕೆಲವು ವಿವರಣೆಗಳನ್ನು ನಾನು ಇಲ್ಲಿ ಕೊಡಬಯಸುತ್ತೇನೆ.

ಮಾನ್ಯ ಸದಸ್ಯರಾದ ಶ್ರೀ ಘೋರ್ಪಡೆಯವರು ಮಾತನಾಡುತ್ತಾ ಕಾವೇರಿ ಪ್ರಾಜೆಕ್ಟು ಬೇಗನೆ ಆದರೆ ನಗರದ ಜನರ ಜೀವನಕ್ಕೆ ಬಹುಮಟ್ಟಿಗೆ ಸಹಾಯವಾಗುತ್ತದೆ ಎಂದು ಹೇಳುತ್ತಾ ಇಂದು ಇದು ಯಾವ ಸ್ಥಿತಿಯಲ್ಲಿದೆ ಎಂದು ಕೇಳಿದರು. ಸರಕಾರ ಈ ಯೋಜನೆಗಾಗಿ ಎಲ್ಲಿಂದ ಹಣ ತರುತ್ತದೆ, ಇದಕ್ಕೆ ರಿಸೋರ್ಸಸ್ ಪೂರ್ಣಗೊಳಿಸಲು ಯಾವಾಗ ಸಾಧ್ಯವಾಗುತ್ತದೆ ಎಂದು ಕೇಳಿದರು. ಈ ಕಾವೇರಿ ಪ್ರಾಜೆಕ್ಟು ಬಹಳ ಪ್ರಾಮುಖ್ಯವಾದುದು. ಇಂದು ಬೆಂಗಳೂರು ನಗರವಾಸಿಗಳ ದೃಷ್ಟಿಯಿಂದ ಹಾಗೂ ರಾಜ್ಯದ ಜನತೆಯ ದೃಷ್ಟಿಯಿಂದ ಜನಸಾಮಾನ್ಯರ ಹಾಗೂ ಬೆಂಗಳೂರು ನಗರವಾಸಿಗಳ ಜನಜೀವನವನ್ನು ಉತ್ತಮಗೊಳಿಸಲು ಬಹಳ ಸಹಕಾರಿಯಾದಂತಹ ಯೋಜನೆ. ಈ ಯೋಜನೆಯನ್ನು ಸರಕಾರ ಆದಷ್ಟು ತೀವ್ರತೆಯಿಂದ ಕಾರ್ಯಗ ಮಾಡಲು ಆಶಿಸುತ್ತಿದ್ದಾರೆ ಮತ್ತು ಇದಕ್ಕಾಗಿ ಈಗಾಗಲೇ ಹಣವನ್ನು ಒದಗಿಸಿ ಬಹುಭಾಗ ಕಾರ್ಯಗತ ವಾಗುತ್ತಿದೆ ಎಂದು ಹೇಳಲು ಸಂತೋಷಪಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು—ಕೋಟೆ).—ಇದನ್ನು ಯಾವಾಗ ಪೂರ್ಣಮಾಡು ತ್ತೀರಿ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರಾದ ಶ್ರೀ ಶಾಮಣ್ಣನವರು ಸ್ವಲ್ಪ ನಿಧಾನವಾಗಿ ನಾನು ಹೇಳುವುದನ್ನು ಕೇಳಬೇಕು. ನಾನು ಅದರ ಬಗ್ಗೇನೇ ಇಲ್ಲಿ ಹೇಳುತ್ತಲಿದ್ದೇನೆ. ಸರಕಾರ ಯಾವಾಗ ಇದನ್ನು ಮುಗಿಸುತ್ತದೆ ಮತ್ತು ಇಲ್ಲಿಯವರೆಗೆ ಯಾವ ಯಾವ ಕೆಲಸಗಳನ್ನು ಮಾಡಲಾಗಿದೆ ಅವನ್ನು ಹೇಳುತ್ತೇನೆ. ಇದನ್ನು ಸವಿಸ್ತಾರವಾಗಿ ಇಲ್ಲಿ ಹೇಳುತ್ತೇನೆ. ತಾವು ಕೇಳಬೇಕು ಎಂದು ಹೇಳುತ್ತೇನೆ. ಕಾವೇರಿ ಪ್ರಾಜೆಕ್ಟ್‌ಗಾಗಿ ಮೊದಲು ಎಸ್ಟಿಮೇಟು ಮಾಡಿದಾಗ 25 ಕೋಟಿ ಯವರೆಗೆ ಯೋಜನೆ ಇತ್ತು. ಆಮೇಲೆ ಈ ಯೋಜನೆಯ ಡಿಸೈನು ಇತ್ಯಾದಿಗಳನ್ನು ಬದಲಾವಣೆ ಮಾಡಿದಾಗ ಹಾಗೂ ರೂಪಾಯಿನ ಅಪಮೌಲ್ಯವಾದ ಕಾರಣದಿಂದಾಗಿ ಇದರ ಯೋಜನೆ ಸುಮಾರು 38 ಕೋಟಿಯವರೆಗೆ ಏರಿತು. 38 ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರಕಾರ ದವರು ಒಪ್ಪಬೇಕೆಂದು ಕೇಳಿದರೂ ಕೇಂದ್ರದವರು ಇದಕ್ಕೆ ಒಪ್ಪಿಗೆ ಕೊಡುತ್ತಿರಲಿಲ್ಲ. ಆಮೇಲೆ ಇದಕ್ಕೆ ಹಣವನ್ನು ಎಲ್ಲಿಂದ ತರಬೇಕು ಎಂದು ವಾಟರು ಬೋರ್ಡಿನವರು ಹಾಗೂ ಸರಕಾರದವರು ವರ್ಲ್ಡ್ ಬ್ಯಾಂಕು ಮೂಲಕ ಸಾಲವನ್ನು ಪಡೆಯಬಹುದೇನೋ ಅವರಲ್ಲಿ ನೆಗೋಷಿಯೇಷನ್ಸ್‌ಗಳನ್ನು ಮಾಡಿದರು. ಆದರೆ ವರ್ಲ್ಡ್ ಬ್ಯಾಂಕಿನವರು ವಾಟರು ಬೋರ್ಡಿನ ವಿಚಾರಗಳನ್ನು ಕೇಂದ್ರದವ ರೊಡನೆ ವಿಚಾರ ವಿನಿಮಯ ಮಾಡಿದಾಗ ಒಂದು ಅಭಿಪ್ರಾಯ ಬಂತು. ಈ ಯೋಜನೆಗೆ ಹಣ ಕೊಡಬೇಕಾದರೆ ಮೊದಲು ಈ ಯೋಜನೆಯಿಂದ ಯಾರು ನೀರು ಬಳಸುತ್ತಾರೋ ಅಂತಹವರ ಮೇಲೆ ಕರ ಹಾಕಿ ಅದರ ಮೂಲಕ ಹಣ ತರಿಸಬೇಕು ಮತ್ತು ಇಲ್ಲಿ ಏನು ಫ್ರೀ ಅಲೋಯನ್ಸ್ ಎಂದು ಮೊದಲಿಂದ ಇತ್ತೋ ಆದಕ್ಕೆ ಅವರು ಒಪ್ಪಿಗೆ ಕೊಡಲಿಲ್ಲ. ಆಮೇಲೆ ವಾಟರು ಬೋರ್ಡಿನವರು ನೀರು ಯಾವ ಪ್ರಮಾಣದಲ್ಲಿ ಬರುತ್ತದೆ ಅದನ್ನು ಬಳಸುವವರು ಯಾರು ಇದರಿಂದ ಬರುವ ರೆವೆನ್ಯೂ ಏನು ಎನ್ನುವುದನ್ನೆಲ್ಲಾ ವಿಚಾರ ಮಾಡಿ ಇದರ ಮೇಲೆ ರೇಟು ಹೆಚ್ಚಿಸಬೇಕು ಎಂದು ಹೇಳಿದುದನ್ನು ಬೋರ್ಡಿನವರು ಒಪ್ಪಲಿಲ್ಲ ಮತ್ತು ಕೇಂದ್ರ ಸರಕಾರಕ್ಕೆ ಫ್ರಿ ಅಲೋಯನ್ಸ್ ಕೊಡುವುದನ್ನು ವರ್ಲ್ಡ್ ಬ್ಯಾಂಕಿನವರು ಒಪ್ಪದೇ ಇರುವ ಕಾರಣ ಇದನ್ನು ನಾವು ಒಪ್ಪುವುದಿಲ್ಲ ಎಂದು ಹೇಳಿದೆವು. ಅಮೇಲೆ ಹಂತ ಹಂತವಾಗಿ ನಮ್ಮ ರಾಜ್ಯದ ವಾಟರು ಬೋರ್ಡಿನವರು ಇದನ್ನು ಮಾಡಬೇಕು ಎನ್ನುವ ಇಚ್ಛೆಯನ್ನು ವ್ಯಕ್ತಮಾಡಿದರು. ಇದರಂತೆ ನಮ್ಮ ರಾಜ್ಯ ಸರಕಾರದವರು ಇದನ್ನು ಎರಡು ಹಂತದಲ್ಲಿ ಯೋಜನೆಗಳನ್ನು ಮಾಡಿ ಮೊದಲನೇ ಹಂತದಲ್ಲಿ 16 ಮಿಲಿಯನ್ಸ್ ಗ್ಯಾಲನ್ನು ಗಳಷ್ಟು ನೀರು ಕೊಡಬೇಕು. ಆಮೇಲೆ ಎರಡನೇ ಹಂತದಲ್ಲಿ 30 ಮಿಲಿಯನ್ಸ್ ಗ್ಯಾಲನ್ನುಗಳಷ್ಟು ನೀರು ಕೊಡಬೇಕು ಎಂದು ಯೋಜನೆ ಮಾಡಲಾಯಿತು. ಮೊದಲನೇ ಹಂತದಲ್ಲಿ ಸುಮಾರು 22.32 ಕೋಟಿ ವೆಚ್ಚಮಾಡಿ ನೀರು ಕೊಡಬೇಕಾದರೆ ಇದನ್ನು ಕಾರ್ಯಗತ ಮಾಡಿದರೆ ಸುಮಾರು 30 ಮಿಲಿಯನ್ ಗ್ಯಾಲನ್‌ಗಳಷ್ಟು ನೀರು ಕೊಡಬಹುದು. ಇದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದಾರೆ. ಆದರೆ ಇದರ ಪೂರ್ತಿ ಕೆಲಸವನ್ನು ಕಾರ್ಯಗತ ಮಾಡಲು ರಾಜ್ಯ ಸರಕಾರ

ಹಾಗೂ ಬೋರ್ಡಿನವರು ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಇದರ ಅಂಕೆ ಸಂಖ್ಯೆಗಳನ್ನು ತಮಗೆ ಹೇಳಬೇಕಾದರೆ ಇಲ್ಲಿಯವರೆಗೆ ಸುಮಾರು 430 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಲಾಗಿದೆ ಮತ್ತು ವಾಟರು ಬೋರ್ಡಿನವರು ಲೆಕ್ಕ ಇಟ್ಟಿರುವಂತೆ 31-3-68ರ ವರೆಗೆ ಸುಮಾರು 460.32 ಲಕ್ಷ ರೂಪಾಯಿಗಳಷ್ಟು ಈ ಯೋಜನೆಗಾಗಿ ಹಣ ಖರ್ಚು ಮಾಡಿ ಇನ್ನೂ ಈ ಯೋಜನೆ ಕೆಲಸಗಳನ್ನು ಮುಂದುವರಿಸುತ್ತಿದ್ದಾರೆ. ಹೋದ ವರ್ಷ ಈ ಯೋಜನೆಗಾಗಿ ಸುಮಾರು ಒಂದು ಕೋಟಿಯಷ್ಟು ಹಣವನ್ನು ಒದಗಿಸಲಾಗಿತ್ತು, ಇದರಲ್ಲಿ ಇಷ್ಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನು ಮೊದಲನೇ ಹಂತದಲ್ಲಿ ಇದನ್ನು ಪೂರ್ಣವಾಗಿ ಮಾಡಲು ಎಲ್.ಐ.ಸಿ. ಕಾರ್ಪೊರೇಷನ್ ಹಾಗೂ ಇನ್ನಿತರ ಸಂಸ್ಥೆಗಳೊಡನೆ ಆರ್ಥಿಕ ಇಲಾಖೆಯವರು ವ್ಯವಹಾರ ಮಾಡುತ್ತಿದ್ದಾರೆ. ಮತ್ತು ಎಲ್.ಐ.ಸಿ. ಹಾಗೂ ಇನ್ನಿತರ ಸಂಸ್ಥೆಗಳ ಮೂಲಕ ಎಷ್ಟು ಹಣ ಬರುತ್ತದೆಯೋ ಅದನ್ನು ತೆಗೆದುಕೊಂಡು ನಾಲ್ಕನೇ ಯೋಜನೆಯಲ್ಲಿ ಇದಕ್ಕೆ ಹಣ ಒದಗಿಸಿ ಇದನ್ನು ಕಾರ್ಯಗತ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ ಮತ್ತು ಮಾನ್ಯ ಸದಸ್ಯರಿಗೆ ಇಲ್ಲಿ ನಾನು ಹೇಳುತ್ತೇನೆ ಇದನ್ನು 1971-72 ರೊಳಗಾಗಿ ಮುಗಿಸಬೇಕು ಎಂದು ಒಂದು ಅಂದಾಜನ್ನೂ ಇಟ್ಟುಕೊಂಡಿದ್ದೇವೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಶಾಮಣ್ಣನವರು ಮಾತನಾಡುತ್ತಾ ಬೆಂಗಳೂರು ನಗರ ಕಾರ್ಪೊರೇಷನ್ನಿನವರು ಬೆಂಗಳೂರು ನಗರ ವಾಸಿಗಳಿಗಾಗಿ ಯಾವ ಯಾವ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ ಎಂದು ಕೇಳಿದ್ದಾರೆ. ಸರಕಾರವು ಸುಮ್ಮನೆ ಕರಭಾರವನ್ನು ಹೆಚ್ಚು ಮಾಡುತ್ತಾ ಹೋಗುತ್ತಾರೆ ಎಂದೂ ಹೇಳಿದರು, ಜನತೆಯ ಮೇಲೆ ಕರಭಾರವನ್ನು ಹಾಕುತ್ತಿರುವುದರಿಂದ ಅದಕ್ಕೆ ಅನುಗುಣವಾಗಿ ಜನತೆಯ ಸೌಕರ್ಯಗಳ ಕಡೆಗೆ ಗಮನ ಕೊಡಬೇಡವೇ ಎಂದೂ ತಿಳಿಸಿದರು. ಜನತೆಗೆ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡುತ್ತೇವೆ ಎಂದು ಇಲ್ಲಿ ಹೇಳಬಯಸುತ್ತೇನೆ. ಈಗ ಬೆಂಗಳೂರು ನಗರ ವಿಸ್ತಾರವಾಗಿ ಒಂದು ಸುಂದರ ನಗರವಾಗುತ್ತ ಬರುತ್ತಿದೆ ಮತ್ತು ನಗರಗಳ ಬಡಾವಣೆಗಳು ಹೆಚ್ಚುತ್ತಿವೆ ಮತ್ತು ಇದರ ಜೊತೆಗೆ ಸುಮಾರು 32 ಹಳ್ಳಿಗಳು ನಮ್ಮ ಕಾರ್ಪೊರೇಷನ್ನಿಗೆ ಸೇರಿರುವುದರಿಂದ ಇದರ ವ್ಯಾಪ್ತಿ ಇನ್ನೂ ಹೆಚ್ಚಾಗುತ್ತಾ ಬರುತ್ತಿದೆ. ಇದರ ಬಗ್ಗೆ ಯಾವ ಯಾವ ಸೌಲಭ್ಯಗಳನ್ನು ಕೊಡುತ್ತಿದ್ದೇವೆ ಇದನ್ನು ಸಮರ್ಥನೆ ಮಾಡಲು ಅಂಕೆ ಸಂಖ್ಯೆಗಳನ್ನು ಕೊಟ್ಟು ಹೇಳುತ್ತೇನೆ. ಕಾರ್ಪೊರೇಷನ್‌ನಲ್ಲಿ ಪಿ.ಡಬ್ಲ್ಯು.ಡಿ. ಬಾಬಿನಲ್ಲಿ ಹಿಂದಿನ ನಾಲ್ಕು ವರ್ಷಗಳಲ್ಲಿ ಯಾವ ರೀತಿ ಖರ್ಚು ಮಾಡಿದ್ದೇವೆ ಎನ್ನುವ ವಿವರಗಳನ್ನು ಇಲ್ಲಿ ತಮಗೆ ಕೊಡುತ್ತೇನೆ.

ಪಿ.ಡಬ್ಲ್ಯು.ಡಿ. ಮೂಲಕ

1964-65 ರಲ್ಲಿ	114 ಲಕ್ಷ
1965-66 ರಲ್ಲಿ	119 ಲಕ್ಷ
1966-67 ರಲ್ಲಿ	132 ಲಕ್ಷ
1967-68 ರಲ್ಲಿ	149 ಲಕ್ಷ ಖರ್ಚು ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—32 ಗ್ರಾಮಗಳನ್ನು ಸೇರಿಸಿದೆ ಎಂದು ಹೇಳಿದಿರಿ, ಈ ಗ್ರಾಮಗಳಿಗೆ ಇರುವ ಮನೆಗಳಲ್ಲಿ ಎರಡು ನಲ್ಲಿಗಳು ಹಾಗೂ ಎರಡೆರಡು ಕಕ್ಕಸುಗಳನ್ನಾದರೂ ಬೇಗನೆ ಮಾಡಿಸಿಕೊಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಬಿ. ಎಂ. ಪಾಟೀಲ್.—ಅದನ್ನೇ ಇಲ್ಲಿ ಹೇಳುತ್ತಿದ್ದೇನೆ. ಸ್ವಲ್ಪ ಕೇಳಿ. ಇನು ಶಿಕ್ಷಣದ ಮೇಲೆ—

1964-65 ರಲ್ಲಿ	9.78 ಲಕ್ಷ
1965-66 ರಲ್ಲಿ	12.32 ಲಕ್ಷ
1966-67 ರಲ್ಲಿ	15.36 ಲಕ್ಷ
1967-68 ರಲ್ಲಿ	16.43 ಲಕ್ಷ ಖರ್ಚು ಮಾಡಲಾಗಿದೆ.

ಇನ್ನು ಪಬ್ಲಿಕ್ ಹೆಲ್ತ್‌ಗಾಗಿ ಎಷ್ಟು ಖರ್ಚು ಮಾಡಲಾಗಿದೆ ಎಂದರೆ

1964-65 ರಲ್ಲಿ	54.36 ಲಕ್ಷ
1965-66 ರಲ್ಲಿ	67.56 ಲಕ್ಷ
1966-67 ರಲ್ಲಿ	82.84 ಲಕ್ಷ
1967-68 ರಲ್ಲಿ	92.35 ಲಕ್ಷ

(ಶ್ರೀ ಬಿ. ಎಂ. ಪಾಟೀಲ್)

ಈ ರೀತಿ ಪಿ ಡಬ್ಲ್ಯು.ಡಿ. ನಲ್ಲಿ ಎಜುಕೇಷನ್‌ನಲ್ಲಿ ಹಾಗೂ ಹೆಲ್ತ್ ಬಾಬುಗಳಲ್ಲಿ ಖರ್ಚು ಮಾಡಲಾಗಿದೆ ಇದರ ಮೇಲೆ ಇನ್ನೂ ಮೂರು ನಾಲ್ಕು ವರ್ಷಗಳ ಕಾಲ ಹೆಚ್ಚು ಕರವನ್ನು ಹಾಕುವ ಹಾಗಿಲ್ಲ. 1967–68ನೇ ಸಾಲಿನಿಂದ ಪ್ರೊಫೆಷನ್ ಟ್ಯಾಕ್ಸನ್ನು ತೆಗೆದುಹಾಕಲಾಗಿದೆ. ಇದೂ ಅಲ್ಲದೆ ಮೊನ್ನೆ ಸೈಕಲ್ ಟ್ಯಾಕ್ಸ್‌ನ್ನು ಕೂಡ ತೆಗೆದುಹಾಕಲಾಗಿದೆ. ಇದನ್ನೆಲ್ಲಾ ನೋಡಿದರೆ ಸರಕಾರ ಸಾಕಷ್ಟು ಹಣ ಖರ್ಚು ಮಾಡಿ ಜನತೆಗೆ ಸಾಕಷ್ಟು ಅನುಕೂಲಗಳನ್ನು ಮಾಡಿದೆ ಎನ್ನುವುದು ಇಲ್ಲಿ ಸ್ಪಷ್ಟವಾಗಿ ತೋರಿಸುತ್ತದೆ. ಇದೇ ರೀತಿ ಕಾರ್ಪೋರೇಷನ್ನಿನವರು ಸಾಕಷ್ಟು ರೋಡುಗಳಿಗಾಗಿ ಖರ್ಚು ಮಾಡುತ್ತಿದ್ದಾರೆ. ಮುಖ್ಯವಾಗಿ ಆರು ರಸ್ತೆಗಳನ್ನು ಎಂದರೆ ನರಸಿಂಹರಾಜ ರೋಡು, ಕೆಂಪೇಗೌಡ ರೋಡು, ಕೆಂಗಲ್ ಹನುಮಂತಯ್ಯ ರೋಡು ಸಿಲ್ವರ್‌ಜೂಬಿಲಿಪಾರ್ಕು ರೋಡು, ಪೋಸ್ಟು ಆಫೀಸು ರೋಡು ಮತ್ತು ಮಹಾತ್ಮಗಾಂಧೀ, ರೋಡು ಇವುಗಳನ್ನು ವಿಸ್ತಾರ ಮಾಡಿದ್ದೇವೆ.

ಅದೇರೀತಿ ಇಲ್ಯೂಮಿನೇಷನ್ ಆಫ್ ರೋಡ್ಸ್ ಬಗ್ಗೆ ಹೇಳವುದಾದರೆ ಇದುವರೆಗೆ 24339 ಮರ್ಕ್ಯುರಿ ವೇಪರ್ ಲೈಟನ್ನು ಕಾರ್ಪೋರೇಷನ್ನಿನವರು ಹಾಕಿದ್ದಾರೆ.

ಇನ್ನು ಪಾರ್ಕ್‌ಗಳ ವಿಷಯ ಹೇಳುವುದಾದರೆ ಕಾರ್ಪೋರೇಷನ್ನಿನವರು ಸಾಕಷ್ಟು ಪಾರ್ಕ್‌ಗಳನ್ನು ಒದಗಿಸಿಕೊಡುವ ಸಲುವಾಗಿ ಜಯಮಹಲ್ ಎಕ್ಸ್‌ಟೆನ್‌ಷನ್, ರಾಜಾಜಿನಗರ, ಸದಾಶಿವ ನಗರ ಮುಂತಾದ ಕಡೆಗಳಲ್ಲಿ ಪಾರ್ಕ್‌ಗಳನ್ನು ಮಾಡಿದ್ದಾರೆ. 2 ವರ್ಷದಲ್ಲಿ 82 ಕ್ಕೂ ಹೆಚ್ಚಿಗೆ ಅಡಿಷನಲ್ ಫೌಂಟೆನ್ಸ್ ಹಾಕಿದ್ದಾರೆ.

ಇನ್ನು ಹೆಲ್ತ್ ಡಿಪಾರ್ಟ್‌ಮೆಂಟಿನವರು ಚೆನ್ನಾಗಿ ಕೆಲಸ ಮಾಡಿದ್ದಾರೆ. ನಗರದ ನೈರ್ಮಲ್ಯ ಕಾಪಾಡಲು ಸುಮಾರು 377 ಅಡಿಷನಲ್ ಸ್ವೀಪರ್ಸ್‌ಗಳನ್ನೂ 38 ಮಾಲಿಗಳನ್ನೂ ತೆಗೆದುಕೊಳ್ಳಲಿಕ್ಕೆ ಮಂಜೂರು ಮಾಡಿದ್ದಾರೆ.

ಇನ್ನು ಎರಾಡಿಕೇಷನ್ ಆಫ್ ಮಲೇರಿಯಾ ಬಗ್ಗೆ ಹೇಳುವುದಾದರೆ ಮಸ್‌ಕ್ಯಿಟೋ ಕಾಟವನ್ನು ತಪ್ಪಿಸಲು ಸಾಕಾದಷ್ಟು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇದಕ್ಕಾಗಿ ಕಾರ್ಪೋರೇಷನ್ನಿನವರು 6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಅದೇರೀತಿ ಇನ್ನೂ ಇತರ ಸೌಲಭ್ಯಗಳನ್ನು ನಾಗರೀಕರಿಗೆ ಕಾರ್ಪೋರೇಷನ್ನಿನವರು ಹೆಚ್ಚು ಕರಭಾರ ಇಲ್ಲದೆ ಒದಗಿಸಿಕೊಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಇನ್ನು ಮಾನ್ಯಮಿತ್ರರಾದ ಶ್ರೀಮಾನ್ ಅರಕೇರಿಯವರು ಹೇಳಿದರು. ಟ್ರಸ್ಟ್‌ಬೋರ್ಡ್‌ನವರು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರನ್ನು ನೌಕರಿಯಲ್ಲಿ ತೆಗೆದುಕೊಳ್ಳುವುದಿಲ್ಲ ಎಂದು. ಅದಕ್ಕಾಗಿ ಮಾನ್ಯ ಸದಸ್ಯರಿಗೆ ನಾನು ಹೇಳಬಯಸುತ್ತೇನೆ. ಮೈಸೂರು ಟ್ರಸ್ಟ್‌ಬೋರ್ಡ್‌ನವರು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಮಾಡಿದ್ದಾರೆ ಮತ್ತು ಪಬ್ಲಿಕ್ ಸರ್ವಿಸ್ ಕಮೀಷನ್ನಿನಿಂದ ಸರ್ಕಾರಕ್ಕೂ ಬಂತು. ಮೈಸೂರು ಟ್ರಸ್ಟ್‌ಬೋರ್ಡ್‌ನವರು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗೆ ಸಾಕಷ್ಟು ಪ್ರಾತಿನಿಧ್ಯವನ್ನು ನೌಕರಿಯಲ್ಲಿ ಕೊಡಬೇಕೆಂದು ಒಪ್ಪಿಕೊಂಡಿದ್ದಾರೆ. ಸರ್ಕಾರದವರೂ ಕೂಡ ಅದನ್ನು ಈಗಾಗಲೇ ಅಪ್ರೂ ಮಾಡಿದ್ದಾರೆ. ಅದೇರೀತಿ ಬೆಂಗಳೂರು ಟ್ರಸ್ಟ್‌ಬೋರ್ಡಿಗೂ ಸಹ ಹೇಳಿದ್ದೇವೆ. ನಿವೂ ಸಹ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಪಬ್ಲಿಕ್ ಸರ್ವಿಸ್ ಕಮಿಷನ್ ಒಪ್ಪಿಗೆ ಪಡೆದು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಸರ್ಕಾರ ಒಪ್ಪಿಗೆ ಕೊಡುತ್ತದೆ. ಅದಲ್ಲದೆ ಈಗ ತೆಗೆದುಕೊಳ್ಳಬೇಕಾಗಿದ್ದರೆ ಎಂಪ್ಲಾಯ್‌ಮೆಂಟ್ ಒಕ್ಸ್‌ಛೇಂಜ್‌ಗೆ ಬರೆದು ಲಿಸ್ಟ್ ತರಿಸಿಕೊಂಡು ಅದರಂತೆ ಆಯ್ಕೆ ಮಾಡಿ ನೌಕರರನ್ನು ತೆಗೆದುಕೊಳ್ಳುತ್ತಾರೆ. ಇನ್ನು ಯಾವುದಾದರೂ ವಿಷಯಗಳು ಇದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಸರ್ಕಾರ ಪರಿಶೀಲಿಸುತ್ತದೆ.

ಇನ್ನು ಮಾನ್ಯ ಸದಸ್ಯರೊಬ್ಬರು ಚಿತ್ರದುರ್ಗ ಮುನಿಸಿಪಲ್ ಕೌನ್ಸಿಲ್ ಅವಧಿಯನ್ನು ಸರ್ಕಾರ ಒಂದು ವರ್ಷದವರೆಗೆ ವಿಸ್ತರಣೆ ಮಾಡಿರುವುಧು ತಪ್ಪು, ಅದು ನ್ಯಾಯಬಾಹಿರವಾದುದು ಎಂದು ಹೇಳಿದರು. ನಾನು ಮಾನ್ಯ ಮಿತ್ರರಿಗೆ ಮನವರಿಕೆ ಮಾಡಿಕೊಂಡು ಹೇಳುತ್ತೇನೆ, ಸರ್ಕಾರ ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಆಮೇಲೆ 18 (1) ಕಲಂ ಪ್ರಕಾರ ಒಂದು ವರ್ಷದವರೆಗೆ ಕೌನ್ಸಿಲ್‌ನ ಅವಧಿಯನ್ನು ವಿಸ್ತರಣೆ ಮಾಡಿದೆ. ಇದು ಪ್ರಜಾಸತ್ತಾತ್ಮಕವಾಗಿ, ಘಟನಾತ್ಮಕವಾಗಿ ಇದೆ. ಇದರಲ್ಲಿ ಯಾವ ವಿಧವಾದ ನ್ಯಾಯಬಾಹಿರವಾದುದು ಏನೂ ಇಲ್ಲ. ಸರ್ಕಾರ ತನ್ನ ವ್ಯಾಪ್ತಿಯ ಆಮದಲ್ಲೇ ವಿಸ್ತರಣೆ ಮಾಡಿದೆಯೆಂದು ಹೇಳಬಯಸುತ್ತೇನೆ, ಚಿತ್ರದುರ್ಗದ ಜಿಲ್ಲೆ

ಯಲ್ಲಿ ಕೆಲವು ಮುನಿಸಿಪಲ್ ಕೌನ್ಸಿಲ್‌ಗಳು ಎಲೆಕ್ಷನ್ ಆಗಬೇಕಾಗಿತ್ತು. ಚಿತ್ರದುರ್ಗ ನಗರ ಸಭೆಯ ವಿಚಾರವಾಗಿ ಹೇಳಬೇಕಾದರೆ 21-11-1968ರಲ್ಲಿ ಡಿವಿಷನಲ್ ಕಮೀಷನರು ಆ ನಗರ ಸಭೆಯ ಅವಧಿಯೊಳಗೆ ಚುನಾವಣೆ ಮುಗಿಯುವುದು ಕಷ್ಟ ಎಂದು ತಿಳಿಸಿದ್ದರ ಮೇಲೆ ಆ ಅವಧಿಯೊಳಗೆ ಅಂದರೆ 31-2-1968ರ ಒಳಗೆ ಅಲ್ಲಿ ಎಲೆಕ್ಷನ್ ಮಾಡಲೇ ಬೇಕು ಎಂದು ನಾವು ಆದೇಶ ಕೊಟ್ಟಿದ್ದೇವೆ. ಅಷ್ಟರಲ್ಲೇ ಯಾರೋ ಒಬ್ಬರು ಹೈಕೋರ್ಟಿಗೆ ಹೋಗಿ ಎಲೆಕ್ಷನ್ ಮಾಡಬಾರದು ಎಂದು ತಡೆ ಹಿಡಿದುದ್ದರಿಂದ ಅದರ ಅವಧಿಯನ್ನು ಸರ್ಕಾರದವರು ವಿಸ್ತರಣೆ ಮಾಡಬೇಕಾಗಿ ಬಂದು. ಅದೇರೀತಿ ಹರಿಹರ ವಿಚಾರ ಹೇಳುವುದಾದರೆ ಡಿವಿಷನಲ್ ಕಮಿಷನರು ಸರ್ಕಾರಕ್ಕೆ ಒಂದು ರಿಪೋರ್ಟ್‌ಕೊಟ್ಟು ಅಲ್ಲಿ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟನು. ಆರಿಸಬೇಕಾದರೆ ಕಾನೂನು ಬದ್ಧವಾಗಿ 15 ದಿವಸ ನೋಟೀಸ್ ಕೊಡಬೇಕು, ಅದಕ್ಕಾಗಿ ಆ ಪುರಸಭೆಯ ಅವಧಿಯನ್ನು ಫೆಬ್ರವರಿ ಕೊನೆಯವರೆಗೆ ವಿಸ್ತರಿಸಬೇಕು ಎಂದು ಕೇಳಿಕೊಂಡಿದ್ದರು. ಅಲ್ಲಿ ಈಗಾಗಲೇ ಚುನಾವಣೆ ಮುಗಿದು ಹೋಗಿದೆ. ಆದುದರಿಂದ ಅಷ್ಟು ಅವಧಿ ಬೇಕಾಗಿಲ್ಲ ಎಂದು ಸರ್ಕಾರದ ಗಮನಕ್ಕೆ ಬಂದಾಗ ಜನವರಿ 15 ರಿಂದ ಫೆಬ್ರವರಿ 15 ರ ಒಳಗೆ ಪ್ರಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್ ಎಲೆಕ್ಷನ್ ನಡೆಸಬೇಕು ಎಂದು ಪ್ರಜಾಸತ್ತಾತ್ಮಕವಾಗಿ ಒಂದು ಹೊಸ ಕೌನ್ಸಿಲ್ ಆರಿಸಿ ಬಂದನಂತರ, ಪುರಸಭೆಯ ಅವಧಿಯನ್ನು ವಿಸ್ತರಿಸುವುದು ನೈತಿಕ ದೃಷ್ಟಿಯಲ್ಲಿ ಯೋಗ್ಯವಾದುದಲ್ಲ ಎಂದು ಸರ್ಕಾರ ಮನಗಂಡು ಕಾನೂನು 18 (1)ರ ಪ್ರಕಾರ ಹರಿಹರದ ಮುನಿಸಿಪಲ್ ಕೌನ್ಸಿಲ್ ಅವಧಿಯನ್ನು 6 ತಿಂಗಳತನಕ ವಿಸ್ತರಣೆ ಮಾಡುವ ಅವಕಾಶ ಇದ್ದರೂ, ಪ್ರಸಿಡೆಂಟ್ ಮತ್ತು ವೈಸ್ ಪ್ರಸಿಡೆಂಟ್ ಎಲೆಕ್ಷನ್ ಕೂಡಲೇ ಮಾಡಬೇಕೆಂದು ಒಂದು ತಿಂಗಳಮಟ್ಟಿಗೆ ಮಾತ್ರ ವಿಸ್ತರಣೆ ಮಾಡಿದೆ ಎಂದು ಹೇಳಲು ಇಷ್ಟಪಡುತ್ತೇನೆ. ಮುಖ್ಯವಾದ ಕೆಲವು ವಿಷಯಗಳ ಬಗ್ಗೆ ಮಾನ್ಯ ಸದಸ್ಯರಿಗೆ ಉತ್ತರ ಕೊಡಲು ಪ್ರಯತ್ನ ಮಾಡಿದ್ದೇನೆ. ಕೆಲವು ಯೋಜನೆಗಳನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಏನು ತೊಂದರೆಯಾಗಿದೆ ಎಂದು ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ಕಾರ್ಪೋರೇಷನ್ ಎಲೆಕ್ಷನ್ ಯಾವಾಗ ನಡೆಸುತ್ತೀರಿ ಎಂದು ಹೇಳಲಿಲ್ಲ.

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದಕ್ಕಿಂತ ಹೆಚ್ಚಿಗೆ ಹೇಳಲು ನಾನು ಬಯಸುವುದಿಲ್ಲ. ಕಾರ್ಪೋರೇಷನ್ ಎಲೆಕ್ಷನ್ ಮಾಡಬೇಕು ಎನ್ನುವ ಉದ್ದೇಶದಿಂದ ಈಗಿನ ಸಂದರ್ಭದಲ್ಲಿ ಸೂಪರ್‌ಸೆಷನ್ ಪೀರಿಯಡ್‌ನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿದ್ದೇವೆ. ಇದಕ್ಕಾಗಿ ಶಾಸನ ಸಭೆಯ ಮುಂದೆ ತೀವ್ರವಾಗಿ ಒಂದು ಬಿಲ್ಲನ್ನು ತರುತ್ತೇವೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಕಾರ್ಪೋರೇಷನ್ ಎಲೆಕ್ಷನನ್ನು ಜೂನ್, ಜುಲೈ ತಿಂಗಳಲ್ಲಿ ಇಟ್ಟುಕೊಳ್ಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ನಾನು ಇನ್ನು ಹೆಚ್ಚು ಹೇಳಲು ಬಯಸುವುದಿಲ್ಲ. ಈ ನಾಲು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri G. DUGGAPPA (Bharamasagara).—The term of the Municipal Council, Chitradurga was extended for the second time. I know of course, that the Government have powers under Section 18 (1). The Government have ample powers. The Government have extended the life of the Municipal Council at a time when 13, out of 20 Municipal Councillors, made a representation to the Minister that the present President had done so many misdeeds and the Minister might visit the place with one of the officers and verify for himself about the truthfulness of the allegations made against some Councillors and the President. The President has not cared to call monthly meetings for nearly five months. In the face of that situation, the Government took a decision to extend the life of the Municipal Council for another six months. I request the hon. Minister to tell us whether the Government was right in extending the life of such a Council and whether his action was really warranted.

SRI B. M. PATIL.—I desire to submit that the petition of 13 members referred to by the hon. Member, was not received by the Government; nor has it come to the notice of the Government that there have been grave allegations against the Municipal Council and its President. If there are any allegations and if they are brought to the notice of Government, certainly Government would look into them and take proper action. Merely because there is a statement that there are allegations, Government cannot stop extending the life of the Municipal Council. The Municipal Council is a democratic institution and in the interest of the citizens of the town it has to function democratically. So accordingly Government have extended the term of the Council.

ಶ್ರೀ ಟಿ. ಆರ್. ಶಾಮಣ್ಣ.—ಮಂತ್ರಿಮಂಡಲದ ಬದಲಾವಣೆಯಾದ ಮೇಲೆ ಸರ್ಕಾರದ ಧೋರಣೆ ಬೆಂಗಳೂರಿನ ಬಗ್ಗೆ ಸ್ವಲ್ಪ ಬದಲಾವಣೆಯಾಗಿದೆ, ಸಂತೋಷ. ಬೆಂಗಳೂರು ಕಾರ್ಪೊರೇಷನ್ನಿಗೆ ಸರ್ಕಾರದವರು ಯಾವ ಸಹಾಯವನ್ನೂ ಮಾಡುತ್ತಿಲ್ಲ, ಏನು ಖರ್ಚಿದ್ದರೂ ಕೂಡ ಕಾರ್ಪೊರೇಷನ್ ದುಡ್ಡಿನಲ್ಲಿಯೇ ಖರ್ಚಾಗುತ್ತದೆ ಎಂದು ನಾನು ಹೇಳಿದೆ. ಸರ್ಕಾರದವರು ಎಲ್ಲ ಮುನಿಸಿಪಾಲಿಟಿಗಳಿಗೂ ಕೊಡುವ ಹಾಗೆ ತುಟ್ಟಿಭತ್ಯದಲ್ಲಿ ಒಂದು ಭಾಗವನ್ನು ಮಾತ್ರ ಕೊಡುತ್ತಿದ್ದಾರೆ. ಯಾವ ಸಹಾಯವೂ ಕೊಡದೆ ಇರುವಾಗಲೂ ಏಕೆ ದಬ್ಬಾಳಿಕೆಯನ್ನು ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ. ಅದಕ್ಕೆ ಸರಿಯಾದ ಉತ್ತರ ಬರಲಿಲ್ಲ. ಕಾವೇರಿ ಸ್ಕೀಮು ಎಷ್ಟು ದಿವಸಗಳೊಳಗಾಗಿ ಬರುತ್ತದೆ ಎನ್ನುವುದರ ಬಗ್ಗೆ ಖಚಿತವಾಗಿ ತಿಳಿಸಬೇಕು.

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಎಲ್ಲ ವಿಷಯಗಳೂ ಸರ್ಕಾರದ ಪರಿಶೀಲನೆಯಲ್ಲಿವೆ. ಸರ್ಕಾರ ಸಹಾಯ ಕೊಡುತ್ತಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಮಾನ್ಯ ಸದಸ್ಯರು ತಿಳಿದುಕೊಂಡ ಹಾಗೆ 32 ಹಳ್ಳಿಗಳು ಕಾರ್ಪೊರೇಷನ್ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತವೆ. ಈ ಗ್ರಾಮಗಳನ್ನು ಉತ್ತಮ ಪಡಿಸಿ ಅಲ್ಲಿ ಬೇಕಾದ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ಸರ್ಕಾರ ಗ್ರ್ಯಾಂಟ್ ಕೊಡಬೇಕು ಎನ್ನುವ ಧೋರಣೆಯನ್ನು ಒಪ್ಪಿಕೊಂಡಿದೆ. ಆ ಪ್ರಕಾರವಾಗಿ 1969-70ನೇ ಸಾಲಿನಲ್ಲಿ 10 ಲಕ್ಷ ರೂಪಾಯಿ ಗ್ರ್ಯಾಂಟ್ ಕೊಡಬೇಕೆಂದಿದೆ. ಇದರ ಜೊತೆಗೆ ಕಾರ್ಪೊರೇಷನ್‌ನವರು 10 ಲಕ್ಷ ರೂಪಾಯಿಗಳನ್ನು ಕೂಡಿಸಿ ಉಳಿದ ಭಾಗಗಳಲ್ಲಿ ಜನ ಯಾವ ಸೌಕರ್ಯಗಳನ್ನು ಪಡೆದಿದ್ದಾರೆಯೋ ಅದೇ ಸೌಕರ್ಯಗಳನ್ನು ಒದಗಿಸುವುದಕ್ಕೆ ಉಪಯೋಗ ಮಾಡಬೇಕಾಗಿದೆ. ಇದಕ್ಕಾಗಿ ಸರ್ಕಾರ ಗ್ರ್ಯಾಂಟ್‌ಕೊಡುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಉಚಿತ ನೀರಿನ ಬಗ್ಗೆ 1969ನೇ ಜನವರಿ ಒಂದನೇ ತಾರೀಖಿನಿಂದ ಜಾರಿಗೆ ಕೊಟ್ಟಿದ್ದಾರೆ. ಹಿಂದಿನಿಂದ ಕೊಡಬೇಕು ಎನ್ನುವುದಾಗಿ ನಾವು ಕೇಳುತ್ತಿದ್ದೆವು. ಅದರ ಬಗ್ಗೆ ಏನಾದರೂ ತೀರ್ಮಾನ ತೆಗೆದುಕೊಳ್ಳುತ್ತೀರಾ ? ಕಮಿಷನರ್ ಅವರು ಕೋತಿಗಳಿಗೆ ಕುಟುಂಬ ಯೋಜನೆ ಮಾಡಲು ಪ್ರಯತ್ನ ಮಾಡುತ್ತಿದ್ದಾರೆಂದು ಗೊತ್ತಾಗಿದೆ. ಸೊಳ್ಳೆ, ನಾಯಿ ಇಲಿ, ಇವುಗಳಿಗೂ ಕುಟುಂಬ ಯೋಜನೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಉಚಿತ ನೀರಿನ ಬಗ್ಗೆ ಸರ್ಕಾರ ಈಗಾಗಲೇ ಒಂದು ನಿರ್ಧಾರ ತೆಗೆದುಕೊಂಡಿದೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಎಷ್ಟು ನೀರು ಉಚಿತವಾಗಿ ಕೊಡಬೇಕು ಎನ್ನುವುದನ್ನು ಸರ್ಕಾರ ಈಗಾಗಲೇ ಹೇಳಿದೆ. ಈಗ ಕೊಟ್ಟಿರುವ ಸೌಲಭ್ಯಗಳು ಜನತೆಗೆ ಮುಟ್ಟಿವೆ. ಇದನ್ನು ಹಿಂದಿನಿಂದ ಕೊಡುವುದನ್ನು ಸರ್ಕಾರ ಒಪ್ಪಿಕೊಂಡಿಲ್ಲ. ಸೊಳ್ಳೆ ನಿವಾರಣೆ ಬಗ್ಗೆ ಕಾರ್ಪೊರೇಷನ್ ಕ್ರಮಗಳನ್ನು ತೆಗೆದುಕೊಂಡಿದೆ ಮತ್ತು ಅದಕ್ಕಾಗಿ 6 ಲಕ್ಷ ರೂಪಾಯಿ ಖರ್ಚು ಮಾಡುತ್ತಿದೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಯವರು).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಸುಮಾರು ನಾಲ್ಕೈದು ದಿವಸಗಳವರೆಗೂ ಅನೇಕ ಮಾನ್ಯ ಸದಸ್ಯರು ಭಾಷಣ ಮಾಡಿದ್ದಾರೆ, ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ನಾನು ಮಾನ್ಯ ಸದಸ್ಯರು ಭಾಷಣ ಮಾಡಿದಂಥ ಬಹಳ ಸಮಯದಲ್ಲಿ ಇಲ್ಲಿಯೇ ಇದ್ದೆ. ಅವರ ವಿಚಾರಗಳು, ಅವರು ಮಾಡಿದಂಥ ಟೀಕೆ ಟಿಪ್ಪಣಿಗಳು, ಇವನ್ನೆಲ್ಲ ನಾನು ಕೇಳುತ್ತಿದ್ದೆ. ಅದರಲ್ಲಿ ಬಹಳಮಟ್ಟಿಗೆ ಹೊಸದೇನೂ ಇಲ್ಲ. ತಾಲ್ಲೂಕು ಬೋರ್ಡ್ ಚುನಾವಣೆ ಮತ್ತು ಚುನಾವಣೆಗಳ ಸಮಯದಲ್ಲಿ ತಮ್ಮ ತಮ್ಮ ಮತ ಕ್ಷೇತ್ರದಲ್ಲಿ ಏನಾಯಿತು ಎಂದು ಹೇಳುವುದು ಒಂದು ಹೊಸದು. ಇದರ

ಜೊತೆಯಲ್ಲಿ ಒಂದೆರಡು ಹೊಸದೂ ಎತ್ತಿರಬಹುದು. ಹೊರತಾಗಿ ಉಳಿದ ವಿಚಾರಗಳೆಲ್ಲ 1962ನೇ ಇಸವಿಯಿಂದಲೂ ಕೇಳಿಕೊಂಡು ಬಂದ ವಿಚಾರಗಳನ್ನೇ ಹೇಳಿದ್ದಾರೆ. ಅದಕ್ಕಾಗಿ ಪದೇ ಪದೇ ಹೇಳಿದ ವಿಚಾರಗಳ ಬಗ್ಗೆ ಮತ್ತೆ ಮತ್ತೆ ಹೇಳಬೇಕಾದಂಥ ಪರಿಸ್ಥಿತಿ ಇರುವುದರಿಂದ ಅವುಗಳಿಗೆಲ್ಲ ನಾನು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ, ಅದರ ಅವಶ್ಯಕತೆ ಇಲ್ಲ ಎಂದು ತಿಳಿದು ಕೊಂಡಿದ್ದೇನೆ.

ನಾನು ಪ್ರಥಮವಾಗಿ ಒಂದು ಮಾತು ಈ ಮಾನ್ಯ ಸಭೆಗೆ ನೆನಪಿಗೆ ತಂದು ಕೊಡಬೇಕೆಂದಿದ್ದೇನೆ. ಹೋದ ಸಲ ಈ ಸಭೆ ಸೇರಿದಾಗ ನಮ್ಮಲ್ಲಿರುವ ಸೀಸನಲ್ ಕಂಡೀಷನ್ಸ್ ಬಹಳ ಕೆಟ್ಟು ಹೋಗಿದ್ದುವು, ಸಾಕಷ್ಟು ಮಳೆಯಾಗಿರಲಿಲ್ಲ, ಜನತೆಗೆ ಕೆಲಸವಿರಲಿಲ್ಲ ಮತ್ತು ಒಂದು ತರಹ ಹಾಹಾಕಾರ ಎಲ್ಲ ಕಡೆಗೂ ಇದ್ದಿತು. ಇದರ ಬಗ್ಗೆ ಚರ್ಚೆ ಇಲ್ಲಿ ಆದಾಗ ಚರ್ಚೆಗೆ ಉತ್ತರ ಕೊಡುತ್ತ ನಾನು ಒಂದು ಭರವಸೆಯನ್ನು ಕೊಟ್ಟಿದ್ದೆ. ಇವೊತ್ತು ನಮ್ಮ ಕಷ್ಟಗಳೇನೇ ಇರಲಿ ಜನ ಕಷ್ಟಕ್ಕೆ ಗುರಿಯಾಗುವುದು ಬೇಡ, ಏನಾದರೂ ನಮ್ಮ ಅಭಿವೃದ್ಧಿ ಕೆಲಸಗಳಿಗೆ ಅತಂಕ ಬಂದರೂ ಚಿಂತೆ ಇಲ್ಲ, ಜನತೆಗೆ ಕಷ್ಟವಾಗಲಾರದಂಥ ಮತ್ತು ಏನು ಕಷ್ಟವಿದೆ ಅದು ಬಹುಮಟ್ಟಿಗೆ ಕಡಿಮೆಯಾಗುವಂತೆ ಎಲ್ಲೆಲ್ಲಿ ಏನೇನು ಕಾಮಗಾರಿಗಳನ್ನು ಮಾಡಿಸಬೇಕಾಗಿದೆ, ಏನೇನು ಕಾರ್ಯಕ್ರಮ ಮಾಡಬೇಕಾಗಿದೆ ಅದನ್ನೆಲ್ಲ ಮಾಡುವುದಕ್ಕೆ ಬೇಕಾಗುವ ಹಣವನ್ನು ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎನ್ನುವಂಥ ಭರವಸೆ ಕೊಟ್ಟಿದ್ದೆ. ಮತ್ತು ಈ ಮಾನ್ಯ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಈ ಕೆಲಸ ಚೆನ್ನಾಗಿ ನಡೆಯಬೇಕು, ಕೆಲಸಕಾರ್ಯಗಳು ಅಲ್ಲಿ ಹೇಗೆ ನಡೆಯುತ್ತವೆ ಎನ್ನುವಂಥದ್ದನ್ನು ನೋಡಿಕೊಳ್ಳಬೇಕು ಎಂದು ಹೇಳುತ್ತಿದ್ದರು. ದೇಶದಲ್ಲಿ ಪರಿಹಾರ ಕಾಮಗಾರಿಗಳು ನಡೆಯುವಾಗ ಮಧ್ಯಸ್ಥಗಾರರಿಂದ ಕೆಲಸಗಳು ನಡೆಯದೆ ಯಾರಿಗೋಸ್ಕರವಾಗಿ ಹಣವನ್ನು ಖರ್ಚ ಮಾಡಲಾಗುತ್ತದೆಯೋ ಅವರಿಗೆ ಅದರ ಅನುಕೂಲ ಸಿಕ್ಕಲಾರದೆ ಹಣ ಪೋಲಾಗುವಂಥ ಪರಿಸ್ಥಿತಿ ಇರುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದಾಗ, ಇದೇ ಮಾನ್ಯ ಸಭೆಯಲ್ಲಿ ಮಂತ್ರಿಗಳಿಗೆ ಒಬ್ಬೊಬ್ಬರಿಗೆ ಒಂದೊಂದು ಜಿಲ್ಲೆಯನ್ನು ಹಂಚಿ, ಈ ಕಾಮಗಾರಿ ಕೆಲಸಕಾರ್ಯಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತೇನೆ ಎನ್ನುವ ಭರವಸೆಯನ್ನೂ ಕೊಟ್ಟಿದ್ದೆ. ಈಗಾಗಲೇ ಸುಮಾರು ಎಂಟು, ಒಂಬತ್ತು ಕೋಟಿ ರೂಪಾಯಿಗಳನ್ನು ಖರ್ಚ ಮಾಡಿದ್ದೇವೆ. ನನ್ನ ಮುಂದೆ ಅಂಕಿ ಅಂಶಗಳಿಲ್ಲ. ಅದನ್ನೆಲ್ಲ ಹೇಳಬೇಕಾದ ಅವಶ್ಯಕತೆ ಇಲ್ಲ ಎಂದು ನನಗನ್ನಿಸುತ್ತದೆ. ಸರಿಯಾಗಿ ಎಲ್ಲ ಕಡೆಯೂ ಕಾಮಗಾರಿ ಕೆಲಸಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದೇವೆ. ಈ ಒಂದು ಕೆಲಸ ದಲ್ಲಿ ಕೇಂದ್ರ ಸರಕಾರದವರು ಬಹಳಮಟ್ಟಿಗೆ ಸಹಾಯಮಾಡಿದ್ದಾರೆ, ಇನ್ನೂ ಮಾಡಬೇಕಾಗಿದೆ. ಅವರ ಟೀಂ ಇಲ್ಲಿಗೆ ಬಂದಾಗ ಅವರನ್ನು ಕರೆದುಕೊಂಡು ಹೋಗಿ ದೇಶದಲ್ಲಿ ಎಷ್ಟು ಕೆಲಸವಾಗ ಬೇಕು, ಅದಕ್ಕೆಷ್ಟು ಖರ್ಚಮಾಡಬೇಕು ಎಂಬುದನ್ನು ತೋರಿಸಿ ಅವರಿಗೆ ಮನವರಿಕೆ ಮಾಡಿದೆವು. ಅದರ ಪರಿಣಾಮವಾಗಿ ಈಗಾಗಲೇ ಸಾಕಾದಷ್ಟು ಹಣ ಕೊಟ್ಟಿದ್ದಾರೆ. ಅದರಲ್ಲಿ ಸ್ವಲ್ಪವನ್ನು ಗ್ರ್ಯಾಂಟಿನ ರೂಪವಾಗಿ, ಇನ್ನು ಸ್ವಲ್ಪವನ್ನು ಸಾಲದ ರೂಪವಾಗಿ ಕೊಟ್ಟಿದ್ದಾರೆ. ಕೇಂದ್ರ ಸರಕಾರ ಕಷ್ಟಕಾಲದಲ್ಲಿ ನಮಗೆ ಈ ರೀತಿಯಲ್ಲಿ ಸಹಾಯಮಾಡಿದ್ದಕ್ಕಾಗಿ ಈ ಸರಕಾರದವರು ತುಂಬಾ ಅಭಾರಿಯಾಗಿದ್ದಾರೆಂದು ತಿಳಿಸಬೇಕಾದ್ದು ನಮ್ಮ ಕರ್ತವ್ಯವಾಗಿದೆ.

5-00 P.M.

ತಾಲ್ಲೂಕು ಬೋರ್ಡ್ ಚುನಾವಣೆಗಳು ಬಹಳ ದಿವಸಗಳಿಂದ ಆಗದೆ ನಿಂತುಹೋಗಿತ್ತು. ಅದಕ್ಕಾಗಿ ಈ ಮಾನ್ಯ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಪ್ರತಿಯೊಂದು ಅಧಿವೇಶನದಲ್ಲೂ ತಾಲ್ಲೂಕು ಬೋರ್ಡ್ ಚುನಾವಣೆ ಮುಂದೆಹಾಕುವುದು ಒಳ್ಳೆಯದಲ್ಲ, ಚುನಾವಣೆಯನ್ನು ಆದಷ್ಟು ಜಾಗ್ರತೆ ಮಾಡಬೇಕು ಎಂದು ಪದೇಪದೇ ಕೇಳುತ್ತಿದ್ದರು. ಬಹುಶಃ ಹೋದ ಸಲ ನಾವು ಇಲ್ಲಿ ಸಭೆ ಸೇರಿದ್ದಾಗ ಅನೇಕ ಮಾನ್ಯ ಸದಸ್ಯರಿಗೆ ಒಂದು ರೀತಿಯ ಸಂಶಯವಿತ್ತು, ಬಹುಶಃ ತಾಲ್ಲೂಕು ಬೋರ್ಡ್ ಚುನಾವಣೆಯನ್ನು ಇಂಥ ಹಾಹಾಕಾರ ಪರಿಸ್ಥಿತಿಯಿರುವಾಗ ಮಾಡಬೇಕೇ ಅಥವಾ ಮುಂದುವರೆಸಬೇಕೇ ಎಂದು ಯೋಚನೆಮಾಡುತ್ತಿದ್ದಾಗ ನಾನು ದೃಢ ನಿರ್ಧಾರ ಮಾಡಿ ಏನೇಬರಲಿ, ಕಷ್ಟವೇನೇ ಬರಲಿ, ಪ್ರಸಂಗವೇನೇ ಬರಲಿ, ತಾಲ್ಲೂಕು ಬೋರ್ಡ್ ಚುನಾವಣೆಯಾಗಲೇ ಬೇಕು ಎಂದು ನಿರ್ಣಯಮಾಡಿದ ಪ್ರಕಾರ ಈ ದಿವಸ ಸಂತೋಷದಿಂದ ಹೇಳುತ್ತಿದ್ದೇನೆ. ಇಡೀ ಸಂಸ್ಥಾನ ದಲ್ಲಿ ಬಹುಶಃ ಕೆಲವಾರು ತಾಲ್ಲೂಕುಗಳಲ್ಲಿ ಹೈಕೋರ್ಟಿನಿಂದ ಅಥವಾ ಬೇರೆ ಕೋರ್ಟುಗಳಿಂದ ಸ್ಟೇ ಆರ್ಡರು ಬಂದಿರುವುದನ್ನು ಬಿಟ್ಟು ಎಲ್ಲಾ ತಾಲ್ಲೂಕುಗಳಲ್ಲೂ ಚುನಾವಣೆಯಾಗಿದೆ. ಈ ಚುನಾವಣೆಯ ಬಗ್ಗೆ ಕೆಲವು ಅಂಕಿಅಂಶಗಳನ್ನು ಸಭೆಯ ಗಮನಕ್ಕೆ ತರುವುದು ಅವಶ್ಯಕ. ಹೊಸದಾಗಿ ತಾಲ್ಲೂಕು ಬೋರ್ಡುಗಳು ರಚನೆಯಾದ ಮೇಲೆ ಸದಸ್ಯರ ಸಂಖ್ಯೆ ಸಂಸ್ಥಾನಾಮಳೆ

(ಶ್ರೀ ವೀರೇಂದ್ರ ಪಾಟೀಲ್)

3006 ಇದೆ. ಈ ಸಂಖ್ಯೆಯಲ್ಲಿ 80 ಸ್ಥಾನಗಳಿಗೆ ಸ್ಟೇ ಆರ್ಡರಾಗಿದೆ, ಚುನಾವಣೆ ನಡೆದಿಲ್ಲ. ಆ ಸ್ಥಾನಗಳಿಗೆ ಸ್ಟೇ ಆರ್ಡರು ವೆಕೇಟ್ ಆದಮೇಲೆ ಅಥವ ಕೋರ್ಟಿನಲ್ಲಿರುವ ಕೇಸುಗಳ ಖುಲಾಸೆಯಾದ ಮೇಲೆ ಚುನಾವಣೆ ನಡೆಯುವುದು. ಈಗ ಚುನಾವಣೆಯಾಗಿರುವುದರ ಪೈಕಿ 2037 ಕಾಂಗ್ರೆಸ್ಸಿನವರಿದ್ದಾರೆ, ಇಂಡಿಪೆಂಡೆಂಟ್ಸ್ 586 ಜನ, ಪಿ.ಎಸ್.ಪಿ. 133 ಜನ, ಸ್ವತಂತ್ರ ಪಕ್ಷದವರು 39 ಜನ, ಎಸ್.ಎಸ್.ಪಿ. 50 ಜನ, ಜನಸಂಘ 5 ಜನ, ರೈತಪಕ್ಷ 11 ಜನ, ಕಮ್ಯೂನಿಷ್ಟ್ ಒಬ್ಬರು ಇದ್ದಾರೆ.

ಶ್ರೀ ಎನ್. ಲೋಕಯ್ಯನಾಯಕ್ (ವೀರಾಜಪೇಟೆ).—ಪಾಯಿಂಟ್ ಆಫ್ ಆರ್ಡರ್ ಸರ್. ಕೊಟ್ಟಿರುವ ಅಂಕಿಗಳು ಸರಿಯಾಗಿಲ್ಲ. ವಿರಾಜಪೇಟೆಯಲ್ಲಿ 8 ಜನ ಆರಿಸಿಬಂದಿದ್ದಾರೆ, 6 ಜನ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ನನ್ನ ಮುಂದಿರುವ ವರದಿಯ ಪ್ರಕಾರ ಹೇಳುತ್ತಿದ್ದೇನೆ, ಅದು ಸಂಬಂಧಪಟ್ಟ ಇಲಾಖೆಯಿಂದ ಬಂದಿದೆ. ಒಂದುವೇಳೆ ಅದರಲ್ಲಿ ತಪ್ಪಿದ್ದರೆ ತಿದ್ದಿಕೊಳ್ಳುವುದಕ್ಕೆ ಹಿಂದುಮುಂದು ನೋಡುವುದಿಲ್ಲ. ವಿರಾಜಪೇಟೆಯಲ್ಲಿ ಅರ್ಧ ಭಾಗದಲ್ಲಿ ಚುನಾವಣೆಯಾಗಿದೆ, ಇನ್ನರ್ಧ ಭಾಗದಲ್ಲಿ ಚುನಾವಣೆಯನ್ನು ತಡೆಹಿಡಿಯಲಾಗಿದೆ.

ಶ್ರೀ ಎನ್. ಲೋಕಯ್ಯನಾಯಕ್.—ಚುನಾವಣೆಯಾಗಿರುವ ಕಡೆಯ ವಿಚಾರ ನಾನು ಹೇಳುವುದು.

ಶ್ರೀ ವೀರೇಂದ್ರ ಪಾಟೀಲ್.—ಏನಾದರೂ ತಪ್ಪಿದ್ದರೆ ತಿದ್ದಿಕೊಳ್ಳುವುದಕ್ಕೆ ತಯಾರಿದ್ದೇನೆ. ಎಷ್ಟು ಜನ ಚುನಾಯಿತರಾಗಿದ್ದಾರೆಂಬುದನ್ನು ಜಿಲ್ಲಾವಾರು ತಿಳಿಸಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಅನಾವಶ್ಯಕವಾಗಿ ತಪ್ಪು ಸ್ಟೇಟ್‌ಮೆಂಟ್ ಇರುವುದನ್ನು ಏಕೆ ಓದುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ತಮ್ಮ ಪ್ರಕಾರ ಅನಾವಶ್ಯಕವಾಗಿರಬಹುದು.

ಶ್ರೀ ಕೆ. ಎಚ್. ಪಾಟೀಲ್.—ಜನತಾ ಪಕ್ಷದ ವಿಚಾರ ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭೆಗೆ ನನ್ನ ಮುಂದಿರುವ ಸ್ಟೇಟ್‌ಮೆಂಟ್ ಪ್ರಕಾರ ಹೇಳುತ್ತಿದ್ದೇನೆ. ತಪ್ಪಾಗಿದ್ದರೆ ಅಂಕಿಸಂಖ್ಯೆಗಳಲ್ಲಿ ಬದಲಾವಣೆಯಾಗಿದ್ದರೆ ಇಲ್ಲವೆಂದು ವಾದಿಸುತ್ತಿಲ್ಲ. ಜನತಾ ಪಕ್ಷ 9 ಜನ, ಎಂ.ಇ.ಎಸ್. 45 ಜನ ಆರಿಸಿ ಬಂದಿದ್ದಾರೆ. 171 ತಾಲ್ಲೂಕುಗಳಲ್ಲಿ ಸುಮಾರು.........

ಶ್ರೀ ಎಂ. ಎಸ್. ಕೃಷ್ಣನ್.—ಮುಖ್ಯ ಮಂತ್ರಿಗಳು ವಿರೋಧ ಪಕ್ಷದವರ ಬಗ್ಗೆ ಹೇಳುತ್ತಿರುವ ಅಂಕಿಗಳು ಕೆಲವು ಸರಿಯಾಗಿಲ್ಲ. ಅವರಿಗೆ ಬಂದಿರುವ ಸಮಾಚಾರದ ಪ್ರಕಾರ ಹಾಗೆ ಇರಬಹುದು. ಇದನ್ನು ಹೇಳಿದರೆ ಪಬ್ಲಿಕ್ಕನ್ನು ಮಿಸ್‌ಲೀಡ್ ಮಾಡಿದಹಾಗಾಗುತ್ತದೆ. ಸರಿಯಾಗಿಲ್ಲದಿದ್ದರೆ ಆಮೇಲೆ ಸರಿಯಾದ ಅಂಕಿಅಂಶ ಕೊಡಬಹುದು.

Mr. SPEAKER.—There is no force in the point of order.

Sri K. H. PATIL.—The facts as revealed by the Chief Minister are incorrect and he is giving incorrect facts with a view to mesleading the House. We belonging to the Janatha Paksha have got figures which differ from the figure given by the Chief Minister regarding Janatha Paksha. The same may be the case with other parties also. Let him therefore satisfy himself as to the correctness of the figures before revealing them to the House. I do not say that it is the mistake of Sri Veerendra Patil. His officers are in the habit of submitting such incorrect facts. So, let him not mislead the House.

Mr. SPEAKER.—Frivolous points of order should not be raised. They can be raised only where there is a breach of a rule or procedure and not otherwise.

Sri K. H. PATIL.—If there is any disorder, I can draw the attention of the Chair to it.

Mr. SPEAKER.—Disorder means disturbance of the peace in the House.

Sri V. N. PATIL (Humnabad).—During Taluk Board elections, time and again it was assured that these elections are not on party basis. The Congress Party was not allotted any specific symbol and subsequently it was allotted. The P.S.P. was also not given any particular symbol; so also the Communist party. Most of the candidates belong to one political party or the other. So, this statement is incomplete. Without getting sufficient material it is likely to mislead the Chief Minister himself more than the House. From our party, more than 11 members have been elected.

Mr. SPEAKER.—Hon. Members have raised points of order which are not at all points of order. In the name of points of order they have taken the opportunity to make short speeches that is not the purpose with which points of order are raised. I request hon. Members not to raise such points of order and waste the time of the House. I cannot direct a Minister to make a speech in a particular manner or give certain facts as disired by hon. Members. He is entitled to make his speech in any manner he likes.

ಶ್ರೀ ವಾಟಾಳ್ ನಾಗರಾಜ್.—ಅಧಿಕಾರಿಗಳ ರಿಪೋರ್ಟ್ ಸರಿಯಲ್ಲ ಅದು ಬೇಕಾಗಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ ನಾನು ಹೇಳುತ್ತಾ ಇದ್ದದ್ದು ಅಫಿಷಿಯಲ್ ಸ್ಟೇಟ್‌ಮೆಂಟ್ ನನ್ನ ಮುಂದೆ ಬಂದಿದೆ. ಅದರಲ್ಲಿ 580 ಜನ ಇಂಡಿಪೆಂಡೆಟ್ಸ್ ಅಂತ ಇದ್ದಾರೆ. ಶ್ರೀಮಾನ್ ವಿ. ಎನ್. ಪಾಟೀಲರವರು ಹೇಳುತ್ತಾ ಇದ್ದರು, ತಾಲ್ಲೂಕು ಬೋರ್ಡಿನಲ್ಲಿ ಅವರು ತಮ್ಮ ತಮ್ಮ ಕ್ಯಾಂಡಿಡೇಟ್ಸ್‌ನ್ನು ಸೆಟ್ ಅಫ್ ಮಾಡಿಕೊಂಡಿದ್ದರು. ಕಮ್ಯೂನಿಸ್ಟ್ ಪಾರ್ಟಿಯವರೂ ಕೂಡ ಅವರ ಕ್ಯಾಂಡಿಡೇಟುಗಳನ್ನು ಸೆಟ್ ಅಪ್ ಮಾಡಿದ್ದರು. ಪಾರ್ಟಿ ಸಿಂಬಲ್ ತೆಗೆದು ಕೊಂಡು ಯಾವ ಯಾವ ಪಾರ್ಟಿಯವರು ತಮ್ಮ ತಮ್ಮ ಕ್ಯಾಂಡಿಡೇಟುಗಳನ್ನು ನಿಲ್ಲಿಸಿದ್ದಾರೆ ಎಂಬುದನ್ನು ರಿಟರ್ನಿಂಗ್ ಆಫೀಸರು ತಿಳಿಸಿದ್ದಾರೆ. ಅದರ ಪ್ರಕಾರ ಸಂಗ್ರಹಮಾಡಿದಂತಹ ಅಂಕಿಅಂಶ ಇದು. ಅದಕ್ಕೇ ನಾನು ಆಗಲೇ ಹೇಳಿದೆ ಇದರಲ್ಲಿ ಏನಾದರೂ ಲೋಪದೋಷ ಇದರೆ, ತಪ್ಪು ಇದ್ದರೆ ಅದನ್ನು ತಿದ್ದಿ ಕೊಳ್ಳುತ್ತೇನೆ. ನನ್ನ ಮುಂದೆ ಬಂದಂತಹ ವರದಿಯನ್ನು ಅವರಿಗೆ ಹೇಳುತ್ತಾ ಇದ್ದೇನೆ. ಆ ರೀತಿಯಿಂದ ಸುಮಾರು 171 ತಾಲ್ಲೂಕುಗಳ ಪೈಕಿ ಸುಮಾರು 140—141 ತಾಲ್ಲೂಕುಗಳು ಪೂರ್ತಿಯಾಗಿ ಕಾಂಗ್ರೆಸ್‌ನ ವಶದಲ್ಲಿ ಬಂದಿವೆ. ಅಲ್ಲಿಂದ ಬಹಶಃ 4 ಪಿ ಎಸ್ ಪಿ, 4 ಎಸ್ ಎಸ್ ಪಿ ಕೆಲವು ಸ್ವತಂತ್ರ ಈ ರೀತಿಯಿಂದ ಬಂದಿವೆ. ಇದನ್ನು ಏಕೆ ಹೇಳುತ್ತಾ ಇದ್ದೇನೆ ಎಂದರೆ 8—9 ವರ್ಷಗಳ ನಂತರ ಚುನಾವಣೆಯಾದರೂ ಇವತ್ತು ಸಂತೋಷದ ಸಂಗತಿ ಎಂದರೆ ಚುನಾವಣೆಯಲ್ಲಿ ಜನತೆ ಮತ್ತೆ ಕಾಂಗ್ರೆಸ್ ಸಂಸ್ಥೆಗೆ—ನಮ್ಮ ಕಾಂಗ್ರೆಸ್ ಸಂಸ್ಥೆಯ ಪ್ರತಿನಿಧಿಗಳ ಮೇಲೆ ವಿಶ್ವಾಸ ಇಟ್ಟು ಅವರನ್ನು ಚುನಾಯಿಸಿದ್ದಾರೆ,

Sri S. SIVAPPA.—What is the percentage of votes polled by the Congress? At least that may be given.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಕಾಂಗ್ರೆಸ್ ಪಕ್ಷಕ್ಕೆ ಎಷ್ಟು ಓಟು ಪೋಲ್ ಆಗಿದೆ ಎಂದು ಕೇಳಿದರು. ಆ ಅಂಕಿಅಂಶವನ್ನು ಸಂಗ್ರಹ ಮಾಡುತ್ತಾ ಇದ್ದೇನೆ. ಅದನ್ನು ಸಭೆಗೆ ಒಪ್ಪಿಸುವುದು ಬಹಳ ಅವಶ್ಯ ಎಂದು ಅನಿಸುತ್ತದೆ. ಅದನ್ನು ಒಪ್ಪಿಸುವುದರಲ್ಲಿ ಅಪೊಸಿಷನ್ ಇಂಟರೆಸ್ಟ್ ಎಷ್ಟಿದೆಯೋ ಅಷ್ಟೆ ನನ್ನ ಇಂಟರೆಸ್ಟ್ ಮತ್ತು ನನ್ನ ಪಾರ್ಟಿಯ ಇಂಟರೆಸ್ಟೂ ಕೂಡ ಇದೆ ಅದನ್ನು ಒಪ್ಪಿಸುತ್ತೇನೆ. ಆ ವಿಷಯ ಸಂಗ್ರಹಿಸುತ್ತಾ ಇದ್ದೇನೆ.

(ಶ್ರೀ ವೀರೇಂದ್ರ ಪಾಟೀಲ್)

ಇನ್ನೊಂದು ಮಾತು ಈಗ ನಾನು ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ನನಗೆ ಗೊತ್ತು, ಅದು ವಿರೋಧ ಪಕ್ಷದ ಸದಸ್ಯರಿಗೆ ರುಚಿಯಾಗಿ ಹಿಡಿಸುವಂತಹದು ಅಲ್ಲ ಎಂದು. ಆದರೂ ನನ್ನ ಕರ್ತವ್ಯ ಇದೆ. ನಾನೇನು ಮಾಡಲಿ ದುರ್ದೈವ ಅವರಿಗೆ ಬಹಳ ಕಹಿಯಾದ ಆಂಕಿಅಂಶಗಳಾದರೂ ಕೂಡ ನಾನೇನೂ ಮಾಡುವುದಕ್ಕಾಗುವುದಿಲ್ಲ ಅದನ್ನು ಕೊಡಬೇಕಾಗಿದೆ. ಚಿಕ್ಕನಾಯಕನ ಹಳ್ಳಿಯಲ್ಲಿ ಕಾಂಗ್ರೆಸ್‌ಗೆ 100 ಪರ್ಸೆಂಟ್ ಸಕ್ಸೆಸ್.

ಶ್ರೀ ಬಿ. ಭಾಸ್ಕರಶೆಟ್ಟಿ.—ಶಿಗ್ಗಾವಿಯಲ್ಲಿ ಏನಾಗಿದೆ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಅಂಕಿಅಂಶಗಳನ್ನು ಕೊಡುತ್ತಾ ಇದ್ದಾರೆ, ಹೆಂಡಕ್ಕೆ ಎಷ್ಟು ಖರ್ಚಾಯಿತು ವಗೈರೆ ಎಲ್ಲವನ್ನೂ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ರೂಲ್ ಏನಿದೆ ಎಂದರೆ ಯಾವುದಾದರೂ ಮೆಂಬರು ಮಾತನಾಡುವಾಗ ಅದನ್ನು ಮಾನ್ಯ ಸದಸ್ಯರು ಕೇಳಬೇಕು. ಈ ಅಧಿಕಾರ ಪ್ರತಿಯೊಬ್ಬ ಮೆಂಬರಿಗೂ ಕೂಡ ಇದೆ. ಮಾನ್ಯ ಸದಸ್ಯರಿಗೆ ಅವಕಾಶ ಸಿಕ್ಕಿದಾಗ ಅವರು ಮಾತನಾಡುವುದನ್ನೆಲ್ಲಾ ಮಾತನಾಡಿದ್ದಾರೆ. ಅವರು ಮಾತನಾಡಿದ ನಂತರ ಉತ್ತರ ಕೊಡುವಾಗ ಗಲಾಟೆ ಮಾಡಲಿಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರು ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ನಡೆಯಬೇಕು, ಈಗ ಗಲಾಟೆ ಮಾಡುವುದು ಸರಿಯಲ್ಲ.

Sri H. SIDDAVEERAPPA.—Sir, I want to offer a personal explanation. Unfortunately, I was not present when the Hon. Deputy Minister was replying.

Mr. SPEAKER.—I shall give you an opportunity to the hon. member for personal explanation, later on.

Sri H. SIDDAVEERAPPA.—I shall be much obliged if I get a copy of what he has said.

Mr. SPEAKER.—That will be supplied to him.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ನಾನು ಏನು ಹೇಳುತ್ತಿದ್ದೆ ಎಂದರೆ 580 ಜನ ಇಂಡಿಪೆಂಡೆಂಟ್ಸ್ ಬಂದಿದ್ದಾರೆ ಅನ್ನುವುದನ್ನು ನಾನೂ ಒಪ್ಪಿದ್ದೇನೆ ಎಂದು ಹೇಳುತ್ತಿದ್ದೆ. ಹಾಗೊಂದುವೇಳೆ ಈ ಮಾನ್ಯ ಸಭೆಯವರು ನಮ್ಮ ಆಡಳಿತ ಪಕ್ಷದವರ ಬಲ ತಾಲ್ಲೂಕ್‌ವೈಜ್ ಎಷ್ಟಿದೆ ಎಂಬುದನ್ನು ಬೇಕಾದರೆ ಅದನ್ನು ಸೈಕ್ಲೋಸ್ಟೈಲ್ ಮಾಡಿಸಿ ಎಲ್ಲರಿಗೂ ಹಂಚುತ್ತೇನೆ.

ಶ್ರೀ ಎಸ್. ಶಿವಪ್ಪ.—ಹಾಗೇ ಆ ಚುನಾವಣೆಗಳಾಗತಕ್ಕ ಕಾಲದಲ್ಲಿ ಹೆಂಡವನ್ನು ಎಲ್ಲೆಲ್ಲಿ ಹಂಚಲಾಯಿತು ಎನ್ನುವುದನ್ನೂ ತಿಳಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ವಿರೋಧ ಪಕ್ಷದ ನಾಯಕರ ಬಾಯಲ್ಲಿ ಇಂಥಾ ಶಬ್ದ ಬರುತ್ತೆಂದು ಭಾವಿಸಿರಲಿಲ್ಲ. ನಮ್ಮಲ್ಲಿ ಚುನಾವಣೆಗೆ ನಿಂತವರೆಲ್ಲಾ ಸೋತರೆ ಇಲ್ಲಿ ಇನ್ನು ಪ್ರಜಾರಾಜ್ಯ ಅನ್ನುವುದು ಎಲ್ಲಿದೆ ? ನಾನು ಮೊನ್ನೆ ಹಾಸನಕ್ಕೆ ಹೋಗಿದ್ದೆ. ಆಗ ಅಲ್ಲಿದ್ದವರನ್ನು ಇಲ್ಲಿ ಕಳೆದ ಚುನಾವಣೆಗಳು ಹೇಗೆ ನಡೆದವು ಎಂದು ಕೇಳಿದೆನು. ಹಾಗೆ ಕೇಳತಕದ್ದು ನನ್ನ ವಾಡಿಕೆ. ಆಗ ಅಲ್ಲಿದ್ದವರು ಅಲ್ಲಿ ಹಾಗಾಯಿತು, ಇಲ್ಲಿ ಹೀಗಾಯಿತು ಎಂದು ಹೇಳುತ್ತಾ ಚನ್ನರಾಯ ಪಟ್ಟಣದಲ್ಲಿ ನಮ್ಮ ಪಕ್ಷಕ್ಕೆ ಮೆಜಾರ್ಟಿ ಬರಲಿಲ್ಲ ಎಂತ ಹೇಳಿದರು. ಅಲ್ಲಿ ನಮ್ಮ ಪಾರ್ಟಿಬರಲಿಲ್ಲ ಎಂಬ ಕಾರಣದಿಂದ ನಾನು ಅಲ್ಲಿ ವಿರೋಧಪಕ್ಷದವರು ಓಟರುಗಳಿಗೆ ಹೆಂಡ ಸ್ಪಿರಿಟ್ ಇತ್ಯಾದಿಗಳನ್ನು ಹಂಚಿ ಗೆದ್ದಿದ್ದಾರೆಂದು ಹೇಳಲಾರೆ. ಹಾಗೆ ಹೇಳತಕ್ಕದ್ದು ಸರಿಯಲ್ಲ. ಪ್ರಜಾರಾಜ್ಯದಲ್ಲಿ ಒಂದು ಸಾರ್ತಿ ಜನತೆ ಇಂಥವರನ್ನು ಆರಿಸಿದ್ದಾರೆಂದ ಮೇಲೆ ಆ ವಿಚಾರ ಅಲ್ಲಿಗೇ ಮುಗಿಯಿತು. ಅದನ್ನು ಪುರಸ್ಕಾರ ಮಾಡತಕ್ಕದನ್ನು ನಾವೆಲ್ಲರೂ ಕಲಿಯಬೇಕಾಗಿದೆ. ಜನತೆ ಒಂದಾವರ್ತಿ ತೀರ್ಮಾನ ಮಾಡಿದ್ದನ್ನು ಮತ್ತೆ ನಾವು ಮರ್ಪಾಡು ಮಾಡಬೇಕೆಂಬುದು ಕುಂಟು ನೆಪವಾದೀತು. ಹಾಗೆ ಯಾರೂ ಕುಂಟು ನೆಪಗಳನ್ನು ಎತ್ತಬಾರದು. ಮೈಸೂರಿನಲ್ಲಿ ಏನಾಯಿತು ಎಂದು ಅನೇಕರು ಕೇಳುತ್ತಿದ್ದಾರೆ. ನಿಜ, ನಮಗೆ ಅಲ್ಲಿ ಸೋಲಾಗಿದೆ. ಅದನ್ನು ನಾನು ಒಪ್ಪಿದ್ದೇನೆ. ಆದರೆ ನಾನು ನಿಮ್ಮ ಹಾಗೆ ನೀವು ಅಲ್ಲಿ ಹೆಂಡ ಸರಾಯಿಗಳನ್ನು ಕುಡಿಸಿ

ಗೆದ್ದುಬಂದಿದ್ದೀರಿ ಎಂದು ಹೇಳುವುದು ಸರಿಯಲ್ಲ. ಜನತೆ ಕೊಡತಕ್ಕ ತೀರ್ಮಾನಕ್ಕೆ ನಾವು ಎಲ್ಲರೂ ತಲೆಬಾಗಬೇಕು. ಈ ದಿವಸ ಅನೇಕ ಕಡೆಗಳಲ್ಲಿ ವಿರೋಧ ಪಕ್ಷದ ಸದಸ್ಯರು ಹೆಚ್ಚಿನ ಸಂಖ್ಯೆಯಲಿ ಆರಿಸಿಬಂದಿದ್ದಾರೆ. ಅಲ್ಲಿಯೂ ನಮ್ಮ ಸರ್ಕಾರವೇ ಇರುವುದು. ಅಲ್ಲಿ ನೀವು ಜನತೆಗೆ 2–3 ರೂಪಾಯಿಗಳನ್ನೂ ಕೊಟ್ಟು ಲಂಚದ ಬಲದಮೇಲೆ ಆರಿಸಿ ಬಂದಿದ್ದೀರಿ ಎಂದು ನಾನು ಹೇಳುವುದಿಲ್ಲ. ಜನರು ಕೊಟ್ಟ ತೀರ್ಮಾನವನ್ನು ಎಲ್ಲರೂ ಒಪ್ಪಬೇಕೆಂದು ಹೇಳತಕ್ಕವನು ನಾನು. ಈ ಚುನಾವಣೆಗಳು ಮೂರು ವರ್ಷಗಳು ಕಳೆದ ನಂತರ ಮತ್ತೆ ಬರುತ್ತವೆ. ಆಗ ವಿರೋಧ ಪಕ್ಷದ ನಾಯಕರು ಯಾವ ಸಲಹೆಯನ್ನು ಕೊಟ್ಟರೂ ಮಾಡೋಣ. ಆದರೆ ನಾನು ಹೇಳುತ್ತಿರುವುದು ಯಾವ ಸಲಹೆಯನ್ನು ಕೊಡಬೇಕೋ ಆ ಕಾಲ ನೋಡಿ ಕೊಡಿ ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ಆದರೆ ಎಲ್ಲಿ ವಿರೋಧ ಪಕ್ಷದ ಸದಸ್ಯರು ಬಹುಮತದಲ್ಲಿ ಗೆದ್ದಿದ್ದಾರೆ ಅಲ್ಲಿ ನಡೆದ ಚುನಾವಣೆಗಳೆಲ್ಲಾ ಬಹಳ ಫೇರಾಗಿದ್ದುವು—ಎಲ್ಲಿ ಕಾಂಗ್ರೆಸ್‌ಪಕ್ಷದ ಸದಸ್ಯರು ಬಹು ಸಂಖ್ಯಾತರಾಗಿ ಆರಿಸಿ ಬಂದಿದ್ದಾರೆ ಅಲ್ಲಿ ನಡೆದ ಚುನಾವಣೆಗಳೆಲ್ಲಾ ಫೇರಾಗಿಲ್ಲ ಎನ್ನುವುದು ಸರಿಯಲ್ಲ.

ಶ್ರೀ ಸಿ. ಕೆ. ರಾಜಯ್ಯಸೆಟ್ಟಿ (ಚಿಕ್ಕನಾಯಕನಹಳ್ಳಿ).—ನಮ್ಮ ತಾಲ್ಲೂಕಿನಲ್ಲಿ ಮಾಂಸ ಹೆಂಡ-ಸಾರಾಯಿಗಳಿಗಾಗಿ ಲಕ್ಷಗಟ್ಟಲೆ ಖರ್ಚುಮಾಡಿದ್ದಾರೆ. ಈ ವ್ಯವಹಾರಕ್ಕಾಗಿ ಅಲ್ಲಿ ಒಂದು ಲಕ್ಷದ ಮೇಲೆ ಖರ್ಚಾಗಿದೆ.

Sri K. PUTTASWAMY.—The voters are being unnecessarily degraded

ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ಪುಟ್ಟಸ್ವಾಮಿಯವರು ಮನೆ ಮನೆಗೆ ಸರ್ಕಾರಿ ಕಾರನ್ನು ತೆಗೆದುಕೊಂಡು ಹೋಗಿ ಜನರನ್ನು ಹೆದರಿಸಿ ಬೆದರಿಸಿ ಓಟುಗಳನ್ನು ಹಾಕಿಸಿಕೊಂಡರು

ಶ್ರೀ ವೀರೇಂದ್ರ ಪಾಟೀಲ್.—ತಾಲ್ಲೂಕು ಬೋರ್ಡು ಚುನಾವಣೆಗಳಿಗೆ ಕ್ಷಾಮಪರಿಹಾರ ನಿಧಿಗೆ ಕೊಟ್ಟ ಹಣವನ್ನು ಬಳಸಿ ಪೋಲು ಮಾಡಿದ್ದಾರೆಂದು ಹೇಳತಕದ್ದು ಸತ್ಯಕ್ಕೆ ದೂರವಾದಮಾತು. ಅಲ್ಲಿ ಆ ಕಾರ್ಯಗಳು ಒಂದು ಪ್ರೋಗ್ರಾಂ ಪ್ರಕಾರ ನಡೆಯುತ್ತಿವೆ. ಅಲ್ಲಿ ಆಗತಕ್ಕ ಹಣದ ವೆಚ್ಚದ ಬಗ್ಗೆ ಪ್ರತಿಯೊಂದು ಲೆಕ್ಕಪತ್ರಗಳೂ ಆಡಿಟ್ಟಾಗುತ್ತವೆ. ಹಾಗಿರುವಾಗ ಆ ಕಾಮಗಾರಿಗಳಿಗೆ ಕೊಟ್ಟ ಹಣವನ್ನು ತಾಲ್ಲೂಕ್ ಬೋರ್ಡು ಚುನಾವಣೆಗೆ ಬಳಸಲಾಯಿತು ಅನ್ನುವುದು ಸರಿಯಾದ್ದಲ್ಲ ನ್ಯಾಯವಾದುದಲ್ಲ.

ಇನ್ನು ವಿರೋಧ ಪಕ್ಷದ ನಾಯಕರು ಮತ್ತೊಂದು ವಿಚಾರ ಕೇಳುತ್ತಿದ್ದಾರೆ. ಕಾಂಗ್ರೆಸ್ಸಿನಲ್ಲಿ ಇದ್ದ ಜನರು ಅಧಿಕಾರಕ್ಕೆ ಬಂದಮೇಲೆ ಯ್ಯಾರ್ಯಾರು ಎಷ್ಟೆಷ್ಟು ಆಸ್ತಿಮಾಡಿದ್ದಾರೆಂಬುದನ್ನು ತಿಳಿಸಬೇಕೆಂದು ಕೇಳಿದ್ದಾರೆ. ನಾನು ಮೊಟ್ಟಮೊದಲನೆಯದಾಗಿ ಇದಕ್ಕೆ ಕೈ ಹಾಕಿದವನೇ ಅಲ್ಲ. ಶ್ರೀಮಾನ್ ಎಸ್. ನಿಜಲಿಂಗಪ್ಪನವರು ಹಿಂದೆ ಇಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ ಇಲ್ಲಿ ಇದೇ ಸಭೆಯಲ್ಲಿ ಚರ್ಚೆ ನಡೆದ ಅವರಿಗೆ ಒಂದು ಮ್ಯಾನ್‌ಡೇಟನ್ನು ಕೊಡಲಾಗಿತ್ತು ಅದಾದ ನಂತರ ಅವರು ಕೆಲವರಿಗೆ ಅವರವರ ಪ್ರಾಪರ್ಟಿಯ ಒಂದು ಲಿಸ್ಟನ್ನು ಕೊಡಬೇಕೆಂದು ಅವರು ಕೇಳಿದ್ದರು. ನಾನು ಮೊದಲೇ ಹೇಳಿದಂತೆ ಆ ನೋಟೀಸನ್ನು ಕೊಟ್ಟ ನಂತರ ಅನೇಕ ಸಮಸ್ಯೆಗಳು ಉದ್ಭವವಾದವು. ನಾನು ಆಗ ಒಂದು ರಿಮೈಂಡರನ್ನು ಕೊಟ್ಟೆ. ಆಗ ಕೆಲವರು ನಿನಗೇನು ಅಧಿಕಾರವಿದೆ ಎಂದು ಕೇಳಿರತಕ್ಕವರಲ್ಲಿ ಕೆಲವರು ಹಾಲಿ ಈ ಮನೆಯ ಸದಸ್ಯರಾಗಿದ್ದಾರೆ. ಹಿಂದಕ್ಕೆ ಶ್ರೀಮಾನ್ ನಿಜಲಿಂಗಪ್ಪನವರು ಒಂದು ಪತ್ರ ಬರೆದಿದ್ದರು ಅದರ ಬಗ್ಗೆ ನಾನು ಒಂದು ರಿಮೈಂಡರನ್ನು ಕೊಟ್ಟೆ.........

ಶ್ರೀ ಎಚ್. ಸಿದ್ದವೀರಪ್ಪ.—ಈಗತಾನೇ ಮುಖ್ಯ ಮಂತ್ರಿಗಳು ಕೆಲವರು ನನ್ನ ಅಧಿಕಾರವನ್ನು ಪ್ರಶ್ನೆ ಮಾಡಿದರು ಎಂದು ಹೇಳಿದರು. ಅವರಿಗೆ ಈ ವಿಚಾರದಲ್ಲಿ ಅಧಿಕಾರವಿದೆ ಎಂಬುದನ್ನು ಧೃಡಪಡಿಸಲು ತಾವು ನಾಳೆಯೇ ಈ ಸಭೆಯ ಮುಂದೆ ಒಂದು ಮಸೂದೆಯನ್ನು ತನ್ನಿ. ಅದರಲ್ಲಿ 1947 ರಿಂದ ಕಾಂಗ್ರೆಸ್ಸಿನಲ್ಲಿ ಯಾರು ಯಾರಿದ್ದರು, ಅನಂತರ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಯಾರು ಯಾರು ಮಂತ್ರಿಗಳಾದರು ಅನ್ನತಕ್ಕವರ ಹಾಗೂ ಯಾರು ಯಾರು ಶಾಸನ ಸಭೆಗಳಲ್ಲಿ ಸದಸ್ಯರಾಗಿದ್ದರು ಎಂಬುವವರನ್ನೆಲ್ಲಾ ಸೇರಿಸಿ ಒಂದು ಪಟ್ಟಿಯನ್ನೂ ಕೂಡ ಅದಕ್ಕೆ ಲಗತ್ತು ಮಾಡಿ ತನ್ನಿ. ತಮಗೆ ಆಗ ಸಾಕಷ್ಟು ಅಧಿಕಾರವನ್ನು ನಾವು ಇಲ್ಲಿ ಕೊಡುತ್ತೇವೆ. ಆಗ ಯಾರು ಯಾರು ಕಂಪ್ಲೇಂಟನ್ನು ಕೊಟ್ಟರೂ ನೀವು ವಿಚಾರಣೆ ಮಾಡಲು ಅವಕಾಶವಿರುತ್ತದೆ. ಈ ಹಿಂದೆ ನೀವೇನೇ ಕೇಳಿದಿರಿ—ನಾನೂ ಕೊಟ್ಟೆ. ಆದರೆ ಆ ನಿಮ್ಮ ಲಿಸ್ಟಿನಲ್ಲಿರತಕ್ಕ 76 ಜನರು ಯಾರುಯಾರು ಅವರ ಹೆಸರುಗಳೇನು ? ಅವರ ಎಲ್ಲಾ ವಿಚಾರಗಳನ್ನೂ ತಾವು ಬಯಲಿಗಿಡಿ. ಅವರು ವಿಷಯಗಳನ್ನೆಲ್ಲಾ ಸರಿಯಾಗಿ ಕೊಟ್ಟಿದ್ದಾರೆಯೇ ಅಥವಾ ಇಲ್ಲವೇ ಅನ್ನುವುದನ್ನು ಜನರು ನೋಡಲಿ. ಆದರೆ ಇದೇ

(ಶ್ರೀ ಎಚ್. ಸಿದ್ದವೀರಪ್ಪ)

ಸಂದರ್ಭದಲ್ಲಿ ನನಗೆ ಗೊತ್ತಾಗಿರತಕ್ಕ ಒಂದು ವಿಷಯ ಏನೆಂದರೆ ಶಿಗ್ಗಾವಿಯ ಶಾಸನಸಭಾ ಸದಸ್ಯರು ಒಂದು ಕಡೆ ನನ್ನ ಬಗ್ಗೆ ಯಾರು ಏನು ಎನ್‌ಕ್ವೈರಿ ಬೇಕಾದರೂ ಮಾಡಿಕೊಳ್ಳಿ, ಅದಕ್ಕೆ ನಾನು ಸಾದಾ ಸಿದ್ಧನಾಗಿದ್ದೇನೆಂದು ಹೇಳಿ ಇನ್ನೊಂದುಕಡೆ ನನ್ನ ಬಗ್ಗೆ ಇದ್ದ ಎಲ್ಲಾ ಎಂಕ್ವೈರಿಗಳೂ ಮುಗಿದಿವೆ ಎಂದು, ಒಂದೊಂದು ಕಡೆಯಲ್ಲಿ ಒಂದೊಂದು ರೀತಿ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಅದೂ ಕೂಡ ತಮ್ಮ ಗಮನದಲ್ಲಿರಲಿ. ತಪ್ಪುಮಾಡಿರತಕ್ಕವನು ಅವನು ಯಾರೇ ಆಗಿರಲಿ—ಅವನಿಗೆ ಶಿಕ್ಷೆಯಾಗಲೇ ಬೇಕು. ಉಪ್ಪು ತಿಂದವನು ನೀರನ್ನು ಕುಡಿಯಲೇ ಬೇಕು.

5-30 P.M.

ನಾನು ಮಾನ್ಯ ಶ್ರೀ ವೀರೇಂದ್ರ ಪಾಟೀಲರಿಗೆ ಹೇಳುವುದು ಇಷ್ಟೇ. ಪ್ರಜಾಪ್ರಭುತ್ವ ಉಳಿಯಬೇಕು. ಪ್ರಜಾಪ್ರಭುತ್ವದಲ್ಲಿ ಜನಗಳಿಗೆ ನಂಬಿಕೆ ಬರಬೇಕೆಂದರೆ ಇಂತಹ ಪುರಾಣಗಳು ಖಂಡಿತವಾಗಿಯೂ ಯಾವುದೂ ಬಗೆಹರಿಯುವುದಿಲ್ಲ. ಇದಕ್ಕೆ ಕಾನೂನು ಬಲ ಕೊಡುತ್ತೇನೆ. ಅದನ್ನು ಮಾಡಿ; ನಾವು ಗೆದ್ದು ಬಂದಿದ್ದೇವೆಂದು ಹೇಳಿದರೆ, ಅವರ ಮಾತು ಬೇರೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಇಂದು ಈ ಪುರಾಣ ಬಗೆಹರಿಯುವುದಿಲ್ಲ. ಇನ್ನೂ ಬಜೆಟ್ ಸ್ಪೀಚ್ ಬರುತ್ತದೆ. ಅದನ್ನು ಇಲ್ಲಿಗೇ ನಿಲ್ಲಿಸಬೇಡಿ. ನೀವು ಇಂದು ಪ್ರಾರಂಭಮಾಡಿದ್ದೀರೂ ಅದನ್ನು ಮುಂದಕ್ಕೆ ತೆಗೆದುಕೊಂಡು ಹೋಗಿ.

Sri H. M. CHANNABASAPPA.—Hon. Chief Minister has raised a very important issue which requires some clarification.

Mr. SPEAKER.—The hon. member may please be brief.

†Sri H. M. CHANNABASAPPA.—It is purely a personal explanation. He said that he has done this only on the mandate from this House. That is an incorrect statement. This House did not give mandate. I have gone through the proceedings. Mr. Nijalingappa announced that he would call for the records from the members who were in power. Mr. Nijalingappa has made a policy statement. He acted in the capacity of a Chief Minister. You are also acting as Chief Minister of the Mysore State. If any Government functions, it should function only according to rule of law. On the basis or rules, one should act Under whose authority you are calling for the information ? You are trading on an incorrect falsehood. If you had followed the rules of procedure, I would have been very happy to submit whatever information you required. But tell me under what article you want to do that ? Under whose authority you want to assess the correctness of assets and liabilities ? Which is the agency and under what provision of law that agency functions ? This is what I wanted to ask. When Sri Nanje Gowda brought a Bill for the purpose of constituting an Authority to enquire into all these things, you advised the Governor not to give his consent to move the Bill. When the Lokpal institution was sought to be introduced in this State, you said 'No'. You do not Want the Commission for enquiry.

Mr. SPEAKER.—The hon. member has already taken 5 to 6 minutes. Much time should not be taken for interruption or clarification

Sri H. M. CHANNABASAPPA.—I would like to be brief if I am not interrupted. At every stage you are ringing the Bell. The Chief

Minister will please enlighten us what exactly the scheme is in his mind. We want to know whether you are going to order a Commission of enquiry to assess the assets and liabilities of the people including myself. Next point is what have you done with regard to the assets and liabilities that have been received by you. I want to ask why you opposed the Lokpal institution ? Why you advised the Governor not to permit the motion that was brought by Mr. Nanje Gowda ? We are prepared to take a challenge if the Commission of Enquiry shall be instituted as Mr. Siddaveerappa said, to enquire into the assets and liabilities of the Members. This is a challenge to the Chief Minister. If he institute an enquiry Commissisn, I will be the first man to subject myself to it.

ಶ್ರೀ ವೀರೇಂದ್ರ ಪಾಟೀಲ್.—ಅದೇ ರೋನಲ್ಲಿ ಕೂತಿರುವ ಮಾನ್ಯ ಶ್ರೀ ಸಿದ್ಧವೀರಪ್ಪನವರು ಆ ರೀತಿಯಾಗಿ ಚಾಲೆಂಜ್ ಮಾಡಲಿಲ್ಲ. ನಾನು ಅವರನ್ನು ಸ್ಟೇಟ್‌ಮೆಂಟ್ ಕೇಳಿದಕೂಡಲೇ ಅದನ್ನು ಅವರು ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಚಾಲೆಂಜ್‌ಮಾಡುತ್ತೇನೆಂದು ಹೇಳುವುದು ಸರಿಯಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಸಲಹೆಮಾಡಿದ್ದರಮೇಲೆ ಆಗಿದ್ದಂಥ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡು ಎಲ್ಲರಿಗೂ ಕಾಗದ ಬರೆದರು. ಆ ರೀತಿ ಕಾಗದ ಬರೆದಿದ್ದಕ್ಕೆ ಕೆಲವರು ಮಾಹಿತಿಗಳನ್ನು ಕೊಟ್ಟರು. ಅಂತಹವರು ಅದರ ಬಗ್ಗೆ ಏನಾದರೂ ಮಾತ ನಾಡಬಹುದು. ಕನಿಷ್ಟ ಪಕ್ಷ ಯಾರು ಅದನ್ನು ಕೊಟ್ಟಿಲ್ಲವೋ ಅಂತಹವರಿಗೆ ಅದರ ಬಗ್ಗೆ ಮಾತ ನಾಡುವುದಕ್ಕೆ ಅಧಿಕಾರವಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಸರ್ಕಾರದ ಹಣವನ್ನು ನೀವು ನುಂಗಿದ್ದೀರಿ. ಇಂದು ನಾನು ಈ ದೂರನ್ನು ಯಾರಿಗೆ ಕೊಡಬೇಕು ? you are carrupt, I Can prove it.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಯಾವಾಗಲೂ ಅದೇ ಮಾತನಾಡುತ್ತಾರೆ. ಮಾನ್ಯ ಸದಸ್ಯರೊಬ್ಬರು ಒಂದು ವಿಚಾರವನ್ನು ಹೇಳಿದರು. ಬಹುಶಃ ವಿರೋಧಪಕ್ಷದ ನಾಯಕರು ಎಂದು ಕಾಣುತ್ತದೆ. ಅದು ಲೆವಿ ಪ್ರೈಸ್ ಹೆಚ್ಚುಮಾಡಬೇಕೆಂಬುದು. ಈಗಾಗಲೇ 5 ರೂಪಾಯಿಗಳನ್ನು ಹೆಚ್ಚು ಮಾಡಿದ್ದೇವೆ. ಬಹುಶಃ ಇವರಿಗೆ 5 ರೂಪಾಯಿಗಳನ್ನು ಹೆಚ್ಚು ಮಾಡಿದ್ದು ಸಾಲಲಿಲ್ಲ, ಇನ್ನೂ ಹೆಚ್ಚು ಮಾಡಬೇಕೆಂದು ಹೇಳಿದ್ದಕ್ಕೆ ಏನು ಆಧಾರಗಳಿವೆ ? ಲೆವಿ ಪ್ರೈಸನ್ನು ಎಷ್ಟು ಹೆಚ್ಚು ಮಾಡುತ್ತೇವೋ ಅಷ್ಟರಮಟ್ಟಿಗೆ ಸೆಲ್ಲಿಂಗ್ ಪ್ರೈಸನ್ನೂ ಸಹ ಹೆಚ್ಚು ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ, ಕನ್‌ಸ್ಯೂಮರ್ಸ್ ಯಾರು ಇದಾರೋ, ಯಾರು ಸರ್ಕಾರದ ನೌಕರರೋ, ಯಾರು ಖಾಸಗೀ ಸಂಸ್ಥೆಗಳಲ್ಲಿ ನೌಕರರಾಗಿದ್ದಾರೋ, ಯಾರು ಅರ್ಬನ್ ಏರಿಯಾಗಳಲ್ಲಿ ಲೇಬರ್ ಕ್ಲಾಸ್ ಇದ್ದಾರೋ ಅಂತಹವರಿಗೆ ಆಹಾರಧಾನ್ಯ ಹಂಚಿಕೆಯನ್ನು ಟ್ಯಾಕ್ಸ್‌ಪೇಯರ್ಸ್ ಹಣದಿಂದ ಸಬ್ಸಿಡೈಜ್ ಮಾಡಬೇಕಾಗುತ್ತದೆ. ಅರ್ಬನ್‌ಏರಿಯಾ ತೆಗೆದುಕೊಂಡು ನೋಡುವುದಾದರೆ, ಅಂತಹವರು ಕೇವಲ ಸೇಕಡ 15ರಷ್ಟು ಇದ್ದಾರೆ. ಸೇಕಡ 85 ಜನರಿಂದ ತೆರಿಗೆ ತೆಗೆದುಕೊಂಡು ಇವರಿಗೆ ಸಬ್ಸಿಡೈಜ್ ಮಾಡಬೇಕೆಂದು ಹೇಳುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ.

ನಮ್ಮ ಧೋರಣೆ ಏನೆಂದರೆ, ಸರ್ಕಾರ ನೋ ಲಾಸ್, ನೋ ಪ್ರಾಫಿಟ್ ಬೇಸಿಸ್ ಮೇಲೆ ಮಾರಬೇಕಾಗುತ್ತದೆ. ನಮಗೆ ಇದರಲ್ಲಿ ಲಾಭ ಬರತಕ್ಕಂತಹ ವಿಚಾರವಿಲ್ಲ. ಅದೇ ವೇಳೆಯಲ್ಲಿ ಹಾನಿಯಾಗದಂತೆ ನೋಡಿಕೊಳ್ಳುತ್ತಿದ್ದೇವೆ. ಇವತ್ತಿನ ದಿವಸ ಲೆವಿ ಪ್ರೈಸ್ ಜಾಸ್ತಿ ಮಾಡುವು ದಾದರೆ, ಕನ್‌ಸ್ಯೂಮರ್ಸ್ ಪ್ರೈಸ್ ಜಾಸ್ತಿ ಮಾಡಬೇಕಾಗುತ್ತದೆ. ಇದರಲ್ಲಿ 5 ರೂಪಾಯಿ ಹೆಚ್ಚು ಮಾಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಈ ವ್ಯವಹಾರದಲ್ಲಿ ಸರ್ಕಾರಕ್ಕೆ ಯಾವ ತರದ ಹಾನಿ ಯಾಗಬಾರದು ಮತ್ತು ಪ್ರಾಫಿಟ್ ಆಗಬಾರದು.

ಎರಡನೆಯ ವಿಚಾರ ಫ್ರಿ ಅಲವೆನ್ಸ್ ಆಫ್ ವಾಟರ್ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ರಿಟ್ರೊಸ್ಪೆಕ್ಟಿವ್ ಇಫೆಕ್ಟಿಂದ ಕೊಡಬೇಕೆಂದು ಮಾನ್ಯ ಟಿ. ಆರ್. ಶಾಮಣ್ಣನವರು ಹೇಳಿದರು. ಮಾನ್ಯ ಸಭೆಯಲ್ಲಿ ಎಲ್ಲರಿಗೂ ಗೊತ್ತಿದೆ, ಇದು ಎಸ್ಟಿಮೇಟ್ ಕಮಿಟಿಯವರಿಗೆ ಒಪ್ಪಿಸಿದ್ದೆವು. ಆದರೆ ನಾನು ಇಷ್ಟೇ ಹೇಳುವುದು, ಎಸ್ಟಿಮೇಟ್ ಕಮಿಟಿಯವರು ಏನು ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ, ಅದನ್ನು ಜಾರಿಗೆ ತಂದಿದ್ದೇವೆ. ಆದರೆ ಫ್ರೀ ಅಲವೆನ್ಸ್ ಸರ್ಕಾರ ಕೊಡುವುದಕ್ಕಾಗುವುದಿಲ್ಲ. ಫ್ರೀ ಅಲವೆನ್ಸ್ ಕೊಡುವುದಾದರೆ, ಕಾರ್ಪೊರೇಶನಿನವರು ಸುಮಾರು 90 ಲಕ್ಷ ರೂಪಾಯಿ ವಾಟರ್

(ಶ್ರೀ ವೀರೇಂದ್ರ ಪಾಟೀಲ್)

ಬೋರ್ಡಿಗೆ ಕೊಡಬೇಕಾಗುತ್ತದೆ. ಆದ್ದರಿಂದ ಎಸ್ಟಿಮೇಟ್ ಕಮಿಟಿಯವರು ಏನು ಒಂದು ನಿರ್ಣಯ ಮಾಡಿದ್ದಾರೆ, ಅದನು ಕೊಟ್ಟಿದ್ದೇವೆ. ಅವರು ರಿಟ್ರಾಸ್ಪೆಕ್ಟಿವ್ ಎಫೆಕ್ಟಿಂದ ಕೊಡಬೇಕೆಂದೂ ಹೇಳಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಅವರಿಗೆ ಟರ್ಮ್ಸ್ ಆಫ್ ರೆಫರೆನ್ಸ್ ಏನೂ ಇರಲಿಲ್ಲ. ಎಸ್ಟಿಮೇಟ್ ಕಮಿಟಿಗೆ ತೀರ್ಮಾನಕ್ಕೆ ಬಿಟ್ಟುಬಿಟ್ಟೆವು ಎಂದು ಹೇಳುವುದು ಸರಿಯಲ್ಲ ಬೇಕಾದರೆ, ಅದರ ಚೇರ್‌ಮನ್‌ರಾದ ಘೋರ್ಪಡೆಯವರನ್ನ ಕೇಳಿ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಸರ್ಕಾರ ಯಾವಾಗಿನಿಂದ ಬೇಕಾದರೆ ಕೊಡ ಬಹುದು ಎಂದು ಅವರು ಹೇಳಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುವುದೇನೆಂದರೆ, ನೀವು ಏನು ಶಿಫಾರಸು ಮಾಡಿದ್ದೀರಿ, ಅದನ್ನು ಜಾರಿಗೆ ತಂದಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳುವುದೇನೆಂದರೆ, ನಮಗೆ ಹೇಳಿದ್ದು—ವಾಟರ್ ರೇಟ್ ಎಷ್ಟು ಕಡಿಮೆಯಾಗಬೇಕು ಎಂದು, ಅಲ್ಲದೆ, ಯಾವ ದಿನದಿಂದ, ಹೇಗೆ ಕೊಡಬೇಕೆಂದು ಇರಲಿಲ್ಲ. ಈಗ ಬೇಕಾದರೆ ಎಸ್ಟಿಮೇಟ್ ಕಮಿಟಿಗೆ ರೆಫರ್ ಮಾಡಿ.

ಶ್ರೀ ವೀರೇಂದ್ರ ಪಾಟೀಲ್.—ಈಗ ಎಸ್ಟಿಮೇಟ್ ಕಮಿಟಿಗೆ ಹಾಕುವ ಹಾಗೆ ಇಲ್ಲ. ಯಾವ ಫ್ರೀ ಅಲವೆನ್ಸ್ ಕೊಡಬೇಕಾದರೂ, ಅದನ್ನು ಕಾರ್ಪೋರೇಶನಿನವರು ತುಂಬಬೇಕಾಗುತ್ತದೆ. ನಾವು ಯಾವುದೂ ನಮ್ಮ ಬೊಕ್ಕಸದಿಂದ ಕೊಡುವ ಹಾಗೆ ಇಲ್ಲ.

ಇನ್ನು ಹೊಗ್ಗೆನಕಲ್ ಬಗ್ಗೆ ಮಾನ್ಯ ಸದಸ್ಯರು ಕೆಲವರು ಮಾತನಾಡಿದರು. ಮದ್ರಾಸಿನವರು ಹೊಗ್ಗೆನಕಲ್ ಪ್ರಾಜೆಕ್ಟ್‌ಗೆ ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡು ಮುಂದೆ ಹೋಗುತ್ತಿದ್ದಾರೆಂದು ಹೇಳಿದ್ದಾರೆ. ಈ ಪ್ರಾಜೆಕ್ಟ್ ಜಾಯಿಂಟ್ ವೆಂಚರಿನ ಪ್ರಾಜೆಕ್ಟ್ ಆಗಬೇಕೇ ಹೊರತು, ನಮ್ಮ ಏರಿಯಾ ಮುಳುಗಡೆಯಾಗುವ ಹಾಗೆ ಮದ್ರಾಸಿನವರು ಕಟ್ಟುವ ಹಾಗೆ ಇಲ್ಲ; ಅದು ಸಾಧ್ಯವೂ ಇಲ್ಲ, ಮತ್ತು ಹಾಗೆ ಕಟ್ಟುವುದಕ್ಕೆ ಅವಕಾಶ ಕೊಡುವ ಹಾಗೆಯೂ ಇಲ್ಲ. ಅದರ ಬಗ್ಗೆ ಮನಸ್ಸಿನಲ್ಲಿ ಯಾವ ತರದ ಸಂಶಯವನ್ನೂ ಮಾನ್ಯ ಸದಸ್ಯರು ಇಡಬೇಕಾಗಿಲ್ಲ.

ಅಲ್ಲಿಂದ, ಕೆಲವು ಮಾನ್ಯ ಸದಸ್ಯರು ಲಾಟರಿ ಸ್ಕೀಂನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಅರ್ಥಿಕ ಮಂತ್ರಿಯವರು ವಿಚಾರ ಮಾಡುತ್ತಿದ್ದಾರೆ, ಅವರು ಎಲ್ಲೆಲ್ಲಿ ಯಾವ ರೀತಿಯದ್ದು ಇದೆ ಎಂಬುದನ್ನು ವಿಚಾರ ಮಾಡುತ್ತಿದ್ದಾರೆ. ಕೆಲವು ದಿವಸಗಳಲ್ಲೇ ಅದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅವರು ಕೊಡಬಹುದು ಎಂದು ತಿಳಿದಿದ್ದೇನೆ

ಮುಂದೆ ಕರ್ಣಾಟಕ ಎಂದು ನಾಮಕರಣ ಮಾಡಬೇಕು ಎನ್ನತಕ್ಕ ವಿಚಾರ ಬಂತು. ಬಹುಶಃ ಈ ಒಂದು ರೀತಿ ಹೇಳುವ ವಿರೋಧ ಪಕ್ಷದ ಸಂಖ್ಯೆ ಈಗ ಜಾಸ್ತಿಯಾಗಿದೆ ಎಂದು ನನಗನಿಸುತ್ತದೆ. ನಾನು ಸುಮಾರು 1956–57ರಿಂದ ಈ ಸಭೆಯಲ್ಲಿದ್ದೇನೆ. ಆಗ ಒಂದು ಕಾಲ ಇತ್ತು—ವಿರೋಧ ಪಕ್ಷದಲ್ಲಿ 2–3 ಜನರು ಕರ್ಣಾಟಕ ಆಗಬೇಕೆಂದು ಹೇಳುತ್ತಿದ್ದರು. ಇವತ್ತಿನ ದಿವಸ ಬಹಳ ಜನರು ಇದ್ದಾರೆ. ನನಗೆ ಗೊತ್ತಿರುವ ಹಾಗೆ ಕರ್ಣಾಟಕ ನಾಮಕರಣ ಮಾಡುವುದಕ್ಕೆ ವಿರೋಧ ಬಹುಮಟ್ಟಿಗೆ ಈಗ ಕಡಿಮೆಯಾಗಿದೆ. ಇದೇ ವಾತಾವರಣ ಮುಂದುವರೆದ ನಂತರ ಕೆಲವು ಸಮಯಗಳ ನಂತರ ಒಳ್ಳೆಯ ವಾತಾವರಣದಲ್ಲಿ ಮಾಡಿದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ. ನನ್ನ ವೈಯಕ್ತಿಕ ವಿಚಾರವೇನೆಂದರೆ, ಕರ್ಣಾಟಕವಾಗಬೇಕೆಂದು ಇದೆ. ಯಾರ ಮನಸ್ಸಿನಲ್ಲೂ ಒಂದು ಕಹಿ ವಾತಾವರಣಕ್ಕೆ ಅವಕಾಶ ಕೊಡದೆ, ಎಲ್ಲರಿಗೂ ಒಂದೇ ದೃಷ್ಟಿಯಿಂದ ನೋಡಿ, ಈ ಒಂದು ಪ್ರಶ್ನೆಯನ್ನು ತೆಗೆದುಕೊಳ್ಳಬೇಕಾಗಿರುವುದರಿಂದ, ಈಗ ಅದು ಅವಶ್ಯವಿಲ್ಲವೆಂದು ಹೇಳುತ್ತೇನೆ.

ಇನ್ನು ಕರಪ್ಶನ್ ಇದೆ ಎಂದು ಪದೇ ಪದೇ ಹೇಳಿದ್ದಾರೆ. ಕರಪ್ಶನ್ ಇಲ್ಲವೆಂದು ನಾನೆಂದೂ ಹೇಳಿಲ್ಲ. ಅಥವಾ ನಾನು ಅಧಿಕಾರ ವಹಿಸಿಕೊಂಡ ಎಂಟು ತಿಂಗಳಲ್ಲಿ ಎಲ್ಲಾ ಕರಪ್ಷನ್ ಹೋಗಿದೆ ಎಂದೂ ಹೇಳುತ್ತಿಲ್ಲ. ಈ ರೋಗ ಮೈಸೂರಿಗೆ ಅಂಟಿಕೊಂಡ ರೋಗವಲ್ಲ. ಕೆಲವು ಕಡೆ ಈಗ ನಾನ್ ಕಾಂಗ್ರೆಸ್ ಸರ್ಕಾರ ಇದೆ. ಅಲ್ಲಿಯೂ ಕೂಡ ಕರಪ್ಶನ್ ಮಾಯವಾಗಿ ಹೋಗಿದೆ ಎಂದು ಯಾರೂ ಹೇಳುವ ಹಾಗಿಲ್ಲ.

Sri S. SIVAPPA.—At least they had the courage to appoint Commissions to enquire, in Bihar and Orissa States.

ಶ್ರೀ ವೀರೇಂದ್ರ ಪಾಟೀಲ್.—ಕರಪ್ಶನ್ ಯಾವ ಯಾವ ಹಂತದಲ್ಲಿ ಇದೆ ಎಂದು ವಿರೋಧ ಪಕ್ಷದ ನಾಯಕರಿಗೆ ಗೊತ್ತಿದೆ. ಇವತ್ತು ಕೆಲವು ರಾಜ್ಯಗಳಲ್ಲಿ ಸ್ವಲ್ಪ ಕಡಿಮೆ ಇರಬಹುದು, ಕೆಲವು ರಾಜ್ಯಗಳಲ್ಲಿ ಸ್ವಲ್ಪ ಹೆಚ್ಚಿಗೆಯಾಗಿರಬಹುದು. ಆದರೂ ಕರಪ್ಶನ್ ಇದೆ. ಆದರೆ ನಾನು ಬಂದ ಮೇಲೆ ಡಿವಿಜನಲ್ ಕಮಿಷನರ್ ಜೊತೆಯಲ್ಲಿ, ಡೆಪ್ಯುಟಿ ಕಮಿಷನರುಗಳ ಜೊತೆಯಲ್ಲಿ ಇದರ ಬಗ್ಗೆ ಆಡಳಿತದಲ್ಲಿ ಒಂದು ಬಿಗಿಯನ್ನು ಇಟ್ಟುಕೊಳ್ಳುವಂತೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿದ್ದೇನೆ.

ಅದೇ ರೀತಿ ಕರಪಷನ್ ಹೋಗಬೇಕು. ಇದರ ಬಗ್ಗೆ ಅನೇಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾವು ವಿಚಾರ ಮಾಡುತ್ತಿದ್ದೇವೆ. ಇದನ್ನು ಬಹುಶಃ ಮಾನ್ಯ ಸದಸ್ಯರು ಒಪ್ಪುತ್ತಾರೆಯೋ ಇಲ್ಲವೋ ಗೊತ್ತಿಲ್ಲ, ಇತ್ತೀಚಿನ 6–7 ತಿಂಗಳಲ್ಲಿ ಒಂದು ಒಳ್ಳೆಯ ವಾತಾವರಣ ಬೆಳೆಯುತ್ತಿದೆ. ಇವೊತ್ತಿನ ದಿವಸ ರಾಜ್ಯದ ಆಡಳಿತ ಮಾಡುವಂಥವರು ಆದಷ್ಟು ಜಾಗ್ರತೆ ಒಂದು ನಿರ್ಣಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅನೇಕ ವರ್ಷಗಳಿಂದ ಇದ್ದಂತಹ ಅನೇಕ ಸಮಸ್ಯೆಗಳು ಇತ್ಯರ್ಥವಾಗುತ್ತಿವೆ ಎನ್ನುವ ಒಂದು ವಾತಾವರಣ ಬೆಳೆಯುತ್ತಾ ಬಂದಿದೆ. ಮಾಯ ಮಾಡಿ ತೋರಿಸುವ ವಿಷಯ ಇದಲ್ಲ. ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈಗ 7-8 ತಿಂಗಳಿಂದ ಹಿಂದಿನಿಂದ ಇದ್ದಂತಹ ಕೆಲವು ಸಮಸ್ಯೆಗಳನ್ನು ಇತ್ಯರ್ಥ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಈ ಪ್ರಯತ್ನದಲ್ಲಿ ಎಲ್ಲರೂ ತೊಡಗಿದ್ದೇವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈ ಒಂದು ಕೆಲಸವನ್ನು ನಾವು ಮಾಡುತ್ತಿದ್ದೇವೆ, ಕೆಲವು ಕೆಲಸಗಳನ್ನು ಮಾಡಿದ್ದೇವೆ, ಮತ್ತು ಆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ವಿರೋಧಪಕ್ಷದ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರು ಕೆಲವು ರೂಲ್ಸ್‌ಗಳು ಯಾವಾಗಲೋ ಹಿಂದೆ ಮಾಡಿದಂಥಾದ್ದು ಅದನ್ನು ಬದಲಾಯಿಸಬೇಕೆಂದು ಹೇಳಿದ್ದಾರೆ. ಆದನ್ನು ನಾನು ವಿಚಾರ ಮಾಡುತ್ತಿದ್ದೇನೆ. ಆಡಳಿತದಲ್ಲಿ ದಕ್ಷತೆ ಹೆಚ್ಚಿಸುವ ದೃಷ್ಟಿಯಿಂದ ಪ್ರತಿಯೊಂದು ಇಲಾಖೆಯಲ್ಲಿಯೂ ಸ್ಕ್ರೀನಿಂಗ್ ಕಮಿಟಿಗಳನ್ನು ಮಾಡಬೇಕೆಂದು ಹೊರಟಿದ್ದೇವೆ. ಸ್ಕ್ರೀನಿಂಗ್ ಕಮಿಟಿಯ ಕೆಲಸ ಏನು ಎಂದರೆ ಯಾರು ಯಾರು ಅಧಕ್ಷರಾಗಿದ್ದಾರೆ, ಯಾರು ಯಾರು ಕಾನ್‌ಫಿಡೆನ್ಸಿಯಲ್ ರೆಕಾರ್ಡನ್ನು ಹೊರಕ್ಕೆ ಹಾಕುತ್ತಾರೆಯೋ, ಯಾರ ಯಾರ ಪ್ರಾಮಾಣಿಕತೆ ಮತ್ತು ನಿಷ್ಠೆಯ ಬಗ್ಗೆ ಅನುಮಾನ ಇದೆಯೋ, ಯಾರು ಯಾರು ತನಿಖೆಗೆ ಒಳಗಾಗಿ ಆ ತನಿಖೆಯಲ್ಲಿ ಶಿಕ್ಷೆಯಾಗಿದೆಯೋ ಅಂಥವರನ್ನು ಸ್ಕ್ರೀನ್ ಮಾಡಿ 50 ವರ್ಷಕ್ಕೇ ರಿಟೈರ್ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಇದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಪ್ರತಿಯೊಂದು ಇಲಾಖೆಯಲ್ಲಿಯೂ ಕೂಡ ಕೆಲಸ ಮಾಡತಕ್ಕ ನೌಕರರಲ್ಲಿ ಯಾರು ಅದಕ್ಷರಾಗಿದ್ದಾರೆ, ಯಾರ ವಿಷಯದಲ್ಲಿ ಅನೆಸ್ಟಿ, ಇಂಟಿಗ್ರಿಟಿ ಇವುಗಳಲ್ಲಿ ಸಂಶಯ ಬರುತ್ತದೆಯೋ ಯಾರು ಸರ್ಕಾರದ ಮೇಲೆ, ಸಮಾಜದ ಮೇಲೆ ಹೊರೆಯಾಗುವಂಥವರು ಇರುತ್ತಾರೆಯೋ ಅಂಥವರನ್ನು ಮನೆಗೆ ಕಳುಹಿಸಬೇಕು, ಕಂಪಲ್ಸರಿ ರಿಟೈರ್ ಮಾಡಿಸಬೇಕು ಎಂದು ನಾವು ವಿಚಾರ ಮಾಡುತ್ತಿದ್ದೇವೆ. ಎಲ್ಲಾ ಕೆಲಸವನ್ನೂ ಒಂದೇ ದಿವಸದಲ್ಲಿ ಮಾಡುವುದಕ್ಕಾಗುವುದಿಲ್ಲ. ಒಂದೊಂದು ಕೆಲಸವನ್ನು ತೆಗೆದುಕೊಂಡು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದರ ಒಂದು ಪರಿಣಾಮ ಏನಾದರೂ ಜನಗಳಿಗೆ ತಿಳಿಯಬೇಕಾದರೆ, ತಲಪಬೇಕಾದರೆ ಸ್ವಲ್ಪಮಟ್ಟಿಗೆ ಸಮಯ ಬೇಕಾಗುತ್ತದೆ.

ಶ್ರೀಮಾನ್ ಬಂಗಾರಪ್ಪನವರು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಸ್ಕೈಟನ್ನು ಏತಕ್ಕೆ ಬದಲಾಯಿಸಿದ್ದಾರೆ ಎಂದರೆ ಮುಖ್ಯ ಮಂತ್ರಿಗಳ ಕ್ಷೇತ್ರಕ್ಕೆ ನೀರು ಬರುವ ಉದ್ದೇಶವನ್ನು ಇಟ್ಟುಕೊಂಡು ಆ ರೀತಿ ಮಾಡಿದ್ದಾರೆಂದು ಹೇಳಿದರು. ಅವರಿಗೆ ಜಾಗರ್ಫಿ ಸರಿಯಾಗಿ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ಕ್ಷೇತ್ರ ಇರುವುದು ಅದಕ್ಕೆ 80 ಮೈಲಿ ದೂರದಲ್ಲಿ. ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನಿಂದ ಅನುಕೂಲವಾಗುವುದು ಬೇರೆ ಕ್ಷೇತ್ರಕ್ಕೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ್ದು ನನ್ನ ಕ್ಷೇತ್ರವಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ. ಮಾನ್ಯ ಸದಸ್ಯರು ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದೆ ಮಾತನಾಡಿದ್ದರಿಂದ ನಾನು ವಿಷಾದ ಪಡಬೇಕಾಗುತ್ತದೆ.

ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಮಾತನಾಡುತ್ತಾ ಮುಖ್ಯ ಮಂತ್ರಿಗಳು ಬೊಂಬಾಯಿಗೆ ಹೋಗಿ ಅಲ್ಲಿರತಕ್ಕ ಕೈಗಾರಿಕೋದ್ಯಮಿಗಳನ್ನು ಭೇಟಿ ಮಾಡಿ ಅವರನ್ನು ಕೈ ಒಡ್ಡಿ ನಮ್ಮ ರಾಜ್ಯದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಬರಬೇಕು ಎಂದು ಹೇಳುತ್ತಿದ್ದಾರೆ ಎಂದು ಹೇಳಿದರು. ಈ ವಿಚಾರದಲ್ಲಿ ತಾವು ಒಂದು ತಿಳಿದುಕೊಳ್ಳಬೇಕು ನಮ್ಮ ಮೇಲೆ ಜವಾಬ್ದಾರಿ ಇದೆ. ನಾವು ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ನಮ್ಮ ರಾಜ್ಯದಲ್ಲಿ ಕೈಗಾರಿಕೆ ಯಾವ ವೇಗದಲ್ಲಿ ಅಭಿವೃದ್ಧಿ ಆಗಬೇಕೋ ಆ ವೇಗದಲ್ಲಿ ಅಭಿವೃದ್ಧಿಯಾಗಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ನಮ್ಮಲ್ಲಿ ರಾಜ್ಯ ಪುನರ್ವಿಂಗಡನೆ ಆದಮೇಲೆ ಸುಮಾರು 6-7

(ಶ್ರೀ ವೀರೇಂದ್ರ ಪಾಟೀಲ್)

ವರ್ಷಗಳ ಕಾಲ ವಿದ್ಯುಚ್ಛಕ್ತಿ ಇರಲಿಲ್ಲ. ಆದ್ದರಿಂದ ನಮ್ಮ ಹೆಚ್ಚು ಕೈಗಾರಿಕೆಗಳು ಬರುವುದಕ್ಕೆ ಅವಕಾಶವಿರಲಿಲ್ಲ. ಈಗ ಸುದೈವದಿಂದ ನಮಗೆ ಸಾಕಷ್ಟು ವಿದ್ಯುಚ್ಛಕ್ತಿ ಬಂದಿದೆ. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ, ಅಭಿವೃದ್ಧಿ ಮಾಡುವುದಕ್ಕೆ ವಾತಾವರಣ ಚೆನ್ನಾಗಿದೆ. ಮೈಸೂರು ರಾಜ್ಯದಲ್ಲಿ ಹೋಗಿ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಬಹಳ ಅನುಕೂಲತೆ ಇದೆ ಎಂದು ಅನೇಕರು ತಿಳಿದುಕೊಂಡಿದ್ದಾರೆ. ಆದ್ದರಿಂದ ಹೊರಗಡೆಯುವರು ನಮ್ಮದೇಶದಲ್ಲಿ ಕೈಗಾರಿಕೆಯನ್ನು ಸ್ಥಾಪನೆಮಾಡುವುದಕ್ಕೆ ಬರಬಹುದು. ನಮ್ಮದೇಶದವರಿಗೆ ಅನುಕೂಲ ಮಾಡಬಾರದು ಎಂದೇನೂ ನಾವು ಇಲ್ಲ. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ನಮ್ಮವರು ಮುಂದೆ ಬರಬೇಕೆಂದು ಎಲ್ಲಾ ಕಡೆಗಳಲ್ಲೂ ಹೇಳುತ್ತಿದ್ದೇವೆ. ಆದರೆ ನಮ್ಮವರು ಯಾರು ಹಾಗೆ ಮುಂದೆ ಬರುತ್ತಿಲ್ಲ. ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ, ಕೈಗಾರಿಕೆಯನ್ನು ಅಭಿವೃದ್ಧಿ ಮಾಡುವುದಕ್ಕೆ ನಾವು ಸಹಾಯ ಮಾಡುತ್ತೇವೆಂದು ನಾವು ಹೇಳಿದ್ದೇವೆ. ನಾವು ಬೊಂಬಾಯಿಗೆ ಹೋದಾಗ ಕೂಡ ಸಾಕಷ್ಟು ರೆಸ್‌ಪಾನ್ಸ್ ಬಂತು. ಕೈಗಾರಿಕೆಯನ್ನು ಸ್ಥಾಪನೆ ಮಾಡುವ ಸಲುವಾಗಿ ಯಾವ ಅರ್ಜಿಗಳು ಬರುತ್ತವೆಯೋ ಅವುಗಳನ್ನು ನಾವು ಪರಿಶೀಲನೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ. ಅವುಗಳಿಗೆ ಕೇಂದ್ರ ಸರ್ಕಾರದವರಿಂದ ಇನ್ನೂ ಲೈಸನ್ಸ್ ಸಿಕ್ಕಿಲ್ಲ. ಅವುಗಳಿಗೆ ಲೈಸನ್ಸ್ ಕೊಟ್ಟತಕ್ಷಣ ಕೈಗಾರಿಕೆಯನ್ನು ಅವರು ಸ್ಥಾಪನೆ ಮಾಡುತ್ತಾರೆ. ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಲೈಸನ್ಸ್ ಕೊಡುವ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಯಾವ ದಾಕ್ಷಿಣ್ಯವೂ ಇಲ್ಲದೆ ನಾವು ಕಾಗದವನ್ನು ಬರೆಯುತ್ತೇವೆ. ಇದರಲ್ಲಿ ಮುಖ್ಯವಾಗಿ ನಮ್ಮ ಹತ್ತಿರ ಸಾಕಾದಷ್ಟು ಹಣ ಇದ್ದರೆ ನಾವು ಯಾರ ಹತ್ತಿರವೂ ಹೋಗುತ್ತಾ ಇರಲಿಲ್ಲ. ನಾವೇ ಮಾಡಬಹುದಾಗಿತ್ತು. ಹಣದ್ದು ಒಂದು ಮುಖ್ಯ ಕಾರಣ ಇದೆ. ಆದ್ದರಿಂದ ಇದನ್ನು ಯಾವರೀತಿ ಮಾಡಬೇಕೆಂದು ನಾವು ವಿಚಾರ ಮಾಡುತ್ತಿದ್ದೇವೆ. ಈಗ ನಮ್ಮದೇಶದಲ್ಲಿ ನಿರುದ್ಯೋಗ ಸಮಸ್ಯೆ ಒಂದು ಬೃಹದಾಕಾರವಾಗಿ ಬೆಳೆಯುತ್ತಿದೆ. ನಮಗೆ ಆಶ್ಚರ್ಯವಾಗುತ್ತಿದೆ. ನಮ್ಮ ರಾಜ್ಯದಲ್ಲಿ ಅನ್‌ಸ್ಕಿಲ್ಡ್ ಅನ್ ಎಂಪ್ಲಾಯೀಸ್ 1.45,000 ಜನ ಇದ್ದಾರೆ. ಗ್ರ್ಯಾಜುಯೇಟ್ಸ್ ಮತ್ತು ಪೋಸ್ಟ್ ಗ್ರ್ಯಾಜುಯೇಟ್ಸ್‌ಗಳು 82,000 ಜನ ಇದ್ದಾರೆ. ಇಂಜಿನಿಯರುಗಳು 1200 ಜನಗಳು ಇದ್ದಾರೆ. ಡಿಪ್ಲೊಮೋ ಹೋಲ್ಡರುಗಳು 5-6 ಸಾವಿರ ಜನಗಳು ಇದ್ದಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮೂರು ಪಂಚವಾರ್ಷಿಕ ಯೋಜನೆಗಳಿಂದ ಏನು ಪ್ರತಿಫಲ ಆಗಿದೆ ಎಂಬುದು ಇದರಿಂದ ಗೊತ್ತಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಇವೊತ್ತು ನಾನು ಹೇಳುವಂಥಾದ್ದು ನಿರುದ್ಯೋಗ ಸಮಸ್ಯೆ ಅರ್ಬನ್ ಏರಿಯಾದಲ್ಲಿ ಹೆಚ್ಚು ಕಾಣುತ್ತಿದೆ. ಹಳ್ಳಿಗಳಲ್ಲಿಯೂ ನಿರುದ್ಯೋಗ ಸಮಸ್ಯೆ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಈ ರೀತಿಯಾಗಿ ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚು ಹೆಚ್ಚು ಬೆಳೆಯುತ್ತಿದೆ. ಇದರ ಸಲುವಾಗಿ ನಾವೂ ಸಹ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆಮಾಡಿ ಅವುಗಳನ್ನು ಬೆಳೆಸುವುದಕ್ಕೆ ನಾವು ಬಹಳ ಮಟ್ಟಿಗೆ ಪ್ರಯತ್ನ ಮಾಡಬೇಕು. ಮದ್ರಾಸಾಗಲೀ, ಕಲ್ಕತ್ತಾವಾಗಲೀ, ಬೊಂಬಾಯಿ ಆಗಲೀ, ಅಲ್ಲಿಯುವರು ಕೈಗಾರಿಕೋದ್ಯಮಿಗಳು ನಮ್ಮಲ್ಲಿಗೆ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಾದರೆ ಅದು 500 ಕೋಟಿ, 600 ಕೋಟಿ ರೂಪಾಯಿಗಳ ಯೋಜನೆಯಾಗುತ್ತದೆ. ಆಗ ಅದರಿಂದ ನಮಗೆ ಹೆಚ್ಚು ವರಮಾನ ಬರುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಿರುವುದರಿಂದ ಅದರಿಂದ ನಮಗೆ ಎಷ್ಟೋ ಆದಾಯ ಸಿಕ್ಕುತ್ತದೆ. ಸೇಲ್ಸ್ ಟ್ಯಾಕ್ಸ್ ಮತ್ತು ಇನ್‌ಕಂಟ್ಯಾಕ್ಸ್ ಮೂಲಕ ಅನೇಕ ರೀತಿಯಿಂದ ನಮ್ಮ ಸರ್ಕಾರಕ್ಕೆ ವರಮಾನ ಬರುತ್ತದೆ. 2,000 ಟನ್ ಕ್ರಷಿಂಗ್ ಕ್ಯಾಪಾಸಿಟಿ ಇರುವ ಷುಗರ್ ಫ್ಯಾಕ್ಟರಿಯಲ್ಲಿ ಸರ್ಕಾರಕ್ಕೆ 30 ಲಕ್ಷ ರೂಪಾಯಿಗಳ ವರಮಾನ ಬರುತ್ತದೆ. 2,500 ಟನ್ ಕ್ರಷಿಂಗ್ ಕ್ಯಾಪಾಸಿಟಿ ಇರುವ ಷುಗರ್ ಫ್ಯಾಕ್ಟರಿಯಿಂದ 85 ಲಕ್ಷ ರೂಪಾಯಿ ಸರ್ಕಾರಕ್ಕೆ ವರಮಾನ ಬರುತ್ತದೆ. $2\frac{1}{2}$ ಯಿಂದ 3 ಕೋಟಿ ಟನ್ ಕ್ರಷಿಂಗ್ ಕ್ಯಾಪಾಸಿಟಿ ಇರುವ ಷುಗರ್ ಫ್ಯಾಕ್ಟರಿಯಿಂದ ನಮಗೆ ಎಂದರೆ ಸರ್ಕಾರಕ್ಕೆ ನೇರವಾಗಿ ಒಂದು ಕೋಟಿ ರೂಪಾಯಿಗಳ ವರಮಾನ ಬರುತ್ತದೆ. ನಮ್ಮದೇಶಕ್ಕೆ ವರಮಾನ ಯಾವರೀತಿಯಿಂದ ಹೆಚ್ಚಿಗೆ ಬರುವ ಹಾಗೆ ವಿಚಾರ ಮಾಡತಕ್ಕ ಎಲ್ಲಾ ಮಾತುಗಳನ್ನೂ ನಾವು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲವು ಸರ್ಕಾರದ ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿದೆ. ಅವು ಯಾವ ಪರಿಸ್ಥಿತಿಯಲ್ಲಿ ಇವೆ ಎಂಬುದನ್ನು ತಿಳಿದುಕೊಂಡು ಅದಕ್ಕೆ ಏನಾದರೂ ಮಾಡಿ.

ಶ್ರೀ ವೀರೇಂದ್ರ ಪಾಟೀಲ್.—ನಮ್ಮಲ್ಲಿ ಕೆಲವು ಕೈಗಾರಿಕೆಯಲ್ಲಿ ನಷ್ಟವಾಗುತ್ತಿದೆ. ಈಗಾಗಲೇ ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ; ಯಾವ ಯಾವ ಕೈಗಾರಿಕೆಯಲ್ಲಿ ನಷ್ಟವಾಗುತ್ತಿದೆ ಎಂಬುದನ್ನು ವಿಚಾರ ಮಾಡಿ ನಷ್ಟವಾಗತಕ್ಕ ಹಣವನ್ನು ಟ್ಯಾಕ್ಸ್ ಮೂಲಕವೋ ಅಥವಾ ಇನ್ನು ಯಾವುದಾದರೂ ಮುಖಾಂತರ ಅದನ್ನು ತುಂಬಬೇಕಾಗುತ್ತದೆ. ಮತ್ತು ಆ ರೀತಿ ಲಾಸ್ ಆಗದಂತೆ ಯಾವರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕೆಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಈ ಕೈಗಾರಿಕೆಗಳಲ್ಲಿ ನಷ್ಟವನ್ನು ತೋರಿಸಿ ಯಾರಿಗೋ ಅದನ್ನು ಮಾರಾಟ ಮಾಡಬೇಕೆಂದು ಪಿತೂರಿ ನಡೆಯುತ್ತಿದೆ ನಮಗೆ ಗೊತ್ತಾಗಿದೆ.

6-00 P.M.

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕೆ ಏನೂ ಹೇಳುವುದಕ್ಕಾಗುವುದಿಲ್ಲ. ಲಾಸ್ ತೋರಿಸಿ ಯಾರಿಗೂ ಮಾರಬೇಕೆಂಬ ವಿಚಾರವಿಲ್ಲ. ಕನ್ನಡಿ ಹಾಕಿಕೊಂಡು ನೋಡಿದಾಗ ಜಗತ್ತು ಆ ಗ್ಲಾಸ್‌ನ ಬಣ್ಣದಂತೆ ಕಾಣುತ್ತದೆ. ಅದರಂತೆ ಅನೇಕರಿಗೆ ಅನೇಕ ತರಹದಲ್ಲಿ ಕಾಣಬಹುದು. ಇವತ್ತು ಲಾಸ್ ಆಗುತ್ತಿದೆ. ಇದರ ಬಗ್ಗೆ ನಾವೆಲ್ಲಾ ವಿಚಾರ ಮಾಡಬೇಕಾಗಿದೆ. ಯಾರಿಗೋ ಮಾರುವುದಕ್ಕೋಸ್ಕರ ಲಾಸ್ ಮಾಡುತ್ತಿದ್ದಾರೆಂದು ಹೇಳುವುದು ಸರಿಯಲ್ಲ. ಆ ರೀತಿಯಿಂದ ವಿಚಾರ ಮಾಡುವುದಾದರೆ ಅವರುಗಳಿಗೆ ಸಂಪೂರ್ಣವಾದ ಅಧಿಕಾರ ಇದೆ.

ಶ್ರೀ ಎಸ್. ಶಿವಪ್ಪ.—ಈಗಾಗಲೇ ಎರಡನ್ನು ಮಾರಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ರೆಂಕೋ ಕಾರ್ಖಾನೆಯ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಕೈಗಾರಿಕಾ ಮಂತ್ರಿಗಳಾದ ಶ್ರೀ ರಾಜಶೇಖರಮೂರ್ತಿಯವರು ಏನೂ ಉತ್ತರ ಕೊಡಲಿಲ್ಲ. ತಾವಾದರೂ ಸಹ ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಮೈಸೂರು ರಾಜ್ಯವನ್ನೇ ಇವರು ಮಾರುವುದಕ್ಕೆ ಹೊರಟಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ರೆಂಕೋ ಕಾರ್ಖಾನೆಯಲ್ಲಿ ಪ್ರತಿವರ್ಷ 30 ಲಕ್ಷ ರೂಪಾಯಿಗಳ ಲಾಸ್ ಆಗುತ್ತಿದೆ. ಕಾರಣ ಅಲ್ಲಿ ತಯಾರಾಗುವ ಪದಾರ್ಥಗಳು ಕಾಸ್ಟ್ ಪ್ರೈಸ್‌ಗೆ ಹೋಗುತ್ತಿಲ್ಲ. ಇಲ್ಲಿ ತಯಾರಾಗುವ ಪದಾರ್ಥಗಳನ್ನು ಬೇರೆಯವರು ತಯಾರು ಮಾಡುತ್ತಿರುವುದರಿಂದ ಮತ್ತು ಕಡಿಮೆ ಬೆಲೆಗೆ ಮಾರುತ್ತಿರುವುದರಿಂದ ಈ ರೀತಿಯಾಗುತ್ತಿದೆ. ಈ ಕಾರಣದಿಂದ ಕಾಸ್ಟ್ ಪ್ರೈಸ್‌ಗೆ ಮಾರುವುದು ಕಷ್ಟವಾಗುತ್ತಿದೆ.

ಶ್ರೀ ಕೆ. ಎಚ್. ರಂಗನಾಥ್.—ಬೆಂಗಳೂರ್ ಹಾಲಿನ ಡೈರಿಯನ್ನು ಒಂದು ಕೋಟಿ 13 ಲಕ್ಷ ರೂಪಾಯಿಗಳ ಬಂಡವಾಳದಿಂದ ಸ್ಥಾಪನೆ ಮಾಡಿದಿರಿ. ಈಗ 40 ಲಕ್ಷ ರೂಪಾಯಿಗಳ ಲಾಸ್ ಆಗಿದೆ. ಬೇಕಾದಷ್ಟು ಬೆಣ್ಣೆಯನ್ನು ನುಂಗಿದ್ದಾರೆ. ಟ್ಯಾಕ್ಸ್ ಕೊಡುವವರು ಕೊಡುತ್ತಲೇ ಇದ್ದಾರೆ, ಲಾಸ್ ಆಗುವುದು ಆಗುತ್ತಲೇ ಇದೆ. ಕಾರ್ಖಾನೆಗಳನ್ನು ಮುಚ್ಚಬೇಕೆಂದು ನಾನು ಹೇಳುತ್ತಿಲ್ಲ. ಕಾರ್ಖಾನೆ ಸ್ಥಾಪಿಸಿದ ಮೇಲೆ ಸರಿಯಾಗಿ ನಡೆಸಬೇಕು. ಬೆಂಗಳೂರು ಡೈರಿಯಲ್ಲಿರುವ ಡೈರಕ್ಟರನ್ನು ವರ್ಗಮಾಡಿ ಬೇರೆಯವರನ್ನು ನೇಮಕ ಮಾಡಬೇಕು. ಒಂದು ಲಕ್ಷ ನಿರುದ್ಯೋಗಿಗಳು ಇದ್ದಾರೆಂದು ಹೇಳುತ್ತೀರಿ ಅವರಿಗೆ ಸರಿಯಾದ ಕೆಲಸ ಒದಗಿಸಿಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಒಂದು ಕಡೆ ಅಧಿಕಾರಿಗಳು ಲಾಸ್ ಮಾಡುತ್ತಿದ್ದಾರೆಂದು ಹೇಳುತ್ತೀರಿ, ಒಂದು ಕಡೆ ಮಾರಾಟ ಮಾಡುವುದರಲ್ಲಿ ಲಾಸ್ ಆಗುತ್ತಿದೆಯೆಂದು ಹೇಳುತ್ತೀರಿ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಟಾಟಾ ಕಂಪನಿಯವರು ಪದಾರ್ಥಗಳನ್ನು ಕಡಿಮೆ ಬೆಲೆಗೆ ಮಾರ್ಕೆಟ್‌ನಲ್ಲಿ ಮಾರುತ್ತಿಲ್ಲವೆ, ಆ ಕಾರ್ಖಾನೆಗಳು ಚೆನ್ನಾಗಿ ನಡೆಯುತ್ತಿಲ್ಲವೆ, ಅದೇ ರೀತಿ ನಮ್ಮ ಕಾರ್ಖಾನೆಗಳನ್ನು ಏತಕ್ಕೆ ನಡೆಸಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಈಗ ಅದರ ಸಲುವಾಗಿಯೇ ನಾನು ಹೇಳುತ್ತಿದ್ದೇನೆ. ಇವತ್ತು ಕೆಲವೊಂದು ಕಾರ್ಖಾನೆಗಳು ಚೆನ್ನಾಗಿ ನಡೆಯುತ್ತಿವೆ. ದುರ್ದೈವದಿಂದ ಕೆಲವು ಕಾರ್ಖಾನೆಗಳು ಇಲ್ಲಿಯವರೆಗೆ ಚೆನ್ನಾಗಿ ನಡೆಯುತ್ತಿದ್ದರೂ ಸಹ ಇವತ್ತಿನದಿವಸ ಲಾಸ್‌ನಲ್ಲಿ ನಡೆಯುತ್ತಿವೆ ಎಂದು ಗೊತ್ತಾಗಿದೆ. ಸೇಲ್ಸ್ ಇಂಟರ್‌ನ್ಯಾಷನಲ್‌ನಲ್ಲಿ ಲಾಸ್ ಆಗಿದೆ. ಇದರ ಬಗ್ಗೆ ಏನು ಮಾಡಬೇಕೋ ಅದನ್ನು ವಿಚಾರ ಮಾಡುತ್ತಿದ್ದೇವೆ ಎಂಬ ಸಮಾಚಾರವನ್ನು ಕೊಟ್ಟೇನೇ ಹೊರತು ನಾನು ಬೇರೆ ಏನನ್ನೂ ಹೇಳಲಿಲ್ಲ.

Sri M. S. KRISHNAN.—Are you prepared to see that a committee of this House is constituted to go into the working of these industries owned by the Government ?

ಶ್ರೀ ವೀರೇಂದ್ರ ಪಾಟೀಲ್.—ಈಗ ಒಂದು ವಿಚಾರವನ್ನು ನಾನು ಹೇಳಬೇಕಾಗಿದೆ. ಏನೆಂದರೆ ವಿರೋಧಪಕ್ಷದ ನಾಯಕರು ಮತ್ತು ಕೆಲವರು ತಮ್ಮ ಕಡೆಯ 7—8 ಜನರನ್ನು ನಮ್ಮ ಕಡೆಗೆ ಸೇರಿಸಿಕೊಂಡಿದ್ದಾರೆಂದು ಹೇಳಿದ್ದಾರೆ. ನಾನು ಅಧಿಕಾರಕ್ಕೆ ಬಂದಮೇಲೆ 4 ಜನ ಸೇರಿದ್ದಾರೆ ಇಲ್ಲಿ ನಾನಾ ಪಕ್ಷದ ಮಾನ್ಯ ಸದಸ್ಯರುಗಳು ಇದ್ದಾರೆ. ಈಗ ಯಾರ ಬಗ್ಗೆಯೂ ಟೀಕೆಟಿಪ್ಪಣಿ ಮಾಡುವುದು ಸಲ್ಲದು. ನಾನು ಸೆಂಕೆಂಡ್ ಓರಿಯೆಂಟೇಷನ್ ಸೆಮಿನಾರನಲ್ಲಿ ಪಕ್ಷಾಂತರದ ಬಗ್ಗೆ ಮಾಡಿದ ಭಾಷಣದ ಬಗ್ಗೆಯೂ ಸಹ ಕೆಲವರು ಮಾತನಾಡಿದರು. ಅದರ ಒಂದು ಕಾಪಿ ಇಲ್ಲಿದೆ. ಈ ಭಾಷಣದಲ್ಲಿ ನನ್ನ ನಿಲುವು ಏನೆಂಬುದನ್ನು ಹೇಳುತ್ತೇನೆ. ಇವತ್ತು ಯಾರಾದರೂ ಸ್ವಾರ್ಥದ ಸಲುವಾಗಿ ಪಕ್ಷಾಂತರ ಮಾಡುತ್ತಿದ್ದರೆ ಅದನ್ನು ಒಪ್ಪುವಹಾಗಿಲ್ಲ. ನಾನು ಅಧಿಕಾರಕ್ಕೆ ಬಂದಮೇಲೆ ಈ ಕಡೆಗೆ 3—4 ಜನ ಬಂದಿದ್ದಾರೆ. ಅವರುಗಳು ಯಾವುದೇ ಒಂದು ಸ್ವಾರ್ಥದಿಂದ ಬರಲಿಲ್ಲ. ನಿಸ್ವಾರ್ಥದಿಂದ ಬಂದಿದ್ದಾರೆ. ಅನ್‌ಕಂಡಿಷನಲ್ ಆಗಿ ಬಂದಿದ್ದಾರೆ. ಈಗ ಬಂದಿರುವ ನಾಲ್ಕು ಜನರಲ್ಲಿ ಮೂವರು ಸ್ವತಂತ್ರರಿದ್ದಾರೆ. ಇವರು ಚುನಾವಣೆಯಲ್ಲಿ ವೈಯುಕ್ತಿಕ ಪ್ರಭಾವದಿಂದ ಗೆದ್ದು ಬಂದಿದ್ದಾರೆ. ಪಕ್ಷದ ಪ್ರಭಾವದಿಂದ ಗೆದ್ದು ಬಂದಿಲ್ಲ.

ಶ್ರೀ ಎಸ್. ಶಿವಪ್ಪ.—ಅದನ್ನು ಹೇಳುವವರು ಸಾರ್ವಜನಿಕರು ತಾವಲ್ಲ. ನಿಮ್ಮ ಮೇಲೆ ಹೋರಾಟ ಮಾಡಬೇಕೆಂದು ಜನರು ಅವರನ್ನು ಚುನಾಯಿಸಿ ಕಳಿಸಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಈ ವಿಚಾರದಲ್ಲಿ ಹೇಳುವುದಕ್ಕೆ ನನಗೆ ಸಂಪೂರ್ಣವಾದ ಅಧಿಕಾರವಿದೆ. ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್‌ನಿಂದ ನಿಮ್ಮ ಕಡೆಗೆ ಬಂದವರಿದ್ದಾರೆ.

ಶ್ರೀ ಎಸ್. ಶಿವಪ್ಪ.—ಕಾಂಗ್ರೆಸ್ ಬಿಟ್ಟು ಬಂದರೆ ಅದು ತ್ಯಾಗವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಹೌದು ಮಧ್ಯ ಪ್ರದೇಶದಲ್ಲಿ ಕಾಂಗ್ರೆಸ್ ಕಡೆಯ ಒಬ್ಬರನ್ನು ಹೊಡೆದುಕೊಂಡು ಹೋಗಿ ಮುಖ್ಯಮಂತ್ರಿಯನ್ನಾಗಿ ಮಾಡಿದ್ದೀರಿ. ತಾವು ಮಾಡಿರುವುದನ್ನು ಯೋಚನೆ ಮಾಡಿನೋಡಿ.

ಶ್ರೀ ಎಸ್. ಶಿವಪ್ಪ.—ಮೊದಲು ತಾವೇ ಮಾಡಿ ತೋರಿಸಿದಿರಿ.

ಶ್ರೀ ವೀರೇಂದ್ರ ಪಾಟೀಲ್.—ಈಗ ನಾನು ಹೇಳುತ್ತಿರುವುದು ಪಕ್ಷದ ಪ್ರಶ್ನೆಯಲ್ಲ. ಈಗ ನಮ್ಮ ಕಡೆಗೆ ಬಂದಿರುವವರು ಸ್ವತಂತ್ರರಿದ್ದಾರೆ. ಸ್ವಪ್ರಯತ್ನದಿಂದ ಆರಿಸಿ ಬಂದವರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀ ಬಸವಣ್ಣಪ್ಪನವರು ಮತ್ತು ಶ್ರೀ ಬೊಮ್ಮಾಯಿ ಅವರುಗಳು ಒಂದೊಂದು ಪಕ್ಷಕ್ಕೆ ಸೇರಿದವರು. ಅವರುಗಳು ಸ್ವತಂತ್ರರಲ್ಲ. ಶ್ರೀ ಬಸವಣ್ಣಪ್ಪನವರನ್ನು ತಾವು ಉಪಮಂತ್ರಿಗಳನ್ನಾಗಿ ಮಾಡಿ ಅವರಿಗೆ ಒಂದು ಗೂಟದ ಕಾರನ್ನು ಕೊಟ್ಟಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್.—ಈಗ ನಮ್ಮ ಕಡೆಗೆ ಬಂದಿರುವವರು ಸ್ವಪ್ರಭಾವದಿಂದ ಆರಿಸಿ ಬಂದಿದ್ದಾರೆ. ಕಾಂಗ್ರೆಸ್‌ನ ಧ್ಯೇಯ, ಶಿಸ್ತುಗಳಲ್ಲಿ ವಿಶ್ವಾಸವಿಟ್ಟುಕೊಂಡು ಕಾಂಗ್ರೆಸ್‌ಗೆ ಸೇರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇವರುಗಳು ಕಾಂಗ್ರೆಸ್‌ಗೆ ಸೇರಿರುವುದು ಜನರಿಗೆ ಪಾಪ ಮಾಡಿದಂತಾಗುತ್ತದೆ. ಜನರು ಕಾಂಗ್ರೆಸ್‌ಗೆ ವಿರುದ್ಧವಾಗಿ ಓಟು ಮಾಡಿ ಇವರನ್ನು ಗೆಲ್ಲಿಸಿ ಕಳಿಸಿದ್ದಾರೆ. ಆದ್ದರಿಂದ ಇವರು ಮತ್ತೆ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ನಿಂದ ನಿಂತು ಬೇಕಾದರೆ ಗೆದ್ದು ಬರಲಿ.

(ನಾಲ್ಕೈದು ಜನ ಸದಸ್ಯರುಗಳು ಒಟ್ಟಿಗೆ ನಿಂತು ಮಾತನಾಡಿದರು.)

Mr. SPEAKER.—Hon. Members should hear each other with respect. They may offer their comments when they get their chance. I therefore request members not to interrupt.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುವುದೇನೆಂದರೆ ಅವರು ಏನು ಹೇಳಿದ್ದಾರೋ ಅದನ್ನು ನಾವು ಪೂರ್ತಿ ಕೇಳಿದ್ದೇವೆ. ಈಗ ನಾವು ಹೇಳುವುದನ್ನೂ ಅವರು ಕೇಳಬೇಕು ? ನಾನು ನನ್ನ ಸ್ಟೇಟುಮೆಂಟಿನಲ್ಲಿ ಏನು ಹೇಳಿದ್ದೇನೆ ಅದನ್ನೇ ಇಲ್ಲಿ ನಾನು ಓದುತ್ತೇನೆ.

This is what I stated in my inaugural address to the Orientation Seminar for state Legislators held in Bangalore recently.—

"One other matter, which is uppermost in my mind is the malady of defection. This is happing in some states and made all of us sore. The psychology of defection has to be deeply gone into. I feel and agree with those who have said times without number, that these defections are done more for gaining power".

(*Sri H. B. Jwalaniah rose*)

Mr. SPEAKER.—I request Sri Jwalaniah, to sit down. When I am standing, no hon. member can stand. I am not concerned which party is in power and which party is in opposition. I am concerned with the procedure in this House. I want every member to be heard with due attention without interruption. The member need not be agitated. He may take the floor on some other occasion and criticise them that will be all right, If the Hon. Chief Minister yields, I have no objection for Sivappa, to intervene. But, I find the Hon. Chief Minister is not yielding. So, there should not be any interruptions.

ಶ್ರೀ ಎಸ್. ಶಿವಪ್ಪ,—ಸ್ವಪ್ರಭಾವದಿಂದ ಎಂದು ಮಂತ್ರಿಗಳು ಹೇಳಿದರು. ಅವರು ಚುನಾವಣೆ ಯಾದಾಗ ಯಾವ ರೀತಿ ಅಪೀಲು ಕೊಟ್ಟಿದ್ದರು ಅದರ ಕಾಪಿ ನನ್ನ ಕಡೆ ಇದೆ. ಅದನ್ನು ತಮ್ಮ ಕಡೆಗೆ ಕೊಡುತ್ತೇನೆ. ತಾವು ಇದನ್ನು ನಂಬುತ್ತೀರಾ?

ಶ್ರೀ ಹೆಚ್. ಎನ್. ನಂಜೇಗೌಡ.—ಅವರಿಗೆ 52 ಎಕರೆಗಳಷ್ಟು ಜಮೀನು ಕೊಟ್ಟರು, ಅದ ಕ್ಕಾಗಿ ಅವರು ಬಂದರು.

ಶ್ರೀ ವೀರೇಂದ್ರ ಪಾಟೀಲ್.—ತಾವು ಏನೇನು ವಿಚಾರಗಳನ್ನು ಹೇಳಿದ್ದೀರೋ ಅವೆಲ್ಲಾ ವಿಚಾರಗಳನ್ನು ನಾವು ಪೂರ್ತಿಯಾಗಿ ಕೇಳಿರುವುದರಿಂದ ನಾವು ಹೇಳುವುದನ್ನು ತಾವು ಕೇಳಲೇ ಬೇಕು. ಇದರ ಮೇಲೆ ಬಹಳ ದೊಡ್ಡದಾದ ಟೀಕೆಗಳು ಬಂದಿರುವುದರಿಂದ ಇದರ ಬಗ್ಗೆ ನಾನು ಹೇಳುವುದು ಅವಶ್ಯವಿದೆ, ತಾವು ಡಿಫೆಕ್ಟರ್ಸ್ ಎಂದು ಹೇಳುವಾಗ ಇದರಲ್ಲಿ ನನ್ನ ನಿಲುವು ಏನು ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ತಿಳಿಸಬೇಕು. ಇದರಲ್ಲಿ ಪರಸ್ಪರ ವ್ಯಾಮೋಹದಿಂದ ಹೇಳಬೇಕಾ ದುದೇನಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಮಂತ್ರಿಗಳಾಗಿರುವ ಶ್ರೀಮಾನ್ ಬಸವಣ್ಣಪ್ಪನವರು ಹೇಗೆ ಬಂದರು ಎಂದು ತಾವೇ ವಿಚಾರ ಮಾಡಿ ಹೇಳಿದರೆ ನಿಮಗೇ ಗೊತ್ತಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಅನೇಕರು ನಮ್ಮ ಪಾರ್ಟಿಯಲ್ಲಿ ವಿಶ್ವಾಸ ಇಟ್ಟಿರುವವರು ನಮ್ಮ ಪಾರ್ಟಿಗೆ ಸೇರಬೇಕೆಂದು ಬರುತ್ತಾರೆ. ಇದನ್ನು ತಾವು ನೋಡುತ್ತಲೇ ಇದ್ದೀರಿ. ಅನೇಕ ಜನರಲ್ಲಿ ನಮ್ಮ ಕಾಂಗ್ರೆಸ್ಸು ಪಕ್ಷದಲ್ಲಿ ವಿಶ್ವಾಸ ಇಲ್ಲ ಎಂದು ನಮ್ಮ ಪಕ್ಷದಿಂದ ಹೊರಗೆ ಹೋಗಿ ರುವವರೂ ಇದ್ದಾರೆ, ಅನೇಕರು ಕಾಂಗ್ರೆಸ್ಸು ಪಕ್ಷವನ್ನು ಬಿಟ್ಟು ಬಂದು ಒಂದು ಹೊಸ ಪಕ್ಷವನ್ನು ಕಟ್ಟಿಕೊಂಡು ಚುನಾವಣೆಗಳಲ್ಲಿ ಆರಿಸಿ ಬಂದಿರುತ್ತಾರೆ. ಇದನ್ನು ನಾವು ನೋಡುತ್ತಲೇ ಇದ್ದೇವೆ. Congress is the mother organization. ಈ ಪಾರ್ಟಿಯೊಳಗೇನೇ ಮೊದಲಗೆ ಪಿ. ಎಸ್. ಪಿ. ಪಾರ್ಟಿಯವರು, ಕಮ್ಯುನಿಸ್ಟ್ ಪಾರ್ಟಿಯವರು, ಎಸ್. ಎಸ್. ಪಿ. ಯವರು ಇದ್ದರು. ಈಚೆಗೆ ಇವರೆಲ್ಲಾ ಹೊರಗೆ ಹೋದರು.

Mr. SPEAKER.—I ruquest Sri Sivappa, to resist the temptation to interrupt.

ಶ್ರೀ ಎಸ್. ಶಿವಪ್ಪ.—ಕಾಂಗ್ರೆಸ್ಸು ಪಕ್ಷದವರು ತ್ಯಾಗ ಮಾಡಿದುದರಿಂದ ಇವರೆಲ್ಲಾ ಹೊರಗೆ ಹೋದರು ಎಂದರೆ ಭೋಗದಿಂದ ಹಾಗೂ ವ್ಯಾಮೋಹದಿಂದ ಹೊರಕ್ಕೆ ಹೋದರು.

ಶ್ರೀ ವೀರೇಂದ್ರ ಪಾಟೀಲ್.—ಕಾಂಗ್ರೆಸ್ಸಿನವರಲ್ಲದವರು ಉತ್ತರ ಪ್ರದೇಶ ಹರಿಯಾಣ ಹಾಗೂ ಮಧ್ಯ ಪ್ರದೇಶದಲ್ಲಿ ಮುಖ್ಯ ಮಂತ್ರಿಗಳಾಗಿದ್ದಾರೆ. ಇವರೆಲ್ಲಾ ಬಹಳ ತ್ಯಾಗ ಮಾಡಿ ಬಂದವರು ಎಂದು ನಮ್ಮ ಮಾನ್ಯ ವಿರೋಧದ ಪಕ್ಷದ ನಾಯಕರು ಹೇಳುತ್ತಾರೋ ಏನೋ. ಮಾನ್ಯ ಸದಸ್ಯ ರಾದ ಶಿವಪ್ಪನವರು ಹೇಳುವುದೇ ತ್ಯಾಗ ಎಂದು ಅವರು ಹೇಳುವುದಾದರೆ ಅದನ್ನು ನಾನೂ ಒಪ್ಪುತ್ತೇನೆ. ಇದರ ಬಗ್ಗೆ ನಾನೇನು ಹೇಳುವಂತಿಲ್ಲ. . ಯಾರಾದರೂ ಒಂದು ಸಂಸ್ಥೆಯಲ್ಲಿದ್ದು ಅದರಲ್ಲಿ ವಿಶ್ವಾಸವಿಲ್ಲದೇ ಇದ್ದಾಗ ಆ ಪಕ್ಷದಿಂದ ಹೊರಕ್ಕೆ ಹೋಗುತ್ತಾರೆ, ಇದು ಅವರ ವಿಶ್ವಾಸ ಹಾಗೂ ಧೋರಣೆಯನ್ನು ತೋರಿಸುತ್ತದೆ. ಹಿಂದೆ ನಮ್ಮ ಪಕ್ಷದಲ್ಲಿದ್ದವರು ಸುಮಾರು 10-12 ಜನರು ಪಕ್ಷ ಬಿಟ್ಟು ಪಿ. ಎಸ್. ಪಿ. ಪಕ್ಷಕ್ಕೆ ಹೋದರು ಮತ್ತು ಕೆಲವು ಜನ ಆ ಪಕ್ಷದಿಂದ ಬೇರೆ ಪಕ್ಷಕ್ಕೆ ಹೋದರು.

ಶ್ರೀ ಎಸ್. ಶಿವಪ್ಪ.—ಶ್ರೀ ಅಶೋಕ ಮೆಹತಾರವರು ಏತಕ್ಕಾಗಿ ಪಕ್ಷ ಬಿಟ್ಟು ಹೊರಕ್ಕೆ ಹೋದರು? ಇದರ ಬಗ್ಗೆ ಹೇಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ತಮಗೂ ಗೊತ್ತಿದೆ ಅವರು ರೆಸಿಗ್ನೇಷನ್ ಏತಕ್ಕಾಗಿ ಕೊಟ್ಟರು ಎನ್ನುವುದು, ಅವರಿಗೇನೂ ಅಧಿಕಾರ ವ್ಯಾಮೋಹ ಇಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ. ಒಂದು ರೀತಿಯಾದ ಸಿಚುಯೇಷನ್ ಇಸ್ರೇಲ್ ರಾಷ್ಟ್ರದ ವಿಚಾರದಲ್ಲಿ ಅನುಸರಿಸುತ್ತಿರುವ ನೀತಿಗಾಗಿ ಅವರು ಒಂದು ರೀತಿಯಾದ ಧೋರಣೆ ತಳೆದು ಆ ರೀತಿ ರಾಜೀನಾಮೆ ಕೊಡ ಬೇಕಾಯಿತು. ಅವರಿಗೆ ಅಧಿಕಾರಕ್ಕೆ ಅಂಟಿಕೊಂಡು ಇರಬೇಕೆಂದು ಏನೂ ಇಲ್ಲ.

Sri H. M. CHANNABASAPPA.—We should not talk anything about persons who are not here to defend themselves.

Sri VEERENDRA PATIL.—I have not mentioned the name of any individual. In fact, it is the Opposition Leader who mentioned the name of Sri Ashok Mehta.

Sri H. M. CHANNABASAPPA.—Whether it is this side or that said, no Member should drag in names.

Sri VEERENDRA PATIL.—I fully agree with hon. Sri Chananbasappa.

Mr. SPEAKER.—He is completely right.

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕಾಗಿ ಈ ಪ್ರಶ್ನೆಯನ್ನು ಇಲ್ಲಿ ಹೇಳುವುದು ಅವಶ್ಯವಿದೆ ಮತ್ತು ಇದನ್ನು ಅಧಿಕಾರ ವ್ಯಾಮೋಹದಿಂದ ನಾನು ಹೇಳುತ್ತಿಲ್ಲ.

Sri S. SIVAPPA.—I appreciate. Let him take one hour—I do not mind. This is a very important subject. There cannot be one-way traffic. You must also allow us to have our say. I want to participate and you must give me one hour.

Mr. SPEAKER.—First, let the reply by the hon. Chief Minister be finished.

ಶ್ರೀ ವೀರೇಂದ್ರ ಪಾಟೀಲ್.—ನನ್ನ ಪಕ್ಷಕ್ಕೆ ಪಕ್ಷಾಂತರ ಮಾಡಿಕೊಂಡು ನಾಲ್ಕು ಜನ ಬಂದರು ಎನ್ನುವುದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಎಂದು ಅವರ ಬಗ್ಗೆ ಇಲ್ಲಿ ಅನೇಕರು ಮೋಟಿವ್ಸ್ ಆಟ್ರಿಬ್ಯೂಟ್ ಮಾಡಿ ಮಾತನಾಡಿದ್ದಾರೆ. ಅವರು ಮಾಡಿದ ಭಾಷಣಗಳನ್ನು ಹಾಗೂ ಟೀಕೆಗಳನ್ನು ಕೇಳಿದಮೇಲೆ ನಾನು ಅಧಿಕಾರ ಸ್ಥಾನದಲ್ಲಿರುವುದರಿಂದ ಅದರ ಬಗ್ಗೆ ಇಲ್ಲಿ ಪೂರ್ತಿ ಹೇಳಬೇಕಾಗಿದೆ.

Sri H. N. NANJE GOWDA.—I rise on a point of order, Sir. We have spoken about the defectors in this House and it is open to the members concerned to defend. The Chair may give an opportunity to them to explain and not to the Chief Minister.

(The Deputy Minister Sri Magavi stood up and spoke)

Sri H. N. NANJE GOWDA (*Addressing Sri Magavi*) * * * *

(*Several hon. Members stood up in protest against the remarks of Sri H. N. Nanje Gowda*)

Mr. SPEAKER.—The way we are behaving is rather unbecoming of us. I did not hear what Sri Nanje Gowda said. There was so much of confusion prevailing. It is not fair to go on like this. I request the member to follow the procedure.

Sri B. RACHAIAH (Minister for Agriculture).—Hon. Member should not pass such remarks.

Mr. SPEAKER.—I am requesting the hon. Members to behave on the floor of the House in a manner be fitting the highest democratic institution in the State. As a Leader of the Ruling Party the Chief Minister is entitled to defend and have his say against any criticism levelled against his party or against any member of his party. There is no force in the point of order.

Sri K. PUTTASWAMY.—I rise to a point of order, Sir. The hon. Member Sri H. N. Nange Gowda has used the words * * * * * against an hon. Member. I feel that the context in which they were used they are unparliamentary. May I request the Chair to kindly rule that they are unparliamentary and ask the hon' Member to withdraw them. ?

Mr. SPEAKER.—If one hon. Member insults another, that shows that he has no respect for himself. Now. The Hon. Minister Sri Puttaswamy has raised a point of order saying that the words * * * * used by the hon. Member Sri Nanje Gowda are unparliamentary. I feel that in the context in which they were used they are most objectionable and I therefore ruled that they should be expunged.

ಶ್ರೀ ಎಸ್. ಶಿವಪ್ಪ.—ತಾವು ರೂಲಿಂಗ್ ಕೊಡುವುದಕ್ಕೆ ಮುಂಚೆ * * * * ಎನ್ನುವ ಶಬ್ದ ಅನೇಕ ಸಾರಿ ಪಾರ್ಲಿಮೆಂಟ್‌ನಲ್ಲಿ ಯೂಸ್ ಆಗಿದೆ. ದಯವಿಟ್ಟು ತಾವು ಇದಕ್ಕೆ ಹೇಸ್ಟಿ ರೂಲಿಂಗ್ ಕೊಡಬೇಡಿ.

Sri RAMAKRISHNA HEGDE (Minister for Finance, Planning and Youth Welfare).--It is the practice that every member addresses the Chair. It is not the practice that a member addresses another member. Whenever a member says something, it is presumed that it is said to the Chair. I do not know whether the hon'ble Member who in a fit of anger said * * * * and also said * * * * meant another member or the Chair.

Sri H. M. CHANNABASAPPA.—Sir I would like to submit that as the Leader of the Opposition put it, very many exchanges have taken place in the past. So far as I remember, the words * * * * is not unparliamentary. So, the matter may kindly be examined before the Chair gives a ruling.

**** Matter expunged as ordered by the Chair.

Mr. SPEAKER.—Whether a word is parliamentary or unparliamentary depends on the context in which it is used, and for this I depend upon the authority of 'Parliamentary Procedure in India by Muckerji'. There is a chapter on 'Unparliamentary Expressions' and on page 195 he has said :

> "The following are by no means an exhaustive list of expressions which has been held to be unparliamentary :—
>
> * * * * * *
>
> The expressions of course will have to be read with reference to the context in which it is spoken."

On page 212, the expression now used is there and it has been held to be unparliamentary.

Sri B. V. MAGAVI (Deputy Minister for Public Works).—The Chair should order the hon'ble Member to withdraw those words.

Sri K. PUTTASWAMY.—The Chair may rule it out as unparliamentary and also direct the hon'ble Member to withdraw it.

ಶ್ರೀ ವಾಟಾಳ್ ನಾಗರಾಜ್. —ಇದೇ ಸಭೆಯಲ್ಲಿ ಗೋಪಾಲಗೌಡರು ಆರ್. ಎಂ. ಪಾಟೀಲರನ್ನು ಷಟ್ ಅಪ್ ಎಂದು ಹೇಳಿದಾಗ, ಆಗ ಅದು ಅನ್‌ಪಾರ್ಲಿಮೆಂಟರಿ ಎಂದು ಹೇಳಲಿಲ್ಲ.

ಅಧ್ಯಕ್ಷರು.—ನನ್ನ ರೂಲಿಂಗನ್ನು ಯಾರೂ ಟೀಕೆ ಮಾಡುವ ಹಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ತಮ್ಮ ರೂಲಿಂಗನ್ನು ಟೀಕೆ ಮಾಡುತ್ತಾ ಇಲ್ಲ. ?

ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ಮಾನ್ಯ ಸದಸ್ಯರಾದ ಮುನಿಯಪ್ಪನವರು ಎದ್ದಾಗ ಇನ್ನೊಬ್ಬ ಸದಸ್ಯರು ಕೂತುಕೊಳ್ಳಿರಿ ಎಂದು ಹೇಳಿದರು. ಇದು ಸರಿಯೇ ಅಧ್ಯಕ್ಷರು ಹೇಳಬೇಕು.

ಅಧ್ಯಕ್ಷರು.—ಆ ಸದಸ್ಯರು ಹೇಳಬಾರದು. ಅವರಿಗೆ ಆ ರೀತಿ ಹೇಳುವ ಅಧಿಕಾರ ಇಲ್ಲ.

6–30 P.M.

Sri K. PUTTASWAMY.—Sir, the hon'ble member used the words . * * * * These are two expressions that he used. I requested that you may kindly rule them as unparliamentary and direct the hon'ble member to withdraw those expressions. Whenever an hon'ble member uses such expressions which are not ordinarily used on the floor of the House, he should be called upon to withdraw those expressions. This is a matter left to the Chair. I do not want to pursue it further.

Sri K. H. RANGANATH.—It is already ordered to be expunged by the Chair.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಾವು ಬಹಳ ತಾಳ್ಮೆಯಿಂದ, ಸೌಜನ್ಯದಿಂದ ತಡೆದುಕೊಂಡು ಬಂದಿದ್ದೇವೆ. ಮಾನ್ಯ ಶಿವಪ್ಪನವರಿಗೆ, ಸಿದ್ಧವೀರಪ್ಪನವರಿಗೆ, ಚನ್ನಬಸಪ್ಪನವರಿಗೆ ಗೌರವ ಕೊಡಬೇಕೆಂಬ ಉದ್ದೇಶದಿಂದ ತಡೆದುಕೊಂಡಿದ್ದೇವೆ. ಮೊನ್ನೆ ಒಬ್ಬ ಮಂತ್ರಿಗಳು 'ಓಹೋ' ಎಂದು ಹೇಳಿದ್ದಕ್ಕೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ರೂಲಿಂಗ್ ಕೊಡಲಾಯಿತು. ಆ ಪ್ರಕಾರ ಅದನ್ನು ನಾವು ಬಹಳ ಸೌಜನ್ಯದಿಂದ, ಶಾಂತತೆಯಿಂದ ಒಪ್ಪಿಕೊಂಡೆವು. ಈಗ ಒಬ್ಬ ಮಾನ್ಯ ಸದಸ್ಯರು (* * * *) ಎಂದು ಹೇಳಿದುದನ್ನು ಕೇಳಿ ಮನಸ್ಸಿಗೆ ಬಹಳ ವ್ಯಥೆಯಾಗಿದೆ. ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕೋ, ಬೇಡವೋ ಎನ್ನುವಂಥ ಪರಿಸ್ಥಿತಿ

**** Matter expunged as ordered by the Chair.

ಬರಬಹುದು. ತಮ್ಮಲ್ಲಿ ನನ್ನ ನಮ್ರ ವಿನಂತಿ ಏನೆಂದರೆ ಈ ದಿವಸ ಆ ಮಾನ್ಯ ಸದಸ್ಯರು ಹೇಳಿದಂತ ಮಾತುಗಳನ್ನು ವಾಪಸು ತೆಗೆದುಕೊಂಡು ತಿದ್ದಿಕೊಳ್ಳಲಿ. ಇದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

Sri H. M. CHANNABASAPPA.—The Chair in its wisdom gave its ruling on a certain matter. It is not open to any member of thisHouse to comment on that or to call upon the Chair to do something more or something less. The ruling of the Chair is the last word and it is not open to any member to say that the Chair should not have given that ruling and that it should be reopened. A ruling once given is final and it cannot be reopened. I impress upon you, Sir, to stickt it. Not only you but anybody who occupies the Chair has to do so. So I appeal to the hon'ble members and also to you, Sir, that these are matters which cannot be reopened according to the whims and fancies of any hon'ble member. The matter has been disposed of and a ruling has been given in this matter that it may be expunged. I am sure you have got the courage to stick to it and you will not yied to pressure.

Sri K. PUTTASWAMY.—I am happy that the hon'ble member Sri Channabasappa has come to our rescue. You will please recollect that the ruling that you have given is with respect to the use of the words (* * * *) The hon'ble member Sri Channabasappa is suggesting that we should accept it. In all humility I accept the Chair's ruling. I am not questioning it.

But, Sir, you will remember that though I submitted for your consideration the other expression used by him. namely, (* * * *) it escaped your attention. Now may I submit to you that the expression that he has used, (* * * *) as I already said, is not only unparliamentary, but also defamatory and derogatory to the dignity and prestige of this House? Therefore, I submit that you may be pleased to rule that expression also as unparliamentary and now call upon the hon'ble member to withdraw that.

Sri H. M. CHANNABASAPPA.—The Chair has already given a ruling that it did not hear that expression and that ruling cannot be changed now.

Mr. SPEAKER.—I did not hear the later portion of the remarks but I am told that it is there on record (* * * *) Now that it has been brought to may notice that it is there on record, I rule that the expression (* * * *) is unparlimentary and indecent. I leave the matter there.

If the hon. Member Sri Nanje Gowda thinks that it is indecent-and there is no doubt about it he may express regret. I think there is nothing wrong in expressing regret for using those words. I make an appeal to him.

Sri K. H. RANGANATH.—There is already a ruling that "jumping like a monkey" is not unparliamentary. When the word "monkey" itself is not unparliamentary as per the ruling given in this very House, how can you say that "buffoon" is unparliamentary ?

***** Matter not recorded as ordered by the Chair.

Sri S. SIVAPPA.—I want you, Sir, to show the authority where the word "buffoon" has been treated as uuparliamentary.

* * * *

Sri K. PUTTASWAMY.—I am sorry I have to intervene again. The hon'ble member Sri Channabasappa rightly pointed out that it is not open to any hon. member to qusstion the ruling of the Speaker and it is all the more so that the Leader of the Opposition should not do that.

Sri S. SIVAPPA.—I do not want to take a lesson from the Minister for Parliamentary Affairs. If you want to give a ruling, Sir you will have to be very careful. Mr. Puttaswamy is not the authority.

Mr. SPEAKER.—I have given a ruling that the word "buffoon" is not parliamentary. Though I am not bound to cite the authority for that, in order to satisfy the curiosity of the Leader of the Opposition I may cite here the authority. In More's book on "Parliamentary procedure" at page 309 it is stated that to call a member "buffoon" is unparlimentary.

Sri S. SIVAPPA.—Under what circumstance ?

Sri K. H. PATIL.—Since all these have been expunged by the valuble ruling of the chair, what is there left to be withdrawn ? There is nothing to be withdrawn.

Sri S. SIVAPPA.—Now that you have shown the authority I accept that ruling that it is unparliamentary. But since you have already expunged the said expression, there is nothing left now to be withdrawn.

* * * *

Mr. SPEAKER.—I am sorry what is going on is very deplorable. Sri Nanje Gowda in the heat of the moment said something which is unparliamentary. I said that it is undignified and that the hon. Member should express regret for that. I request Sri Nanje Gowda to express a word of regret.

Sri P. V. AITHAL.—I rise to a point of order.

Mr. SPEAKER.—There is no point of order.

Sri H. N. NANJE GOWDA.—Sir, I had to use those words because the Deputy Minister, provoked me to say that. If he had not provoked me, I would not have used those words. Though I am not sorry about the words used, I withdraw those words because the Chair has given a Ruling.

Sri P. V. AITHAL.—Sir, I rise to a Point of Order.

Mr. SPEAKER.—The hon. Member should not make any comments upon the Ruling of the Chair.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಶ್ರೀ ಅಗ್ನಿಹೋತ್ರಿಗಳು ಹೇಳಿದ್ದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

**** Matter expunged as ordered by the Chair.

Sri K. PUTTASWAMY.—Sir, should we not stop all this ?

Sri S. SIVAPPA.—All this is due to some Members on the other Side provoking us.

Mr. SPEAKER.—I appeal to both Sides not to provoke each other.

Sri K. H. RANGANATH.— * * * *

Mr. SPEAKER.—I have not heard those words. I shall go through the entire records and I shall consider what can be done tomorrow. I have given my direction and the Ruling should be respected.

Sri M. S. KRISHNAN.—Sir, you were pleased to ask one Member to withdraw the words which you considered unparliamentary in your wisdom. Is it not correct that the threating words used by a Member on the other side also should also be withdrawn ? The hon. Member Sri Agnihotri told Sri Vatal Nagaraj. as *** How can he warn him ? I would request you to direct him also to withdraw those words.

Mr. SPEAKER.—I have already informed the House that I have not heard those words. I shall go through the record. ರಿಕಾರ್ಡ್ ನೋಡಿ ಏನು ಮಾಡಬೇಕೆಂಬುದನ್ನು ಯೋಚನೆ ಮಾಡುತ್ತೇನೆ. ನಾನು ಮಾತನಾಡುವಾಗ ಮಾನ್ಯ ಸದಸ್ಯರು ನಿಂತಿರಬಾರದು ಎಂದು ಎಷ್ಟು ಸಲ ಹೇಳಬೇಕು. Hon. Member Sri Krishnan should not committ hat mistake.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ದುರ್ದೈವದಿಂದ ಇಷ್ಟೊಂದು ಸಮಯವನ್ನು ಸರಿಯಾಗಿ ಉಪಯೋಗ ಮಾಡಲಿಲ್ಲವಲ್ಲಾ ಎಂದು ನನಗನ್ನಿಸುತ್ತದೆ. ನಾನು ಅನೇಕ ವಿಚಾರಗಳನ್ನು ಹೇಳಬೇಕೆಂದಿದ್ದೆ. ಈ ವಾತಾವರಣ ನೋಡಿದಮೇಲೆ ಹೇಳುವುದಕ್ಕೆ ಹೆಚ್ಚು ಮನಸ್ಸಾಗುವುದಿಲ್ಲ. ಆದರೂ 5 ನಿಮಿಷಗಳಲ್ಲಿ ನಾನು ನನ್ನ ವಿಚಾರಗಳನ್ನು ಮುಗಿಸುತ್ತೇನೆ. 4 ಜನ ನಮ್ಮ ಕಡೆಗೆ ಬಂದಿರುವ ಬಗ್ಗೆ ಹೇಳುತ್ತಿದ್ದೆ. ಅಷ್ಟರಲ್ಲಿ ಗಲಾಟೆ ಪ್ರಾರಂಭವಾಯಿತು. ಸ್ವಾರ್ಥಕ್ಕಾಗಿ ಯಾರೂ ಬಂದಿಲ್ಲ, 4 ಜನರದೇ ಪ್ರಶ್ನೆಯಿಲ್ಲ.

Sri S. SIVAPPA.—Sir, the Hon. Chief Minister cannot arrogate all the wisdom to himself. Whether it is the Chief Minister or Sivappa, they cannot arrogate to themselves all the wisdom to speak on this.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳುವುದನ್ನು ಸಮಾಧಾನದಿಂದ ಕೇಳಬೇಕು. ಸದಸ್ಯರುಗಳು ತಾಳ್ಮೆಯನ್ನು ಕಳೆದುಕೊಳ್ಳಬಾರದು.

ಶ್ರೀ ವೀರೇಂದ್ರ ಪಾಟೀಲ್.—ಈ ಮಾನ್ಯ ಸಭೆಯಲ್ಲಿ ಇಷ್ಟು ಸಮಾಧಾನದಿಂದ ಹೇಳುತ್ತಿದ್ದೇನೆ. ಯಾವುದೂ ಪ್ರವೋಕೇಷನ್ ಇಲ್ಲ. ಒಂದು ಮಾತನ್ನು ಅರ್ಧಕ್ಕೆ ಮುಗಿಸಿದ್ದೆ, ಅದನ್ನು ಮುಗಿಸಬೇಕು, ಅದನ್ನು ಹೇಳುತ್ತಿದ್ದೇನೆ. 4 ಜನ ಸದಸ್ಯರು ಇವತ್ತು ನನ್ನ ಪಕ್ಷದವರಾಗಿದ್ದಾರೆ.

ಶ್ರೀ ಎಸ್. ಶಿವಪ್ಪ.—ಅವರು ಚುನಾಯಿತರಾಗಿ ಬಂದಿದ್ದಾರೆ, ಜನರು ಆರಿಸಿ ಕಳಿಸಿದ್ದಾರೆ. It is the people who have elected them.

ಅಧ್ಯಕ್ಷರು.—ಯೋಗ್ಯವಾದ ಸಮಯ ನೋಡಿಕೊಂಡು ಮಾತನಾಡಿದರೆ ಒಳ್ಳೆಯದು.

ಶ್ರೀ ಎಸ್. ಶಿವಪ್ಪ.—ಮಾತಿಗೂ ಕೃತಿಗೂ ಸ್ವಲ್ಪ ಸಂಬಂಧವಿರಬೇಕು.

Sri H. N. NANJE GOWDA.—Sir, on this very matter, which the Chief Minister is dealing, I raised a point of order that the Members of this House have got the opportunity to defend themselves.

**** Matter expunged as ordered by the Chair.

Mr. SPEAKER.—He raised the point and I have given my ruling. Perhaps the Member was not attentive. I said that as the Leader of the Party he is entitled to defend his Party as well as the Members of his Party to the best of his ability.

Sri S. SIVAPPA.—Sir, my objection is that they were not elected on his Party ticket.

Mr. SPEAKER.—Rightly or wrongly they have joined the ruling Party. The hon. member may raise it at the appropriate time.

ಶ್ರೀ ವೀರೇಂದ್ರ ಪಾಟೀಲ್.—ಅವರು ಎಷ್ಟೇ ಇಂಟರಪ್‌ಷನ್ ಮಾಡಿದರೂ ಈ ಒಂದು ವಿಚಾರವನ್ನು ಮುಗಿಸದೇ ಬಿಡುವಹಾಗೇ ಇಲ್ಲ.

Sri P. V. AITHAL.—The Chief Minister was saying that 4 persons have joined his party. But the Press report only two. The other two are having brain-wash and they are under probationary course.

Mr. SPEAKER.—I have received intimation from 4 members stating that they have resigned from their erstwhile Associations and joined the Congress Party. If any member is saying anything relevant on the floor of the House, others should hear him patiently. Hon. Members may take another occasion to give any reply.

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಅವರು ಯಾರನ್ನು ಸೇರಿಸಿಕೊಳ್ಳುತ್ತಾರೆ, ಬಿಡುತ್ತಾರೆ ಎಂಬುದು ಅವರ ಪಾರ್ಟಿಗೆ ಸಂಬಂಧಪಟ್ಟದ್ದು. ಇನ್ನೂ 25 ಜನ ಇತ್ತಕಡೆಯವರು ಅತ್ತ ಕಡೆಗೆ ಹೋಗುವುದಾದರೆ ಅತ್ತಕಡೆಯವರು ಇತ್ತ ಕಡೆಗೆ ಬರುವುದಾದರೆ ಅವರನ್ನು ಸೇರಿಸಿಕೊಳ್ಳುವುದು ಬಿಡುವುದು ಪಾರ್ಟಿಗೆ ಸಂಬಂದಪಟ್ಟ ವಿಚಾರ, ಅದು ಈ ಶಾಸನ ಸಭೆಯಲ್ಲಿ ಚರ್ಚೆ ಮಾಡತಕ್ಕ ವಿಚಾರ ಅಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಹಾಗಾದರೆ ಆ ವಿಚಾರವನ್ನು ಇಲ್ಲಿ ಏಕೆ ಕೇಳುತ್ತಾ ಇದ್ದೀರಿ !

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಇವತ್ತು ಅವರು ಪ್ರತಿಪಾದನೆ ಮಾಡುತ್ತಾ ಇರುವುದು, ಸಮರ್ಥನೆ ಮಾಡುತ್ತಾ ಇರುವುದು ನೋಡಿದರೆ ಅವರು ಒಂದು ಅಡ್ಡದಾರಿಯನ್ನು ಹಿಡಿದಿದ್ದಾರೆ, ಅದು ಒಳ್ಳೆಯದಲ್ಲ.

Mr. SPEAKER.—Every member has a right to say things whether they are good are bad. He wants to support them by advancing reasons. He is entitled to be heard. There is no other choice. The hon. Member may reply at the appropriate time that the reasoning of the Chief Minister is not correct. I do not prohibit him. If the hon. Members obstruct the other member who is speaking, the proceedings cannot be carried on in an orderly manner.

ಶ್ರೀ ಎಸ್. ಶಿವಪ್ಪ.—ತಾವು ಅನೇಕ ಪಾರ್ಲಿಮೆಂಟರಿ ಸಮ್ಮೇಳನಗಳು ಮತ್ತು ಇತರ ಕಡೆಗಳಲ್ಲಿ ಹೋಗಿ ನೋಡಿದ್ದೀರಿ. ಇದರ ಮೇಲೆ ದೊಡ್ಡ ವ್ಯಾಖ್ಯಾನವೇ ಆಗತ್ತಾ ಇದೆ. ಪಕ್ಷಾಂತರ ಆಗತಕ್ಕದ್ದು ಮುಂತಾದುವೆಲ್ಲಾ ನಡೆಯುತ್ತಾ ಇವೆ. ಇಲ್ಲಿ ಅವರು ಹೇಳುವುದು ಒಂದು ನೀತಿ, ಸಮರ್ಥನೆ ಮಾಡುತ್ತಾ ಇರುವುದೇ ಒಂದು ನೀತಿ ಆಗಿದೆ. I appreciate every word of what Sri Veerendra Patil has said. ಇವತ್ತು ಅವರು ವಾದ ಮಾಡುತ್ತಾ ಇರುವುದು ಅವರ ನೀತಿಗೆ ತದ್ವಿರುದ್ಧವಾಗಿದೆ. ವಾದ ಮಾಡುವುದೂ ಆಚರಣೆ ಮಾಡುವುದೂ ಒಂದೇ ರೀತಿ ಇರಬೇಕು. ಆ ರೀತಿ ಇಲ್ಲದೇ ಇರುವುದರಿಂದ ಅದನ್ನು ತಿಳಿಯಪಡಿಸುವುದಕ್ಕೆ ನನಗೆ ಅವಕಾಶ ಕೊಡಬೇಕು.

Sri H. M. CHANNABASAPPA.—The Chief Minister is defending the members who have joined his party. When they are present here

physically, why should he defend them ? It is open to those members to defend themselves.

Mr. SPEAKER.—I have already given a ruling saying that as a Leader of the Party he is entitled to say anything defending his party members.

Sri S. SIVAPPA.—It is only he who should defend himself.

ಯಾವ ಸದಸ್ಯ ಪಕ್ಷಾಂತರ ಮಾಡಿದ್ದಾನೆಯೋ ಅವನು ತಾನು ಮಾಡಿದ್ದು ಸರಿಯೇ ತಪ್ಪೇ ಎಂಬುದನ್ನು ಅವನು ಸಮರ್ಥನೆ ಮಾಡಿಕೊಳ್ಳಬೇಕು. ಅದು ಅವನಿಗೆ ಸಂಬಂಧಪಟ್ಟ ವಿಚಾರ. ಅವನಿಗೆ ಸಂಬಂಧಪಟ್ಟ ವಿಚಾರವನ್ನು ನೀವು ಸಮರ್ಥನೆ ಮಾಡಿದ್ದೇ ಆದರೆ ನೀವೇ ಸೇರಿಸಿ ಕೊಂಡಂತೆ ಆಯಿತು. ಪಕ್ಷಾಂತರ ಮಾಡಿದ್ದು ಸರಿ ಅಂತ ಹೇಳಿ ಸಮರ್ಥನೆ ಮಾಡುವುದು ಬಿಡು ವುದು ಪಕ್ಷಾಂತರ ಮಾಡಿದ ಸದಸ್ಯನಿಗೆ ನೇರವಾಗಿ ಸೇರಿದ ವಿಚಾರ, ಅದನ್ನು ಬಿಟ್ಟು ನೀವೇನಾದರೂ ಅವರಿಗೆ ಪೌರೋಹಿತ್ಯ ವಹಿಸಿದ್ದೀರಾ ? ನೀವು ಅವರಿಗೆ ಏಕೆ ಸಮರ್ಥನೆ ಮಾಡಬೇಕು ? ಅವರಾಗಿಯೇ ಸೇರಿದ್ದಾರೆ—He is not responsible if they have joined the Congress party.

ಅಧ್ಯಕ್ಷರು.—ನಿಮ್ಮ ಪಾರ್ಟಿ ಸದಸ್ಯರ ಮೇಲೆ ಯಾರಾದರೂ ಅಟ್ಯಾಕ್ ಮಾಡಿದ್ದೇ ಆದರೆ ಅವರನ್ನು ಡಿಫೆಂಡ್ ಮಾಡಲಿಕ್ಕೆ ತಮಗೆ ಪೂರ್ಣ ಅಧಿಕಾರ ಇದೆ. The hon. Member represents the P.S.P. and the United Front. If any member of his party is attacked it is open to him to defend them. So also the Chief Minister is entitled to defend his own party men, as well as himself. Now attacks were made upon 4 members saying that they have acted wrongly. Therefore the Leader of the Ruling Party who represents not only himself but also the other members of his party, is entitled to defend all the members including himself. I have given a ruling which should be respected.

Sri V. N. PATIL.—The time fixed was from 12 Noon to 6 P.M. The time fixed is already over. It has not been extended.

Mr. SPEAKER.—Is it the pleasure of the House to extend time up to 7-30 P.M. ?

HON. MEMBERS.—Yes.

Mr. SPEAKER.—The time is extended up to 7-30 P.M.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಯಾವ ಒಂದು ನಿಲುವೆಯನ್ನು ಈಗ ತಾಳಿದ್ದಾರೋ ಅದೇ ನಿಲುವೆಯನ್ನು ಅವರ ಪಕ್ಷದ ಎಲ್ಲಾ ಸದಸ್ಯರೂ ತಾಳಿದ್ದೇ ಆದರೆ ಈ ಮಾತನ್ನು ಪ್ರಸ್ತಾಪ ಮಾಡುತ್ತಾ ಇರಲಿಲ್ಲ. ಅವರು ಹೇಳಿದ್ದು ಬಹಳ ಸಂತೋಷವಾಯಿತು. ಯಾರ್ಯಾರು, ಯಾವ್ಯಾವ ಪಾರ್ಟಿಗೆ ಹೋಗುತ್ತಾರೆ ಅಥವಾ ಬಿಡುತ್ತಾರೆ ಅವರನ್ನು ಸೇರಿಸಿಕೊಳ್ಳುವುದು ಅಥವಾ ಬಿಡುವುದು ಆಯಾಯ ಪಾರ್ಟಿಗೆ ಸಂಬಂಧಪಟ್ಟ ಕೆಲಸ. ನಮಗೆ ಸಂಬಂದಪಟ್ಟದ್ದಲ್ಲ. ಈ ಒಂದು ಧೋರಣೆ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಇವತ್ತು ದುರ್ದೈವದಿಂದ ಕೆಲವು ಮಾನ್ಯ ಸದಸ್ಯರು ಆ ಕಡೆಯವರು ಬಹಳ ಕಟುವಾಗಿ ನಾಲ್ಕು ಜನ ಸದಸ್ಯರನ್ನು ಟೀಕೆ ಮಾಡಿದ್ದಾರೆ. ಆ 4 ಜನ ನನ್ನ ಪಾರ್ಟಿ ಸದಸ್ಯರು ಇರುವುದರಿಂದ ಅವರ ಹಿತ ರಕ್ಷಣೆ ಮಾಡುವುದು ನಾಯಕನಾದ ನನ್ನ ಜವಾಬ್ದಾರಿ, ಇದು ಮೊದಲನೆಯದು. ಆ ಲೆಕ್ಕದಿಂದ ಅದು ನನ್ನ ಜವಾಬ್ದಾರಿ. ಆದುದರಿಂದ ನಾನು ಅದನ್ನು ತಮ್ಮಲ್ಲಿ ಹೇಳುತ್ತಿದ್ದೆ. ಇನ್ನು ಮುಂದೆ ಯಾರು ಎತ್ತ ಕಡೆಗೇ ಹೋಗಲಿ ಇತ್ತ ಕಡೆಯವರು ಅತ್ತ ಕಡೆಗೇ ಹೋಗಲಿ, ಅಥವಾ ಅತ್ತಕಡೆ ಯವರು ಇತ್ತಕಡೆಗೇ ಬರಲಿ ಇನ್ನು ಮುಂದೆ ಈ ಪ್ರಶ್ನೆಯನ್ನು ಯಾರೂ ಎತ್ತಬಾರದು ಎಂಬ ನಿಲುವು ಮಾನ್ಯ ವಿರೋಧ ಪಕ್ಷದ ನಾಯಕರದಾಗಿದ್ದರೆ ಅದಕ್ಕೆ ನಾನೂ ಸಿದ್ಧ. ಅದಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಅಂದರೆ ಇನ್ನು ಮುಂದೆ ಈ ತೀರ್ಪನ್ನು ಅಚ್ಚುಕಟ್ಟಾಗಿ ಪಾಲಿಸುವಂತೆ ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಪಕ್ಷಕ್ಕೆ ತಿಳಿಸಬೇಕಾಗಿ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ವೀರೇಂದ್ರ ಪಾಟೀಲ್)

7-00 P.M.

ನಾನು ಇನ್ನು ಕೊನೆಯದಾಗಿ ಒಂದು ಒಳ್ಳೆಯ ಸಂತೋಷದಾಯಕ ಸುದ್ದಿಯನ್ನು ಸಭೆಗೆ ತಿಳಿಸಬೇಕಾದ್ದಿದೆ. ನಮ್ಮ ರಾಜ್ಯದಲ್ಲಿ ಹರಿಯತಕ್ಕ ನದಿಗಳ ನೀರಿನಲ್ಲಿ ನಮಗೆ ಯಾವ ಯಾವ ನದೀ ನೀರಿನಲ್ಲಿ ಎಷ್ಟೆಷ್ಟು ಹಕ್ಕಿದೆ ಅದನ್ನು ಹೇಗೆ ಬಳಸಬೇಕು, ಯಾವ ಯಾವ ನದಿಯಲ್ಲಿ ಎಷ್ಟೆಷ್ಟು ನೀರು ಬರುತ್ತಿದೆ ಎಂಬತಕ್ಕ ವಿಷಯಗಳನ್ನೆಲ್ಲಾ ಸಂಪೂರ್ಣವಾಗಿ ವಿಚಾರ ಮಾಡಿ ಆ ಬಗ್ಗೆ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡಲು ಒಂದು ಟೆಕ್ನಿಕಲ್ ಕಮಿಟಿಯನ್ನು ಮಾಡಬೇಕೆಂಬುದು ನನ್ನ ಉದ್ದೇಶ. ಅದರ ಸಲುವಾಗಿ ಈಗಾಗಲೇ ಒಂದೆರಡು ಮೀಟಿಂಗುಗಳನ್ನೂ ಕೂಡ ಮಾಡಿದ್ದಾಗಿದೆ. ಆ ಮೀಟಿಂಗ್‌ನಲ್ಲಿ ಮಾನ್ಯ ವಿರೋಧಪಕ್ಷದ ನಾಯಕರೂ ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರು ನಮಗೆ ಬಹಳ ಸಹಕಾರವನ್ನು ನೀಡಿದ್ದಾರೆ. ಅವರು ಒಳ್ಳೆ ಉತ್ತಮ ಸಲಹೆಗಳನ್ನೂ ರಚನಾತ್ಮಕ ಸಲಹೆಗಳನ್ನೂ ಮಂಡಿಸಿದ್ದಾರೆ. ಇನ್ನು ರಾಜ್ಯ ಸರ್ಕಾರಕ್ಕೆ ಈ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವುದರಲ್ಲಿ ಇರತಕ್ಕ ಹಣದ ಅಭಾವವನ್ನು ಯಾವರೀತಿ ಹೋಗಲಾಡಿಸಬೇಕು ಎನ್ನುವ ವಿಚಾರಗಳನ್ನು ಚರ್ಚೆಮಾಡಿ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ಒಂದು ರಿಸೋರ್ಸಸ್ ಕಮಿಟಿ, ಹೀಗೆ ಎರಡು ಸಮಿತಿಗಳನ್ನು ಮಾಡಲು ನಿರ್ಧಾರಮಾಡಿ ಆ ಸಮಿತಿಗಳಿಗೆ ಈ ಮಹನೀಯರು ಗಳನ್ನು ಆರಿಸಿರುತ್ತೇನೆ-ಟೆಕ್ನಿಕಲ್‌ಕಮಿಟಿಗೆ :—ಶ್ರೀಯುತರುಗಳಾದ :— (1) ಎಚ್. ಎಂ. ಚನ್ನಬಸಪ್ಪನವರು (2) ಎನ್. ಹುಚ್ಚಮಾಸ್ತಿಗೌಡ (3) ಡಿ. ದೇವರಾಜ ಅರಸ್ (4) ಎಚ್. ಡಿ. ದೇವೇಗೌಡ (5) ಜಿ. ಮಾದೇಗೌಡ (6) ಸಿ. ಬಾಲಕೃಷ್ಣಗೌಡ. ಈ ಸಮಿತಿಗೆ ಪಿ. ಡಬ್ಳ್ಯು. ಡಿ. ಮಂತ್ರಿಗಳು ಅಧ್ಯಕ್ಷರು.

ಇನ್ನು ಆ ರೀಸೋರ್ಸಸ್ ಸಮಿತಿಗೆ ಸದಸ್ಯರುಗಳು ಯಾರುಯಾರು ಎಂದರೆ—

ಶ್ರೀಯುತರುಗಳಾದ.—(1) ಶಿವಪ್ಪನವರು, (2) ಎಸ್. ಆರ್. ಕಂಠಿಯವರು (3) ಎಚ್. ಎಂ. ಚನ್ನಬಸಪ್ಪನವರು, (4) ಎಚ್. ಸಿದ್ದವೀರಪ್ಪನವರು, (5) ಡಿ. ದೇವರಾಜ ಅರಸರು, (6) ಡಾ. ಆರ್. ನಾಗನಗೌಡರು, (7) ಎಸ್. ಗೋಪಾಲಗೌಡರು, (8) ಎಂ. ವೈ. ಘೋರ್ಪಡೆಯವರು (9) ಎಂ. ಶ್ರೀನಿವಾಸನಾಯಕ್ ಅವರು, (10) ಎಚ್. ಬಿ. ಜ್ವಾಲನಯ್ಯನವರು, (11) ಎಸ್. ಎಸ್. ಅರಕೇರಿ ಅವರು, (12) ಎಂ. ಎಸ್. ಕೃಷ್ಣನ್, (13) ಎಸ್. ವೈ. ಪಾಟೀಲ್ ಅವರು, (14) ಅರ್ಥ ಸಚಿವ ರಾಮಕೃಷ್ಣ ಹೆಗಡೆಯವರು ಮತ್ತು (15) ಡಿ. ಎಂ. ಸಿದ್ದಯ್ಯನವರು. ಈ ಸಮಿತಿಗೆ ಕನ್‌ವೀನರ್ ಶ್ರೀ ರಾಮಕೃಷ್ಣ ಹೆಗಡೆಯವರು. ಟೆಕ್ನಿಕಲ್ ಸಮಿತಿಗೆ ಕನ್‌ವೀನರ್ ಪಿ. ಡಬ್ಳ್ಯು. ಡಿ. ಮಂತ್ರಿಗಳು.

ರಿಸೋರ್ಸಸ್ ಕಮಿಟಿಯವರು ರಾಜ್ಯದಲ್ಲಿರತಕ್ಕ ರಿಸೋರ್ಸಸ್ ಅನ್ನು ಮಾಬಿಲೈಜ್ ಮಾಡಿ ಅದರ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡಬೇಕಾಗಿರುತ್ತೆ. ಈ ವಿಚಾರಗಳನ್ನೆಲ್ಲಾ ನಾವೆಲ್ಲರೂ ಒಟ್ಟಿಗೇ ಕುಳಿತು ಒಂದು ಒಮ್ಮನಸ್ಸಿನಿಂದ ಕೆಲಸ ಮಾಡೋಣ; ಎಂದು ನಾನು ತಮ್ಮೆಲ್ಲರಲ್ಲೂ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ನಾನು ಈ ಅಧಿಕಾರವನ್ನು ವಹಿಸಿಕೊಂಡಾಗಿನಿಂದಲೂ ಎಲ್ಲರ ಸಹಕಾರ ಸಹಾನು ಭೂತಿ ಸಹಾಯಗಳನ್ನು ಪಡೆಯಲು ವಿಶ್ವಪ್ರಯತ್ನ ಮಾಡಿದ್ದೇನೆ; ಮಾಡುತ್ತಲೂ ಇದ್ದೇನೆ. ಇದು ನನ್ನ ನೀತಿ-ಧ್ಯೇಯ ಮತ್ತು ಧೋರಣೆ. ಈಗಾಗಲೇ ನನಗೆ ಸ್ವಲ್ಪಮಟ್ಟಿಗೆ ಎಲ್ಲ ಸದಸ್ಯರಿಂದಲೂ ಸಹಕಾರ ಸಿಕ್ಕುತ್ತಿದೆ. ವಿರೋಧಪಕ್ಷದವರಿಂದಲೂ ಸಹಕಾರ ದೊರೆಯುತ್ತಿದೆ. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಇನ್ನು ಮುಂದೆಯೂ ನಾವು ಉಭಯ ಪಕ್ಷಗಳವರೂ ಭುಜಕ್ಕೆ ಭುಜ ಕೊಟ್ಟು ಚೆನ್ನಾಗಿ ದುಡಿಯೋಣ, ನಮ್ಮ ರಾಜ್ಯವನ್ನು ನಿಜವಾಗಿಯೂ ಚಿನ್ನದ ನಾಡನ್ನಾಗಿ ಮಾಡೋಣ. ಇದಕ್ಕೆ ತಮ್ಮೆಲ್ಲ ಸಹಕಾರ ಬೆಂಬಲಗಳು ಅಗತ್ಯವೆಂದು ಹಾರೈಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಪಂಚಗಾವಿ.—ಈಗತಾನೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಎರಡು ಸಮಿತಿಗಳಲ್ಲೂ ನಮ್ಮ ಘಟಪ್ರಭಾ ಯೋಜನೆಯನ್ನು ಪ್ರತಿನಿಧಿಸತಕ್ಕ ಸದಸ್ಯರೊಬ್ಬರೂ ಇರುವುದಿಲ್ಲ ಅದರಿಂದ ಅದರ ಸಾಧನೆಯ ಬಗ್ಗೆ ನಮಗೆ ಅನುಮಾನವುಂಟಾಗಿದೆ. ಆದ್ದರಿಂದ ಸರ್ಕಾರದವರು ಈಗ ಆ ಸಮಿತಿಗಳಲ್ಲಿ ಹಾಕಿರತಕ್ಕ ಸದಸ್ಯರನ್ನು ರೀಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ ಪ್ರಯತ್ನ ಮಾಡುವರೇ ?

ಶ್ರೀ ವೀರೇಂದ್ರ ಪಾಟೀಲ್.—ಆ ಟೆಕ್ನಿಕಲ್ ಕಮಿಟಿಯನ್ನು ಕಾವೇರಿ-ಕೃಷ್ಣಾ ನದಿಗಳ ಬಗ್ಗೆ ಮಾಡಲಾಗಿದೆ. ಆ ನದಿಗಳ ವಿಚಾರದಲ್ಲಿ ಅನೇಕ ಟೆಕ್ನಿಕಲ್ ವಿಚಾರಗಳು ಉದ್ಭವಿಸಿವೆ ಅವುಗಳನ್ನೆಲ್ಲಾ ನಾವೀಗ ಪರಿಶೀಲನೆ ಮಾಡಬೇಕಾಗಿದೆ. ಮುಂದೆ ಘಟಪ್ರಭಾ ಯೋಜನೆಯ ವಿಚಾರ ಬಂದರೆ ಅದನ್ನೂ ಪರಿಶೀಲನೆ ಮಾಡೋಣ ಯಾವುದನ್ನೂ ನಾನು ಬೇಡವೆಂದು ಹೇಳುವುದಿಲ್ಲ.

ಶ್ರೀ ಕೆ. ಪಿ. ನಾಡಗೌಡ.—ಘಟಪ್ರಭಾ ಯೋಜನೆ ಹೊಸದೇನೂ ಅಲ್ಲ, ಅದನ್ನು ಬೇಗಮಾಡುವಿರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಆ ಘಟಪ್ರಭಾ ಯೋಜನೆಯ ಮೊದಲನೆಯ ಹಂತ ಮುಗಿದಿದೆ. ಇನ್ನು ಎರಡನೆಯ ಸ್ಟೇಜಿನ ಕೆಲಸಗಳು ಪ್ರಾರಂಭವಾಗಬೇಕು. ಮಾನ್ಯ ಸದಸ್ಯರು ಅದರ ಬಲನಾಲೆಯ ವಿಚಾರದಲ್ಲಿ ಬಹುಶಃ ಕೇಳುತ್ತಿರಬಹುದು ಅದನ್ನು ಮುಂದೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸೋಣ ಎಂದು ಆಲೋಚನೆ ಇದೆ.

ಶ್ರೀ ಟಿ. ಆರ್. ಶಾಮಣ್ಣ.—ಎಸ್ಟಿಮೇಟ್ ಸಮಿತಿಯವರು ಬೆಂಗಳೂರು ನಾಗರೀಕರಿಗೆ ಕುಡಿಯುವ ನೀರಿನ ಬಗ್ಗೆ ಇದ್ದ ತಕರಾರಿನ ವಿಷಯದಲ್ಲಿ ಸರ್ಕಾರಕ್ಕೆ ಈಗಾಲೇ ಒಂದು ಶಿಫಾರ್ಸನ್ನು ಮಾಡಿದೆ. ಆದರೆ ಅದರಲ್ಲಿ ಅವರು ಸೂಚಿಸಿರತಕ್ಕ ಕನ್‌ಸೆಷನ್ನನ್ನು ರಿಟ್ರಾಸ್ಪೆಕ್ಟೀವಾಗಿ ಕೊಡಬೇಕೆಂದು ಅವರು ಸೂಚನೆ ಮಾಡಿಲ್ಲ ಎಂದು ಸರ್ಕಾರದವರೀಗ ಹೇಳುತ್ತಿದ್ದಾರೆ. ಆದರೆ ವಾಟರ್‌ಬೋರ್ಡಿನವರು ಹಿಂದೆ ಆಕ್ರಮವಾಗಿ 1965 ರಿಂದಲೂ ಜನರಿಂದ ಹಣವನ್ನು ವಸೂಲ್ಮಾಡಿದ್ದರ ಪರಿಣಾಮದಿಂದ ಸುಮಾರು 45 ಲಕ್ಷ ರೂಪಾಯಿಗಳ ಅಧಿಕ ಲಾಭವನ್ನು ಮಾಡಿದ್ದಾರೆ. ಅದು ಅಕ್ರಮವಾದ ಲಾಭ. ನಾಗರೀಕರಿಗೆ ಉಚಿತವಾಗಿ ಕೊಡತಕ್ಕ ನೀರಿನ ಸೌಲಭ್ಯವನ್ನು ರಿಟ್ರಾಸ್ಪೆಕ್ಟೀವಾಗಿ ಕೊಟ್ಟರೆ ಕಾರ್ಪೊರೇಷನ್ನಿನವರಿಗೆ ಲುಕ್ಸಾನಾಗುತ್ತದೆ ಎನ್ನತಕ್ಕ ವಾದ ಒಂದು ಇದೆ. ಆದರೆ ಆ ಕಾರ್ಪೊರೇಷನ್ನಿನವರು ಬೋರ್ಡಿಗೆ ಕೊಡತಕ್ಕ ಹಣದಲ್ಲಿ ಆ ಅಧಿಕ ಲಾಭದ ಹಣವನ್ನು ಉತ್ತಾರಹಾಕಿಕೊಂಡರೆ ಆಗ ಯಾವ ನಷ್ಟವೂ ಕಾರ್ಪೊರೇಷನ್ನಿಗೆ ಆಗುವುದಿಲ್ಲ. ಹಾಗೆ ಮಾಡದಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಪುನರ್‌ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಆ ಅಂಕಿ ಸಂಖ್ಯೆಗಳ ಬಗ್ಗೆ ನನಗೆ ಯಾವ ವಿವರಗಳೂ ಗೊತ್ತಿಲ್ಲ. ಅವರ ಶಿಫಾರ್ಸು ಏನಿತ್ತೋ ಅದಕ್ಕನುಸಾರವಾಗಿ ಆರ್ಡರನ್ನು ಮಾಡಿದೆ.

Sri H. M. CHANNABASAPPA.—I would like to know whether it would be correct to meet the cost of free water charges from the Government revenues; and if it is given retrospective effect the entire cost of free water, I take it that the cost would be met from the Corporation: Am I correct?

Sri VEERENDRA PATIL.—Yes.

Sri G. DUGGAPPA.—May I know what is the opinon of the Government about de-scheduling certain communities from the list of Scheduled Castes and Scheduled tribes and whether Mysore Government has intimated its opinion to the Central Government?

Sri VEERENDRA PATIL.—I do not remember what has transpired. I have to look into the files and find out. How many letters have been written and what we have represented, what was the stand taken by the Mysore Government—without going into details, it is not possible for me to say anything off-hand.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮುಖ್ಯಮಂತ್ರಿಗಳು ಈಗ ಮಾತನಾಡುತ್ತಾ ರೈತರಿಗೆ ಒಂದು ಕ್ವಿಂಟಾಲ್ ಬತ್ತಕ್ಕೆ 5 ರೂಪಾಯಿ ಜಾಸ್ತಿ ಕೊಡುತ್ತಾ ಇದ್ದೇವೆ. ಇನ್ನೂ ಜಾಸ್ತಿ ಕೊಟ್ಟರೆ ಕನ್‌ಸ್ಯೂಮರ್ ಮೇಲೆ ಭಾರ ಜಾಸ್ತಿಯಾಗುತ್ತದೆ ಎಂಬ ಮಾತನ್ನು ಹೇಳಿದರು. ಈಗ ಕನ್‌ಸ್ಯೂಮರ್‌ಗೂ ರೈತನಿಗೂ ಮಧ್ಯೆ ಇರತಕ್ಕ ವ್ಯತ್ಯಾಸ 21 ರೂಪಾಯಿ ಇದೆ. ಈ 21 ರೂಪಾಯಿಯ ಒಂದು ಖರ್ಚನ್ನು ಕಡಿಮೆ ಮಾಡಿಕೊಂಡು ರೈತನಿಗೆ ಸ್ವಲ್ಪ ಜಾಸ್ತಿ ಹಣವನ್ನು ಕೊಟ್ಟರೆ ಅನುಕೂಲವಾಗುತ್ತದೆ ಮತ್ತು ಕನ್‌ಸ್ಯೂಮರಗೂ ಕೂಡ ಭಾರ ಇಳಿಸತಕ್ಕ ಒಂದು ಆಶ್ವಾಸನವನ್ನು ಮುಖ್ಯ ಮಂತ್ರಿಗಳು ಕೊಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—21 ರೂಪಾಯಿ ವ್ಯತ್ಯಾಸ ಇದೆ ಎಂದು ಹೇಳಿದ್ದು ನನಗೆ ಗೊತ್ತಿಲ್ಲ. ಅದನ್ನು ಒಮ್ಮಿಂದೊಮ್ಮೆಗೆ ಒಪ್ಪುವುದಕ್ಕಾಗುವುದಿಲ್ಲ. ನಮ್ಮ ನೀತಿ ಹೇಳಿದೆ. ವ್ಯವಹಾರದಲ್ಲಿ ಒಟ್ಟಾರೆ ಲಾಭ ಮಾಡಬೇಕೆನ್ನುವ ಉದ್ದೇಶ ಸರ್ಕಾರದವರಿಗೆ ಇಲ್ಲ ಮತ್ತು ಹಾನಿಯಾಗಿ ಸರ್ಕಾರದ ಬೊಕ್ಕಸದಿಂದ ದುಡ್ಡು ಕೊಡಬೇಕೆಂದು ಸರ್ಕಾರದ ನೀತಿ ಅಲ್ಲ. ಈ ಒಂದು ಲೆಕ್ಕದಿಂದ ನಿರ್ಣಯ ಮಾಡುತ್ತಾ ಇದ್ದೇವೆ. ಆಡ್ಮಿನಿಸ್ಟ್ರೇಷನ್ ಕಾಸ್ಟು ಎಷ್ಟು ಮಟ್ಟಿಗೆ ಕಡಿಮೆಯಾಗುತ್ತದೆ ಎಂಬುದನ್ನು ಪರೀಶಿಲನೆ ಮಾಡಬೇಕಾಗುತ್ತದೆ ಒಮ್ಮೆಗೆ ಹೇಳಲಿಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ರಾಜ್ಯಪಾಲರ ಭಾಷಣದಲ್ಲಿ ತಾವು ಹೇಳುವಾಗ ಬತ್ತದ ಬೆಲೆ ಕ್ವಿಂಟಾಲ್ ಬೆಲೆ 3 ರಿಂದ 5 ರೂಪಾಯಿ ಹೆಚ್ಚಿಸಿದ್ದು ಕಂಡು ಬರುತ್ತದೆ. ಅದರೆ ಅದೇ ಪ್ರಕಾರ ಜೋಳದ ಬೆಲೆಯನ್ನು ಎರಿಸಿಯೇ ಇಲ್ಲ, ಇದರಿಂದ ಏನು ಆರ್ಥವಾಗುತ್ತದೆ ಎಂದರೆ ಜೋಳವನ್ನು ಲೇವಿ ರೂಪದಲ್ಲಿ ಕೇಳುವುದನ್ನು ಬಿಟ್ಟುಬಿಟ್ಟದ್ದೀರಾ ಹೇಗೆ ? ಹಾಗಿದ್ದ ಪಕ್ಷದಲ್ಲಿ ಜೋಳದ ಬೆಲೆಯನ್ನು ಎರಿಸಿದ್ದೀರಾ ಹೇಗೆ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ (ಆಹಾರ ಶಾಖೆ ರಾಜ್ಯ ಮಂತ್ರಿಗಳು).—ಜೋಳದ ಬೆಲೆ ಇವತ್ತು ಲೆವಿ ಮೂಲಕ ಎಷ್ಟು ಕೊಡುತ್ತೇವೆಯೋ ಅದಕ್ಕಿಂತ ಕಡಿಮೆ ರೇಟ್ ಮಾರ್ಕೆಟನಲ್ಲಿ ಇದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಕೋಲಾರ ಜಿಲ್ಲೆಯ ಅಭಾವ ಪರಿಸ್ಥಿತಿಗೆ ಶಾಶ್ವತವಾದ ಪರಿಹಾರ ಯೋಜನೆಯು ಏನಾದರೂ ಇದೆಯೇ ? ಮತ್ತು ವ್ಯವಸಾಯ ಕಾರ್ಮಿಕರು ಅಲ್ಲದೇ ರೈತರ ಜೀವನ ಮಟ್ಟವನ್ನು ಸುಧಾರಿಸಲಿಕ್ಕೆ ಏನಾದರು ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕೋಲಾರ ಮತ್ತು ತುಮಕೂರು ಜಿಲ್ಲೆಯ ಅನೇಕ ಯೋಜನೆಗಳನ್ನು ಅಗ್ರಿಕಲ್ಚರಲ್ ರೀ ಫೈನಾನ್ಸ್ ಕಾರ್ಪೊರೇಷನಗೆ ಕಳುಹಿಸಿದ್ದೇವೆ, ಅವರು ಕೆಲಕೆಲವು ಯೋಜನೆಗಳನ್ನು ಮಂಜೂರು ಮಾಡಿ ಅಗಾಗ್ಗೆ ಕಳುಹಿಸುತ್ತಾ ಇದ್ದಾರೆ. ಮತ್ತು ಕೇಂದ್ರ ಸರಕಾರದವರಿಗೂ ಹೇಳುತ್ತಾ ಇದ್ದೇವೆ. ಬರೆದಿದ್ದೇವೆ, ಪತ್ರವ್ಯವಹಾರ ನಡೆಯುತ್ತಾ ಇದೆ.

Mr. SPEAKER.—Now I shall put all the amendments to vote. The question is—

"That the following words shall be added at the end of the motion of Thanks to the Governor's address but regret that—

(i) the address has failed to unequivocally condemn the Mahajan Commission report on the Maharashtra—Mysore and Mysore—Kerala border issue as inconsistent and suggest an immediate solution on the democratic lines based on the wishes of the people from the border areas ;

(ii) the address has failed to initiate realistic approach in levy procurement drive by adopting a simple machinery and exempting the small holders of land from payment of levy in food grains ;

(iii) the Governor has failed to boldly declare that the talk of land reforms is only a show and not a reality as the Land Reforms are not in the real interest of the actual cultivator or tenant."

The amendment was negatived.

The question is :

"That the following words shall be added at the end of the motion : "but regret that the Council of Ministers have failed—

(i) to make adequate provision for the progress of Scheduled Caste and Scheduled Tribes in the field of education as the

percentage of literacy of Scheduled Caste and Scheduled Tribes is below 5 per cent whereas the State (average) percentage of literacy is 25·4 per cent;

(ii) to take adequate measures for eradicating the evil of untouchability in the rural parts;

(iii) to take steps to grant land to landless and also to take immediate steps to make the tiller as the owner of the land;

(iv) to take steps to exempt "levy" to the small land holders upto 5 acres in North Kanara District;

(v) to take steps to implement, the rehabilitation of landless agricultural labourers schemes in the State;

(vi) to make provision in all developmental schemes in both plan and non-plan schemes, to allocate 18 per cent of the total allotted budget, for the welfare of scheduled castes and tribes in all departments;

(vii) to take steps to give representations to Scheduled Castes, and tribes in all committees Boards corporations constituted by Government in order to create equal opportunities and to give special safeguards as guaranteed in the Constitution of India;

(viii) to mention in the address about the development of scheduled castes and tribes in the field of small scale industries;

(ix) to mention in the address about the constitutional safeguards and their implementation of the scheduled castes and scheduled tribes in services in the development of education fecilities and create minimum programme of housing, food and cloth to the neglected section of the society'."

The amendment was negatived.

The question is:

"That the following be added at the end of the motion: 'but regret to note—

(i) that the Government has failed miserably in implementing the true democracy in the State in respect of the Taluka Development Board's elections as the entire election machinary was not free from political pressure and the elections were carried illegally, improperly, high-handedly without caring for rules and regulations resulting in a number of writ petitions and election petitions;

(ii) that the Government has failed to maintain purity in the elections by mis-utilising the scarcity conditions and distribution of foodgrains supplied by Bharat Sevak Samaj to distribute among the poorest class;

(MR. SPEAKER)

(iii) that the Government has failed to take up adequate relief measures in the scarcity area to complete the works on hand to safeguard the funds spent ;

(iv) that the Government has not introduced any effective developmental schemes in respect of co-operative movement in comparison with other States ;

(v) that the co-operative movement has been paralysed and is deteriorating day by day due to lack of efficiency, lack of knowledge in co-operation and purity in administration, resulting in the increase in quantum and decrease in quality ;

(vi) that the Co-operative Department has shown no tangible result either in the industrial side or in the co-operative farming but only concentrating its efforts in harming and harssing the political opponents working in the field of co-operation ;

(vii) that the Government has failed even in implementing an uniform primary education act in the State even though 12 years have lapsed after re-organisation. Differential treatment in the field of education is the result of this failure ;

(viii) that the Government has continued unconstitutionally the District School Boards in the Bombay Karnatak area with a view to help their partymen ;

(ix) that the Government has miserably failed in eradicating curruption and inefficiency prevailing in all the departments ;

(x) that the Government has failed to take suitable steps in nationalising the private electric licensees in the State which has resulted the public with discriminatory treatment in getting the power supply ?

(xi) that the Government has failed to eradicate the problem of unemployment by sponsoring adequate industries ;

(xii) that the Government has failed in the proper implementation of the Khadi Board, Social Welfare activities ;

(xiii) that the Government has failed in implementation of the principles of Mahatma Gandhiji especially in the field of prohibition, taxation, removal of untouchability, village industrialisation, etc.' "

The amendment was negatived.

The question is :

"That the following words shall be added at the end of the motion : ' but regret that—

(i) the Government has failed to give the citizens of Bangalore, the benefits in respect of free allowance and revised lower

rates for excess water retrospectively though the Estimates Committee has clearly pointed out that the Bangalore Water Supply and Sewerage Board has made during last 3 years a profit of Rs. 45 lakhs, after allowing higher rate of interest payable to Government and allowing 28 per cent wastage of water ;

(ii) the Government has failed to give relief in respect of property tax that is now arbitrarily charged to charitable institutions like schools, students hostels and other public and charitable institutions ;

(iii) the Government has failed to run B.T.S. Buses in Bangalore City according to schedule, in reducing waiting line at Bus Stops and in stopping pilferage and misbehaviour of conductors ;

(iv) there is inordinate delay in respect of construction of the sub-way near Krishnarajendra Market which has caused great hardship to the public and caused heavy loss to the merchants ;

(v) Government has failed to check the large scale corruption prevailing in Bangalore City Corporation and the harassment that the public are subjected to get their plans, licences etc. ;

(vi) Government has failed to check malpractices in some of the privately managed schools and the collection of abnormal and unauthorised fees, donations, etc., by the managements ;

(vii) Government has failed to take steps to replace the fused street lights particularly in extensions and undeveloped areas ;

(viii) Government has failed to provide in Fair Price Depots, food quality rationed articles at fair rates ;

(ix) Government has failed to take suitable steps to check mal-administration in many Co-operative Societies and the group politics particularly in the Bangalore City ;

(x) Government has caused heavy national loss by its wavering policies in the matter of education ;

(xi) Government has failed to give 50 per cent D.A. contribution to Bangalore City Corporation as given to all the other local bodies ;

(xii) Government has not given the legitimate share of Motor Vehicle Tax to the Bangalore City Municipal Corporation.

(xiii) Government has failed to provide water mains to revenue pockets and other undeveloped areas like Thyagarajanagar, Dasarahalli, Ashokanagar, etc. ;

(MR. SPEAKER)

(xiv) Government has failed to provide employment to young men in the State including technically qualified men;

(xv) Government has failed to locate all subordinate civil and criminal courts in one place though there has been a demand in this behalf for the last 40 years;

(xvi) Failure of the Government to grant withheld portion of the enhanced Dearness Allowance to the State Non-Gazetted Officers;

(xvii) Government has failed to satisfactorily settle the problems of revenue sites in Bangalore City purchased by poor and middle class people for *bona fide* house building purposes without undue heavy burden;

(xviii) Government has failed to free people of Bangalore City from the mosquito nuisance'."

The amendment was negatived.

The question is:

"That the following words shall be added at the end of the motion:
'but regret that—

(i) the party in power had subverted the Government machinery to its advantage and to the disadvantage of the parties in opposition in the recent Taluka Board elections as a result of which the elections were not held in fair and genuine democratic manner and the party in power used all types of corrupt practices and threw away all canons of democratic conventions to the winds;

(ii) Government has failed to eradicate the evils of untouchability prevailing in rural areas of the State;

(iii) the Government machinery is suffering from evils of casteism, communalism, nepotism and corruption from top to the bottom as a result of which common man has lost faith in the Government;

(iv) Government has failed to provide drinking water wells to all villages in Mysore State treating it on top priority basis;

(v) Government has failed to utilise co-operative societies to cater to the needs of the poor and the needy and to prevent it from misuse of funds, etc.;

(vi) Government has failed to provide employment to the growing number of the educated;

(vii) the Police Department has failed to check smuggling of essential foodgrains into Maharashtra on Gulbarga border;

(viii) Government has failed to run efficiently the State owned concerns and State controlled industries to the best advantage of the State causing huge loss to the State exchequer ;

(ix) Government has failed to guarantee the minimum wages to agricultural labourers ;

(x) Government has failed to fix minimum and maximum salary to the Government servants in accordance with the declared object of socialistic pattern of society to start with.' "

The amendment was negatived.

The other amendment moved by Sri Jayaprakash Narayan :—

The question is :

" That the following words shall be added at the end of the Motion of Thanks to the Governor's Address :—

'But regret that—

(i) no concrete steps have been taken regarding the "removal" or "improvement" of slums in Bangalore Corporation ;

(ii) no concrete liberalized proposals have been made to provide house sites to the hut-dwellers and other slum dwellers by City Improvement Trust Board, Bangalore ;

(iii) plan amounts in Social Welfare Department have not been fully utilised to the best advantage of scheduled castes ;

(iv) there is no planned dynamic programme to continue the policy of nationalisation in the Department of Mining ;

(v) there is a failure in safeguarding and protecting the basic rural industries in Sericulture ;

(vi) corruption and black marketing have not been put down ;

(vii) the problem of unemployment has not been solved ;

(viii) a rational policy in relation to land reforms and the need for abolition of land revenue has not been enunciated ;

(ix) there is no programme to introduce prohibition for the fulfilment of Gandhiji's dream of New India and to bring the new hope to the millions ;

(x) Government has failed to take measures for getting the Kannada speaking majority areas in the neighbouring States and also to name the State as "Karnataka" ;

(xi) ಸಣ್ಣ ಹಿಡುವಳಿದಾರರು ಮತ್ತು ಗೇಣಿದಾರರುಗಳಿಗೆ ಆಹಾರಧಾನ್ಯ ವಸೂಲಾತಿಯಲ್ಲಿ ವಿನಾಯಿತಿ ಕೊಡದೆ, ಬೇಸಾಯಗಾರರಿಂದ, ಮಾರುಕಟ್ಟೆಯ ಬೆಲೆಗಿಂತ ಬಹಳ ಕಡಿಮೆ ಬೆಲೆಯಲ್ಲಿ ಕಡ್ಡಾಯವಾಗಿ ಆಹಾರ ಧಾನ್ಯವನ್ನು ಉತ್ತರ ಕನ್ನಡ ಜಿಲ್ಲೆಯ ರೈತರಿಂದ ಮತ್ತು ಇತರ ಕಡೆ ವಸೂಲ ಮಾಡಿ ಅವರಿಗೆ ರಕ್ಷಣೆ ಕೊಡುವುದರಲ್ಲಿ ವಿಫಲವಾಗಿರುವುದು'."

The motion was negatived.

(MR. SPEAKER)

Amendment by Sri Nagappa :—

The question is :

"That the following words shall be added at the end of the motion :

'But regret that—

The address does not contain important matters, pertaining to general administration in State, since there is no security of property and life'."

The amendment was negatived.

Amendment moved by Sri M. S. Krishnan :—

The question is :

" That the following words shall be added at the end of the motion :

'But regret that Government has failed to—

(i) implement the Land Reforms Act as well as to enunciate a proper policy regarding the implementation of the same;

(ii) take such steps as would prove the Central Government to accept the Mahajan Commission award and implement *in toto* ;

(iii) abolish the outmoded system of land revenue ;

(iv) formulate a progressive and proper policy in regard to planning ;

(v) obtain adequate and due financial assistance from the Central Government to implement the State Plan in the interests of the people ;

(vi) enunciate a suitable policy in respect of fixing in prices of essential commodities of life and foodgrains such as rice, sugar, etc., and the need for taking effective steps to arrest the same ;

(vii) enunciate any policy in respect of the acute unemployment problem in the State ;

(viii) take effective steps to put down corruption and black marketing ;

(ix) take action in the direction of payment of salaries of teachers in private aided primary schools ;

(x) take adequate and effective action against mushroom growth and existence of several non-functioning/non-effectively functioning privately run schools with grants from Government ;

SRI M. NAGAPPA.—Sir, I have an objection for the introduction of this Bill. Under Rule 67 of the Rules of procedure the Governor's Assent will be required for a money bill. Clause 10 seeks to impose certain tax on property. Therefore as per article 199, it amounts to be a money Bill. Article 207 of the Constitution stipulates that a money bill shall not be introduced or moved except on the recommendation of the Governor and a Bill making such a provision shall not be introduced in the Legislative Assembly. As per article 207 read with article 199 and rule 67 of the Rules of Procedure, since His Excellency the Governor has not recommended or since he has not given any sanction for the introduction of this Bill, and since it is a money bill, it cannot be introduced in this House.

My second objection is that this Bill is not appended with any memorandum as contemplated under rule 69 as it involves proposals for delegated legislation. The Bill in question, in clause 7 proposes that section 60 may be substituted. There is a proviso which has been added:

clause 7: proviso:

"Provided that the Government may by notification published in the Official gazette and for reasons to be stated in the said notification extend from time to time the term of office of councillors by such period or periods as it deems fit so however the total period so extended shall not exceed one year".

In this proviso, power is sought to be delegated to the Governmens in order to extend its life for a period of one year. Therefore it amount, to delegation of certain power that is vested in this august House. Sot this Bill also requires a memorandum regarding delegation of power to the Government.

(SRI M. NAGAPPA)

Since these two formalities have not been complied with by the Government or the Minister concerned, this Bill may not be permitted to be introduced at this stage because it is against the provisions of the Constitution and the rules of procedure.

Sri B. M. PATIL (Minister of State for Municipal Administration)—Sir, for the introduction of this particular Bill, all the requisite formalities have been already complied with and they are completed.

Mr. SPEAKER.—The contention of the hon. Member Sri Nagappa is that this is a money bill within the meaning of Article 199 of the Constitution and that even for the introduction of the Bill, the Governor's recommendation is needed. On examination of the Bill in question, I find that along with taxation proposals there are other provisions also. The article of the Constitution stipulates that a Bill shall be deemed to be a Money Bill if it contains only taxation proposals. Therefore the first objection raised by the Hon. Member has no force and cannot be upheld.

Secondly, so far as the memorandum about delegated legislation is concerned it is not a delegation of formal power. Government is authorised to publish a particular thing by issue of a notification. It is not exactly a rule-making power that is being delegated. Therefore, I hold that the memorandum regarding delegated legislation is not necessary here.

I therefore, rule out both the objections and call upon the Hon. Minister to proceed with the introduction of the Bill.

Sri B. M. PATIL.—Sir, I beg to introduce the City of Bangalore Municipal Corporation (Amendment) Bill, 1969 under Rule 64 of the Rules of Procedure and Conduct of Business in the Mysore Legislative Assembly.

Mr. SPEAKER.—The Bill is introduced.

SUPPLEMENTARY AND ADDITIONAL DEMANDS FOR GRANTS FOR THE YEAR 1968-69 (2nd instalment)

Demand No. 4 Taxes on Vehicles

Sri RAMAKRISHNA HEGDE (Minister for Finance).—Sir, on the recommendation of the Governor of Mysore, I beg to move:

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1969, in respect of 'Taxes on Vehicles'."

Sir, I request that along with this, Demand Nos. 10, 13, 15, 17, 18, 20, 23, 27, 29, 33, 39, 44, 45, 46, 47, 48, 54. may be deemed to have been moved.

MR. SPEAKER.—Motion moved :

> "That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1969 in respect of 'Taxes on Vehicles'".

All the other Demands are also before the House. They are deemed to have been moved by the Hon. Minister and they are open for discussion.

†SRI RAMAKRISHNA HEGDE.—I crave your indulgence in permitting me to make certain preliminary observations with a view to facilitate proper discussion on these Demands. According to the printed estimates placed before the legislature the total demand of additional sums required is indicated as follows.—

		Rs.
(a) Expenditure met from revenue	...	3,64,40,500
(b) Capital Accounts outside the Revenue Account		10,53,40,849
(c) Disbursement of Advances and Loans	...	2,39,58,300

Altogether Rs. 16,57,39,649. Though it might look as a huge sum, it may be classified into three categories as follows.—

(1) items which are either covered by assistance of the centre or others ; or adjustment items not involving actual out-go of cash ;

(2) items for which token demands are included as they can be met by re-appropriation out of savings in the respective major heads ;

(3) items involving actual out-go of cash.

In the first item a total amount of Rs. 13,10,00,000 has been provided. In the second item where only token provision is made is only Rs. 11,000. Under the third item where there is actual out-go of cash the amount asked for is Rs. 3,47,00,000. So, Sir, though the Demand appears to be huge, the actual outgo of cash is only three crores. Even here the sum of Rs. 1 crore in Demand 20, 31 Agriculture is a subsidy payable to Mysore Central Co-operative Land Development Bank towards difference in rates of interest between economic lending rate and the concessional rate at which loans were sanctioned by the Bank for sinking of irrigation wells at the instance of the Government. Under Loans and Advances, Demand 54, as much as Rs. 235 lakhs has been sanctioned of which Rs. 50 lakhs is for takavi loans and Rs. 50

(SRI RAMAKRISHNA HEGDE)

lakhs to Mysore State Industrial Co-operative Land Development Bank and Rs. 125 lakhs as loans under State Aid to Industries Act and 10 lakhs to Mysore Khadi and Village Industries Board. These loans are recoverable. The important item under adjustments relate to investment in share capital of Mysore Iron and Steel Works, Bhadravathi, to the extent of Rs. 10,03,79,049, by per contra credit to suspense account LI Forest and Q. Loans and Advances, etc. The expenditure on scarcity relief measures to the extent of 207 lakhs and investment to the extent of 49 lakhs in the share capital of Mysore Iron and Steel Works, are covered by central assistance.

In addition to this, I would like to point out to the members, broadly speaking, the various items under the three categaries I have mentioned. Items which are either covered by assistance from centre or others or adjustments–items not involving any actual outgo of cash :

Demand 15	items 2 to 7
Demand 20	item 4
Demand 29	item 1
Demand 33	items 1 to 10
Demand 41	item 1
Demand 54	item 10

Items for which only token demands are included which can be met by re-appropriation by savings in respect of major heads. These are :

Demand 4	item 1
Demand 13	item 2
Demand 15	item 1
Demand 17	items 2, 3, 4, 5, 6
Demand 18	item 1
Demand 20	item 2
Demand 23	item 1
Demand 27	item 1
Demand 39	items 1, 2, 3
Demand 45	items 1, 4, 5;
Demand 46	items 1 to 7
Demand 47	item 1
Demand 48	items 1, 2, 3, 4, 5, 6, 7
Demand 54	items 7, 8, 9,

Lastly items which involve outgo of cash :

Demand 13	item 1
Demand 17	item 1
Demand 20	items 1 and 3
Demand 44	item 2
Demand 45	items 2 and 3
Demand 54	items 1 to 6

With these words, I commend that the House may approve of these demands.

†Sri H. SIDDAVEERAPPA.—I want one clarification from the Minister. He has given us figures with regard to actual capital outlay. With regard to the re-appropriations I would like to know one thing. He has given some token amount. What would be the actual reappropriation that you would wish to get out of the savings ? The policy of Government in respect of reappropriations out of savings, I want to know. First you take budget grant and then try to save and utlise that amount. How does it all arise ? I want a clarification. I find a larger portion of the capital outlay appears to be for the department of co-operation. I remember to have read a few days back that the Finance Minister is clear in his mind though I do not know whether he would wish to say so in this House that in the interest of the State for some time this department of co-operation must be closed or abolished because a lot of havoc has been done in the State and is being continuously done. What is more, formerly when some of these things were under the management of the M. S. E. B. our people were getting pumpsets and all that. Now they say no money. I am really surprised that if we allow these things to go like this, where will it lead to ? On the one hand there is dearth of public finance even to get one lakh, some times on the other hand, call it or utter the word Co-operation. Somehow or other, the Finance Department has to finance it and see whatever they want, is given. I would like to know whether these facts are examined by the Finance Minister who has placed the supplementary demands before the House. I would like to know whether the money that would be given by way of subsidy, would be properly utilised and whether they have earned by this subsidy. Kindly elucidate and clarify the points I have raised.

2-00 P.M.

Sri RAMAKRISHNA HEGDE.—In regard to the first point of the hon. Member, I may draw his kind attention to the Explanatory Notes that have been provided in the printed brochure.

Sri H. SIDDAVEERAPPA.—I got it just now.

Sri RAMAKRISHNA HEGDE.—I am sorry he got it late.

In regard to each demand, even where only token payment has been made, a very detailed explanatory note has been given and that is self-explanatory.

In regard to my views on co-operative institutions and the co-operative movement in the State, I am sorry that the hon. Member has rather misunderstood. I have not stated that for sometime the Co-operative Department should be closed.

Sri H. SIDDAVEERAPPA.—The hon. Minister seems to have expressed that this Department is not working properly. I do remember he passed some such remarks which were dear to my heart.

Sri RAMAKRISHNA HEGDE.—What I actually said was this: The working of the co-operative institutions in certain areas-areas not in geographical terms, is a far from satisfactory and we want the co-operative movement to develop in such a manner that it is self-generating and self-propelling so that after sometime there is no need for a separate department called the Co-operative Department to exist; because I have seen all over the world, except in our country and may be in Pakistan, nowhere there is a separate department of the Government called Co-operation Department. There is a separate Minister for Co-operation. That is what exactly I said. And this particular amount of Rs. 1 crore is not subsidy we give to the institution as such. It is because a few years ago when we decided to channelise this longterm credit to the people through the co-operative institutions, particularly the Land Development Banks, we agreed that the defference between the rate of economic interest and the actual interest charged to the borrower, will be made by the Government and it accumulated for the last couple of years. It is only part of it we are paying. It is not outright subsidy.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸ್ವಾಮಿ, ಮಾನ್ಯ ಮಂತ್ರಿಗಳು ಹಿಂದೆ ಒಂದು ಸ್ಟೇಟ್‌ಮೆಂಟ್ ಕೊಟ್ಟಾಗ ಒಂದು ವಾತಾವರಣ ಉಂಟಾಗಿತ್ತು. ಈ ಸಹಕಾರಿ ಇಲಾಖೆಯಿಲ್ಲದಿದ್ದರೆ ಕೆಲವಾರು ಆಫೀಸರುಗಳನ್ನು ಏಜೆಂಟಾಗಿ ಉಪಯೋಗಿಸಿಕೊಂಡು ಯಾರಿಗೆ ಸಹಾಯಮಾಡಬೇಕು, ಯಾರಿಗೆ ವಿರೋಧಮಾಡಬೇಕು ಎಂದು ಯೋಚಿಸಿ ಆ ಬಗ್ಗೆ ಕಾರ್ಯನಿರತರಾಗುತ್ತಿದ್ದವರಿಗೆ ಇದ್ದ ಅವಕಾಶ ತಪ್ಪಿಹೋಗುತ್ತದೆಯಲ್ಲಾ ಎಂದು ನನಗೆ ಚಿಂತೆಯಾಗಿತ್ತು.

Mr. SPEAKER.—The hon. Member Sri Nagappa will speak.

ಶ್ರೀ ಎಂ. ನಾಗಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಮಂಡಿಸಿರುವ ಸಪ್ಲಿಮೆಂಟರಿ ಬೇಡಿಕೆಯನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಹಾಗೆಯೇ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಮೊದಲನೆಯದಾಗಿ ನಮ್ಮ ಸರಕಾರ ನಾವು ಈ ಸಭೆಗೆ ಬಂದನಂತರ ನಾವು ಹೊಸಬರಾದರೂ ಪ್ರತಿ ವರ್ಷ ಅಂಗೀಕಾರವಾಗುವ ಬಜೆಟ್ ಅಲ್ಲದೆ ಕನಿಷ್ಠವಾಗಿ 2 ಅಥವಾ 3 ಸಾರಿ ಸಪ್ಲಿಮೆಂಟರಿ ಬಜೆಟ್ಟನ್ನು ತರುವ ಒಂದು ಪದ್ಧತಿಯನ್ನು ಅನುಸರಿಸುತ್ತಾ ಬಂದಿದೆ.

ಇದು ಸರ್ಕಾರದ ಒಂದು ನೀತಿಯನ್ನು ತೋರಿಸಿಕೊಡುತ್ತದೆ. ಅವರು ಪ್ರತಿವರ್ಷ ಈ ರೀತಿಯ ಲೆಕ್ಕಪತ್ರಗಳನ್ನು ಕೊಡುವುದು ಸರಿಯಾದ್ದಲ್ಲ. ಅವರ ಆಗಾಗ್ಗೆ ಅವರ ಮನಸ್ಸಿಗೆ ಬಂದಂತೆ ಬದಲಾಯಿಸತಕ್ಕ ಕೆಲವು ಪ್ರವೃತ್ತಿಗಳನ್ನು ಇಟ್ಟುಕೊಂಡು, ಲೆಕ್ಕಪತ್ರಗಳು ಸರಿಯಾಗಿ ಇರದೇ ಇರುವುದೇ ಈ ರೀತಿ ಸಪ್ಲಿಮೆಂಟರಿ ಬಜೆಟ್ ತರುವುದಕ್ಕೆ ಕಾರಣವಾಗಿವೆ. ಇದನ್ನು ನಾನು ಹೇಳುವುದು ಬೇಕಾಗಿಲ್ಲ, ಮೊನ್ನೆ ತಾವು ಕೊಟ್ಟಂಥ ತುಕೋಳ್ ಕಮಿಷನ್ ವರದಿ ನೋಡಿದರೆ 66-67, 67-68, 68-69ರ ಬಜೆಟ್‌ನ್ನು ಬ್ರಾಕೆಟ್ ಮಾಡಿ ತೋರಿಸಿದ್ದಾರೆ ಆಕ್ಚುಯಲ್ಸ್ ಮೇಲೆ ಅಲ್ಲ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. ತಾವು ನೇಮಿಸತಕ್ಕಂಥ ಕಮಿಷನ್‌ಗಳು ತಮ್ಮ ಬಜೆಟಿನ ಆಧಾರದ ಮೇಲೆ ಒಂದು ವರದಿಯನ್ನು ಕೊಡತಕ್ಕ ಪರಿಸ್ಥಿತಿ ಇರುತ್ತದೆ. ಅವರಿಗೆ ಸಪ್ಲಿಮೆಂಟರಿ ಗ್ರ್ಯಾಂಟಿನ ವಿಷಯ ಕೊಡುವುದಿಲ್ಲ, ಅಂತಹ ಪರಿಸ್ಥಿತಿಯಲ್ಲಿ ವಾಸ್ತವಿಕವಾಗಿ ಸರ್ಕಾರದ ಒಂದು ಲೆಕ್ಕಪತ್ರವನ್ನು ನೀಡಬೇಕಾದ ಪರಿಸ್ಥಿತಿ ಬಂದಾಗ ಅವರಿಗೆ ಸರಿಯಾದಂತಹ ಲೆಕ್ಕಪತ್ರಗಳನ್ನು ಕೊಟ್ಟು ನಮ್ಮ ಆದಾಯ ಈ ವರ್ಷದಲ್ಲಿ ಇಷ್ಟು ಮತ್ತು ಖರ್ಚು ಇಷ್ಟು ಎಂಬುದನ್ನು ತಿಳಿಸಲಿಕ್ಕೆ ಸಾಧ್ಯವಿಲ್ಲ. 4 ಅಥವಾ 6 ವರ್ಷ ಕಳೆದ ನಂತರ ಆಕ್ಚುಯಲ್ಸ್ ಬಂದ ಮೇಲೆ ಆಡಿಟ್ ರಿಪೋರ್ಟ್ ಅಥವಾ ಬೇರೆ ಕಾಗದ ಪತ್ರಗಳನ್ನು ತೋರಿಸಬಹುದು. ಆದರೆ ಇದೇ ವರ್ಷದ ಲೆಕ್ಕಪತ್ರವನ್ನು ತೆಗೆದುಕೊಂಡು ನೋಡಬೇಕಾದರೆ ಈ ತರಹದ ಸಪ್ಲಿಮೆಂಟರಿ ಗ್ರ್ಯಾಂಟಿನಿಂದ ತೊಂದರೆಯಾಗುತ್ತದೆ. ಮುಂದಾದರೂ ಈ ತರಹ ಸಪ್ಲಿಮೆಂಟರಿ ಗ್ರ್ಯಾಂಟ್ ಬರತಕ್ಕ ಪರಿಸ್ಥಿತಿಯನ್ನು ನಿಲ್ಲಿಸಬೇಕು.

ಎರಡನೆಯದಾಗಿ ಇದರಲ್ಲಿ ಒಂದು ವಿಶೇಷವಾದಂತಹ ಮಾತನ್ನು ಹೇಳಬಯಸುತ್ತೇನೆ. ನ್ಯೂ ಸರ್ವೀಸ್ ಈ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ತೋರಿಸಿಕೊಟ್ಟಿದ್ದಾರೆ, ಒಂದು ಲಕ್ಷ ರೂಪಾಯಿಗೂ ಹೆಚ್ಚಿನ ಖರ್ಚನ್ನು ನ್ಯೂ ಸರ್ವೀಸ್ ಅಂತ ಮಾಡಕೂಡದು ಎಂದು ಹೇಳಿದ್ದಾರೆ. ಈ ಸಪ್ಲಿಮೆಂಟರಿ ಗ್ರಾಂಟನ್ನು ನೋಡಿದರೆ ಅಂತಹ ಕೆಲವೊಂದು ಐಟಂಗಳು ಇದರಲ್ಲಿ ಸಿಕ್ಕುತ್ತವೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಮಾಡಿದಂತಹ ರೂಲನ್ನು ಉಲ್ಲಂಘನೆ ಮಾಡಿ ಹೆಚ್ಚಿನ ಹಣವನ್ನೂ ಕೂಡ ಖರ್ಚು ಮಾಡಿ ಇವತ್ತಿಗೂ ಅದು ನ್ಯೂ ಸರ್ವೀಸ್ ಅಂತ ತಂತಕ್ಕ ಪದ್ಧತಿಯನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಇದು ಸರಿಯಾದ್ದಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟನ್ನು ಈ ಸಭೆ ಒಪ್ಪಿಕೊಂಡು ಅನಂತರವೂ ಕೂಡ ಈ ರೀತಿ ಸಪ್ಲಿಮೆಂಟರಿ ಬಡ್ಜೆಟನ್ನು ತರುವುದು ನ್ಯಾಯವಲ್ಲ. ಮುಂದಾದರೂ ಇಲ್ಲಿ ನಿರ್ಣಯವಾದಂತಹ ವಿಷಯವನ್ನು ಅವರು ಗಮನಿಸಬೇಕೆಂದು ಹೇಳ ಬಯಸುತ್ತೇನೆ.

ಇನ್ನು ಕೆಲವು ಡಿಮ್ಯಾಂಡುಗಳ ಬಗ್ಗೆ ಮಾತ್ರ ಹೇಳುತ್ತೇನೆ. ಈಗಾಗಲೇ ಮಾನ್ಯ ಸಿದ್ಧವೀರಪ್ಪನವರು ಕೋ ಅಪರೇಟೀವ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುತ್ತಾ ಇದ್ದರು. ನನಗಾದರೂ ಆ ಬಗ್ಗೆ ಹೆಚ್ಚು ಹೇಳಬೇಕಾದ ಅಭಿಪ್ರಾಯ ಉಂಟು. ಏಕೆಂದರೆ ನಿನ್ನೆ ಅಥವಾ ಮೊನ್ನೆ ಈ ಎರಡು ದಿವಸದ ಕೆಳಗೆ ಮಾನ್ಯ ಉಪಮಂತ್ರಿಗಳು ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಇದ್ದರು, ಅಲ್ಲಿ ರಿಜಿಸ್ಟರ್ ಆದ ಕೋ ಅಪರೇಟೀವ್ ಸೊಸೈಟಿಗಳು ಎಷ್ಟು ಎಷ್ಟು ಸೊಸೈಟಿಗಳು ಜೀವಂತವಾಗಿವೆ, ಎಷ್ಟು ಸೊಸೈಟಿಗಳು ಜೀವಂತವಾಗಿಲ್ಲ ಎಂದು. ಅವರು ಕೊಟ್ಟಂಥ ಲೆಕ್ಕದ ಪ್ರಕಾರ ಅಂದಾಜು 400 ಸೊಸೈಟಿಗಳು ಇವೆ, ಅದರ ಪೈಕಿ 250ಕ್ಕೂ ಮೇಲ್ಪಟ್ಟು ಸೊಸೈಟಿಗಳು ಲಿಕ್ವಿಡೇಟ್ ಆಗಿವೆ, ಸರಿಯಾದಂತಹ ಕೆಲಸ ಮಾಡುತ್ತಿಲ್ಲ ಎಂಬ ಲೆಕ್ಕವನ್ನು ಕೊಟ್ಟಿದ್ದಾರೆ. ಇದು ಒಂದು ಜಿಲ್ಲೆಗೆ ಸಂಬಂಧಪಟ್ಟದ್ದು ಅಲ್ಲ. ಪ್ರತಿಜಿಲ್ಲೆಯಲ್ಲೂ ನೋಡಬಹುದು. ರಾಯಚೂರು ಜಿಲ್ಲೆಯಲ್ಲಿ ಹೋದ ಸೆಷನ್‌ನಲ್ಲೋ ಅಥವಾ ಅದಕ್ಕಿಂತ ಹಿಂದಿನ ಸೆಷನ್‌ನಲ್ಲೋ ಈ ಬಗೆ ಒಂದು ಪ್ರಶ್ನೆ ಬಂದಾಗ 150 ಸೊಸೈಟಿಗಳು ಇದ್ದವು ಅದರಲ್ಲಿ ಬಹು ಭಾಗದ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬ ಅಭಿಪ್ರಾಯವನ್ನು ಇದೇ ಸಭೆಯಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ.

ಈ ಡಿಮ್ಯಾಂಡಿನಲ್ಲಿ ಒಬ್ಬೊಬ್ಬ ಡೆಪ್ಯುಟಿ ರಿಜಿಸ್ಟ್ರಾರ್ ಅವರಿಗೆ ಒಂದೊಂದು ಜೀಪನ್ನು ಒದಗಿಸಬೇಕೆಂದು ಹೇಳಿವೆ. ಆದರೆ ಅಲ್ಲಿ ವಾಸ್ತವಿಕವಾದ ಸಂಗತಿಯೇನಿದೆ ಎಂಬುದನ್ನು ಯಾರೂ ಮನಗಂಡಿಲ್ಲ. ಒಂದೊಂದು ಜಿಲ್ಲೆಯಲ್ಲೂ ಹೆಚ್ಚು ಹೆಚ್ಚು ಎಂದರೆ ನೂರು ಅಥವಾ ನೂರೈವತ್ತು ಜೀವಂತ ಸೊಸೈಟಿಗಳಿದ್ದರೆ ಹೆಚ್ಚಾಯಿತು. ಆ ನೂರೈವತ್ತು ಸೊಸೈಟಿಗಳನ್ನು ನೋಡುವುದಕ್ಕೆ ಒಂದೊಂದು ಜಿಲ್ಲೆಗೂ ಒಬ್ಬೊಬ್ಬ ಡೆಪ್ಯುಟಿ ರಿಜಿಸ್ಟ್ರಾರಿಗೆ ಒಂದೊಂದು ಜೀಪನ್ನು ಕೊಡುವುದರಿಂದ 19 ಜಿಲ್ಲೆಗೂ ಎಷ್ಟು ಹಣ ನಿಷ್ಕಾರಣವಾಗಿ ಖರ್ಚಾಯಿತು ಎಂಬುದನ್ನು ನಾವು ಇಲ್ಲಿ ಮನಗಾಣಬೇಕು. ಇದು ಸಾರ್ವಜನಿಕರ ಹಣವನ್ನು ದುರ್ವ್ಯಯಮಾಡಿದಂತಾಯಿತು. ಸರ್ಕಾರದವರು ಹೀಗೆ ಉತ್ಪತ್ತಿಯಿಲ್ಲದ ಬಾಬಿಗೆ ಹೆಚ್ಚು ಹಣ ವ್ಯಯ ಮಾಡುವುದನ್ನು ಸೊಸೈಟಿಗಳು ಜೀವಂತ ಉಳಿಯುವುದಕ್ಕೆ ಸಹಾಯ ಮಾಡಿದಂತಾಗುವುದಿಲ್ಲ. ಇದರಲ್ಲೂ ಕೂಡ ಸರ್ಕಾರದಲ್ಲಿ ಪಕ್ಷಪಾತ ತುಂಬಿರುತ್ತದೆ. ರಾಯಚೂರು ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಹರಿಜನರ ವಾಸದ ಮನೆಗಳನ್ನು ನಿರ್ಮಾಣಮಾಡತಕ್ಕ ಒಂದು ಸೊಸೈಟಿ ಇದೆ. ಅದಕ್ಕೆ ಇದೇ ಸಭೆಯ ಒಬ್ಬ ಮಾನ್ಯ ಸದಸ್ಯರು ಅಧ್ಯಕ್ಷರು. ಅವರು ಇಲ್ಲಿ ಸಭೆಯಲ್ಲಿ ಹಾಜರಿದ್ದರೂ ಅಲ್ಲಿ ಆ ಸೊಸೈಟಿಯ ಜನರಲ್‌ಬಾಡಿ ಮೀಟಿಂಗ್ ಇವರ ಅಧ್ಯಕ್ಷತೆಯಲ್ಲೇ ನಡೆಯುತ್ತಿರುತ್ತದೆ ಎಂದು ವರದಿಗಳಿವೆ, ಇಲ್ಲಿರತಕ್ಕ ಮಾನ್ಯ ಸದಸ್ಯರು ನಾಳೆ ಅಲ್ಲಿ ಚುನಾವಣೆಗಳಾಗಬೇಕು ಅನ್ನುವಾಗ ಇಲ್ಲಿಂದ ಹೊರಡುತ್ತಾರೆ. ಅಲ್ಲಿ ಆ ನಾಮಿನೇಷನ್ ಪತ್ರಗಳನ್ನು ಸ್ವೀಕರಿಸುವುದು ಚುನಾವಣೆಯ ಕ್ಯಾಲೆಂಡರನ್ನು ತಯಾರಿಸುವುದು ಇಂಥ ಕೆಲಸವನ್ನೆಲ್ಲಾ ಯಾರೋ ಮಾಡುತ್ತಾರೆ. ಇಲ್ಲಿಂದ ಸದಸ್ಯರು ಅಲ್ಲಿಗೆ ಹೋಗಿ ಏನೋ ಒಂದು ರೀತಿ ಮಾಡಿ ಯೂನಾನಿಮಸ್ಸಾಗಿ ಚುನಾವಣೆ ಇಲ್ಲದೆ ಜನರನ್ನು ಆರಿಸುತ್ತಾರೆ. ಅನಂತರ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ತಮ್ಮ ಸ್ಥಾನ ಭದ್ರಮಾಡಿಕೊಳ್ಳುತ್ತಾರೆ. ಹಾಗೆ ಅದು ಸಾಧ್ಯವಾಗದಿದ್ದಾಗ ಅವರು ಮತ್ತೆ ಸರ್ಕಾರಕ್ಕೆ ಒಂದು ಅರ್ಜಿಯನ್ನು ಕೊಟ್ಟು ಆ ಡೈರೆಕ್ಟರುಗಳ ಚುನಾವಣೆಯನ್ನು ರದ್ದುಮಾಡಲು ಪ್ರಯತ್ನಮಾಡುತ್ತಾರೆ. ಹೀಗೆ ಹಿಂದೆ ಒಂದಾವರ್ತಿ ಮಾಡಿದ್ದಾರೆ. ಜನರಲ್‌ಬಾಡಿ ಮೀಟಿಂಗ್ ನಡೆದ 30 ದಿನಗಳೊಳಗಾಗಿ ರೂಲ್ಸ್ ಪ್ರಕಾರ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಗಳನ್ನು ರದ್ದುಮಾಡಬಹುದು ಎಂದಿದೆ. ಆದರೆ ಇದೇ ಸಭೆಯ ಆ ಮಾನ್ಯ ಸದಸ್ಯರು ಜನರಲ್‌ಬಾಡಿ ಮೀಟಿಂಗ್ ನಡೆದು 45 ದಿನಗಳು ಕಳೆದ ಮೇಲೆ ಇಲ್ಲಿ ಬೆಂಗಳೂರಿನಲ್ಲಿ ಮಂತ್ರಿಗಳ ಛೇಂಬರಲ್ಲಿ ಕುಳಿತುಕೊಂಡು ಆ ಚುನಾವಣೆಗಳನ್ನು ರದ್ದುಮಾಡಿಸಿದ್ದಾರೆ. ಅಂದರೆ ಸರ್ಕಾರದ ಇನ್‌ಫ್ಲುಯೆನ್ಸ್ ಮೇಲೆ ಆರ್ಬಿಟ್ರೇಷನ್ ಹಾಕಿ

(ಶ್ರೀ ಎಂ. ನಾಗಪ್ಪ)

ಆ ಚುನಾವಣೆಗಳನ್ನು ರದ್ದುಪಡಿಸಿ ಮತ್ತೆ ಚುನಾವಣೆ ನಡೆಯುವಂತೆ ಮಾಡಿದ್ದಾರೆ. ಇಷ್ಟೆಲ್ಲಾ ಪಕ್ಷಪಾತ ಅನ್ಯಾಯಗಳು ನಡೆಯುತ್ತಿದ್ದರೆ ಇನ್ನು ಸೊಸೈಟಿಗಳು ಜೀವಂತ ಉಳಿಯಬೇಕೆಂದರೆ ಹೇಗೆ ಸಾಧ್ಯ? ಹೀಗೆ ಪರಿಸ್ಥಿತಿ ಇದ್ದರೆ ಅವು ತಮ್ಮ ಕೆಲಸವನ್ನು ಎಷ್ಟರಮಟ್ಟಿಗೆ ಮಾಡಬಲ್ಲವು? ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕ ರಿಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ಇವರೆಲ್ಲಾ ಕಾಂಗ್ರೆಸ್ ಸರ್ಕಾರಕ್ಕೆ ಬೆಂಬಲ ನೀಡತಕ್ಕವರೇ ಆಗಿದ್ದಾರೆ. ಹಾಗೆ ಅವರು ಈಗಿನ ಸರಕಾರಕ್ಕೆ ಸಹಾಯ ಮಾಡದಿದ್ದರೆ ಅವರು ಅಲ್ಲಿ ಉಳಿಯುವುದಕ್ಕೇ ಸಾಧ್ಯವಿಲ್ಲ. ನಮ್ಮ ರಾಯಚೂರ ಮಾರ್ಕೆಟಿಂಗ್ ಆಫೀಸಿನಲ್ಲಿ ಒಬ್ಬ ಒಳ್ಳೆಯ ದಕ್ಷ ಕೆಲಸಗಾರರಾದ ಕಾರ್ಯದರ್ಶಿಗಳಿದ್ದರು. ಅವರು ಹಳೆಯ ಮೈಸೂರಿನವರು. ಅವರ ಹೆಸರೂ ಸಹಿತ ನನಗೆ ಗೊತ್ತಿಲ್ಲ. ಆದರೆ ಅವರು ಈ ಸಭೆಯ ಸದಸ್ಯರೊಬ್ಬರ ಮಾತನ್ನು ಕೇಳದೆ ಇದ್ದುದರಿಂದ ಆ ಸದಸ್ಯರು ಅವರನ್ನು 24 ಗಂಟೆಗಳಲ್ಲಿ ಛಾರ್ಜನ್ನು ಕೊಟ್ಟು ಹೋಗುವಂತೆ ಇಲ್ಲಿ ಮಂತ್ರಿಗಳ ಆಫೀಸಿನಲ್ಲಿ ಕುಳಿತು ಒಂದು ಆರ್ಡರನ್ನು ಹೊರಡಿಸಿದ್ದಾರೆ. ಹೀಗಾದರೆ ಇನ್ನಾವು ಸೊಸೈಟಿಗಳು ಜೀವಂತ ಉಳಿಯಲು ಸಾಧ್ಯವಿದೆ? ಹಿಂದೆ ಹಳ್ಳಿಗಳಲ್ಲಿ ಯಾರು ಬಂಡವಾಳಷಾಹಿಗಳಾಗಿದ್ದರೋ ಅಂಥ ಜನರೇ ಈ ದಿವಸ ಈ ಸೊಸೈಟಿಗಳ ಅಧ್ಯಕ್ಷರು ಇಲ್ಲವೇ ಕಾರ್ಯದರ್ಶಿಗಳು ಆಗುತ್ತಿದ್ದಾರೆ. ಹಿಂದೆ ಅವರು ತಮ್ಮ ಮನೆಯಲ್ಲಿದ್ದ ಸ್ವಂತ ಹಣವನ್ನು ಅವರ ಲೇವಾದೇವಿಗೆ ಉಪಯೋಗಿಸುತ್ತಿದ್ದರು. ಆದರೆ ಈ ದಿವಸ ಈ ಸೊಸೈಟಿಗಳು ಚಲಾವಣೆಗೆ ಬಂದ ಮೇಲೆ ಈ ಸಂಸ್ಥೆಗಳಲ್ಲಿ ಇಲ್ಲಿ ಸಾರ್ವಜನಿಕರಿಂದ ಹಾಗೂ ಸರ್ಕಾರದಿಂದ ಸಾಲ ಪಡೆದು ತಂದ ಹಣವನ್ನು ಈ ಬಂಡವಾಳಶಾಹಿ ಜನರು ಆ ದುಡ್ಡನ್ನು ತಮ್ಮ ಸ್ವಂತ ಲೇವಾದೇವಿಗೆ ಬಳಸುತ್ತಿದ್ದಾರೆ. ಆದರೆ ಯಾವ ತರಹ ಕ್ರಮವನ್ನೂ ಇಷ್ಟರವರೆಗೂ ತೆಗೆದುಕೊಂಡಿಲ್ಲ. ಇಂತಹ ಉದಾಹರಣೆಗಳು ಇರುವ ಕಾಲಕ್ಕೆ ಡೆಪ್ಯುಟಿ ರಿಜಿಸ್ಟ್ರಾರ್ ಅವರಿಗೆ ಒಂದೊಂದು ಜೀಪ್ ಕೊಡುವುದು ಬಹಳ ಅನ್ಯಾಯವೆಂದು ನಾನು ತೀವ್ರವಾಗಿ ವಿರೋಧಿಸುತ್ತೇನೆ.

ಎರಡನೆಯದಾಗಿ, ಹಿಂದಿ ಟೀಚರ್ಸ್ ಟ್ರೈನಿಂಗ್ ಕಾಲೇಜ್ ಬಗ್ಗೆ ಎರಡು ಡಿಮ್ಯಾಂಡ್ಸ್ ಬಂದಿವೆ. ಮೈಸೂರಿನಲ್ಲಿ ಒಂದು ಹಿಂದಿ ಕಾಲೇಜು ಇದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೈಸೂರು, ಬಾಗಲಕೋಟೆ ಮತ್ತು ರಾಯಚೂರುಗಳಲ್ಲಿ ಮೂರು ಹಿಂದಿ ಟ್ರೈನಿಂಗ್ ಕಾಲೇಜುಗಳನ್ನು ಸೆಂಟ್ರಲ್ ಅಸಿಸ್ಟೆನ್ಸ್‌ನಿಂದ ನಡೆಸುತ್ತಿದ್ದರು. ಕೇಂದ್ರದ ನೆರವು ನಿಂತರೂ ಒಂದು ವರ್ಷ ಹಾಗೆಯೇ ನಡೆಯಿತು. ಅದಕ್ಕೆ ದುಡ್ಡನ್ನು ಯಾವ ಬಡ್ಜೆಟ್ಟಿನಿಂದ ಕೊಟ್ಟರೋ ಗೊತ್ತಿಲ್ಲ. ಈ ವರ್ಷ ಅಕೌಂಟೆಂಟ್ ಜನರಲ್ ಅವರು ಇದರ ಬಗ್ಗೆ ವಿರೋಧ ಮಾಡಿದ್ದರೂ ಮೂರನೆಯ ಪಂಚವಾರ್ಷಿಕ ಯೋಜನೆಯವರೆಗೆ ಮಾತ್ರ ಕೇಂದ್ರ ಸರ್ಕಾರದಿಂದ ದುಡ್ಡನ್ನು ಅವಕ್ಕೆ ಕೊಡುತ್ತಿದ್ದೀರಿ. ನೀವು ಹಾಗೆಯೇ ಅದನ್ನು ಬಳಸಿಕೊಂಡು ಹೋಗುತ್ತಿದ್ದೀರಿ. ನೀವು ದುಡ್ಡು ಕೊಟ್ಟಿದ್ದೀರಾ ಕೇಂದ್ರ ಸರ್ಕಾರದಿಂದ ಲೋನ್ ಅಥವಾ ಗ್ರ್ಯಾಂಟ್ ಇವಕ್ಕೆ ಕೊಡುವುದನ್ನು ಈಗ ಬಂದ್ ಮಾಡಿದ್ದಾರೆ ಎನ್ನುವ ವಿಷಯ ಕೇಳಿದನಂತರ ಈ ಮೂರು ಕಾಲೇಜುಗಳನ್ನು 67–68ನೇ ಇಸವಿಯಲ್ಲಿ ಬಂದ್ ಮಾಡಿದರು. ಕೆಲವು ಕಡೆಗಳಿಂದ ಇದರ ಬಗ್ಗೆ ಅರ್ಜಿಗಳೂ ಸಹ ಬಂದಿರಬೇಕು ರಾಯಚೂರ್‌ನಿಂದಲೂ ಕಳುಹಿಸಿದ್ದಾರೆ. ಕಾಲೇಜುಗಳು ಬಂದ್ ಆದರೂ ಅಡ್‌ಮಿಷನ್ಸ್ ಕೊಡುತ್ತಿದ್ದಾರೆ. ಲೆಕ್ಚರರ್ಸ್ ಇದ್ದಾರೆ, ಎಲ್ಲಾ ವ್ಯವಹಾರಗಳೂ ನಡೆಯುತ್ತಿವೆ. ಅದರ ಬಡ್ಜೆಟ್ ಇಲ್ಲ. ಅವರ ಸಂಬಳಸಾರಿಗೆ 4–5 ತಿಂಗಳುಗಳಿಂದಲೂ ಇರಲಿಲ್ಲ. ಪುನಃ ಅದರ ಬಗ್ಗೆ ಏನು ವ್ಯವಹಾರ ಆಗಿದೆಯೋ ಗೊತ್ತಿಲ್ಲ. ಮೈಸೂರಿನಲ್ಲಿರತಕ್ಕ ಒಂದು ಕಾಲೇಜು ಮಾತ್ರ ಇನ್ನೂ ಜೀವಂತವಾಗಿಟ್ಟು ಮುಂದುವರಿಸಿಕೊಂಡಿದ್ದಾರೆ. ಆ ಕಮಿಟಿಯವರು ಹಿಂದಿ ಕಾಲೇಜುಗಳು ಇದೇ ರೀತಿ ಮುಂದುವರಿಯಬೇಕೆಂದು ನಿರ್ಣಯ ಮಾಡಿದರೂ, ಆ ನಿರ್ಣಯ, ಅದಕ್ಕೆ ವಿರೋಧವಾಗಿ ಮೈಸೂರಿನಲ್ಲಿ ಅದನ್ನು ರಾಜಕೀಯವಾಗಿಟ್ಟುಕೊಂಡು ಬಾಗಲಕೋಟೆ ಮತ್ತು ರಾಯಚೂರು — ಈ ಎರಡು ಕಾಲೇಜುಗಳನ್ನು ಕಿತ್ತುಹಾಕಿದ್ದಾರೆ. ಆದರೂ ಅಲ್ಲಿ ಅದು ನಡೆಯುತ್ತಿದೆ. ಆದರೆ ಪ್ರಾಪರ್ಲಿ ಹಿಂದಿ ಟ್ರೈನಿಂಗ್ ರಾಯಚೂರು ಮತ್ತು ಬಾಗಲಕೋಟೆ ಕಾಲೇಜುಗಳಲ್ಲಿ ನಡೆಯುತ್ತಾ ಇಲ್ಲ. ಬೇರೆ ಸಬ್ಜೆಕ್ಟುಗಳನ್ನು ತೆಗೆದುಕೊಂಡು ಟ್ರೈನಿಂಗ್ ಕೊಡುವ ಶಿಕ್ಷಣವನ್ನು ರಾಯಚೂರು ಮತ್ತು ಬಾಗಲಕೋಟೆ ಕಾಲೇಜುಗಳಲ್ಲಿ ಇಟ್ಟಿದ್ದಾರೆ. ಆದ್ದರಿಂದ ಮೈಸೂರಿನಲ್ಲಿ ಹಿಂದಿ ಟ್ರೈನಿಂಗ್ ಕೊಡುವ ಹಾಗೆ ಎರಡು ಕಾಲೇಜುಗಳಲ್ಲಿಯೂ ವ್ಯವಸ್ಥೆ ಮಾಡಬೇಕು.

Sri P. M. NADGOUDA (Minister for Development).—I may bring to the notice of the hon. Member that the college at Bagalkot is being continued.

ಶ್ರೀ ಎಂ. ನಾಗಪ್ಪ.—ರಾಯಚೂರು ಮತ್ತು ಬಾಗಲಕೋಟೆಗಳಲ್ಲಿಯೂ ಕಾಲೇಜುಗಳಿವೆ. ಆದರೆ ಕನ್ನಡ ಟೀಚರನ್ನು ಅಲ್ಲಿನ ಹಿಂದಿ ಟ್ರೈನಿಂಗ್‌ಗೋಸ್ಕರ ಕಳುಹಿಸಿದ್ದೀರಿ. ಬರೀ ಹಿಂದಿ ಕಲಿತಿರುವವರನ್ನು ಅಲ್ಲಿಗೆ ಕಳುಹಿಸಿದ್ದೀರಾ ಅಂದರೆ ಆ ರೀತಿ ಇಲ್ಲ. ಕನ್ನಡ ಉಪಾಧ್ಯಾಯರನ್ನು ಟ್ರೈನಿಂಗಿಗೆ ಕಳುಹಿಸಿದ್ದೀರಿ. ಏತಕ್ಕೋಸ್ಕರ ಈ ರೀತಿ ಮಾಡಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸಿ. ಇವೆರಡನ್ನೂ ಹಿಂದೀ ಕಾಲೇಜು ಎಂಬುದಾಗಿ ಇಟ್ಟಿಲ್ಲ, ಅಲ್ಲಿ ಬೇರೆ ಸಬ್ಜೆಕ್ಟ್ಸ್ ಕೊಡಿಸಿದ್ದಾರೆಂದು ಹೇಳುತ್ತೀರಿ. ಇವತ್ತು ಅದೇ ಕಾರಣ ಹೇಳುತ್ತೀರಿ. ಆದರೆ ಮೈಸೂರಿನಲ್ಲಿ ಪ್ಯೂರ್ ಹಿಂದೀ ಟ್ರೈನಿಂಗ್ ಕಾಲೇಜು ಇದೆ. ಮೈಸೂರಿನಲ್ಲಿರತಕ್ಕ ಕಾಲೇಜಿಗೂ ಮತ್ತು ಈ ಎರಡಕ್ಕೂ ವ್ಯತ್ಯಾಸ ಇದೆ. ಇದರಲ್ಲಿಯೂ ಸಹ ರಾಯಚೂರಿನವರು ಸಾಕಷ್ಟು ಹೋರಾಟಮಾಡಿ ಅದನ್ನು ಪರ್ಮನೆಂಟ್ ಆಗಿ ಮಾಡಿ ಎಂದು ಕೇಳಿದಮೇಲೆ ಲಕ್ಷಾಂತರ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಇವುಗಳ ಬೆಳವಣಿಗೆಗೋಸ್ಕರ ಕೊಟ್ಟಿದ್ದಾರೆ. ಈ ರೂಪಾಯಿಗಳನ್ನು ಈ ಸರ್ಕಾರದವರು ಅವರಲ್ಲಿಯೇ ಇಟ್ಟುಕೊಂಡಿದ್ದಾರೆ. ಕಾಲೇಜು ಕಟ್ಟಲು ಸ್ಥಳವನ್ನು ಖರೀದಿಮಾಡಿ, ರಾಯಚೂರಿಗೆ ಅಲಾಟ್ ಮಾಡಿದಂಥ ಹಣವನ್ನು ಬೇರೆ ಕಡೆಗೆ ಉಪಯೋಗಿಸಬೇಕು ಇಂತಹ ಒಂದು ದುರುದ್ದೇಶ ಈ ಸರ್ಕಾರಕ್ಕೆ ಇದೆ. ಇದು ಸರಿಯಲ್ಲ. ಆದ್ದರಿಂದ ಈಗಲಾದರೂ ಆ ಕಾಲೇಜುಗಳನ್ನು ಹಿಂದೀ ಟ್ರೈನಿಂಗ್ ಕಾಲೇಜುಗಳಾಗಿ ಪರಿಗಣಿಸಿ ಕೊಟ್ಟಿರತಕ್ಕ ಹಣವನ್ನು ದುರುಪಯೋಗಮಾಡದೆ ಮುಂದೆ ಆ ಹಣವನ್ನು ರಾಯಚೂರು ಕಾಲೇಜ್ ಕಟ್ಟಡಕ್ಕೆ ಉಪಯೋಗಿಸಿ ಈ ಕಾಲೇಜನ್ನು ತೀವ್ರವಾಗಿ ಕಟ್ಟಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ.

ಎರಡನೇ ವಿಷಯ. ರಾಯಚೂರಿನಲ್ಲಿ ಒಂದು ಅಗ್ರಿಕಲ್ಚರಲ್ ಇಂಜನಿಯರಿಂಗ್ ಇನ್‌ಸ್ಟಿಟ್ಯೂಟ್ ಪ್ರಾರಂಭಮಾಡಬೇಕೆಂದು ಮೊನ್ನೆ ಭಾರತ ಸರಕಾರದ ಅಗ್ರಿಕಲ್ಚರಲ್ ವಕ್ಕಲುತನದ ಮಂತ್ರಿಯು ಬಂದು ಫೌಂಡೇಶನ್ ಸ್ಟೋನ್ ಕೂಡ ಹಾಕಿದ್ದಾರೆ. ಅದಕ್ಕೆ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಅಧ್ಯಕ್ಷರಾಗಿದ್ದರು. ಆದರೆ ಇಲ್ಲಿ ಕೇಳತಕ್ಕದ್ದು ಅಗ್ರಿಕಲ್ಚರಲ್ ಇಂಜಿನಿಯರಿಂಗ್ ಕಾಲೇಜು ಮಾಡಬೇಕೆಂದು. ಅದನ್ನು ಮಾನ್ಯ ಮಂತ್ರಿಯವರು ಇನ್‌ಸ್ಟಿಟ್ಯೂಟ್ ಎಂದು ಏಕೆ ಮಾಡಿದರು ಎಂದು ಗೊತ್ತಾಗಿಲ್ಲ. ಮುಂದೆ ಈ ತರದ ಯೋಜನೆ ಇದ್ದರೆ, ಮತ್ತೊಂದು ಸಾರಿ ಮಾನ್ಯ ಮಂತ್ರಿಯವರು ಯೋಚನೆ ಮಾಡಿ ಇನ್‌ಸ್ಟಿಟ್ಯೂಟ್ ಎಂಬುದನ್ನು ತೆಗೆದು ಫುಲ್ ಫ್ಲೆಜ್‌ಡ್ ಕಾಲೇಜು ಎಂದು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ದಯವಿಟ್ಟು ಅದನ್ನು ಕಾಲೇಜ ಆಗಿ ಮಾಡಿದರೆ ಮಾತ್ರ ಅದರಿಂದ ಪ್ರಯೋಜನವಾದೀತು. ಹಾಗೆ ಕಾಲೇಜ ಆಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸಿಂಧನೂರು ತಾಲೂಕಿನಲ್ಲಿ ನಿರಾಶ್ರಿತರಿಗಾಗಿ ಕೆಲವು ಹೊಲಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ಡಿಮ್ಯಾಂಡ್ ಮಾಡಿದ್ದಾರೆ. ಅದನ್ನು ನಾನು ವಿರೋಧಿಸುತ್ತೇನೆ. ಇನ್ನು ಲಿಂಗಸುಗೂರು ತಾಲೂಕಿನಲ್ಲಿ ಒಬ್ಬ ಅಸಿಸ್ಟಾಂಟ್ ಕಮಿಶನರ್ ಇರುತ್ತಾರೆ. ಅವರಿಗೆ ಈ ಲ್ಯಾಂಡ್ ಅಕ್ವಿಸಿಶನ್ ಕೆಲಸವನ್ನು ಕೊಟ್ಟರೆ, ಈ 3,100 ಎಕರೆ ಅಕ್ವಿಸಿಶನ್ ಪ್ರೊಸೀಡಿಂಗ್ಸ್‌ಗೆ ಬೇರೆ ಸಿಬ್ಬಂದಿಯ ಅವಶ್ಯಕತೆ ಇಲ್ಲ. ಆದ್ದರಿಂದ ಈ ಸಿಬ್ಬಂದಿಗೆ ಕೊಡುವ ದುಡ್ಡನ್ನು ಸ್ಯಾಂಕ್ಷನ್ ಮಾಡಬಾರದು ಎಂದು ಹೇಳಿ, ಈ ಡಿಮ್ಯಾಂಡನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಯವರೇ, ನಾನು ಸಹಾ ಶ್ರೀಮಾನ್ ನಾಗಪ್ಪನವರು ಹೇಳಿದಂತಹ ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ನನ್ನ ಅನುಭವದಲ್ಲಿ ಸಹ ನಮಗೆ ತಿಳಿದ ಹಾಗೆ ಎರಡು ವರ್ಷಗಳಲ್ಲಿ ನಾಲ್ಕು ಸಾರಿ ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ತೆಗೆದುಕೊಂಡು ಬಂದಿದ್ದಾರೆ. ಈ ರೀತಿ ತೆಗೆದುಕೊಂಡು ಬರುವುದು, ನ್ಯಾಯವಾದುದೇ, ಸರಿಯಾದುದೇ ! ಇದು ಸರ್ಕಾರದ ನೀತಿ ಏನು ಎನ್ನುವುದನ್ನು ತೋರಿಸುತ್ತದೆ. ಇದು ನಿಜವಾಗಿಯೂ ಸರ್ಕಾರದ ಪುಷ್ಟಿದಾಯಕವಾದ ನೀತಿಯಲ್ಲವೆಂಬ ಪ್ರಶ್ನೆ ಬರುತ್ತದೆ. ಯಾರು ಇವತ್ತಿನ ದಿವಸ ದೊರಲಿ, ಇವರು ಕಾರ್ಯಗತ ಮಾಡುತ್ತಾರೆ. ಮೊದಲೇ ಯೋಚನೆ ಮಾಡಿಕೊಂಡಿರುತ್ತಿದ್ದರೆ, ಈ ರೀತಿ ಮೇಲಿಂದ ಮೇಲೆ ತೆಗೆದುಕೊಂಡು ಬರುವುದಕ್ಕೆ ಅವಕಾಶ ಇಲ್ಲ. ಆ ರೀತಿಯಾದರೆ ಮಾತ್ರ ಸರ್ಕಾರ ಸುವ್ಯವಸ್ಥಿತವಾಗಿ ನಡೆಯಬಹುದು ಎಂದು ನಮ್ಮ ಅಭಿಪ್ರಾಯ. ಇಲ್ಲಿ ಏನಾಗಿದೆ ಎಂದರೆ, ಒಂದು ವರ್ಷದಲ್ಲಿ ಎರಡು ಸಾರಿ ಸಪ್ಲಿಮೆಂಟರಿ ತೆಗೆದುಕೊಂಡು ಬರುವ ಹವ್ಯಾಸಕ್ಕೆ ಸರ್ಕಾರ ಹೋಗುತ್ತಿದೆ. ಆ ಒಂದು ದೃಷ್ಟಿಯಿಂದ ನಮ್ಮ ರಾಜ್ಯವು ಆರ್ಥಿಕ ಮಟ್ಟದಲ್ಲಾಗಲಿ, ಆರ್ಥಿಕ ಸುವ್ಯವಸ್ಥೆಯಲ್ಲಾಗಲಿ, ಅಥವಾ ರಾಜ್ಯದ ಆರ್ಥಿಕ ತಳಹದಿಯಾಗಲಿ, ಸುಭದ್ರವಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಮೊದಲೇ ಅದನ್ನು ಯೋಚನೆ ಮಾಡಿದ್ದರೆ ಈ ಪರಿಸ್ಥಿತಿಗೆ ಬರುತ್ತಾ ಇರಲಿಲ್ಲ.

ಎರಡನೆಯ ಅಂಶ ಏನೆಂದರೆ ಈಗ ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಹಲವಾರು ಬೇಡಿಕೆಗಳು ಇವೆ. ಎಲ್ಲಾ ಬೇಡಿಕೆಗಳ ಮೇಲೂ ಅನೇಕ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ

(ಶ್ರೀ ಎಂ. ಎಸ್. ಕೃಷ್ಣನ್)

ಇದರಲ್ಲಿ 54ನೇ ಡಿಮ್ಯಾಂಡಿನಲ್ಲಿ ಮುಖ್ಯವಾಗಿ ಕೈಗಾರಿಕೆಗಳಿಗೆ ಕೊಟ್ಟಿರುವ ಹಣದ ಬಗ್ಗೆ ಹೇಳಿದ್ದಾರೆ. ಎನ್. ಜಿ. ಇ. ಎಫ್.ಗೆ 55 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆ. ಮೈಸೂರು ಕೆಮಿಕಲ್ ವರ್ಕ್ಸ್ ಇವರಿಗೆ 15 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆ. ಮೈಸೂರು ರೇಡಿಯೋ ಎಲೆಕ್ಟ್ರಿಕಲ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ ಲಿಮಿಟೆಡ್ ಇವರಿಗೆ 55 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆ ಮುಖ್ಯವಾಗಿ ಕೈಗಾರಿಕೆಗಳಿಗೆ ಹಣ ಕೊಡಬೇಕಾದರೆ ಅವು ಯಾವ ರೀತಿ ನಡೆಯುತ್ತವೆ. ಮತ್ತು ಅವುಗಳಿಗೆ ಹಣ ಕೊಟ್ಟರೆ ಅದು ಸರಿಯಾಗಿ ಉಪಯೋಗವಾಗುತ್ತದೆಯೋ ಆ ಕೈಗಾರಿಕೆ ಸರಿಯಾದ ದಾರಿಯಲ್ಲಿ ಹೋಗುತ್ತಿದೆಯೋ ಎಂಬುದನ್ನು ಯೋಚನೆಮಾಡಿ ಕೊಡಬೇಕಾಗುತ್ತದೆ. ಎನ್ ಜಿ. ಇ. ಎಫ್. ರೆಂಕೋ ಫ್ಯಾಕ್ಟರಿ ಇವುಗಳು ಸರ್ಕಾರದವರು ನಡೆಸುವಂಥಾ ಕೈಗಾರಿಕೆಗಳು. ಈ ಕೈಗಾರಿಕೆಗಳಲ್ಲಿ ಬಹು ಭಾಗ ಸರ್ಕಾರದ ಹಣ ಇದೆ. ಮೈಸೂರು ಎಲೆಕ್ಟ್ರಿಕಲ್ ಕೆಮಿಕಲ್ ವರ್ಕ್ಸ್ ಖಾಸಗೀ ಸಂಸ್ಥೆ ಇದಕ್ಕೆ ಹಣಕೊಡುವುದಕ್ಕೆ ಮುಂಚೆ ಸರ್ಕಾರದವರು ಯೋಚನೆ ಮಾಡಿದ್ದಾರೆಯೇ? ಮೈಸೂರು ಸ್ಪಿನ್ನಿಂಗ್ ಅಂಡ್ ವೀವಿಂಗ್‌ಗೆ ಸರ್ಕಾರದವರು ಕೊಟ್ಟಿರುವ ಹಣದಿಂದ ಬಡ್ಡಿ ಬರುತ್ತದೆಯೇ? ಅವು ಸರಿಯಾಗಿ ನಡೆಯುತ್ತವೆಯೇ? ಎಂ. ಎಸ್. ಕೆ. ಮಿಲ್ಲಿಗೆ ಕೊಟ್ಟಿರುವ ಹಣ ಏನಾಯಿತು? ಅದು ಸರಿಯಾಗಿ ನಡೆಯುತ್ತದೆಯೇ? ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಗೌರಿಬಿದನೂರು ಸಹಕಾರಿ ಸಕ್ಕರೆ ಕಾರ್ಖಾನೆ ಮೂರಿಗೆ ಹೋಗುತ್ತಿದೆ. ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಕೋಟಿಗಟ್ಟಲೇ ಹಣವನ್ನು ಮೂರಿಗೆ ಹೋಗುತ್ತಿರುವ ಕೈಗಾರಿಕೆಗಳಿಗೆ ಒದಗಿಸುವ ಹಣವನ್ನು ಒಂದು ನೀತಿಯನ್ನು ಇಟ್ಟುಕೊಂಡಿದ್ದಾರೆ. ಪ್ರೈವೇಟ್ ಸೆಕ್ಟಾರಿಗೆ ಪ್ರಾಮುಖ್ಯತೆ ಕೊಡುವಾಗ ಪಬ್ಲಿಕ್ ಸೆಕ್ಟಾರಿಗೆ ಏತಕ್ಕೆ ಅಷ್ಟು ಪ್ರಾಮುಖ್ಯತೆ ಕೊಡುತ್ತಿಲ್ಲ? ಈ ವಿಚಾರದಲ್ಲಿ ಸರ್ಕಾರದವರು ತಾರತಮ್ಯ ತೋರಿಸುತ್ತಿದ್ದಾರೆ. ಪ್ರೈವೇಟ್ ಸೆಕ್ಟಾರಿನವರು ಸರಿಯಾಗಿ ಕೈಗಾರಿಕೆಯನ್ನು ನಡೆಸುತ್ತಾರೆ ಎನ್ನುವುದಕ್ಕೆ ಏನು ಗ್ಯಾರೆಂಟಿ ಇದೆ? ಈ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಯಾವ ಫಾಲೋ ಅಪ್ ಆಕ್ಷನ್ನೂ ಇಲ್ಲವೇ ಇಲ್ಲ. ಅವುಗಳಿಗೆ ಸರ್ಕಾರದವರು ಹಣ ಕೊಟ್ಟಮೇಲೆ ಅವುಗಳನ್ನು ಯಾವರೀತಿ ತಹಬಂದಿಗೆ ತರಬೇಕು ಎಂಬುದನ್ನು ಸರ್ಕಾರ ನೋಡುತ್ತಾ ಇಲ್ಲ. ರೆಪ್ಕೋ ಫ್ಯಾಕ್ಟರಿ ಸರಿಯಾಗಿ ನಡೆಯದೇ ಇರುವುದಕ್ಕೆ ಕಾರಣವೇನು? ಮೈಸೂರು ರಾಜ್ಯದಲ್ಲಾಗಲೀ, ಕೇಂದ್ರದಲ್ಲಾಗಲೀ ಕಾಂಗ್ರೆಸ್ ಸರ್ಕಾರವೇ ಇದೆ. ಇಂಡಿಯಾ ದೇಶದಲ್ಲಿ ಕೈಗಾರಿಕಾ ನೀತಿ ಪೂರ್ಣವಾಗಿ ದಿವಾಳಿತನವನ್ನು ಎತ್ತಿ ತೋರಿಸುತ್ತದೆ. ರೆಂಕೋ ಕಾರ್ಖಾನೆಯ ಆಡಳಿತವನ್ನು ಪೂರ್ಣವಾಗಿ ಗಮನಿಸಿದರೆ ಕೈಗಾರಿಕಾ ನೀತಿ ದಿವಾಳಿತನ ತೋರಿಸುತ್ತದೆ. ಈಗ ಬಿರ್ಲಾ ಕೈಗಾರಿಕೆ ತೀವ್ರ ಸ್ಪರ್ಧೆಗೆ ಇಳಿದು ಕಡಿಮೆ ಬೆಲೆಗೆ ಸಾಮಗ್ರಿಗಳನ್ನು ಮಾರಿ ರೆಪ್ಕೋ ಕಾರ್ಖಾನೆಯ ಬೆಳವಣಿಗೆಗೆ ಆತಂಕವನ್ನುಂಟು ಮಾಡುತ್ತಿದೆ. ಒಂದು ಪಬ್ಲಿಕ್ ಸೆಕ್ಟಾರಿನ ಕೈಗಾರಿಕೆಯನ್ನು ಮುಳುಗಿಸುವ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ. ಅದನ್ನು ಎದುರಿಸುವ ದಿಟ್ಟತನ ಸರ್ಕಾರಕ್ಕೆ ಇಲ್ಲ. ಇದರ ಜೊತೆಯಲ್ಲಿ ರೆಂಕೋ ಕಾರ್ಖಾನೆಯಲ್ಲಿ ಮಿಸ್ ಮ್ಯಾನೇಜ್‌ಮೆಂಟ್ ನಡೆಯುತ್ತಿದೆ. ಇದು ಸರ್ಕಾರದವರಿಗೆ ಗೊತ್ತಿದೆ. ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಷ್ಟಪಟ್ಟರೆ ನಾನು ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆ. ಇನ್ನೊಂದು ವಿಷಯವೆಂದರೆ ಈ ಕಾರ್ಖಾನೆಯನ್ನು ಯಾರೋ ಒಬ್ಬರಿಗೆ ಅಂದರೆ ಖಾಸಗೀಯವರಿಗೆ ಕೊಡುವುದಕ್ಕೆ ಯೋಚನೆ ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಈ ಬಗ್ಗೆ ಸರ್ಕಾರದವರು ಧೈರ್ಯ ತೋರಿಸಲಿ ಖಾಸಗೀಯವರಿಗೆ ಕೊಡದಿರಲಿ ಎಂದು ಕೇಳಿಕೊಳ್ಳುತ್ತೇನೆ. ಈ ಕಾರ್ಖಾನೆಯಲ್ಲಿ ಕುಶಲಕೆಲಸಗಾರರು ಸುಮಾರು 1,300 ಜನರಿದ್ದಾರೆ. ಹೆಂಗಸರು 300 ಜನರು ಇದ್ದಾರೆ. ಈ ಕಾರ್ಖಾನೆಯಲ್ಲಿ ರೇಡಿಯೋ, ಟ್ರಾನ್ಸಿಸ್ಟರ್ ಮುಂತಾದವನ್ನು ತಯಾರು ಮಾಡುತ್ತಿದ್ದಾರೆ. ಇದು ಪಬ್ಲಿಕ್ ಸೆಕ್ಟಾರ್‌ನಲ್ಲಿ ಇರುವುದು ಒಳ್ಳೆಯದೇ ಹೊರತು ಖಾಸಗೀಯವರಿಗೆ ವಹಿಸಿಕೊಡುವುದು ಸರಿಯಲ್ಲವೆಂದು ಹೇಳುತ್ತೇನೆ.

2-30 P.M.

ಇನ್ನು ಬಿ.ಇ.ಎಲ್‌ನ ಎರಡನೆಯ ಶಾಖೆಯನ್ನು ಹರಿಯಾಣದಲ್ಲಿ ಸ್ಥಾಪನೆ ಮಾಡುತ್ತಾರೆಂದು ಕೇಳಿದ್ದೇನೆ. ಹರಿಯಾಣದಲ್ಲಿ ಮಾಡುವುದರ ಬದಲು ಬೆಂಗಳೂರಿನಲ್ಲಿಯೇ ಈಗಿರುವ ಕಾರ್ಖಾನೆಯನ್ನು ವಿಸ್ತರಿಸಬೇಕೆಂದು ಹೇಳುತ್ತೇನೆ. ಬೆಂಗಳೂರಿನಲ್ಲಿಯೇ ಸ್ಥಾಪನೆ ಮಾಡಿದರೆ ನಾವೆಲ್ಲರೂ ಪೂರ್ತಿಯಾಗಿ ಬೆಂಬಲ ಕೊಡುತ್ತೇವೆಂದು ಹೇಳುತ್ತೇನೆ. ರೆಂಕೋ ಕಾರ್ಖಾನೆಗೆ 75 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಈ ಡಿಮ್ಯಾಂಡ್‌ನಲ್ಲಿ ಕೇಳಿದ್ದಾರೆ. ಇದರಲ್ಲಿ 55 ಲಕ್ಷ

ರೂಪಾಯಿಗಳನ್ನು ಅವರು ಸಾಲ ತೀರಿಸುವುದಕ್ಕಾಗಿ ಕೊಟ್ಟಿದ್ದಾರೆ. ಇದು ಕೈಗಾರಿಕಾ ನೀತಿಯೇ ಅಥವಾ ಪ್ರಗತಿಪರವಾದ ನೀತಿಯೇ ಎಂದು ಕೇಳಬೇಕಾಗುತ್ತದೆ.

ಇನ್ನು ಖಾದಿ ಮತ್ತು ಗ್ರಾಮೋದ್ಯೋಗದ ಬಗ್ಗೆ ಎಷ್ಟು ಹೇಳಿದರೂ ತೀರದು. ಇದು ಒಂದು ಕರ್ಮಕಾಂಡ, ಪಾಪಕೂಪವೆಂದು ಹೇಳಬಹುದು. ಇದಕ್ಕೆ 50 ಪರ್‌ಸೆಂಟ್ ಗ್ರಾಂಟ್ 50 ಪರ್‌ಸೆಂಟ್ ಲೋನ್ ಕೊಡುವುದಕ್ಕಾಗಿ 10 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆ. ಇದು ಇರುವುದಕ್ಕಿಂತ ಮುಚ್ಚಿಬಿಡುವುದು ಒಳ್ಳೆಯದೆಂದು ಹೇಳುತ್ತೇನೆ. ಪಾನನಿರೋಧವನ್ನು ರದ್ದು ಮಾಡಿದಮೇಲೆ ಇದನ್ನು ಆದರೂ ಏತಕ್ಕೆ ಮುಂದುವರಿಸಿಕೊಂಡು ಹೋಗಬೇಕು? ಇದನ್ನು ಸಹ ರದ್ದು ಮಾಡುವುದು ಒಳ್ಳೆಯದು. ಖಾದಿ ಪ್ರಚಾರದ ಮೂಲಕ ಸರ್ಕಾರದ ಹಣ ಬಹಳವಾಗಿ ವ್ಯಯವಾಗುತ್ತಿದೆ. 1966-67ರಲ್ಲಿ ಎಷ್ಟು ನಷ್ಟವಾಗಿದೆಯೆಂದು ಎಲ್ಲರಿಗೂ ಗೊತ್ತಿದೆ. ಈಗಾಗಲೇ 133·34 ಲಕ್ಷ ರೂಪಾಯಿಗಳನ್ನು ಸಾಲವಾಗಿ ಮತ್ತು 28·38 ಲಕ್ಷ ರೂಪಾಯಿಗಳನ್ನು ಗ್ರಾಂಟ್ ರೂಪದಲ್ಲಿ ಕೊಟ್ಟಿರುವುದಲ್ಲದೆ ಮತ್ತೆ ಕೊಡುವುದಕ್ಕೆ ಹೊರಟಿದ್ದೀರಿ. ಈ ರೀತಿ ಕೊಡುವುದು ನಿರರ್ಥಕವೆಂದು ಹೇಳಬಹುದು. ಇವರ ಧೋರಣೆ ಏನು ತೋರಿಸುತ್ತದೆ ಎಂದರೆ, ಖಾದಿ ಮತ್ತು ಗ್ರಾಮೋದ್ಯೋಗದವರು ತಯಾರಿಸಿರುವ ಬ್ಯಾಲೆನ್ಸ್‌ಷೀಟ್ ನೋಡುವುದಾದರೆ, ಅದರಲ್ಲಿ ಅನೆಕ್ಸರ್ (ಎ)ನಲ್ಲಿ ಒಟ್ಟು ಖರ್ಚು 8 ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಈ ಒಂದು ಬಾಬಿಗೆ ಹಣವನ್ನು ಕೊಟ್ಟೂ ಕೊಟ್ಟೂ ವ್ಯರ್ಥ ಮಾಡುವುದಕ್ಕಿಂತ ಈ ಅಂಗಡಿಗಳನ್ನೇ ಮುಚ್ಚಿಬಿಡುವುದು ಒಳ್ಳೆಯದು. ಉತ್ತಮವಾಗಿ ಕೆಲಸ ಮಾಡುತ್ತಿದ್ದರೆ ಹಣ ಕೊಡುವುದು ಸಾರ್ಥಕವಾಗುತ್ತದೆ.

ಇನ್ನು ಕೋ-ಆಪರೇಟಿವ್ ಸೊಸೈಟಿಗಳ ವಿಷಯ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಶ್ರೀಮಾನ್ ನಾಡಗೌಡರಿಗೆ ಚೆನ್ನಾಗಿ ಗೊತ್ತಿದೆ. ಇವರು ಚೆನ್ನಾಗಿ ನಡೆಯುತ್ತಿವೆಯೆಂದು ಹೇಳುತ್ತಾರೆ. ಶ್ರೀಮಾನ್ ರಾಮಕೃಷ್ಣಹೆಗ್ಡೆಯವರು ಚೆನ್ನಾಗಿ ನಡೆಯುತ್ತಿಲ್ಲವೆಂದು ಹೇಳುತ್ತಾರೆ. ಇವರದ್ದು ಒಂದು ಸ್ವರ, ಅವರದ್ದು ಒಂದು ಸ್ವರ. ಕೊ-ಆಪರೇಟಿವ್ ಸಿಸ್ಟಮ್ ಇರಬಾರದೆಂದು ನಾನು ಹೇಳುವುದಿಲ್ಲ. ಆದರೆ ಅವು ಚೆನ್ನಾಗಿ ನಡೆಯುವಂತೆ ನೋಡಿಕೊಳ್ಳಬೇಕು. ನಮ್ಮ ಮಲ್ಲೇಶ್ವರದಲ್ಲಿ ಒಂದು ಸೊಸೈಟಿ 5 ವರ್ಷದಿಂದ ನಡೆದುಕೊಂಡು ಬಂದು ಈಗ ಹೊಲಸಾಗಿದೆ. ಈ ಸೊಸೈಟಿಯ ಬಗ್ಗೆ ಗುರುತರವಾದ ಅಪಾದನೆಗಳು ಸರ್ಕಾರದ ಮೇಲೆ ಬರುತ್ತಿವೆ. ಸರ್ಕಾರದವರು ಒಂದು ಗುಂಪನ್ನು ಎತ್ತಿಕಟ್ಟಿ ಹಣದ ಸಹಾಯ ಮಾಡುತ್ತಿದ್ದಾರೆ. ಯಾವ ಗುಂಪು ಸರಿಯಾಗಿ ಕೆಲಸ ಮಾಡುತ್ತಿಲ್ಲವೋ ಅಂತಹವರೇ ಆಡಳಿತದಲ್ಲಿ ಇದ್ದಾರೆ. ಇವರಿಗೆ ಸರ್ಕಾರದವರು ಕುಮ್ಮಕ್ ಕೊಡುತ್ತಿದ್ದಾರೆಂದು ಕೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಗಳು ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ಡಿನರ್ ಪಾರ್ಟಿಯನ್ನು ಅರೆಂಜ್ ಮಾಡಿ ಒಂದು ಊಟಕ್ಕೆ 25 ರೂಪಾಯಿಗಳಂತೆ ಖರ್ಚು ಮಾಡಿದ್ದಾರೆ.

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರು ಸೊಸೈಟಿಯ ವಿಷಯ ಹೇಳಿದರು. ಹಿಂದೆ ಸಹ ಹೇಳಿದ್ದರು. ಅವರು ಹೇಳಿದ ಮೇಲೆ ಒಬ್ಬ ಅಧಿಕಾರಿಯನ್ನು ತನಿಖೆ ಮಾಡಲು ಕಳಿಸಿಕೊಟ್ಟೆ. ಅವರು ಅಲ್ಲಿಗೆ ಹೋದಾಗ ನಿಮ್ಮ ಸದಸ್ಯರು ಒಬ್ಬರೂ ಸಹ ಬಂದಿರಲಿಲ್ಲ. ಈಗಿರುವ ಆಡಳಿತ ಚೆನ್ನಾಗಿ ನಡೆಯುತ್ತಿದೆಯೆಂದು ಆ ಅಧಿಕಾರಿಗಳು ಬಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಇವತ್ತಿನದಿವಸ ಸಾವಿರಾರು ಸೊಸೈಟಿಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಜನರು ಹೇಳುತ್ತಿದ್ದಾರೆ. ಅದಕ್ಕೆ ತಾವೇನು ಹೇಳುತ್ತೀರಿ?

SRI P. M. NADGOUDA.—It is a sad reflection upon the people ಎಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧಿಕಾರಿಗಳು ಅಲ್ಲಿಗೆ ತನಿಖೆ ಮಾಡುವುದಕ್ಕೆ ಬರುವ ಮೊದಲು ತಿಳಿಸಿ ಬರಲಿಲ್ಲ. ಆದ್ದರಿಂದ ಯಾರಿಗೂ ಸಾಕ್ಷಿ ಹೇಳುವುದಕ್ಕೆ ಅವಕಾಶವಾಗಲಿಲ್ಲ. ಈಗ ತಾವು ಹೇಳುತ್ತಿರುವುದು ಸತ್ಯಕ್ಕೆ ದೂರವಾದುದು. ಆ ಸೊಸೈಟಿಗೆ ನಾನು ಸದಸ್ಯನಲ್ಲ. ಆದರೂ ಸಹ 50 ವರ್ಷಗಳಿಂದ ನಡೆದುಕೊಂಡು ಬಂದಿರುವ ಸೊಸೈಟಿ ಹಾಳಾಗುತ್ತದೆಯಲ್ಲಾ ಎಂದುಕೊಂಡು ಹೇಳುತ್ತಿದ್ದೇನೆ. ನಾನೇನು ಯಾವ ಗುಂಪಿಗೂ ಸೇರಿದವನಲ್ಲ. ಸೊಸೈಟಿ ಹಾಳಾಗಬಾರದು, ಚೆನ್ನಾಗಿ ನಡೆದುಕೊಂಡು ಹೋಗಬೇಕು ಎಂಬುದಾಗಿ ಹೇಳುತ್ತಿದ್ದೇನೆ.

ಇನ್ನು ಡಿಮ್ಯಾಂಡ್ 39ರಲ್ಲಿ ಭಾರತೀಯ ವಿದ್ಯಾಭವನದ ಕಟ್ಟಡಕ್ಕಾಗಿ ಹಣಕೊಡಬೇಕೆಂದು ಕೇಳಿದ್ದಾರೆ. ಈ ಬಗ್ಗೆ ನನ್ನ ಅಭಿಪ್ರಾಯ ಇಷ್ಟೆ, ಸರ್ಕಾರದವರು ಈ ತರಹದ ಯಾವುದಾದರು

(ಶ್ರೀ ಎಂ. ಎಸ್. ಕೃಷ್ಣನ್)

ಸಾಂಸ್ಕೃತಿಕ ಸಂಸ್ಥೆಗಳಿಗೆ ಹಣ ಕೊಡಬಾರದೆಂದು ನಾನು ಹೇಳುವುದಿಲ್ಲ. ಆ ರೀತಿ ಕೊಡುವಾಗ ತಾರತಮ್ಯವಿರಬಾರದೆಂದು ಹೇಳುತ್ತೇನೆ. ಕೆ. ಎಂ. ಮುನ್ಷಿ ಅವರು ಬರೆದಿರುವ ಪುಸ್ತಕಗಳನ್ನು ಪತ್ರಿಕೆಗಳನ್ನು ನಾನೂ ಸಹ ಅಭ್ಯಾಸ ಮಾಡಿದ್ದೇನೆ. ಅವರಿಗೆ ಅಗೌರವ ತೋರಿಸುತ್ತಿದ್ದೇನೆ ಎಂದು ತಿಳಿಯಬಾರದು. ಆದರೆ ತಮಗೆ ಯಾರು ಬೇಕೋ ಅಂಥವರಿಗೆ ಮಾತ್ರ ಸಹಾಯ ಮಾಡುವುದು ಸರಿಯಲ್ಲ. ತಮಗೆ ಬೇಕಾದವರಿಗೆ ಮಾತ್ರ ಲೋನ್, ಗ್ರಾಂಟ್ ಕೊಡುತ್ತೀರಿ ಮತ್ತು ಭೂಮಿಯನ್ನು ಗುತ್ತಿಗೆಗೆ ಕೊಡುತ್ತೀರಿ. ಸುಭಾಸ್‌ನಗರದ ಮೈದಾನವನ್ನು ಕಾಂಗ್ರೆಸ್ ಸಂಸ್ಥೆಗೆ 99 ವರ್ಷದ ಗುತ್ತಿಗೆಗೆ ಕೊಟ್ಟಿರಿ.

ಶ್ರೀ ವಾಟಾಳ್ ನಾಗರಾಜ್.—ಇನ್ನೂ ಕೊಟ್ಟಿಲ್ಲ. ವ್ಯವಹಾರ ನಡೆಯುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಯೋಚನೆ ಮಾಡುತ್ತಿದ್ದಾರೆ. ಪಿತೂರಿ ನಡೆಯುತ್ತಿದೆ. ಇನ್ನು ಮುಂದೆಯಾದರೂ ಸಹ ಸರ್ಕಾರದವರು ಒಂದು ಪಾಲಿಸಿಯನ್ನು ಇಟ್ಟುಕೊಂಡು ಯೋಜನೆಗಳನ್ನು ಮಾಡುವುದು ಒಳ್ಳೆಯದೆಂದು ಹೇಳಿ ಈಗ ತಂದಿರುವ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಗುರ್ರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥಿಕ ಮಂತ್ರಿಗಳು ಇಲ್ಲಿ ಮಂಡಿಸಿರುವ ಸಪ್ಲಿಮೆಂಟರಿ ಎಸ್ಟಿಮೇಟುಗಳನ್ನು ಸ್ವಾಗತಿಸುತ್ತಾ ಇಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಆಡಳಿತದಲ್ಲಿ ಅಗತ್ಯವಾಗಿ ಕೆಲವು ಬಾಬುಗಳಿಗಾಗಿ ಖರ್ಚು ಮಾಡಬೇಕಾಗಿ ಬರುತ್ತದೆ. ಮತ್ತು ಅದರಂತೆ ಕೆಲವೊಂದು ಬಾಬಿನಲ್ಲಿ ಸೇವಿಂಗ್ಸ್ ಮಾಡಿದ್ದರೂ ಕಲವು ವೇಳೆ ಬೇರೆ ಬಾಬಿನಲ್ಲಿ ಹೆಚ್ಚು ಖರ್ಚು ಮಾಡಬೇಕಾಗಿ ಬರುತ್ತದೆ ಆಗ ಅದಕ್ಕೆ ಸಪ್ಲಿಮೆಂಟರಿ ಡಿಮ್ಯಾಂಡು ಈ ಸಭೆಯ ಮುಂದೆ ತರಬೇಕಾಗಿ ಬರುತ್ತದೆ ಆದರೆ ನಾವು ಈ ಈ ಮನೆಯಲ್ಲಿ ಬಡ್ಜೆಟ್ಟನ್ನು ಪಾಸು ಮಾಡುವಾಗ ಈ ಮನೆಯು ಒಪ್ಪಿಗೆಯನ್ನು ತೆಗೆದುಕೊಂಡು ಕೆಲವಾರು ಕೆಲಸಗಳನ್ನು ಮಂಜೂರು ಮಾಡಿ ಅದಕ್ಕೆ ಖರ್ಚು ಮಾಡಬೇಕಾಗುತ್ತದೆ. ಇದರಂತೆ 68–69 ನೇ ಸಾಲಿನ ಬಡ್ಜೆಟ್ಟಿನಲ್ಲಿ ಸ್ಪೆಸಿಫಿಕ್ ಆಗಿ ಕೆಲವು ಕೆಲಸಗಳಿಗಾಗಿ ಈ ಸಭೆ ಮಂಜೂರಾತಿ ಕೊಟ್ಟಿದೆ. ಆದರೆ ನನಗೆ ತಿಳಿದಮಟ್ಟಿಗೆ ಬಡ್ಜೆಟ್ಟಿನಲ್ಲಿ ನಿಗದಿಯಾಗಿದ್ದರೂ ಕೂಡ ಎಷ್ಟೋ ಕೆಲಸಗಳನ್ನು ಕೈ ಬಿಟ್ಟಿದ್ದಾರೆ. ಇದು ಏತಕ್ಕಾಗಿ ಎಂದರೆ ಕೆಲವು ಅಡಚಣೆಗಳು ಇಲ್ಲಿ ಬಂದಿರಬಹುದು. ಆದರೆ ಇಂತಹ ಕೆಲಸಗಳನ್ನು ಕೈ ಬಿಟ್ಟು ಬೇರೆ ಕೆಲವು ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಒಮ್ಮೆ ಒಂದು ಕೆಲಸಕ್ಕೆ ಈ ಸಭೆ ಒಪ್ಪಿಗೆ ಕೊಟ್ಟು ಮಂಜೂರಾತಿ ನೀಡಿರುವಾಗ ಅದನ್ನು ಮಾಡದೆ ಕೈ ಬಿಡುವುದು ಅಷ್ಟು ಸಮಂಜಸವಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಹೀಗೆ ಕೈ ಬಿಡಬೇಕಾದರೆ ಈ ಮನೆಯ ಒಪ್ಪಿಗೆಯನ್ನು ಪಡೆಯುವುದು ಅವಶ್ಯವಾಗಿತ್ತು. ಇಂತಹ ಮಹತ್ವವಾದ ಒಂದು ವಿಚಾರವನ್ನು ಇಲ್ಲಿ ಹೇಳಬೇಕಾಗಿ ಬಂದಿದೆ. ನಮ್ಮ ಜಿಲ್ಲೆಯಲ್ಲಿ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಕಮ್ಯೂನಿಕೇಷನ್ಸ್ ಸಲುವಾಗಿ ನೋಡುವಾಗ ಇದು ಬಹಳ ಹಿಂದುಳಿದಿದೆ. ಹಿಂದೆ ಇದ್ದ ಪಿ ಡಬ್ಲ್ಯು ಡಿ ಮಂತ್ರಿಗಳು ಇಲ್ಲಿಗೆ ಖುದ್ದು ಬಂದಿದ್ದಾಗ ಅವರೇ ಸ್ವತಃ ನೋಡಿ ತಾಳೀಕೋಟೆಯಿಂದ ಹೂವಿನ ಹಿಪ್ಪರಿಗೆ ಮೇಲೆ ಹೋಗುವ ಬಿಜಾಪುರ ರಸ್ತೆ ಕೆಲಸ ತೆಗೆದುಕೊಂಡು ಪೂರ್ತಿ ಮಾಡಲಾಗುತ್ತದೆ ಎಂದು ಹೇಳಿದ್ದರು. ಮತ್ತು ಇಲ್ಲಿಗೆ ಬಂದ ಅಧಿಕಾರಿಗಳು ಕೂಡ ಈ ರಸ್ತೆ ಮಾಡಲೇ ಬೇಕು ಎಂದು ಹೇಳಿದ್ದರು ಇದಕ್ಕಾಗಿ ಬಡ್ಜೆಟ್ಟಿನಲ್ಲಿ ಸುಮಾರು ನಾಲ್ಕು ಲಕ್ಷದಷ್ಟು ಹಣವನ್ನೂ ಕೂಡ ಒದಗಿಸಿದ್ದರು. ಹೀಗೆ 68–69 ನೇ ಸಾಲಿನ ಬಡ್ಜೆಟ್ಟಿನಲ್ಲಿ ಪ್ರೊವೈಡು ಮಾಡಿದ್ದ ಕೆಲಸಗಳನ್ನು ಇಂದು ಸರಕಾರ ಮಾಡದೆ ಕೈ ಬಿಟ್ಟಿದ್ದಾರೆ. ಇದರ ಬಗ್ಗೆ ಇಲ್ಲಿನ ಅಧಿಕಾರಿಗಳನ್ನು ಕೇಳಿದರೆ ಅವರು ಇವನ್ನು ಡೆಫರು ಮಾಡಿದ್ದಾರೆ ಎಂದು ಹೇಳುತ್ತಾರೆ. ಇಂತಹ ಮಹತ್ವವಾದ ಕೆಲಸವನ್ನು ಕೈಬಿಡಬೇಕಾದರೆ ಇದರ ಹಿನ್ನೆಲೆ ಏನಿತ್ತು ? ಬಡ್ಜೆಟಿನಲ್ಲಿ ಪ್ರೊವೈಡು ಮಾಡಿ ಇದ್ದಂತಹ ಕೆಲಸಗಳನ್ನು ಕೈ ಬಿಡಲು ಇಲ್ಲಿನ ಅಧಿಕಾರಿಗಳೇನಾದರೂ ಇದನ್ನು ಮಾಡಬಾರದು ಎಂದು ಸೂಚನೆಗಳನ್ನು ಕಳುಹಿಸಿದ್ದರೇ ಎಂದು ಈ ಸಮಯದಲ್ಲಿ ಸರಕಾರದವರನ್ನು ಕೇಳುತ್ತಿದ್ದೇನೆ. ಇಷ್ಟು ಮಹತ್ವವುಳ್ಳ ಕೆಲಸಗಳನ್ನು ಈ ರೀತಿ ಕೈ ಬಿಡುವುದು ಸರಿಯಲ್ಲ ಎಂದು ಹೇಳಬೇಕಾಗಿದೆ. ಇಷ್ಟೇ ಅಲ್ಲ ಸೇವಿಂಗ್ಸ್ ಬಾಬಿನಲ್ಲಿ ಹಣ ಇದೆ ಎಂದು ಬೇರೆ ಯಾವುದಾದರೂ ಹೊಸ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸರಕಾರದವರು ಸೂಚನೆಗಳನ್ನೇನಾದರೂ ನೀಡಿದ್ದಿರಾ ಹೇಗೆ ಎನ್ನುವುದನ್ನು ನಮ್ಮ ಅರ್ಥ ಮಂತ್ರಿಗಳು ಹೇಳಬೇಕಾಗಿದೆ. ಬಡ್ಜೆಟ್ಟಿನಲ್ಲಿ ಹಣ ಒದಗಿಸಿರುವ ಇಂತಹ ಮಹತ್ವದ ಕೆಲಸಗಳನ್ನು ಕೈ ಬಿಡಬೇಡಿ ಎಂದು ಅವರಲ್ಲಿ ಪುನಃ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಪಿ. ಡಬ್ಲ್ಯು. ಡಿ. ವಿಚಾರವಾಗಿ ಸಾಕಷ್ಟು

ಜನ ಇಲ್ಲಿ ಹೇಳುತ್ತಲೇ ಬಂದಿದ್ದಾರೆ. ನಾನು ಈ ಸಮಯದಲ್ಲಿ ಹೇಳುವುದು ಇಷ್ಟೇ ಯಾವುದೇ ಭಾಗದಲ್ಲಿ ಕಮ್ಯೂನಿಕೇಶನ್ ದೃಷ್ಟಿಯಿಂದಾಗಲೀ ಹಾಗೂ ಇತರ ಮಹತ್ವದ ಕೆಲಸಗಳ ದೃಷ್ಟಿಯಿಂದಾಗಲೀ ಹಿಂದೆ ಬಿದ್ದಿದ್ದರೆ ಅಂತಹ ಭಾಗಗಳಿಗೆ ಸರಕಾರ ಹೆಚ್ಚಿನ ಆಸಕ್ತಿ ವಹಿಸಿ ಅಂತಹ ಎಲ್ಲ ಕೆಲಸಗಳೂ ನಿಲ್ಲದಂತೆ ಮಾಡಬೇಕು? ನಾನು ಈ ಮೊದಲೇ ಹೇಳಿದಂತೆ ತಾಳೀಕೋಟೆಯಿಂದ ಹೂವಿನ ಹಿಪ್ಪರಿಗೆ ಮೇಲೆ ಬಿಜಾಪುರಕ್ಕೆ ಹೋಗುವ ರಸ್ತೆ ಕೇವಲ 18 ಮೈಲಿಗಳು. ಇದನ್ನು ಪೂರ್ತಿಮಾಡಿ ಕೊಟ್ಟರೆ ಇದರಿಂದ ಬಳ್ಳಾರಿ, ರಾಯಚೂರು, ಗುಲ್ಬರ್ಗಾ ಹಾಗೂ ಬೆಂಗಳೂರಿಗೆ ಹೋಗುವ ಮಾರ್ಗಗಳಿಗೆ ಒಂದು ರೀತಿಯಾದ ಕನೆಕ್ಷನ್ ಸಿಗುತ್ತೆ ಮತ್ತು ಎಲ್ಲ ಜನರಿಗೂ ಓಡಾಡಲು ಅನುಕೂಲವಾಗುತ್ತದೆ. ಈ ರಸ್ತೆಯನ್ನು ಇಲ್ಲಿಗೆ ಬಂದ ಎಲ್ಲ ಅಧಿಕಾರಿಗಳೂ ನೋಡಿ ಹೋಗಿದ್ದಾರೆ ಹಾಗೂ ನಮ್ಮ ಪಿ.ಡಬ್ಲ್ಯು.ಡಿ. ಮಂತ್ರಿಗಳು ಕೂಡ ನೋಡಿ ಬಂದಿದ್ದಾರೆ. ಈ ಚೆಗೆ ಇಲ್ಲಿಗೆ ಬಂದಿದ್ದ ಹೆಲ್ತ್ ಮಿನಿಸ್ಟರವರೂ ಕೂಡ ಇದನ್ನು ನೋಡಿಕೊಂಡು ಬಂದಿದ್ದಾರೆ ಇವರೆಲ್ಲರಿಗೂ ಇದರ ಸ್ಥಿತಿ ಹೇಗಿದೆ ಎನ್ನುವುದು ಮನವರಿಕೆಯಾಗಿದೆ. ಅವರೆಲ್ಲರೂ ಇದೇ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ.

ಇನ್ನು ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಮಹತ್ವವಾದ ಕೆಲವು ಸೇತುವೆಗಳನ್ನು ಮಾಡಬೇಕೆಂದು ಇದಕ್ಕಾಗಿ ಹಣ ಕೂಡ ಒದಗಿಸಲಾಗಿತ್ತು. ಆದರೆ ಇಂದು ಈ ಕೆಲಸಗಳಾಗದೇ ಸ್ಥಗಿತವಾಗಿದೆ ಎಂದು ಕೇಳುತ್ತೇವೆ. ಈಗಲಾದರೂ ಈ ಸೇತುವೆ ಕೆಲಸಗಳನ್ನು ನಿಲ್ಲಿಸದೇ ಬೇಗನೆ ಮಾಡಿಸಿ ಕೊಟ್ಟು ಜನಕ್ಕೆ ಅನುಕೂಲ ಮಾಡಿಕೊಡಬೇಕು ಮತ್ತು ಈ ಕೆಲಸವನ್ನು ಬೇಗನೆ ಮಂಜೂರು ಮಾಡಬೇಕೆಂದೂ ಕೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ ದುಗ್ಗಪ್ಪ (ಭರಮಸಾಗರ) ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಸರಕಾರದವರು ತಂದಿರತಕ್ಕ ಸಪ್ಲಿಮೆಂಟರಿ ಎಸ್ಟಿಮೇಟುಗಳ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಲು ಇಚ್ಛಿಸುತ್ತೇನೆ.

ಇಲ್ಲಿರುವ ಪುಟ 35 ರಲ್ಲಿ Sanction was accorded in July 1968 for the purchase of Buildings for Five Primary Schools at a total cost of Rs. 2,55,670......"

ಎಂದು ಹೇಳಿದ್ದಾರೆ.

ನಾವು ಹಳ್ಳಿಗಾಡಿನಲ್ಲಿ ಪ್ರೈಮರಿ ಶಾಲೆಗಳು ಬೇಕು ಎಂದು ಸರಕಾರವನ್ನು ಕೇಳಿದರೆ ಗ್ರಾಮಸ್ಥರ ಕೋಟಾ ಕೊಟ್ಟರೆ ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ಯಾವ ನೀತಿ ನಿಯಮವೂ ಇಲ್ಲದೆ ಇಲ್ಲಿ ಹೇಗೆ ಕೊಟ್ಟರು? ಗ್ರಾಮಾಂತರ ಪ್ರದೇಶಗಳಲ್ಲಿ ಮೂರು ಸಾವಿರ ರೂಪಾಯಿಗಳ ಒಂದು ಶಾಲಾ ಕಟ್ಟಡ ಬೇಕೆಂದು ಕೇಳಿದರೆ ಇದರಲ್ಲಿ ಆ ಊರಿನವರು ಒಂದೂವರೆ ಸಾವಿರ ವಂತಿಗೆ ಕೊಡಬೇಕು ಎಂದು ಕೇಳುತ್ತಾರೆ. ಇದರಲ್ಲಿ ತಾಲ್ಲೂಕಾ ಬೋರ್ಡಿನವರು ಇಷ್ಟು ಪಂಚಾಯಿತಿಯವರು ಇಷ್ಟು ಎಂದು ಕೇಳುತ್ತಾರೆ. ಆದರೆ ಇಂದು ಬೆಂಗಳೂರು ನಗರದಲ್ಲಿ ಶಾಲಾ ಕಟ್ಟಡಗಳಿಗೆ ಐದು ಪ್ರೈಮರಿ ಶಾಲಾ ಕಟ್ಟಡಗಳಿಗಾಗಿ 2,55,700 ರೂಪಾಯಿಗಳನ್ನು ಕೊಟ್ಟಿರುವುದು ಯಾವ ನೀತಿ ಎಂದು ಇಲ್ಲಿ ಸರಕಾರವನ್ನು ಕೇಳಬೇಕಾಗಿದೆ. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎನ್ನುವಂತಹ ಈ ನೀತಿ ಸರಿಯಲ್ಲ. ಲೇಬರು ಏರಿಯಾದಲ್ಲಿ ಕಟ್ಟಲು ಎಂದು ಕೊಟ್ಟಿರಬಹುದು ಎಂದು ಹೇಳಿದರೆ ಇಂತಹ ಸಂಘ ಸಂಸ್ಥೆಗಳು ಚೆನ್ನಾಗಿ ಬೆಳೆದುಕೊಂಡು ಬರುತ್ತಿವೆ. ಇವರೆಲ್ಲಾ ಗಲಾಟೆ ಮಾಡುತ್ತಾರೆ ಎಂದು ಹೀಗೆ ಸರಕಾರ ಕೊಟ್ಟಿರೋ ಏನೋ ನನಗೆ ಗೊತ್ತಾಗುತ್ತಿಲ್ಲ. ಇವರಿಗೆ ತಿಂಗಳಾಗುತ್ತಲೂ ಹಣ ಸಿಗುತ್ತದೆ. ಹಳ್ಳಿಗಾಡಿನ ಜನ ಶೇಕಡಾ 80 ಭಾಗ ಇರುವ ಜನ ದುಡ್ಡಿನ ಮುಖವನ್ನೇ ನೋಡುವುದಿಲ್ಲ. ಅವರು ಬೆಳೆ ಬೆಳೆದು ಅವರ ದವಸವನ್ನು ಮಾರಿದಾಗ ಮಾತ್ರ ದುಡ್ಡನ್ನು ನೋಡುತ್ತಾರೆ. ಅದಕ್ಕೆ ಮುಂಚೆ ಅವರಿಗೆ ದುಡ್ಡೇ ಸಿಗುವುದಿಲ್ಲ. ಹೀಗಿರುವ ಹಳ್ಳಿಗಾಡಿನ ಜನರ ಶಾಲೆಗೆ ಕಟ್ಟಡ ಬೇಕು ಎಂದರೆ ಅವರು ಒಂದೆರಡು ಸಾವಿರ ಕೊಡಬೇಕು, ಗಳ ಮತ್ತು ಹೆಂಚು ಕೊಡಬೇಕು ಎಂದು ಕೇಳಿದರೆ, ಇದು ಯಾವ ಸರಕಾರದ ನೀತಿ ಎಂದು ಇಲ್ಲಿ ಕೇಳಬೇಕಾಗಿದೆ.

ಸ್ವಾಮಿ, ತಕಾವಿ ಲೋನುಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ಕೊಡುತ್ತಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರಲ್ಲಿ ಎಷ್ಟು ಭಾಗ ಬಡವರಿಗೆ ಮತ್ತು ಹಿಂದುಳಿದವರಿಗೆ ಸಿಕ್ಕುತ್ತದೆ ಎಂದು ಪರಿಗಣಿಸಿದ್ದೀರಿ? ಅಭಿವೃದ್ಧಿ ಕಾರ್ಯಗಳಿಗಾಗಿ ಎಷ್ಟು ದುಡ್ಡು ಖರ್ಚು ಮಾಡುತ್ತೀರೋ ಅಷ್ಟನ್ನು ನೇರವಾಗಿ ಸಲ್ಲಿಸುತ್ತೀರಾ? ತಕಾವಿಗೆ ಎಂದು ಒಂದು ಕೋಟಿ ರೂಪಾಯಿ ಹಣವನ್ನು ಪುಸ್ತಕದಲ್ಲಿ ಕಾಣಿಸುತ್ತೀರಿ. ನೀವು ತಕಾವಿ ಲೋನುಗಳನ್ನು ಕೊಡಬೇಕಾದರೆ ಬಡವ

(ಶ್ರೀ ಜಿ. ದುಗ್ಗಪ್ಪ)

ರಲ್ಲಿ ಬಡವರಿಗೆ, ಕಡುಬಡವರಾದವರಿಗೆ ಕೊಡಬೇಕು. 2 ಎಕರೆ ಜಮೀನು, ಒಂದು ಎತ್ತು, ಒಂದು ಹಸು ಆ ಬಡವ ಇಟ್ಟುಕೊಂಡಿರುತ್ತಾನೋ, ಇಲ್ಲವೋ ಅಂತಹವನಿಗೆ ತಕಾವಿ ಲೋನುಗಳನ್ನು ಕೊಡುತ್ತೀರಾ? ನೀವು ಕೆಲವೊಂದು ಸ್ಕೀಂಗಳಿಗೆ ಕೊಡುತ್ತಾ ಇರುವ ಹಣ ಕೆಲವೊಂದು ಜನರ ಕೈಸೇರುತ್ತದೆ. ಅದರಲ್ಲಿ ಬಹು ಮುಖ್ಯವಾದ ಇಲಾಖೆ ಎಂದರೆ ಸಹಕಾರಿ ಇಲಾಖೆ. ಸಹಕಾರಿ ಇಲಾಖೆಯಲ್ಲಿ ಅಪೆಕ್ಸ್ ಬ್ಯಾಂಕ್, ಹೌಸಿಂಗ್ ಕಾರ್ಪೋರೇಷನ್ ಇವೆ. ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಡಿಸ್ಟ್ರಿಕ್ಟ್ ಬ್ಯಾಂಕ್, ತಾಲ್ಲೂಕು ಲೆವಲ್‌ನಲ್ಲಿ ತಾಲ್ಲೂಕು ಮಲ್ಟಿ ಪರ್ಪಸ್ ಸೊಸೈಟಿಗಳು ಮತ್ತು ಅಗ್ರಿಕಲ್‌ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕೋಆಪರೇಟೀವ್ ಸೊಸೈಟಿಗಳು ಇವೆ. ಇವುಗಳಲ್ಲಿ ಇಡೀ ಜನತೆಯ 1/5 ಭಾಗದ ಹಿಂದುಳಿದ ಜನರಿಗೆ ಎಷ್ಟು ದುಡ್ಡು ಸಿಕ್ಕುತ್ತದೆ? ಸಂಘ ಸಂಸ್ಥೆಗಳಲ್ಲಿ ಎಷ್ಟು ಹರಿಜನರಿಗೆ ಪ್ರಾತಿನಿಧ್ಯ ಇದೆ? ಅವರು ಎಲೆಕ್ಟ್ ಆಗಿ ಬರಲು ಸಾಧ್ಯವಿಲ್ಲ. ಉದಾಹರಣೆ ಹೇಳುವುದಾದರೆ ಮೈಸೂರು ದೇಶದಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡ್‌ಗೆ ಪ್ರಥಮಬಾರಿ ಅಧ್ಯಕ್ಷನಾಗಿ ಆರಿಸಿ ಬಂದಿದ್ದ. ಈಗ ಮೈಸೂರು ದೇಶದಲ್ಲಿ ಯಾರಾದರೂ ಹರಿಜನ ಸದಸ್ಯರು ಡಿಸ್ಟ್ರಿಕ್ಟ್ ಬೋರ್ಡ್ ಪ್ರಸಿಡೆಂಟರಾಗಿದ್ದಾರೆಯೇ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಯಾರೂ ಇಲ್ಲ.

ಶ್ರೀ ಜಿ. ದುಗ್ಗಪ್ಪ.—ತಾವು ಹೇಳಿದಮೇಲೆ ಒಪ್ಪಿಕೊಳ್ಳಲೇ ಬೇಕು. ಅಪೆಕ್ಸ್ ಬ್ಯಾಂಕು, ಡಿಸ್ಟ್ರಿಕ್ಟ್ ಬ್ಯಾಂಕು, ಕೋಆಪರೇಟೀವ್ ಬ್ಯಾಂಕು, ಮಾರ್ಕೆಟಿಂಗ್ ಸೊಸೈಟಿ ಯಾವ ಇನ್‌ಸ್ಟಿಟ್ಯೂಷನ್ಸ್ ಆಗಲಿ ಅವರುಗಳು ಎಲೆಕ್ಷನ್‌ನಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಸರ್ಕಾರದವರು ನಾಮಿನೇಷನ್ ಮಾಡುವಾಗಲಾದರೂ ಕೂಡ ಹಿಂದುಳಿದ ಪ್ರತಿನಿಧಿಗಳನ್ನು ಹಾಕಿದರೆ ಒಳ್ಳೆಯದು. ಹಾಗಾದರೆ ಹಿಂದುಳಿದವರ ಮನಸ್ಸನ್ನು ಸೆಳೆಯಬಹುದು. ಇದರಿಂದ ಹಿಂದುಳಿದ ವರ್ಗದವರಿಗೆ ಅನುಕೂಲವಾಗುತ್ತದೆ ಎಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಭೂ ಅಭಿವೃದ್ಧಿ ಬ್ಯಾಂಕ್ ವಿಚಾರ. ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕ್‌ನವರು ಅನೇಕ ಸ್ಕೀಮುಗಳಿಗೆ ಹಣವನ್ನು ಒದಗಿಸುತ್ತಾರೆ. ಅದರಲ್ಲಿ ಅಡಿಕೆ, ತೆಂಗು ಬೆಳೆಯಲಿಕ್ಕೂ ಹಣವನ್ನು ಒದಗಿಸುತ್ತಾರೆ. ಈಗ ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕ್‌ನವರು ಏನು ಹೇಳುತ್ತಾರೆ ಎಂದರೆ ಅರ್ಜಿಗಳನ್ನು ಪ್ರೈಮರಿ ಸೊಸೈಟಿಗಳಿಗೆ ಕಳುಹಿಸಿ ಕೊಡಿ ಎಂದು. ಡಿಫಾಲ್ಟರ್ ಆಗಿದ್ದರೆ ಅರ್ಜಿಗಳನ್ನು ಕಳುಹಿಸುವ ಹಾಗಿಲ್ಲ. ಇದರಿಂದ ಜನರಿಗೆ ಅನುಕೂಲತೆಯನ್ನು ಪಡೆಯಲು ಸಾಧ್ಯವಾಗಿಲ್ಲ. ಆದುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ ಯಾವುದೇ ಕಾರಣದಿಂದಾಗಲಿ ಪ್ರೈಮರಿಸೊಸೈಟಿಗಳು ಡಿಫಾಲ್ಟರ್ ಆಗಿದ್ದರೂ ಸಹ ಈ ಸ್ಕೀಮುಗಳಿಗೆ ಅಡ್ಡಿ ಬರಬಾರದು ಅವರು ಅರ್ಜಿಗಳನ್ನು ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕಿಗೆ ಕಳುಹಿಸುವುದಕ್ಕೆ ತಿಳುವಳಿಕೆ ಕೊಡಬೇಕೆಂದು ನಾನು ಹೇಳುತ್ತೇನೆ. ಇನ್ನೊಂದು ವಿಷಯ ಏನೆಂದರೆ ಡೆಪ್ಯೂಟಿ ರಿಜಿಸ್ಟ್ರಾರ್‌ಗೆ ಸಪರೇಟ್ ಆಗಿ ಜೀಪ್ ಕೊಡಬೇಡಿ. ಏತಕ್ಕೆಂದರೆ ಪ್ರತಿಯೊಂದು ಕಡೆಯಲ್ಲೂ ಜಿಲ್ಲಾ ಬ್ಯಾಂಕು ಇದೆ. ಡಿಸ್ಟ್ರಿಕ್ಟ್ ಬ್ಯಾಂಕ್ ಕೆಲಸಗಳನ್ನೇ ಅವರು ಹೆಚ್ಚಾಗಿ ನೋಡಿಕೊಳ್ಳಬೇಕಾಗುತ್ತದೆ. ಅವರು ಆ ಕೆಲಸಕ್ಕೆ ಹೋಗುವುದರಿಂದ ಬ್ಯಾಂಕ್‌ನವರ ಜೀಪಿನಲ್ಲೇ ಹೋಗಿ ಕೆಲಸ ಮಾಡಲಿ. ದಯವಿಟ್ಟು ಸಪರೇಟ್ ಜೀಪನ್ನು ಕೊಡಬೇಡಿ ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪ್).—ಮಾನ್ಯ ಸಭಾಪತಿಗಳೇ, ತಾವು ಈಗ ಮಂಡಿಸಿರುವ ಎರಡನೇ ಇನ್‌ಸ್ಟಾಲ್‌ಮೆಂಟ್ ಸಪ್ಲಿಮೆಂಟರಿ ಡಿಮ್ಯಾಂಡನ್ನು ವಿರೋಧ ಮಾಡುತ್ತಾ ಈ ಸಂದರ್ಭದಲ್ಲಿ ಒಂದೆರಡು ಸಲಹೆಗಳನ್ನು ಹೇಳಲು ಬಯಸುತ್ತೇನೆ. ಎರಡನೇ ಕಂತಿನ ಹಣ 16,57,39,649 ರೂಪಾಯಿಗಳು ಏನು ಇದೆ ಇದು ವಾರ್ಷಿಕ ಬಡ್ಜೆಟ್ಟಿಗಿಂತಲೂ ದೊಡ್ಡದಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಇದು ಕ್ರಮವತ್ತಾಗಿ ಪ್ರತಿ ಸಾಲಿನಲ್ಲೂ ನಡೆದು ಬಂದಿದೆ. ಶಾಸನ ಸಭೆಯು ಬಡ್ಜೆಟ್ಟಿನಲ್ಲಿ ಅಧಿವೇಶನದಲ್ಲಿ ಎಷ್ಟು ಬೇಕೋ ಅಷ್ಟನ್ನು ತೆಗೆಯದೆ, ಕಡಿಮೆ ತೋರಿಸಿ ಅನಂತರ ಒಂದನೇ ಕಂತು, 2 ನೇ ಕಂತು, 3 ನೇ ಕಂತು, ಹೀಗೆ ಇನ್‌ಸ್ಟಾಲ್‌ಮೆಂಟ್ ಬೇಸಿಸ್ ಮೇಲೆ ತೆಗೆಯುವುದು ಮಾಮೂಲಾಗಿ ಬಿಟ್ಟಿದೆ.

ನಾನು ಡಿಮ್ಯಾಂಡ್ ನಂ. 17 ಎಜುಕೇಷನ್ ವಿಚಾರವಾಗಿ ಹೇಳುತ್ತೇನೆ. ಇದಕ್ಕೆ 1,25,500 ರೂಪಾಯಿ ಮೊಬಲಗನ್ನು ತೋರಿಸಿದ್ದಾರೆ. ಪ್ರೌಢಶಾಲೆಯಿಂದ 11 ಜನ ಉಪಾ

ಧ್ಯಾಯರಿಗೆ ಮತ್ತು ಪ್ರೈಮರಿ ಶಾಲೆಯಿಂದ 29 ಜನ ಉಪಾಧ್ಯಾಯರಿಗೆ ತರಬೇತಿ ಕೊಡುವ ಸಲುವಾಗಿ ಇವರ ಹಣವನ್ನು ತೆಗೆದು ಇಟ್ಟಿದ್ದಾರೆ. ಸ್ವಾಮಿ, ಈ ಪ್ರೈಮರಿ ಎಜುಕೇಷನ್ ವಿಷಯದ ಬಗ್ಗೆ ಮಾತನಾಡುವುದಾದರೆ ಈ ಹಣವನ್ನು ಕೊಡುವುದಕ್ಕೆ ಮುಚಿತವಾಗಿ ಒಂದೆರಡು ಮಾತುಗಳನ್ನಾಡಲು ಹೇಳಬಯಸುತ್ತೇನೆ. ಈ ಪ್ರೈಮರಿ ಎಜುಕೇಷನ್ ಯಾವ ಮಟ್ಟದಲ್ಲಿ ನಡೆಯುತ್ತಾ ಇವೆ ಎನ್ನುವ ಮಾತನ್ನು ಈಗಾಗಲೇ ನಮ್ಮ ಮಿತ್ರರುಗಳು ಹೇಳಿದ್ದಾರೆ. ಖಾದಿಬೋರ್ಡ್‌ನಲ್ಲಿ ಹೆಗ್ಗಣಗಳು ನುಗ್ಗಿ ಹೇಗಾಗಿವೆಯೋ ಅದೇರೀತಿ ಈ ಪವಿತ್ರವಾದ ಇಲಾಖೆಯಲ್ಲೂ ಕೂಡ ಆಗಿದೆ. ಕಾಂಗ್ರೆಸ್ ಪಕ್ಷದ ಮುಖಂಡರಿಗೆ, ಸ್ವಜನಪಕ್ಷಪಾತ ತೋರಿಸುತ್ತಿದ್ದಾರೆ. ವಿದ್ಯಾ ಇಲಾಖೆಯಲ್ಲಿ ಕಾಂಗ್ರೆಸ್ ಮುಖಂಡರ ಪ್ರಭಾವ ಇದೆ ಎಂದು ಹೇಳಬಹುದು. ಇದರ ಬಗ್ಗೆ 1-2 ಉದಾಹರಣೆಗಳನ್ನು ತಮ್ಮ ಮುಂದೆ ಇಡುತ್ತೇನೆ.

ಬ್ರಿಟಿಷ್ ಕಾಲದಿಂದಲೂ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರ್‌ನಲ್ಲಿ ಒಂದು ಬೋರ್ಡ್ ಎಲಿಮೆಂಟರಿ ಶಾಲೆ ಇದೆ. ಆ ಶಾಲೆಯಲ್ಲಿ ಸಾವಿರಾರಕ್ಕೂ ಮಿಕ್ಕಿದ ಹುಡುಗರು ಓದುತ್ತಾ ಇದ್ದಾರೆ. ಆ ಶಾಲೆಗೆ ಆಟವಾಡುವುಕ್ಕೆ ಸ್ಥಳ ಸಾಕಾಗುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರ್ ಆಗಿದ್ದ ಒಬ್ಬರು ಮಕ್ಕಳಿಗೆ ಆಟದ ಬಯಲನ್ನು ರೆವಿನ್ಯೂ ಖಾತೆಯಿಂದ ಕೊಡಬೇಕು ಎಂದು ಹೇಳಿದ್ದಾರೆ. ಅದನ್ನು ಇಲ್ಲಿ ಓದಿ ಹೇಳುತ್ತೇನೆ. ಅದು ಈರೀತಿ ಇದೆ—

"to serve the needs of the childern of the schools two bits of land covered by Survey Nos. 124/2 and 124/8 measuring 3.28 acres of land was alienated by the then Collector of South Kanara in order dated 4th September 1957 etc., since these lands are being used as play-grounds for the school children."

ಸ್ವಾಮಿ ಆ ದಿನ ವಿದ್ಯಾ ಇಲಾಖೆಯವರು ಮಕ್ಕಳಿಗೆ ಆಟದ ಬಯಲು ಸಾಕಾಗುವುದಿಲ್ಲ ಎಂದು ಪುತ್ತೂರು ಹೈಯರ್ ಎಲಿಮೆಂಟರಿ ಶಾಲೆಗೆ ಆಟದ ಬಯಲನ್ನು ಕೊಟ್ಟಿದ್ದರು. ಅದರಲ್ಲಿ ಏನಾಯಿತು ಎಂದರೆ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರೊಬ್ಬರು ಆಟದ ಬಯಲನ್ನು ಅನಧಿಕೃತವಾಗಿ ಆಕ್ರಮಣ ಮಾಡಿ ಕೊಂಡರು. ಆ ವಿಷಯದಲ್ಲಿ ಊರಿನವರೆಲ್ಲ ಒಟ್ಟಾಗಿ ಸೇರಿ ಅಜಿಟೇಷನ್ ಮಾಡಿದರು. ಪದ್ಮಶ್ರೀ ಡಾಕ್ಟರ್ ಶಿವರಾಮ ಕಾರಂತ ಅವರೂ ಕೂಡ ಈ ವಿಚಾರದಲ್ಲಿ ವಿರೋಧ ಮಾಡಿ, ಆಟದ ಬಯಲನ್ನು ಒಬ್ಬ ಕಾಂಗ್ರೆಸ್ ಮುಖಂಡರಿಗೆ ಕೊಡಬಾರದೆಂದು ದೊಡ್ಡ ಅಜಿಟೇಷನ್ ಮಾಡಿದರು. ಡಾಕ್ಟರ್ ಅಹಮದ ಎಂಬುವವರು ತಮ್ಮ ಮನೆಯ ಹತ್ತಿರ 6 ಸೆಂಟ್ ಸ್ಥಳವನ್ನು ಆಕ್ರಮಣ ಮಾಡಿ, ಕಾಂಪೌಂಡ್ ಕಟ್ಟಿ ಕೊಂಡರು. ಆ ವಿಷಯವಾಗಿ ಇನ್ನೂ ಬಲವತ್ತರವಾಗಿ ಹೇಳಬೇಕಾಗಿದ್ದರೆ, ರಿಕಾರ್ಡ್ ಪೂರ್ವಕವಾಗಿ ಹೇಳಬೇಕಾಗಿದ್ದರೆ, ತಮ್ಮ ಸರ್ಕಾರದ ಅಧಿಕಾರಿಗಳಾದ ಡಿಸ್ಟ್ರಿಕ್ಟ್ ಸರ್ವೆಯರು ಈ ಜಾಗವನ್ನು ನೋಡಿ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅವರು ಎಷ್ಟು ಸ್ಥಳವನ್ನು ಆಕ್ರಮಣ ಮಾಡಿಕೊಂಡಿದ್ದಾರೆ ಎಂದು ಅದರಲ್ಲಿ ನಮೂದು ಮಾಡಿದ್ದಾರೆ.

3-00 P. M.

" After inspecting the disputed locality S. Nos. 124/2 and 124/8, and after issuing notice to the concerned parties with the assistance of the Superintendent Land Records, I find that the the encroachment that has been made by the erection of a road leading to the house of Sri M. B. Ahamad (Taluk Congress Committee President) is 7 cents and in S. No. 124/8, the encroachment is 6 cents, which have been shown on the sketch in red-ink. "

ಅದಕ್ಕೆ ಸಂಬಧಪಟ್ಟ ಸ್ಕೆಚ್ ಕೂಡ ಇಲ್ಲಿದೆ. ಇಷ್ಟೆಲ್ಲ ಆದ ಮೇಲೆ ಇದೇ ಸಭೆಯಲ್ಲಿ ಅದರ ಬಗ್ಗೆ ಗಲಾಟೆಯಾದ ಮೇಲೆ ಆಗ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಮಾನ್ ಸಿ. ಜೆ. ಪದ್ಮನಾಭನ್ ಅವರು

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಈ ವಿಷಯದಲ್ಲಿ ಕೂಡಲೇ ಎವಿಕ್ಟ್ ಮಾಡಬೇಕು ಎಂದು ಅವರಿಗೆ ಬರೆದ ಒಂದು ಕಾಗದ ಕೊಡ ಇಲ್ಲದೆ.

"In continuation of this Office letter; I have requested him to remove the encroachment forthwith as it is irregular and contrary to the conditions of the grant of land to the District Board School. Sd. C. J. Padmanabha

ಎಂದು ಶ್ರೀ ಸಿ. ಜೆ. ಪದ್ಮನಾಭನ್ ಅವರು ಕೊಟ್ಟಿದ್ದಾರೆ; ಇಷ್ಟೆಲ್ಲ ಗಲಾಟೆಯಾದ ಮೇಲೆ, ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರಿಗೆ

"Sanction is accorded to the exclusion of 7 cents of land covered by the passage from across the school in S. Nos. 124/2 and 124/8 of Puttur Taluk and hand over the same...cost of road, fencing, etc. to be borne by Mr. Ahamad.,,

ಇದರಲ್ಲಿ ಏನಾಗಿದೆ ಎಂದರೆ ತಂದೆಯಾದವನು ಮಗನಿಗೆ ದುಡ್ಡು ಕೊಡುವಾಗ ಸ್ವಲ್ಪ ಯೋಚನೆ ಮಾಡಬೇಕು. ಮಕ್ಕಳಿಗೆ ಆಟಕ್ಕಾಗಿ ಬಿಟ್ಟಿರುವ ಬಯಲಿನ ಮಧ್ಯದಲ್ಲಿ, ಕಾಂಗ್ರೆಸ್ ಮುಖಂಡರಿಗೊಬ್ಬರಿಗೆ ಉಪಕಾರ ಮಾಡುವುದಕ್ಕಾಗಿ, ರಸ್ತೆ ಹಾಕಿ, ಆಟದ ಬಯಲಿನ ಒಂದು ಭಾಗವನ್ನು ಕಾಂಗ್ರೆಸ್ ಮುಖಂಡರಿಗೆ ಹಂಚಿದ್ದು ವಿಷಾದಕರವಾದುದು. ಹೀಗಿರುವಾಗ ಸರ್ಕಾರಕ್ಕೆ ವೆಚ್ಚಕ್ಕಾಗಿ ಯಾವ ವಿಶ್ವಾಸದಲ್ಲಿ ದುಡ್ಡನ್ನು ಕೊಡಬೇಕು ? ಅನ್ಯಾಯ ಮಾಡಿ ಮುಂದಿನ ಪೀಳಿಗೆ ಯಾವ ತರಹ ಆಡಳಿತ ನಡೆಯುತ್ತಿದೆ ಎನ್ನುವುದನ್ನು ಅರಿಯುವಂತೆ ಮಾಡುತ್ತಿದೆ. ಈ ಜಾಗಕ್ಕೆ ಮಕ್ಕಳು ಬಂದು ಸತ್ಯಾಗ್ರಹ ಮಾಡಿ, ಸರ್ಕಾರ ಹೇಗೆ ಅನ್ಯಾಯ ಮಾಡುತ್ತದೆ ಎಂಬುದು ಮುಂದಿನ ಪೀಳಿಗೆಯ ಮಕ್ಕಳಿಗೂ ತಿಳಿದು, ಇವರು ಸ್ವಾರ್ಥಕ್ಕಾಗಿ ಏನು ಮಾಡುತ್ತಾರೆ ಎಂದು ಅವರಿಗೆ ತಿಳಿಯುವಂತೆ ಮಾಡುವುದು ನಿಜವಾಗಿಯೂ ವ್ಯಸನಕರವಾದ ವಿಷಯ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಂಥ ಅನ್ಯಾಯವನ್ನು ಹೋಗಲಾಡಿಸಬೇಕು ಮತ್ತು ಆ ಸ್ಥಳವನ್ನು ಶಾಲೆಗೇ ಬಿಟ್ಟುಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀಮತಿ ಕೆ. ಲೀಲಾವತಿ ರೈ (ಬಂಟ್ವಾಳ್).—ಮಾನ್ಯ ಸದಸ್ಯರು ಕಾಂಗ್ರೆಸ್ ಮುಖಂಡರು ಎಂದು ಹೇಳುತ್ತಿದ್ದಾರೆ. ಆ ಮುಖಂಡರು ಯಾರು ಎಂಬುದನ್ನು ಹೇಳಿದರೆ ಅದಕ್ಕೆ ವಿವರವಾಗಿ ನಮ್ಮ ಕಡೆಯಿಂದಲೂ ಹೇಳಬಹುದು.

Sri P. V. AITHALA.—Sir, the hon'ble Member Smt. Leelavathi was not present in this hon'ble House when Sri Bhaskar Setty was speaking and disclosed the name of the person concerned. Without hearing him she has raised the point and it is only wast of time. He has said that one Mr. Ahamad, Taluk Congress Committee President has encroached upon the play-ground of the District Board School to the extent of seven cents and it has been permitted by the Government.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಡಿಮಾಂಡ್ 47 ರಲ್ಲಿ ಮಹಾರಾಷ್ಟ್ರ ಮತ್ತು ಮೈಸೂರು ರಾಜ್ಯಗಳ ನಡುವೆ ಟ್ರಾನ್ಸ್‌ಮಿಷನ್ ಲೈನ್ ಹಾಕುವುದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಮಹಾರಾಷ್ಟ್ರ ಸರ್ಕಾರದವರು ಕೊಡುತ್ತಾರೆ, ಅದರಲ್ಲಿ 25 ಲಕ್ಷ ರೂಪಾಯಿಗಳನ್ನು ಈಗಾಗಲೇ ಮೊದಲನೆಯ ಕಂತಾಗಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ ಕೇಂದ್ರ ಸರ್ಕಾರದವರು ಆ ಖರ್ಚನ್ನು ವಹಿಸಿಕೊಳ್ಳುವುದಕ್ಕೆ ಒಪ್ಪಲಿಲ್ಲವಾದ್ದರಿಂದ ಮಹಾರಾಷ್ಟ್ರ ಮತ್ತು ಮೈಸೂರು ಸರ್ಕಾರದವರು ಅರ್ಧಪಾಲನ್ನು ಹಾಕಿಕೊಂಡು ಟ್ರಾನ್ಸ್‌ಮಿಷನ್ ಲೈನ್ ಹಾಕುವುದಕ್ಕೆ ಒಪ್ಪಿದ್ದೇವೆ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಹಾರಾಷ್ಟ್ರದವರಿಗೆ ಪವರ್ ಬೇಕೇ ಬೇಕು. ಅವರೇ ಟ್ರಾನ್ಸ್‌ಮಿಷನ್ ಲೈನ್ ಹಾಕುವುದಕ್ಕೆ ಆಗುವ ಖರ್ಚನ್ನು ಪೂರಾ ವಹಿಸಿಕೊಳ್ಳಬೇಕು, ನಮ್ಮ ಸರ್ಕಾರದವರು ಅದರಲ್ಲಿ ಯಾವ ಭಾಗವನ್ನೂ ವಹಿಸಿಕೊಳ್ಳಬಾರದು ಎಂದು ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ವಿಚಾರವನ್ನು ಹೇಳಬೇಕೆಂದರೆ ಒಂದು ಪಂಪ್‌ಸೆಟ್ಟೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಒಂದು ದಿವಸಕ್ಕೆ ಒಂದೆರಡು ಗಂಟೆ ಕೂಡ ಪಂಪ್‌ಸೆಟ್‌ಗಳು ಕೆಲಸ ಮಾಡುವುದಿಲ್ಲ, ಅದಕ್ಕೆ ಬೇಕಾದ ವಿದ್ಯುತ್ ಸರಬರಾಜು ಆಗುವುದಿಲ್ಲ. ಆಹಾರ ಧಾನ್ಯಗಳನ್ನು ಬೆಳೆಯುವ ರೈತರಿಗೆ ಪಂಪ್‌ಸೆಟ್‌ಗಳಿಗಾಗಿ ವಿದ್ಯುಚ್ಛಕ್ತಿ ಹೆಚ್ಚಾಗಿ ದೊರಕುವಂತೆ ನೋಡಿಕೊಳ್ಳಬೇಕು ಮತ್ತು ಅದಕ್ಕೆ ಬೇಕಾದ ಹೆಚ್ಚಿನ ಅಶ್ವಶಕ್ತಿಯ ಟ್ರಾನ್ಸ್‌ಫಾರ್ಮರುಗಳನ್ನು ಹಾಕಬೇಕು. ಮಾತ್ರವಲ್ಲದೆ ಸರ್ವಿಸ್ ಕನೆಕ್ಷನ್ ಮೆಟೀರಿಯಲ್ಸ್ ಎನಿಸಿ, ಮೀಟರುಗಳು, ಮೀಟರ್ ಬೋರ್ಡುಗಳು, ಕಟ್‌ಔಟ್ಸ್ ಇಂಥ ಕೆಲವು ಸರ್ವಿಸ್ ಕನೆಕ್ಷನ್ ಮೆಟೀರಿಯಲ್ಸ್ ಕೊರತೆ ಇರುವುದನ್ನು ಆದಷ್ಟು ಬೇಗ ದಕ್ಷಿಣ ಕನ್ನಡ ಜಿಲ್ಲೆಗೆ ಮತ್ತು ರಾಜ್ಯದ ಇತರ ಭಾಗಗಳಿಗೆ ಹೆಚ್ಚು ಹೆಚ್ಚು ಒದಗಿಸಿಕೊಟ್ಟು ನಮ್ಮ ಪ್ರಾಂತ್ಯದಲ್ಲಿ ಆದಷ್ಟು ವಿದ್ಯುಚ್ಛಕ್ತಿಯ ಪ್ರಯೋಜನವನ್ನು ಹೆಚ್ಚಾಗಿ ರೈತರು ಪಡೆದುಕೊಳ್ಳುವುದಕ್ಕೆ ಅವಕಾಶ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[Chariman (SMT. K. LEELAVATHI RAI) in the Chair]

†ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಹಣಕಾಸಿನ ಮಂತ್ರಿಗಳು ಮಂಡಿಸಿದ ಈ ಬೇಡಿಕೆಯನ್ನು ವಿರೋಧಿಸುತ್ತ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮುಖ್ಯವಾಗಿ 3 ನೇ ಬೇಡಿಕೆಯಲ್ಲಿ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ತಿಳಿಸಿದ್ದಾರೆ, ಪೂರ್ವ ಪಾಕಿಸ್ತಾನದಿಂದ ಬರುವ 990 ಜನರೇನಿದ್ದಾರೆ ಅವರ ಸಲುವಾಗಿ 73 ಲಕ್ಷರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಅದನ್ನು ಮಂಜೂರು ಮಾಡಬೇಕು ಎಂದು. ಈ ಬೇಡಿಕೆಯನ್ನು ನೋಡಿದಾಗ ನಿಜವಾಗಿಯೂ ಈ ಸರ್ಕಾರದ ಮೇಲೆ ಒಂದು ಅವಶ್ಯವಿರಲಾರದ ಭಾರವನ್ನು ಹಾಕಿದ ಹಾಗೆ ಕಾಣಿಸುತ್ತಿದೆ. ಕಾರಣ ಇಷ್ಟೆ : ಸಿಲೋನ್‌ನಿಂದ ಸಾವಿರ ಜನ ಬರುತ್ತಿದ್ದಾರೆ, ಅವರನ್ನು ಕಾಫಿಪಾರದಲ್ಲಿ ನೆಲಸುವಂತೆ ಅವಕಾಶ ಮಾಡಿದ್ದಾರೆ. ಈ ಧೋರಣೆ ಮೈಸೂರು ಸರಕಾರದಲ್ಲಿರುವುದರಿಂದ ಶಾಂತಿ ಕೆಡುತ್ತದೆ. ಪೂರ್ವ ಪಾಕಿಸ್ತಾನದಿಂದ ಬರುವ ಜನರಲ್ಲಿ ಶೇಕಡ 95 ಮಂದಿ ಚಿನ್ನ ಅಥವ ಹಣ ತೆಗೆದುಕೊಂಡು ಬಂದು ಭಾರತದಲ್ಲಿ ನೆಲಸಬೇಕೆಂದು ಬರುತ್ತಾರೆ. ಹಾಗೆ ಚಿನ್ನ ಅಥವ ಹಣ ತರುವವರಿಗೆ ಸರಕಾರದ ಸಹಾಯದ ಅವಶ್ಯಕತೆಯಿಲ್ಲ. ಸಾಮಾನ್ಯವಾಗಿ 10 ವರ್ಷಗಳ ಕೆಳಗೆ ಬಂದ ಸಿಂಧಿ ಜನರು ನಿರಾಶ್ರಿತರಾಗಿ ಬಂದು ಇಂದು ಶ್ರೀಮಂತರಾಗಿ ಮಹಡಿ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವವರಿಗೆ ಹೊರಗಿನಿಂದ ಬಂದ ಮಾತ್ರಕ್ಕೇ ಸಿಂಧನೂರು ಅಥವ ಇತರ ಭಾಗಗಳಲ್ಲಿ ಸೌಲಭ್ಯ ಕಲ್ಪಿಸಿ ಅವರಿಗಾಗಿ ಬಹಳವಾಗಿ ಖರ್ಚು ಮಾಡುವುದು ಉಚಿತವಲ್ಲ. ಅದರ ಸಲುವಾಗಿ ವಿರೋಧಿಸುತ್ತೇನೆ. ಇದಲ್ಲದೆ ಮೈಸೂರು ರಾಜ್ಯದಲ್ಲಿರುವ 60 ಲಕ್ಷ ಹರಿಜನರ ಪರಿಸ್ಥಿತಿ ನಿರಾಶ್ರಿತರಿಗಿಂತ ಬಹಳ ಹೀನಸ್ಥಿತಿಯಲ್ಲಿದೆ. ಅವರು ಕೆಲಸವಿಲ್ಲದೆ ಜೀವನ ಮಾಡಲು ಅವಕಾಶವಿಲ್ಲದೆ ಒದ್ದಾಡುತ್ತಿರುವಾಗ ಅವರ ಬಗೆಗೆ ನಿಗಾ ಕೊಡದೆ ನಿರಾಶ್ರಿತರಿಗೆ ಹೆಚ್ಚು ಗಮನ ಕೊಡುತ್ತಿದ್ದಾರೆ. ಹರಿಜನರ ಸಲುವಾಗಿ ಅರಣ್ಯದ ಭೂಮಿಯನ್ನು ಕೊಟ್ಟು ಅವರು ಹೋಗಿ ಅಲ್ಲಿ ನೆಲಸುವಂತೆ ಏಕೆ ವ್ಯವಸ್ಥೆ ಮಾಡಬಾರದು ? ಈಗ ಮಾಡುತ್ತಿರುವುದು 'ಮನೆಗೆ ಮಾರಿ, ಪರರಿಗೆ ಉಪಕಾರಿ' ಎಂಬಂತಿದೆ. ಸರಕಾರದ ಧೋರಣೆ ಈ ರೀತಿ ಇದೆ. ನಿರಾಶ್ರಿತರಿಗೆ ನೀಡುವ ಸೌಲಭ್ಯ ಹರಿಜನರಿಗೆ ದೊರಕಿದ್ದರೆ ದೇಶಾಭಿವೃದ್ಧಿಯಾಗುತ್ತಿತ್ತು.

47ನೆಯ ಡಿಮ್ಯಾಂಡಿನಲ್ಲಿ ಕೊಲ್ಹಾಪುರದಿಂದ ಬೆಳಗಾಂವರಗೆ ವಿದ್ಯುತ್ ಲೈನನ್ನು ಹಾಕುವ ವಿಚಾರವಿದೆ. ಇದಕ್ಕೆ ಮಹಾರಾಷ್ಟ್ರ ಸುಮಾರು 25 ಲಕ್ಷ ರೂಪಾಯಿ ಕೊಟ್ಟಿದೆ. ಇದಕ್ಕೆ ನಾವೂ 25 ಲಕ್ಷ ಹಾಕಬೇಕೆಂದು ಹೇಳಿದ್ದಾರೆ. ಈ ಸಂಬಂಧದಲ್ಲಿ ಒಂದು ಸಲಹೆ. ಮೈಸೂರು ಸರಕಾರ ಈ ಬಗ್ಗೆ ಖರ್ಚು ಮಾಡಬೇಕಾಗಿರುವುದನ್ನು ಕೇಂದ್ರ ಸರಕಾರ ತಕ್ಷಣ ಕೊಟ್ಟರೆ ಎರಡು ಸಂಸ್ಥಾನಗಳಿಗೂ ಅನುಕೂಲವಾಗುತ್ತದೆ. ಇದಕ್ಕೆ ಕೇಂದ್ರ ಸರಕಾರದ ಸಹಾಯ ಅವಶ್ಯಕವಾಗಿತ್ತು. ಈಗ ಇದು ಅನಾವಶ್ಯಕವಾದ ಹೊರೆಯಾಗಿದೆ ಎಂಬುದನ್ನು ಗಮನಕ್ಕೆ ತರುತ್ತೇನೆ.

ಇದೇ ರೀತಿಯಲ್ಲಿ ಅಗ್ರಿಕಲ್ಚರಲ್ ಡಿಮ್ಯಾಂಡ್‌ನಲ್ಲಿ ಸುಮಾರು 19 ಲಕ್ಷ 15 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ 3,100 ಎಕರೆಗಳನ್ನು ಸಿಂಧನೂರು ತಾಲ್ಲೂಕಿನಲ್ಲಿ ಅಕ್ವೈರ್ ಮಾಡಿ ಸೆಂಟ್ರಲ್ ಸೀಡ್ ಫಾರಂ ಸ್ಥಾಪಿಸಲು ಪ್ರಯತ್ನ ಮಾಡಿದ್ದಾರೆ. ಇದು ಸೆಂಟ್ರಲ್ ಸೀಡ್ ಫಾರಂ, ಇಲ್ಲಿ ಇದನ್ನು ನಮ್ಮವರು ಉಪಯೋಗಮಾಡುವುದಕ್ಕೆ ಸಾಧ್ಯವಿಲ್ಲ. ಸೀಡ್ ಕಾರ್ಪೋರೇಷನ್ ಈಗ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದನ್ನು ನಂಬಿ ಇಂಪ್ರೂವ್ಡ್ ವೆರೈಟಿ ಸೀಡನ್ನು ರೈತರು ಅನೇಕ

(ಶ್ರೀ ಎಸ್. ಎಸ್. ಅರಕೇರಿ)

ಕಡೆ ತೆಗೆದುಕೊಂಡು ಅದು ಸರಿಯಾಗಿಲ್ಲದೆ ತೊಂದರೆಯಾಗಿ ಎಷ್ಟೋ ರೈತರು ಮನವಿ ಮಾಡಿದ್ದಾರೆ. ನನಗೂ ಅನೇಕ ಕಡೆ ಹೇಳಿದ್ದಾರೆ. ಈ ಬೀಜದಿಂದ ಬರಬೇಕಾದಷ್ಟು ಬೆಳೆ ಬಾರದೆ ಹಾನಿಯಾಗಿದೆ. ಇಂದು ಸರಕಾರ ಕೊಡುವ ಇಂಪ್ರೂವ್ಡ್ ಸೀಡ್ಸ್ ಯೋಗ್ಯವಾಗಿಲ್ಲ. ಇಂಥ ಪರಿಸ್ಥಿತಿ ಇರುವಾಗ, ರೈತರಿಗೆ ಹಾನಿಯಾಗುವಾಗ ಸರಕಾರ ಮುಂದೆ ಬರುವುದಿಲ್ಲ. ಹಾಗಿರುವಾಗ 19 ಲಕ್ಷ 50 ಸಾವಿರ ರೂಪಾಯಿ ಖರ್ಚುಮಾಡಿ ಕೋ-ಆಪರೇಟಿವ್ ಸೀಡ್ ಫಾರಂ ತೆರೆಯುವುದು ಅನಾವಶ್ಯಕ. ಅದಕ್ಕೆ ಬದಲಾಗಿ ಆಯಾ ತಾಲ್ಲೂಕಿನ ರೈತರಿಗೆ ಅನುಕೂಲವಾಗುವಂತೆ ಹಾರ್ಟಿಕಲ್ಚರಲ್ ಇಲಾಖೆಯಿಂದ ಉತ್ತಮವಾದ ಬೀಜಗಳನ್ನೊದಗಿಸುವುದು ಒಳ್ಳೆಯದು, ಹಾಗೆ ಮಾಡಿದರೆ ಅನುಕೂಲವಾಗುತ್ತದೆ.

ಇನ್ನು ಫ್ಯಾಮಿನ್ ರಿಲೀಫ್ ಬಗ್ಗೆ ಬೇಡಿಕೆ ಇದೆ. ಸರಕಾರದವರು ಈ ಕೆಲಸ ನಿಲ್ಲಿಸಿದ್ದಾರೆ. ಈ ಬೇಡಿಕೆಯ ಮೇಲೆ ಆರ್ಥಿಕ ಸಚಿವರಿಗೆ ಎರಡು ಮಾತು ಹೇಳುವುದು ಉಪಯುಕ್ತವಾಗಿದೆ, ಇದಕ್ಕಾಗಿ ಹೆಚ್ಚಿನ ಬೇಡಿಕೆ ಮಂಡಿಸಬೇಕಾಗಿತ್ತು, ಇನ್ನೂ ಸುಗ್ಗಿಯು ಮಾರ್ಚಿಯಿಂದ ಬರುವುದು. ಈಗ ಜನರಿಗೆ ಕೆಲಸ ಒದಗಿಸಬೇಕಾಗಿದೆ. ಆದುದರಿಂದ ಫೆಬ್ರುವರಿ ಕೊನೆಯವರೆಗೆ ಈ ಕೆಲಸವನ್ನು ಮುಂದುವರೆಸಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ಅನುಕೂಲವಾಗುತ್ತದೆ. ಇಂದು ಜಮೀನಿಲ್ಲದಿರುವವರಿಗೆ, ಬಡವರಿಗೆ, ಕಾರ್ಮಿಕರಿಗೆ, ಬಡ ರೈತರಿಗೆ ಕೂಲಿಗೆ ಹೋಗಬೇಕಾದ ಪರಿಸ್ಥಿತಿ ಇದೆ. ಅವರಿಗೆ ಈಗ ಕೂಲಿ ಸಿಗದೆ, ಉಪಜೀವನಕ್ಕೆ ಮಾರ್ಗವಿಲ್ಲದೆ ತೊಂದರೆಯಾಗಿದೆ. ಇದಕ್ಕಾಗಿ ಈ ಬಾಬಿಗೆ ಹೆಚ್ಚು ಹಣ ಕೇಳಿದ್ದರೆ ಚೆನ್ನಾಗಿತ್ತು.

ಮುಂದರ್ಗಿ ಮತ್ತು ಇಂಡಿ ತಾಲ್ಲೂಕುಗಳಲ್ಲಿ ಸಾವಿರಾರು ಹರಿಜನರಿಗೆ ಹತ್ತು ವರ್ಷಗಳಿಂದ ತಕಾವಿ ಸಾಲ ನೂರು ರೂಪಾಯಿ ಕೊಟ್ಟಿರುವುದನ್ನು ಮಾಫಿ ಮಾಡಬೇಕು ಎಂದು ಹೇಳಿದರೂ ಸರಕಾರ ಮಾಡಿಲ್ಲ. ಮಾಫಿ ಮಾಡಿದರೆ ಬಡವರಿಗೆ ಅನುಕೂಲವಾಗುತ್ತದೆ. ಇಷ್ಟು ಹೇಳಿ ಕಾಲಾವಕಾಶವಿಲ್ಲದ್ದರಿಂದ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

† **Sri J. P. SARWESH** (Serum).—Sir, In opposing the Supplementary Demand placed by the Finance Minister, I would like to speak on Demand 44. You are aware that in Gulbarga District there are vast lands having limestone and nearly 50 or 60 years ago the Associated Cement Company started a Cement Factory and they are putting up a new factory at Wadi and the Cement Corporation of India is setting up another factory at Sedam. There is one most unfortunate thing about it. They are recruiting people at Delhi. Even tenders for ordinary work are called for at Delhi. The local people, nor the contractors, nor the engineers of this State are benefited. There are thousands of young engineers and skilled men in this State but they are not preferred. Even for ordinary labourers they want to recruit from Delhi. This was brought to the notice of the Chief Minister and while inaugurating recently a cement factory at Wadi he said that their licences will be cancelled. Inspite of such a warning they are not caring. Neither the Associated Cement Company nor the Cement Corporation are recruiting anybody from this State. There are hardly six or seven people that too in the cadre of peons and chowkidars. Even for such small posts they are recruiting from Delhi. There are thousands of young men who are graduates, technically qualified but they are not getting employment. Inspite of our repeated representations they are not caring. Those persons who have taken up contract, they are bringing even ordinary labour from other States and the local labourers are not benefitted. It is essential that the Government should pay more attention to cement factories at Sedam and Wadi. It will not be useful to the State if they do not give employment to the persons locally available.

ಪ್ರಜಾಪ್ರಭುತ್ವ ತತ್ವವನ್ನು ಒಪ್ಪಿಕೊಂಡಿರತಕ್ಕ ಈ ದೇಶದಲ್ಲಿ ಆಡಳಿತ ಕುಸಿದು ಬಿದ್ದಿದೆ, ಇದನ್ನು ಸರಿಮಾಡತಕ್ಕ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕ ಏಕೈಕ ಉದ್ದೇಶದಿಂದ ಆಡಳಿತ ಸುಧಾರಣಾ ಸಮಿತಿಯನ್ನು ಅತ್ಯುನ್ನತ ಮಟ್ಟದಲ್ಲಿ, ಕೇಂದ್ರದ ಮಟ್ಟದಲ್ಲಿ ಏರ್ಪಾಡು ಮಾಡಿದ್ದಾರೆ. ಸಮಿತಿಯು ಈಗಾಗಲೇ ಎರಡು ವರ್ಷಗಳಿಂದ ಸುದೀರ್ಘವಾಗಿ ಚರ್ಚೆಯಾಗಿ, ಅವರು ಹೊರದೇಶಗಳಿಗೆ ಕೂಡ ಹೋಗಿದ್ದು ಅಲ್ಲಿನ ರಾಜ್ಯಭಾರದ ಕ್ರಮಗಳನ್ನು ಅಧ್ಯಯನ ಮಾಡಿಕೊಂಡು ಬಂದರು. ಈ ಸಮಿತಿಯವರು ಪ್ರಪ್ರಥಮವಾಗಿ ಬೇರೆ ಸಿಫಾರಸುಗಳನ್ನು ಕೊಡುವುದಕ್ಕೆ ಮುಂಚಿತವಾಗಿ ಸಾರ್ವಜನಿಕ ಜೀವನ ಪ್ರಜಾಪ್ರಭುತ್ವದಲ್ಲಿ ಬಹಳ ಚೊಕ್ಕಟವಾಗಿರ ಬೇಕು, 'ಸೀಸರ್ಸ್ ವೈಫ್ ಷುಡ್ ಬಿ ಎಬೋವ್ ಸಸ್‌ಪಿಷನ್' ಎನ್ನುವಂತೆ ಆ ರೀತಿ ಮಾಡದೆ ಬೇರೆ ಕಾರ್ಯವನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಗಾಂಧೀಜಿಯವರ ಹೆಸರನ್ನು ಹೇಳುತ್ತೀರೇ ಹೊರತು ಗಾಂಧೀಜಿಯವರ ತರಹ ಮಾಡುವುದಕ್ಕೆ ಸಿದ್ಧರಾಗಿಲ್ಲ. ಅವರು ತಮ್ಮ ಆತ್ಮವನ್ನು ತಾವೇ ಶೋಧನೆ ಮಾಡಿ ಅವರೇನಾದರೂ ತಪ್ಪು ಮಾಡಿದ್ದರೆ ಬಿಚ್ಚಿ ಹೇಳುತ್ತಿದ್ದರು. ಹುಡುಗತನದಲ್ಲಿ ಮಾಡಿದ್ದನ್ನು ಹೇಳಿದರು. ಅಂಥ ಜನ ಇವೊತ್ತು ಇಲ್ಲ. ಆದುದರಿಂದ ಕಾನೂನಿನಿಂದಲೇ ಸಾಲ್ವ್ ಮಾಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಯವರಾಗಲೀ, ಶ್ರೀಮಾನ್ ನಿಜಲಿಂಗಪ್ಪನವ ರಾಗಲೀ ಯಾರೇ ಆಗಲೀ ಮೊಸಳೆ ಕಣ್ಣೀರು ಸುರಿಸಿ, ಬೆಕ್ಕಿನಂತೆ ನಟನೆ ಮಾಡತಕ್ಕ ರೀತಿಯನ್ನು ಬಿಡಬೇಕು. ಈ ದೇಶದಲ್ಲಿ ಆಗಿರುವಷ್ಟು ಮೋಸ ಪ್ರಪಂಚದ ಯಾವ ಮೂಲೆಯಲ್ಲಿಯೂ ನಡೆದಿಲ್ಲ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ನ್ಯಾಯದ ಹೆಸರಿನಲ್ಲಿ ನಾವು ಈ ದೇಶವನ್ನು ಕೊಳೆ ಹೊಡೆಯಲು ಹೊರಟಿದ್ದೇವೆ. ಇಂಥದ್ದನ್ನು ತಡೆಯಲು ಒಂದು ಕಾನೂನು ಮಾಡಬೇಕು, ಇಂಥದನ್ನು ನಿಲ್ಲಿಸುವುದಕ್ಕೆ ಪ್ರತ್ಯೇಕವಾದ ಕಾರ್ಯಕ್ರಮವನ್ನು ಹಾಕಬೇಕು ಎನ್ನುವ ವಿಚಾರ ಬಂದಾಗ ಈ ಸರ್ಕಾರ ಅದಕ್ಕೆ ತಯಾರಾಗಿಲ್ಲ, ವೇದಿಕೆಗಳಲ್ಲಿ, ಶಾಸನ ಸಭೆಗಳಲ್ಲಿ ಮಂತ್ರಿಗಳ, ಮಾಜಿ ಮಂತ್ರಿಗಳ ಮತ್ತು ಇತರರ ಆಸ್ತಿಪಾಸ್ತಿಯ ಪಟ್ಟಿಯನ್ನು ಶೇಕರಣೆ ಮಾಡುತ್ತೇವೆ ಎಂದು ಹೇಳುತ್ತಾರೆ. ಕಲು ಷಿತವಾದ ಪ್ರಜಾಪ್ರಭುತ್ವದಲ್ಲಿರತಕ್ಕ ಸರ್ಕಾರಕ್ಕೆ ನಾಟಕೀಯವಾದ ಇಂಥ ಆಚರಣೆಯಿಂದ ಖಂಡಿತ ವಾಗಿ ಏನೂ ಸಾಧ್ಯವಿಲ್ಲ ಎನುವುದನ್ನು ನಾವು ಈಗಾಗಲೇ ತಿಳಿದುಕೊಂಡಿದ್ದೇವೆ. ಈವೊತ್ತು ಈ ಸರ್ಕಾರಕ್ಕೆ ಕೊಂಚವಾದರೂ ಆತ್ಮ ಗೌರವವಿದ್ದ ಪಕ್ಷದಲ್ಲಿ ಸಾರ್ವಜನಿಕ ಜೀವನದಲ್ಲಿ ಮಂತ್ರಿಗಳಾಗಿ, ಮಾಜಿ ಮಂತ್ರಿಗಳಾಗಿ ಇದ್ದವರು ಮತ್ತು ಒಳ್ಳೆಯ ಹುದ್ದೆಯಲಿದ್ದ ಸಾರ್ವ ಜನಿಕರು ಇವರೆಲ್ಲರ ಆಸ್ತಿಪಾಸ್ತಿಗಳ ಪಟ್ಟಿಯನ್ನು ತೆಗೆದುಕೊಂಡು ವಿಚಾರಣೆ ಮಾಡುತ್ತೇವೆಂದು ಏನೊಂದು ನಟನೆ ಮಾಡಿದ್ದಾರೆ ಅದನ್ನು ಜನ ನಂಬುತ್ತಾರೆ ಎನ್ನುವ ಕಾಲ ಹೋಯಿತು. ನಾನು ತಮ್ಮ ಮುಖೇನ ಪಾರ್ಲಿಮೆಂಟರಿ ವ್ಯವಹಾರಗಳ ಸಚಿವರಿಗೆ ಹೇಳುವುದೇನೆಂದರೆ, ಅವರಿಗೆಲ್ಲದೆ ಅಧಿಕಾರ, ಅವರು ಹೋಗಿ ಮಂತ್ರಿಮಂಡಲದಲ್ಲಿ ಹೇಳಲಿ, ತರುಣ ಮಿತ್ರರಾದ ನಂಜೇಗೌಡರು ಒಳ್ಳೆಯಧ್ಯೇಯದಿಂದ ಈ ದೇಶಕ್ಕೆ ಇಂಥ ಕಾನೂನಾದರೆ ಸಾರ್ವಜನಿಕ ಜೀವನ ದಲ್ಲಿ ಒಳ್ಳೆಯದಾಗುವಂಥ ಮಸೂದೆಯನ್ನು ತಂದಿದ್ದಾರೆ ಎಂದು ಹೇಳಲಿ. ಇದನ್ನು ಸಾರ್ವ ಜನಿಕಾಭಿಪ್ರಾಯಕ್ಕೆ ಕಳುಹಿಸಬೇಕು ಎಂದು ತಿಳಿಸಿದ್ದಾರೆ ಎಂದು ಹೇಳಲಿ. ಯಾವ ಸಾರ್ವ ಜನಿಕರೂ ಇಂಥ ಮಸೂದೆ ಬೇಡ ಎಂದು ಹೇಳುವುದಿಲ್ಲ. ಇವೊತ್ತು ಇದಕ್ಕೆ ಅಡ್ಡಿಯಾಗಿರುವುದು ಸರ್ಕಾರ, ಕಾಂಗ್ರೆಸ್ ಸರ್ಕಾರ ಮತ್ತು ಆ ಕಡೆ ಇರುವವರು ಮಾತ್ರ. ಅವರು ಹೇಳುವುದರಲ್ಲಿ 'ದಿ ಕ್ಯಾಟ್ ಈಸ್ ಔಟ್ ಆಫ್ ದಿ ಬ್ಯಾಗ್'. ಅವರು ಚೆನ್ನಾಗಿ ನಟನೆ ಮಾಡುತ್ತಿದ್ದಾರೆ. ಇಂಥ ಮಸೂದೆಯನ್ನು ತರುವುದು ಬೇಡ ಎಂದು ಹೇಳುತ್ತಿದ್ದಾರೆ. ಏಕೆ ಬೇಡ ? ನಿಮಗೆ ಆತ್ಮ ಗೌರವ ವಿದ್ದರೆ, ನಿಮ್ಮ ಮಾತಿನಲ್ಲಿ ಗೌರವವಿದ್ದರೆ ಈ ಮಸೂದೆಯನ್ನು ಈ ದಿನವೇ ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳಿಸಿದರೆ ಒಪ್ಪುತ್ತೇನೆ. ಈ ಮಸೂದೆಯ ಬಗ್ಗೆ ರಾತ್ರಿ ಹಗಲೂ ಕುಳಿತುಕೊಂಡು ವಿಚಾರ ಮಾಡಿ 29ನೇ ತಾರೀಖಿನೊಳಗಾಗಿ ಇದನ್ನು ಅಂಗೀಕಾರ ಮಾಡಲು ಎಲ್ಲ ಕಾರ್ಯಕ್ರಮ ಗಳನ್ನೂ ಬಿಟ್ಟು ಕಲಮುಗಳಲ್ಲಿ ಏನಾದರೂ ವ್ಯತ್ಯಾಸವಿದ್ದರೆ ತಿದ್ದುಪಡಿ ಮಾಡೋಣ. ಸಾರ್ವ ಜನಿಕ ಜೀವನವನ್ನು ಸ್ವಚ್ಛಗೊಳಿಸಬೇಕು ಎನ್ನುವ ಆತ್ಮಗೌರವವಿದ್ದರೆ ಈ ಮಸೂದೆಯನ್ನು ಆಡಳಿತ ಪಕ್ಷದವರು ಇವೊತ್ತೇ ಒಪ್ಪಿಕೊಳ್ಳಬೇಕು. ಇದು ಸಾರ್ವಜನಿಕ ಅಭಿಪ್ರಾಯಕ್ಕೆ ಹೋಗಬೇಕಾಗಿಲ್ಲ. ನಾನು ಹೆಚ್ಚು ಉದ್ದವಾದ ಭಾಷಣ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಈವೊತ್ತು ಬೇಕಾಗಿರುವುದು ಕಾರ್ಯ. ಆದ್ದರಿಂದ ಮಾನ್ಯ ಪುಟ್ಟಸ್ವಾಮಿಯವರು ಸರ್ಕಾರದ ಪರವಾಗಿ ದೊಡ್ಡ ಮನಸ್ಸು ಮಾಡಿ, ಧೈರ್ಯ ಮಾಡಿ ಒಪ್ಪಿಕೊಂಡು ಜಂಟೀ ಸೆಲೆಕ್ಟ್ ಸಮಿತಿಗೆ ಇದನ್ನು ಕಳಿಸದೇ ಇದ್ದರೂ ಈ ಸಭೆಯ ಸೆಲೆಕ್ಟ್ ಕಮಿಟಿಗೆ ಕಳಿಸಿದರೆ ನಾವು ಎಷ್ಟು ಗಂಟೆ ಕಾಲ ಬೇಕಾದರೂ ಕೆಲಸ ಮಾಡಿ ಅದನ್ನು ಈ ಸಭೆಯ ಮುಂದೆ ತರವುದಕ್ಕೆ ತಯಾರಾಗಿದ್ದೇವೆ. ಸರ್ಕಾರ ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

†ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈ ಮಸೂದೆಯನ್ನು ಈಗಲೇ ಒಪ್ಪಿಕೊಳ್ಳಬೇಕೆಂದಿಲ್ಲ, ಸಾರ್ವಜನಿಕರ ಅಭಿಪ್ರಾಯಕ್ಕೆ ಕಳಿಸಬೇಕು ಎಂದು ಇದನ್ನು ತಂದಿರುವ ಶ್ರೀ ನಂಜೇಗೌಡರು ಹೇಳುತಿದ್ದಾರೆ. ಈ ಮಸೂದೆಯನ್ನು ಹಾಗೆ ಮಾಡಬೇಕಾದರೆ ಈಗಿರುವ ರೀತಿಯಲ್ಲೇ ಕಳಿಸಬೇಕೇ ಅಥವ ಬಿಡಬೇಕೇ ಎಂಬುದು ಬೇರೇ ಮಾತು. ಇದರ ಮೂಲೋದ್ದೇಶ ದೊಡ್ಡದು. ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡುವ ಸದಸ್ಯರು, ಮಂತ್ರಿಗಳು ಮುಂತಾದವರ ಬಗ್ಗೆ ಆಗಾಗ್ಗೆ ಅಪಾದನೆಗಳು ಬಂದರೆ, ಶಂಕೆ ಬಂದರೆ ಅದನ್ನು ಹೋಗಲಾಡಿಸುವುದಕ್ಕೆ ಅಥವ ಕ್ರಮ ಅದರ ಮೇಲೆ ತೆಗೆದುಕೊಳ್ಳುವುದಕ್ಕೆ ಅಧಿಕಾರ ಬೇಕು ಎಂದು ಹೇಳುತ್ತಾರೆ. ಪ್ರಜಾ ಪ್ರಭುತ್ವಕ್ಕೂ ಇದಕ್ಕೂ ದೊಡ್ಡ ಸಂಬಂಧವಿದೆ. ನಮ್ಮದು ಎಂಥ ಪ್ರಜಾಪ್ರಭುತ್ವ ಎಂದರೆ ಪಾರ್ಲಿಮೆಂಟರಿ ಸಿಸ್ಟಂ. ಬ್ರಿಟಿಷ್ ಕಾನ್‌ಸ್ಟಿಟ್ಯೂಷನ್ ಪ್ರಕಾರ ಅಲ್ಲಿನ ರಾಜಕೀಯ ತತ್ವದ ಪ್ರಕಾರ ನಡೆದುಕೊಳ್ಳಬೇಕಾದ್ದು ಅವಶ್ಯಕ, ಯೂರೋಪಿನಲ್ಲಿ ಬೇರೆ ಬೇರೆ ದೇಶಗಳಲ್ಲಿ ಆಂಬಡ್ಸ್‌ಮನ್ ಎಂದು ನೇಮಕಮಾಡಿರುತ್ತಾರೆ. ದೂರೇನಾದರೂ ಬಂದರೆ ನಿಷ್ಪಕ್ಷಪಾತವಾಗಿ ತೀರ್ಮಾನವಾಬೇಕು ಎಂಬ ತತ್ವದಪ್ರಕಾರ ಕೆಲಸ ಮಾಡಬೇಕಾಗಿದೆ. ಬಹಳ ವರ್ಷಗಳಿಂದ ನಾವು ಮದರ್ ಆಫ್ ಪಾರ್ಲಿಮೆಂಟ್ ನಲ್ಲಿ ಯಾವ ರಾಜ್ಯಾಂಗವಿದೆ ಅದನ್ನೇ ಅನುಸರಿಸುತ್ತಾ ಬಂದಿದ್ದೇವೆ. ಪ್ರಜಾ ಪ್ರಭುತ್ವ ಬೆಳೆಯುವುದಕ್ಕೆ ಯಾವ ತತ್ವ ಅನುಸರಿಸಬೇಕು ಎಂಬುದು ಮುಖ್ಯವಾದುದು. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಬಂದು 22 ವರ್ಷವಾಗಿದೆ. ಇಂಥ ಸನ್ನಿವೇಷದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡುವವರ ಬಗ್ಗೆ ದೋಷಾರೋಪಣೆ ಬರುವುದು ಸ್ವಾಭಾವಿಕ. ಆಗ ಪ್ರಾಮಾಣಿಕರಾಗಿರುವವರ ವಿಚಾರದಲ್ಲೂ ಕೂಡ ಅವರು ಪ್ರಾಮಾಣಿಕರಲ್ಲವೇನೋ ಎಂಬ ರೀತಿ ಎಲ್ಲರೂ ಹೇಳುವರು. ರಾಜಕೀಯದಲ್ಲಿರುವವರು ಮಂತ್ರಿಗಳು ಮುಂತಾದವರೆಲ್ಲರೂ ಕೆಟ್ಟವರು ಎಂಬ ಅಭಿಪ್ರಾಯ ಎಲ್ಲಾ ಕಡೆಯೂ ಇದೆ. ಹಾಗಿರುವಾಗ ಯಾರು ಯೋಗ್ಯರು, ಯಾರು ಅಲ್ಲ, ಯಾರು ದೋಷಾರೋಪಣೆಗೆ ಅರ್ಹರು, ಯಾರು ಅಲ್ಲ, ಎಂದು ತೀರ್ಮಾನಮಾಡುವ ವಿಧಾನ ನಮ್ಮಲ್ಲಿಲ್ಲ. ಹಿಂದೆ ಇಂಡಿಯಾ ಸರಕಾರದವರು ಒಂದು ಅಡ್ಮಿನಿಸ್ಟ್ರೇಟೀವ್ ರಿಫಾರಮ್ಸ್ ಕಮಿಟಿಯನ್ನು ಮಾಡಿದರು ಆ ಸಮಿತಿಯವರು ಈ ಬಗ್ಗೆ ಒಂದು ಸಿಫಾರಸನ್ನು ಮಾಡಿದ್ದಾರೆ. ಅದರ ಪ್ರಕಾರ ಲೋಕಪಾಲ ಅಥವ ಲೋಕಆಯುಕ್ತ ಎಂದು ನೇಮಕಮಾಡಬೇಕು, ಹಾಗೆ ಮಾಡಿದರೆ ದೂರು ಬಂದಾಗ ವಿಚಾರಣೆ ನಡೆಸಬಹುದು ಎಂದು ಸಿಫಾರ್ಸು ಮಾಡಿದರು· ಇಂಡಿಯಾ ಸರಕಾರದವರು ಪ್ರಾಂತೀಯ ಸರಕಾರಗಳ ಅಭಿಪ್ರಾಯವನ್ನು ಆ ವಿಚಾರದಲ್ಲಿ ಕೇಳಿದರು, ನೀವೂ ಏಕೆ ಇದನ್ನು ಜಾರಿಗೆ ತರಬಾರದು ಎಂದು ಕೇಳಿದರು ಎಂದು ನನಗೆ ಜ್ಞಾಪಕವಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂಡಿಯಾ ಸರಕಾರದವರು ಇದನ್ನು ಮೂಲಭೂತವಾಗಿ ಒಪ್ಪಿರುವುದೂ ಅಲ್ಲದೆ ಶಾಸನವನ್ನೂ ಮಾಡಿದ್ದಾರೆ.

ಶ್ರೀ ದೇವರಾಜ ಅರಸ್.—ಅದು ಗೊತ್ತಾಗಿದೆ. ಬೇರೆ ಬೇರೆ ಪ್ರಾಂತೀಯ ಸರಕಾರಗಳ ಅಭಿಪ್ರಾಯ ಕೇಳಿದರು. ಆದರೆ ನಮ್ಮ ಸರಕಾರದವರು ನಮ್ಮಲ್ಲಿ ವಿಜಿಲೆನ್ಸ್ ಕಮಿಷನ್ ಇದೆ, ಆದುದರಿಂದ ಬೇಡ ಎಂಬ ರೀತಿಯಲ್ಲಿ ಯೋಚನೆಮಾಡಿದರು. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಮಾನ್ಯ ಸದಸ್ಯರು ಹೇಳಿರುವ ರೀತಿಯಲ್ಲಿ ಪಬ್ಲಿಕ್ ಎನ್‌ಕ್ವೈರಿ ಬಿಲ್ ಬೇಕಾದರೂ ತರಬಹುದು, ಲೋಕಪಾಲ ವ್ಯವಸ್ಥೆಯಾದರೂ ಮಾಡಬಹುದು. ಇದು ಬೇಡವೆಂದು ಹೇಳುವುದಾದರೆ ಇಂಡಿಯಾ ಸರಕಾರದವರು ಹಿಂದೆ ಹೇಳಿರುವ ರೀತಿಯಲ್ಲಿ ಒಂದು ಇನ್‌ಸ್ಟಿಟ್ಯೂಷನ್ ಮಾಡುವುದಕ್ಕೆ ಯಾವ ರೀತಿಯ ಬಿಲ್ಲನ್ನು ಬೇಕಾದರೂ ತರಲಿ. ನನ್ನ ಅಭಿಪ್ರಾಯದಲ್ಲಿ ಈ ದಿವಸ ವಿಜಿಲೆನ್ಸ್ ಕಮಿಷನ್ ಇದೆಲ್ಲಾ ಮಾಡುವುದಿಲ್ಲ. ಕೇಂದ್ರ ಸರಕಾರದಲ್ಲಿ ಉನ್ನತವಾದ ವಿಜಿಲೆನ್ಸ್ ಕಮಿಷನ್ ಇದ್ದರೂ ಮಾಡಿದ್ದಾರೆ. ಇದರ ಬಗ್ಗೆ ಒಂದು ಕಾನೂನು ಮಾಡುವುದು ಅಗತ್ಯ.

ಸಾರ್ವಜನಿಕ ಕ್ಷೇತ್ರದಲ್ಲಿರುವ ನನ್ನ ಅನುಭವವನ್ನು ಹೇಳುತ್ತೇನೆ. ನನಗೆ ನೂರಾರು ವರ್ಷಗಳ ಅನುಭವವಿಲ್ಲ 30 ವರ್ಷದ ಅನುಭವವಿದೆ. ನಮ್ಮ ಪ್ರಜಾಪ್ರಭುತ್ವ ಯಶಸ್ವಿಯಾಗಿ ಬೆಳೆಯುತ್ತಿದೆಯೇ ಎಂದು ಯೋಚನೆಮಾಡಿದರೆ ಚುನಾವಣೆಯಲ್ಲಿ ಇನ್ನು ಮೇಲೆ ಹಣವಿದ್ದವರು ಮಾತ್ರ ನಿಲ್ಲಬೇಕೋ ಏನೋ ಎಂಬ ಅಭಿಪ್ರಾಯ ಎಲ್ಲಾ ಕಡೆಯೂ ಬಹಳ ಪ್ರಬಲವಾಗಿ ಮೂಡುತ್ತಿದೆ. ಇದಕ್ಕೆ ಕಾರಣ ಚುನಾವಣೆಯು ಬಹಳ ಕಾಸ್ಟ್ಲಿ ಗೇಂ ಆಗಿದೆ ಪ್ರಾಮಾಣಿಕರು, ಬಡವರು ಚುನಾವಣೆಯಲ್ಲಿ ನಿಲ್ಲುವುದಕ್ಕೆ ಸಾಧ್ಯವಿಲ್ಲ, ರಾಜಕೀಯದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಪ್ರಜಾಪ್ರಭುತ್ವದಲ್ಲಿ ಹಣವಿರುವವರಿಗೆ, ವೆಸ್ಟೆಡ್ ಇಂಟರೆಸ್ಟ್ ಇರುವವರಿಗೆ ಮಾತ್ರ ಅವಕಾಶವಿರುವಂತಿದೆ. ನಾನು ಕಾಂಗ್ರೆಸ್ ಪಕ್ಷದ ಪರವಾಗಿ ಮಾತನಾಡುತ್ತಿಲ್ಲ. ಈ ಬಿಲ್ಲು ಎಲ್ಲರಿಗೂ ಅನ್ವಯಿಸುವುದು, 1947 ರಿಂದ ಅನ್ವಯಿಸಬೇಕೆಂದು ಹೇಳುತ್ತಿದ್ದಾರೆ, ಅದರ ಹಿಂದಿನಿಂದ ಅನ್ವಯಿಸಿದರೂ ಅನುಕೂಲ, ದೂರು ಇದ್ದರೆ ಹಿಂದಿನ

ಮಂತ್ರಿಗಳಿಗೂ ಅನ್ವಯಿಸಬಹುದು. ಇಂಥಾ ಕಾನೂನಿಗೆ ಬಹುಮತ ದೊರೆಯುವುದರಲ್ಲಿ ಅಭ್ಯಂತರವಿಲ್ಲ, ಇದು ಎಲ್ಲಾ ಪಕ್ಷಗಳಿಗೂ ಅನ್ವಯಿಸುವುದು. ಬಡವರು ಚುನಾವಣೆಗೆ ನಿಲ್ಲುವುದಕ್ಕೆ ಸಾಧ್ಯವಿಲ್ಲವೆಂಬುದು ಎಲ್ಲಾ ಪಕ್ಷಗಳಿಗೂ ಅನ್ವಯಿಸುವುದು. ವೆಸ್ಟೆಡ್ ಇಂಟರೆಸ್ಟ್ ಇರುವವರಿಗೆ, ಹಣವಂತರಿಗೆ, ಹಣ ಗಳಿಸುವ ಬುದ್ಧಿವಂತಿಕೆ ಇರುವವರಿಗೆ ಮಾತ್ರ ರಾಜಕೀಯದಲ್ಲಿ ಮುಂದೆ ಬರುವುದಕ್ಕೆ ಸಾಧ್ಯ, ಚುನಾವಣೆಯಲ್ಲಿ ನಿಲ್ಲುವುದಕ್ಕೆ ಮತ್ತು ಗೆಲ್ಲುವುದಕ್ಕೆ ಸಾಧ್ಯ. ಇದು ಚೆನ್ನಾಗಿ ಚುನಾವಣೆ ನಡೆಯುವುದನ್ನು ನೋಡಿರುವವರಿಗೆ ಮನವರಿಕೆಯಾಗುತ್ತದೆ. ಶಾಸನ ಸಭಾ ಸದಸ್ಯನಾಗುವುದಕ್ಕೆ ಅಥವ ಮಂತ್ರಿಯಾಗುವುದಕ್ಕೆ ಈಗ 5 ವರ್ಷ ಅವಕಾಶವಿದೆ, ಅದೇ ಅವಧಿಯಲ್ಲಿ ಇನ್ನೊಬ್ಬರಿಗೇಕೆ ಅವಕಾಶ ಕೊಡಬಾರದು ಎಂದು ಹೇಳುತಿದ್ದಾರೆ. ಒಬ್ಬರೇ ಏಕೆ ಹೆಚ್ಚು ಕಾಲ ಇರಬೇಕು, ಇನ್ನೊಬ್ಬರಿಗೇಕೆ ಅವಕಾಶ ಕೊಡಬಾರದು ಎಂಬ ಅಭಿಪ್ರಾಯ ಹೊರಪಡುತ್ತದೆ. ಒಬ್ಬೊಬ್ಬರು ಒಂದೊಂದು ವರ್ಷ ಹಂಚಿಕೊಳ್ಳಿ, ಮುನಿಸಿಪಾಲಿಟಿಗಳಲ್ಲೂ ಹೀಗೇಕೆ ಮಾಡಬಾರದು ಎಂದು ಹೇಳುತ್ತಿದ್ದಾರೆ. ಕೆಲವು ಕಡೆ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್ 6 ತಿಂಗಳಿಗೊಂದು ಸಲ ಬದಲಾಯಿಸುತ್ತಾರೆ. ಮುನಿಸಿಪಾಲಿಟಿಗಳಲ್ಲೂ ಈ ರೀತಿ ಹಂಚಿಕೆ ಮಾಡುವ ಪದ್ಧತಿ ಪ್ರಾರಂಭವಾಗಿದೆ. ಇದರ ಅರ್ಥ ಒಬ್ಬ ಸ್ವಲ್ಪ ದಿವಸ ಇರಬೇಕು, ಇನ್ನೊಬ್ಬರಿಗೆ ನಂತರ ಅವಕಾಶ ಕೊಡಬೇಕು ಎಂಬುದು. ರಾಜಕೀಯದಲ್ಲಿ ಪ್ರತಿಯೊಂದಕ್ಕೂ ಒಂದೊಂದು ಸ್ಥಾನ ಇದೆ. ಕೇವಲ ಶಾಸನಸಭೆ ಸದಸ್ಯನಾಗುವುದು ಪ್ರಜಾಪ್ರಭುತ್ವಕ್ಕೆ ಅನ್ವಯಿಸುವುದು. ಬ್ರಿಟನ್‌ನಲ್ಲಿ ಮತ್ತಿತರ ಕಡೆಗಳಲ್ಲಿ ಒಬ್ಬರು ಪಕ್ಷದ ಪ್ರಭಾವಕ್ಕನುಗುಣವಾಗಿ ಗೆಲ್ಲಬಹುದು ಅಥವ ಸೋಲಬಹುದು. ಆದರೆ ಇಷ್ಟು ವರ್ಷ ಇದ್ದು ಇನ್ನೊಬ್ಬರಿಗೆ ಅವಕಾಶ ಕೊಡಬೇಕು ಎಂದು ಹೇಳಿರುವುದು ಎಲ್ಲೂ ಕಂಡುಬಂದಿಲ್ಲ. ಒಬ್ಬ ಪಾರ್ಲಿಮೆಂಟ್ ಸದಸ್ಯ ತನ್ನ ಮೇಲೆ ಏನಾದರೂ ದೋಷಾರೋಪಣೆ ಬಂದರೆ, ಅದರಮೇಲೆ ಅವನು ಸಾರ್ವಜನಿಕ ಸೇವೆಮಾಡಲು ಲಾಯಕ್ಕಿಲ್ಲವೆಂದು ಕಂಡುಬಂದರೆ ಸದಸ್ಯತ್ವ ಬಿಡಹುದು, ಇಲ್ಲದಿದ್ದರೆ ಅವನು ಮುಂದುವರೆಯುತ್ತಿರುತ್ತಾನೆ. ನಮ್ಮಲ್ಲಿರುವಂಥಾದ್ದು ಎಲ್ಲೂ ಇಲ್ಲ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅವಕಾಶವಿರಬೇಕು ಎಂಬುದು ಮುಖ್ಯವಾದ ತತ್ವ. ಸರ್ವಿಸ್ ಮಾಡಲು ಅವಕಾಶ ಬೇಕೆನ್ನುವವರು ಎಲ್ಲಿ ಬೇಕಾದರೂ ಮಾಡಬಹುದು. ಹಾಗಿಲ್ಲದೆ ಇರುವ ಅವಕಾಶವನ್ನು ಹಂಚಿಕೊಳ್ಳಬೇಕು ಎಂಬ ಮನೋಭಾವನೆ ಇರುವುದು ಸರಿಯಲ್ಲ. ಸರ್ವಿಸ್ ಮಾಡುವುದಕ್ಕೆ ಬರುವವರಲ್ಲಿ ಕೆಲವರಿಗೆ ಅವರು ಅದರಿಂದ ಬದುಕಬೇಕು ಎಂಬ ಮನೋಭಾವನೆ ಇದೆ. ಇಂಥ ಮನೋಭಾವನೆ ರಾಜ್ಯದಲ್ಲಿ ಕಂಡುಬಂದಾಗ ಯಾವುದೇ ಒಂದು ಕಾನೂನಿನ ಮೂಲಕ ಹತೋಟಿಯಲ್ಲಿಡುವುದು, ದೂರು ಬಂದರೆ ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸುವುದು ಮುಂತಾದ್ದಕ್ಕೆ ಕಾನೂನಿರಬೇಕಾದ ಅಗತ್ಯವಿದೆ. ಇದಾಗದಿದ್ದರೆ ಎಲ್ಲರೂ ಛಾನ್ಸ್ ತೆಗೆದುಕೊಳ್ಳುವುದಕ್ಕೆ ಪ್ರಾರಂಭಿಸುತ್ತಾರೆ. ಬಡವರ ಪರವಾಗಿ ಯಾರೂ ಬರಲು ಸಾಧ್ಯವಾಗುವುದಿಲ್ಲ. ಐಶ್ವರ್ಯವಂತರಾಗಬೇಕು ಅಥವಾ ಅಧಿಕಾರದಲ್ಲಿದ್ದು ಮುಂದಿನ ಚುನಾವಣೆಯಲ್ಲಿ ಗೆಲ್ಲಲು ಬೇಕಾಗುವ

5-00 P.M.

ಹಣ ಗಳಿಸಬೇಕು. ಆಗ ಸಾರ್ವಜನಿಕರ ಮುಂದೆ ಹಣ ಖರ್ಚು ಮಾಡುವ ಪರಿಸ್ಥಿತಿ ಉಂಟಾಗಿ ಈ ಒಂದು ಅವ್ಯವಸ್ಥೆ ಮತ್ತು ಪ್ರಜಾಪ್ರಭುತ್ವದ ಅಸ್ತಿತ್ವಕ್ಕೆ ಕುಠಾರಪ್ರಾಯವಾದ ಒಂದು ಬೆಳವಣಿಗೆ ನಮ್ಮ ದೇಶದಲ್ಲಿ ಆಗುವುದು ಖಂಡಿತ ಇದು, ಇದನ್ನು ತಡೆಗಟ್ಟಬೇಕಾದರೆ ಈಗಲೂ ನಾನು ಹೇಳುತ್ತೇನೆ ಈ ಬಿಲ್ಲನ್ನು ಈಗಲೇ ಒಪ್ಪಬೇಕೆಂದು ಹೇಳುವವನು ನಾನು ಅಲ್ಲ, ಅವರು ತಂದಿರತಕ್ಕ ಈ ಬಿಲ್ಲಿನಲ್ಲಿ ಅಡಕವಾಗಿರತಕ್ಕ ತತ್ವ ಏನಿದೆ ಇದು ಶ್ರೀಮಾನ್ ನಂಜೇಗೌಡರದು ಅಲ್ಲ. ಹಿಂದೆ ಇಂಡಿಯಾ ಸರ್ಕಾರದವರು ಯೋಚನೆ ಮಾಡಿದ್ದರು, ಅಡ್ಮಿನಿಸ್ಟ್ರೇಟೀವ್ ರಿಫಾರಂಸ್ ಕಮಿಟಿಯವರು ಯೋಚನೆ ಮಾಡಿದ್ದಾರೆ. ಹಿಂದೆ ಈ ಮಾತು ಇದ್ದದ್ದು ಈ ಅಭಿಪ್ರಾಯ ಸ್ಪಷ್ಟವಾಗಿ ಹೇಳುವುದಾದರೆ ಯಾವ ರೀತಿಯಲ್ಲಾದರೂ ಇದರ ಬಗ್ಗೆ ಇಂಡಿಯಾ ಸರ್ಕಾರದವರು ಲೋಕಪಾಲ ಅಥವಾ ಲೋಕ ಆಯುಕ್ತ ಎಂಬ ಬಿಲ್ಲನ್ನಾದರೂ ತರಲಿ (ಅದಕ್ಕೆ ಅನ್ವಯಿಸತಕ್ಕ ಮೈಸೂರು ಪಬ್ಲಿಕ್‌ಮನ್ ಎನ್‌ಕ್ವೈರಿ ಬಿಲ್ ಅನ್ನುವುದು ಏನಿದೆ ಇದು ಸರಿಯಲ್ಲ ಎನ್ನುವುದಾದರೆ ಅವರೇ ಯಾವ ರೀತಿ ಬೇಕೋ ಆ ರೀತಿ ಡ್ರಾಫ್ಟ್ ಮಾಡಿಯಾದರೂ ತರಲಿ) ಇದರ ಅಗತ್ಯತೆ ಮಾತ್ರ ದೇಶದಲ್ಲಿ ಬಹಳ ಮುಖ್ಯವಾಗಿ ಇದೆ ಪ್ರಜಾಪ್ರಭುತ್ವ ಬೆಳೆಯುವ ದೃಷ್ಟಿಯಿಂದ ಇದನ್ನು ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

† Sri D. B. KALMANKAR.—Sir, while congratulating the Hon Member Sri Nanje Gowda for bringing this Bill the Mysore Public Men Enquiry Bill, I also appreciate the very frank views submitted by the hon. Member Sri Devaraj Urs. The necessity of this Bill cannot be overemphasized because we are finding that various types of allegations are being made against those who are in public life whether they are in the Congress or in the Opposition parties. To whichever party they may belong, once this Bill is passed it will be applicable to all of them and by virtue of which they have got ample powers to misuse.

Now I was requesting that this Bill be considered instead of being sent for eliciting public opinion. It was only for this reason that the man in the street is fed up with things that are happening. He always grumbles that public life is not pure whether it be in the industries controlled by the Government or other institutions, whether the person may be Minister, M. L. A. or Deputy Chairman of Village Panchayat, what we generally find is that there is misuse of power by men in power and yet they go scot-free. This House is spending lot of its valuable time only because there is no such Act before us. Suppose there was an Act under which action could be taken against anybody on a complaint being made. Then naturally much of our time would have been saved. There is an independent agency suggested in this Bill. It is the Governor who is to make the appointment and there are also safeguards against any hasty action being taken. There is preliminary investigation to be made. In the case of Ministers and persons of that category the appointment of the Judges is from the cadre of High Court Judges and in the case of others at the level of Taluk Boards and Village Panchayats the Judge to be appointed would be of the status of Sessions Judge. There is also provision to see that no frivolous complaints are made and so provision has been suggested that some amount has to be deposited. All the necessary safeguards are there. If the Government agree with the principle underlying this Bill, the Government may also make the necessary amendments and bring the Bill back. Why I am saying is that is this is not done, I am afraid our democracy which has been degenerating and the efficacy of which is being questioned by the common man, may not be safe. If we have to be under democracy and if it is to stay here if we want that the country should be safe from totalitarian regime like the Communist regime, then I think such a statute is very essential. The Supreme Court also took the same view in the case of the Bihar and Orissa Acts. There they have got ample powers and enquiry is going on. Similar is the case in U. P. acts. So my submission is that if the Government do not accept this principle, then we will have to conclude that our Government is not committed to the real principles of democracy and they want to save their skin somehow. So I request the Hon. Minister through the Chair to accept the principle of this Bill. If he promises the House that he would bring an official Bill of this nature with the necessary amendments then I would request the Hon. Member Sri Nanje Gowda to take back this Bill.

[SRI K. PUTTASWAMY rose]

Sri L. SRIKANTAIAH (Nanjangud).—Before the Minister for Law and Paliamentary Affairs begins his speech I would like to have one clarification. There is a similar Bill in my name.

Mr. SPEAKER.—There is no time. There is another Bill in the name of Sri K. H. Patil.

Sri L. SRIKANTAIAH.—I only want a small clarification.

Mr. SPEAKER.—The Hon. Member may please resume his seat.

Sri L. SRIKANTAIAH.—I do not know why the Speaker is so harsh when I stand up. I am very sorry. If I also persist like other members, possibly then only I will be allowed.

Mr. SPEAKER.—The member is very uncharitable to the Chair. It is not fair to say so.

Sri L. SRIKANTAIAH.—When I make a polite request Chair directs me to sit down. If I insist like other members, then only it seems I will be allowed. I am very sorry.

Mr. SPEAKER.—Now the time has to be extended. Up to what time should it be extended ? Once we extend the time, we should stick to it.

Sri P. M. NADGOUDA.—This is an important measure and so the Hon. Members may be allowed to speak for one hour more.

Sri K. PUTTASWAMY.—Sir, as far as this side is concerned, I have already made my position very clear. I would not like to suggest any time limit for the debate. There are other non-official matters pending. Therefore, it is for the other Side to decide as to what time is to be given for this Bill.

Mr. SPEAKER.—Shall I extend the time for this Bill upto 6 O' Clock ?

HON. MEMBERS.—Yes.

Mr. SPEAKER.—The time for discussion of this Bill is extended by one hour more.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಆರು ಗಂಟೆಗೆ ಮುಂಚೆ ಮುಗಿಸುವುದಾದರೆ ಅದಕ್ಕೆ ನನ್ನ ಆಕ್ಷೇಪಣೆಯೇನೂ ಇಲ್ಲ. ಶ್ರೀಮಾನ್ ಶ್ರೀಕಂಠಯ್ಯನವರು ಮಾತನಾಡಿದ ಮೇಲೆ ನನಗೆ ಉತ್ತರಕೊಡುವುದಕ್ಕೆ ಅವಕಾಶಮಾಡಿ ಕೊಟ್ಟರೆ ನಾನು ಉತ್ತರಕೊಡುತ್ತೇನೆ.

† ಶ್ರೀ ಎಲ್. ಶ್ರೀಕಂಠಯ್ಯ.— ಶ್ರೀಮಾನ್ ನಂಜೇಗೌಡರು ಈಗೇನು ಒಂದು ಬಿಲ್ಲನ್ನು ತಂದಿದ್ದಾರೋ ಅಂಥದೇ ಒಂದು ಬಿಲ್ಲನ್ನು ನಾನೂ ಈ ಸಭೆಯ ಮುಂದೆ ಮಂಡಿಸಲು ನೋಟಿಸನ್ನು ಕೊಟ್ಟಿದ್ದೇನೆ. ಮಾನ್ಯ ನಂಜೇಗೌಡರು ಅವರ ಬಿಲ್ಲನ್ನು ಆ ಯು. ಪಿ. ಯ ಅಸೆಂಬ್ಲಿಯಲ್ಲಿ ಅವರು ಮಂಡಿಸಿದ್ದ ಬಿಲ್ಲನ್ನು ಬೇಸ್‌ಮಾಡಿ ತಯಾರಿಸಿದಂತೆ ಇದೆ. ಆದರೆ ಶ್ರೀ ನಂಜೇಗೌಡರ ಬಿಲ್ಲಿನಲ್ಲಿರತಕ್ಕ ಪೂರ್ಣ ವಿಚಾರಗಳು ನನಗೇನೂ ಗೊತ್ತಿಲ್ಲ. ಆದರೆ ನಾನು ಕೊಟ್ಟಿರತಕ್ಕ ಬಿಲ್ಲು ಕೇರಳದ ಮಾದರಿಯನ್ನು ಅನುಸರಿಸಿದುದಾಗಿದೆ. ಆದರೆ ನನಗೆ ಈ ಸಂದರ್ಭದಲ್ಲಿ ಕೆಲವು ಸಂದೇಹಗಳು ಬಂದಿವೆ. ನಾನು ಇದೇ ವಿಚಾರದಲ್ಲಿ ನಮ್ಮ ಗೌರ್ನರನ್ನೂ ಕೂಡ ಕಂಡಿದ್ದೆ. ಅಲ್ಲೆಲ್ಲಾ ವಾದವಿವಾದಗಳನ್ನು ನಡೆಸಿದ್ದಾಯಿತು. ಅವರು ಹೇಳುತ್ತಿರುವಂತೆ ಅವರ ಅಪ್ಪಣೆಯನ್ನು ಪಡೆಯಬೇಕಾದ್ದು ಆರ್ಟಿಕಲ್ 207 (3) ಪ್ರಕಾರ ಅಗತ್ಯವಿರಬಹುದು. ಆ ಆರ್ಟಿಕಲ್‌ನಲ್ಲಿ ಕ್ಲಿಯರಾಗಿ ಹೇಳಿದೆ.

(ಶ್ರೀ ಎಲ್. ಶ್ರೀಕಂಠಯ್ಯ)

ಬಿಲ್ಲನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಅಪ್ಪಣೆಯೇನೂ ಬೇಕಾಗಿಲ್ಲ. ಇನ್ನು ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಬೇಕು ಅನ್ನತಕ್ಕ ವಿಚಾರದಲ್ಲಿ ರೂಲ್ಸುಗಳಲ್ಲಿ ಹೇಳಿರತಕ್ಕದ್ದರ ಬಗ್ಗೆ ಸ್ವಲ್ಪ ಕಾನ್‌ಫ್ಲಿಕ್ಟ್ ಬರುತ್ತಿದೆ. ರೂಲ್ 73 (1)(i) ರಲ್ಲಿ ಮತ್ತು ರೂಲ್(ii) ರಲ್ಲಿ ಹೇಳಿರತಕ್ಕ ಪ್ರಕಾರ ಇಂಥ ಒಂದು ಬಿಲ್ಲನ್ನು ಈ ಸಭೆಯಲ್ಲಿ ಇಂಟ್ರಡ್ಯೂಸ್ ಮಾಡಿದನಂತರ ಅದನ್ನು ತಕ್ಷಣ ಇಲ್ಲಿ ಚರ್ಚೆಗೆ ಬೇಕಾದರೂ ತೆಗೆದುಕೊಳ್ಳಬಹುದು ಇಲ್ಲವೆ ಅದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯಸಂಗ್ರಹಣೆಗೆ ಅದನ್ನು ಮುಂದುವರಿಸಲೂ ಬಹುದು ಎಂದು ಹೇಳಿದೆ. ಆದರೆ ರೂಲ್ 67ರಲ್ಲಿ ಗವರ್ನರ್‌ರವರ ಅಪ್ಪಣೆಯಿಲ್ಲದೆ ಇಲ್ಲಿ ಇಂಥ ಬಿಲ್ಲನ್ನು ಮೂವ್ ಮಾಡುವುದಕ್ಕೆ ಅವಕಾಶವಿಲ್ಲ ಎಂಬುದಾಗಿ ಹೇಳಿದೆ. ನಾವು ರೂಲ್ 73ನ್ನೂ ಮತ್ತು ಆರ್ಟಿಕಲ್ 207 ಈ ಎರಡನ್ನೂ ಒಟ್ಟಿಗೆ ಸೇರಿಸಿಕೊಂಡು ಓದಬೇಕು. Otherwise, the whole thing becomes infructuous, Rule 67 says :

> " If the Bill is a Bill which under the Constitution cannot be introduced without the previous sanction or recommendation of the Governor, the member shall annex to the notice such sanction or recommendation conveyed through a Minister, and the notice shall not be valid until this requirement is complied with. "

Article 207 (3) of the Constitution says :

> " A Bill which, if enacted and brought into operation would involve expenditure from the Consolidated Fund of a State shall not be passed by a House of the Legislature of the State unless the Governor has recommended to that House the consideration of the Bill. "

The word " consideration" is used here. Rule 67 of the Rules of Procedure deals with introduction, and Rule 73(1) (ii) about public opinion. Though the constitutional obligation is cast on the Governor I do not know what advice the Cabinet will tender to the Governor. Suppose it is sent for eliciting public opinion, we do not know what opinion the public will give. Can we not express our opinion as representatives of the people ?

ಆರ್ಟಿಕಲ್ 207 (3) ರಲ್ಲಿ ಉಪಯೋಗಿಸಿರತಕ್ಕ ಕನ್‌ಸಿಡರೇಷನ್ ಶಬ್ದವನ್ನು ರೂಲ್ 73 (3) ರಲ್ಲೂ ಉಪಯೋಗಿಸಿದ್ದಾರೆ. ಅಂದರೆ ಇಲ್ಲಿ ಬಿಲ್ಲನ್ನು ಇಂಟ್ರಡ್ಯೂಸ್ ಮಾಡತಕ್ಕ ಕಾಲಕ್ಕೆ ಗೌರ್ನರ್ ಅವರ ಪರ್ಮಿಷನ್ ಬೇಕು ಎಂದಾಯಿತು.

ಇನ್ನು ಇದರ ಬಗ್ಗೆ ಪಬ್ಲಿಕ್ ಒಪಿನಿಯನ್ ಶೇಖರಿಸಬೇಕು ಎಂಬುದು ಒಂದು ನಮ್ಮ ಕತ್ತನ್ನು ಹಿಡಿಯುತ್ತಿದೆ. ಅದು ತಲೆಶಿರೋಭಾರವಿದ್ದಹಾಗೆ ಆಗಿದೆ. ಈ ಬಿಲ್ಲನ್ನು ಸಭೆಯಲ್ಲಿ ಕನ್‌ಸಿಡರೇಷನ್ ಸ್ಟೇಜಿಗೆ ತರತಕ್ಕ ಕಾಲದೊಳಗೆ ನಾವು ಗೌರ್ನರ್ ಅವರ ಪರ್ಮಿಷನ್ ಪಡೆದರೆ ಸಾಕೆಂದು ಕಾಣುತ್ತದೆ.

Sri H. SIDDAVEERAPPA.—I cannot understand why the Hon. Member should presume that the Governor is not going to give his consent.

Sri L. SRIKANTIAH.—We, as representatives of the people, have expressed our opinion sufficiently. Let us take the Bill into consideration straightaway. Simply if the Hon. Minister for Parliamentary Affairs says, that one cannot take recourse to Rule 73 even then we have not passed over the conflict. Therefore, in my submission, eliciting public opinion, will not serve any purpose at all. We can take the Bill

into consideration straightaway. If the Purpose is not fulfilled, why we should take refuge under Rule 73 (1)(ii) ? I think it is carrying coal to the New Castle.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಅಧ್ಯಕ್ಷರೇ, ಮಾನ್ಯ ಶ್ರೀ ನಂಜೇಗೌಡರು ತಂದಿರತಕ್ಕ ಬಿಲ್ಲನ್ನು ನಾನು ಸ್ವಾಗತಮಾಡುತ್ತೇನೆ. ಸ್ವಾಗತಮಾಡುವ ಉದ್ದೇಶ ವಿಷ್ಟೇ. 1964ರಲ್ಲಿ ಇದೇ ಸಭೆಯಲ್ಲಿ ಸಾರ್ವಜನಿಕ ಮುಖಂಡರ ಮೇಲೆ, ಅವರು ಯಾವುದೇ ಸ್ಥಾನದಲ್ಲಿರಲಿ, ಅವರು ಶಾಸನಸಭಾ ಸದಸ್ಯನಾಗಿರಲಿ, ಮಂತ್ರಿಗಳಾಗಿರಲಿ ಖಾಸಗೀ ಸಂಸ್ಥೆಗಳ ಅಧ್ಯಕ್ಷನಾಗಿರಲಿ, ಅವರ ಮೇಲೆ ಬಂದಿರತಕ್ಕ ಆರೋಪಗಳನ್ನು ವಿಚಾರಮಾಡುವುದಕ್ಕಾಗಿ ನಾನು ಮತ್ತು ನನ್ನ ಸ್ನೇಹಿತರಾಗಿದ್ದ ಮಾನ್ಯ ಶ್ರೀ ಕೇಶವಮೂರ್ತಿಯವರು ಇಬ್ಬರೂ ಸೇರಿ ಒಂದು ಖಾಸಗಿ ನಿರ್ಣಯವನ್ನು ತಂದಿದ್ದೆವು. ಆಗ ಈ ಸಭೆಯಲ್ಲಿ ಅದು ಮೂರು ದಿವಸಗಳ ಕಾಲ ಚರ್ಚೆ ನಡೆದು ಆ ನಿರ್ಣಯ ಬಿದ್ದುಹೋಯಿತು. ಇದರ ಅವಶ್ಯಕತೆ ಏನೆಂದು ಯೋಚನೆ ಮಾಡಿದರೆ ಮಾನ್ಯ ಶ್ರೀ ಅರಸ್ ಅವರು ಮಾತನಾಡಿದ ಪ್ರಕಾರ ಈ ಸರ್ಟಿಫಿಕೇಟ್ ಜೀವನದಲ್ಲಿ ಅತ್ಯಾವಶ್ಯಕ ಎನ್ನುವುದು ಬಹುತೇಕ ಜನರ ಅಭಿಪ್ರಾಯ ಇದ್ದಹಾಗೆ ಕಾಣುತ್ತಿದೆ. ಕಾರಣವಾದರೂ ಇಷ್ಟೇ. ಕಳೆದ 22 ವರ್ಷಗಳ ಅವಧಿಯಲ್ಲಿ ಅನೇಕ ಜನ ಮುಖಂಡರು ಒಂದಲ್ಲ ಒಂದು ರೂಪದ ಆರೋಪಣೆಯನ್ನು ತಮ್ಮ ಸಹೋದ್ಯೋಗಿಗಳ ಮೇಲೆ ಮಾಡುತ್ತಿದ್ದಾರೆನ್ನುವುದನ್ನು ನಾನು ನೋಡುತ್ತಿದ್ದೇನೆ. ಕೆಲವು ಸಂದರ್ಭಗಳಲ್ಲಿ ಈ ಆರೋಪಗಳು ಇನ್ನೊಬ್ಬರನ್ನು ಅಧಿಕಾರದಿಂದ ತೆಗೆದುಹಾಕುವುದಕ್ಕೂ ಉಪಯೋಗಿಸಲಾಗುತ್ತಿದೆ ಎನ್ನಬಹುದು. ಇದೂ ಒಂದು ತರಹ ಆರೋಪಣೆ. ಕೆಲವು ನೈಜವಾದ ಆರೋಪಣೆಗಳೂ ಕೂಡ ಇವೆ. ಅಧಿಕಾರದಲ್ಲಿರುವವರನ್ನು ಕಿತ್ತುಹಾಕುವುದಕ್ಕೆ, ಅವರ ಮೇಲೆ ಮಣ್ಣನ್ನು ಎರಚದೇ ಹೋದರೆ ಬಹುಶಃ ಸಾಧ್ಯವಿಲ್ಲವೆಂದು ಜನತಾಭಿಪ್ರಾಯವನ್ನು ಬೇರೆ ರೂಪದಲ್ಲಿ ಮೂಡಿಸುವುದಕ್ಕೆ ಕೆಲವು ಬುಡವಿಲ್ಲದ ಆರೋಪಣೆಗಳನ್ನೂ ಮಾಡಿರುವುದನ್ನು ನಾನು ಅನೇಕಸಾರಿ ನೋಡಿದ್ದೇನೆ. ನಿಜವಾದ ಆರೋಪಣೆಗಳನ್ನೂ ಸಹ ನೋಡಿದ್ದೇನೆ. ಇತ್ತೀಚೆಗೆ ನಡೆದಂಥ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಮಗೆ ಈ ಪ್ರಜಾಪ್ರಭುತ್ವ ಬಂದಮೇಲೆ ಈ ಅಧಿಕಾರ ದಾಹ ಎಲ್ಲಾ ಹಂತಗಳಲ್ಲಿಯೂ ಕೂಡ, ಎಲ್ಲಾ ಕಡೆಗಳಲ್ಲಿಯೂ ಮೂಡುತ್ತಿದೆ. ಯಾರು ಯೋಗ್ಯ, ಯಾರು ಅಯೋಗ್ಯ ಎಂಬುದನ್ನು ಪರೀಕ್ಷೆಮಾಡುವುದಕ್ಕೆ ಯಾವುದೇ ಸಾಧನವಿಲ್ಲ. ಐದು ವರ್ಷಗಳಿಗೊಂದುಸಾರಿ ಚುನಾವಣೆಯ ಹೊತ್ತಿಗೆ ಅವನ ಯೋಗ್ಯತೆ ಅಥವಾ ಅಯೋಗ್ಯತೆ ತಿಳಿಯುವ ಹೊಣೆಯನ್ನು ಜನತೆಯ ಮೇಲೆ ಚುನಾವಣಾ ರೂಪದಲ್ಲಿ ಹಾಕಿದ್ದಾರೆ. ಆ ಒಂದು ಹೊಣೆಯ ಮುಖಾಂತರ ನಮ್ಮೆಲ್ಲರ ಪರೀಕ್ಷೆ ನಡೆಯಬೇಕಾಗಿದೆ. ನಿಜವಾಗಿ ಒಬ್ಬ ವ್ಯಕ್ತಿಯ ಯೋಗ್ಯತೆಯನ್ನು ಪರೀಕ್ಷೆಮಾಡಬೇಕಾದರೆ, ಅದರ ಬಗ್ಗೆ ಯಾವ ಒಂದು ಕಾನೂನು ನಮ್ಮ ಮುಂದೆ ಇಲ್ಲದೇ ಇರುವ ಪ್ರಯುಕ್ತ ಜನತೆಗೆ ಒಬ್ಬ ಮನುಷ್ಯನ ಮೇಲೆ ಅಥವಾ ಅಧಿಕಾರದಲ್ಲಿರುವವರ ಮೇಲೆ ಒಂದು ಸಂಶಯ ಇರುವುದು ಸ್ವಾಭಾವಿಕ. ಹಿಂದೆ ತಂದಂಥ ಒಂದು ನಿರ್ಣಯವನ್ನು ಮತ್ತೆ ಈಗ ತಂದಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಅಧಿಕಾರದಲ್ಲಿರುವವರಮೇಲೆ ಒಂದು ಎನ್‌ಕ್ವೈರಿ, ನಡೆಯಬೇಕು ಎಂಬುದಾಗಿ ತಂದಿದ್ದಾರೆ. ಅದನ್ನು ನಾನು ಸಮರ್ಥನೆಮಾಡುತ್ತೇನೆ. ಸಾರ್ವಜನಿಕ ಜೀವನದಲ್ಲಿರತಕ್ಕ ವ್ಯಕ್ತಿಮೇಲೆ ಅನುಮಾನ ಬಂದಾಗ ಆ ಅನುಮಾನ ಪರಿಹಾರ ಮಾಡಬೇಕಾದರೆ ಒಂದು ಸಾಧನಬೇಕು. ಅದಕ್ಕಾಗಿ ಪಬ್ಲಿಕ್‌ಮೆನ್ ಎನ್‌ಕ್ವೈರಿ ಕಮಿಷನ್ ಅಂತಹ ಒಂದು ಎನ್‌ಕ್ವೈರಿ ಕಮಿಷನ್ ಬೇಕು. ವಿಜಿಲೆನ್ಸ್ ಕಮಿಷನ್ನಿಗೆ ಸಾರ್ವಜನಿಕ ಮುಖಂಡರ ಮೇಲೆ ವಿಚಾರಣೆ ಮಾಡುವ ಪವರನ್ನು ಡೆಲಿಗೇಟ್‌ಮಾಡಿ ನಾವು ಸಾರ್ವಜನಿಕ ಜೀವನದಲ್ಲಿ ಇರುವವರ ಮೇಲೆ ಬಂದಂಥ ಆರೋಪಣೆಗಳ ಮೇಲೆ ವಿಚಾರಣೆ ನಡೆಸಿ ವಿಮುಕ್ತರಾಗಬೇಕಾಗಿದೆ. ಇಲ್ಲದೇ ಹೋದರೆ ಸಾರ್ವಜನಿಕ ಜೀವನದಲ್ಲಿ ಯೋಗ್ಯರು ಉಳಿಯುವುದು ಬಹಳ ಕಷ್ಟವಾಗುತ್ತದೆ. ಅಂತಹವರು ಜೀವನದಲ್ಲಿ ಬಹಳ ಜಿಗುಪ್ಸೆ ಆಗಿರುವುದನ್ನೂ ಸಹ ನಾನು ನೋಡುತ್ತಿದ್ದೇನೆ. ಹಿಂದೆ ಮಾನ್ಯ ಶ್ರೀ ಸಿದ್ಧವೀರಪ್ಪನವರ ಮಿತ್ರರಾದಂಥ ಮಾನ್ಯ ಶ್ರೀ ಎ. ಜಿ. ರಾಮಚಂದ್ರರಾಯರು ಈ ಸಭೆಯ ಸದಸ್ಯರಾಗಿದ್ದರು. 1957ರಲ್ಲಿ ಅವರ ಮೇಲೆ ಕೂಡಾ ಆರೋಪಣೆಗಳು ಬಂದಿದ್ದುವು. ಯಾವ ಮುಖಂಡರೇ ಆಗಲೀ ಅಥವಾ ಯಾರ ಕಡೆಯವರೇ ಆಗಲೀ ಅವರಮೇಲೆ ಆರೋಪಣೆಗಳು ಬರುವ ಪ್ರಶ್ನೆ ಮುಖ್ಯವಲ್ಲ, ಏಕೆಂದರೆ ಯಾರು ಯೋಗ್ಯರು ಎಂಬುದನ್ನು ಜನ ಅಳತೆಮಾಡುತ್ತಾರೆ. ಕೇವಲ ಕಾಂಗ್ರೆಸ್ಸಿನಲ್ಲಿರುವವರು ಮಾತ್ರ ಅಯೋಗ್ಯರು, ಅನೀತಿಯುತರೆಂದು ಹೇಳುವುದಕ್ಕಾಗುವುದಿಲ್ಲ. ಪ್ರತಿಯೊಬ್ಬ ಮನುಷ್ಯನೂ ಆತ್ಮಪರೀಕ್ಷೆಮಾಡಿಕೊಂಡರೆ ತನ್ನ ಯೋಗ್ಯತೆ

(ಶ್ರೀ ಎಚ್. ಡಿ. ದೇವೇಗೌಡ)

ಗೊತ್ತಾಗುತ್ತದೆ. ಕಳೆದ 7 ವರ್ಷಗಳಲ್ಲಿ ಒಂದೊಂದು ರಾಜ್ಯಸಭೆ ಚುನಾವಣೆ ಅಸೆಂಬ್ಲಿ ಚುನಾವಣೆ ನಡೆದಾಗ ಯಾವ್ಯಾವ ಪಕ್ಷಗಳಲ್ಲಿ ಏನೇನು ಆಗುತ್ತಿದೆ ಎನ್ನುವ ಬಗ್ಗೆ ನಾನು ಬಹಳವಾಗಿ ನೋಡಿದ್ದೇನೆ. ಮನುಷ್ಯನಾದವನು ಆತ್ಮಶೋಧನೆ ಮಾಡಿಕೊಂಡರೆ ಅವನ ನೈತಿಕಮಟ್ಟವನ್ನು ಅವನೇ ಅಳತೆ ಮಾಡಿಕೊಳ್ಳಬಹುದು.

ಶ್ರೀ ಬಿ. ಭಾಸ್ಕರಶೆಟ್ಟಿ.—ಹಾಗೆ ಕಾಂಗ್ರೆಸ್ಸಿನವರು ನೋಡಿಕೊಳ್ಳುತ್ತಿದ್ದಾರೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಅದು ಬರೀ ಪಕ್ಷದಲ್ಲಿಯೇ ಅಲ್ಲ. ರಾಜಕೀಯ ಮುಖಂಡರ ಬಗ್ಗೆ ಸಂಶಯ ಬಂದಾಗ್ಗೆ, ಯಾವುದೇ ಆರೋಪಣೆ ಬಂದಾಗ್ಗೆ ಅದನ್ನು ವಿಚಾರಮಾಡಬೇಕು. ಅದರ ಬಗ್ಗೆ ಹಿಂದೆ ಒಂದು ಖಾಸಗೀ ನಿರ್ಣಯವನ್ನು ತಂದಂಥ ಒಂದು ಕಾಲವೂ ಉಂಟು. ಆರೋಪಣೆಗಳು ಕೇವಲ ಒಂದೇ ಪಕ್ಷದ ಮೇಲೆಯೇ ಬರುತ್ತದೆಂದಲ್ಲ. ಎಲ್ಲಾ ಪಕ್ಷದ ಮುಖಂಡರುಗಳ ಮೇಲೆಯೂ ಬರುತ್ತದೆ. ಅವರಲ್ಲಿ ಯೋಗ್ಯರೂ ಇರುತ್ತಾರೆ, ಅಯೋಗ್ಯರೂ ಇರುತ್ತಾರೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಇವತ್ತಿನ ದಿವಸ ಕೆಲವರು ಬುಡ ಇಲ್ಲದ ಆರೋಪಣೆಗಳನ್ನು ಮಾಡುತ್ತಾರೆ. ಅಂತಹವರ ಆರೋಪಣೆಗಳ ಬಗ್ಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಯಾರು ಅಂತಹ ಆರೋಪಣೆಗಳನ್ನು ಮಾಡುತ್ತಾರೋ ಅಂತಹವರಿಗೆ ಶಿಕ್ಷೆ ಮಾಡುವ ಅಧಿಕಾರ ಈ ಮಸೂದೆಯಲ್ಲಿರಬೇಕು.

Sri H. N. NANJE GOWDA.—The persons who have given false complaints may also be dealt with properly. That is also provided.

ಶ್ರೀ ಹೆಚ್ ಡಿ ದೇವೇಗೌಡ.—ಅದು ಆದರೆ ಬಹಳ ಒಳ್ಳೆಯದು. ನಾನು ಈ ಮಸೂದೆಯನ್ನು ಪೂರ್ತಿಯಾಗಿ ಓದಿಲ್ಲ. ಬುಡ ಇಲ್ಲದ ಆರೋಪಗಳನ್ನು ಮಾಡುವವರು ಎರಡನೆಯ ವರ್ಗ. ಅಧಿಕಾರದಲ್ಲಿರತಕ್ಕವರ ಮೇಲೆ ಅಸೂಯೆಪಟ್ಟು ಅವರನ್ನು ಅಧಿಕಾರದಿಂದ ಕಿತ್ತುಹಾಕುವುದು—ಇಂಥಾದ್ದನ್ನು ನಾನು ಅನೇಕಬಾರಿ ಕಣ್ಣಿನಿಂದ ನೋಡುತ್ತಿದ್ದೇನೆ. ಅದಕ್ಕೋಸ್ಕರ ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳುವ ಒಂದು ಅವಕಾಶ ಇದರಲ್ಲಿರಬೇಕು. ಇದರ ಒಂದು ಹಿನ್ನೆಲೆಯಲ್ಲಿ ಈ ಮಸೂದೆಯನ್ನು ನಾನು ಸಮರ್ಥನೆಮಾಡುತ್ತೇನೆ. ನಮ್ಮ ಜೀವನ ಚೆನ್ನಾಗಿರಬೇಕೆಂದು ಎಲ್ಲರ ಆಶೆ. ಆದರೆ ಸಾರ್ವಜನಿಕ ಮುಖಂಡರ ಬಗ್ಗೆ ಇವತ್ತು ತಪ್ಪು ಆರೋಪಣೆಯನ್ನು ಮಾಡುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಶಾಸನಸಭಾ ಸದಸ್ಯರು ಬೇಕಾದಷ್ಟು ಹಣವನ್ನು ಹೊಡೆಯುತ್ತಾ ಇದ್ದಾರೆಂದು ಕ್ಷುಲ್ಲಕವಾಗಿ ಮಾತನಾಡುತ್ತಿದ್ದಾರೆ. ಅದು ಈಗ ಮನೆಯ ಮಾತಾಗಿದೆ. ಆದ್ದರಿಂದ ಸಾರ್ವಜನಿಕ ಜೀವನದಲ್ಲಿ ಬಹಳ ವರ್ಷಗಳವರೆಗೂ ನಾವು ಇರಬೇಕೋ ಬೇಡವೋ ಎಂದು ನಮ್ಮಲ್ಲಿ ಜಿಗುಪ್ಸೆ ಬಂದುಬಿಟ್ಟಿದೆ. ಈಗ ತಂದಿರುವ ಬಿಲ್ಲಿನ ಬಗ್ಗೆ ಸರ್ಕಾರದವರು ಯಾವ ತೀರ್ಮಾನವನ್ನು ತೆಗೆದುಕೊಂಡಿದ್ದಾರೆಂಬುದು ನನಗೆ ಗೊತ್ತಿಲ್ಲ. ಇದರ ವಿಚಾರದಲ್ಲಿ ಸರ್ಕಾರದವರು ತೀವ್ರವಾದ ಕ್ರಮಗಳನ್ನು ತೆಗೆದುಕೊಂಡು ಸರ್ಕಾರವೇ ಇದಕ್ಕೆ ಸಾಧನವೇನೆಂಬುದನ್ನು ಯೋಚನೆಮಾಡಿ ಇದರ ಬಗ್ಗೆ ಶೀಘ್ರವಾಗಿ ಒಂದು ಕಾನೂನನ್ನು ತರುವುದಕ್ಕೆ ಯೋಚನೆಮಾಡಬೇಕು. ಈ ಮಸೂದೆ ಏನಿದೆ ಅದನ್ನು ನಾನು ಸ್ವಾಗತಮಾಡುತ್ತೇನೆ. ಇದರ ಬಗ್ಗೆ ಸರ್ಕಾರದವರು ಬಹಳ ತೀವ್ರವಾಗಿ ಆಲೋಚನೆಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯ್ಕನಹಳ್ಳಿ).—ಮಾನ್ಯ ಸಭಾಪತಿಯವರೇ, ದೇಶದ ಎಲ್ಲಾ ರಂಗಗಳಿಗೂ, ಎಲ್ಲಾ ಜನಗಳಿಗೋಸ್ಕರ ಶಾಸನ ಮಾಡುವ ಅಧಿಕಾರವನ್ನು ಈ ಸಭೆ ಪಡೆದಿರುತ್ತದೆ. ನಮಗೂ ಒಂದು ಶಾಸನ ಇರಬೇಕಾದುದು ಅವಶ್ಯಕ. ನಾನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ, ನಾವು ಅಧಿಕಾರದಲ್ಲಿರುವಾಗ ಸಾಮಾನ್ಯವಾಗಿ ಯಾವ ಮನುಷ್ಯನಮೇಲೂ ದೋಷಾರೋಪಣೆ ಮಾಡುವುದು ಸಾಮಾನ್ಯವಾದ ವಿಚಾರ. ಇವತ್ತಿನ ದಿವಸ ನಾವು ಯೋಚನೆ ಮಾಡಬೇಕೇನೆಂದರೆ, ನಮ್ಮ ದೇಶದ ಪ್ರಜಾಪ್ರಭುತ್ವ ಎಷ್ಟು ಕೀಳು ಮಟ್ಟಕ್ಕೆ ಇಳಿದಿದೆ ಎಂದು. ಅನೇಕ ಮಂತ್ರಿಗಳು, ಹಾಗೂ ಅನೇಕ ಶಾಸಕರು ಮತ್ತು ಅಧಿಕಾರದಲ್ಲಿರುವ ಅನೇಕ ನಾಯಕರು ತಮ್ಮ ಸ್ಥಾನವನ್ನು ತ್ಯಾಗ ಮಾಡುವ ಸಂದರ್ಭ ಬಂದದ್ದೂ ಕೂಡ ನಾವು ನೋಡಿದ್ದೇವೆ. ಉದಾಹರಣೆಗೆ ಕೈರಾನ್

ಚರಿತ್ರೆ, ಪಾಟ್ನಾಯಕ್ ಚರಿತ್ರೆ ತೆಗೆದುಕೊಳ್ಳಿ. ನಮ್ಮ ಶ್ರೀಮಾನ್ ನಿಜಲಿಂಗಪ್ಪನವರ ವಿಚಾರ ಕೂಡ ವಿಚಾರಣೆ ಮಾಡಬೇಕೆಂದು ಕೇಳುತ್ತಿದ್ದೇವೆ. ಈ ತರದ ಒಂದು ಸಂಶಯವನ್ನು, ಒಂದು ಶಂಕೆಯನ್ನು ಪಂಚಾಯಿತಿ ಅಧಿಕಾರಿಗಳಿದ ಹಿಡಿದು, ತಾಲೂಕು ಬೋರ್ಡ್, ಶಾಸನ ಸಭೆಯ ಅಧಿಕಾರಿಗಳವರೆಗೂ ಕೂಡ ದಿನಚರಿಯಾಗಿ ವ್ಯಕ್ತಪಡಿಸುತ್ತಿದ್ದಾರೆ. All are honest, but there is nobody to watch. ಇರುವವರೆಲ್ಲಾ ಸತ್ಯವಂತರಾದರೆ, ಯಾರನ್ನು ಕಾಯಬೇಕು ? ಇಂಥ ಒಂದು ಪರಿಸ್ಥಿತಿ ಬಂದಿರುವಾಗ ನಾವು ನಮ್ಮ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಪ್ರಜಾಪ್ರಭುತ್ವದಲ್ಲಿ ಸ್ವಚ್ಛವಾದ ಆಡಳಿತವನ್ನು ಕಟ್ಟುವುದಕ್ಕೆ ಇಂಥ ಒಂದು ಶಾಸನ ಅಗತ್ಯ. ನಮ್ಮ ಮನಸ್ಸಿನಲ್ಲಿ ಕಳಂಕ ಇದ್ದ ಪಕ್ಷದಲ್ಲಿ ಇಂಥ ಶಾಸನವನ್ನು ತಿರಸ್ಕರಿಸಬಹುದು. ಕಳಂಕ ಇಲ್ಲದ ಪಕ್ಷದಲ್ಲಿ ಯಾವ ವಿಚಾರಣೆಯೂ ಬಂದರೂ ಒಂದು ಧೈರ್ಯ ಇರಬಹುದು. ಮಾನ್ಯ ಪುಟ್ಟಸ್ವಾಮಿಯವರನ್ನು ಕೇಳಿಕೊಳ್ಳುವುದೇನೆಂದರೆ, ನೀವು ಒಂದು ಇಂಥ ಶಾಸನಮಾಡಿ. ನಮ್ಮ ನಮ್ಮಲ್ಲೇ ಶಾಸನ ಮಾಡಕೂಡದು ಎಂದು ಹೇಳುವ ಮಾತು ಸರಿಯಲ್ಲ. ಮನಬಿಚ್ಚಿ ಹೇಳುವ ಇಂಥ ಒಂದು ಶಾಸನ ಬಹಳ ಅತ್ಯವಶ್ಯವಾಗಿದೆಯೆಂದು ಸಾಮಾನ್ಯ ಒಬ್ಬ ಪ್ರಜೆಯೂ ಹೇಳುವ ಕಾಲ ಈಗ ಬಂದಿದೆ. ಇವತ್ತಿನದಿವಸ ಯಾವ ಪಕ್ಷದವರೇ ಆಗಲಿ, ಕೆಲವರು ಐಶ್ವರ್ಯವನ್ನು ಬೆಳೆಸುತ್ತಾ ಇರುವುದನ್ನು ನೋಡಿದರೆ, ಅದಕ್ಕೆ ಲೆಕ್ಕವೂ ಇಲ್ಲ ಪಕ್ಕವೂ ಇಲ್ಲ, ಮತ್ತು ಯಾವ ತೆರಿಗೆಗೂ ಅವರು ಸಿಕ್ಕುತ್ತಾ ಇಲ್ಲ. ಇದಕ್ಕೆ ಮುಖ್ಯವಾದ ಕಾರಣವೇನು ? ಉದಾಹರಣೆಗೆ ದೈವ ಸೃಷ್ಟಿಯನ್ನು ತೆಗೆದುಕೊಳ್ಳೋಣ. ಕಪ್ಪೆ ಮೀನನ್ನ ತಿನ್ನುತ್ತದೆ, ಕಪ್ಪೆಯನ್ನು ಹಾವು ತಿನ್ನುತ್ತದ, ಹಾವನ್ನು ಹದ್ದು ತಿನ್ನುತ್ತದೆ, ಹದ್ದನ್ನು ಮನುಷ್ಯ ಹೊಡೆಯುತ್ತಾನೆ. ಈ ರೀತಿ ಒಂದಕ್ಕೊಂದು ವೈರಿ ಇದ್ದೇ ಇದೆ. ಇಂಥ ಕಾಲದಲ್ಲಿ ಇಂಥ ಒಂದು ಶಾಸನ ತಂದು ಪ್ರಜಾಪ್ರಭುತ್ವದ ಮಲೀನತೆಯನ್ನು ತೊಳಕೊಳ್ಳದ ಪಕ್ಷದಲ್ಲಿ ಇದಕ್ಕೆ ವಿನಾಶ ಖಂಡಿತ. ನಕ್ಸಲ್ ಬಾರಿಯವರಿಗೆ ನಾವು ದಾರಿ ಮಾಡಿಕೊಟ್ಟಂತಾಗ, ನಿಜವಾಗಿಯೂ ಪ್ರಜಾಪ್ರಭುತ್ವ ಹಾಳಾಗುತ್ತದೆ. ನಮ್ಮ ಪ್ರಜಾಪ್ರಭುತ್ವದ ಪ್ರೇಮ ಅಳಿಸುವ ಕಾಲ ಬಂದಾಗ ಇಂಥ ಶಾಸನ ನಿಜವಾಗಿಯೂ ಅತ್ಯಗತ್ಯ. ಇವತ್ತಿನ ದಿವಸ ವಿಜಿಲೆನ್ಸ್ ಕಮಿಷನ್ ಎಂದು ಇದೆ, ಇದನ್ನು ಸರ್ಕಾರದವರೇ ನೇಮಿಸಿದ್ದಾರೆ. ಇವತ್ತು ಮುಖ್ಯಮಂತ್ರಿಯವರ ಮೇಲೆ ಅಥವಾ ಇನ್ನಿತರ ಮಂತ್ರಿಗಳ ಮೇಲಿನ ಆಪಾದನೆಗಳನ್ನು ಇವರು ಯಾವ ರೀತಿಯಲ್ಲಿ ವಿಚಾರಣೆ ಮಾಡುತ್ತಾರೆ ? ಅವರಿಗೆ ಕೇವಲ ಅಧಿಕಾರಿಗಳನ್ನು ವಿಚಾರಣೆ ಮಾಡುವುದಕ್ಕೋಸ್ಕರ ಮಾತ್ರ ಅಧಿಕಾರ ಇದೆ. ಅವರಿಗೆ ಸಾರ್ವಜನಿಕ ನಾಯಕರ ಮೇಲೆ ಅಧಿಕಾರ ಇಲ್ಲ. ನಮಗೆ ಇವತ್ತು ಲೋಕಪಾಲ, ಲೋಕ ಆಯುಕ್ತ ಅದನ್ನು ಒಪ್ಪಿಕೊಳ್ಳುವುದಕ್ಕ ಮನಸ್ಸಿಲ್ಲ. ಶಾಸನ ಒಪ್ಪಿಕೊಳ್ಳಲು ನಮ್ಮ ತಪ್ಪು ಇದೆ, ಅದು ಹೊರಗಡೆ ಬೀಳುತ್ತದೆ ಎಂದು ಒಂದು ಸಂಶಯ ಬೇರೆ ಇದೆ. ಆದ್ದರಿಂದ ಆ ರೀತಿಯ ಅಭಿಪ್ರಾಯ ತಾಳದೆ, ಶ್ರೀಮಾನ್ ನಂಜೇಗೌಡರು ತಂದಿರತಕ್ಕ ಶಾಸನವನ್ನು ಒಪ್ಪಿಕೊಂಡು ಒಂದು ಸ್ವಚ್ಛವಾದ ಪ್ರಜಾಪ್ರಭುತ್ವ ನಮ್ಮ ರಾಜ್ಯದಲ್ಲಿ ಬೆಳೆಯುವಂತೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ, ಸಭಾಧ್ಯಕ್ಷರೇ, ನನ್ನ ತರುಣ ಮಿತ್ರರಾದಂತಹ ಶ್ರೀ ನಂಜೇ ಗೌಡರು ತಂದಿರತಕ್ಕಂತಹ ಮಸೂದೆಯನ್ನು ಸ್ವಾಗತ ಮಾಡುತ್ತಾ ಎರಡು ಮಾತುಗಳನ್ನು ಹೇಳುತ್ತೇನೆ. ಇದನ್ನು ಸರ್ಕುಲೇಶನ್ ಮಾಡುವುದಕ್ಕೆ ಒಪ್ಪಿಗೆ ಕೊಡುವುದನ್ನು, ಶ್ರೀ ಪುಟ್ಟಸ್ವಾಮಿಯವರು ಎಂದು ಹೆಸರುಳ್ಳವರು ಇದನ್ನು ವಿರೋಧಿಸಿದ್ದು. ನನಗೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ. ಶ್ರೀ ಪುಟ್ಟಸ್ವಾಮಿಯವರು ಈ ಮಸೂದೆಯನ್ನು ಜಾರಿಗೆ ತಂದರೆ, ಮೈಸೂರಿನ ಸಾರ್ವಜನಿಕ ಜೀವನದಲ್ಲಿರತಕ್ಕ ಅಕ್ರಮ ಜೀವನ ನಡೆಸತಕ್ಕ ಜನರು ಏನಾದರೂ ಕಡಿಮೆಯಾಗುತ್ತಾರೆ ಎಂಬ ಹೆದರಿಕೆಯಿಂದ ಆ ರೀತಿ ಹೇಳಿದ್ದರೆಂದು ಕಾಣುತ್ತದೆ. ಸಾರ್ವಜನಿಕ ಜೀವನದಲ್ಲಿ ನಿಷ್ಠೂರರು ಇರಬಹುದು, ಸತ್ಯವಂತರು ಇರಬಹುದೆಂಬುದನ್ನು ಮಾನ್ಯ ಪುಟ್ಟಸ್ವಾಮಿಯವರು ಖಂಡಿತಾ ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ. ಈ ಭ್ರಷ್ಟಾಚಾರ ಸಮಸ್ಯೆ ಮೈಸೂರಿಗೆ ಹೊಸದೇನೂ ಅಲ್ಲ. ಲಂಚರುಷುವತ್ತುಗಳು ಅಥವಾ ಅಕ್ರಮ ಜೀವನ ಮೈಸೂರಿನಲ್ಲಿ, ಅಥವಾ ಭಾರತದಲ್ಲಿ ಮಾತ್ರವಲ್ಲದೆ, ಇದು ಇಡೀ ವಿಶ್ವದಲ್ಲೆಲ್ಲಾ ಹರಡಿದೆ, ಎಲ್ಲೆಲ್ಲಿ ಅಭಿವೃದ್ಧಿಯಾಗುತ್ತಿರುವ ದೇಶಗಳು ಇವೆಯೋ, ಅಲ್ಲಿ ಇವುಗಳ ಅವಾಂತರ ಜಾಸ್ತಿಯಾಗಿವೆ. ಎಲ್ಲಾ ರೂಪದಲ್ಲೂ ಇದನ್ನು ಎದುರಿಸಲು ಎಲ್ಲಾ ದೇಶಗಳ ನಾಯಕರು ಪ್ರಯತ್ನ ಪಡುತ್ತಿದ್ದಾರೆ. ಹಾಗೆ ನಮ್ಮ ದೇಶದಲ್ಲೂ ಕೂಡ ಇದನ್ನು ಎದುರಿಸುವುದಕ್ಕೆ, ತಡೆಯುವುದಕ್ಕೆ, ಮತ್ತು ಒಂದು ಸ್ವಚ್ಛವಾದ ಆಡಳಿತವನ್ನು ತರುವುದಕ್ಕೆ ಕಾನೂನುಗಳನ್ನು ಮಾಡುತ್ತಿದ್ದಾರೆ. Ronald Wraith and Edgar Simpkins ಅವರುಗಳು ತಮ್ಮ ಪುಸ್ತಕವಾದ "Corruption

(ಶ್ರೀ ಎಚ್. ಎ. ಚನ್ನೇಗೌಡ)

in Developing Countries" ಎಂಬುದರಲ್ಲಿ ಈ ರೀತಿ ಹೇಳಿದ್ದಾರೆ. "Throughout the fabric of public life in newly independent States runs securely thread of bribery and corruption." ಈತರದ ಸರ್ವವ್ಯಾಪಿಯಾದ ಎಲ್ಲಾ ಕಡೆಗಳಲ್ಲಿರತಕ್ಕ ಭ್ರಷ್ಟಾಚಾರ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ ನನ್ನ ಮಿತ್ರರಾದಂತಹ ನಂಜೇಗೌಡರು, ನಮ್ಮ ರಾಜ್ಯದಲ್ಲಿ ಇಂಥ ಅವ್ಯವಸ್ಥೆಗಳು ಇಲ್ಲದಿರಲಿ ಎಂದು ಈ ಒಂದು ಮಸೂದೆಯನ್ನು ಸಭೆಯ ಮುಂದಿಟ್ಟಿದ್ದಾರೆ. ಅಂಥದನ್ನು ಪುಟ್ಟಸ್ವಾಮಿಯವರು ಸ್ವಾಗತ ಮಾಡಬೇಕಾಗಿತ್ತು. ಇದು ಸರ್ಕಾರವೇ ಮಾಡಬೇಕಾದಂತಹ ಕೆಲಸ. ಅದನ್ನು ಶ್ರೀ ನಂಜೇಗೌಡರು ಶ್ರಮಪಟ್ಟು ಮಾಡಿದ್ದಾರೆ ಈ ಮಸೂದೆಯ ವಿಶೇಷ ವಿಷಯ ಏನೆಂದರೆ ಸಾರ್ವಜನಿಕ ಜೀವನದಲ್ಲಿರತಕ್ಕ ವ್ಯಕ್ತಿಗಳ ಮೇಲೆ ಇಲ್ಲದ ಸಲ್ಲದ ದೂರುಗಳನ್ನು ಮಾಡಿದಾಗ, ದೂರು ಮಾಡಿದ ವ್ಯಕ್ತಿಗಳಿಗೂ, ಅದು ಪ್ರೂವ್ ಆಗದಿದ್ದರೆ, ಶಿಕ್ಷೆ ಕೊಡತಕ್ಕ ವಿಧಿಯನ್ನು ಸೇರಿಸಿರುವುದು ನಿಜವಾಗಿಯೂ ಒಳ್ಳೆಯದು. ಈ ಬಿಲ್ಲನ್ನು ಸರ್ಕ್ಯುಲೇಶನ್ ಮಾಡಿ ಜನಗಳ ಅಭಿಪ್ರಾಯವನ್ನು ತೆಗೆದುಕೊಂಡರೆ ಇದು ನಿಜವಾಗಿಯೂ ನಿಸ್ಪೃಹತೆಯನ್ನು ಮತ್ತು ಸತ್ಯತೆಯನ್ನು ಹೆಚ್ಚಿಸುವುದಕ್ಕೆ ಸಾರ್ವಜನಿಕ ಜೀವನ ಪವಿತ್ರತೆಯನ್ನು ಹೆಚ್ಚಿಸಲು ಅನುಕೂಲಮಾಡಿ ಕೊಡುತ್ತದೆ. ಈ ಸಭೆಯಲ್ಲಿ ಮಾನ್ಯ ನಿಜಲಿಂಗಪ್ಪನವರು ಕೆಲವರು ಮಾಡಿದ ಆರೋಪಣೆಗಳ ಪ್ರಕಾರ, ಯಾರ್ಯಾರು ಮಂತ್ರಿಯಾಗಿದ್ದರು, ಮತ್ತು ಉನ್ನತ ಸ್ಥಾನದಲ್ಲಿದ್ದರು, ಅವರ ಆಸ್ತಿಪಾಸ್ತಿಗಳ ವಿವರಣೆಗಳನ್ನು ಕೇಳಿದ್ದಾರೆ. ಅದಕ್ಕೆ ಕೆಲವರು ಕಾಗದಗಳನ್ನು ಬರೆದ್ದಾರೆ. ಮಾನ್ಯ ಚನ್ನಬಸಪ್ಪನವರು ನಾನೂ ಏನೂ ಆಸ್ತಿಪಾಸ್ತಿ ವಿವರ ಕೊಡಲು ಸಿದ್ಧನಾಗಿದ್ದೇನೆ, ನೀವು ಯಾವ ಕಾನೂನಿನ ಮೇಲೆ ಇದನ್ನು ಕೇಳುತ್ತೀರಿ ಎಂದು ಪ್ರಶ್ನಿಸಿದ್ದಾರೆ. ಈ ರೀತಿಯ ಒಂದು ಕಾನೂನು ಬಲ ಇದ್ದಿದ್ದರೆ ನಿಜಲಿಂಗಪ್ಪನವರು ಒಂದು ಸಮಿತಿ ನೇಮಿಸಿ, ಎಲ್ಲಾ ವ್ಯಕ್ತಿಗಳ ಆಸ್ತಿಪಾಸ್ತಿಗಳನ್ನು ಕೇಳಿ ಒಂದು ವಿಚಾರಣೆ ಸಮಿತಿ ನೇಮಿಸಬಹುದಾಗಿತ್ತು. ಆದ್ದರಿಂದ ಸರ್ಕಾರದವರು ಈ ಕೆಲಸವನ್ನು ತ್ವರಿತವಾಗಿ ಮಾಡಬೇಕು. ಅಲ್ಲದೆ ಈ ಬಿಲ್ಲು ಪಾಸ್ ಆದರೆ, ನಮ್ಮ ದೇಶದಲ್ಲಿರತಕ್ಕಂತಹ ಪಕ್ಷಾಂತರ ಪಿಡುಗು ಕೂಡ ಕಡಿಮೆಯಾಗುತ್ತದೆ. ಯಾವುದೋ ಒಂದು ಆಶೆ, ಅನುಕೂಲವನ್ನು ಮಾಡಿಕೊಳ್ಳುವುದಕ್ಕೋಸ್ಕರ, ಕೇವಲ ಜಮೀನನ್ನು ಸಂಪಾದನೆ ಮಾಡುವುದಕ್ಕೋಸ್ಕರ ರಾಜಕೀಯದಲ್ಲಿ ಪಕ್ಷಾಂತರವನ್ನು ಮಾಡುತ್ತಿದ್ದಾರೆ. ಇದು ಒಂದು ಪ್ರಜಾಪ್ರಭುತ್ವಕ್ಕೆ ದೊಡ್ಡ ಅಪಾಯ. ಇದು ಪ್ರಜಾಪ್ರಭುತ್ವ ಬೆಳೆಯುವುದಕ್ಕೆ ಅತಂಕಕಾರಿಯಾಗಿದೆ. ಇಂಥ ಅತಂಕವನ್ನು ಹೋಗಲಾಡಿಸಲು ಈ ಬಿಲ್ಲನ್ನು ಮಾನ್ಯ ನಂಜೆಗೌಡರು ತಂದಿದ್ದಾರೆ. ಸರ್ಕಾರದವರು ಅವರೇ ತರುವುದು ಸರಿಯಾಗಿತ್ತು ಹಾಗೆ ಮಾಡದಿರುವಾಗ ಶ್ರೀ ನಂಜೇಗೌಡರು ತಂದಿರತಕ್ಕ ಬಿಲ್ಲಿಗೆ ಮನ್ನಣೆ ಕೊಟ್ಟು, ಇದನ್ನು ಸರ್ಕ್ಯುಲೇಟ್ ಮಾಡಬೇಕೆಂದು ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಅರಕೇರಿ (ಬಿಳ್ಗಿ).—ಮಾನ್ಯ ಅಧ್ಯಕ್ಷರೇ, ನನ್ನ ಮಿತ್ರರಾದ ಶ್ರೀಮಾನ್ ನಂಜೇಗೌಡರು ಈ ಸಭೆಯ ಮುಂದೆ ತಂದಂಥ ಮಸೂದೆ ಏನಿದೆ ಇದು ಸಕಾಲಿಕ ಮತ್ತು ಸಮಯೋಚಿತವಾಗಿದೆ. ಇಂಥಾ ಮಸೂದೆ ಬರುವುದು ಅತ್ಯಾವಶ್ಯಕ. ನಮ್ಮ ರಾಜ್ಯದಲ್ಲಿ ಇದನ್ನು ಕನ್ನಡ ನಾಡಿನ ದೃಷ್ಟಿಯಿಂದ ಇದನ್ನು ಕಾನೂನನ್ನಾಗಿ ಮಾಡಬೇಕು ಎಂದು ನಾನು ತಿಳಿದುಕೊಂಡಿದ್ದೇನೆ, ಈ ಮಸೂದೆಗೆ ನಾನು ನನ್ನ ಬೆಂಬಲವನ್ನು ಕೊಡುತ್ತೇನೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಒಂದು ರಾಜಕೀಯ ಭ್ರಷ್ಟಾಚಾರ, ಒಂದು ರಾಜಕೀಯ ಅಪಚಾರ ದಿನೇ ದಿನೇ ದೇಶದಲ್ಲಿ ಹೆಚ್ಚುತ್ತಿದೆ. ಯಾವ ಕಾಲಕ್ಕೂ ಇಂಥಾ ಪರಿಸ್ಥಿತಿ ಇರಲಿಲ್ಲ, ಈಗ ಸುಮಾರು 20 ವರ್ಷಗಳಿಂದ ಪ್ರಜಾಪ್ರಭುತ್ವದಲ್ಲಿ ರಾಜಕೀಯ ವಾತಾವರಣವನ್ನು ನಾನು ನೋಡುತ್ತಿದ್ದೇನೆ. ರಾಜಕೀಯ ಮುಖಂಡರನ್ನೂ ನಾನೂ ನೋಡುತ್ತಿದ್ದೇನೆ. ತುಲನಾತ್ಮಕ ದೃಷ್ಟಿಯಿಂದ ನೋಡುವುದಾದರೆ ಈ 20 ವರ್ಷಗಳ ಅವಧಿಯಲ್ಲಿ ರಾಜಕೀಯದಲ್ಲಿ ಇದ್ದಂತಹ ರಾಜಕಾರಣಿಗಳು ನಿಷ್ಠೆಯಿಂದ ಬಡವರಿಗೋಸ್ಕರ, ದೇಶಕ್ಕೋಸ್ಕರ ದುಡಿದದ್ದನ್ನು ನಾನು ಕಾಣಲಿಲ್ಲ. ಯಾವುದೋ ಒಂದು ಆಶೆ ಆಕಾಂಕ್ಷೆಗಾಗಿ ಕೆಲಸ ಮಾಡುತ್ತಿದ್ದಾರೆ. ಮುಖ್ಯವಾಗಿ ನಮ್ಮ ದೇಶದಲ್ಲಿ ರಾಜಕೀಯ ವಿಚಾರ ನಡೆಯುತ್ತಿದೆ ಯಾವುದೇ ದೃಷ್ಟಿಯಿಂದಲಾಗಲೀ ದುಡ್ಡನ್ನು ಗಳಿಸಬೇಕು, ಪರರ ಸ್ವತ್ತನ್ನು ಅಪಹರಿಸಬೇಕು, ಆರಾಮಾಗಿ ಬಾಳಬೇಕು, ಎನ್ನುವಂತಹ ದುರಾಶೆ ರಾಜಕಾರಣಿಗಳಲ್ಲಿ ದಿನೇ ದಿನೇ ಹೆಚ್ಚುತ್ತಿದೆ. ಅದನ್ನು ನೋಡಿದಾಗ ನಮಗೆ ಅನಿಸುತ್ತದೆ, ಕರ್ನಾಟಕದ ಪ್ರಜೆಗಳು ಈ ದೇಶದಲ್ಲಿ ಸುಖವಾಗಿ ಇರುವುದಿಲ್ಲ ಎಂದು. ಇವೊತ್ತಿನದಿವಸ ರಾಜಕಾರಣಿಗಳು ತಮ್ಮ ಸ್ವಂತಕ್ಕಾಗಿ ಲಂಚ ತೆಗೆದುಕೊಳ್ಳುವುದಕ್ಕೆ ಪ್ರಾರಂಭಮಾಡಿದ್ದಾರೆ. ಸಮಾಜದ ಹಿತವನ್ನು, ಬಡ ಜನರ

ಹಿತವನ್ನು ನಾಡಿನ ಏಳಿಗೆಯನ್ನೂ ಮರೆತು ಆಶೆ ಆಕಾಂಕ್ಷೆಗಳಿಗಾಗಿ ಬಲಿಯಾಗಿ ರಾಜಕೀಯ ಭ್ರಷ್ಟಾಚಾರವನ್ನು ಮಾಡುತ್ತಿದ್ದಾರೆ. ನಿಜವಾಗಿಯೂ ಇದು ನಮ್ಮ ದುರ್ದೈವ. ವಿಜಿಲೆನ್ಸ್ ಕಮಿಷನ್‌ರವರು ಮೂರನೆಯ ದರ್ಜೆಯ ಮತ್ತು ನಾಲ್ಕನೆಯ ದರ್ಜೆಯ ನೌಕರರನ್ನು ದುಡ್ಡು ಕೊಟ್ಟು, ಪ್ಲಾನು ಮಾಡಿ ಅವರನ್ನು ಹಿಡಿಸಿ ಅಂಥವರಿಗೆ ಶಿಕ್ಷೆ ವಿಧಿಸುತ್ತಿದ್ದಾರೆ. ಮಂತ್ರಿಗಳು, ಉಪಮಂತ್ರಿಗಳು, ಪಬ್ಲಿಕ್ ಸರ್ವೀಸ್ ಕಮಿಷನ್ ಚೇರ್ಮನ್, ಪಬ್ಲಿಕ್ ಸರ್ವೀಸ್ ಕಮಿಷನ್ ಸದಸ್ಯರುಗಳು, ಸೆಕ್ರೆಟರಿಗಳು, ಐ.ಜಿ.ಪಿ.,ಡಿ.ಐ.ಜಿ. ಇತ್ಯಾದಿಗಳು ಲಂಚವನ್ನು ಪಡೆಯುತ್ತಿದ್ದಾರೆ. ಇದನ್ನು ತಡೆಗಟ್ಟುವ ಸಾಮರ್ಥ್ಯ ಈ ಸರ್ಕಾರಕ್ಕೆ ಇಲ್ಲ. ದೊಡ್ಡ ದೊಡ್ಡ ರಾಜಕಾರಿಣಿಗಳು ಒಂದು ಸರಿಯಾದ ಮಾರ್ಗದಲ್ಲಿ ನಡೆದು ಆದರ್ಶ ಜೀವಿಗಳಾಗಿ ಪ್ರಜಾಸತ್ತಾತ್ಮಕ ದೃಷ್ಟಿಯಿಂದ ಸಮಾಜಕ್ಕೆ ಸೇವೆಯನ್ನು ಸಲ್ಲಿಸಲಿ ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಶ್ರೀಮಾನ್ ನಂಜೇಗೌಡರು ಈ ಮಸೂದೆಯನ್ನು ತಂದಿದ್ದಾರೆ. ಇದು ಬಹಳ ಉತ್ತಮವಾಗಿದೆ. ಇದಕ್ಕೆ ಮಾನ್ಯ ಸದಸ್ಯರೆಲ್ಲರೂ ತಮ್ಮ ಬೆಂಬಲವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ, ಮಹಾತ್ಮ ಗಾಂಧಿಯವರು ಅಸ್ಪೃಶ್ಯತೆ ಹೋದ ಹೊರತು ನಮ್ಮ ಸಮಾಜ ಉದ್ಧಾರವಾಗುವುದಿಲ್ಲ ಎಂದು ಹೇಳಿ ಹೋಗಿದ್ದಾರೆ. ಆದರ ಸಲುವಾಗಿ ಅಸ್ಪೃಶ್ಯತಾ ನಿವಾರಣೆಗೆ ನಮ್ಮ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ರಾಜಕೀಯ ಭ್ರಷ್ಟಾಚಾರ ಏನಿದೆ ಇದು ಹೋಗಬೇಕಾದರೆ ಮಹಾತ್ಮ ಗಾಂಧೀಜಿಯವರ ದಿವ್ಯ ಸಂದೇಶವನ್ನು ಅನುಷ್ಠಾನಕ್ಕೆ ತರಬೇಕು. ರಾಜ್ಯಪಾಲರ ಭಾಷಣದಲ್ಲಿ ಗಾಂಧಿಯವರ ಸಂದೇಶಗಳನ್ನು ಸೂಚನೆ ಮಾಡಿದ್ದಾರೆ. ಅದು ಈ ರೀತಿ ಇದೆ. ಬಾಪೂಜಿಯವರು ನಮ್ಮೊಂದಿಗೆ ಇದ್ದ ಕಾಲದಲ್ಲಿ ಅವರ ಸಂದೇಶವೂ ಉಪದೇಶವೂ ಎಷ್ಟು ಮಟ್ಟಿಗೆ ಅನ್ವಯಿಸುತ್ತಿದ್ದವೋ ಇಂದಿನ ಕಾಲದಲ್ಲಿಯೂ ಅವು ಅಷ್ಟೇ ಮಟ್ಟಿಗೆ ಅನ್ವಯಿಸುತ್ತವೆಯೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಸುಭಾಷ್ ಚಂದ್ರಬೋಸ್, ಡಾ| ಅಂಬೇಡ್ಕರ್, ಮುಂತಾದ ನಾಯಕರು ದೇಶಕ್ಕೆ ಏನು ತ್ಯಾಗ ಮಾಡಿದ್ದಾರೆ, ಅಂಥಾ ರಾಜಕಾರಿಣಿಗಳನ್ನು ನಿರ್ಮಾಣ ಮಾಡಬೇಕು. ಈಗ 20 ವರ್ಷಗಳಿಂದ ಕೆಲವರು ರಾಜಕಾರಿಣಿಗಳು ಖಾದಿ ಬೋರ್ಡುಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿಕೊಂಡು ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಸಮಾಜವಾದದ ಹೆಸರಿನಲ್ಲಿ ಕೆಲವರು ಶ್ರೀಮಂತರಾಗುತ್ತಿದ್ದಾರೆ. ಇಂಥವರು ಈ ದೇಶದಲ್ಲಿ ರಾಜಕೀಯದಲ್ಲಿ ಸೇರಿರುವುದರಿಂದ ಸಮಾಜಕ್ಕೆ ನ್ಯಾಯ ದೊರೆಯುವುದಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 20 ವರ್ಷಗಳಾಗಿದ್ದರೂ ಕೂಡ ಈ ದೇಶದಲ್ಲಿ ಜಾತಿವಾದ ಜಾಸ್ತಿಯಾಗುತ್ತಿದೆ. ಹಿಂದೆ ಬ್ರಿಟಿಷನವರ ಕಾಲದಲ್ಲಿ ಯಾವರೀತಿ ಅಧಿಕಾರವನ್ನು ನಡೆಸುತ್ತಿದ್ದರೋ ಈಗಲೂ ಅದೇ ರೀತಿ ಆಧಿಕಾರವನ್ನು ನಡೆಸುತ್ತಿದ್ದಾರೆ. ಇದು ಸರಿಯಲ್ಲ, ನಮ್ಮ ದೇಶದಲ್ಲಿ ಹರಿಜನರ ಸ್ಥಿತಿ ತುಂಬಾ ಶೋಚನೀಯವಾಗಿದೆ. ಅವರ ಉದ್ಧಾರವಾಗಬೇಕು ರಾಜಕೀಯ ಭ್ರಷ್ಟಚಾರ ನಿರ್ಮೂಲವಾಗಬೇಕು, ಸಮಾಜಕ್ಕೆ ನ್ಯಾಯ ದೊರಕುವಂತಾಗಬೇಕು ಆ ರೀತಿ ಮಾಡುವುದಾದರೆ ನಮ್ಮ ದೇಶ ಉಳಿಯುತ್ತದೆ, ಕನ್ನಡ ನಾಡು ಉಳಿಯುತ್ತದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಮಾನ್ಯ ಅಧ್ಯಕ್ಷರೇ ಈ ಮಸೂದೆಗೆ ಸಂಬಂಧಪಟ್ಟಹಾಗೆ ನಮ್ಮ ಮಾನ್ಯ ಶ್ರೀ ದೇವರಾಜಅರಸ್ ಅವರು ಏನು ಹೇಳಿದರೋ ಅದೇ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾ ಈ ಸಂದರ್ಭದಲ್ಲಿ ನಾನು ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮದೇಶದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪನೆ ಮಾಡಿ 22 ವರ್ಷಗಳಾಗಿವೆ ಮಹಾತ್ಮ ಗಾಂಧೀಜಿಯವರ ಆಶೀರ್ವಾದದಿಂದ ಎಲ್ಲವೂ ಅನುಕೂಲವಾಗಿ ನಡೆದುಕೊಂಡು ಬರುತ್ತಿದೆ. ಆ ವಿಭೂತಿ ಪುರುಷರು ತ್ಯಾಗ ಮಾಡಿದರು ಅವರ ತ್ಯಾಗದ ಫಲದಿಂದ ನಮಗೆ ಸ್ವಾತಂತ್ರ್ಯ ಬಂದು ನಮ್ಮ ದೇಶಕ್ಕೆ ಬೇಕಾದಂತಹ ಒಂದು ರಾಜ್ಯಾಂಗವನ್ನು ನಾವು ಬರೆದುಕೊಂಡು ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. ಈ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಹೋಗುವಾಗ ಕೆಲವು ತೊಂದರೆಗಳು ಆಗುತ್ತವೆ. ಡಾಕ್ಟರ್ ಅಂಬೇಡ್ಕರ್ ಅವರು ಹೇಳಿದರು 'Democracy is progressing in the Indian soil...' ಎಂದು ಶೈಶವಾವಸ್ಥೆಯಲ್ಲಿರತಕ್ಕ ಪ್ರಜಾಪ್ರಭುತ್ವವನ್ನು ಒಳ್ಳೆಯ ರೀತಿಯಲ್ಲಿ ಬೆಳೆಸಬೇಕಾದರೆ ನಾವು ಆಡಳಿತವನ್ನು, ಅಧಿಕಾರವನ್ನು ವಿಕೇಂದ್ರಿಕರಣ ಮಾಡಿ ಅದರ ಮೂಲಕ ಒಳ್ಳೆಯ ರೀತಿಯಲ್ಲಿ ಆಡಳಿತವನ್ನು ನಡೆಸಿಕೊಂಡು ಹೋಗಬೇಕಾದರೆ ತಾವು ಕೆಲವು ತತ್ವಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮತ್ತು ಅದರ ಆಧಾರದ ಮೇಲೆ ನಾವು ಕೆಲಸಗಳನ್ನು ಮಾಡಬೇಕಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಅನೇಕ ವರ್ಷಗಳಿಂದ ಕೆಲವು ಉತ್ತಮವಾದ ಕನ್‌ವೆನ್‌ಸನ್ ಇಟ್ಟುಕೊಂಡು ಪ್ರಜಾಪ್ರಭುತ್ವವನ್ನು ಒಳ್ಳೆಯ ರೀತಿಯಲ್ಲಿ ಅವರು ಬೆಳೆಸುತ್ತಿದ್ದಾರೆ. ಮಹಾತ್ಮ ಗಾಂಧಿಜೀಯವರೇ ಹೇಳಿದ ಹಾಗೆ ರಾಜಕಾರಿಣಿಗಳ

(ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ)

ಮೇಲೆ ಅನೇಕ ರೀತಿಯ ಅಪಾದನೆಗಳು ಬರತಕ್ಕದ್ದು ಸ್ವಾಭಾವಿಕ, ಪಂಚಾಯಿತಿ ಕ್ಷೇತ್ರದಿಂದ ಪಾರ್ಲಿಮೆಂಟ್‌ವರೆಗೂ ಅಧಿಕಾರ ವಿಕೇಂದ್ರಿಕರಣವಾಗಿರತಕ್ಕ ಈ ಸಂದರ್ಭದಲ್ಲಿ ಆಡಳಿತ ಜವಾಬ್ದಾರಿಯನ್ನು ಹೊತ್ತುಕೊಂಡಿರುವವರ ಮೇಲೆ ಕೆಲವು ಅಪಾದನೆಗಳು ಬರುವುದು ಸ್ವಾಭಾವಿಕ. ಶ್ರೀಮಾನ್ ಸಂಜೀವರೆಡ್ಡಿಯವರು ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ. ‘Even paupers have become multi-Millionaires in the organisation after Independence.’ ಎಂದು ಹೇಳಿದ್ದಾರೆ ಬಂಡವಾಳ ಶಾಹಿಗಳನ್ನು, ದೊಡ್ಡ ದೊಡ್ಡ ಶ್ರೀಮಂತರನ್ನೂ, ಮತ್ತು ಸಾರ್ವಜನಿಕ ಮುಖಂಡರನ್ನು ನಾವು ನೋಡಿದ್ದೇವೆ. ನಾನಾದರೂ ಈ ಸಂದರ್ಭದಲ್ಲಿ ಹೇಳುತ್ತೇನೆ. ಕಳೆದ ಅಧಿವೇಶನದ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾದ ವೀರೇಂದ್ರಪಾಟೀಲರು, ಯಾರು ತಮ್ಮ ತಮ್ಮ ಆಸ್ತಿಪಾಸ್ತಿಗಳ ವಿವರಗಳನ್ನು ಕೊಟ್ಟರೋ ಅವರುಗಳ ಹೆಸರುಗಳನ್ನು ಈ ಸಭೆಯ ಮುಂದೆ ಇಟ್ಟರು. ನನ್ನನ್ನು ಸಹ ಕೇಳಿದ್ದರು ಆದರೆ ನಾನು ನನ್ನ ಆಸ್ತಿಪಾಸ್ತಿಗಳ ವಿವರಗಳನ್ನು ಕೊಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನನ್ನ ಆಸ್ತಿಪಾಸ್ತಿಗಳ ವಿವರಗಳನ್ನು ಕೇಳುವುದಕ್ಕೆ ಯಾವ ಕಾನೂನು ಇರಲಿಲ್ಲ. ಅದ ಕಾರಣ ನಾನು ವಿವರಗಳನ್ನು ಕೊಡಲಿಲ್ಲ. ಹೋದ ಸಭೆಯಲ್ಲಿ ಶರಾವತಿ ಯೋಜನೆಯ ಬಗ್ಗೆ ಜುಡಿಷಿಯಲ್ ಎನ್‌ಕ್ವ್ಯಾರಿಯಾಗಬೇಕೆಂದು ಹೇಳಿದ್ದೆ. ಸರ್ಕಾರದವರು ಆ ಬಗ್ಗೆ ಏನನ್ನೂ ಹೇಳಲಿಲ್ಲ. ಶ್ರೀರಾಮ ಚಂದ್ರ ಸೀತೆ ವನವಾಸ ಮಾಡಿ ಮುಗಿಸಿದ ಮೇಲೆ ತಮ್ಮ ರಾಜ್ಯಕ್ಕೆ ಬಂದಮೇಲೆ, ಶ್ರೀರಾಮಚಂದ್ರ ಸೀತೆಯ ಪತಿವ್ರತಾ ಧರ್ಮವನ್ನು ಪರೀಕ್ಷಿಲಸು ದೊಡ್ಡ ದೊಡ್ಡ ಋಷಿಗಳ ಮುಂದೆ ಅಗ್ನಿಪ್ರವೇಶಕ್ಕೆ ಒಳಪಡಿಸುತ್ತಾನೆ. ಆ ರೀತಿ ಒಳಪಡಿಸುವ ಮುನ್ನ ಶ್ರೀರಾಮಚಂದ್ರ ಯೋಚನೆ ಮಾಡುತ್ತಾನೆ, “ಆಹಾ ಮುಂದಿನ ಜನಾಂಗ ನನ್ನ ಮೇಲೆ ಅಪವಾದ ಹೊರಿಸುವುದಿಲ್ಲವೆ ?” ತನ್ನ ಹೆಂಡತಿಯ ಪತಿವ್ರತಾ ಧರ್ಮವನ್ನು ಪರೀಕ್ಷಿಸಿದವನು ತಾನು ಅದೇ ಸತೀತ್ವ ಧರ್ಮವನ್ನು ಉಳ್ಳವನಾಗಿದ್ದನೇ ಎಂದು ಲೋಕ ಅಪವಾದ ಬರಬಹುದು ಎಂಬುದಾಗಿ ತಿಳಿದುಕೊಂಡು ಸೀತೆಗೆ ಮೊದಲು ತಾನೇ ಅಗ್ನಿಪರೀಕ್ಷೆಗೆ ಒಳಗಾಗುತ್ತಾನೆ. ಅದರಂತೆ ನಾನಾದರೂ ಹೇಳುತ್ತೇನೆ, ಅನೇಕ ಅಪವಾದಗಳು ಹಿಂದಿನ ಮತ್ತು ಈಗಿನ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳ ಮೇಲೆ ಇವೆ. ಈ ಅಪವಾದಗಳು ಹೌದೇ ಅಲ್ಲವೇ ಎಂದು ತೀರ್ಮಾನ ಮಾಡಬೇಕಾದರೆ ಇಂತಹ ಒಂದು ಕಾನೂನಿನ ಅವಶ್ಯಕತೆ ಇದೆ. ಈ ಒಂದು ಎನ್‌ಕ್ವೈರಿ ಆಕ್ಟ್ ಬರಬೇಕಾದ ಅವಶ್ಯಕತೆ ಇದೆ. ಯಾರು ಅನಧಿಕೃತವಾಗಿ ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿರುತ್ತಾರೋ ಅಂತಹವರನ್ನು ತನಿಖೆ ಮಾಡಲು ಇಂತಹ ಒಂದು ಕಾನೂನಿನ ಅವಶ್ಯಕತೆ ಇದೆ. ಯಾರು ತಮ್ಮ ಕ್ಷೇತ್ರದಲ್ಲಿ ಜಾತಿಯ ಬಗ್ಗೆ ಹೇಳಿಕೊಂಡು ಕೆಲಸ ಮಾಡುತ್ತಾರೋ ಅಂತಹವರ ಬಗ್ಗೆ ತನಿಖೆ ಮಾಡಲು ಇಂತಹ ಒಂದು ಕಾನೂನಿನ ಅವಶ್ಯಕತೆ ಇದೆ. ನಮ್ಮಲ್ಲಿ ಪ್ರಜಾಪ್ರಭುತ್ವ ಇನ್ನೂ ಶೈಶವಾವಸ್ಥೆಯಲ್ಲಿದೆ. ಇದನ್ನು ಬೆಳೆಸಬೇಕಾದರೆ ನಾವುಗಳು ಒಂದು ಒಳ್ಳೆಯ ಆದರ್ಶವನ್ನು ಹಾಕಿಕೊಳ್ಳಬೇಕಾಗಿದೆ. ದೇಶದಲ್ಲಿ ಪ್ರಜಾಪ್ರಭುತ್ವ ಬೆಳೆಯಬೇಕಾದರೆ ರೂಲ್ ಆಫ್ ಲಾ ಎತ್ತಿಹಿಡಿಯಬೇಕಾದರೆ ಸಾಮಾನ್ಯವಾಗಿ ಇಂತಹ ಒಂದು ಆಕ್ಟ್ ಬರಬೇಕು. ಈ ಆಕ್ಟ್ ಜಾರಿಯಲ್ಲಿ ಇಲ್ಲ ಎಂದುಕೊಂಡು ನಾನು ನನ್ನ ಆಸ್ತಿಪಾಸ್ತಿಗಳ ವಿವರಗಳನ್ನು ಕೊಡಲಿಲ್ಲ. ಈ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ನಾನು ಏತಕ್ಕೆ ನನ್ನ ಆಸ್ತಿಪಾಸ್ತಿಗಳ ವಿವರಗಳನ್ನು ಕೊಡಲಿಲ್ಲ ಎಂಬತಕ್ಕದ್ದನ್ನು ಲೋಕಕ್ಕೆ ಸ್ಪಷ್ಟಪಡಿಸಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್.

† ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಶ್ರೀಮಾನ್ ನಂಜೇಗೌಡರು ತಂದಿರುವ ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಇದು ಬಹಳ ಅಮೂಲ್ಯವಾದುದು ಮತ್ತು ಪ್ರಾಮುಖ್ಯವಾದುದು ಎಂದು ನನಗನ್ನಿಸುತ್ತದೆ. ಇದನ್ನು ಎಲ್ಲರೂ ಸ್ವಾಗತಮಾಡಬೇಕೆಂದು ಹೇಳುತ್ತಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಸತ್ಯ, ಧರ್ಮ ನ್ಯಾಯ ಇದೆ. ಆದ್ದರಿಂದ ಪ್ರಜಾಪ್ರಭುತ್ವವನ್ನು ನಂಬಿರುವ ಪ್ರತಿಯೊಬ್ಬರೂ ಸಹ ಈ ವಿಧೇಯಕಕ್ಕೆ ಒಪ್ಪಬೇಕು. ಮತ್ತು ಇದರ ಪರವಾಗಿ ಓಟು ಮಾಡಬೇಕು. ಸಾರ್ವಜನಿಕ ಜೀವನದಲ್ಲಿ ನಾವಿರುವಾಗ, ಗಾಂಧಿಯ ಹೆಸರನ್ನು ಹೇಳುತ್ತಿರುವಾಗ ಗಾಂಧಿ ತತ್ವಗಳನ್ನೂ ಸಹ ಒಪ್ಪಿಕೊಳ್ಳಬೇಕು. ಗಾಂಧಿ ತತ್ವಗಳನ್ನು ಒಪ್ಪಿಕೊಂಡಿರುವ ಪ್ರತಿಯೊಬ್ಬರೂ ಸಹ ಶ್ರೀಮಾನ್ ನಂಜೇಗೌಡರು ತಂದಿರುವ ವಿಧೇಯಕಕ್ಕೆ ಸರ್ವಾನುಮತದಿಂದ ಬೆಂಬಲ ಕೊಟ್ಟು ಈ ರಾಜ್ಯ ರಾಮರಾಜ್ಯ ಎಂದು ತೀರ್ಮಾನಿಸಬೇಕು. ಈ ವಿಧೇಯಕಕ್ಕೆ ಬೆಂಬಲ ಕೊಡದಿದ್ದರೆ ರಾಮನಿಗೆ, ಹರಿಶ್ಚಂದ್ರನಿಗೆ ಮತ್ತು ಗಾಂಧಿಗೆ ವಿರುದ್ಧವಾಗಿ ನಡೆದಂತೆ ಎಂದು ನನಗನ್ನಿಸುತ್ತದೆ. ಈ ದೇಶದಲ್ಲಿ ಬೇರೆಯವರ ಬಗ್ಗೆ ವೇದಾಂತವನ್ನು ಯಾರು ಹೇಳುತ್ತಾರೆ ಅವರು ಅದರಂತೆ ನಡೆಯುತ್ತಿಲ್ಲ. ಹಿಂದಿನ ಮುಖ್ಯಮಂತ್ರಿಗಳು ಈ ರಾಜ್ಯದಲ್ಲಿ ಹಿಂದೆ ಇದ್ದ ಮಾಜಿ

ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ ಆಸ್ತಿಪಾಸ್ತಿಗಳ ವಿವರಗಳನ್ನು ಕೊಡಬೇಕೆಂದು ಕಾಗದ ಬರೆದಿದ್ದರು. ಕೆಲವರು ವಿವರಗಳನ್ನು ಕೊಟ್ಟರು, ಮತ್ತೆ ಕೆಲವರು ಕೊಡಲಿಲ್ಲ. ಒಂದು ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ಕೈಗೊಳ್ಳಬೇಕಾದರೆ ಒಂದು ಸರಿಯಾದ ವಿಧೇಯಕ ಆಗಬೇಕು. ಈಗ ತಂದಿರುವ ವಿಧೇಯಕಕ್ಕೆ ಮಾನ್ಯ ಸದಸ್ಯರೆಲ್ಲರೂ ಒಪ್ಪಿಗೆ ಕೊಟ್ಟರೆ ಒಳ್ಳೆಯ ವಿಧೇಯಕವಾಗುತ್ತದೆ, ಆದರ್ಶವಾಗುತ್ತದೆ. ಇಡೀ ಜನ ಈ ವಿಧೇಯಕವನ್ನು ಒಪ್ಪುತ್ತಾರೆಂದು ಹೇಳುತ್ತೇನೆ. ಯಾರು ಈ ವಿಧೇಯಕವನ್ನು ಒಪ್ಪುವುದಿಲ್ಲ ಅವರಲ್ಲಿ ಆದರ್ಶವಿಲ್ಲ ಧರ್ಮವಿಲ್ಲ, ನೀತಿಯಿಲ್ಲ ಎಂದು ಹೇಳುತ್ತೇನೆ. ಕೊನೆಯದಾಗಿ ಶ್ರೀಮಾನ್ ನಂಜೇಗೌಡರು ತಂದಿರುವ ವಿಧೇಯಕವನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಈ ಸಭೆಯ ಮುಂದೆ ಮಂಡಿಸಿದ ನಿರ್ಣಯದ ಮೇಲೆ ಬಹಳ ಚರ್ಚೆ ನಡೆದಿದೆ. ಈ ಸಭೆಯ ಘಟಾನುಘಟಿ ಸದಸ್ಯರುಗಳು ಭಾಷಣ ಮಾಡಿದ್ದಾರೆ. ಭಿನ್ನಾಭಿಪ್ರಾಯವೇನೂ ಇರಲಿಲ್ಲ. ಈಗ ನಾವು ಯಾವ ವಿಚಾರವನ್ನು ಚರ್ಚೆ ಮಾಡುತ್ತಿದ್ದೇವೆ ಎಂಬುದನ್ನು ತಿಳಿದುಕೊಳ್ಳಬೇಕು. ಮಾನ್ಯ ಸದಸ್ಯರು ಈ ಸಭೆಯ ಮುಂದೆ ಮಂಡಿಸಿದ್ದು ಈ ರೀತಿ ಇದೆ :

> "That the Bill be circulated for the purpose of eliciting opinion thereof."

ಶ್ರೀ ಎಚ್. ಸಿದ್ಧವೀರಪ್ಪ.—ಪಬ್ಲಿಕ್ ಒಪೀನಿಯನ್ ಎಂದು ಇದೆ.

ಶ್ರೀ ಕೆ. ಪುಟ್ಟಸ್ವಾಮಿ.—ಪಬ್ಲಿಕ್ ಒಪೀನಿಯನ್ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳುತ್ತೇನೆ. ಈಗ ಚರ್ಚೆಯಾಗಿದ್ದನ್ನು ಎಲ್ಲರೂ ಕೇಳಿದ್ದೇವೆ. ಸಭೆಯ ಮುಂದಿರುವ ಮಸೂದೆಯಲ್ಲಿ ಅಡಕವಾಗಿರುವಂತಹ ಅಥವಾ ಈ ಮಸೂದೆಯನ್ನು ತಂದಂತಹ ಮಾನ್ಯ ಸದಸ್ಯರು ಯಾವ ಉದ್ದೇಶಕ್ಕಾಗಿ ಈ ಮಸೂದೆಯನ್ನು ತಂದಿದ್ದಾರೆ, ಅದರ ಅವಶ್ಯಕತೆ ಏನು ಎನ್ನುವ ವಿಚಾರದಲ್ಲಿ ಎಲ್ಲರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

6-00 P. M.

ಆದರೂ ನಾನು ಏನು ಭಾವನೆ ಮಾಡಿದೆ ಎಂದರೆ ಈ ಬಿಲ್ಲನ್ನು ಮಂಡಿಸಿದಾಗ ಈ ವಿಚಾರದಲ್ಲಿ ಅಭಿಪ್ರಾಯ ಸ್ಪಷ್ಟವಾಗಿ ಇರಲಿ, ಆದರೆ ಈ ಮಸೂದೆಯನ್ನು ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆದುಕೊಳ್ಳಲು ಕಳುಹಿಸಬೇಕು ಎಂದು ಅಪೇಕ್ಷೆ ಪಡುತ್ತಾರೆ ಎಂದು ನಾನು ಭಾವನೆ ಮಾಡುತ್ತೇನೆ. ಇಲ್ಲಿ ಸದಸ್ಯರ ಅಭಿಪ್ರಾಯಗಳನ್ನು ಕೇಳಿದ ಮೇಲೆ ಆ ಕಡೆಯವರ ಅಭಿಪ್ರಾಯ ಸ್ಪಷ್ಟವಾಗಿದೆ, ಮಸೂದೆಯ ವಿಚಾರವಾಗಿ ಭಿನ್ನಾಭಿಪ್ರಾಯವೇನೂ ಇಲ್ಲ. ಇದರ ಅವಶ್ಯಕತೆ ಇದೆ. ಇದರಲ್ಲಿ ಇರತಕ್ಕ ತತ್ವಗಳು ಒಪ್ಪತಕ್ಕಂತಹವುಗಳು, ಕಾನೂನು ಪ್ರಕಾರ ಯಾವ ಅಡಚಣೆಗಳೂ ಇಲ್ಲ ಇದು ಮಾಡಬೇಕಾದದ್ದು. ಇದರಿಂದ ಸಾರ್ವಜನಿಕ ಜೀವನ ಮಾಡುತ್ತಿರುವವರ ಜೀವನವನ್ನು ಪುಟಕ್ಕಿಟ್ಟರೆ ಚಿನ್ನದಂತಾಗುತ್ತದೆ, ಇದನ್ನು ಮಾಡಬೇಕು ಎನ್ನುವುದೇನೋ ಸರಿ. ಆದರೆ ಈ ಮಸೂದೆ ಸಾರ್ವಜನಿಕರ ಅಭಿಪ್ರಾಯಕ್ಕೆ ಏಕೆ ಹೋಗಬೇಕು ಎನ್ನುವುದರ ಬಗ್ಗೆ ನಮ್ಮಲ್ಲಿರುವ ರೂಲ್ಸ್‌ಗಳಲ್ಲಿ 74 (3) ನೇ ನಿಯಮವನ್ನು ಇಲ್ಲಿ ಓದಿ ಹೇಳುವುದು ಅವಶ್ಯಕ ಎಂದು ನಾನು ಭಾವಿಸುತ್ತೇನೆ. ಇದರಲ್ಲಿ ಏನು ಹೇಳುತ್ತದೆ ಎಂದರೆ :

> "Where a motion that a Bill be circulated for the purpose of eliciting opinion thereon is passed, and the Bill is circulated in accordance with that direction and opinions are received thereon, the member in charge if he wishes to proceed with his Bill thereafter, shall move that the Bill be taken into consideration......"

ಸಾರ್ವಜನಿಕ ಅಭಿಪ್ರಾಯ ಬಂದ ಮೇಲೆ ಮುಂದೆ ಇನ್ನೂ ಒಂದು ಹಂತ ಇದೆ. ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೇ ಇಲ್ಲವೇ ಕೈಬಿಡಬೇಕೇ ಎನ್ನುವುದರ ಬಗ್ಗೆ ತೀರ್ಮಾನವಾಗಬೇಕು. ಇಲ್ಲದೇ ಇದ್ದರೆ ಇದನ್ನು ತಂದುದರ ಉದ್ದೇಶ ನಿರರ್ಥಕವಾಗುತ್ತದೆ. ಇಲ್ಲ ಇದನ್ನು ಮುಂದುವರಿಸುವುದಕ್ಕಾಗಿ ಇಲ್ಲಿ ತಂದಿದ್ದಾರೆ ಎಂದು ನಾನು ಭಾವನೆ ಮಾಡಿ

(ಶ್ರೀ ಕೆ. ಪುಟ್ಟಸ್ವಾಮಿ)

ಕೊಂಡಿಲ್ಲ, ಯಾವ ಸಮಯದಲ್ಲಿ ಇಂತಹ ಮಸೂದೆಯನ್ನು ಸಾರ್ವಜನಿಕರ ಪರಿಶೀಲನೆಗೆ ಕಳುಹಿಸಬೇಕಾಗಿತ್ತು? ಮತ್ತು ಅಂತಹ ಸಂದರ್ಭಗಳು ಯಾವುವು ಎನ್ನುವುದರ ಬಗ್ಗೆ ಇಲ್ಲಿರ ತಕ್ಕ ಸದಸ್ಯರುಗಳು ಕೆಲವರು ಬಹಳ ವರ್ಷಗಳಿಂದ ಪಾರ್ಲಿಮೆಂಟರಿ ಅನುಭವಗಳನ್ನು ಪಡೆದು ಪ್ರಜಾಪ್ರತಿನಿಧಿ ಸಭೆಗಳಲ್ಲಿ ಸದಸ್ಯರಾಗಿದ್ದವರು ಅನೇಕ ಸಂಘ ಸಂಸ್ಥೆಗಳಲ್ಲಿಯೂ ಆಡಳಿತದ ಸೂತ್ರಗಳನ್ನು ಪಡೆದು ಕೆಲಸ ಮಾಡಿಂದತಹವರು ಇವರಿಗೆಲ್ಲ ಗೊತ್ತಿದೆ. ಎಂತಹ ಸಂದರ್ಭದಲ್ಲಿ ಕಾನೂನುಗಳನ್ನು ಸಾರ್ವಜನಿಕ ಅಭಿಪ್ರಾಯಗಳನ್ನು ಪಡೆಯಲು ಕಳುಹಿಸಬೇಕಾದರೂ ಹಾಗೆ ಕಳುಹಿಸುವಾಗ ಅದಕ್ಕೆ ಇದ್ದಂತಹ ವಿಶೇಷ ಕಾರಣಗಳಾವುವು ಇವನ್ನೆಲ್ಲಾ ಮೊದಲೇ ಸ್ಪಷ್ಟ ಪಡಿಸಬೇಕಾಗುತ್ತದೆ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಯಾರೇ ಆಗಲಿ ಕೆಲವು ವೇಳೆ ಸರಿಯಾದ ದಾರಿಯಲ್ಲಿ ಹೋಗುತ್ತಿದ್ದರು, ಕೆಲವು ವೇಳೆ ಮುಗ್ಗರಿಸಬೇಕಾಗುತ್ತದೆ. ಇಂತಹ ಸಣ್ಣ ವಿಚಾರದಲ್ಲಿ ಇವರ ಗಮನ ಹರಿಯಲಿಲ್ಲವಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಅದು ಅವರ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಿಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ.—ಸಾರ್ವಜನಿಕ ಅಭಿಪ್ರಾಯಕ್ಕೆ ಕಳುಹಿಸುತ್ತೇವೆಂದು ಹೆದರಿ ಕೊಂಡಾರು, ಅದಕ್ಕಾಗಿ ಇದನ್ನು ತಾವು ಒಪ್ಪಿಕೊಳ್ಳಿ ಎಂದು ಹೇಳುತ್ತಿರುವುದು.

ಶ್ರೀ ಕೆ. ಪುಟ್ಟಸ್ವಾಮಿ.—ನಾವು ಇಂದು ಸರಕಾರದ ಆಡಳಿತದಲ್ಲಿ ಇರುವುದು ಪ್ರಜೆಗಳಿಂದ ಚುನಾಯಿತರಾದ ಸರಕಾರ. ಈ ಸಭೆಯಲ್ಲಿ ಇಂದು ಸಾರ್ವಜನಿಕರ ಅಭಿಪ್ರಾಯಗಳನ್ನು ಪ್ರತಿಭಿಂಬಿಸತಕ್ಕ ಶಕ್ತಿ ಈ ಸಭಗೆ ಇದೆ ಇಂತಹ ಶಕ್ತಿ ಹಾಗೂ ಪ್ರಜಾಭಿಪ್ರಾಯವನ್ನು ಕಳೆದುಕೊಂಡಿದೆ ಎನ್ನುವ ಸಂಶಯ ನನ್ನಲ್ಲಿಲ್ಲ. ಇದರ ಬಗ್ಗೆ ನನ್ನ ಅಭಿಪ್ರಾಯ ಸ್ಪಷ್ಟವಾಗಿದೆ ಎಂದು ಇಲ್ಲಿ ಹೇಳಬಯಸುತ್ತೇನೆ. ಈ ವಿಷಯವಾಗಿ ಇದನ್ನು ಪುನಃ ಪ್ರತಿಪಾದಿಸಬೇಕಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಇವೊತ್ತು ಇಲ್ಲಿ ಚರ್ಚೆಯಾಗುತ್ತಿರುವ ವೇಳೆಯಲ್ಲಿ ಯಾವುದಾದರೂ ಮಹತ್ತರವಾದ ಕಾರಣಗಳನ್ನು ಹೇಳಿದ್ದಾರೆಯೇ ಎಂದರೆ ಯಾವುದೂ ಇಲ್ಲ. ಅಂತಹ ಮಾರ್ಗವನ್ನೇನಾದರೂ ಹೇಳಿದ್ದರೆ ಅದನ್ನಾದರೂ ಅನುಸರಿಸಬಹುದು. ಹಿಂದೆ ಯಾವುದಾದರೂ ಮಾರ್ಗವನ್ನು ಎಲ್ಲಿಯಾದರೂ ಅನುಸರಿಸಿದ್ದಾರೆಯೇ ಎನ್ನುವುದರ ಬಗೆಗೂ ನಾನು ಓದಿ ನೋಡಿದ್ದೇನೆ ಮತ್ತು ಕೇಳಿದ್ದೇನೆ. ಯಾವುದಾದರೂ ಪರ್ಸನಲ್ ಲಾ ಎಂದು ಅದನ್ನು ಜಾರಿಗೆ ತರಲು ಅದರ ಸಂಬಂಧಪಟ್ಟ ಕಾನೂನನ್ನು ತಂದಂತಹ ವೇಳೆಯಲ್ಲಿ ಸೇರಿದ ಜನರಲ್ಲಿ ಏನಾದರೂ ಭಿನ್ನಾಭಿಪ್ರಾಯ ಬಂದು ಆ ವಿಚಾರದಲ್ಲಿ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಯುವುದಕ್ಕಾಗಿ ಅಂತಹ ಮಸೂದೆಯನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಕಳುಹಿಸಿದ್ದುದು ಉಂಟು. ಇತ್ತೀಚೆಗೆ ಅಂತಹ ಮಾರ್ಗವನ್ನು ಅನುಸರಿಸಿದಂತೆ ನಾನು ಎಲ್ಲೂ ಕೇಳಿಲ್ಲ. ಈ ಒಂದು ಕಾರಣ ಇದರಲ್ಲಿ ಸ್ಪಷ್ಟ ವಾಗಿಲ್ಲ. ಸಾರ್ವಜನಿಕ ಅಭಿಪ್ರಾಯಕ್ಕೆ ಕಳುಹಿಸಿಕೊಡಬೇಕಾದುದಕ್ಕೆ ಇರುವಂತಹ ಕಾರಣ ಗಳೇನು ಎನ್ನುವುದನ್ನು ಇದರಲ್ಲಿ ಹೇಳಿಲ್ಲ.

Sri H. M. CHANNABASAPPA.—If the Hon. Minister yields, I wish to say a few words. I am very happy, the Minister always yields.

I made it very clear when this Bill came once before this House. And at that time, the Gevernment has advised the Governor not to give consent for consideration of this Bill in this House. So it was the considered opinion of the Government, that is, one section. It is the considered opinion of the Government that this Bill is not necessary in this country and, therefore, no permission need be give by the Governor for consideration of this Bill in the House. When a section, that is the Government, is opposing the very consideration of this Bill and its principles, then it was felt : let it go for public opinion and let the public judge the conduct of the Ministry, for having advised the Governor not to give permission for moving this Bill. It is with that object that this has been referred to public opinion.

Sri K. H. PATIL.—In addition to that, there is also the conduct of the public workers. Therefore, it is better those persons who are interested in this Bill or not interested, put forth their grievances. It is quite essential to send it for public opinion.

Sri H. M. CHANNABASAPPA.—It is not correct for the Hon. Minister to say that no case was made out. The Hon. Minister may kindly go through the records of the proceedings.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮೀ, ಈಗ ಪ್ರಯತ್ನ ಮಾಡುತ್ತಿದ್ದಾರೆ. ನಾವು ಕೆಲವು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಈ ಮಾನ್ಯ ಸಭೆಗೆ ಈ ರಾಜ್ಯದಲ್ಲಿರತಕ್ಕ ಜನರ ಅಭಿಪ್ರಾಯಗಳನ್ನು ಪ್ರತಿಬಿಂಬಿಸತಕ್ಕ ಶಕ್ತಿ ಇದೆ. ಇತ್ತೀಚಿನ ಕಾಲದಲ್ಲೂ ಕೂಡ ಅನೇಕ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಿದ್ದೇವೆ. ಯಾವುದೇ ಒಂದು ವಿಚಾರದಲ್ಲಾದರೂ ಸರ್ವಾನುಮತದ ಅಭಿಪ್ರಾಯಕ್ಕೆ ಬರಲಿಕ್ಕೆ ಆಗಲಿಲ್ಲ. ಇವೊತ್ತು ಇಲ್ಲಿ ಬಂದಿರುವ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ಗಳ ಬಗ್ಗೆ ಚರ್ಚೆ ನಡೆದು ಅದನ್ನು ಓಟಿಗೆ ಹಾಕಿದಾಗ ನಾವು 'ಏಸ್ ಎಂದರೆ ಆ ಪಕ್ಷದವರು ನೋ' ಎಂದು ಹೇಳುತ್ತಾರೆ. ಯಾವುದನ್ನು ನಾವು ಒಪ್ಪುತ್ತೇವೋ ಅದನ್ನು ವಿರೋಧ ಪಕ್ಷದಲ್ಲಿದ್ದೇವೆ ಎಂದು ಅವರು ವಿರೋಧಿಸುತ್ತಾರೆ. ಅವರೂ ಕೂಡ ಪ್ರಜೆಗಳ ಅಭಿಪ್ರಾಯಗಳನ್ನು ಇಲ್ಲಿ ಪ್ರತಿನಿಧಿಸಲು ಬಂದಿದ್ದಾರೆ ಅವರು ಅಭಿಪ್ರಾಯಗಳನ್ನು ತಿಳಿಸುತ್ತಾರೆ. ನಾವು ನಮ್ಮ ದೃಷ್ಟಿಯಲ್ಲಿ ನಮ್ಮ ಅಭಿಪ್ರಾಯಗಳನ್ನೂ ಪ್ರತಿನಿಧಿಸುತ್ತಲಿದ್ದೇವೆ. ಅವರು ಹೇಳಿದಂತೆ ಎಲ್ಲ ಅಭಿಪ್ರಾಯಗಳನ್ನೂ ನಾವು ಒಪ್ಪಿಕೊಳ್ಳುತ್ತಾ ಹೋದರೆ ನಾಳೆಯಿಂದ ನಾವು ಯಾವ ಕಾರ್ಯವನ್ನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ.—ಸುಮ್ಮನೆ ತಾವೇನೋ ಇಲ್ಲಿ ಒಂದು ಕೇಸು ಮಾಡಲು ಹೊರಟ್ಟಿದ್ದೀರಿ. ಇದು ಒಂದು ಸವಾಲು ಎಂದಾದರೂ ಒಪ್ಪಿಕೊಳ್ಳಿ.

ಶ್ರೀ ಎಸ್. ಶಿವಪ್ಪ.—ಒಪ್ಪಿಕೊಂಡರೆ ಇಲ್ಲದ ತಕರಾರುಗಳು ಬರುತ್ತವೆ. ಅವರೇನೋ ಒಪ್ಪುತ್ತಾರೆ.

(ನಗು)

ಶ್ರೀ ಕೆ. ಪುಟ್ಟಸ್ವಾಮಿ.—ಈ ರಾಜ್ಯದಲ್ಲಿ ಆಡಳಿತ ನಡೆಸುವಾಗ ನಾವು ಮಾಡತಕ್ಕಂಥ ಕಾರ್ಯಗಳನ್ನು ಅವರು ಬೇರೆ ದೃಷ್ಟಿಯಿಂದ ನೋಡದೆ ತುಲನಾತ್ಮಕ ದೃಷ್ಟಿಯಿಂದ ನೋಡುವುದು ಯಾವತ್ತೂ ಒಳ್ಳೆಯದು. ಆದರೆ ಅದರ ಮೇಲೆ ಟೀಕೆ ಟಿಪ್ಪಣಿಗಳು ಮಾಡಬೇಕು. ಅದನ್ನು ಮಾಡತಕ್ಕಂಥವರೇ ಶ್ರೀಮಾನ್ ಸಿದ್ದವೀರಪ್ಪನವರು. ನಮ್ಮ ಕೈಯಲ್ಲಿ ಆ ಕೆಲಸ ಮಾಡುವುದಕ್ಕಾಗುವುದಿಲ್ಲ. ಇದು ಮುಂದಿನ ಹಂತಕ್ಕೆ ಹೋಗುವುದಕ್ಕೆ ಸಾಧ್ಯವೇ ? ತನಗೆ ತಿಳಿದಂತೆ ಪುನಃ ಮುಂದಿನ ಹಂತದಲ್ಲಿ ಚರ್ಚೆ ನಡೆಯಬೇಕಾದರೆ ಇದಕ್ಕೆ ರಾಜ್ಯಪಾಲರ ಅನುಮತಿ ಅತ್ಯವಶ್ಯಕ. ಅವರ ಅನುಮತಿ ಇಲ್ಲದಿದ್ದರೆ ಅದನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಈಗ ಅದಕ್ಕೆ ಉತ್ತರ ಹೇಳಬೇಕು. ಸರ್ಕಾರ ಮತ್ತು ನಾವು ರಾಜ್ಯಪಾಲರಿಗೆ ಸಲಹೆ ಮಾಡುತ್ತೇವೆ. ನಮ್ಮ ಸಲಹೆ ಮೇಲೆ ಅವರು ಹೇಳುತ್ತಾರೆ. ಕೊನೆಗೆ ಆಖೈರು ಜವಾಬ್ದಾರಿ ನಮ್ಮದೇ. ಇದು ರಾಜ್ಯಾಂಗದಲ್ಲಿ ಅನುಸರಿಸುವ ಪದ್ಧತಿ ನಾವು ಸರ್ಕಾರವನ್ನು ನಡೆಸಿದರೂ ಶ್ರೀಮಾನ್ ಸಿದ್ದವೀರಪ್ಪ ಮತ್ತು ಶ್ರೀಮಾನ್ ಚೆನ್ನಬಸಪ್ಪನವರಿಗೆ ತಿಳಿಸದೆ ಯಾವುದನ್ನೂ ಬಚ್ಚಿಟ್ಟುಕೊಂಡು ನಡೆಸುವುದಕ್ಕಾಗುವುದಿಲ್ಲ. ಈ ಮೂಲಭೂತ ತತ್ವವನ್ನು ಅಲಕ್ಷಿಸಿದರೆ ಆಡಳಿತ ನಡೆಸುವುದಕ್ಕಾಗುವುದಿಲ್ಲ ಈ ಒಂದು ತತ್ವವನ್ನು ನಾವು ಒಪ್ಪಿಕೊಳ್ಳಬೇಕು. ಈ ಮಸೂದೆಯನ್ನು ಗವರ್ನರ್ ಸಹ ಪರಿಶೀಲನೆ ಮಾಡಿದ್ದಾರೆ. ಪರಿಶೀಲನೆ ಮಾಡಿ ಆಗಸ್ಟ್ 30, 1968ರಲ್ಲಿ ಈ ಮಸೂದೆಯನ್ನು ತಂದಿರತಕ್ಕಂಥ ಶ್ರೀಮಾನ್ ಹೆಚ್. ಎನ್. ನಂಜೇಗೌಡರಿಗೆ ಒಂದು ಕಾಗದವನ್ನು ಬರೆದು "I am directed to state that the Governor has declined to grant the recommendation for the consideration of this Bill." ಎಂದು ಹೇಳಿದ್ದಾರೆ. ಅದಕ್ಕೆ ಪೂರ್ವಭಾವಿಯಾಗಿಯೇ ಶ್ರೀಮಾನ್ ಶ್ರೀಕಂಠಯ್ಯನವರು ಹೇಳಬೇಕಾದಂಥಾದ್ದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಎಷ್ಟಾದರೂ ಕಾಲೇಜಿನಲ್ಲಿ ಪಾಠ ಹೇಳಿದಂಥಾವರು. ಅವರು ಈ ವಿಷಯ ಕೇಳಬೇಕಾದ್ದು ಸರಿ, ಕೇಳಿದರು. ಅವರ ಉದ್ದೇಶ ಇದು ಮುಂದೆ ಕನ್ಸಿಡರೇಷನ್‌ಗೆ ಬರಬೇಕು. ಒಂದು ವೇಳೆ ಇದು ಕನ್ಸಿಡರೇಷನ್ನಿಗೆ ಬರದೇ ಹೋದರೆ ಏನು ಮಾಡಬೇಕೆಂದು ಕೇಳಿದ್ದಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ಸರ್ಕಾರದವರು ಗವರ್ನರಿಗೆ ಈ ವಿಚಾರದಲ್ಲಿ ಏನು ಅಡ್ವೈಸ್ ಕೊಟ್ಟರು ಎನ್ನುವುದನ್ನು ಹೇಳಿದರೆ ಸಾಕು.

ಅಧ್ಯಕ್ಷರು.—ಅದನ್ನು ಹೇಳುವುದಕ್ಕಾಗುವುದಿಲ್ಲ.

Sri H. SIDDAVEERAPPA.—In other words you are not agreeable. Why did not the Governor give consent? What advice you gave to the Governor. Constitutionally the Government advises and the Governor agrees. That means, if you had agreed, the Governor would have been very glad to give his consent. What were the compelling reasons for you not to advise the Governor to give consent?

Sri L. SRIKANTIAH.—I disagree with the hon'ble Sri Siddaveerappa. What advice was tendered by the Government to the Governor is strictly confidential.

Sri H. SIDDAVEERAPPA.—Not that I am unaware of it. I want to know whether they have tendered any advice to the Governor. Then the logical deduction will follow.

ಶ್ರೀ ಕೆ. ಪುಟ್ಟಸ್ವಾಮಿ.—ನಮಗೇ ಆಗಲಿ, ನಿಮಗೆ ಆಗಲಿ ಇಂತಹ ಕೆಲಸ ಕಾರ್ಯಗಳಲ್ಲಿ ಅಸಮಾಧಾನ ಇರುವುದು ಸ್ವಾಭಾವಿಕ. ನಮ್ಮ ಕೈಯಿಂದ ಏನೂ ಮಾಡುವುದಕ್ಕಾಗುವುದಿಲ್ಲ. ಮಂತ್ರಿಮಂಡಲದ ಸಿಬ್ಬಂದಿ ಖರ್ಚಿಗೆ ಸಭೆಯ ಮುಂದೆ ಇಡುತ್ತೇವೆ. ಈಗ ನಿಮ್ಮನ್ನು ಸಮಾಧಾನ ಮಾಡಿ ಒಪ್ಪಿಸಿ ಮುಂದುವರಿಯಬೇಕು. ರಾಜ್ಯಾಂಗದ ಕ್ರಮವನ್ನು ಅನುಸರಿಸಿ ರಾಜ್ಯಪಾಲರ ಅನುಮತಿಯನ್ನು ಕೇಳಿ ಅವರು ಅನುಮತಿ ನಿರಾಕರಿಸಿದ ಮೇಲೆ ಇದು ಸಾರ್ವಜನಿಕರ ಅಭಿಪ್ರಾಯಕ್ಕೆ ಕಳುಹಿಸುದುವು ಏತಕ್ಕೆ?

ಮೊದಲನೆಯದಾಗಿ ಈ ಮಸೂದೆ ತರಬೇಕಾದ ಕಾರಣಗಳನ್ನು ಇದುವರೆಗೆ ಸರಿಯಾಗಿ ಸ್ಪಷ್ಟೀಕರಿಸಿಲ್ಲ.

Sri H. SIDDAVEERAPPA.—Do you agree with the principles of the Bill?

ಶ್ರೀ ಕೆ. ಪುಟ್ಟಸ್ವಾಮಿ.—ಎರಡನೆಯದು ಈ ಮಸೂದೆಯನ್ನು ಸಾರ್ವಜನಿಕರ ಅಭಿಪ್ರಾಯ ಯಾವ ಕಾರಣಕ್ಕಾಗಿ ಕಳುಹಿಸಬೇಕು ಎಂದು ಹೇಳಲಿಲ್ಲ. ಮೂರನೆಯದು ಸಾರ್ವಜನಿಕರ ಅಭಿಪ್ರಾಯ ಬಂದಮೇಲಾದರೂ ಕೂಡ ಈ ಮಸೂದೆಯನ್ನು ಮುಂದುವರಿಸುವುದಕ್ಕೆ ಅವಕಾಶವಿಲ್ಲ. ಈ ಕಾರಣಗಳು ಇರುವುದರಿಂದ ಈ ಮಸೂದೆಯನ್ನು ಈ ಸಭೆ ಅನಿವಾರ್ಯವಾಗಿ ತಿರಸ್ಕರಿಸಬೇಕಾಗುತ್ತದೆ. ಈ ಕಾರಣಗಳಿಗಾಗಿ ಈ ಮಸೂದೆಯನ್ನು ತಿರಸ್ಕರಿಸಬೇಕು ಎಂದು ಹೇಳುತ್ತೇನೆ.

† ಶ್ರೀ ಹೆಚ್. ಎನ್. ನಂಜೇಗೌಡ.—ಮಾನ್ಯ ಸಭಾಪತಿಯವರೇ, ಪ್ರಾಮುಖ್ಯವಾಗಿ ಶ್ರೀಮಾನ್ ಡಿ. ದೇವರಾಜ್ ಅರಸ್‌ರವರು ವಿಜಿಲೆನ್ಸ್ ಕಮೀಷನ್ ಬಗ್ಗೆ ಪ್ರಸ್ತಾಪ ಮಾಡಿದರು. ಅಂದರೆ ಸಾರ್ವಜನಿಕರಿಂದ ಬರುವಂಥ ದೂರುಗಳು ಅನ್ಯಾಯವಾಗಿ ಇರುವುದಿಲ್ಲ ಎಂದು. ಶ್ರೀಮಾನ್ ಅರಕೆರೆಯವರೂ ಕೂಡ ಹೇಳಿದರು. ಅಡ್ಮಿನಿಸ್ಟ್ರೇಟೀವ್ ಕಮಿಟಿಯವರು ಈ ಬಿಲ್ಲನ್ನು ಸಂಪೂರ್ಣವಾಗಿ ಪರ್ಯಾಲೋಚಿಸಿ ಅವರು ಲೋಕಪಾಲ್ ನೇಮಿಸಬೇಕೆಂದೂ ವಿಜಿಲೆನ್ಸ್ ಕಮೀಷನ್‌ರವರು ಸಾರ್ವಜನಿಕ ವ್ಯಕ್ತಿಗಳ ಬಗ್ಗೆ ವಿಚಾರಣೆ ಮಾಡುವುದು ಸರಿಯಲ್ಲವೆಂದೂ ಹೇಳಿದರು. ಶ್ರೀಮಾನ್ ದೇವೇಗೌಡರೂ ಕೂಡ ನಮ್ಮ ತತ್ವಗಳನ್ನು ಒಪ್ಪಿಕೊಂಡು ಇಂಥಾದ್ದು ಅವಶ್ಯಕ ಎಂದು ಒಪ್ಪಿದ್ದಾರೆ. ನಾನು ಕೊಟ್ಟಿರತಕ್ಕಂಥ ಬಿಲ್ಲಿನಲ್ಲಿ ಸೆಕ್ಷನ್ 22ರಲ್ಲಿ ಸಬ್ ಸೆಕ್ಷನ್ 2 ಮತ್ತು 3ರಲ್ಲಿ ತಪ್ಪು ದೂರುಗಳನ್ನು ವ್ಯಕ್ತಿಗಳು ಕೊಟ್ಟರೆ ಪ್ರಾಸಿಕ್ಯೂಟ್ ಮಾಡುವುದಕ್ಕೆ ಅವಕಾಶ ಇದೆ. ಸಬ್ ಸೆಕ್ಷನ್ 2ರ ಪ್ರಕಾರ ದೂರುಗಳನ್ನು ಕೊಟ್ಟಿರತಕ್ಕಂಥ ಕಾಲದಲ್ಲೂ ಪ್ರಾಸಿಕ್ಯೂಟ್ ಮಾಡಬಹುದು. ಈ ಎರಡರಲ್ಲೂ ಶಿಕ್ಷೆ ಕೊಡುವ ಅಧಿಕಾರ ಇದೆ ಮತ್ತು ಸೆಕ್ಷನ್ 26 ಸಬ್‌ಸೆಕ್ಷನ್ (2) ರಲ್ಲಿ ಡಿಪಾಸಿಟ್ ಪರ್‌ಫೀಟ್ ಮಾಡುವ ಅವಕಾಶ ಇದೆ. ಈ ವಿಚಾರವಾಗಿ ನಾನು ಮೊದಲೇ ಹೇಳಿದ್ದೇನೆ. ಇದನ್ನು ಏತಕ್ಕೆ ತಂದಿರಿ ಎಂದು ಅವರು ಕೇಳುತ್ತಾರೆ. ನಾನು ಅದನ್ನು ತಿಳಿದಂಥ ನಿಮ್ಮಂಥ ಹಿರಿಯವರಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆದುದರಿಂದ ಈ ಬಿಲ್ಲನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಸರ್ಕ್ಯುಲೇಟ್ ಮಾಡಬೇಕು ಎಂದು ಹೇಳುತ್ತೇನೆ.

ನಿಮ್ಮಂಥ ಹಿರಿಯರು ಹೇಳಿದ್ದನ್ನು ಕೇಳಿದ್ದೇನೆ. ರಾಜ್ಯಪಾಲರು ಒಂದು ಸಾರಿ ರೆಕಮೆಂಡೇಷನ್ ಕೊಡುವುದಿಲ್ಲ ಎಂದು ಎಂಡಾರ್ಸ್‌ಮೆಂಟ್ ಕೊಟ್ಟ ಮಾತ್ರಕ್ಕೆ ಇನ್ನೊಂದು ಸಾರಿ ಕೊಡಬಾರದು ಎಂದು ಎಲ್ಲಿಯೂ ಹೇಳಿಲ್ಲ.

ಪ್ರಜಾಪ್ರಭುತ್ವದಲ್ಲಿ ಒಪ್ಪಿರತಕ್ಕ ತತ್ವವೇನೆಂದರೆ, ರಾಜ್ಯಪಾಲರು ಸರ್ಕಾರದ ಅಡ್ವೈಸ್ ಮೇಲೆ ತೀರ್ಮಾನ ಕೊಡುತ್ತಾರೆ. ಸಾರ್ವಜನಿಕ ಅಭಿಪ್ರಾಯ ಆಗಬಹುದು ಎಂದು ಬಂದ ಮೇಲೆ ಸರ್ಕಾರ ಕಣ್ಣು ತೆರೆದು, ಸರ್ಕಾರದವರು ರಾಜ್ಯಪಾಲರಿಗೆ ರೆಕಮೆಂಡೇಷನ್ ಕೊಡಿರಿ ಎಂದು ಹೇಳತಕ್ಕ ಅವಕಾಶ ಕೂಡ ಬರುತ್ತದೆ. ಸರ್ಕಾರದವರು ಕೂಡ ತಮ್ಮ ತೀರ್ಮಾನವನ್ನು ಬದಲಾಯಿಸಬಾರದು ಎಂದಿಲ್ಲ.

Sri K. PUTTASWAMY.—My case is we represent public opinion very effectively.

Sri H. N. NANJE GOWDA.—There are so many instar.ces where you have changed your opinion on public pressure.

ಆದುದರಿಂದ ಇದೂ ಕೂಡ ಸತ್ಯಕ್ಕೆ ದೂರವಾದ ಸಂಗತಿಯಲ್ಲ.

ಹೊಸಬರು ಮುಖ್ಯಮಂತ್ರಿಯಾಗಿದ್ದಾರೆ. ಅವರು ಪ್ರಾಮಾಣಿಕ ಪ್ರಯತ್ನ ಮಾಡತಕ್ಕದ್ದು ನಮಗೆ ಅರಿವಾಯಿತು. ಗುಣಕ್ಕೆ ಮತ್ಸರ ಪಡುವುದು ಬೇಕಾಗಿಲ್ಲ. ಪ್ರಾಮಾಣಿಕವಾಗಿ ಕೆಲವು ಪ್ರಯತ್ನಗಳನ್ನು ಮಾಡುತ್ತಾರೆ. ಅವರಿಗೆ ಮಸಿ ಬಳಿಯುವಂಥ ಕೆಲಸವನ್ನು ನಾವು ಮಾಡುತ್ತಿಲ್ಲ. ಅದಕ್ಕೆ ಅವಕಾಶ ಕೊಡದಂಥ ರೀತಿಯಲ್ಲಿ ಅವರು ಸ್ವಚ್ಛವಾದ, ಪರಿಪುಷ್ಟವಾದ ಆಡಳಿತ ಪದ್ಧತಿಯನ್ನು ಅವರು ಒಳ್ಳೆಯ ಆಡಳಿತವನ್ನು ಜನತೆಗೆ ನೀಡುತ್ತಾರೆ ಎನ್ನುವ ನಂಬಿಕೆ ಕೂಡ ಮನಸ್ಸಿನಲ್ಲಿದೆ. ಆದುದರಿಂದ ಇದನ್ನು ತಂದಿದ್ದೇನೆ.

ಕಮಿಷನ್ ಆಫ್ ಎನ್‌ಕ್ವೈರಿ ಆಕ್ಟ್ ಇದೆ. ಕಮಿಷನ್ ನೇಮಕ ಮಾಡಬೇಕಾದರೆ, "The appropriate Government may, if it is of opinion..."

Sri K. PUTTASWAMY.—I do not want to interrupt the hon'ble Member. He is free to say whatever he want to say, but etiquette of debate demands that he should have stated all points earlier. The right of reply is given only to meet the points that I have raised. If he wants to mention new points I have no objection. He can do that.

Sri K. H. PATIL.—It is the duty of the mover to give an outline of the Bill in the first instance and at the end of the debate while replying he will have to meet all the pointsand substantiate his motion.

ಶ್ರೀ ಎಚ್. ಎನ್. ನಂಜೇಗೌಡ.—ಸಾರ್ವಜನಿಕ ಅಭಿಪ್ರಾಯವನ್ನು ಪಡೆಯುವುದಕ್ಕೆ ಈ ಬಿಲ್ಲನ್ನು ಕಳಿಸಬೇಕು ಎಂದು ನಾನು ತಿಳಿಸಿದ್ದೇನೆ. ಸಾರ್ವಜನಿಕರಲ್ಲಿ ಒಂದು ಅಭಿಪ್ರಾಯ ಬರಬಹುದು, ಕಮಿಷನ್ ಆಫ್ ಎನ್‌ಕ್ವೈರಿ ಆಕ್ಟ್ ಇದೆ, ವಿಜಿಲೆನ್ಸ್ ಕಮಿಷನ್ ಇದೆ, ಲೋಕಪಾಲರನ್ನು ನೇಮಕ ಮಾಡುವ ಆಕ್ಟ್ ಇದೆ. ಇಷ್ಟೆಲ್ಲ ಇರುವಾಗ ಈ ಕಾನೂನು ಏಕೆ ಬೇಕು ಎನ್ನುವ ಅನುಮಾನ ಬರಬಹುದು. ಅವರ ಶಂಕೆಯನ್ನು ಅನುಮಾನವನ್ನು ದೂರ ಮಾಡುವುದಕ್ಕೆ ನಾನು ಎರಡು ಮಾತು ಹೇಳಬೇಕಾಗುತ್ತದೆ. ಕಮಿಷನ್ ಆಫ್ ಎನ್‌ಕ್ವೈರಿ ಆಕ್ಟ್‌ನಲ್ಲಿ ಏನಿದೆ ಎಂದರೆ, ಕಮಿಷನ್ ನೇಮಕ ಮಾಡಬೇಕಾದರೆ ಸೆಕ್ಷನ್ ಮೂರರಲ್ಲಿ ಹೀಗೆ ಹೇಳಿದ್ದಾರೆ :

Section 3 of the Commission of Enquiry Act :

> "The appropriate Government may, if it is of opinion that it is necessary so to do..."

ಎಂದರೆ ಸರ್ಕಾರಕ್ಕೆ ಅಪೇಕ್ಷೆ ಬಂದರೆ ಅವರು ಇದನ್ನು ಮಾಡಬಹುದು, ಇಲ್ಲದೆ ಇದ್ದರೆ ಬಿಡಬಹುದು. ಒಂದು ಅನುಮಾನ ಮಾತ್ರ ಉಳಿದುಕೊಳ್ಳುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ಈ ಅನುಮಾನ ಭಾರಿ ಪ್ರಾಮುಖ್ಯವಾದುದು. ಯಜಮಾನನಾದವನು ಬೇರೆಯವರ ಮೇಲೆ ದೂರು ಬಂದಾಗ ವಿಚಾರಣೆ ಮಾಡುತ್ತಾನೆ. ಯಜಮಾನ ಆದವನು ತಪ್ಪು ಮಾಡಿದ ಸಂದರ್ಭದಲ್ಲಿ ಏನು ಮಾಡಬೇಕು ? ಶ್ರೀರಾಮಚಂದ್ರನ ಚರಿತ್ರೆಯಲ್ಲಿ ಹೇಳುತ್ತಾರೆ, ಒಬ್ಬ ಅಗಸ ಏನೋ ಒಂದು ಸಣ್ಣ ಅನುಮಾನಪಟ್ಟ ಕಾರಣಕ್ಕಾಗಿ ಶ್ರೀರಾಮನು ತನ್ನ ಹೆಂಡತಿಯಾದ ಸೀತೆಯನ್ನು ಕಾಡಿಗೆ ಕೊಡುತ್ತಾನೆ. ಈ ಕಾಲದಲ್ಲಿ ಎಲ್ಲರೂ ಶ್ರೀರಾಮಚಂದ್ರರು, ಹರಿಶ್ಚಂದ್ರರಾಗಿ ಇರುವುದು ಕಷ್ಟ. I wish they become Ramas and Harischandras ಆದ್ದರಿಂದ ಅಂಥವರ ಮೇಲೆ ದೂರು ಬಂದರೆ ಏನು ಮಾಡುವುದು !

(ಶ್ರೀ ಹೆಚ್. ಎನ್. ನಂಜೇಗೌಡ)

ಲೋಕಪಾಲರ ನೇಮಕದ ಸಂಬಂಧದಲ್ಲಿ ಏನು ಹೇಳಿದ್ದಾರೆ ಎಂದರೆ :

"The President shall on the advice of the Prime Minister appoint a person..."

ಯಾರನ್ನು ನೇಮಕ ಮಾಡಬೇಕು ಎಂದು ಹೇಳಿಲ್ಲ. ಈ ಎರಡು ಲೋಪಗಳಿವೆ. ನಾನು ಹೇಳಿರುವುದರಲ್ಲಿ ಕಮಿಷನ್ ನೇಮಕ ಮಾಡುವುದರ ವಿಧಾನವನ್ನು ಸೂಚಿಸಿದ್ದೇನೆ. ಅದು ಈ ರೀತಿ ಇದೆ :

"17. Constitution of Commssion—(1) The Governor shall, as soon as he receives a report under section 16, refer it to a Commission of Inquiry consisting of one or more members, as the Governor may think fit, nominated as hereinafter provided.

On a request in this behalf being made by the Governor, the Chief Justice shall nominate the member or members of the Commission as follows"

ಮಂತ್ರಿಗಳ ಮೇಲೆ ಅಥವ ಇತರರ ಮೇಲೆ ಅಪಾದನೆ ಬಂದರೆ ಹೈಕೋರ್ಟ್ ನ್ಯಾಯಾಧೀಶರನ್ನೂ, ವಿಧಾನ ಮಂಡಲದ ಸದಸ್ಯರು, ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು, ಮುನಿಸಿಪಲ್ ಪ್ರೆಸಿಡೆಂಟರು ಇಂಥವರ ಮೇಲೆ ಆಪಾದನೆ ಬಂದರೆ ಡಿಸ್ಟ್ರಿಕ್ಟ್ ಜಡ್ಜ್ ಮಟ್ಟದ ನ್ಯಾಯಾಧೀಶರನ್ನೂ, ಚೀಫ್ ಜಸ್ಟಿಸ್ ಅದವರು ನಾಮಿನೇಟ್ ಮಾಡಬಹುದು ಎಂದು ಸೂಚನೆ ಮಾಡಿದ್ದೇನೆ. ಹೀಗೆ ಮಾಡಿದರೆ ಇದರಲ್ಲಿ ಸರ್ಕಾರದ ಕೈವಾಡ ಇಲ್ಲ ಎಂದಾಯಿತು. ಆದುದರಿಂದ ಸರ್ಕಾರದವರೇ ಬೇಕಾದವರನ್ನು ನಾಮಕರಣ ಮಾಡಿದರೆ ಎನ್ನುವಂಥ ದೂರಿನಿಂದ ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಮಾಡಿದ್ದೇನೆ.

ಇಂಡಿಪೆಂಡೆಂಟಾಗಿ ಒಂದು ಇನ್‌ವೆಸ್ಟಿಗೇಷನ್ ಅಥಾರಿಟಿ ಇರಲು ಕಮಿಷನ್ ಆಫ್ ಎನ್‌ಕ್ವೈರಿ ಅಕ್ಟ್, ಲೋಕಪಾಲರ ನೇಮಕಕ್ಕೆ ಸಂಬಂಧಪಟ್ಟ ಅಕ್ಟ್ ಎಲ್ಲಿಯೂ ಸೂಚನೆ ಮಾಡಿಲ್ಲ. ಅದನ್ನು ಸೂಚನೆ ಮಾಡಿದ್ದೇನೆ. ಗವರ್ನರ್, ಪಬ್ಲಿಕ್ ಸರ್ವಿಸ್ ಕಮಿಷನ್ ಚೇರ್‌ಮನ್, ಮುಖ್ಯ ಮಂತ್ರಿ, ಮಂತ್ರಿ, ಸರ್ಕಾರ ಇವರು ಯಾರಿಗೂ ಏನೂ ಸಂಬಂಧವಿಲ್ಲ. ಸಂಪೂರ್ಣವಾಗಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಈ ಮಸೂದೆಯನ್ನು ನಾನು ತಂದಿದ್ದೇನೆ. ಸಾರ್ವಜನಿಕ ಅಭಿಪ್ರಾಯ ಬಂದ ನಂತರ ಸರ್ಕಾರದವರ ಮನ ಒಲಿಸಬಹುದು, ರಾಜ್ಯಪಾಲರ ಮನ ಒಲಿಸಬಹುದು, ಎನ್ನುವ ನಂಬಿಕೆ ನನಗೆ ಇದೆ. ಏಪ್ರಿಲ್ ಒಂದನೇ ತಾರೀಖಿನೊಳಗಾಗಿ ಸಾರ್ವಜನಿಕಾಭಿಪ್ರಾಯ ಪಡೆಯಲು ಇದನ್ನು ಕಳುಹಿಸಬೇಕು. ಮಾನ್ಯ ಮುಖ್ಯ ಮಂತ್ರಿಯವರು ಧೈರ್ಯವಾಗಿ ಕೆಲವು ಕ್ರಮಗಳನ್ನು ತೆಗೆದುಕೊಳ್ಳತಕ್ಕ ಧೀರರಾಗಿದ್ದಾರೆ, ಧೀರರು ಎನ್ನುವ ಹೆಸರನ್ನು ಉಳಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತ, ಅವರ ರಕ್ಷಣೆಗಾಗಿ ತಂದಿರತಕ್ಕ ಈ ಮಸೂದೆಯನ್ನು ಸಾರ್ವಜನಿಕಾಭಿಪ್ರಾಯಕ್ಕೆ ಕಳಿಸಲು ಸಭೆ ತನ್ನ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

6-30 P.M.

Mr. SPEAKER.—I will put the Motion to the House. The question is :

"That the Mysore Public Men Inquiries Bill, 1968, be circulated for eliciting public opinion thereon by 1st April 1969."

The House divided : Ayes 27 Noes 55

The motion was negatived

Half-an-Hour Discussion on Starred Question No. 166 Regarding Prohibition in the State

Mr. SPEAKER.—There is one more item in the agenda *i.e.* half an hour Discussion given notice by Sriyuths : M. M. Jalisatgi, H. N. Nanjegowda S. S. Arakeri, J. P. Sarwash, K. P. Nadagowda, A. Ramachandra, L. Srikantaiah, Vatal Nagaraj, T. V. Krishnappa, C. K. Rajaiah Shetty, Gangabovi and Jayaprakash Narayan. We will take it up now. Sri Jayaprakash Narayan shall Commence the Debate.

ಶ್ರೀ ಎಂ. ಎಚ್ ಜಯಪ್ರಕಾಶ ನಾರಾಯಣ್ (ಸಿರ್ಸಿ).—ಮಾನ್ಯ ಅಧ್ಯಕ್ಷರೇ, ಈ ಮನೆಯ ಮುಂದೆ ಬಂದ ಪ್ರಶ್ನೋತ್ತರಗಳ ಎರಡನೆಯ ಪಟ್ಟಿಯಲ್ಲಿ ಪಾನನಿರೋಧದ ಬಗ್ಗೆ ಮಾನ್ಯ ಶ್ರೀಮತಿ ವಿನ್ನಿಫ್ರೆಡ್ ಎಫ್ ಫರ್ನಾಂಡೀಸ್‌ರವರು ತಂದಿದ್ದ ಪ್ರಶ್ನೆಗೆ ಹಣಕಾಸಿನ ಮಂತ್ರಿಗಳು ಸಮರ್ಪಕವಾದ ಉತ್ತರ ಕೊಡದೇ ಇರುವ ಕಾರಣ ಈ ಪ್ರಶ್ನೆಯಮೇಲೆ ಅರ್ಧ ಘಂಟೆ ಚರ್ಚೆ ಮಾಡುವುದಕ್ಕೆ ಮನವಿಮಾಡಿದಮೇಲೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ. ನಾಥೂರಾಂ ಗೋಡ್ಸೆ ಮಹಾತ್ಮಗಾಂಧೀಜಿಯವರನ್ನು ಕೊಂದಂತೆ ಈ ಕಾಂಗ್ರೆಸ್ ಸರಕಾರ ಗಾಂಧಿಯ ಆದರ್ಶ ತತ್ವಗಳನ್ನು ಕೊಲೆಮಾಡಿದೆ, ಪಾನನಿರೋಧದ ನೀತಿಯಲ್ಲಿ ಈ ಸರಕಾರ ದೋಷಪೂರಿತವಾದ ನೀತಿಯನ್ನನುಸರಿಸಿದೆ. ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಗೋವಾ ಅಧಿವೇಶನದಲ್ಲಿ ಪಾನನಿರೋಧದ ಬಗ್ಗೆ ಒಂದು ಆದರ್ಶಪೂರ್ವಕವಾದ ನಿರ್ಧಾರವನ್ನು ತೆಗೆದುಕೊಂಡಿರುವಾಗ ಈ ಕಾಂಗ್ರೆಸ್ ಸರಕಾರ ಅದಕ್ಕೆ ತಲೆಬಾಗಲೇಬೇಕು. ಈ ಬಗ್ಗೆ ಖಚಿತವಾದ ಉತ್ತರವನ್ನು ಹಣಕಾಸಿನ ಮಂತ್ರಿಗಳು ಕೊಡಲಿಲ್ಲ. ನಮಗೆ ಒಂದು ವಿಧವಾದ ಭರವಸೆ ಕೊಡಬೇಕಾಗಿತ್ತು. ಆ ನಿರ್ಣಯವನ್ನು ಈ ಸರಕಾರ ಜಾರಿಗೆ ತರುತ್ತದೆಯೇ ಅಥವ ಪರಿಶೀಲಿಸುತ್ತದೆಯೇ ಅಥವ ಕೈಬಿಡುವುದೇ ಎಂಬ ಅಂಶವನ್ನು ಈ ಮಾನ್ಯ ಸಭೆಗೆ ಮಾನ್ಯ ಮಂತ್ರಿಗಳು ತಿಳಿಸಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ.

ಈ ಸಂದರ್ಭದಲ್ಲಿ ಹೆಚ್ಚು ಹೇಳದೆ ಕೇವಲ 5 ನಿಮಿಷಗಳಲ್ಲಿ ನನ್ನ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಹೇಳುತ್ತೇನೆ. 1938ರಲ್ಲಿ ಮೈಸೂರು ಸರಕಾರ ಪಾನನಿರೋಧವನ್ನು ಬೆಂಗಳೂರು ಜಿಲ್ಲೆಯ ರಾಮನಗರ ಮತ್ತು ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಆರಂಭಿಸಿ ನಂತರ ರಾಜ್ಯದ 16 ಜಿಲ್ಲೆಗಳಲ್ಲಿ ವಿಸ್ತರಿಸಿತು. ಆದರೆ 1968ರಲ್ಲಿ ಮಾನ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ಈ ಪಾನನಿರೋಧದ ಗಾಂಧಿ ತತ್ವವನ್ನು ಗಾಳಿಗೆ ತೂರಿದರು, ಕೇವಲ 10-11 ಕೋಟಿ ರೂಪಾಯಿಗಳ ಆದಾಯದ ಕಡೆಗೆ ಗಮನಕೊಟ್ಟು ಪಾನನಿರೋಧವನ್ನು ರಾಜ್ಯಾದ್ಯಂತ ಪಾನನಿರೋದವನ್ನು ಸಡಿಲಿಸಿದರು ಇದರಿಂದ ನಿರ್ಗತಿಕರು, ಕೂಲಿಗಾರರು ಹರಿಜನರು ನಾಶವಾಗಲು ಅವಕಾಶವಾಯಿತು. ಈ ಅನೀತಿಯನ್ನು ಬದಲಾಯಿಸಲೇಬೇಕು. ಮದ್ರಾಸ್‌ನಲ್ಲಿ ಈಗ ಡಿ.ಎಂ.ಕೆ. ಪಕ್ಷದ ಆಡಳಿತವಿದೆ. ಡಿ.ಎಂ.ಕೆ. ಸರಕಾರ ಪಾನನಿರೋಧವನ್ನು ಜಾರಿಗೆ ತಂದು ಮುಂದುವರಿಸಿರುವಾಗ ಈ ಕಾಂಗ್ರೆಸ್ ಸರಕಾರ ತನ್ನ ನೀತಿಯನ್ನು ಬದಲಾಯಿಸಿ ಪಾನನಿರೋಧವನ್ನು ಜಾರಿಗೆ ತರುವ ವಿಚಾರದಲ್ಲಿ ಯಾವುದಾದರೂ ಒಂದು ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳದಿರುವುದು ನಿಜವಾಗಿಯೂ ನಾಚಿಕೆಗೇಡು. ಅದರಲ್ಲೂ ರಾಷ್ಟ್ರಪಿತನ ಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಸುಸಂದರ್ಭದಲ್ಲಿ ಮಹಾತ್ಮ ಗಾಂಧಿಯವರ ತತ್ವವನ್ನು ಆದರ್ಶ ರೀತಿಯಲ್ಲಿ ಕಾರ್ಯರೂಪಕ್ಕೆ ತರಬೇಕಾದ್ದು ಅತ್ಯಗತ್ಯವಾಗಿದೆ. ಹಾಗೆ ಮಾಡಿ ಗಾಂಧೀಜಿಯವರ ಆತ್ಮಕ್ಕೆ ಶಾಂತಿಯಾಗುವಂತೆ ಒಂದು ಅಮೋಘವಾದ ಕಾಣಿಕೆಯನ್ನು ಈ ಸರ್ಕಾರ ಸಲ್ಲಿಸಬೇಕು ಗಾಂಧೀಜಿಯವರ ತತ್ವಗಳಿಗೆ ಬೆಲೆ ಕೊಡುವುದಾದರೆ, ಅವರ ಆದರ್ಶವನ್ನು ಪಾಲಿಸುವುದಾದರೆ ಪಾನನಿರೋಧವನ್ನು ಈ ವರ್ಷ ಗಾಂಧಿಯವರ ಶತಮಾನೋತ್ಸವದ ಸಂದರ್ಭದಲ್ಲಿ ಜಾರಿಗೆ ತಂದು ತಾರೀಖು 2-10-69 ರೊಳಗೆ ಈ ಬಗ್ಗೆ ಸರಿಯಾದ ಧೋರಣೆಯನ್ನು ಪ್ರಕಟಿಸಬೇಕು. 7 ವರ್ಷಗಳಲ್ಲಿ ಪಾನನಿರೋಧವನ್ನು ದೇಶಾದ್ಯಂತ ಈ ಸರ್ಕಾರ ಜಾರಿಗೆ ತರಬೇಕು. ಬಡವರ ಸುಧಾರಣೆಗೆ ಪಾನನಿರೋಧ ಸರಿಯಾದ ಸಾಧನವಾಗಿದೆ. ಅದನ್ನು ಜಾರಿಗೆ ತಂದು ಬಡವರ ಬಾಳು ಬೆಳಗುವಂತೆ ಮಾಡಬೇಕು. ಕುಡಿತವನ್ನು ಕಲಿತು ಸಾವಿರಾರು ಸಂಸಾರಗಳು ಹಾಳಾಗಿವೆ, ಅನೇಕರು ನಿರ್ಗತಿಕರಾಗಿದ್ದಾರೆ. ಕುಡುಕತನದಿಂದ ಮನುಷ್ಯತ್ವದ ನಿಜವಾದ ಸತ್ವ ನಾಶವಾಗವುದು. ದಲಿತವರ್ಗದವರಿಗೆ ಕುಡುಕತನ ಮನೆಮಾರಿ. ಅನಕ್ಷರತೆಯ ಸ್ಥಳದಲ್ಲಿ ಸಾಕ್ಷರತೆ ಬಿತ್ತಲು ಜ್ಞಾನಜ್ಯೋತಿ ಬೆಳಗಿಸಲು ಪಾನನಿರೋಧವನ್ನು ಜಾರಿಗೆ ತನ್ನಿ. ಪಾನನಿರೋಧ ನೈತಿಕ ಕ್ರಾಂತಿಯ ನೈಜಮಾರ್ಗ, ಭಾರತದ

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಸಂವಿಧಾನದ ನಿರ್ದೇಶನದಂತೆ ಸರ್ವಜನರ ಸೌಖ್ಯದ ದಾರಿ ತೋರಲು ಪಾನನಿರೋಧ ಜಾರಿಗೆ ತನ್ನಿ. ಕುಡುಕತನದಿಂದ ಮಾನಹಾನಿ, ಪ್ರಾಣಹಾನಿ, ಧನಹಾನಿ ಆಗುವ ಮದ್ಯಪಾನ ಕೂಡಲೇ ರದ್ದಾಗಲಿ, ಇಷ್ಟು ಹೇಳಿ ಮಹಾತ್ಮ ಗಾಂಧಿಯವರು 1942 ಪ್ರಾರ್ಥನಾ ಸಭೆಯೊಂದರಲ್ಲಿ ಹೇಳಿದ್ದನ್ನು ಇಲ್ಲಿ ಓದಿದ್ದೇನೆ. ಸರ್ವನಾಶವಾದೀತು ಎಂಬುದನ್ನು ಗಾಂಧೀಜಿಯವರು ಹೇಳಿರುವ ಒಂದು ಸಂದೇಶವನ್ನು ಈ ಸರ್ಕಾರದ ಗಮನಕ್ಕೆ ತರಲು ಓದುತ್ತೇನೆ :

Drink habit destroys the soul of man and tends to turn him into a beast incapable of distinguishing between wife, mother and sister.

The drink and the drug evil is in many respects worse than the evil caused by maleria and the like for while latter only injures the body, the former saps body and soul.

Only those women who have drunkards as their husbands know what havoc the drink evil work.

I would rather have India reduced to the state of pauperism than have thousands of drunkards in our midst.

I would rather have India without education if that is a price to be paid for making it dry.

I hold drink to be more damnable than thieving and perhaps even prostitution. It is not unoften the parent of both.''

ಶ್ರೀ ರಾಮಕೃಷ್ಣ ಹೆಗಡೆಯವರು ರಾಷ್ಟ್ರಪಿತನ ಈ ಸಂದೇಶದ ಮೂಲ ತತ್ವವನ್ನು ಅರಿತು ಈ ಅಂಶವನ್ನು ಮಾನ್ಯಮಂತ್ರಿಗಳು, ಈ ಕಾಂಗ್ರೆಸ್ ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಂಡು ಸುಖೀ ರಾಜ್ಯವನ್ನು ಸ್ಥಾಪನೆ ಮಾಡಬೇಕು ಸಮಾಜ ವಾದವನ್ನು ಜಾರಿಗೆ ತರಬೇಕೆಂದು ಅವರ ಮನಸ್ಸಿನಲ್ಲಿದ್ದರೆ ಅದನ್ನು ಕಾರ್ಯಗತ ಮಾಡಬೇಕಾದರೆ, ಹರಿಜನ ಉದ್ಧಾರವಾಗಬೇಕಾದರೆ, ಬಡವರ ಉದ್ಧಾರವಾಗಬೇಕಾದರೆ, ಕೂಲಿಗಾರರ ಉದ್ಧಾರವಾಗಬೇಕಾದರೆ, ಅನಕ್ಷರತೆ ನಾಶವಾಗಬೇಕಾದರೆ ಪಾನನಿರೋಧವನ್ನು ಜಾರಿಗೆ ತಂದು. ಮಹಾತ್ಮಾ ಗಾಂಧಿಯವರಿಗೆ ಈ ಆದರ್ಶ ಕಾಣಿಕೆಯನ್ನು ಅರ್ಪಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

Mr. DEPUTY SPEAKER.—I will allow the members to ask for some clarifications after it is answered.

Sri RAMAKRISHNA HEGDE.—Under the rules, there is no scope for longer time. The scope is very limited. 8-10 ಜನ ಮೆಂಬರುಗಳು ಸಹಿ ಹಾಕಿ ಕಳುಹಿಸಿದ್ದರೆ ಒಬ್ಬೊಬ್ಬರಿಗೆ 5 ನಿಮಿಷಕೊಟ್ಟರೂ ಮುಕ್ಕಾಲುಗಂಟೆ ಬೇಕಾಗುತ್ತದೆ. ಒಬ್ಬ ಸದಸ್ಯರು ಮಾತನಾಡಿದ್ದಾರೆ ನನಗೆ ತಿಳಿದಮಟ್ಟಿಗೆ ಉತ್ತರ ಕೊಡುತ್ತೇನೆ. ಎಕ್ಸೈಜ್ ಡಿಮ್ಯಾಂಡ್ ಬರುವ ತಿಂಗಳು ಬರುತ್ತದೆ ಆಗ ಉಳಿದ ಸದಸ್ಯರು ಮಾತನಾಡಲು ಬೇಕಾದಷ್ಟು ಸ್ಕೋಪ್ ಇರುತ್ತದೆ ಆಗ ಅವರು ಮಾತನಾಡಬಹುದು. ನಾನು ಮಾತನಾಡಿದ ಮೇಲೆ ಅವರುಗಳು ಏನಾದರೂ ಪ್ರಶ್ನೆ ಕೇಳುವುದಿದ್ದರೆ ಕೇಳಲಿ ಉತ್ತರ ಕೊಡುತ್ತೇನೆ.

Mr. DEPUTY SPEAKER.—It is not possible to give chances to all the hon. Members during half on hour Debate. It should be finished within half-an-hour.

Sri RAMAKRISHNA HEGDE.—The best course would be for any one to move a private resolution on that.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ನಾನು ಕೆಲವು ಅಂಶಗಳನ್ನು ಹೇಳಬೇಕೆಂದು ಇದ್ದೇನೆ. ಅದನ್ನು ತಿಳಿದುಕೊಂಡು ನಂತರ ಮಾನ್ಯ ಮಂತ್ರಿಗಳು ಉತ್ತರ ಕೊಡಬಹುದು. ದಯವಿಟ್ಟು ನನಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI K. PUTTASWAMY.—Rule 49 (4) clearly lays down the procedure. It reads as follows :

> "There shall be no formal motion before the Assembly nor voting. The member who has given notice may make a short statement and the Minister concerned shall reply briefly. Any member who has previously intimated to the Speaker may be permitted to ask a question for the purpose of further elucidating any matter of fact."

Therefore, the members who have taken the permission of the Chair may put questions after the Minister replies.

SRI RAMAKRISHNA HEGDE.—All the 12 members cannot be given chance to speak. Is it ever possible for all the 12 to participate within the time ?

SRI S. S. ARAKERI.—If I am not given a chance to speak, I will walk out as a protest.

(*At this stage Sri S. S. Arakeri withdrew*)

† SRI J. P. SARVESH.—Excepting Gulbarga and Raichur Districts, in other Districts, the prohibition is there. What is the Policy of the Government ? Have they fulfilled the dreams of Mahathmaji ? Instead of following the principles of Mahathmaji, they are scrapping the prohibition. The true follower of Mahathmaji is the only one Lady and that is Mrs. Dasappa. She has resigned her Ministership on this account. It is very unfortunate that B. Rachiah and Y. Ramakrishna who claim to be the well-wishers and guardians of Harijans and who claim that they are there for the betterment and progress of the Harijans, do not have the guts to resign. Now the poor Harijans are suffering a lot. Their economic conditions are becoming worse day by day on account of their drinking. Their health is being spoiled. You have no sympathy with them. You want to have more money at the cost of the health of these poor people. The toddy that is being sold is not a good one. Some illicit liquors are being sold. The licensed liquor will not be there in the Depot. It is very dangerous for health of the people who drink these illicit liquor which is poisonous. The Chief Minister says that he does not belive in socialism so long as the poverty is there. When that is his stand why did he arrange to auction the toddy shops ? Why don't you auction the big Hotels like Hotel International and all such other Bars ? Why do you want to auction the toddy shops ? You are ruining the poor Harijans and their children. You may get so many crores of ruppees. The money should not be the only consideration !

(SRI J. P. SARWESH)

On the one side you say that you want to develop the people and therefore you are introducing some economic programmes to improve their economic conditions, but on the other side you are killing poor people by allowing the contractors to sell the illicit liquor. I want to submit Sir, to scrap or remove prohibition completely throughout the State because that would help particularly the poor people.

† ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಅಧ್ಯಕ್ಷರೇ ನನಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು. ಈ ದಿವಸ ಸಮಾಜದಲ್ಲಿ ಹರಿಜನರ ಕೊಲೆಯಾಗಿದೆ; ಹರಿಜನರನ್ನು ಭ್ರಷ್ಟಾಚಾರಕ್ಕೆಳೆದಿದ್ದಾರೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಈಗ ಕುಳಿತುಕೊಳ್ಳಿ, ಸರ್ಕಾರದವರು ಈಗ ಉತ್ತರ ಕೊಡುತ್ತಾರೆ ಅದನ್ನು ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ನಾನು ಸಭೆಯಿಂದ ಎದ್ದು ಹೊರಗೆ ಹೋಗ ಬೇಕಾಗುತ್ತದೆ.........

ಉಪಾಧ್ಯಕ್ಷರು.—ಮಂತ್ರಿಗಳು ಉತ್ತರ ಕೊಟ್ಟಮೇಲೆ ಮಾನ್ಯ ಸದಸ್ಯರು ಒಂದೆರಡು ಪ್ರಶ್ನೆಗಳನ್ನ ಬೇಕಾದರೆ ಕೇಳಬಹುದು ಅದಕ್ಕೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನನಗೆ 3 ನಿಮಿಷ ಆದರೂ ಮಾತನಾಡುವುದಕ್ಕೆ ಅವಕಾಶ ತಾವು ಕೊಡಲೇಬೇಕು.........

Mr. DEPUTY SPEAKER.—I would adjourn the House exactly at 7-00 P.M. There are only eight minutes.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಈಗ ಪಾನನಿರೋಧದ ಬಗ್ಗೆ ಚರ್ಚೆಯನ್ನು ನಡೆಸಬೇಕಾಗಿದೆ. ಆದರೆ ಇದಕ್ಕೆ ನಿಗದಿ ಮಾಡಿರತಕ್ಕ ಅರ್ಧ ಗಂಟೆಯ ಕಾಲಾವಕಾಶ ಸಾಲದು.........

ಉಪಾಧ್ಯಕ್ಷರು.—ಅದಕ್ಕಾಗಿ ಮಾನ್ಯ ಸಚಿವರು ಈ ವಿಚಾರದಲ್ಲಿ ಒಂದು ನಿರ್ಣಯವನ್ನು ಚರ್ಚೆಗೆ ತನ್ನಿ ಎಂದು ಹೇಳಿದರಲ್ಲವೇ ?

ಶ್ರೀ ವಾಟಾಳ್ ನಾಗರಾಜ್.—ನಾವು ಸರ್ಕಾರಕ್ಕೆ ಈಗ ಒತ್ತಾಯ ಮಾಡುತ್ತಿರುವುದು ಏನೆಂದರೆ ಈ ಪಾನನಿರೋಧವನ್ನು ದೇಶಾದ್ಯಂತವೂ ಸಂಪೂರ್ಣವಾಗಿ ಜಾರಿಗೆ ತನ್ನಿ ಎಂದು ಹೇಳುತ್ತಿದ್ದೇವೆ. ಈ ದಿವಸ ಇದರಿಂದ ಯಾವ ವರ್ಗಕ್ಕೆ ಹೆಚ್ಚು ತೊಂದರೆ ಆಗಿದೆ ಎಂದರೆ ಆ ಮಹಾತ್ಮಾ ಗಾಂಧಿಯವರು ಯಾವ ಹರಿಜನರು ಎಂಬತಕ್ಕವರನ್ನು ಉದ್ಧಾರ ಮಾಡಬೇಕೆಂದು ಹೋರಾಟ ಮಾಡುತ್ತಿದ್ದರೋ ಅಂಥ ಜನಾಂಗಕ್ಕೆ ಹೆಂಡವನ್ನು ಕುಡಿಸುವುದಕ್ಕೆ ಅವಕಾಶ ಕೊಟ್ಟರೆ ಆ ಜನರು ಖಂಡಿತ ಉದ್ಧಾರವಾಗುವುದಿಲ್ಲ. ಇಲ್ಲಿ ಆ ಹರಿಜನರನ್ನು ಉದ್ಧಾರ ಮಾಡುತ್ತೇವೆಂದು ಕೆಲವು ಹರಿಜನ ಮಂತ್ರಿಗಳು ಈ ಮಂತ್ರಿ ಮಂಡಲದಲ್ಲಿದ್ದಾರೆ. ಆದರೆ ಅವರಿಗೆ ಆ ಜನರನ್ನು ಉದ್ಧಾರ ಮಾಡತಕ್ಕ ಮಾರ್ಗದಲ್ಲಿ ಗೌರವವಿಲ್ಲ. ಹಾಗೆ ಅವರಿಗೆ ಗೌರವವಿದ್ದರೆ ಹರಿಜನರನ್ನು ಉದ್ಧಾರ ಮಾಡಲೇಬೇಕೆಂಬ ಆಸೆ ಆಕಾಂಕ್ಷೆಗಳಿದ್ದರೆ ಅವರು ಕೂಡಲೆ ತಮ್ಮ ಮಂತ್ರಿ ಪದವಿಗಳಿಗೆ ರಾಜೀನಾಮೆ ಇತ್ತು ನಮ್ಮ ಪಕ್ಷದಲ್ಲಿ ಸೇರಿ ಇದನ್ನು ಜಾರಿಗೆ ತರಲು ಚಳವಳಿಯನ್ನು ಹೂಡಲಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇಲ್ಲಿಯತನಕ ಏನು ಹೇಳಿದ್ದಾರೋ ಅದೆಲ್ಲವೂ ಅತಿ ಕಡಮೆ ಎಂತ ನಾನು ನಾಲ್ಕು ಮಾತಿನಲ್ಲೇ ಇದಕ್ಕೆ ಉತ್ತರ ಸಾಕೆಂದು ತಿಳಿಸಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಬಹುಶಃ ಮೂರು ಜಿಲ್ಲೆಗಳ ವಿನಾ ಇನ್ನುಳಿದ ಎಲ್ಲಾ ಜಿಲ್ಲೆಗಳಲ್ಲೂ ಈ ಪಾನನಿರೋಧ ಜಾರಿಯಲ್ಲಿದ್ದಾಗ ಇದೇ ಮಾನ್ಯ ಸಭೆಯಲ್ಲಿ ಅನೇಕ ಸದಸ್ಯರು ಅದರಲ್ಲೂ ಹೆಚ್ಚಿಗೆ ಅತ್ತಕಡೆಯ ಸದಸ್ಯರಿಂದಲೇ ಇದನ್ನು ಸರ್ಕಾರದವರು ಕೂಡಲೆ ಏಕೆ ರದ್ದು ಮಾಡಬಾರದು ? ಇದರಿಂದ ದೇಶದಲ್ಲಿ ಎಷ್ಟು ಅನಾಹುತಗಳಾಗುತ್ತಿವೆ ? ಕಳ್ಳಭಟ್ಟಿ ಸಾರಾಯನ್ನು ಕುಡಿದು ಎಷ್ಟು ಜನರು ಸಾಯುತ್ತಿದ್ದಾರೆ ? ಇದರಿಂದ ಸರ್ಕಾರಕ್ಕೆ ಬರುತ್ತಿದ್ದ ಎಷ್ಟು ಹಣ ನಷ್ಟವಾಯಿತು

ಎಂದು ಹೀಗೆಲ್ಲಾ ಕಾರಣಗಳನ್ನು ಹೇಳುತ್ತಾ ಪಾನನಿರೋಧವನ್ನು ರದ್ದು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದವರು ಈಗ ಅದೇಕೆ ಹೀಗೆ ಆತುರಾತುರವಾಗಿ ಇದನ್ನು ಮತ್ತೆ ನಿಲ್ಲಿಸಬೇಕೆಂದು ಹೇಳುತ್ತಿದ್ದಾರೆ ? ಮೊನ್ನೆ ಗೋವಾದಲ್ಲಿ ಎ.ಐ.ಸಿ.ಸಿ. ನಡೆಯಿತು. ಆ ಸಭೆಯಲ್ಲಿ ಈ ವರ್ಷ ಗಾಂಧಿಶತಾಬ್ಧಿಯನ್ನು ಆಚರಿಸಬೇಕೆಂದೂ ಮತ್ತು ಅದೇ ಸಂದರ್ಭದಲ್ಲಿ ಈ ಗಾಂಧಿಶತಾಬ್ಧಿಯಿಂದ ಮುಂದಿನ ಏಳು ವರ್ಷಗಳಲ್ಲಿ ದೇಶಾದ್ಯಂತವೂ ಈ ಪಾನನಿರೋಧವನ್ನು ಜಾರಿಗೆ ತಂದು ಇದನ್ನು ಯಶಸ್ವಿಗೊಳಿಸಬೇಕೆಂಬ ನಿರ್ಣಯಗಳು ಅಲ್ಲಿ ಪಾಸಾದವು. ಆ ನಮ್ಮ ನಿರ್ಣಯಗಳ ದೆಶೆಯಿಂದ ಇವರೆಲ್ಲರಿಗೂ ಇಷ್ಟೊಂದು ಪ್ರೇರಣೆ ಬಂದಿದೆಯೆಂದು ಕಾಣುತ್ತಿದೆ. ಮಹಾತ್ಮಾ ಗಾಂಧಿಯವರು ಹೇಳಿರತಕ್ಕ ತತ್ವಗಳನ್ನು ಆಚರಣೆಗೆ ತಂದಿರುವುದರಲ್ಲಿ ನಮ್ಮ ಈ ಕಾಂಗ್ರೆಸ್ ಪಾರ್ಟಿ ಒಂದನ್ನು ಬಿಟ್ಟರೆ ಬೇರೆ ಯಾವ ಪಾರ್ಟಿಗಳೂ ಆ ತತ್ವಗಳನ್ನು ಅಷ್ಟು ಹೆಚ್ಚಿನ ಮಟ್ಟದಲ್ಲಿ ಆಚರಣೆಗೆ ತಂದಿರು ವುದಿಲ್ಲ. ನಾವು ನಮ್ಮ ಪಕ್ಷಕ್ಕೆ ಏನು ಹಿತವಚನಗಳನ್ನು ಕೊಡುತ್ತಿದ್ದೇವೆಯೋ ಹಾಗೆ ಇತರ ಪಾರ್ಟಿಗಳೂ ಅವರವರ ಪಕ್ಷಗಳಿಗೆ ಈ ವಿಚಾರದಲ್ಲಿ ಹಿತವಚನಗಳನ್ನು ಹೇಳಲಿ. ನಾವು ನಮ್ಮ ಕಾಂಗ್ರೆಸ್ ಪಾರ್ಟಿಗೆ ಈ ವಿಚಾರದಲ್ಲಿ ಒಂದು ನಿಲುವನ್ನು ಪಾಲಿಸಬೇಕೆಂದು ಕಡ್ಡಾಯ ಮಾಡು ತ್ತಿರುವಂತೆ ರಾಜ್ಯದಲ್ಲಿರತಕ್ಕ ಇನ್ನುಳಿದ ರಾಜಕೀಯ ಪಕ್ಷಗಳು ಅಂದರೆ ಪಿ ಎಸ್.ಪಿ. ಎಸ್.ಎಸ್.ಪಿ. ಜನಸಂಘ, ಕಮ್ಯುನಿಷ್ಟ ಪಕ್ಷಗಳೆಲ್ಲಾ ಇದೇ ರೀತಿ ಅವರವರ ಪಕ್ಷಗಳಿಗೆ ನಿರ್ಬಂಧ ಹಾಕಲಿ ಇದನ್ನು ಒಂದು ಪಕ್ಷದ ವಿಚಾರ ಎಂದು ಯಾರೂ ಭಾವಿಸಬಾರದು. ನಾನು ಮೊನ್ನೆ ಹೇಳಿದ ಹಾಗೆ ಒಂದು ಪಕ್ಷದವರು ಏನೇ ಕಷ್ಟ ಪಟ್ಟರೂ ಇದನ್ನು ಯಶಸ್ವಿಗೊಳಿಸಬೇಕಾದರೆ ಬಹಳ ಕಷ್ಟವಿದೆ. ಇದನ್ನು ಒಂದು ರಾಷ್ಟ್ರೀಯ ಸಮಸ್ಯೆಯಾಗಿ ಪರಿಗಣಿಸಿದರೆ ಅನುಕೂಲವಾಗುತ್ತದೆ. ಮದ್ರಾಸಿನಲ್ಲೇನೋ ಈ ದಿವಸ ಡಿ.ಎಂ.ಕೆ. ಪಕ್ಷ ಇದೆ. ಅದು ಈ ವಿಚಾರದಲ್ಲಿ ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ ಕೇರಳದಲ್ಲಿ ಏನಾಗಿದೆ ? ಮೊನ್ನೆ ಡೆಲ್ಲಿಯಲ್ಲಿ ಸೆಂಟ್ರಲ್ ಪ್ರೊಹಿಬಿಷನ್ ಸಜೆಷನ್ ಕಮಿಟಿಯ ಮೀಟಿಂಗ್ ಆಯಿತು. ಅದಕ್ಕೆ ನಾನೂ ಮತ್ತು ಕೇರಳದ ಮುಖ್ಯ ಮಂತ್ರಿಗಳಿಬ್ಬರೂ ಸದಸ್ಯರು. ಆದರೆ ಆ ದಿವಸ ಮೀಟಿಂಗಿಗೆ ಕೇರಳದ ಮಂತ್ರಿಗಳೂ ಬರಲಿಲ್ಲ—ಅಥವಾ ಬೇರೆಯವರನ್ನೂ ಕೂಡ ಅವರು ಅದಕ್ಕೆ ಕಳುಹಿಸಲಿಲ್ಲ. ಆದರೆ ನಾನು ಇದರಿಂದ ಜನಕ್ಕೆ ಹಿತವಾಗುತ್ತದೆ ಎಂದು ಎಂದೂ ಹೇಳಲಿಲ್ಲ. ಇದರಿಂದ ಜನರಿಗೆ ಅನೇಕ ರೀತಿಯಲ್ಲಿ ತೊಂದರೆಗಳಾಗುತ್ತವೆ. ಆದರೆ ಇಲ್ಲಿಗೆ 30 ವರ್ಷಗಳ ಹಿಂದೆ ಇದ್ದ ಆ ಸೋಷಿಯೋ ಎಕನಾಮಿಕ್ ಕಂಡೀಷನ್‌ಗಳು ಈ ದಿವಸ ಇಲ್ಲ. ಈಗ ಕಾಲ ಬದಲಾವಣೆಯಾಗಿದೆ. ಆ ಹಳೇ ಕಾಲದಲ್ಲಿ ಹರಿಜನರಿಗೆ ಮತದಾನ ಮಾಡತಕ್ಕ ಹಕ್ಕಿರಲಿಲ್ಲ ; ತುಂಬಾ ಅನಾಗರೀಕರಾಗಿದ್ದರು ಅವರು ಮನೆ ಗಳಲಿ ಅಡಿಗೆ ಮಾಡಬೇಕಾದ ಅವಶ್ಯಕತೆ ಇರಲಿಲ್ಲ ; ಬಟ್ಟೆಗಳನ್ನು ಕೊಳ್ಳಬೇಕಾದ್ದಿರಲಿಲ್ಲ, ಹೀಗೆ ಜೀವನದಲ್ಲಿ ಅವರಿಗೆ ಬೇರೆ ಯಾವ ಆಸೆ ಆಕಾಂಕ್ಷೆಗಳೂ ಇಲ್ಲದಿದ್ದ ಕಾರಣ ಅವರು ಕುಡಿತದಲ್ಲಿ ತಲ್ಲೀನರಾಗಿದ್ದರು. ಮನೆಯ ಮೇಲಿನ ಭ್ರಮೆಯೇ ಅವರಿಗಿರಲಿಲ್ಲ. ಈ ದಿವಸ ಆ ಪರಿಸ್ಥಿತಿಯಿಲ್ಲ. ಹರಿಜನರಲ್ಲಿ ಎಲ್ಲೆಲ್ಲೂ ಜಾಗ್ರತಿ ಮೂಡುತ್ತಿದೆ ; ಜನರು ವಿದ್ಯಾವಂತರಾಗುತ್ತಿದ್ದಾರೆ ; ಅವರ ಪರಿಸ್ಥಿತಿ ಸುಧಾರಿಸುತ್ತಿದೆ. ಅವರಿಗೂ ಈ ದಿವಸ ಎಲ್ಲರಂತೆ ನಾಗರೀಕರಾಗಿ ಆಸ್ತಿಪಾಸ್ತಿಗಳನ್ನು ಮಾಡಿಕೊಂಡು ಸಮಾಜದಲ್ಲಿ ಮರ್ಯಾದೆಯಿಂದ ಬಾಳಬೇಕೆಂಬ ಆಸೆ ಮೂಡುತ್ತಿದೆ. ಹಿಂದಿನ ಕಾಲದಲ್ಲಿ ಬರೀ ಹರಿಜನರು ಮಾತ್ರ ಕುಡಿಯುತ್ತಾರೆ ಬೇರೆ ಯಾರೂ ಕುಡಿಯುವುದಿಲ್ಲ ಎಂಬ ಒಂದು ವಾತಾ ವರಣವಿತ್ತು. ಈ ದಿವಸ ಮೇಲ್ದರ್ಜೆಯವರೇ ಜಾಸ್ತಿ ಕುಡಿಯುವ ಜನರು. ಕೆಳದರ್ಜೆಯಲ್ಲಿ ಕುಡಿಯತಕ್ಕವರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ ಕುಡಿಯತಕ್ಕ ಚಟ ಇರುವವನು ಲೈಸೆನ್ಸ್ ಇದ್ದ ಕಡೆ ಅವನಿಗೆ ಸಿಕ್ಕದಿದ್ದರೆ ಅವನು ಕಳ್ಳಭಟ್ಟಿ ಕುಡಿಯುತ್ತಾನೆ.

7-00 P.M.

ಅದಕ್ಕಾಗಿ ನನ್ನ ಅಭಿಪ್ರಾಯ ಏನಿದೆಯೆಂದರೆ, ಇದರ ಬಗ್ಗೆ ರಾಷ್ಟ್ರದಲ್ಲಿ ಒಮ್ಮತ ಕಾರ್ಯಕ್ರಮ ಆಗಬೇಕು. ನಾನು ಮೊನ್ನೆ ಸೂಚನೆಮಾಡಿದೆ, ಎಲ್ಲಾ ಪೊಲಿಟಿಕಲ್ ಪಾರ್ಟಿಗಳ ಸಮ್ಮೇಳನ ಕರೆಯೋಣವೆಂದು. ಕೆಲವರು ಇದನ್ನು 5ವರ್ಷಗಳೊಳಗೆ, 7ವರ್ಷಗಳೊಳಗೆ, 10ವರ್ಷಗಳೊಳಗೆ ಮಾಡಬೇಕೆಂದು ಹೇಳುತ್ತಾರೆ. ಕಾಂಗ್ರೆಸ್ಸಿನವರು 5 ವರ್ಷಗಳು ಎಂದು ಹೇಳಲಿ, ಕಮ್ಯೂನಿಸ್ಟ್, ಸ್ವತಂತ್ರಪಕ್ಷ, ಜನಸಂಘ, ಪಿ. ಎಸ್. ಪಿ. ಪಕ್ಷಗಳು ಏನಿವೆಯೋ ಅವರಲ್ಲಿ ಈ ವಿಚಾರವನ್ನು ಕೂಲಂಕಷವಾಗಿ ಚರ್ಚೆಮಾಡಿ ಎಲ್ಲರಿಗೂ ಒಪ್ಪಿಗೆಯಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳ ಬೇಕೆಂದು ಸೂಚನೆಮಾಡಿದ್ದೇನೆ. ಅದನ್ನು ತಾವು ಗಮನಿಸಬೇಕು. ನನ್ನ ಅಭಿಪ್ರಾಯದಲ್ಲಿ ಒಂದೇ ಸಾರಿ ಭಾವೋದ್ರೇಕವಾಗಿ ಗಾಂಧಿ ಶತಾಬ್ಧಿ ಜಯಂತಿಯೊಳಗೇ ಇದನ್ನು ಮಾಡೋಣ ವೆಂದು ಹೇಳಿದರೆ, ಅದರಿಂದೇನೂ ಫಲಕಾರಿಯಾಗುವುದಿಲ್ಲ. ಪಾನ ನಿರೋಧವನ್ನು ಈ ದೇಶದಲ್ಲಿ

(ಶ್ರೀ ರಾಮಕೃಷ್ಣ ಹೆಗಡೆ)

ಯಶಸ್ವಿಯಾಗಿ ಜಾರಿಗೆ ತರಬೇಕೆಂದು ಬಯಸಿದರೆ ಅದು 5 ವರ್ಷಗಳಲ್ಲಿ ಅಥವಾ 10 ವರ್ಷಗಳಲ್ಲಿ ಮಾಡಿದರೆ ಖಂಡಿತವಾಗಿ ಆಗುವುದಿಲ್ಲ. ಒಟ್ಟಿಗೆ ಇಡೀ ಕಾಶ್ಮೀರದಿಂದ ಕನ್ಯಾಕುಮಾರಿಯವರಿಗೆ ಒಂದೇ ಸಾರಿ ಮಾಡಬೇಕು. ಆಗ ಮಾತ್ರ ಸಾಧ್ಯ. ಅದು ಬಿಟ್ಟು ಮೈಸೂರಿನಲ್ಲಿ ಮಾಡುತ್ತೇವೆ, ಆಂಧ್ರದಲ್ಲಿ ಇಲ್ಲ, ಆಂಧ್ರದಲ್ಲಿ ಮಾಡುತ್ತೇವೆ, ಮಧ್ಯಪ್ರದೇಶದಲ್ಲಿ ಇಲ್ಲ—ಹೀಗೆ ಮಾಡಿದರೆ ಅಲ್ಲಿ ಹೋಗಿ ಕುಡಿಯಬಹುದು, ಇಲ್ಲಿ ಹೋಗಿ ಕುಡಿಯಬಹುದು, ಎಂಬ ಚಟ ಹುಟ್ಟುತ್ತದೆ. ಅದಕ್ಕಾಗಿ ತಮಗೆ ನಮ್ರತೆಯಿಂದ ಒಂದು ಮಾತನ್ನು ಹೇಳುತ್ತೇನೆ. ಈ ವಿಚಾರ ವನ್ನು ಎಲ್ಲರೂ ಸೇರಿ ಚರ್ಚೆಮಾಡೋಣ. ಮಾನ್ಯ ಸದಸ್ಯರ ಅಭಿಪ್ರಾಯ ಏನಿದೆಯೋ ಅದನ್ನು ನಾವು ಈಗ ತಿಳಿದುಕೊಳ್ಳಬೇಕಾಗಿದೆ. ನಾನು ಒಂದೇ ಸಾರಿ ದುಡಿಕಿ ಕೆಲಸ ಮಾಡುವುದು ಸರಿಯಲ್ಲವೆಂದು ಭಾವನೆಯುಳ್ಳವನು. ಅಬ್ಕಾರಿ ಡಿಮ್ಯಾಂಡ್‌ನಲ್ಲಿ ಇದು ಬರುತ್ತದೆ. ಆಗ ಕಾಲಾವಕಾಶ ಹೆಚ್ಚಿಗೆ ಸಿಗುತ್ತದೆ. ಖಾಸಗೀ ಗೊತ್ತುವಳಿಯ ಮೂಲಕ ನಮ್ಮೆಲ್ಲರ ಅಭಿಪ್ರಾಯವನ್ನು ತೆಗೆದುಕೊಳ್ಳಲಿ. ಆಗ ಅದರಿಂದ ನಮ್ಮ ದೇಶದಲ್ಲಿ ಏನಾದರೂ ಪರಿಣಾಮ ವಾದೀತೆಂದು ನನ್ನ ಅಭಿಪ್ರಾಯ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಇದು ರಾಷ್ಟ್ರದ ಪ್ರಶ್ನೆಯೆಂಬುದಾಗಿ ಅಭಿಪ್ರಾಯ ಸೂಚಿಸಿದರು. ಆದರೆ ಹಿಂದಿನ ವರ್ಷದಲ್ಲಿ ಈ ಸಭೆಯಲ್ಲಿ ಮಾನ್ಯ ಮಂತ್ರಿಗಳು ಮಾಡಿದಂಥ ಭಾಷಣದಲ್ಲಿ ಒಂದು ವ್ಯಾಖ್ಯಾನ ಹೇಳಿದ್ದಾರೆ. ಅದು 22ನೇ ಪುಟದಲ್ಲಿದೆ. ಅದನ್ನು ಓದಿ ಹೇಳುತ್ತೇನೆ. ಎರಡನೆಯ ಪ್ಯಾರಾದಲ್ಲಿ ಈ ರೀತಿ ಹೇಳಿವೆ 'ಪಾನನಿರೋಧವನ್ನು ಶಿಥಿಲಗೊಳಿಸಿದ ಕಾರಣ, ಪ್ರಸಕ್ತ ವರ್ಷ 1.91 ಕೋಟಿ ರೂಪಾಯಿ ಹೆಚ್ಚಿನ ಆದಾಯ ಬರುವುದೆಂದೂ, ಮುಂದಿನ ವರ್ಷ ಉತ್ಪಾದನ ಶುಲ್ಕದಿಂದ (ಅಬ್ಕಾರಿಯಿಂದ) ಬರುವ ಆದಾಯವು 11ಕೋಟಿ ರೂಪಾಯಿಗೇರುವುದೆಂದೂ ತಿಳಿಸಲು ನನಗೆ ಸಂತಸವಾಗಿದೆ. ಮಧ್ಯಪಾನದ ದುಷ್ಪರಿಣಾಮಗಳನ್ನು ಕುರಿತು ಸಾರ್ವಜನಿಕರಿಗೆ ತಿಳುವಳಿಕೆ ನೀಡುವ ಉದ್ದೇಶದಿಂದ ಸಮಸ್ತ ಜಿಲ್ಲೆಗಳಲ್ಲಿ ಪಾನ ನಿರೋಧ ಪ್ರಚಾರ ಸಮಿತಿಗಳನ್ನು ಏರ್ಪಡಿಸ ಲಾಗುತ್ತಿದೆಯೆಂಬ ಸಂಗತಿಯನ್ನು ತಿಳಿಯಲು ಮಾನ್ಯ ಸದಸ್ಯರಿಗೆ ಸಂತೋಷವಾದೀತೆಂದು ಭಾವಿಸುತ್ತೇನೆ. ಇಂತಹ ವಚನ ಕೊಟ್ಟಿದ್ದಾರೆ. ಈಗ ವಚನಭ್ರಷ್ಟರಾಗಿದ್ದಾರೆ. ಯಾವ ಸಮಿತಿ ಇದುವರೆಗೆ ಮಾಡಿದ್ದಾರೆ ? ಏನೇನು ಪ್ರಚಾರ ಮಾಡಿದ್ದಾರೆ, ಏತಕ್ಕೆ ಈ ರೀತಿ ವಚನ ಭ್ರಷ್ಟರಾಗಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ವಚನ ಭ್ರಷ್ಟತೆ ಏನೂ ಇಲ್ಲ. ಪಾನನಿರೋಧದಲ್ಲಿ ಎಷ್ಟು ಜನರಿಗೆ ಅಚಲವಾದ ವಿಶ್ವಾಸವಿದೆ ? ಹಿಂದಿನ ಬೊಂಬಾಯಿ ರಾಜ್ಯದಲ್ಲಿದ್ದಾಗ್ಗೆ ಒಂದು ಸಮಿತಿಯನ್ನು ಇದಕ್ಕಾಗಿ ನೇಮಕ ಮಾಡಿದರು. ಅಲ್ಲಿ ಮುಕ್ಕಾಲುಭಾಗ ಕುಡಿಯುವ ಚಟ ಇದ್ದವರು. ಅದಕ್ಕಾಗಿ ಇದಕ್ಕೆ ಒಂದು ಮಿಷನರಿ ಸ್ಪಿರಿಟ್‌ನಿಂದ ಅಚಲವಾಗಿ ಕೆಲಸಮಾಡುವ ಜನರು ಬೇಕು. ಆದ್ದರಿಂದ ಅನೇಕ ವಿಚಾರಗಳಲ್ಲಿ ಇದರ ಬಗ್ಗೆ ಕೇಂದ್ರ ಸರ್ಕಾರದವರ ಹತ್ತಿರ ಚರ್ಚೆಮಾಡಿದ್ದೇವೆ. ಇನ್ನೂ ಅನೇಕ ಜನರ ಹತ್ತಿರವೂ ವಿಚಾರಮಾಡಿದ್ದೇವೆ. ಚರ್ಚೆ ಮಾಡಿದ್ದೇವೆ. ಆದ್ದರಿಂದ ಅದರ ಬಗ್ಗೆ ನಾವು ವಚನ ಭ್ರಷ್ಟರಾಗುವುದಕ್ಕೆ ತಯಾರು ಇಲ್ಲ. ಈಗ ಇರುವ ಅಪಾದನೆ ವಿಳಂಬವಾಗಿಯೆಂಬುದು. ನಾಳೆ ಎಲ್ಲಾ ಜಿಲ್ಲೆಗಳಲ್ಲಿಯೂ ಇದನ್ನು ಮಾಡಬೇಕಾಗುತ್ತದೆ. ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಪಾನನಿರೋಧ ರದ್ದಾಗಿದ್ದರೂ ಎಲ್ಲಾ ಕಡೆಯೂ ಕಳ್ಳಭಟ್ಟಿ ಜಾಸ್ತಿಯಾಗಿದೆ. ತಾವು ಇಲ್ಲವೆಂದು ಹೇಳುತ್ತೀರಿ. ನಾನು ಪ್ರೂವ್ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಪಾನನಿರೋಧವದ್ದು ಸಂಪೂರ್ಣವಾಗಿ ತೆಗೆದರೂ ಕಳ್ಳಭಟ್ಟಿ ಯನ್ನು ಸಂಪೂರ್ಣವಾಗಿ ನಿರ್ಮೂಲಮಾಡುವುದು ಸಾಧ್ಯವೆಂದು ನಾನು ಹೇಳಲಿಲ್ಲ ಅದೂ ಇದೆ. ಮಾನ್ಯ ಶ್ರೀ ಸರ್ವೇಶ್ ಅವರು ಭಾಷಣ ಮಾಡುವುದಕ್ಕೆ ನಿಂತಾಗಲೇ ಒಂದು ಆಶ್ಚರ್ಯವಾಯಿತು. ಅವರು ಸತತವಾಗಿ ವೆಟ್ ಆಗಿರತಕ್ಕ ಪ್ರದೇಶದಿಂದ ಬಂದಂಥವರು. ಸುಮಾರು 12 ವರ್ಷಗಳಿಂದ ಈ ಮನೆಗೆ ಸದಸ್ಯರಾಗಿದ್ದಾರೆ. ಇವತ್ತಿನವರೆಗೂ ಪಾನ ನಿರೋಧವಾಗಬೇಕು ಎಂಬ ಮಾತನ್ನು ಹೇಳಲಿಲ್ಲ. ಅವರು ಹೇಳಿದ ಮಾತು ನಿಜ. ಇನ್ನು ಕೆಲವರು ಒಂದು ಮಾತನ್ನು ಹೇಳಿದರು. ಕಂಟ್ರ್ಯಾಕ್ಟರ್ಸ್ ಏನು ಟಾಡಿ, ಸೇಂದಿ ಮಾರಾಟ ಮಾಡುತ್ತಿದ್ದಾರೆಯೋ ಅದು ಒಳ್ಳೆಯದಲ್ಲ, ಒಳ್ಳೆಯ ಸೇಂದಿ ಕೊಡುವುದಿಲ್ಲ, ಯಾವುದೋ ಯಾವುದೋ ಬೆರಿಕೆಮಾಡಿ ಕೊಡುತ್ತಾರೆಂದ್ದೂದೂರು

ಬಂದಿದೆಯೆಂದು ಹೇಳಿದರು. ಅಂತಹವುಗಳನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅವರ ಮೇಲೆ ಉಗ್ರಕ್ರಮವನ್ನು ತೆಗೆದುಕೊಳ್ಳುತ್ತೇವೆ. ಸೇಂದಿ ಹೇಗಿರುತ್ತದೆಂದು ನಾನು ರುಚಿ ನೋಡಲಿಲ್ಲ. ನನಗೆ ತಿಳಿದಮಟ್ಟಿಗೆ ಸೇಂದಿಯನ್ನು ಯಾವ ತರಹದ ಬೆರಿಕೆಮಾಡದೆ ಕುಡಿದರೆ, ಆರೋಗ್ಯಕ್ಕೆ ಅಪಾಯವಿಲ್ಲವೆಂದು ಕೇಳಿದ್ದೇನೆ. ಒಂದುವೇಳೆ ಆರೀತಿ ಬೆರಿಕೆ ಮಾಡಿದರೆ ಅಂತಹವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ತಯಾರು ಇದ್ದೇನೆ. ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರಲ್ಲಿ ಒಂದು ಪ್ರಾರ್ಥನೆ, ಏನೆಂದರೆ, ಎಲ್ಲಿಯಾದರೂ ಕಳ್ಳಭಟ್ಟಿ ಹೀಗೆ ಬೆರಿಕೆಮಾಡಿ ಮಾರುತ್ತಿದ್ದಾರೆಂದು ನನ್ನ ಹತ್ತಿರ ಬಂದು ಕಿವಿಯಲ್ಲಿ ಗುಟ್ಟಾಗಿ ಹೇಳಿದರೆ ಸಾಕು............

ಶ್ರೀ ವಾಟಾಳ್ ನಾಗರಾಜ್.—ಓಪನ್ ಆಗಿ ಬೆರಿಕೆಮಾಡಿ ಮಾರುತ್ತಿದ್ದಾರೆ. ಅಂತಹವರಿಗೆ ಏನು ಮಾಡುತ್ತಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಕಳ್ಳಭಟ್ಟಿ ಬೆರಿಕೆಮಾಡಿ ಮಾರುತ್ತಿದ್ದಾನೆಂದು ಹೇಳಿದರೆ, ಅಂತಹವರನ್ನು ಹಿಡಿದುಕೊಂಡು ಬರುವುದಕ್ಕೆ ಒಬ್ಬ ಪೋಲೀಸ್ ಆಫೀಸರ್ ಅಥವಾ ಒಬ್ಬ ಎಕ್ಸೈಜ್ ಆಫೀಸರನ್ನು ಕೊಡುತ್ತೇವೆ. ಜೀಪ್ ಕೊಡುತ್ತೇವೆ, ಒಂದು ರಿವಲ್‌ವಾರ್ ಸಹ ಕೊಡುತ್ತೇವೆ.

ಶ್ರೀ ಪಿ. ಪಿ. ಐತಾಳ್.—ಸರ್ಕಾರದವರು ಸಪ್ಲೈ ಮಾಡಿದಂತ ಶರಾಬಿಗೆ ಇಲ್ಲಿಸಿಟ್ ಲಿಕ್ಕರ್ ಮಿಕ್ಸ್‌ಮಾಡಿ ಮಾರಾಟಮಾಡುತ್ತಿದ್ದಾರೆ. ಅಂತಹವರ ಬಗ್ಗೆ ಏನು ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಅಂಥಾದ್ದು ಏನಾದರೂ ನನ್ನ ಗಮನಕ್ಕೆ ಬಂದರೆ, ಅವರ ಲೈಸೆನ್ಸನ್ನು ರದ್ದುಮಾಡುತ್ತೇವೆ.

Mr. DEPUTY SPEAKER.—The House will adjourn now and meet at 12 NOON on Monday, the 27th January 1969.

The House adjourned at Ten Minutes Past Seven of the Clock to meet again at Twelve Noon on Monday, the 27th January 1969.

WD 11989—GPB—600—24-4-69

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 27th January 1969

The House met in the Assembly Chamber, Vidhana Soudha, Bangalore, at Twelve of the Clock.

Mr. SPEAKER [SRI S. D. KOTHAVALE] in the Chair.

STARRED QUESTIONS

(to which oral answers were given)

Appointment of Teachers

26. SRI T. K. GANGI REDDY (Chintamani).—

Will the Minister for Education be pleased to state :—

(*a*) the number of posts of teachers for which applications were called for during 1968–69 by D.L.R.C., Kolar District;

(*b*) the total number of applications received ;

(*c*) the basis on which selection was made ?

SRI N. M. KOTRABASAIAH SOGI (Deputy Minister for Education).—

	Kannada	*Urdu*	*Hindi*	*Tamil*	*Music*	*Telugu*
(*a*)	105	53	9	20	3	2
(*b*)	1,779	270	150	300	9	19

(*c*) The candidates were interviewed in the ratio 1 : 4 as per the direct recruitment rules notified in G. O. No. GAD 4 ORR 67, dated 20th December 1967 and teachers were selected taking into consideration the marks obtained by the candidates in S.S.L.C. and the interview, preference being given to trained candidates and the number of teachers so selected is ten per cent more than the advertised number.

ಶ್ರೀ ಟಿ. ಕೆ. ಗಂಗೀರೆಡ್ಡಿ.—ಟಿ. ಸಿ. ಹೆಚ್. ಪಾಸಾಗದೆ ಇರುವಂತಹವರ ಅರ್ಜಿಗಳಿಗೆ ಅವರನ್ನು ತೆಗೆದುಕೊಳ್ಳದೆ ಇರಲು ಕಾರಣವೇನು ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಎಸ್. ಎಸ್. ಎಲ್. ಸಿ. ಯಲ್ಲಿ ಪಾಸಾಗಿರುವವರ ಮಾರ್ಕ್ಸುಗಳು ಎನಿತ್ತೋ ಅದರ ಆಧಾರದ ಮೇಲೆ ಅವರನ್ನು ಆರಿಸಲಾಗಿದೆ.

ಶ್ರೀ ಟಿ. ಕೆ. ಗಂಗೀರೆಡ್ಡಿ.—ಕೋಲಾರ ತಾಲ್ಲೂಕಿನಿಂದ ಎಷ್ಟು ಜನರನ್ನು ಆರಿಸಲಾಗಿದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದರ ಇನ್‌ಫರ್‌ಮೇಷನ್ ಇಲ್ಲ. ಪ್ರತ್ಯೇಕ ಪ್ರಶ್ನೆ ಹಾಕಿದರೆ ಆಗ ವಿವರಗಳನ್ನು ಒದಗಿಸಿಕೊಡಲಾಗುತ್ತದೆ.

ಶ್ರೀ ಇ. ನಾರಾಯಣ ಗೌಡ.—ಕೋಲಾರ ಜಿಲ್ಲೆಯಲ್ಲಿ ಎಷ್ಟು ಜನರನ್ನು ಟೀಚರು ಕೆಲಸಗಳಿಗಾಗಿ ಆರಿಸಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಉತ್ತರದಲ್ಲೇ ವಿವರಗಳನ್ನು ಒದಗಿಸಲಾಗಿದೆ. ಮತ್ತು ವೇಕೆನ್ಸಿಗಳು ಇದ್ದ ಹಾಗೆಲ್ಲಾ ಇವರನ್ನು ಅಲ್ಲೆ ತುಂಬಲು ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಎಸ್. ಆರ್. ಷಣ್ಮುಗಂ.—ಇಲ್ಲಿ ಒಂದು ಟೀಚರ್ಸ್ ಟ್ರೇನಿಂಗ್ ಸ್ಕೂಲನ್ನು ತೆರೆಯುವುದಕ್ಕೆ ಏನು ಆಕ್ಷೇಪಣೆಗಳಿವೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳಬಹುದು. ಇದರಲ್ಲಿ ಅದು ಬರುವುದಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಹುದ್ದೆಗಳಿಗೆ ನೇಮಕ ಮಾಡುವಾಗ ಕೋಲಾರದ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಗಳಿಗಿರುವ ಸೇಕಡಾವಾರಿನಂತೆ ಎಂದರೆ ಸೇಕಡ 15 ರಷ್ಟು ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಮತ್ತು ಸೇಕಡಾ ಮೂರರಷ್ಟು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಇಲ್ಲೂ ಕೊಟ್ಟಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅರ್ಜಿಗಳನ್ನು ಪರಿಶೀಲಿ[illegible] ಡುವಾಗ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ತೆಗೆದುಕೊಳ್ಳುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪಿ. ಎಸ್. ಸಿ. ಕಡೆಯಿಂದ ತೆಗೆದು ಇಂತಹ ನೇಮಕಗಳನ್ನು ಡಿ. ಎಲ್. ಆರ್. ಸಿ. ಕಡೆಗೆ ಕೊಡಲು ಕಾರಣಗಳೇನು ?

[illegible]ೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆಯಾ ಜಿಲ್ಲೆಯಲ್ಲಿ ನೇಮಕಗಳನ್ನು ಮಾಡುವಾಗ ಆಯಾ ಜಿಲ್ಲೆಯಲ್ಲಿರುವ ಡಿ. ಎಲ್. ಆರ್. ಸಿ. ಕಮಿಟಿಗೆ ವಹಿಸಬೇಕೆಂದು ಸರಕಾರದ ಉದ್ದೇಶ. ಅದರಂತೆ ಇಲ್ಲೂ ಮಾಡಲಾಗಿದೆ.

Segihalla Project

62. Sri I. SOMASHEKARAPPA (Hosanagar).—

Will the Minister for Public Works be pleased to state :—

(*a*) whether the District Development Council, Shimoga has urged the Government to take up Segihalla Project in Shimoga Taluk, to benefit the drought stricken areas of Haranahalli and Kumsi Hoblies ;

(*b*) if so, whether the estimate for the said project has been prepared ;

(*c*) whether there is any proposal to include it in the IV Five Year Plan ?

† Indicates that the remarks or speeches have not been revised by the member concerned

Sri D. PARAMESWARAPPA (Deputy Minister for Major Irrigation and Electricity) [on behalf of SRI A. J. DODDAMETI (Minister of State for Minor Irrigation)].—

(*a*) Yes.

(*b*) The scheme is under investigation.

(*c*) Will be examined after the project report is finalised.

ಶ್ರೀ ಐ. ಸೋಮಶೇಖರಪ್ಪ.—ಸ್ವಾಮಿ, (ಇ) ಗೆ ಉತ್ತರವಾಗಿ ಯೋಜನಾ ವರದಿಯು ಅಂತಿಮವಾದ ನಂತರ ಇದನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ. ಹಾಗಾದರೆ ಎಷ್ಟು ದಿವಸದಲ್ಲಿ ಈ ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಲಾಗುತ್ತದೆ ?

Sri D. PARAMESWARAPPA.—Within six months, the final report will be ready.

Stamp Papers

90. Sri S. JAYAPRAKASH SHETTI (Brahmavar).—

Will the Minister for Revenue be pleased to state :—

(*a*) whether it is a fact that there is shortage of stamp papers in the State;

(*b*) the action they propose to take, to meet the shortage ?

Sri H. V. KOUJALGI (Minister for Revenue).—

(*a*) and (*b*) when the Commissioner of Stamps visited some of the Taluk Offices and inspected the stock of stamp papers, the stock of stamp papers of lower value was found less and afterwards the Controller of Stamps has been requested to supply stamps as per the request of our officers.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಸ್ವಾಮಿ, ಛಾಪಾ ಕಾಗದಗಳು ಕಡಿಮೆ ಇದ್ದುದು ಕಂಡುಬಂದಮೇಲೆ ಕಂಟ್ರೋಲರ್ ವಿಸಿಟ್ ಮಾಡಿ ಛಾಪಾ ಕಾಗದಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದೀರಿ. ಸ್ಟ್ಯಾಂಪ್ ಪೇಪರ್ ಇಲ್ಲ ಎಂದು 5–6 ಸಾರಿ ಟೆಲಿಗ್ರಾಂ ಕೊಟ್ಟು, ಎಕ್ಸ್‌ಪ್ರೆಸ್ ಲೆಟರ್ ಇವೆಲ್ಲಾ ಬರೆದರೂ 3 ತಿಂಗಳಿನಿಂದಲೂ ಬರಲಿಲ್ಲ. ಹೀಗಾಗಿ ಕಡಿಮೆ ಬೆಲೆಯ ಸ್ಟ್ಯಾಂಪ್ ಪೇಪರ್ ಬ್ಲಾಕ್ ಮಾರ್ಕೆಟ್‌ನಲ್ಲಿ ಹೋಗುತ್ತಾ ಇದೆ. ಆದುದರಿಂದ ಕಡಿಮೆ ಬೆಲೆಯ ಸ್ಟ್ಯಾಂಪ್ ಪೇಪರನ್ನು ಕೂಡಲೇ ಸಿಕ್ಕುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಬ್ಲಾಕ್ ಮಾರ್ಕೆಟ್‌ನಲ್ಲಿ ಹೋಗುತ್ತಾ ಇದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಆದರೆ ಕೆಲವು ಕಾಲ ಕಡಿಮೆ ಬೆಲೆಯ ಸ್ಟ್ಯಾಂಪ್ ಪೇಪರ್ ಕಡಿಮೆ ಇತ್ತು, ಅದನ್ನು ಈಗಿಂದಾಗ್ಗೆ ಸರಿಪಡಿಸಿದ್ದೇವೆ.

Sri D. B. KALMANKAR.—May I know how many Taluk Offices were inspected and whether the stamps of lower denominations have been supplied to all Taluk Offices in abundance, Sir ?

Sri H. V. KOUJALGI.—Yes.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಟ್ಯಾಂಪ್ ಪೇಪರ್ ಅಭಾವ ಇದೆ ಎಂದು ಅಲ್ಲಿನ ಜನರು ಟೆಲಿಗ್ರಾಂ ಕಳುಹಿಸಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ವಿ. ಕೌಜಲಗಿ.—ಈಗ ಅದರ ಅಭಾವವನ್ನು ಆದಷ್ಟು ಕಡಿಮೆ ಮಾಡಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಸ್ವಾಮಿ, ಸ್ಟಾಂಪ್ ಪೇಪರ್ ಇಂಡೆಂಟ್ ಮಾಡಬೇಕಾದರೆ ತಾಲ್ಲೂಕು ಆಫೀಸಿನಿಂದ, ಡಿಸ್ಟ್ರಿಕ್ಟ್‌ಗೆ, ಡಿಸ್ಟ್ರಿಕ್ಟ್ ಆಫೀಸಿನಿಂದ ಕಂಟ್ರೋಲರ್ ಆಫೀಸಿಗೆ ಹೀಗೆ ಸುತ್ತಿಕೊಂಡು ಬರಬೇಕಾದರೆ ಬಹಳ ತಡವಾಗುತ್ತದೆ. ಆದುದರಿಂದ ನೇರವಾಗಿ ತಾಲ್ಲೂಕು ಆಫೀಸಿಗೆ ಕಂಟ್ರೋಲರ್‌ರವರು ಒದಗಿಸಿ ಕೊಡುವ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ನೇರವಾಗಿ ತಾಲ್ಲೂಕು ಆಫೀಸಿಗೆ ಕೊಡಲಿಕ್ಕೆ ಬರುವುದಿಲ್ಲ. ಅದಕ್ಕೆ ಒಂದು ಪ್ರೊಸೀಜರ್ ಇದೆ. ಆ ಪ್ರೊಸೀಜರ್‌ನ ಪ್ರಕಾರ ಇಂಡೆಂಟ್ ಕಳುಹಿಸಿಕೊಡುತ್ತಾರೆ. ಆ ಇಂಡೆಂಟ್ ಪ್ರಕಾರ ಡಿಸ್ಟ್ರಿಕ್ಟ್ ಆಫೀಸಿಗೆ ಕಳುಹಿಸಲಾಗುತ್ತದೆ.

ಶ್ರೀ ಬಿ. ಎನ್. ಪಾಟೀಲ್.—ಸ್ಟಾಂಪ್ ಪೇಪರ್ ಇಂಡೆಂಟ್‌ನ್ನು ತಾಲ್ಲೂಕು ಆಫೀಸಿನಿಂದಲೇ ನೇರವಾಗಿ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಹೆಚ್. ವಿ. ಕೌಜಲಗಿ.—ಡಿಸ್ಟ್ರಿಕ್ಟ್ ಆಫೀಸಿನವರೇ ನೇರವಾಗಿ ಮಾಡುವುದು ಸರ್ಕಾರದ ನೀತಿ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಸ್ವಾಮಿ, ಈವೊತ್ತಿನ ದಿವಸ ಯಾವುದಾದರೂ ಅರ್ಜಿಗೆ 2 ಆಣೆ ಸ್ಟಾಂಪ್ ಹಚ್ಚಬೇಕಾದರೆ 4 ಆಣೆ ಸ್ಟಾಂಪ್ ಹಚ್ಚುತ್ತಾರೆ ಮತ್ತು ಒಂದೇ ಡಿನೋಮಿನೇಷನ್ ಸ್ಟಾಂಪ್ ಪೇಪರ್ ಬೇಕಾದರೆ 3-4 ಪೇಪರ್ ಕೊಡುತ್ತಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ವಿ. ಕೌಜಲಗಿ.—ಕೆಲವು ವೇಳೆ ಸ್ಟಾಂಪ್ ವೆಂಡರ್ಸ್ ತಪ್ಪು ಮಾಡುತ್ತಾರೆ. ಇದರಲ್ಲಿ ಸರ್ಕಾರದವರ ತಪ್ಪೇನೂ ಇಲ್ಲ.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಸ್ಟಾಂಪ್ ಪೇಪರ್ ಅಭಾವ ಇರುವುದಕ್ಕೆ ಪ್ರಿಂಟ್‌ನ ಅಭಾವವೋ, ಡಿಸ್ಟ್ರಿಬ್ಯೂಷನ್‌ನಲ್ಲಿ ಅಭಾವವೊ ? ಇಂಡೆಂಟ್ ಮಾಡುವುದರಲ್ಲಿ ಏನಾದರೂ ತಡವಾಗುತ್ತಿದೆಯೇ ಅಥವಾ ಈ ವಿಷಯದಲ್ಲಿ ಸರ್ಕಾರಕ್ಕೆ ಯಾವ ತೊಂದರೆ ಇದೆ ಎನ್ನುವುದನ್ನು ಹೇಳಬಲ್ಲಿರಾ ?

ಶ್ರೀ ಹೆಚ್. ವಿ. ಕೌಜಲಗಿ.—ಸರಿಯಾದ ಸಮಯದಲ್ಲಿ ಇಂಡೆಂಟ್ ಮಾಡದೇ ಇರುವುದೇ ಕಾರಣ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ಟಾಂಪ್ ಪೇಪರ್ ವೆಂಡರ್ಸ್ ತಪ್ಪು ಮಾಡುತ್ತಾರೆಂದು ಹೇಳಿದಿರಿ. ಅಂಥಹವರ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಅಂಥಾದ್ದು ಉದಾಹರಣೆಗಳು ಇವೆ.

ಶ್ರೀ ಎಂ. ಬಸವರಾಜು.—ಈ ರೀತಿ ಸ್ಟಾಂಪ್ ಪೇಪರನ್ನು ಖಾಸಗಿ ವ್ಯಕ್ತಿಗಳಿಗೆ ಕೊಡುವುದರಿಂದ ಅನ್ಯಾಯವಾಗುತ್ತದೆ. ಆದುದರಿಂದ ಇದನ್ನು ಪಂಚಾಯಿತಿಯವರೇ ನಡೆಸಲು ಲೈಸನ್ಸ್ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಲೈಸನ್ಸ್ ಇಷ್ಯೂ ಮಾಡುವುದಕ್ಕೆ ಅಲ್ಲಿಯ ಲೋಕಲ್ ಆಫೀಸರ್‌ಗೆ ಅಥಾರಿಟಿ ಕೊಟ್ಟಿದ್ದೇವೆ. ಹಾಗೆ ಲೈಸನ್ಸ್‌ಗೆ ಅರ್ಜಿ ಹಾಕಿದವರು ಲೈಸನ್ಸ್ ಕಂಡೀಷನ್ಸ್‌ಗೆ ಯೋಗ್ಯವಾಗಿದೆ ಎಂದು ಕಂಡುಬಂದರೆ ಅವರಿಗೂ ಕೊಡಬಹುದು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಟಾಂಪ್ ಪೇಪರ್ ಕಡಿಮೆ ಇರುವುದರಿಂದ ಅಲ್ಲಿಯ ಅಧಿಕಾರಿಗಳು ರಿಪೋರ್ಟ್ ಮಾಡಿದ್ದಾರೆ ಅಲ್ಲಿಗೆ ಜಾಗ್ರತೆ ಕಳುಹಿಸುವ ಏರ್ಪಾಡು ಮಾಡುತ್ತೀರಾ ?

Sri H. V. KOUJALGI.—Immediate action will be taken to supply stamp papers.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—ಕೊಯಮತ್ತೂರಿನಲ್ಲಿ ನೂರು ರೂಪಾಯಿ ನೋಟುಗಳನ್ನು ಅಚ್ಚು ಮಾಡಿದ್ದಂತೆ ಸ್ಟಾಂಪ್ ಪೇಪರುಗಳನ್ನೂ ಅಲ್ಲಲ್ಲಿ ಪ್ರಿಂಟ್ ಮಾಡಿಸುವುದಕ್ಕಾಗುತ್ತದೆಯೇ ?

ಶ್ರೀ ಹೆಚ್. ವಿ. ಕೌಜಲಗಿ.—ಸ್ಟಾಂಪ್ ಪೇಪರುಗಳೆಲ್ಲ ನಾಸಿಕದಲ್ಲಿ ಪ್ರಿಂಟ್ ಆಗುತ್ತವೆ.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಷ್ಟರವರೆಗೂ ಏನೊಂದು ಅಭಾವವಿತ್ತೋ ಅದು ಇನ್ನು ಮುಂದೆ ಬಾರದ ಹಾಗೆ ಕ್ರಮ ತೆಗೆದುಕೊಳ್ಳಲಾಗುತ್ತದೆಯೇ?

ಶ್ರೀ ಹೆಚ್. ವಿ. ಕೌಜಲಗಿ.— ತೆಗೆದುಕೊಳ್ಳುತ್ತೇವೆ.

Village Panchayats in Pandavapura Taluk

96. SRI N. A. CHANNEGOWDA (Pandavapura).—

Will the Minister for Development be pleased to state :—

(*a*) the number of village panchayats that are working in Pandavapura taluk since 1961 ;

(*b*) the annual income and expenditure of each village panchayat ;

(*c*) whether the income and expenditure of all the panchayats have been got audited by the Government every year ;

(*d*) whether it has come to their notice that the revenue income (L. R. Grants) of some village panchayats are very less even though the villages are big ; if so, the number of such panchayats and the policy of the Government in this behalf ;

(*e*) the number and names of panchayats which have misappropriated the funds as revealed by the audit report ;

(*f*) the number and names of panchayats wherein the Chairmen and Secretaries have misappropriated the funds, together with the amount so misappropriated ;

(*g*) the steps taken by them to recover the amounts reported to have been misappropriated and when the said action was taken ?

SRI P. M. NADGOUDA (Minister for Development).—

(*a*) there were 37 village panchayats up to 1968 and now there are 42 village panchayats.

(*b*) the income and expenditure of each panchayat for 1967-68 is furnished in the statement appended.

(*c*) the accounts of the panchayats are audited as per the audit programme of the Assistant Controller of the State Accounts Department. Some times while auditing the accounts relating to two or three years will be audited together.

(*d*) Yes. There are five such panchayats in Pandavapura taluk. The policy followed is that in no panchayat the annual *per capita* income should be less than 45 paise.

In case the annual income of some panchayats is less than 45 paise, priority will be given to such panchayats while distributing discritionary grant of 5 per cent of land revenue so that they may get the minimum income fixed.

(SRI P. M. NADGOUDA)

(e) In the audit reports of three panchayats it has been noted that there has been misappropriation of funds. They are Thonnuru, Shambunahalli and Kennalu.

(f) Three. It has been alleged that there has been misappropriation of funds in Thonnuru and Shambunahally village panchayats by the Chairmen of the said panchayats. It has been alleged that there has been misappropriation of funds in Kennalu village panchayat by the Secretary of the said panchayat.

Amount alleged to have been misappropriated:

Shambunahalli	...	Rs.	4,304-25
Thonnuru	...	,,	430-00
Kennalu	...	,,	1,104-59

(g) The amount misappropriated in Kennalu Panchayat has been recovered from the concerned official. Action is being taken against him as per the Government Servants Disciplinary Rules. In respect of the other two panchayats enquiry is being held against the Chairmen as per the Mysore Village Panchayat and Taluk Development Boards' Act.

STATEMENT

Showing the Annual Income and Expenditure of each Panchayat.

Sl. No.	Name of the Panchayat		Annual income 1967-68	Annual expenditure 1967-68
1	2		3	4
			Rs.	Rs.
1	Baby	...	1,054-98	867-00
2	Doddaboganahally	...	1,[illegible]95-38	49[illegible]-06
3	Shanbhoonahally	...	3,641-71	3,492-96
4	Kanaganahally	...	1,046-00	17 -00
5	Kanagana Maradi	...	4 376-45	4,759-21
6	Amruthi	...	1,248-62	1.414-77
7	Hiremarali	...	307-54	...
8	Kyathanahally	...	15,725-24	23,579-97
9	Kennalu	...	1,289-35	1,169-79
10	Dodda Byadarahally	...	7,832-43	8,045-00
11	Dinka	...	1,200-06	1,892-66
12	Narayanapura	...	891-98	302-50
13	Bettanahally	...	505-38	...
14	Bevinakuppe	...	655-47	...

1	2		3	4
			Rs.	Rs.
15	Enne Hole Koppalu	...	1,790–18	574–80
16	B. S. Chatra	...	6,948–27	4,015–13
17	Lakshmisagara	...	2,954–42	2,724–16
18	Sanaba	...	556–91	...
19	Kalenarally	...	1,359–28	...
20	Talekere	...	3,247–41	4,034–88
21	Thonnuru	...	5,643–35	12,000–00
22	K. Bettahally	...	1,645–44	2,340–24
23	Sunkathonnuru	...	4,305–39	1,287–25
24	Madikanahally	...	1,072–96	4,879–86
25	Kadalagere	...	1,180–67	1,471–92
26	Balagatta	...	1,894–42	3,713–82
27	Aralakuppe	...	1,008–63	...
28	Chinakuruli	...	11'958–90	2,886–20
29	Bannogadi	...	1,605–16	5,353–14
30	Hamadahally	...	3,381–58	5,357–92
31	Bandahally	...	906–73	210–00
32	Pattasomanahally	...	4,405–66	6,536,99
33	Chikkayarahally	...	1,686–08	...
34	Halebedu	...	2,090–36	800–00
35	Haravu	...	2,037–13	...
36	Gummanahally	...	2,185–18	...
37	Nyamanahally	...	1,701–75	...

ಶ್ರೀ ಎನ್. ಎ. ಚನ್ನೇಗೌಡ.—ಪಂಚಾಯಿತಿ ಆಕ್ಟ್ ಪ್ರಕಾರ ಪ್ರತಿ ವರ್ಷವೂ ಆಡಿಟ್ ಮಾಡಿಸಬೇಕೆಂದಿದ್ದರೂ ಎರಡು ಮೂರು ವರ್ಷಗಳಿಗೆ ಒಂದು ಸಲ ಆಡಿಟ್ ಮಾಡುವ ಪರಿಪಾಠ ಏಕೆ ಬಂತು, ಸ್ವಾಮಿ ?

†ಶ್ರೀ ಪಿ. ಎಂ. ನಾಡಗೌಡ.—ಸರ್ವೇ ಸಾಮಾನ್ಯವಾಗಿ ಪ್ರತಿ ವರ್ಷ ಆಡಿಟ್ ಮಾಡಬೇಕೆಂದಿದೆ. ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸಗಾರರು ಕಡಮೆ ಇದ್ದುದರಿಂದ ಎರಡು ಮೂರು ವರ್ಷಕ್ಕೆ ಮಾಡಿದೆ.

ಶ್ರೀ ಎನ್. ಎ. ಚನ್ನೇಗೌಡ.—ಶಂಭೂನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ 4,304–25 ರೂಪಾಯಿ ದುರುಪಯೋಗವಾಗಿದೆ ಎಂದು ಹೇಳಿದ್ದಾರೆ. ಈ ಪಂಚಾಯಿತಿಯ ಆದಾಯ 3,641 ರೂಪಾಯಿ ಮತ್ತು ವೆಚ್ಚ 3,492 ರೂಪಾಯಿ ಇರುವುದರಿಂದ, ಇಷ್ಟು ಹಣ ಒಂದೇ ವರ್ಷದಲ್ಲಿ ದರುಪಯೋಗವಾಗಿಲ್ಲ, ಅನೇಕ ವರ್ಷಗಳಿಂದ ನಡೆದಿದೆ. ಇದಕ್ಕೆ ಸಂಬಂಧಪಟ್ಟವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಪಿ. ಎಂ. ನಾಡಗೌಡ.—ಒಬ್ಬ ಸೆಕ್ರೆಟರಿಯನ್ನು ಸಸ್ಪೆಂಡ್ ಮಾಡಿದ್ದೇವೆ ಹಣ ರಿಕವರ್ ಮಾಡಿದ್ದೇವೆ. ಇದರಲ್ಲಿ ಇಬ್ಬರು ಚೇರ್‌ಮನ್‌ರು ಇನ್‌ವಾಲ್ವ್ ಆಗಿದ್ದಾರೆ. ಅವರ ಮೇಲೆ ನೋಟೀಸ್ ಕೊಟ್ಟಿದ್ದೇವೆ. ಯಾರ್ಯಾರಿಂದ ಹಣದ ದುರುಪಯೋಗ ಆಗಿದೆಯೋ ಅವರಮೇಲೆ ಲ್ಯಾಂಡ್ ರೆವಿನ್ಯೂ ಕೋಡ್ ಪ್ರಕಾರ ವಸೂಲಿಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ.—ಪಂಚಾಯಿತಿಗಳಲ್ಲಿನ ಹಣ ಬಹಳ ಸ್ವಲ್ಪವಾಗಿರುವುದರಿಂದ ಇಷ್ಟು ದೊಡ್ಡ ಮೊತ್ತವನ್ನು ದುರುಪಯೋಗಪಡಿಸಿಕೊಂಡರೆ ಬಹಳ ಅನ್ಯಾಯವಾಗುತ್ತದೆ. ಇಂಥವರ ಮೇಲೆ ಉಗ್ರ ಕ್ರಮಗಳನ್ನು ತೆಗೆದುಕೊಂಡು, ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಕ್ರಮ ಏಕೆ ತೆಗೆದುಕೊಳ್ಳಬಾರದು ?

ಶ್ರೀ ಪಿ. ಎಂ. ನಾಡಗೌಡ.—ಸರ್ವೇಸಾಮಾನ್ಯವಾಗಿ ಇವರೆಲ್ಲ ಖಾಸಗಿಯುವರಿದ್ದಾರೆ. ಹಣವನ್ನು ವಸೂಲು ಮಾಡಲು ಪ್ರೊಸೀಜರ್ ಇದೆ ಮತ್ತು ಲ್ಯಾಂಡ್ ರೆವಿನ್ಯೂ ಕೋಡ್ ಪ್ರಕಾರ ವಸೂಲಿಗೆ ಕ್ರಮ ತೆಗೆದುಕೊಂಡಿದ್ದೇವೆ. ಅಗತ್ಯವಾದಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

Sri H. SIDDAVEERAPPA.—Are the Government thinking of writing off this misappropriated amount ?

Sri P. M. NADGOUDA.—No. The Government will never write off such amonts. I assure the Hon. Member that the Government will never think of writing it off.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಡಿಸ್ಕ್ರಿಷನರಿ ಗ್ರಾಂಟ್ ಕೊಡುವುದಾಗಿ ಹೇಳಿದ್ದಾರೆ ಪಾಂಡವಪುರ ತಾಲ್ಲೂಕಿನಲ್ಲಿ ಎಷ್ಟು ಪಂಚಾಯಿತಿಗಳಿಗೆ ಈ ಹಣವನ್ನು ಕೊಟ್ಟಿದ್ದಾರೆ, ಎಷ್ಟೆಷ್ಟು ಕೊಟ್ಟಿದ್ದಾರೆ ? ಹಣ ದುರುಪಯೋಗ ಆಗಿರುವ ಪಂಚಾಯಿತಿಗಳಿಗೂ ಕೊಟ್ಟಿದ್ದಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅಂಥ ಪಂಚಾಯಿತಿಗಳಿಗೆ ಕೊಟ್ಟಿಲ್ಲ. ಪಾಂಡವಪುರ ತಾಲ್ಲೂಕಿನಲ್ಲಿ 5 ಗ್ರಾಮ ಪಂಚಾಯಿತಿಗಳಿಗೆ ಕೊಟ್ಟಿದ್ದೇವೆ. ನಮ್ಮ ಕಾಯಿದೆ ಪ್ರಕಾರ ಪರ್ ಕ್ಯಾಪಿಟ ಇನ್‌ಕಂ ಎಲ್ಲಿ ಕಡಮೆ ಬೀಳುತ್ತದೆ ಅಂಥ ಕಡೆ ಡಿಸ್ಕ್ರಿಷನರಿ ಗ್ರಾಂಟ್ ಕೊಡುತ್ತೇವೆ. ಈ ಐದು ಗ್ರಾಮಗಳಲ್ಲಿ ಒಬ್ಬರಿಗೆ 45 ಪೈಸೆ ಪ್ರಕಾರ ಒಂದು ವರ್ಷಕ್ಕೆ ತುಂಬಿಕೊಟ್ಟಿರುತ್ತೇವೆ.

Election to Taluk Development Boards

100. Sri N. A. CHANNE GOWDA (Pandavapura).—

Will the Minister for Development be pleased to state :—

(a) the various cadre of Officers that were Returning Officers during the elections to Taluk Develepment Boards in the State held during November 1968 ;

(b) the jurisdiction of these Returning Officers ;

(c) the place where the ballot paper, required for the said election, was printed together with the person who got them printed ;

(d) whether the ballot papers required for the Pandavapura Taluk Development Board election were printed in a local printing press ;

(e) if so, the name and owner of the said press ;

(f) whether security measurses were taken while printing the ballot papers ;

(g) the cost per thousand of the ballot papers supplied to the Pandavapura Taluk Development Board election ?

Sri P. M. NADGOUDA (Minister for Development).—

(*a*) Officers who were not below the rank of Taluk Tahsildars were appointed as Returning Officers.

(*b*) The jurisdiction relating to the Returning Officers are printed in the Mysore State Panchayat and Taluk Boards Election Rules.

(*c*) The Returning Officers got the ballot papers printed in the local printing presses.

(*d*) Yes.

(*e*) Niveditha Printing Works, Pandavapura. Owner : Sri H. E. Ramakrishna.

(*f*) Yes.

(*g*) The paper required for printing ballot papers was supplied by the Returning Officers. The cost of printing of ballot papers per thousand is Rs. 3–10

ಶ್ರೀ ಎನ್. ಎ. ಚನ್ನೇಗೌಡ.—ಪಾಂಡವಪುರದಲ್ಲಿರುವ ಪ್ರೆಸ್ಸಿನಲ್ಲಿ ಆ ತಾಲ್ಲೂಕಿನ ಬ್ಯಾಲಟ್ ಪೇಪರ್‌ಗಳನ್ನು ಮುದ್ರಿಸಲಾಯಿತು ಎಂದು ಹೇಳಿದ್ದಾರೆ. ಆ ಪ್ರೆಸ್ ಆ ತಾಲ್ಲೂಕ್ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಯವರಿಗೆ ಸೇರಿದ್ದು. ಅಲ್ಲಿ ಬ್ಯಾಲಟ್ ಪೇಪರ್ ಮುದ್ರಿತವಾದುದರಿಂದ ಬ್ಯಾಲಟ್ ಪೇಪರುಗಳನ್ನು ದುರುಪಯೋಗಪಡಿಸಿಕೊಂಡಿಲ್ಲ ಎನ್ನುವುದು ಸರಕಾರಕ್ಕೆ ಖಾತ್ರಿಯಾಗಿದೆಯೇ ?

†ಶ್ರೀ ಪಿ. ಎಂ. ನಾಡಗೌಡ.—ಅವರು ತಾಲ್ಲೂಕು ಕಾಂಗ್ರೆಸ್ ಸೆಕ್ರೆಟರಿ ಇದ್ದಾರೋ ಯಾರು ಇದ್ದಾರೋ ಗೊತ್ತಿಲ್ಲ. ಡೈರೆಕ್ಟರ್ ಆಫ್ ಪ್ರಿಂಟಿಂಗ್ ಅವರು ಕಾಯಿದೆ ಪ್ರಕಾರ ಅಪ್ರೂವ್ಡ್ ಲಿಸ್ಟ್ ಕೊಟ್ಟಿದ್ದಾರೆ. ಅದರ ಪ್ರಕಾರ ಮಾಡಿಸಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—ಸರ್ಕಾರಿ ಮುದ್ರಣಾಲಯದಲ್ಲಿ ಅಚ್ಚು ಮಾಡಿಸದೆ ಖಾಸಗಿ ಪ್ರೆಸ್ಸುಗಳಲ್ಲಿ ಅಚ್ಚು ಮಾಡಿಸಿದ್ದು, ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲಬೇಕು ಎನ್ನುವ ಉದ್ದೇಶದಿಂದಲೇ ಸ್ವಾಮಿ ?

ಶ್ರೀ ಪಿ. ಎಂ. ನಾಡಗೌಡ.—ಹಾಗೇನೂ ಇಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ತುರ್ತಾಗಿ ತಾಲ್ಲೂಕು ಬೋರ್ಡ್ ಚುನಾವಣೆಗಳನ್ನು ನಡೆಸಬೇಕಾಯಿತು, ಷೆಡ್ಯೂಲ್ಡ್ ಪ್ರಕಾರ ಚುನಾವಣೆಗಳು ನಡೆಯಬೇಕಾಗಿತ್ತು. ಇಷ್ಟೆಲ್ಲ ಕೆಲಸ ಸರ್ಕಾರಿ ಮುದ್ರಣಾಲಯದಲ್ಲಿ ಆಗುವುದು ಶಕ್ಯವಿದ್ದಿಲ್ಲ. ಆದುದರಿಂದ ಡೈರೆಕ್ಟರ್ ಆಫ್ ಪ್ರಿಂಟಿಂಗ್ ಪ್ರೆಸ್ ಇವರಿಗೆ ರೆಫರ್ ಮಾಡಿದಾಗ ಅವರು ಕಳಿಸಿಕೊಟ್ಟ ಲಿಸ್ಟ್ ಪ್ರಕಾರ, ಅವರು ನಮೂದು ಮಾಡಿದ್ದ ಪ್ರೆಸ್‌ಗಳಲ್ಲಿ ಅಚ್ಚು ಮಾಡಿಸಲಾಯಿತು?

Sri D. B. KALMANKAR.—With reference to (*b*) may I know the kind of paper to be used for ballot ? Is it left to the discretion of the returning Officer concerned ?

Sri P. M. NADGAUDA.—The prescribed paper was supplied by the Government.

ಶ್ರೀ ಎಂ. ನಾಗಪ್ಪ.—ಎಷ್ಟು ಪ್ರೆಸ್ಸುಗಳಿಂದ ಟೆಂಡರು ಬಂದಿದೆ, ಅದರಲ್ಲಿ ಕಡಮೆಯಾಗಿರುವುದು ಯಾವುದು ಎಂಬ ತಪಶೀಲುಗಳನ್ನು ಸಭೆಯ ಟೇಬಲ್ ಮೇಲಿಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಈ ಕೆಲಸ ಸರಕಾರ ಮಾಡಿಲ್ಲ, ಡೈರೆಕ್ಟರ್ ಆಫ್ ಪ್ರಿಂಟಿಂಗ್ ಪ್ರೆಸ್ ಮಾಡಿರುತ್ತಾರೆ. ಇಂಥ ಪ್ರೆಸ್ಸುಗಳಿಗೆ ಈ ರೀತಿ ದರ ಕೊಡಬೇಕೆಂಬುದು ಅವರಿಗೆ ಗೊತ್ತಿದೆ. ಈಗ ಕೊಟ್ಟಿರುವ ದರಕ್ಕೆ ಯಾರೂ ಕೆಲಸ ಒಪ್ಪಿಕೊಳ್ಳಲು ತಯಾರಿರಲಿಲ್ಲ. ಅವರೂ ಕೂಡ ಸರಕಾರಿ ಕೆಲಸವೆಂದು ಅವರು ಒಪ್ಪಿದ್ದಾರೆ.

Sri H. SIDDAVEERAPPA.—I personally feel this is a fit question to be taken up for half-an-hour discussion.

Mr. SPEAKER.—I have no objection. Hon. Member may give notice of it.

Eradication of Untouchability

120. Sri M. H. JAYAPRAKASH NARAYAN (Sirsi).—

Will the Minister for Social Welfare be pleased to state :—

(*a*) the amount of money disbursed by them by way of reward to Village Panchayats from the date of bringing into force the competition in connection with eradication of untouchability and the scheme of giving rewards to Village Panchayats by the Social Welfare Department, till 31st March 1968 ;

(*b*) the Village Panchayats to which money has been given by way of rewards together with the amount given to each panchayat (yearwise information may pleased be given) ;

(*c*) whether there are state level, district level and taluk level Committees for such disbursements of rewards ; if so, the duties of such Committees ;

(*d*) whether the Harijans and Girijans living in Panchayat areas which have received such rewards ;

(i) enter the temples situated in the respective villages without any obstruction ;

(ii) enter the hotels and restaurants without any obstruction ;

(iii) drawing drinking water from public well without any obstruction ;

(iv) enter the Haircutting Saloons for hair dressing without any obstruction ;

(v) whether the village barber is attending to the hair dressing of the Harijans in the same way as he is doing in the case of others ;

(vi) whether the washerman is washing the clothes of Harijans ?

Sri V. L. PATIL (Minister for Social Welfare).—

(*a*) Rs. 2,59,000.

(*b*) *Vide* statement placed on the Table of the House.*

(*c*) Yes. Selection Committees have been constituted at taluk level, district level and state level to give rewards to Village Panchayats depending on the merit of the work turned out by the respective panchayats.

---

* Copy placed in the Mysore Legislature Library.

(*d*) (i) Yes.
(ii) Yes.
(iii) Yes.
(iv) Yes.
(v) Yes.
(vi) Yes.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಅಸ್ಪೃಶ್ಯತಾ ನಿವಾರಣ ಸ್ಪರ್ಧೆಯನ್ನು ಜಾರಿಗೆ ತಂದು ಸರಕಾರ ವಿವಿಧ ಪಂಚಾಯಿತಿಗಳಿಗೆ ಸುಮಾರು 2 ಲಕ್ಷ 59 ಸಾವಿರ ರೂಪಾಯಿಗಳನ್ನು ಹಂಚಿದೆ. ಬಹುಮಾನ ಪಡೆದ ಪಂಚಾಯಿತಿಗಳು ತಮ್ಮ ಕ್ಷೇತ್ರದಲ್ಲಿ ಯಾವ ಅಡ್ಡಿಯೂ ಇಲ್ಲದೆ (ಈ) ಪ್ರಶ್ನೆಯಲ್ಲಿ ಕೇಳಿರುವ ಕೆಲಸಗಳನ್ನು ಮಾಡುತ್ತಿರುವುದಾಗಿ ತಿಳಿಸಿದೆ. ಆದರೆ ಅದು ನಿಜವಲ್ಲ. ಆದುದರಿಂದ ಇದನ್ನು ಕೈಬಿಟ್ಟು ಕಾನ್‌ಫರೆನ್ಸ್, ಇಂಟರ್‌ಕ್ಯಾಸ್ಟ್ ಮ್ಯಾರೇಜ್, ಇಂಟರ್ ಡೈನಿಂಗ್ ಮೊದಲಾದುವನ್ನು ಮೊದಲು ಮಾಡುತ್ತಿದ್ದ ಹಾಗೆ ಮಾಡಿ ಆ ಬಗ್ಗೆ ಪ್ರಚಾರ ಮಾಡಿ, ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

Mr. SPEAKER.—The supplementary is irrelevant.

Sri M. H. JAYAPRAKASH NARAYAN.—The fundamental issue is removal of untouchability. Please see the heading—I am entitled to put that question, Sir.

Mr. SPEAKER.—Members need not go by the heading.

ಶ್ರೀ ಎಂ. ಎಸ್. ಕೃಷ್ಣನ್.—(ಡಿ) ಪ್ರಶ್ನೆಗೆ ಉತ್ತರವಾಗಿ ಹರಿಜನ ಗಿರಿಜನರು ಯಾವ ಅಡ್ಡಿ ಆತಂಕವಿಲ್ಲದೆ ದೇವಾಲಯಗಳಿಗೆ ಪ್ರವೇಶಿಸುವರು, ಹೊಟೇಲ್ ಮತ್ತು ರೆಸ್ಟೋರೆಂಟುಗಳಿಗೆ ಪ್ರವೇಶಿಸುವರು, ಸಾರ್ವಜನಿಕ ಬಾವಿಯಲ್ಲಿ ಕುಡಿಯುವ ನೀರನ್ನು ಸೇದುವರು, ಕ್ಷೌರದ ಅಂಗಡಿಯಲ್ಲಿ ಕ್ಷೌರ ಮಾಡಿಸಿಕೊಳ್ಳುತ್ತಿದ್ದಾರೆ, ಅಗಸರು ಅವರ ಬಟ್ಟೆಗಳನ್ನು ಒಗೆದುಕೊಡುತ್ತಿದ್ದಾರೆ ಎಂದು ತಿಳಿಸಲಾಗಿದೆ. ಆದರೆ ಕೊಟ್ಟಿರುವ ಉತ್ತರ ಸರಿಯಲ್ಲ. ಅದಕ್ಕೆ ಈ ಸಭೆಯ ಸದಸ್ಯರನ್ನು ಸೇರಿಸಿ ಒಂದು ಸ್ಪೆಷಲ್ ಸಮಿತಿಯನ್ನು ಮಾಡಿ, ಹರಿಜನ ಗಿರಿಜನರ ಕಲ್ಯಾಣವಾಗುವಂತೆ ಮಾಡುತ್ತೀರಾ?

† ಶ್ರೀ ಬಿ. ಎಲ್. ಪಾಟೀಲ್.—ಈ ಮಾನ್ಯ ಸಭೆಯಲ್ಲಿ ಹರಿಜನ ಗಿರಿಜನರು ಎಷ್ಟೋ ಮಂದಿ ಇದ್ದಾರೆ. ಅವರೂ, ತಾವೂ ಈ ಹಳ್ಳಿಗಳಿಗೆ ಬರಲಿ, ನಾನು ಅವರ ಜೊತೆಯಲ್ಲಿ ಹೋಗುತ್ತೇನೆ. ನಾನು ಕೊಟ್ಟಿರುವ ಉತ್ತರ ತಪ್ಪೆಂದು ಅಲ್ಲಿ ನೋಡಿದಾಗ ಗೊತ್ತಾದರೆ ಆಗ ಮಾನ್ಯ ಸದಸ್ಯರು ಹೇಳುವುದನ್ನು ಒಪ್ಪಬಹುದು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈಗ ಮೈಸೂರು ಸರ್ಕಾರದವರು ಈ ಬಗ್ಗೆ ಕೊಟ್ಟಿರತಕ್ಕ 2 ಲಕ್ಷ ಚಿಲ್ಲರೆ ರೂಪಾಯಿ ದುಡ್ಡು ಮಟನ್ ಷಾಪ್ ತೆರೆಯುವುದಕ್ಕೆ, ಫ್ಲೋರ್ ಮಿಲ್‌ಗಳನ್ನು ತೆರೆಯುವುದಕ್ಕೆ ಎನ್. ಇ. ಎಸ್.ನಲ್ಲಿ ಸ್ಕೂಲ್ ಬಿಲ್ಡಿಂಗ್ ಕಟ್ಟುವುದಕ್ಕೆ ಉಪಯೋಗಿಸುತ್ತಾ ಇದ್ದಾರೆ ಅಲ್ಲವೆ?

ಶ್ರೀ ಬಿ. ಎಲ್. ಪಾಟೀಲ್.—ಬ್ಲಾಕ್ ಲೆವಲ್ ಮತ್ತು ಸ್ಟೇಟ್ ಲೆವಲ್‌ನಲ್ಲಿ ಪಂಚಾಯಿತಿಗಳಿಗೆ ಈ ಹಣ ಕೊಡುವುದು ಅವಶ್ಯಕ, ಅದರ ಪ್ರಕಾರ ತೆಗೆದುಕೊಂಡಿದ್ದೇವೆ.

ಶ್ರೀ ಡಿ. ಎಸ್. ನಾಡಕರ್ಣಿ.—ಮಾನ್ಯ ಮಂತ್ರಿಗಳು ಹೇಳಿದರು ಹಳ್ಳಿಗಳಿಗೆ ಹೋಗಿ ನೋಡಿದ್ದೇನೆ ಎಂದು. ನಮ್ಮ ಹಳ್ಳಿಗಳಿಗೆ ಬಂದು ಅವರು ನೋಡಬೇಕು ಅಲ್ಲಿನ ಕಷ್ಟ, ತಾವು ಪ್ರವಾಸ ಅಲ್ಲಿ ಕೈಕೊಳ್ಳದಿದ್ದರೆ ನಾನು ರಾಜಿನಾಮೆ ಕೊಡುತ್ತೇನೆ.

ಅಧ್ಯಕ್ಷರು.—ಸದಸ್ಯರು ಪ್ರಶ್ನೆ ಕೇಳಬೇಕು.

ಶ್ರೀ ಎಸ್. ಎಸ್. ಅರಕೇರಿ.—ಸ್ಟೇಟ್ ಲೆವಲ್ ಕಮಿಟಿ ಮೆಂಬರುಗಳು ಯಾರು, ಸ್ವಾಮಿ! ಭೋಗಲೇಶ್ವರ ಊರಿನಲ್ಲಿ ಇವತ್ತಿನವರೆಗೂ ದೇವಸ್ಥಾನದ ಒಳಗೆ ಬಿಡುವುದಿಲ್ಲ. ಕ್ರಾಪ್ ಕಟಿಂಗ್ ಮಾಡುತ್ತಿಲ್ಲ. ಬೇಕಾದರೆ ನಾನು ಚಾಲೆಂಜ್ ಮಾಡುತ್ತೇನೆ. ತಾವು ಇದಕ್ಕೆ ಏನು ಹೇಳುತ್ತೀರಿ ಸ್ವಾಮಿ?

ಶ್ರೀ ವಿ. ಎಲ್. ಪಾಟೀಲ್.—ಆ ಪ್ರಕಾರ ಇದೆ ಎಂಬುದನ್ನು ನಜರಿಗೆ ತಂದು ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಚಂಪಾಬಾಯಿ ಬೋಗಲೆ.—ಈ ಅಸ್ಪೃಶ್ಯತೆ ನಿವಾರಣೆ ಮಾಡುವುದರ ಸಲುವಾಗಿ ಅಡ್ವರ್‌ಟೈಸ್ ಮಾಡುವುದಕ್ಕೆ ಮತ್ತು ಪ್ರಾಪಗ್ಯಾಂಡ್ ಮಾಡುವುದಕ್ಕೆ ಎಷ್ಟು ಜನರನ್ನು ನೇಮಕ ಮಾಡಿದ್ದೀರಿ ?

ಶ್ರೀ ವಿ. ಎಲ್. ಪಾಟೀಲ್.—ಅದು ಈ ಪ್ರಶ್ನೆಯಲ್ಲಿ ಬರುವುದಿಲ್ಲ.

Sri V. N. PATIL.—May I know whether the Government have any proposal to appoint a committee consisting of the members of this House to tour villages where such complaints are received ? I am of the opinion that invariably such injustices are done throughout the State ?

ಶ್ರೀ ವಿ. ಎಲ್. ಪಾಟೀಲ್.—ಅದಕ್ಕೂ ಈ ಪ್ರಶ್ನೆಗೂ ಸಂಬಂಧವಿಲ್ಲ.

ಶ್ರೀ ಎಂ. ನಾಗಪ್ಪ.—ಈ ಅನ್‌ಟಚ್‌ಬಿಲಿಟಿ ಆಕ್ಟ್ ಕೋರ್ಟ್ ಸ್ಟೋರೇಜ್‌ಗೆ ಕಳುಹಿಸಿದ್ದಾರೆ, ಚಲಾವಣೆಯಲ್ಲಿಲ್ಲ ಎಂದು ಕೇಳಿದ್ದೇನೆ, ಇದು ನಿಜವೇ ?

ಅಧ್ಯಕ್ಷರು.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ.

ಶ್ರೀ ಐ. ಸೋಮಶೇಖರಪ್ಪ.—ಸ್ಟೇಟ್ ಲೆವಲ್, ತಾಲ್ಲೂಕು ಲೆವಲ್ ಮತ್ತು ಡಿಸ್ಟ್ರಿಕ್ಟ್ ಲೆವಲ್ ಕಮಿಟಿಯಲ್ಲಿ ಯಾರ್‍ಯಾರು ಇರುತ್ತಾರೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಬ್ಲಾಕ್ ಲೆವಲ್, ಡಿಸ್ಟ್ರಿಕ್ಟ್ ಲೆವಲ್ ಮತ್ತು ಸ್ಟೇಟ್ ಲೆವಲ್‌ನಲ್ಲಿ ಕಮಿಟಿ ಇದೆ. ಬ್ಲಾಕ್ ಲೆವಲ್‌ನಲ್ಲಿ 2 ಜನರನ್ನು ಆರಿಸಿ ಕಳುಹಿಸುತ್ತಾರೆ. ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಸೆಲೆಕ್ಟ್ ಮಾಡಿದಂತಹ 3 ಜನರನ್ನು ಸ್ಟೇಟ್ ಲೆವಲ್‌ಗೆ ಕಳುಹಿಸುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಗಸರು ಮತ್ತು ಬಾರ್‌ಬರ್ಸ್ ಅವರಿಗೆ ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆಂಬ ಅಪಾದನೆಗಳು ಕೇಳಿಬರುತ್ತಿವೆ. ಅದು ನಿಜವಾಗಿದ್ದರೆ ಅವರು ಆ ಕೆಲಸಗಳನ್ನು ಕಡ್ಡಾಯವಾಗಿ ಮಾಡಲೇಬೇಕು ಎಂಬುದಾಗಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸುವುದಕ್ಕೆ ಸಾಧ್ಯವೇ ?

ಶ್ರೀ ವಿ. ಎಲ್. ಪಾಟೀಲ್.—ಸರ್ಕಾರದ ನಜರಿಗೆ ತಂದರೆ ಕ್ರಮ ಕೈಗೊಳ್ಳುತ್ತಾರೆಂದು ಹೇಳಿದೆ.

Hemavathi Project

122. Sri H. B. JWALANAIAH (Hassan).—

Will the Chief Minister be pleased to state :—

(a) the relief given to the ryots of Hassan taluk whose lands will be submerged under Hemavathi Project ;

(b) whether Government is aware of the fact that the lands down the Hemavathy Channel in Hassan District as well as Mandya District are distributed indiscriminately without giving priority to the ryots of Hassan Taluk who will loose their lands on account of sumbersion ?

Sri D. PARAMESWARAPPA (Deputy Minister for Major Irrigation and Electricity)

(*a*) The following relief will be given to the persons whose lands would get submerged under Hemavathi Project.

(i) Payment of compensation.

(ii) Payment of Rental Compensation.

(iii) Grant of lands in lieu of those acquired.

(iv) Providing of sites and amenities in case the villages are to be shifted elsewhere.

(*b*) There are no such instances.

ಶ್ರೀ ಎಚ್. ಬಿ. ಜ್ವಾಲನಯ್ಯ.—ಇಲ್ಲಿಗೆ (ಎ)ಗೆ ಉತ್ತರವಾಗಿ ನಾಲ್ಕು ರೀತಿಯಲ್ಲಿ ಪರಿಹಾರವನ್ನು ಕೊಡಲಾಗುತ್ತದೆ ಎಂದು ಹೇಳಿದೆ. ಇಲ್ಲಿಯವರೆಗೂ ಒಟ್ಟು ಮುಳುಗಡೆ ಆಗಿರತಕ್ಕ ಜಮೀನೆಷ್ಟು ಮತ್ತು ಒಟ್ಟು ಎಷ್ಟು ಪರಿಹಾರ ಕೊಡಲಾಗಿದೆ.

†**Sri D. PARAMESWARAPPA.**—The total extent of the land under submersion is 16,301 acres. We have not paid compensation so far because we have not yet finalised the acquisition proceedings. The acquisition proceedings taken in this respect are at various stages. If the hon. Member wants to know it, I am prepared to furnish that information.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹೇಮಾವತಿ ಪ್ರಾಜೆಕ್ಟಿನ ನಾಲೆಯನ್ನು ತೆಗೆಯುವ ಸಂದರ್ಭದಲ್ಲಿ ಅಲ್ಲಿ ಜಮೀನನ್ನು ಕಳೆದುಕೊಳ್ಳತಕ್ಕ ರೈತರಿಗೆ ಅಲ್ಲಿ ಕೊಡತಕ್ಕ ಜಮೀನಿನಲ್ಲಿ ಮೊದಲು ಹಾಗೆ ಜಮೀನು ಕಳೆದುಕೊಂಡವರಿಗೆ ಮೊದಲು ಜಮೀನು ಕೊಡತಕ್ಕ ವ್ಯವಸ್ಥೆಯನ್ನು ಮಾಡಲಾಗಿದೆಯೇ ?

Sri D. PARAMESWARAPPA.—We have already issued circulars to the Deputy Commissioners of Mysore, Hassan and Mandya Districts to reserve as far as possible the lands for the expropriated ryots.

ಶ್ರೀ ಕೆ. ಪಿ. ಚಿಕ್ಕೇಗೌಡ.—ವಾಟೇಪುರ ಮುಳುಗಡೆಯಾಗುವುದರಿಂದ ಅಲ್ಲಿಯ ಜನಕ್ಕೆ ಬೇರೆ ಕಡೆ ನಿವೇಶನಗಳನ್ನು ಒದಗಿಸಲಾಗಿದೆಯೇ ?

Sri D. PARAMESWARAPPA.—No such instances have been brought to our notice.

Sri H. N. NANJE GOWDA.—Is it not a fact that due to the delay in giving compensation, the ryots have refused to give up their land and the contractor has not been able to have an approach road and therefore he has stopped the work ?

Sri D. PARAMESWARAPPA.—I cannot agree that there has been any delay. We are expediting the payment of compensation. On the other hand we have constituted a committee to review the progress of rehabilitation work.

Sri H. N. NANJE GOWDA.—Is it not a fact that the contractor has stopped the work ?

Sri D. PARAMESWARAPPA.—I do not know whether the contractor has stopped the work on account of the reason given by the hon. Member or for any other reason.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈಗ ಅಣೆಕಟ್ಟಿನ ಎತ್ತರವನ್ನು ಕಡಿಮೆ ಮಾಡಬೇಕೆಂದು ಅಂದಾಜು ಮಾಡಲಾಗಿದೆ ಎಂದು ಕೇಳುತ್ತಿದ್ದೇನೆ, ಅದು ನಿಜವೇ? ಸರ್ಕಾರದವರು ಮೊದಲು ಏನೊಂದು ಆ ಹೈಲೆವಲ್‌ಗೆ ಡ್ಯಾಮನ್ನು ಕಟ್ಟಬೇಕೆಂದಿದ್ದರೋ ಅದರ ಪ್ರಕಾರ ಒಟ್ಟು ಎಷ್ಟು ಜಮೀನು ಮುಳುಗಡೆಯಾಗುತ್ತದೆ? ಅವರೆಲ್ಲರಿಗೂ ಪುನರ್ವಸತಿಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆಯೇ?

Sri D. PARAMESWARAPPA.—This question does not pertain to that. If a separate question is put, I will answer.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಧ್ಯವಾದಮಟ್ಟಿಗೂ ಎಂದು ಹೇಳುತ್ತಿದ್ದಾರೆ. ಹಾಗೆ ಮಾಡದೆ ಜಮೀನುಮುಳುಗಡೆ ಆದವರಿಗೆ ಅಲ್ಲಿ ಪ್ರಪ್ರಥಮವಾಗಿ ಜಮೀನನ್ನು ಕೊಡಬೇಕೆಂಬ ಒಂದು ಕಡ್ಡಾಯವಾದ ಆಜ್ಞೆಯನ್ನು ಸರ್ಕಾರದವರು ಮಾಡುವುದಕ್ಕೆ ಸಾಧ್ಯವಿಲ್ಲವೇ?

Sri D. PARAMESWARAPPA.—I have already given that answer. I have stated that the Government has issued circular to the concerned Deputy Commissioners to reserve land in favour of the expropriated ryots and preference will be given to them.

12-30 P.M.

Marathi News papers

149. Sri B. B. SAYANAK (Belgaum).—

Will the Minister for Education be pleased to state :—

(a) whether the Administrative Officer of Belgaum District School Board had given an advertisement in Poona Daily "Sakal".

(b) if so, the reason for not giving the advertisement in the District to the Lokal Marathi News paper?

Sri N. M. KOTRABASAIAH SOGI (Deputy Minister for Education).—

(a) Yes.

(b) Advertisements are given in the paper having largest circulation in the District.

Sri B. B. SAYANAK.—It is replied in answer to (b) that advertisements are given in the paper having the largest circulation in the District. May I know the name of the Marathi paper which is having the largest circulation in Belgaum District?

Sri N. M. KOTRABASAIAH SOGI.—"Shakal" is the Newspaper having the largest circulation.

Sri B. B. SAYANAK.—"Shakal" is not a Marathi paper, published from Belgaum District.

Sri N. M. KOTRABASAIAH SOGI.—Of course, it is not published from Belgaum District. It is published from Poona. Anyway, advertisement is given to it. Giving advertisement is completely the duty of the School Boards; they are autonomous bodies and they have given the advertisements to the largest circulated Marathi newspaper in the District.

Water receded area of K.R. Sagar

194. Sri M. BASAVARAJU (K. R. Nagar).—

Will the Chief Minister be pleased to state :—

(a) the extent of water receded area of Krishnarajasagar in Krishnarajanagar Taluk ;

(b) how much of it has been brought under cultivation ;

(c) whether there has been any proposal to have a crop pattern for Achkat land ;

(d) whether there has been any representation made in this regard and the steps that the Government proposed to take about it ?

Sri D. PARAMESWARAPPA (Deputy Minister for Major Irrigation and Electricity).—

(a) The water receded area of Krishnarajasagar cannot be assessed as it varies, depending upon the water levels in Krishnarajasagar.

(b) There is no proposal for giving that area for cultivation.

(c) The question it not clear.

(d) Does not arise in view of reply to clause (c).

ಶ್ರೀ ಎಂ. ಬಸವರಾಜು.—(ಎ) ಮತ್ತು (ಬಿ)ಗೆ ಉತ್ತರವಾಗಿ ಸ್ಥಾನಿಕ ಅಧಿಕಾರಿಗಳು ಏನಾದರೂ ಶ್ರಮವಹಿಸಿದ್ದರೆ ಪ್ರಾಪರ್ ಆಗಿ ಸರ್ಕಾರದವರು ಉತ್ತರ ಕೊಡುತ್ತಿದ್ದರು. ಅಲ್ಲಿರತಕ್ಕ 3,006 ಎಕರೆ ಪೈಕಿ 2,000 ಎಕರೆಯನ್ನು ಕಳೆದ 20 ವರ್ಷಗಳಿಂದಲೂ ಸಾಗುವಳಿಗೆ ಕೊಡುತ್ತೇವೆಂದು ಹೇಳಿ ಪಾರ್ಟಿಸ್ಪೈಷಮ್ಯ ಬರುತ್ತಾ ಇದೆ. ಆದ್ದರಿಂದ ಯಾರ್ಯಾರು ಲ್ಯಾಂಡ್‌ಲೆಸ್ ಇದ್ದಾರೋ ಅವರಿಗೆ ಅದನ್ನು ಕೊಡುವ ಹಾಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

Sri D. PARAMESWARAPPA.—I have no information at present that lands have been granted for cultivation in the water receded area but if such lands are given for cultivation, I will see that suitable action is taken to evict them.

ಶ್ರೀ ಎಂ. ಬಸವರಾಜು.—ಬೇಸಿಗೆ ಕಳೆಯುವುದರೊಳಗೆ ಸಾಗುವಳಿ ಚೀಟಿ ಕೊಡುತ್ತೀರಾ ? ಇಲ್ಲದಿದ್ದರೆ ಹೊಳೆಗಳಲ್ಲಿ ನೀರು ಬಂದು ಬೇಕಾದಷ್ಟು ವೇಸ್ಟ್ ಆಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri D. PARAMESWARAPPA.—The question is not clear. I do not know whether the Member refers to *atchkat* or the receded area.

Mr. SPEAKER.—There appears to be some confusion. The Member may clarify whether he wants information in regard to atchkat or receded area.

ಶ್ರೀ ಎಂ. ಬಸವರಾಜು.—ರೆಸಿಡೆಡ್ ಏರಿಯಾದಲ್ಲಿ ಎರಡು ಸಾವಿರ ಎಕರೆ ಪ್ರದೇಶವನ್ನು 20 ವರ್ಷಗಳಿಂದಲೂ ಹಾಗೆಯೇ ಇಟ್ಟಿದ್ದಾರೆ. ಇದರ ಬಗ್ಗೆ ಸ್ಥಾನಿಕ ಅಧಿಕಾರಿಗಳು ಸರಿಯಾದ ಉತ್ತರವನ್ನು ಕೊಡಲಿಲ್ಲ. ಒಂದು ವರ್ಷದಿಂದ ಡಬ್ಬಲ್ಲಾಗಿ ಅಸೆಸ್‌ಮೆಂಟ್ ಕೊಟ್ಟಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮಳೆಗಾಲದಲ್ಲಿ ಮೂರು ತಿಂಗಳು ಮಾತ್ರ ನೀರು ಇರುತ್ತದೆ. ಆದ್ದರಿಂದ ಪರ್ಮನೆಂಟಾಗಿ ಸಾಗುವಳಿಗೆ ಆ ಪ್ರದೇಶವನ್ನು ಕೊಡುತ್ತೀರಾ ?

Sri D. PARAMESWARAPPA.—I have already made it clear that such cultivation will be discouraged hereafterwards and that question does not arise here.

Kattalagere Gomal Land

218. Sri N. G. HALAPPA (Channagiri).—

Will the Minister for Revenue be pleased to state :—

(*a*) whether it is the Chief Minister or the Minister for Revenue, that ordered Stay of the eviction proceedings of Kattalagere Gomal land, subsequent to the reply to the Starred Question Sl. 379 (No. 338), 28th List (III Session) and the conditions, if any, attached to the Stay Order ;

(*b*) the grounds on which the Stay Order was issued ;

(*c*) whether the Stay Order passed is in accordance with law ;

(*d*) whether the Ex-M.L.A. of Channagiri and his party-men (who are holders of sufficient land, and all of whom are members of the Congress Party), have unauthorisedly cultivated the land and that the Stay Order has been issued only on that score ;

(*e*) since when the unauthorised cultivation has taken place ;

(*f*) whether the Government collected the T. T. fine that has been levied, if so, the amount collected so far ; if not, the amount still due to be collected and the step that are now being taken to collect the same ?

Sri H. V. KOUJALGI (Minister for Revenue).—

(*a*) Government. To reap the standing crop by the persons who raised the same.

(*b*) The Stay Order was issued to harvest the standing crop.

(*c*) Yes.

(*d*) The order for evicting unauthorised cultivation has not been cancelled. The Stay is for purpose of enabling standing crops being harvested.

(*e*) Since 1959-60.

(*f*) A sum of Rs. 61,586-16 paise has been levied as T. T. fine. Action is being taken to recover the amount according to rules.

ಶ್ರೀ ಎನ್. ಜಿ. ಹಾಲಪ್ಪ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ 'ತಡೆಯಾಜ್ಞೆಯನ್ನು ನೀಡಲಾಯಿತು' ಎಂದು ಹೇಳಿದ್ದೀರಿ. ಈ ರೀತಿಯಾಗಿ ಮೂರು ಸಾರಿ ಕೊಟ್ಟಿದ್ದೀರಿ. ಸುಮಾರು 300 ಎಕರೆಗಳಲ್ಲಿ ನಿಮ್ಮ ಪಕ್ಷದವರೇ ಸಾಗು ಮಾಡುತ್ತಿದ್ದಾರೆ. ಅಲ್ಲಿ ಎವಿಕ್ಷನ್ ಮಾಡುತ್ತೀರಾ ?

† **Sri H. V. KOUJALGI.**—The area under illegal cultivation is 161 acres and not 300 acres. According to records, stay has been granted twice and now instructions have been issued to vacate them.

ಶ್ರೀ ಎನ್. ಜಿ. ಹಾಲಪ್ಪ.—ನಾನು ಕೇಳಿದ ಪ್ರಶ್ನೆಗೆ ಅನಧಿಕೃತ ಸಾಗುವಳಿದಾರರನ್ನು ಹೊರದೂಡುವ ಆದೇಶವನ್ನು ರದ್ದುಗೊಳಿಸಿರುವುದಿಲ್ಲ, ಕೊಯ್ಲಿಗೆ ಬಂದಿರುವ ಬೆಳೆಗಳನ್ನು ಕೊಯ್ಲು ಮಾಡಲನುಕೂಲಿಸುವುದೇ ಈ ತಡೆಯಾಜ್ಞೆಯ ಉದ್ದೇಶವೆಂದು ಹೇಳಿದ್ದೀರಿ. ಇದು ನಿಮ್ಮ ಕಾಂಗ್ರೆಸ್ ಪಕ್ಷದವರಿಗೆ ಬೇಕಾಗಿ ಮಾಡಿದ್ದಲ್ಲವೇ? ಅನೇಕ ಬಡವರಿಗೆ ಈ ರೀತಿ ಗಣನೆಗೆ ತೆಗೆದುಕೊಂಡು ಅನುಕೂಲ ಮಾಡುತ್ತಿಲ್ಲ ಇದು ಸರಿಯೇ?

ಶ್ರೀ ಎಚ್. ವಿ. ಕೌಜಲಗಿ.—ಅದನ್ನು ಆಕ್ಯುಪೈ ಮಾಡಿದವರು ಯಾವ ಪಕ್ಷಕ್ಕೆ ಸೇರಿದವರು ಎಂದು ನನಗೆ ಗೊತ್ತಿಲ್ಲ.

Sri K. H. RANGANATH.—May I know whether an ex-M.L.A. is one of the unauthorised cu'tivator in the Gomal land? If so, since how long he is cultivating there?

Sri H. V. KOUJALGI.—He is an ex-M.L.A. and he is in possession from 1959-60.

ಶ್ರೀ ಎಸ್. ಬಂಗಾರಪ್ಪ.—ಬೆಳೆ ಮಾಡಿರುವವರು ಕೊಯ್ಲಿಗೆ ಬಂದ ಬೆಳೆಗಳನ್ನು ಕೊಯ್ಲು ಮಾಡುವ ಸಲುವಾಗಿ, ತಡೆಯಾಜ್ಞೆಯನ್ನು ನೀಡಲಾಯಿತು ಎಂದು ಹೇಳಿದ್ದೀರಿ. ಅದೇ ರೀತಿ ಮೈಸೂರು ರಾಜ್ಯದಲ್ಲಿರತಕ್ಕ ಎಲ್ಲಾ ಜಮೀನುಗಳಲ್ಲಿ ಅನುಕೂಲ ಮಾಡಿಕೊಡುತ್ತೀರಾ?

Mr. SPEAKER.—The Hon. Member cannot ask a general question. The supplementary is irrelevant and therefore it is disallowed.

Sri H. SIDDAVEERAPPA.— It is stated that this cultivation has been going on since 1959-60 and that T.T. fine has been levied. May I know if in these nine years the Government have recovered even one paise of T.T. fine and if they have not recovered, does it not show that the Government have abdicated their rights in favour of those who are cultivating those lands?

Sri H. V. KOUJALGI.—It is true that the fine amount has not been recovered. Of course, steps are already taken to collect the amount. I do not admit the latter part of the question.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ವಾಮಿ, 1959ನೇ ಇಸವಿಯಿಂದ ಅವರು ಜಮೀನನ್ನು ಕಲ್ಟಿವೇಟ್ ಮಾಡುತ್ತಿದ್ದಾರೆ. ಇದು ತಮ್ಮ ಪಾರ್ಟಿಯವರೆಂದು 9 ವರ್ಷದವರೆಗೂ ಅವರನ್ನು ಎವಿಕ್ಟ್ ಮಾಡಲಿಲ್ಲವೆಂದು ತಾವು ಒಪ್ಪಿಕೊಳ್ಳುತ್ತೀರಾ, ಸ್ವಾಮಿ?

ಶ್ರೀ ಎಚ್. ವಿ. ಕೌಜಲಗಿ.—ಅವರು ಯಾವ ಪಕ್ಷದವರು ಎಂದು ಗೊತ್ತಿಲ್ಲವೆಂದು ಮೊದಲೇ ನಾನು ಹೇಳಿದ್ದೇನೆ.

Mr. SPEAKER.—Next question.

Sri H. SIDDAVEERAPPA.—This is an important question. I have some more supplementaries. Some more time may be given on this question.

Mr. SPEAKER.—I have called the next question. The member can make use of another appropriate occasion for attacking the Government.

Assets and Liabilities of Erstwhile Chickmagalur District Board

353. Sri M. MALLAPPA (Birur).—

Will the Minister for Development be pleased to state :—

(*a*) the Assets and Liabilities apportioned between erstwhile District Boards and Taluk Boards in Chickmagalur District at the time of formation of taluk boards ;

(*b*) the basis for such apportionment of assets and Liabilities ;

(*c*) whether the value of the erstwhile District Board Building in Chickmagalur District has been apportioned among the Taluk Boards ;

(*d*) if so, the amount paid to each Taluk Board ?

Sri P. M. NADGOUDA (Minister for Development).—

(*a*) The Assets and Liabilities of erstwhile District Board have been apportioned among Taluk Boards of Chickmagalur District as per Government Order No. (1) LLH 33 BAD 60, Dated 4th August 1961. (2) LLH 33, BAD 60, Dated 5th June 1962. (3) DPC 37 BAD 67 Dated 11th September 1968. Copies of which are placed on the table of the House. (Copies placed in the Mysore Legislature Library).

(*b*) On population basis.

(*c*) Yes.

(*d*) The value of the building has been apportioned among the Taluk Board as detailed under :—

1.	Chickmagalure	...	12,760-00
2.	Mudigere	...	7,932-00
3.	Koppa	...	6,738-00
4.	N.R. Pura	...	2,852-00
5.	Sringeri	...	1,280-00
6.	Kadur	...	17,346-00
7.	Tarikere	...	11,090-00
	Total	...	60,000-00

Sri M. MALLAPPA.—What has happened to the building ? Who is in possession of it ?

† Sri P. M. NADGOUDA.—It is in possession of the President of the District Development Council.

Sri M. MALLAPPA.—The Government has nearly taken 10 years to apportion the assets and liabilities between the various Taluka Boards in the district. Has any final decision been taken or are any assets pending to be apportioned between the Taluk Boards ?

Sri P. M. NADGOUDA.—I may submit to the Hon. House that the whole matter has been finalised and in this deal this district gets about Rs. 1,40,000 including the cost of the District Board building. So, the amount will be adjusted accordingly by the Deputy Commissioner in consultation with the Accountant General of the State.

Sri M. MALLAPPA.—What has happened to Ajjampur and who was formerly in control of the District Board building ?

Sri P. M. NADGOUDA.—That is under the active consideration of the Government.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ ಜಿಲ್ಲಾ ಪರಿಷತ್ತನ್ನು ಮತ್ತೆ ಜಾರಿಗೆ ತರತಕ್ಕಂಥ ಆಶೆಯನ್ನು ಇಟ್ಟುಕೊಂಡರೆ, ಜಿಲ್ಲಾಪರಿಷತ್ತಿಗಾಗಿ ಡಿಸ್ಟ್ರಿಕ್ಟ್ ಬೋರ್ಡಿಗೆ ಇದ್ದಂತಹ ಆಸ್ತಿಯನ್ನು ಉಳಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತೀರಾ ಅಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಜಿಲ್ಲಾ ಪರಿಷತ್ ಮಾಡಬೇಕು, ಈ ಬಿಲ್ಡಿಂಗ್ ಅದಕ್ಕೆ ಉಪಯೋಗ ಮಾಡಬೇಕೆಂದು ಸರ್ಕಾರದವರು ವಿಚಾರಮಾಡಿ ಇಷ್ಟು ತಡಮಾಡಿದರು. ಡಿಸ್ಟ್ರಿಕ್ಟ್ ಬೋರ್ಡಿನ ಅಸೆಟ್ಸ್ ಅಂಡ್ ಲಯಬಿಲಟೀಸ್‌ಅನ್ನು ಇದಕ್ಕೆ ಡಿಸ್ಟ್ರಿಬ್ಯೂಟ್‌ಮಾಡಿ ಆ ಬಿಲ್ಡಿಂಗಿಗೆ ಮಾರ್ಕೆಟ್ ವ್ಯಾಲ್ಯುಯೇಷನ್‌ಮಾಡಿ ಅವರು ಆ ದುಡ್ಡನ್ನು ಕೊಟ್ಟು ನಮಗೆ ಕೊಡಿ ಎಂದರೆ ಅದನ್ನು ಜಿಲ್ಲಾ ಪರಿಷತ್ತಿಗೇ ಕೊಡುತ್ತಾರೆ.

Family Budget Survey

358. Sri M. S. KRISHNAN (Malleswaram).—

Will the Minister for Finance, Planning and Youth Welfare be pleased to state :—

the details of the report of the family budget survey for working class and middle-class separately conducted, if any, for the following centres for the purpose of determining consumer price index numbers;

(i) Bangalore —1955—56 and 1959.

(ii) Centres in Old Mysore, (Mysore, Davangere, Bhadravathi, Harihar, Hassan, Chitraduga) — 1935—36, 1959.

(iii) Mangalore ... 1944

(iv) Gulbarga ... 1944

(v) Bellary ... 1935

Sri K. PUTTASWAMY (Minister for Law, Labour and Parliamentary Affairs [On behalf of SRI RAMAKRISHNA HEGDE (Minister for Finance, Planning and Youth Welfare)]

Details of family budget surveys for working classes conducted during 1935-36, 1943-44 and 1958-59 are not available. No such survey was conducted for Bangalore Centre during 1955-56.

(SRI K. PUTTASWAMY)

Fresh family budget surveys for the centres of (1) Mysore (2) Mangalore, (3) Davangere, (4) Bellary and (5) Gulbarga have been taken up and new series of Index numbers would be available for the above centres soon after the completion of survey work.

The State Government is not constructing the C.P.I. numbers for Middle class income group (Urban non-manual employees). However, the Central Statistical Organisation, New Delhi is publishing the above index on all India basis with base 1960–100 in respect of Bangalose, Gulbarga, Hubli, Dharwar and Mangalore centres.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ 1935-36, 1942-44 ಮತ್ತು 1958-59ನೇ ಸಾಲುಗಳಲ್ಲಿ ಕಾರ್ಯನಿರ್ವಾಹಕ ವರ್ಗಗಳ ಬಗ್ಗೆ ನಡೆಸಿದ ಕುಟುಂಬ ಆಯವ್ಯಯ ಸಮೀಕ್ಷೆಗಳ ವಿವರಗಳು ದೊರೆಯುವಂತಿಲ್ಲ ಎಂದು ಹೇಳಿದ್ದೀರಿ ಅದು ಏನಾಯಿತು ?

†ಶ್ರೀ ಕೆ. ಪುಟ್ಟಸ್ವಾಮಿ.—ಅದು ಏನಾಯಿತು ಎಂಬುದು ನಮಗೂ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಬೆಂಗಳೂರು ಸೆಂಟರಿನಲ್ಲಿ 1955-56ನೇ ಸಾಲಿನಲ್ಲಿ ಅಂಥಾ ಯಾವ ಸಮೀಕ್ಷೆಯನ್ನು ನಡೆಸಲಿಲ್ಲ ಎಂದು ಹೇಳಿದ್ದೀರಿ, ಹಾಗಾದರೆ 1959ನೇ ಇಸವಿಯಲ್ಲಿ ಸಮಿಕ್ಷೆಯನ್ನು ಮಾಡಿದೆ ಎಂದು ಅರ್ಥವೇ ?

ಶ್ರೀ ಕೆ. ಪುಟ್ಟಸ್ವಾಮಿ.—1955ನೇ ಇಸವಿಯಲ್ಲಿ ಮಾಡಲಿಲ್ಲ. 1959ನೇ ಇಸವಿಯಲ್ಲಿ ಮಾಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಎರಡನೇ ಪ್ಯಾರಾದಲ್ಲಿ ಮೈಸೂರು, ಮಂಗಳೂರು, ದಾವಣಗೆರೆ, ಬಳ್ಳಾರಿ ಮತ್ತು ಗುಲ್ಬರ್ಗ ಕೇಂದ್ರಗಳ ಬಗ್ಗೆ ಹೊಸ ಕುಟುಂಬ ಆಯವ್ಯಯ ಸಮೀಕ್ಷೆಯನ್ನು ಕೈಕೊಳ್ಳಲಾಗಿದ್ದು ಈ ಸಮೀಕ್ಷಾ ಕಾಮಗಾರಿಯು ಪೂರೈಸಿದ ತತ್‌ಕ್ಷಣದಲ್ಲಿಯೇ ಮೇಲ್ಕಂಡ ಕೇಂದ್ರಗಳ ಬಗ್ಗೆ ಸೂಚ್ಯಂಕಗಳ ಹೊಸ ಸರಣಿಗಳು ದೊರೆಯುತ್ತವೆ ಎಂದು ಹೇಳಿದ್ದೀರಿ, ಅದರಲ್ಲಿ ಬೆಂಗಳೂರು ಬಿಟ್ಟುಹೋಗಿದೆ. ಬೆಂಗಳೂರಿನದನ್ನು ಮಾಡುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೇವೆಂದು ಭರವಸೆ ಕೊಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಅದನ್ನು ಆಲೋಚನೆ ಮಾಡುತ್ತೇವೆ.

Nationalisation of Bus Routes

438. SRI P. VENKATAGIRIYAPPA (Kolar).—

Will the Minister for Transport be pleased to state:—

(*a*) the number of private buses that ceased to operate consequent on the nationalisation of bus routes in Kolar District and the number of workers that have become unemployed as a result of the same;

(*b*) the number of such unemployed workers absorbed in the M.S.R.T.C.;

(*c*) whether the majority of the workers recruited recently are from outside Kolar District;

(*d*) whether recruitment rules were relaxed to enable the experienced unemployed workers to secure jobs in M.S.R.T.C.?

Sri H. C. BORIAH (Deputy Minister for Transport).—

(*a*) Number of private buses that ceased to operate.	...	67.
Number of workers unemployed.	...	Information is not readily available.

(*b*) Information is not readily available.

(*c*) Yes.

(*d*) No.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೋಲಾರ ಜಿಲ್ಲೆಯಲ್ಲಿ ರಾಷ್ಟ್ರೀಕರಣವಾದಮೇಲೆ ಎಷ್ಟು ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದೀರಿ. ಅವರಲ್ಲಿ ಎಷ್ಟು ಜನ ಡ್ರೈವರ್‌ಗಳು, ಕಂಡಕ್ಟರ್‌ಗಳು, ಹೆಲ್ಪರ್ಸ್‌ಗಳು, ವಾಚ್‌ಮನ್‌ಗಳನ್ನು ಕೋಲಾರದಿಂದ ತೆಗೆದುಕೊಂಡಿದ್ದೀರಿ, ಎಷ್ಟು ಜನರನ್ನು ಹೊರಗಡೆಯಿಂದ ತೆಗೆದುಕೊಂಡಿದ್ದೀರಿ ?

†ಶ್ರೀ ಎಚ್. ಸಿ. ಬೋರಯ್ಯ.—ಒಟ್ಟು ತೆಗೆದುಕೊಂಡಿರುವವರು 441. ಇದರಲ್ಲಿ :

	ಹೆಲ್ಪರ್ಸ್	...	40
	ಡ್ರೈವರ್ಸ್	...	205
	ಕಂಡಕ್ಟರ್ಸ್	...	170
	ಜವಾನರು	...	11
	ಸ್ವೀಪರ್ಸ್	...	3
	ವಾಚ್‌ಮನ್	...	12
ಕೋಲಾರ ಜಿಲ್ಲೆಯವರು :	ಹೆಲ್ಪರ್ಸ್	...	21
	ಡ್ರೈವರ್ಸ್	...	153
	ಕಂಡಕ್ಟರ್ಸ್	...	7
	ಜವಾನರು	...	1
	ಸ್ವೀಪರ್	...	1
	ವಾಚ್‌ಮನ್	...	3

ಶ್ರೀ ಪಿ. ವೆಂಕಟಗಿರಿಯಪ್ಪ.—ಈಗ 100ಕ್ಕೆ 25ರಷ್ಟನ್ನು ಮಾತ್ರ ಕೋಲಾರ ಜಿಲ್ಲೆಯವರನ್ನು ತೆಗೆದುಕೊಂಡಿದ್ದೀರಿ. ಅದರಲ್ಲೂ ಮೂರು ವಾಚ್‌ಮನ್‌ಗಳನ್ನು 21 ಜನ ಹೆಲ್ಪರ್‌ಗಳನ್ನು ತೆಗೆದುಕೊಂಡಿದ್ದೀರಿ. ಅಂದರೆ ಕೋಲಾರ ಜಿಲ್ಲೆಯವರು ವಾಚ್‌ಮನ್ ಕೆಲಸಕ್ಕೆ ಲಾಯಕ್ ಇಲ್ಲ ಎಂದು ಅರ್ಥವೇ ?

ಶ್ರೀ ಎಚ್. ಸಿ. ಬೋರಯ್ಯ.—ನಮಗೆ ಬೇಕಾದಂತಹ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಅಪ್ಲಿಕೇಷನ್‌ಗಳನ್ನು ಕಾಲ್‌ಫಾರ್ ಮಾಡಿದ್ದೆವು. ಬಂದಂತಹ ಅಪ್ಲಿಕೇಷನ್‌ಗಳಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್‌ಗೆ ಅನುಗುಣವಾಗಿರುವಂತಹವರನ್ನು ಆರಿಸಿಕೊಂಡಿದ್ದೇವೆ. ಕೋಲಾರ ಜಿಲ್ಲೆಯವರನ್ನು ಸಹ ಯೋಗ್ಯರಾದವರನ್ನು ಆರಿಸಿಕೊಂಡಿದ್ದೇವೆ. ಕೋಲಾರ ಜಿಲ್ಲೆಯಲ್ಲಿ ಯೋಗ್ಯರಾದವರು ಯಾರು ಇರಲಿಲ್ಲ ಎಂದು ಅರ್ಥವಲ್ಲ.

ಶ್ರೀಮತಿ ಕೆ. ಲೀಲಾವತಿ ರೈ.—(ಈ) ಪ್ರಶ್ನೆಗೆ ಉತ್ತರವಾಗಿ "ಇಲ್ಲ," ಎಂದು ಹೇಳಿದ್ದೀರಿ. ಈಗ ಕಂಡಕ್ಟರ್‌ಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾದರೆ ಎಸ್.ಎಸ್.ಎಲ್.ಸಿ. ಮಿನಿಮಮ್ ಕ್ವಾಲಿಫಿಕೇಷನ್ ಎಂದು ಇದೆ. ಇದನ್ನು ಸಡಿಲಗೊಳಿಸುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎಚ್. ಸಿ. ಬೋರಯ್ಯ.—ಈಗಾಗಲೇ ತೆಗೆದುಕೊಂಡಿರುವ ತೀರ್ಮಾನದ ಪ್ರಕಾರ ಸಡಿಲಗೊಳಿಸುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—(ಅ) ಮತ್ತು (ಆ) ಪ್ರಶ್ನೆಗಳಿಗೆ ಉತ್ತರವಾಗಿ ಮಾಹಿತಿಯು ಸಿದ್ಧವಾಗಿ ದೊರಕುವಂತಿಲ್ಲ ಎಂದು ಹೇಳಿದ್ದೀರಿ. ಇದಕ್ಕೆ ಕಾರಣ ತಿಳಿಸುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಕಾರಣ ಇಷ್ಟೇ, ನಾವು ಖಾಸಗೀ ಬಸ್ ಮಾಲೀಕರುಗಳನ್ನು ಎಷ್ಟು ಜನರು ಕೆಲಸ ಕಳೆದುಕೊಳ್ಳುತ್ತಾರೆಂದು ಕೇಳಿದ್ದೆವು. ಅವರು ಇನ್‌ಫರ್‌ಮೇಷನ್ ಕೊಡಲಿಲ್ಲ.

ಶ್ರೀ ಎಸ್. ಶಿವಪ್ಪ.–ಸ್ವಾಮಿ, ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡುತ್ತಿಲ್ಲ. ಯಾವ ಯಾವ ಕಡೆಗಳಲ್ಲಿ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದ್ದೀರೋ ಅಂತಹ ಕಡೆಗಳಲ್ಲಿ ಡ್ರೈವರ್‌ಗಳನ್ನು ಮತ್ತು ಕಂಡಕ್ಟರ್‌ಗಳನ್ನು ಕೆಲಸಕ್ಕೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ. ಮಿನಿಮಮ್ ಕ್ವಾಲಿಫಿಕೇಷನ್ ಇರಬೇಕೆಂದು ರೂಲ್ಸ್ ಮಾಡಲಾಗಿದೆಯೆಂದು ಹೇಳಿದಿರಿ. ಈಗಾಗಲೇ ಕೆಲವು ಕಡೆಗಳಲ್ಲಿ ನಾನ್-ಎಸ್.ಎಸ್.ಎಲ್.ಸಿ. ಆದವರನ್ನು ಸಹ ತೆಗೆದುಕೊಂಡಿದ್ದೀರಿ. ಈಗ ಬೇರೆ ರೀತಿ ಉತ್ತರ ಕೊಡುತ್ತಿದ್ದೀರಿ ಕಾರಣವೇನು ?

ಶ್ರೀ ಹೆಚ್. ಸಿ. ಬೋರಯ್ಯ.—1-2-1968 ರಿಂದ ಕ್ಲೀಡರು ಹಾಗೂ ರೆಕ್ರೂಟುಮೆಂಟು ರೂಲ್ಸುಗಳು ಜಾರಿಗೆ ಬಂದಿವೆ. ಇದು ಜಾರಿಗೆ ಬಂದನಂತರ ನಾನ್ ಎಸ್.ಎಸ್.ಎಲ್.ಸಿ ಆಗಿರುವವರು ಒಬ್ಬರನ್ನೂ ಕೆಲಸಕ್ಕೆ ನೇಮಕ ಮಾಡಿಕೊಂಡಿಲ್ಲ.

ಶ್ರೀ ಇ. ನಾರಾಯಣ ಗೌಡ.—ಕೋಲಾರ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಮಾಡಿರುವ ರಸ್ತೆಗಳು ಎಷ್ಟು ಮತ್ತು ಎಷ್ಟು ರೂಟುಗಳಲ್ಲಿ ಈಗಾಗಲೇ ರಾಷ್ಟ್ರೀಕರಣವನ್ನು ಮಾಡಲಾಗಿದೆ ?

ಶ್ರೀ ಹೆಚ್. ಸಿ. ಬೋರಯ್ಯ.—ರಸ್ತೆಗಳ ಸಂಖ್ಯೆ ಎಷ್ಟು ಎಂದು ಹೇಳಲು ಈಗ ನನ್ನಲ್ಲಿ ವಿವರಗಳು ಇಲ್ಲ. ಆದರೆ ರೂಟುಗಳ ಬಗ್ಗೆ ಮಾತ್ರ ಹೇಳಬಹುದು. 87 ರೂಟುಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ರಾಷ್ಟ್ರೀಕರಣ ಮಾಡುವ ಸಂದರ್ಭದಲ್ಲಿ ಹಿಂದೆ ಇದ್ದ ಖಾಸಗೀ ಬಸ್ಸುಗಳಲ್ಲಿ ಇದ್ದಂತಹ ಎಲ್ಲ ಸಿಬ್ಬಂದಿಯವರನ್ನೂ ತೆಗೆದುಕೊಳ್ಳಬೇಕು ಎಂದು ಇದೆ. ಹಾಸನ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಮಾಡಿದ ಸಂದರ್ಭದಲ್ಲಿ ಆಗಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಜತ್ತಿಯವರು ಈ ರೀತಿ ಹೇಳಿರುವುದಕ್ಕೆ ಈಗ ವಿರೋಧವಾಗಿ ಮಾನ್ಯ ಉಪಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಹೆಚ್. ಸಿ. ಬೋರಯ್ಯ.—ಸರಕಾರಕ್ಕೆ ಎಂ.ಎಸ್.ಆರ್.ಟಿ.ಸಿ.ಯವರು ಏನಾದರೂ ಪ್ರಪೋಸಲ್‌ಗಳನ್ನು ಕಳುಹಿಸಿದರೆ ಅದನ್ನು ಗಮನದಲ್ಲಿಟ್ಟುಕೊಂಡು ಸರಕಾರ ತೀರ್ಮಾನ ಮಾಡುತ್ತದೆ. ಅವರಿಗೆ ಬೇಕಾಗುವ ವ್ಯವಹಾರಗಳಲ್ಲಿ ಅವರಿಗೆ ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡುವುದು ಬಿಡುವುದು ಅವರಿಗೆ ಸೇರಿದ್ದು, ನಮ್ಮ ಮುಂದೇನಾದರೂ ಪ್ರಪೋಸಲ್‌ಗಳು ಬಂದರೆ ಅಪ್ರೂವಲ್ ಕೊಡುವುದು ಬಿಡುವುದು ನಮಗೆ ಸೇರಿದ್ದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಕೋಲಾರ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಮಾಡಿದಾಗ ಅಲ್ಲಿ ಬೇರೆ ಬಸ್ಸುಗಳಲ್ಲಿದ್ದ ಕಂಡಕ್ಟರುಗಳು ಹಾಗೂ ಡ್ರೈವರ್‌ಗಳನ್ನು ನೀವು ಪುನಃ ನೇಮಕ ಮಾಡಿಕೊಳ್ಳದೇ ಅನೇಕರು ನಿರುದ್ಯೋಗಿಗಳಾಗಿರತಕ್ಕವರು ಇನ್ನೂ ಇದ್ದಾರೆ. ಅಲ್ಲದೆ ರಾಷ್ಟ್ರೀಕರಣ ಮಾಡಿರುವ ಬಸ್ಸುಗಳಲ್ಲಿ ಅನೇಕ ಅವ್ಯವಸ್ಥೆಗಳು ಆಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಸಿ. ಬೋರಯ್ಯ.—ರಾಷ್ಟ್ರೀಕರಣವಾದಮೇಲೆ ಅವ್ಯವಸ್ಥೆಗಳು ನಡೆಯುತ್ತಿವೆ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲ. ಆದರೆ ಕೆಲವು ಕಡೆಗಳಲ್ಲಿ ಬಸ್ಸುಗಳ ಟೈಮುಗಳ ಬಗ್ಗೆ ಹಾಗೂ ಇನ್ನಿತರ ಸೌಕರ್ಯಗಳ ಬಗ್ಗೆ ಮಂತ್ರಿಗಳ ಗಮನಕ್ಕೆ ಹಾಗೂ ಅಧಿಕಾರಿಗಳ ಗಮನಕ್ಕೆ ಅರ್ಜಿಗಳು ಬರುತ್ತಿವೆ ಮತ್ತು ಅವನ್ನು ಸರಿಪಡಿಸಲು ಪ್ರಯತ್ನ ಮಾಡುತ್ತಿದ್ದೇವೆ.

Sri H. SIDDAVEERAPPA.—Are these orders passed by the Government or the M.G.R.T.D. ?

ಶ್ರೀ ಹೆಚ್. ಸಿ. ಬೋರಯ್ಯ.—ತಾವು ಯಾವ ಆರ್ಡರಿನ ಬಗ್ಗೆ ಈ ಪ್ರಶ್ನೆ ಕೇಳುತ್ತಿದ್ದೀರಿ ? ಸ್ಪೆಸಿಫಿಕ್ ಆಗಿ ಕೇಳಿದರೆ ಉತ್ತರ ಕೊಡಬಹುದು.

Sri H. SIDDAVEERAPPA.—Can the Minister be so indolent as that and try to ask me ? I have got the answers referring to the appointments of drivers in Kolar District which have been given. On that only I am asking.

Sri K. PUTTASWAMY (Minister for Law, Labour and Parliamentary Affairs).—There was some confusion in my mind also when Sri Siddaveerappa was putting his question. There are the Cadre and Recruitment Rules. The Cadre and Recruitment Rules are framed with the approval of the Government and they must have the stamp of authority of the Government. Thereafter the Cadre and Recruitment Rules are framed and appointment are made in pursuance of the Cadre and Recruitment Rules of the M.S.T.R.C.

Sri H. SIDDAVEERAPPA.—The Minister observed that these appointments are made by the M.G.R.T.D. I heard him distinctly. If these appointments are made by the Corporation, will or will not the Government come into the picture in these appointments ?

Sri K. PUTTASWAMY.—I would like to make one correction. It is M.S.R.T.C. There is no longer M.G.R.T.D.

Sri H. SIDDAVEERAPPA.—I stand corrected. I am not so obstinate as not to be corrected like the Deputy Minister. So far as these appointments are concerned, I want to know who is the appointing authority, whether it is the Road Transport Corporation or the Government. If it is Road Transport Corporation that has appointed, what are the duties of Government in this matter ?

ಶ್ರೀ ಹೆಚ್. ಸಿ. ಬೋರಯ್ಯ.—ಅಪಾಯಿಂಟ್ ಮಾಡತಕ್ಕಂಥಾವರು ಎಂ.ಎಸ್.ಆರ್.ಟಿ.ಸಿ. ಯವರು. ಅವರು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಸರ್ಕಾರಕ್ಕೆ ಕಳಿಸಿದ್ದಾರು. ಅದನ್ನು ಸರ್ಕಾರದವರು ಒಪ್ಪಿರುತ್ತಾರೆ ಹಾಗೆ ಒಪ್ಪಿದ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಅಪಾಯಿಂಟ್ ಮಾಡಿಕೊಂಡು ಹೋಗುತ್ತಾರೆ. ಈ ಅಪಾಯಿಂಟ್‌ಮೆಂಟ್‌ಗೂ ಸರ್ಕಾರಕ್ಕೂ ಸಂಬಂಧವಿಲ್ಲ.

ಶ್ರೀ ಎಂ. ನಾಗಪ್ಪ.—ಸ್ವಾಮಿ, (ಈ) ಗೆ ಉತ್ತರವಾಗಿ 'ನೊ' ಎಂದು ಹೇಳಿದ್ದೀರಿ. ಪ್ರೈವೇಟ್ ಬಸ್ಸುಗಳನ್ನು ತೆಗೆದು ಹಾಕಿದ ಮೇಲೆ ಅದರಲ್ಲಿ ಇರುವಂಥ ಡ್ರೈವರ್ಸ್ ಮತ್ತು ಕಂಡಕ್ಟರ್ಸ್‌ಗಳಿಗೆ ವಾಸ್ತವವಾಗಿ ಉದ್ಯೋಗಗಳನ್ನು ಕಲ್ಪಿಸಿ ಕೊಡುವುದು ಸರ್ಕಾರದ ಕರ್ತವ್ಯವಲ್ಲವೇ ? ಅದಕ್ಕಾಗಿ ಯಾವ ಕ್ರಮವನ್ನು ಕೈಗೊಂಡಿದ್ದೀರಿ ?

ಶ್ರೀ ಹೆಚ್. ಸಿ. ಬೋರಯ್ಯ.—ಅವರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕೋಸ್ಕರ ಏಜ್ ಮತ್ತು ಕ್ವಾಲಿಫಿಕೇಷನ್ ಇವುಗಳ ಬಗ್ಗೆ ತಿದ್ದುಪಡಿ ಮಾಡಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಕಳುಹಿಸಿಕೊಡಿ ಎಂದು ಹೇಳಿದ್ದೇವೆ ಅದು ಸರ್ಕಾರದ ಗಮನಕ್ಕೆ ಬಂದನಂತರ ಮುಂದಿನ ಕಾರ್ಯಕ್ರಮ ತೆಗೆದು ಕೊಳ್ಳಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ನಾಗಪ್ಪ.—ಈಗ ಚಿಕ್ಕಮಗಳೂರು ಶಿವಮೊಗ್ಗ ಕಡೆಗಳಲ್ಲಿ.........

Mr. SPEAKER.—The answer relates to Kolar only.

Sri M. NAGAPPA.—Let him give the answer. There is no question of Kolar District.

Mr. SPEAKER.—The question refers to the amendment of Cadre and Recruitment Rules so as to permit the recruitment of such persons in Kolar.

ಶ್ರೀ ಎಸ್. ಶಿವಪ್ಪ.—ಪ್ರೈವೇಟ್ ಬಸ್ಸುಗಳನ್ನು ಎಲ್ಲಿ ರಾಷ್ಟ್ರೀಕರಣ ಮಾಡುತ್ತೀರೋ ಅಲ್ಲಿಯ ಡ್ರೈವರ್ಸ್ ಮತ್ತು ಕಂಡಕ್ಟರ್‌ಗಳನ್ನು ಕೆಲಸಕ್ಕೆ ತೆಗೆದುಕೊಳ್ಳಲು ಈಗ ಏನು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇದೆಯೋ ಇದರಲ್ಲಿ ವಿನಾಯಿತಿ ಕೊಡುತ್ತೀರಾ ? ಕೆಲವು ಕಡೆ ಎಸ್. ಎಸ್. ಎಲ್. ಸಿ. ಆಗದೆ ಇರುವವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದೀರಿ.

(ಶ್ರೀ ಎಸ್. ಶಿವಪ್ಪ)

ಉದಾಹರಣೆಗೆ ಚಿಕ್ಕಮಗಳೂರು ಮತ್ತು ಕೋಲಾರದಲ್ಲಿ ಹಾಗೆ ತೆಗೆದುಕೊಂಡಿದ್ದೀರಿ. Even after these rules came into force they have done it. The Government are purposely and deliberately misleading this House.

Mr. SPEAKER.—The hon. Member's supplementary is whether these appointments were made prior to the introduction of the Cadre and Recruitment Rules or thereafter ?

1-00 P.M.

ಶ್ರೀ ಎಚ್. ಸಿ. ಬೋರಯ್ಯ.—ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದ್ದು ಕಂಡಕ್ಟರುಗಳ ಬಗ್ಗೆ. ಅದಕ್ಕೆ ನಾನು ಹೇಳಿದೆ, ಕಂಡಕ್ಟರುಗಳನ್ನು ನೇಮಕ ಮಾಡಿಕೊಳ್ಳುವಾಗ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಮಾಡುತ್ತೇವೆ, ಅವರು ಎಸ್.ಎಸ್.ಎಲ್.ಸಿ. ಮಾಡಿರಬೇಕು, ಅದನ್ನು ಬದಲಾವಣೆ ಮಾಡಲಿಲ್ಲ ಎಂದು ಹೇಳಿದ್ದೇನೆ. ಶಿವಮೊಗ್ಗ, ಮಂಗಳೂರು ಭಾಗಗಳಲ್ಲಿ ರಾಷ್ಟ್ರೀಕರಣ ಆದಾಗ ಕೆಲವು ಅನುಕೂಲಗಳನ್ನು ಮಾಡಿಕೊಡಬೇಕೆಂದು ಒತ್ತಾಯ ಬಂದಾಗ ಕೆಲವು ರಿಯಾಯಿತಿಗಳನ್ನು ಕೊಡಲಾಯಿತು. ಕಂಡಕ್ಟರುಗಳನ್ನು ತೆಗೆದುಕೊಳ್ಳಬೇಕಾದರೆ ಎತ್ತರವನ್ನು ಕಡಮೆ ಮಾಡುವುದು, ಕೆಲವು ಮೆಕಾನಿಕ್‌ಗಳನ್ನು ತೆಗೆದುಕೊಳ್ಳುವಾಗ ಅವರಿಗೆ ಏಳು ವರ್ಷ ಸರ್ವಿಸ್ ಆಗಿದ್ದರೆ ಅಂಥವರಿಗೆ ಇಂಥದೇ ಅರ್ಹತೆ ಇರಬೇಕು ಎನ್ನುವ ನಿಯಮವನ್ನು ಸಡಿಲಗೊಳಿಸುವುದು, ಕೆಲಸಕ್ಕೆ ಸೇರಬೇಕಾದರೆ 33 ವರ್ಷಕ್ಕೆ ಮೇಲ್ಪಟ್ಟು ಇರಬಾರದು ಎನ್ನುವುದನ್ನು 45 ವರ್ಷ ತುಂಬಿರಬಾರದು, ಇಂಥ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದೇವೆ. ಸರ್ಕಾರದವರು ನಿರ್ದೇಶನವನ್ನು ಕೊಟ್ಟಮೇಲೆ ರಸ್ತೆ ಸಾರಿಗೆ ಕಾರ್ಪೊರೇಷನ್‌ನವರು ಆ ಪ್ರಕಾರವಾಗಿ ನೇಮಕಗಳನ್ನು ಮಾಡಿದ್ದಾರೆ.

Sri D. B. KALMANKAR.—May I know whether non-Matriculates were called for interview during December 1968 at Kolar for Conductors' posts ?

ಶ್ರೀ ಎಚ್. ಸಿ. ಬೋರಯ್ಯ.—ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಎಸ್. ಎಸ್. ಎಲ್. ಸಿ. ಆಗಿರುವವರನ್ನು ತೆಗೆದುಕೊಳ್ಳಬೇಕು. ಆ ಪ್ರಕಾರವಾಗಿ ಅರ್ಹತೆ ಇದೆ ಎಂದು ಅರ್ಜಿ ಹಾಕಿರುವವರನ್ನು ಇಂಟರ್‌ವ್ಯೂಗೆ ಕರೆಯುತ್ತೇವೆ. ಅರ್ಜಿ ಹಾಕಿರುವುದರಲ್ಲಿ ಏನಾದರೂ ನ್ಯೂನತೆ ಇದ್ದರೆ, ಎಸ್.ಎಸ್.ಎಲ್.ಸಿ. ಆಗದೇ ಇದ್ದು ಆ ರೀತಿ ಪಾಸ್ ಮಾಡಿರುವುದಾಗಿ ತಿಳಿಸಿದ್ದರೆ ಅವರ ಸರ್ಟಿಫಿಕೇಟುಗಳನ್ನು ವೆರಿಫೈ ಮಾಡಿದಾಗ ಅಂಥ ಅರ್ಜಿಗಳನ್ನು ತಿರಸ್ಕರಿಸಿರುವ ಸಂದರ್ಭಗಳೂ ಉಂಟು. ಎಸ್.ಎಸ್.ಎಲ್.ಸಿ. ಆಗಿರುವವರನ್ನು ಮಾತ್ರ ತೆಗೆದುಕೊಳ್ಳಲಾಗುತ್ತದೆ.

(Many Members rose to put supplementaries)

Mr. SPEAKER.—Question Hour is over. I will permit half-an-hour discussion on this question if any Notice is given.

Short Notice Question and Answer

One way Roads in and around the Kempegowda Circle, Bangalore

28. Sri M. NAGAPPA (Raichur).—

Will the Chief Minister be pleased to state :—

(*a*) whether the Commissioner of Police has declared some of the roads connecting Kempegowda Circle as One Way ;

(*b*) if so, what are those roads;

(*c*) whether there is any discontentment among the Autorickshaw drivers on account of this order;

(*d*) whether there was any lathi-charge on the innocent rickshaw drivers on 20th January 1969 at Bangalore?

Sri VEERENDRA PATIL (Chief Minister).—

(*a*) The Additional District Magistrate, Bangalore has declared some of the roads connecting Kempegowda Circle as one-way.

(*b*) (i) Half of Balepet Road connecting Kempegowda Circle and Tank Bund Road (This road is in front of Majestic Talkies).

(ii) Tank Bund Road to Kempegowda Circle. (to the North of Geetha Talkies which connects Tank Bund Road and Kempegowda Circle in a straight line).

(iii) Subedar Chatram Road from Ananda Rao Circle to Kempegowda Circle.

(iv) Road from Kempegowda Circle to Mysore Bank Circle (For all Transport vehicles including Buses, lorries, taxies and Autorickshaws except B.T.S. buses).

(*c*) No.

(*d*) No..

ಶ್ರೀ ಎಂ. ನಾಗಪ್ಪ.—20ನೇ ತಾರೀಖು ಆಟೋರಿಕ್ಷಾ ಡ್ರೈವರುಗಳ ಮೇಲೆ ಲಾಠಿಚಾರ್ಜ್ ಆಯಿತೋ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಇದು ಸತ್ಯವೋ?

† ಶ್ರೀ ವೀರೇಂದ್ರ ಪಾಟೀಲ್.—ಇಲ್ಲ ಎಂದು ಹೇಳಿರುವುದರ ಅರ್ಥವೇ 'ಇಲ್ಲ' ಎಂದು.

ಶ್ರೀ ಎಂ. ನಾಗಪ್ಪ.—ಈಗ ಕೆಲವು ಮಾರ್ಗಗಳಲ್ಲಿ ಒನ್‌ವೇ ಟ್ರಾಫಿಕ್ಕಿಗೆ ಅವಕಾಶ ಮಾಡಿರುವುದರಿಂದ ತೊಂದರೆಯಾಗಿದೆ. ಸಿಂಡಿಕೇಟ್ ಬ್ಯಾಂಕಿನಿಂದ ಕೆಂಪೇಗೌಡ ಸರ್ಕಲ್ಲಿಗೆ ಆಟೋರಿಕ್ಷಾದಲ್ಲಿ ಹೋಗಬೇಕಾದರೆ ಒಂದು ಮೈಲಿ ಸುತ್ತಿಕೊಂಡು ಹೋಗಬೇಕಾಗಿದೆ. ಸಾಮಾನ್ಯ ಜನರು ಯಾವಾಗಲೂ ಆಟೋರಿಕ್ಷಾಗಳಲ್ಲಿ ಹೋಗುವುದೇ ಹೆಚ್ಚು. ಟ್ಯಾಕ್ಸಿಗಳಲ್ಲಿ ಹೋಗುವವರಿಗೆ ತೊಂದರೆಯಿಲ್ಲ. ಆದುದರಿಂದ ಆಟೋರಿಕ್ಷಾಕ್ಕೆ ಈ ಒನ್‌ವೇ ಟ್ರಾಫಿಕ್ ನಿರ್ಬಂಧ ತಪ್ಪಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಬರೀ ಆಟೋರಿಕ್ಷಾಕ್ಕೆ ಮಾತ್ರವಲ್ಲ, ಬಿ.ಟಿ.ಎಸ್. ಬಸ್ಸುಗಳನ್ನು ಬಿಟ್ಟು ಉಳಿದ ಎಲ್ಲ ವಾಹನಗಳಿಗೂ ನಿರ್ಬಂಧ ಹಾಕಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೆಂಪೇಗೌಡ ರಸ್ತೆ ಷಾಪಿಂಗ್ ಸೆಂಟರ್ ಆಗಿರುವುದರಿಂದ ಅದನ್ನು ಒನ್‌ವೇ ಮಾಡಿರುವುದರಿಂದ ಜನರಿಗೆ ತೊಂದರೆ ಮಾಡಲಾಗಿದೆ, ಅದನ್ನು ತಪ್ಪಿಸಬೇಕೆಂದು ಮನವಿ ಬಂದಿಲ್ಲವೇ? ಬಂದಿಲ್ಲದಿದ್ದರೂ ಕೂಡ ಇದನ್ನು ಯೋಚನೆ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಸಾಯಂಕಾಲ ಕೆಂಪೇಗೌಡ ರಸ್ತೆಯಲ್ಲಿ ನಡೆಯುವುದೇ ಕಷ್ಟ. ಸಿನಿಮಾಗಳು ಅಲ್ಲಿ ಜಾಸ್ತಿ, ಅಂಗಡಿಗಳು ಜಾಸ್ತಿ, ಟ್ರಾಫಿಕ್ ಜಾಸ್ತಿ. ಆದುದರಿಂದ ಒನ್‌ವೇ ಮಾಡಿದ್ದಾರೆ. ಅಲ್ಲದೆ ಆಕ್ಸಿಡೆಂಡುಗಳೂ ಜಾಸ್ತಿ. ಆಕ್ಸಿಡೆಂಟ್ ಆಗಬಹುದೆಂದು ಎಲ್ಲವನ್ನೂ ಆಲೋಚಿಸಿ ಅಲ್ಲಿ ಒನ್‌ವೇ ಮಾಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಕೆಂಪೇಗೌಡ ರಸ್ತೆಯಲ್ಲಿ ಕಾರುಗಳಿಗೆ ನಿರ್ಬಂಧವಿಲ್ಲ, ಕೇವಲ ರಿಕ್ಷಾಗಳಿಗೇಕೆ ನಿರ್ಬಂಧ ಹಾಕಲಾಗಿದೆ?

ಶ್ರೀ ವೀರೇಂದ್ರ ಪಾಟೀಲ್.—ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದೆ, "ಬಿ.ಟಿ.ಎಸ್. ಬಸ್ಸುಗಳು, ಲಾರಿಗಳು ಟ್ಯಾಕ್ಸಿಗಳು ಮತ್ತು ಆಟೋರಿಕ್ಷಾಗಳನ್ನೊಳಗೊಂಡು ಎಲ್ಲ ಸಾರಿಗೆ ವಾಹನಗಳಿಗೆ ಸಂಬಂಧಿಸಿದಂತೆ ಕೆಂಪೇಗೌಡ ವೃತ್ತದಿಂದ ಮೈಸೂರು ಬ್ಯಾಂಕ್ ವೃತ್ತದವರೆಗಿನ ರಸ್ತೆ ಒನ್‌ವೇ ಎಂದು ತಿಳಿಸಿದೆ.

ಶ್ರೀ ಎಸ್. ಬಂಗಾರಪ್ಪ.—ಕೆಂಪೇಗೌಡ ರಸ್ತೆಯಲ್ಲಿ ಸಿನೀಮಾ ಮಂದಿರಗಳು ಜಾಸ್ತಿ ಇರುವುದರಿಂದ ಮತ್ತು ಜನರ ಓಡಾಟ ಹೆಚ್ಚಾಗಿರುವುದರಿಂದ ಅಲ್ಲಿ ಟಾಕೀಸ್ ಕಟ್ಟಲು ಲೈಸೆನ್ಸ್ ಕೊಡಬಾರದು ಮತ್ತು ಇರುವ ಟಾಕೀಸ್‌ಗಳನ್ನು ತೆಗೆಸಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಅಲ್ಲಿರುವ ಟಾಕೀಸ್‌ಗಳನ್ನು ತೆಗೆಯಲು ಹೇಗೆ ಅವಕಾಶ ವಿದೆಯೋ ಗೊತ್ತಿಲ್ಲ. ಆದರೆ ಮಾನ್ಯ ಸದಸ್ಯರ ಸಲಹೆ ಹೆಚ್ಚು ಟಾಕೀಸ್ ಆ ರಸ್ತೆಯಲ್ಲಿಲ್ಲದಂತೆ ನೋಡಿಕೊಳ್ಳಬೇಕೆಂಬುದು ಒಳ್ಳೆಯ ಸಲಹೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಸಿಂಡಿಕೇಟ್ ಬ್ಯಾಂಕಿನಿಂದ ಕೆಂಪೇಗೌಡ ರಸ್ತೆಗೆ ಆಟೋರಿಕ್ಷ ಬಿಡಬಾರದೆಂದು ತಮಗೆ ಮನವಿ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅದು ನಮಗೆ ಬರುವಹಾಗಿಲ್ಲ. ಟ್ರಾಫಿಕ್ಕಿಗೆ ಸಂಬಂಧಪಟ್ಟ ಆಫೀಸರಿರುತ್ತಾರೆ, ಪೋಲೀಸು ಕಮೀಷನರಿರುತ್ತಾರೆ ಮತ್ತು ಸಂಬಂಧಪಟ್ಟ ಅನೇಕ ಅಧಿಕಾರಿ ಗಳಿರುತ್ತಾರೆ. ಪ್ರಯೋಗಮಾಡಿ ನೋಡಿ ಅವರು ನಿರ್ಣಯಮಾಡುವರು.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹೀಗೆ ಒನ್‌ವೇ ಟ್ರಾಫಿಕ್ ನಿಗದಿಮಾಡುವವರು ಮುಂಚೆ ಚೆನ್ನಾಗಿ ಪ್ರಚಾರ ಮಾಡಬೇಡವೇ ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ಗೊತ್ತಿರುವಹಾಗೆ ಅಡೀಷನಲ್ ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟರು ಒನ್‌ವೇ ಮಾಡಬೇಕಾದರೆ ಡಿಕ್ಲರೇಷನ್ ಮಾಡಬೇಕು, ಬಹುಶಃ ಇದು ಗೆಜೆಟ್ಟಿನಲ್ಲಿ ಮತ್ತು ಪತ್ರಿಕೆ ಗಳಲ್ಲಿ ಬರುತ್ತದೆ. ಅಲ್ಲಲ್ಲಿ ಸೈನ್ ಬೋರ್ಡುಗಳನ್ನೂ ಹಾಕುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಪ್ರಯೋಗ ಮಾಡುವುದನ್ನು ಒಂದು ಅವಧಿಯೊಳಗಾಗಿ ಮಾಡಿ ಮುಗಿಸಿ ಖಾಯಂ ವ್ಯವಸ್ಥೆ ಮಾಡಬೇಕೆಂದು ಸಂಬಂಧಪಟ್ಟವರಿಗೆ ತಿಳಿಸಲು ಸಾಧ್ಯವಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಯಾವ ಪ್ರಯೋಗದ ವಿಚಾರ ಹೇಳು ತ್ತಿದ್ದಾರೋ ಗೊತ್ತಾಗಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಂದು ಕೆಂಪೇಗೌಡ ರಸ್ತೆಯಲ್ಲಿ ಒನ್‌ವೇ, ಮತ್ತೊಂದು ದಿವಸ ಬೇರೊಂದು ರಸ್ತೆಯಲ್ಲಿ ಮಾಡುವುದು, ಹೀಗೆ ಪ್ರತಿನಿತ್ಯ ಮಾಡುವುದರ ಬದಲು ಹೀಗೆ ಮಾಡು ವುದಕ್ಕೆ ಯಾವುದಾದರೂ ಒಂದು ಕಾಲ ಗೊತ್ತುಮಾಡಿ ಅದರೊಳಗಾಗಿ ಪ್ರಯೋಗ ನಡೆಸಿ ಒಂದು ಖಾಯಂ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ವಿಚಾರ ಮಾಡಬೇಕಾಗುತ್ತದೆ. ಪ್ರಯೋಗ ಮಾಡುತ್ತಾ ಇದ್ದರೆ ಬಹುಶಃ ಯಾವುದಾದರೂ ಏರಿಯಾದಲ್ಲಿ ಒಂದು ಕಡೆ ಏರಿಯಾ ಒನ್‌ವೇ ಮಾಡಿದಾಗ ಇನ್ನೊಂದು ಕಡೆ ಟ್ರಾಫಿಕ್ ಹೆಚ್ಚಾಗುವುದ ರಿಂದ ಜನರ ಹಿತರಕ್ಷಣೆ ಮತ್ತು ಜನರ ಹಿತದೃಷ್ಟಿಯಿಂದ ಟ್ರಾಫಿಕ್ ಸುಲಲಿತವಾಗಿ ನಡೆಯಬೇಕೆಂಬ ದೃಷ್ಟಿಯಿಂದ ಮಾಡುತ್ತಾರೆಯೇ ಹೊರತು ಕಿರುಕುಳ ಕೊಡಬೇಕೆಂಬ ದೃಷ್ಟಿಯಿಂದ ಅಲ್ಲ.

Sri H. SIDDAVEERAPPA.—From Jayachamarajendara Road to Kempe Gowda Circle, the traffic will be very heavy in the peak hours especially from 10 A.M. to 11 A.M. in the morning and 5 P.M. to 6 P.M in the evening and there are some chances of accidents in that area. Will you kindly make some suitable arrangements to relieve the congestion?

Sri VEERENDRA PATIL.—I will certainaly look into it.

QUESTIONS FOR ANSWERS ON THE DAY

(but not taken up)

Fixed T.A. to Amins and Process Servers

56. SRI K. SANGAN GOWDA (Lingsugur).—

Will the Minister for Law, Labour and Parliamentary Affairs be pleased to state:—

(a) whether the High Court of Mysore has moved the State Government to extend the benefits of Government Order dated 11th July 1960 to the Amins, Process-Servers and Bailiffs of the Ex-Hyderabad Karnatak Area also with effect from 1st October 1960 instead of from 1st June 1965 as mentioned in Government Order No. LAW 44 CAC 64 dated 19th June 1965;

(b) if so, the action taken by Government?

SRI K. PUTTASWAMY (Minister for Law, Labour and Parliamentary Affairs).—

(a) Yes.

(b) Orders have been issued approving the proposal of the High Court.

Arrears of Water Supply Connections

247. SRI T. R. SHAMANNA (Fort).—

Will the Minister of State for Muncipal Administration be pleased to state:—

(a) the total amount of arrears outsanding as on 31st October, 1968 from the several consumers who have taken water supply connections in Bangalore City Corporation area;

(b) the number of persons (having water connections) who are in arrears as on 31st October, 1968?

SRI B. M. PATIL (Minister of State for Muncipal Administration.)—

(a) Rs. 1,24,86,866-92.

(b) 56,998.

Earnest Money Deposit

265. Sri B. P. GANGADHAR (Tumkur).—

Will the Minister for Public Works be pleased to state:—

(*a*) whether it is a fact that the E.M.D. and 5 per cent reserve held in the work (P.W.D.) Bills of contractors are not being paid as soon as the final claims by the P.W.D. Contractors is preferred;

(*b*) whether it is right to hold return of Earnest Money Deposit and 5 per cent reserve unnecessarily to contractors for reasons like want of sanction to R.E. or extra item rate lists, or modified estimates;

(*c*) whether it is not for the departmental authorities to obtain sanction to the deviations or modifications;

(*d*) whether Government intend to direct the departmental authorities to pay the E.M.D. and Reserve as soon as works are executed and finalised by the Contractors?

Sri K. LAKKAPPA (Minister for Public Works).—

(*a*) Earnest Money Deposit is released either after the expiry of 3 months from the date of the final bill is actually paid or after the expiry of the date up to which the contractor has agreed to maintain the work in good orders whichever is later. 5 per cent Reserve (F.S.D.) is released against the Bank Guarantee after the work is completed satisfactorily.

(*b*) *vide* reply to (*a*) above.

(*c*) Yes.

(*d*) *vide* reply to (*a*) above.

Construction of Bridge Across Kabini

282. Sri D. M. SIDDAIAH (Biligere).—

Will the Minister for Public Works be pleased to state :—

(*a*) the cost of the estimate for a bridge across Kabini near Suttur in Nanjangud Taluk and when the work is supposed to be undertaken ;

(*b*) whether the construction of such a bridge across Kabini near Suttur will help to link up two Hoblies-Biligere and Chatan and thus facilitate the general public to have convenience for transport and easy way for their movement ;

(*c*) will the Government find resources and complete the work as early as possible ?

Sri K. LAKKAPPA (Minister for Public Works).—

(a) Rs. 20.42 lakhs ; after approval to the work.

(b) Yes.

(c) This will be considered subject to availability of funds.

Construction of Rural Godown in Nittur

351. Sri PRABHURAO JAGADALE (Hulsoor).—

Will the Minister for Development be pleased to state :—

(a) the stage of construction of Rural Godown, at Village Nittur, Taluk Bhalki, District Bidar;

(b) when it was sanctioned ;

(c) the reasons for delay in constructing the same ;

(d) the steps taken to expedite its construction ?

Sri P. M. NADGOUDA (Minister for Development).—

(a) Plans and estimates are under preparation.

(b) 19th February 1968.

(c) Time taken for prepartion of plans and estimates.

(d) Instructions have been issued to the Assistant Registrar of Co-operative Societies, Bidar for following up the matter and expedite construction of the godowns within the prescribed period.

Graduate and S.S.L.C. teachers in Primary Schools

354. Sri G. DUGGAPPA (Bharamasagar).—

Will the Minister for Education be pleased to state :—

(a) whether various representations have been submitted to Government by Graduate and S.S.L.C. teachers working in the Primary Schools in the State to promote them or give them higher scale of salary and post them to Upper Primary Schools or High Schools ;

(b) if so, when ;

(c) whether the Government is going to consider their cases and take a decision ?

Sri K. V. SHANKARA GOWDA (Minister for Education)—

(*a*) No.

(*b*) does not arise.

(*c*) as far as Government Schools are concerned, graduate teachers are promoted as High School Teachers. 25 per cent of the posts of Graduate teachers in Government High Schools is reserved for such promotion.

As regards S.S.L.C. teachers normally trained S.S.L.C. Teachers are posted as Head Masters of Higher Primary Schools. Recently Government have sanctioned a number of posts for posting Graduate teachers as Head Masters of Higher Primary Schools.

As regards Private Aided schools, Graduate Teachers can apply for the posts in High Schools both Government and Private.

Supply of Furniture to The Civil Court in Tiptur

426. Sri V. L. SHIVAPPA (Tiptur).—

Will the Minister for Law, Labour and Parliamentary Affairs be pleased to state :—

(*a*) whether Government is aware that furniture supplied to courts in the State in general and in Tiptur in particular is in a bad and unusable condition ;

(*b*) whether it has come to their notice that there is hardly a chair to sit in Court halls of Tiptur ;

(*c*) whether they have received any representations for supply of furniture to the Civil Court, Tiptur ;

(*d*) the action taken in the matter ?

Sri K. PUTTASWAMY (Minister for Law, Labour and Parliamentary Affairs).—

(*a*) and (*b*) No.

(*c*) and (*d*) The District Judge, Tumkur, reported to the High Court that the number of chairs in the Courts of Tiptur fell short of standard scale prescribed and necessary sanction has been accorded on 11th December 1968 by the High Court to him for purchase of the required articles of furniture to the Courts at Tiptur as well as other Courts in Tumkur District.

Notice of adjournment motion *re*: burning of a P. S. P. flag at Channapatna.

ಶ್ರೀ ಟಿ. ವಿ. ಕೃಷ್ಣಪ್ಪ.—(ಚೆನ್ನಪಟ್ಟಣ).—ಚೆನ್ನಪಟ್ಟಣದ ಚುನಾವಣೆಯ ಕಾಲದಲ್ಲಿ ಕಾಂಗ್ರೆಸ್ ಬೆಂಬಲಿಗರು ಹರಿಜನರ ಗುಡಿಸಲನ್ನು ಸುಟ್ಟು ಆ ಜನಗಳು ಮಾರನೆ ದಿನ ಓಟು ಮಾಡಲು ಬರುವುದಕ್ಕೆ ತೊಂದರೆಯನ್ನು ಕೊಟ್ಟಿದ್ದಾರೆ.

Sri VEERENDRA PATIL (Chief Minister).—If I make a statement, I do not think these explanations are necessary.

ಅಧ್ಯಕ್ಷರು.—ಅವರು ನಿಲುವಳಿಸೂಚನೆಯನ್ನು ಕಳುಹಿಸಿದ್ದಾರೆ, ಒಂದೆರಡು ಮಾತು ಹೇಳ ಬೇಕೆಂದು ಅನ್ನುತ್ತಾರೆ ಹೇಳಲಿ.

ಶ್ರೀ ಟಿ. ವಿ. ಕೃಷ್ಣಪ್ಪ.—* * *

ಅಧ್ಯಕ್ಷರು.—ಬ್ರೀಚ್ ಆಫ್ ಪ್ರಿವಿಲೇಜ್ ಆಗಬಹುದು ಆದ್ದರಿಂದ ಸ್ವಲ್ಪ ಜವಾಬ್ದಾರಿಯುತ ವಾಗಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಜವಾಬ್ದಾರಿಯುತವಾಗಿಯೇ ಅವರು ಮಾತ ನಾಡುತ್ತಾ ಇರುವುದು.

ಅಧ್ಯಕ್ಷರು.—ಮಗೆ ಅವರು ವಕಾಲತ್ತು ಕೊಟ್ಟಿದ್ದಾರಾ? ಇಲ್ಲಿ ಯಾರಿಗೂ ವಕಾಲತ್ತು ಅಡ್ಮಿಟ್ ಮಾಡುವುದಿಲ್ಲ.

ಶ್ರೀ ಟಿ. ವಿ. ಕೃಷ್ಣಪ್ಪ.—ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳುವುದು ಇಷ್ಟೆ ಅಂಥವರಿಗೆ ತಾವು ಅಧಿಕಾರವನ್ನು ಕೊಡಬಾರದು, ಒಳ್ಳೆಯವರಿಗೆ ಪ್ರೋತ್ಸಾಹವನ್ನು ಕೊಡಬೇಕು. ಹಾಗಲ್ಲದೇ ಹೋದ ಪಕ್ಷದಲ್ಲಿ ಮುಂದೆ ಗಲಭೆಗಳು ನಡೆದು ರಕ್ತಪಾತವಾದೀತು ಎಂಬ ಎಚ್ಚರಿಕೆ ಯನ್ನು ಕೊಟ್ಟು ತಮ್ಮ ಅಧಿಕಾರಿಗಳಿಗೆ ಸರಿಯಾದ ಆದೇಶವನ್ನು ಕೊಡಬೇಕೆಂದು ಕೇಳಿಕೊಳ್ಳು ತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್ (ಸಿರ್ಸಿ).—ಅಲ್ಲಿರತಕ್ಕ ಹರಿಜನರು ಏನು ತೊಂದರೆ ಪಟ್ಟರು ಎಂಬ ಬಗ್ಗೆ ಎರಡು ಲೈನು ಮಾತ್ರ ಓದುತ್ತೇನೆ.

Sri K. PUTTASWAMY.—The Hon. Member has made certain reference to the General Secretary, M.P.C.C. * * * * It would not be proper. I think, to say such things when the persons is not here. Therefore, the word * * * * should not go on records.

Mr. SPEAKER.—Hon. Member Sri Krishnappa has made reference to a person who is not present in the house. It is most unfortunate, and it is regretted. All that reference will be expunged.

Sri K. H. RANGANATH (Mudigere).—I want the Government to understand the seriousness of the situation the Person concerned is present in the visitors gallery.

Mr. SPEAKER.—A Member cannot make any reference to a person in the visitors gallery. It is not proper on the part of Hon. Members to make such references.

Sri H. N. NANJE GOWDA.—On a point of order Sir.........

Mr. SPEAKER.—I invite the attention of Hon. Members to rule 311 wherein it is clearly stated that a point of order shall relate to the interpretation or enforcement of the rules of procedure or such articles of the Constitution as regulate the business of the House. The moment

* * * Matter expunged as ordered by the Chair.

(Mr. Speaker)

the hon. Members want to raise a point of order, they should mention what particular rule or particular provision of the Constitution, is violated. Unless that is mentioned I would not hear the Hon. Members.

Sri K. H. RANGANATH.—If that is the attitude we will not allow the House to proceed. * * *

Mr. SPEAKER.—That need not be recorded.

ಶ್ರೀ ಕೆ. ಎಚ್. ರಂಗನಾಥ್.—ತಮ್ಮಲ್ಲಿ ಒಂದು ವಿಚಾರ ನಮ್ರತೆಯಿಂದ ಹೇಳುತ್ತಿದ್ದೇನೆ. ತಾಳ್ಮೆಗೂ ಒಂದು ಮಿತಿ ಇರುತ್ತದೆ. ಯಾರೋ ಒಬ್ಬ ಹೊಲೆಯ ಜಾತಿಯವನು, ಅಂದಕ್ಷಣಕ್ಕೆ ಅವನನ್ನು ಹೊಡೆಯುವುದು ಸರಿಯೇ? ಅವನ ಬಗ್ಗೆ ಒಂದು ಮಾನ್ಯತೆ ಇಲ್ಲವೇ? ಈ ರಾಜ್ಯದಲ್ಲಿ ಇಂಥಾದ್ದನ್ನು ಯಾರೂ ಕೇಳುವುದಿಲ್ಲವೇ? ನಾನು ಒಂದು ಕಾಗದವನ್ನು ಓದುವುದಕ್ಕೆ ಅವಕಾಶ ಕೊಡಿ ಎಂದರೆ, ರಿಕಾರ್ಡ್ ಮಾಡಬೇಡಿ ಎಂದು ಹೇಳುತ್ತೀರಿ.

Sri H. SIDDAVERAPPA (Harihara)—Sir, even according to rules, the Hon'ble Speaker has to kindly see the intensity of the feelings with reference to the context of the subject. The subject is about alleged ill-treatment of a harijan. It is alleged that he was preclued from exercising his free vote or making propaganda or canvass for some candidate during the elections and he was beaten mercilessly. When such is the point, my humble request to the Chair is that even such allegations will have to be softened by giving proper replies. Now, with regard to other points Sir, if we cannot talk a word about a person who is not here then it will become difficult for us. If any defamatory statement is made you are here to call us to order.

Mr. SPEAKER.—If such an incident has taken place it is really very bad. I do not think there is any decent man either in this House or in this Country who would not condemn such an incident. The Hon. Leader of Opposition has given call attention notice. The other Hon. Member Mr. Nanje Gowda had come to me and requested me that the Chief Minister might be asked to make a statement on this subject and after that statement is made he may not press for his adjournment motion. Now, the best thing would be to first hear the Hon. Chief Minister.

Sri H. SIDDAVEERAPPA.—What the Hon. members wanted was to make a mention of these facts and request the hon'ble Leader of the House to take note of those facts.

Mr. SPEAKER.—Now, let the Hon. Chief Minister make his statement. After that, if any members want to have clarifications, I will permit one or two clarifications. I am only sorry why Mr. Ranganath was not sober.

Sri M. S. KRISHNAN (Malleswaram).—Sir, my only humble submission is that we would like the Hon. Chief Minister to reply in full and not in parts as it pertains to Harijans.

Sri H. N. NANJE GOWDA.—Under rule 311 I rise to a point of order. The Hon. Minister for Parliamentary Affairs has misinterpreted the member. * * *

* * * Matter not recorded as ordered by the Chair.

Mr. SPEAKER.—That need not be recorded.

1-30 P.M.

ಶ್ರೀ ಕೆ. ಎಚ್. ರಂಗನಾಥ.—ಸ್ವಾಮಿ, ಇವೊತ್ತಿನ ದಿವಸ ನಾವು ಬಹಳ ಸಂಕಟ ಪರಿಸ್ಥಿತಿಯಲ್ಲಿದ್ದೇವೆಂದು ಕಳಕಳಿಯಿಂದ ಹೇಳಬೇಕಾಗಿದೆ. ಮೈಸೂರು ರಾಜ್ಯದಲ್ಲಿಯೇ ಅಲ್ಲ ಇಡೀ ಹಿಂದೂಸ್ಥಾನದಲ್ಲಿಯೇ ಒಂದು ತರಹ ಭಾವನೆ ಬಂದು ಇದು ಪ್ರಚೋದನೆ ಯಾಗುತ್ತಿದೆ. ಆಂಧ್ರದಲ್ಲಿ ಒಬ್ಬ ಹರಿಜನ ಹುಡುಗನನ್ನು ಕೊಲೆ ಮಾಡಿದರು. ಇದು ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಬಂದಿದೆ. ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರದವರಾಗಲೀ, ಇದಕ್ಕೆ ಎಷ್ಟು ಮಹತ್ವ ಕೊಡಬೇಕೋ ಅಷ್ಟು ಮಹತ್ವವನ್ನು ದುರದೃಷ್ಟವಶಾತ್ ಕೊಡು ತ್ತಿಲ್ಲ. ಈ ಸಭೆಯ ಹೊರಗಡೆಯಲ್ಲಿಯೂ ಈ ಜನಗಳನ್ನು ಕೇಳುವವರು ರಕ್ಷಣೆ ಕೊಡುವವರೂ ಯಾರೂ ಇಲ್ಲ. ಈ ಮನೆಯಲ್ಲಿಯೂ ಕೂಡ ಅವರಿಗೆ ರಕ್ಷಣೆ ಇಲ್ಲ. ಇಂಥಾ ವಿಷಯ ಗಳನ್ನು ಈ ಸಭೆಯ ಸದಸ್ಯರು ಅದರಲ್ಲಿಯೂ ಹರಿಜನ ಸದಸ್ಯರು ಈ ಸಭೆಯಲ್ಲಿ ಸಂಕಟದಿಂದ ಎತ್ತುವಾಗ ಅದಕ್ಕೆ ಸರ್ಕಾರದವರು ಮಹತ್ವ ಕೊಡದೇ ಹೋದರೆ ಹರಿಜನರಿಗೆ ಸರಿಯಾದ ರಕ್ಷಣೆ ದೊರೆಯುವುದಿಲ್ಲ. ಇದಕ್ಕೆ ಮಹತ್ವಕೊಡದೇ ಹೋದರೆ ಇದಕ್ಕೆ ನಾವು ಒಂದು ಪರಿಹಾರ ಹುಡುಕ ಬೇಕಾಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ಸಭೆಯಲ್ಲಿ ನಾನು ಹರಿಜನರಿಗೆ ಸಂಬಂಧಪಟ್ಟ ವಿಷಯಗಳನ್ನು ಎತ್ತಿದರೆ ನನಗೇನೂ ಒಂದು ಕಿರೀಟ ಬರುತ್ತದೆ ಎಂದು ನನ್ನ ಭಾವನೆಯಲ್ಲ. ಈ ಪರಿಸ್ಥಿತಿ ಬಹಳ ಗಂಭೀರತೆಯಿಂದ ಕೂಡಿರುವುದರಿಂದ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ The wearer knows where the shoe pinches. ಈ ಪ್ರಶ್ನೆ ಬಂದಾಗ ಇದಕ್ಕೆ ಎಷ್ಟು ಮಹತ್ವ ಕೊಡಬೇಕೋ ಅಷ್ಟು ಮಹತ್ವವನ್ನು ಕೊಟ್ಟು ಅದನ್ನು ಪರಿಹಾರ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—I shall consider this request very sympathetically. Now Calling Attention Notice.

Calling Attention to a matter of urgent Public importance *re*: Incidents at Channapatna during the bye-election to Taluk Board

Sri S. SIVAPPA (Sravanabelgola).—Sir, I wish to call the attention of the Chief Minister to the incident that took place on 23rd January 1969 in Channapatna taluk at the time of election campaign, during the bye-election to the taluk board, the burning of P·P flag, burning of a shed, beating of a Harijan and police not taking cognisance of these incidents and allowing free and fair elections to be conducted to the taluk board. The Harijan who was beaten has written a letter. I am reading that letter :

"ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್, ಎಂ. ಎಲ್. ಎ. ಅವರ ಮೂಲಕ: ಚೆನ್ನಪಟ್ಟಣದ ಕಸಬಾ ಸಬ್ ಇನ್‌ಸ್ಪೆಕ್ಟರವರ ಸನ್ನಿಧಾನಕ್ಕೆ, ಡಿಟೋ ತಾಲ್ಲೂಕು ಅಕ್ಕೂರು ಗ್ರಾಮದ ಎ. ಕೆ. ಕಾಲೋನಿಯಲ್ಲಿರುವ ಚಿಕ್ಕಹೈದಯ್ಯನ ಮಗ ಚೌಡಯ್ಯನು ಬರೆಸಿಕೊಟ್ಟ 'ಕಂಪ್ಲೈಂಟ್':

ಸ್ವಾಮಿ, ನಾನು ನೆನ್ನೆ ದಿವಸ ಚುನಾವಣೆ ಪ್ರಚಾರ ಮಾಡಿಕೊಂಡು ತಾ : 22-1-1969ನೇ ಸಂಜೆ ನನ್ನ ಮಗಳ ಮನೆಗೆ ಕುಕ್ಕೂರುದೊಡ್ಡಿಗೆ ಬಂದಿದ್ದೆ. ಈ ದಿನ ಮಧ್ಯಾಹ್ನ ಊಟ ಮಾಡಿ ಕೊಂಡು ಸುಮಾರು 2 ಗಂಟೆ ಮೇಲೆ ಹೊರಟು ಚನ್ನಪಟ್ಟಣ ಮಾರ್ಗವಾಗಿ ಬಸ್ಸಿನಲ್ಲಿ ಹೋಗೋಣ ವೆಂದು ಪ್ರಯಾಣ ಹೊರಟೆನು. ಸುಮಾರು ಮೂರೂವರೆ ಗಂಟೆ ಸಮಯದಲ್ಲಿ ಮಾರ್ಚನಹಳ್ಳಿ ಎ. ಕೆ. ಕಾಲೋನಿ ಹತ್ತಿರ ಮಾದಾಪುರದ ಗೇಟಿಗೆ ದಾರಿ ವಿಚಾರಿಸುತ್ತಿದ್ದೆ. ಈ ವೇಳೆಗೆ ಹಿಂದಿನಿಂದಾ

(SRI S. SHIVAPPA)

ಒಂದು ಜೀಪು ಬಂದು ನಿಂತಿತು. ಇದರಿಂದ ಬಿ. . . . ಂಗೇಗೌಡರು, ಗೋಪಣ್ಣನವರು ಪೂಜಾರಿ ದೊಡ್ಡಬೀರಪ್ಪ ಮತ್ತು ಇನ್ನೂ ಕೆಲವರು ಇಳಿದರು. ಬಿ. ಜೆ. ಲಿಂಗೇಗೌಡರು ನನ್ನನ್ನು 'ಏನೋ ಬೋಳಿ ಮಗನೆ, ನನ್ನ ಏರಿಯಾಕ್ಕೆ ಏತಕ್ಕೆ ಬಂದಿಯೋ' ಎಂದು ನನಗೆ 4-5 ಏಟು ಹಾಕಿದರು. ಗೋಪಣ್ಣನು 2-3 ಏಟು ಹೊಡೆದರು. ನಾನು ವಯಸ್ಸಾದ ಮುದುಕ—ಹರಿಜನ ಭಯಸ್ಥನಾಗಿ ನಿಂತಿದ್ದೆ. ಸಣ್ಣ ಸಣ್ಣ ಮಾತಾಡಿಕೊಂಡು ಪುನಃ ಹೊಡೆದರು. ಆ ವೇಳೆಗೆ ಅಲ್ಲಿ ಯಾರೋ ಒಬ್ಬ ಬಂದು ಬಿಡಿಸಿದರು. ನಂತರ ಜೀಪಿನಲ್ಲಿ ಅವರೆಲ್ಲಾ ಹೊರಟು ಹೋದರು. ನಿರ್ನಿಮಿತ್ಯವಾಗಿ ನನ್ನನ್ನು ಹೊಡೆದು 60 ವಯಸ್ಸಿನ ಮುದುಕನಿಗೆ ಘಾಸಿ ಮಾಡಿದ್ದಾರೆ. ಇವರನ್ನು ವಿಚಾರಿಸಿ ಮಾಡತಕ್ಕ ಬಂದೋಬಸ್ತು ಮಾಡಬೇಕಾಗಿ ಪ್ರಾರ್ಥಿಸುತ್ತೇನೆ. ಮಾರ್ಚನಹಳ್ಳಿ ಹರಿಜನರ ಬೀದಿ ಬಳಿ ವಿಚಾರಿಸಿದರೆ ಸತ್ಯಾಂಶ ತಮಗೆ ವೇದ್ಯವಾಗುತ್ತದೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಸಹಿ : ಚೌಡಯ್ಯ"
ತಾರೀಖು : 23-1-69.

ಈ ರೀತಿ ಕಾಗದ ಕೊಟ್ಟಿದ್ದಾರೆ. ಈ ಕಾಗದವನ್ನು ತಮಗೆ ಕಳಿಸಿಕೊಡುತ್ತೇನೆ. ತಾವು ಮುಖ್ಯ ಮಂತ್ರಿಗಳಿಗೆ ಕಳಿಸಿಕೊಡಬೇಕು. ಈ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯವನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಬೇಕು.

Mr. SPEAKER.—The Member may pass on that letter, I shall look into it.

† Sri VEERENDRA PATIL.—Sir, The election for all the constitutencies in Channapatna Taluk, except Malur Constituency, were held on 23rd November 1968. The elections of Malur constituency were stayed by the High Court on a petition of Sri Choodaiah. The stay order was later vacated and the elections for Malur Constituency were held on 24th January 1969.

Vigorous propaganda was being carried on by both the Congress and the P. S. P. candidates.

On 22/23-1-69 at 00.30 hours on information that there was a fire accident at Doddamalur Village, the Sub-Inspector, Channapatna Rural Police Station, proceeded to the place with Head Constable 109 and found that the thatched hut belonging to Shri Appaji Gowda, which was situated on the road side, had caught fire and burnt. The Sub-Inspector recorded statement from Sri Appaji Gowda, regarding this incident. His statement is to the effect that while he was sleeping in the hut with his family on that night, some one called him. When he woke up, he found his hut in flames. He immediately called his wife and children and brought them and his buffalo and a calf out of the hut. Neighbours came to the scene of occurrence and put out the fire. He sustained loss to the tune of about Rs. 750. This was a case of an accidental fire. Shri Appaji Gowda had no reason to suspect any foul play. The next morning, the Sub-Inspector prepared a mahazar in the presence of 6 witnesses including one of the P. S. P. contestents, Shri Choodaiah. In the course of the Mahazar also, Shri Appaji Gowda has stated that the Police, Bangalore District, questioned Sri Appaji Gowda about this incident on 24th January 1969 when he visited Malur. He stated that he does not belong to any party, that no one was likely to

have had any motive to set fire to his house and some persons passing along the road, might have carelessly thrown a beedi or cigarette stem on the thatched hut.

On 23rd January 1969 at 15.00 hours Sri Gowdiah one of the P. S. P. candidates gave a complaint to the Sub-Inspector of Police to the effect that in connection with the election propaganda, party flags were displayed by both the parties and that the Congressmen were found removing the P. S. P. flags and posters and burning them.

On 23rd January 1969 at about 23.00 hours Sri Munidas and Sri D. T. Ramu, two local P. S. P. leaders presented a complaint of one Sri Choodaiah of Akkur (Harijan) to the Sub-Inspector of Police, Channapatna Rural Police Station to the effect that the said Sri Choodaiah was beaten by Sriyuths B. J. Linge Gowda, Secretary, M. P. C. C., A Gopanna and Pujari Beerappa asking him as to why he was canvassing for the P. S. P., etc. The next day A. S. P. Channapatna secured Sri Choodaiah and questioned him in this connection. He had no injuries on his person.

All the incidents mentioned above, being non-cognizable, no further action could be taken by the Police.

In view of the general atmosphere of tension prevailing, adequate arrangements were made on the days of polling *i.e.*, 24th Januarry 1969. Effective patrolling was also arranged in the villages to prevent any possible clash between the contesting parties.

The Superientendent of Police, Bangalore District, visited all the 8 polling stations. Polling in all the stations went off peacefully without any untoward incident.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ಈಗ ನಾಲ್ಕು ದಿನಗಳ ಹಿಂದೆ ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ವಸಾನ್ ಅಗ್ನಿಹೋತ್ರಿಯವರು ಕೆಲವು ಪದಗಳನ್ನು ಉಪಯೋಗಿಸಿದರು. ಇದರ ಬಗ್ಗೆ ತಾವು ರಿಕಾರ್ಡುಗಳನ್ನು ತರಿಸಿ ವಿಚಾರ ಮಾಡುತ್ತೇನೆಂದು ಹೇಳಿದ್ದಿರಿ. ಇದರಬಗ್ಗೆ ತಮ್ಮ ಗಮನ ಸೆಳೆಯುತ್ತಿದ್ದೇನೆ.

ಅಧ್ಯಕ್ಷರು.—ಅದರ ಬಗ್ಗೆ ನಾಳೆ ವಿಚಾರ ಮಾಡುತ್ತೇನೆ.

Notice of Adjournment Motion *re*: Kidnapping of Vice-President at Davangere Municipal Council

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ದಾವಣಗೆರೆಯ ಮುನಿಸಿಪಾಲಿಟಿಯಲ್ಲಿ ಉಪಾಧ್ಯಕ್ಷರಾಗಿದ್ದ ಶ್ರೀ ವೆಂಕಟೇಶ್ ಎನ್ನುವವರನ್ನು ಅಲ್ಲಿನ ಪೋಲೀಸು ಸಬ್‌ಇನ್ಸ್‌ಪೆಕ್ಟರವರು ಕಿಡ್‌ನಾಪ್ ಮಾಡಿರುವುದರ ಬಗ್ಗೆ ತಮಗೆ ಒಂದು ನಿಲುವಳಿ ಸೂಚನೆ ಕೊಟ್ಟಿದೆ. ಅದನ್ನು ಇವೊತ್ತು ತೆಗೆದುಕೊಳ್ಳಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ತಾವು ನೋಟೀಸಿನಲ್ಲಿ ತಾ। 23-12-68ಕ್ಕೆ ಬದಲಾಗಿ 26-1-69 ಎಂದು ಬರೆದಿರುವುದರಿಂದ ಇದನ್ನು ನಾನು ರಿಜೆಕ್ಟ್ ಮಾಡಿದ್ದೇನೆ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ದಾವಣಗೆರೆಯ ವಿಚಾರ ಈಗಾಗಲೇ ಗೊತ್ತಾಗಿದೆ. ಇದರ ಮೇಲೆ ಚರ್ಚೆಯಾಗಿದೆ. ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಚುನಾವಣೆಯ ಕಾಲದಲ್ಲಿ ವೋಟು ಮಾಡುವ ವೋಟುದಾರರಿಗೆ ಬಲೋದ್ಬಂಧನ ಮಾಡಿ ವೋಟು ಮಾಡದಂತೆ ಮಾಡುವುದು ಸರಿಯಾದ ಮಾರ್ಗವಲ್ಲ. ಇದರಿಂದ ಚುನಾವಣೆಯ ಪಾವಿತ್ರ್ಯತೆ ಹೋಗುತ್ತದೆ. ಚುನಾವಣೆಯ ಕಾಲದಲ್ಲಿ ಎಷ್ಟುಮಟ್ಟಿಗೆ ಜನಕ್ಕೆ ಅನುಕೂಲ ಮಾಡಿಕೊಡಬೇಕು ಎನ್ನುವುದೂ ಸರಕಾರಕ್ಕೆ ಗೊತ್ತಿದೆ.

ಈವೊತ್ತು ಮುಖ್ಯಮಂತ್ರಿಗಳಿಗೆ ಒಂದು ಎಚ್ಚರಿಕೆಯನ್ನು ಕೊಡುವುದು ನನ್ನ ಕರ್ತವ್ಯ. ಏನೆಂದರೆ ತಾಲ್ಲೂಕು ಬೋರ್ಡ್ ಎಲೆಕ್ಷನ್ ಟೈಂನಲ್ಲಿ ಯಾರೋ ಒಬ್ಬ ಪೋಲೀಸಿನವರಿಗೆ ಕಂಪ್ಲೇಂಟ್ ಕೊಟ್ಟರು ಎಂದು ಸಂಬಂಧಪಟ್ಟವರನ್ನು ಬಚ್ಚಿಟ್ಟುಕೊಂಡರೆ ಚುನಾವಣೆ ಹೇಗೆ ನಡೆಯುತ್ತದೆ ? ಚನ್ನಪಟ್ಟಣದಲ್ಲೂ ಕೂಡ ಕಾಂಗ್ರೆಸ್ಸಿನ ಪ್ರಮುಖ ವ್ಯಕ್ತಿಗಳೊಬ್ಬರು ಒಬ್ಬ ಪೋಲೀಸಿನವನನ್ನು ಕೈಯ್ಯಲ್ಲಿಟ್ಟುಕೊಂಡು ಹೀಗೆ ಮಾಡಿದರು.

ಅಧ್ಯಕ್ಷರು.—ಅವರು ನೋಟೀಸ್ ಕೊಡಲಿ, ವಿಚಾರಣೆ ಮಾಡುತ್ತೇನೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ನೋಟೀಸ್ ಕೊಟ್ಟ ಸಂಧರ್ಭದಲ್ಲಿ ತಾರೀಖು ತಪ್ಪು ಹಾಕಿದ್ದೀರಿ ಎಂದು ಹೇಳುತ್ತೀರಿ. ಚುನಾವಣೆ ಸಂಬಂಧದಲ್ಲಿ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಒಂದು ಕೋಳಿಯನ್ನೂ ಕೂಡ ಮುಖ್ಯಮಂತ್ರಿಗಳು ಓಡಾಡುವುದಕ್ಕೆ ಬಿಡಲಿಲ್ಲ.

ಅಧ್ಯಕ್ಷರು.—ಯೋಗ್ಯ ನೋಟಿಸ್ ಕೊಟ್ಟರೆ ನೋಡುತ್ತೇನೆ.

Allotment of Scooters to Members of Legislature—wrong reporting by the Press

Smt. WINNIFRED F. FERNANDES (Coondapur).—Sir, some days back there was a question regaarding allotment of Scooters to the Legislators. During that time Sri Agnihotri had put a supplementary saying that scooters were allotted to the Speaker and to Mrs. Fernandes. I contradicated and said that I had only applied and not allotted. But in the papers *Kannada Prabha* and *Indian Express* it is stated :

> " ಶ್ರೀ ಅಗ್ನಿಹೋತ್ರಿ.—ಸಭಾಧ್ಯಕ್ಷರು ಮತ್ತು ಶ್ರೀಮತಿ ವಿನ್ನಿಫ್ರೆಡ್ ಎಫ್. ಫೆರ್ನಾಂಡಿಸ್ ಅವರಿಗೆ ಸ್ಕೂಟರ್ ಕೊಡಲಾಗಿದೆ. ಅವರು ಸ್ಕೂಟರ್ ಸವಾರಿ ಮಾಡುತ್ತಾರೆಯೇ ?
>
> ಶ್ರೀ ಎಸ್. ಡಿ. ಕೊಠಾವಳೆ (ಅಧ್ಯಕ್ಷರು).—ನಾನು ಸ್ಕೂಟರ್ ಪಡೆದಿಲ್ಲ ......"
>
> ಅಧ್ಯಕ್ಷರು.—ನನಗೂ ಸಿಕ್ಕಿಲ್ಲ.

ಶ್ರೀಮತಿ ವಿನ್ನಿಫ್ರೆಡ್ ಎಫ್. ಫೆರ್ನಾಂಡಿಸ್.—ನಾನೂ ತೆಗೆದುಕೊಂಡಿಲ್ಲ. I did not read this paper. One of my friends in Coondapur has written that the public are wrongly impressed by this statement that I have been allotted and I sold it to somebody for profit whereas I was not at all allotted. This was at the instigation of the Food Minister Sri Vittaldas Shetty.

Sri B. VITHALDAS SHETTY (Minister of State for Food).—I object to it.

Smt. WINNIFRED F. FERNANDES.—He went to Sri Agnihotri and instigated him about this.

Mr. SPEAKER.—Please don't say that.

Smt. WINNIFRED F. FERNANDES.—It is simply blackmailing my name. I request the Chair to do the needful.

Mr. SPEAKER.— I shall direct to make necessary correction.

Smt. WINNIFRED F. FERNANDES.—Sir, such a thing should not happen in future.

Mr. SPEAKER.—That will be rectified.

Sri H. SIDDAVEERAPPA.—So far as the question of allotment of scooter is concerned, better some clarification is issued. Let not the country feel that some of these M. L. As. take scooters and try to utilise them for other purposes or selling them. In the first place there could not have been a Government Order to the effect that M. L. As. may get scooters.

My name has also come in. I have taken a scooter. Let my application be kindly looked into. I have stated in it that I have not taken it for my personal use. So I am not riding it. I have taken for the purpose of my party, which is a poor party. I cannot purchase a car for propagating the objectives of the party. So I have taken a scooter for the work of my party in my taluk and that is being used for that purpose. I have got it in my constituency. Anybody can come and see it.

Sri VEERENDRA PATIL.—At the most, what the Hon. Lady Member has stated may be a case of misreporting in the Press, for which this House or the Members of this House are not responsible.

Mr. SPEAKER.—That should be rectified.

Sri VEERENDRA PATIL.—That may be rectified; I have no objection for that.

Now regarding what Sri Siddaveerappa stated now, I wish to say a word. In their applications, the Members might have written so many things. Government have only given a list of the names to whom scooters have been allotted and if any Member is responsible for putting questions regarding their use, it is the Opposition Members who put such questions and asked whether many scooters have been sold in the blackmarket and whether they are not being used by the allottes. It is they who are putting such questions. We never attribute motives to any member.

Mr. SPEAKER.—There need be no clarifications on this.

Sri D. B. KALMANKAR (Aland).—I want to know what happened to the privilege motion I have given against Sri S. Nijalingappa.

Mr. SPEAKER.—I shall give my ruling tomorrow.

(Sri B. B. Sayanak stood up)

Mr. SPEEAKR.—Sri Sayanak may please sit down. I shall permit him to raise his question at the end of the day.

Papers laid on the Table

Sri VEERENDRA PATIL.--I lay :

The Accounts for the year 1967-68 and the Audit Report of the Mysore State Electricity Board under Section 69 (5) of the Electricity (Supply) Act, 1948.

Mr. SPEAKER.—The Report is laid on the Table.

Mysore Appropriation Bill, 1969

Introduction

Mr. SPEAKER.—I have to inform the House that the Governer has recommended the introduction and consideration of the Mysore Appropriation Bill, 1969,. in pursuance of clauses (1) and (2) of Article 205 of the Constitution of India. The message reads as follows :

> "In pursuance of clauses (1) and (3) of Article 205 of the Constitution of India, I, G. S. Pathak, Governor of Mysore, do hereby recommend that the Mysore Appropriation Bill, 1969, be introduced and considered by the Legislative Assembly."

I, therefore, call upon the Minister to introduce the said Bill.

Sri VEERENDRA PATIL.—In the absence of the hon. Minister for Finance, Sir, I beg to introduce the Mysore Appropriation Bill, 1969.

Mr. SPEAKER.—The Mysore Appropriation Bill, 1969, is introduced.

Mysore Appropriation Bill, 1969

Motion to Consider.

Sri VEERENDRA PATIL.—Sir, I beg to move :

> "That the Mysore Appropriation Bill, 1969, be taken into consideration."

Mr. SPEAKER.—Motion moved :

> "That the Mysore Appropriation Bill, 1969, be taken into consideration."

Sri VEERENDRA PATIL. According to convention, .no debate is necessary.

Mr. SPEAKER.—Then I will put it to vote of the House. The question is :

> "That the Mysore Appropriation Bill, 1969, be taken into consideration."

Motion was adopted.

Mr. SPEAKER.—I will now put the clauses to vote. The motion is :

"That Clauses 2 and 3 do stand part of the Bill."

Motion was adopted.

Clauses 2 and 3 were added to the Bill.

Mr. SPEAKER.—The question is :

"That the Schedule do stand part of the Bill."

Motion was adopted.

The Schedule was added to the Bill.

Mr. SPEAKER.—The questiou is:

"That the Clause 1, the long Title and the enacting formula do stand part of the Bill."

Motion was adopted.

Clause 1, the long Title and the enacting formula were added to the Bill.

Motion to pass

Sri VEERENDRA PATIL.—Sir, I beg to move :

"That the Mysore Appropriation Bill, 1969, be passed."

Mr. SPEAKER.—The question is :

"That the Mysore Appropriation Bill, 1969, be passed."

Motion was adopted.

Mysore Pay Cmmission Report

Motion to Consider

Sri VEERENDRA PATIL.—Sir, I beg to move :

"That the Report of the Mysore Pay Commission, 1966-68, be taken into consideration."

Sri M. NAGAPPA (Raichur).—I rise to a point of order.

Mr. SPEAKER.—First I will give a ruling then I will permit the Hon. Member to speak.

Sri M. NAGAPPA.—Before any ruling is given, I may be permitted to state something else other than what I stated on the previous occasion. Otherwise, what is the use of my statement after a ruling by the Chair ?

Mr. SPEAKER.—The Hon. Member may explain within five minutes.

† Sri M. NAGAPPA.—According to Rule 146, every motion has to be brought on the floor of the House. The procedure laid down for the consideration of the motions is in rules 146 to 152. According to Rule 151:

> "The Speaker shall, at the appointed hour on the allotted day or the last of the allotted days, as the case may be, forthwith put every question necessary to determine the decision of the Assembly on the original question."

The procedure for the admission of motions is laid down in Chapter XVI. If motions are to be taken for consideration and put to vote, procedure laid down in this chapter has to be followed. But the present motion is different; it cannot be put to vote under rule 151. Then there is Rule 279. This procedure is applicable only when there is no set procedure provided otherwise. For the motion on hand, only Rule 146 and 151 are applicable. Rule 279 cannot come into picture here and it won't come to the rescue of the Government. If at all, it has to be taken under Rule 146 and 151. There should be a substantial motion. There cannot be the usual general motion on the floor of the House. Recently at the Committee appointed to consider these Rules, Rule 151 was taken up for amendment. So till it is amended, Rule 279 won't come in, here now. According to Rule 151, we have to discuss a substantial motion. There must be voting; without it, if we simply talk and disperse, it is no good. Therefore, a considered ruling may be given considering all these aspects.

Ruling of the Speaker on the point of order *re*: motion to consider the Mysore Pay Commission Report

Mr. SPEAKER.—Hon. Member Sri Nagappa has repeated what he had said on 23rd January 69 and he has added nothing new.

On 23rd January 1969 when Sri Ramakrishna Hegde Minister for Finance moved the motion that the Report of the Mysore Pay Commission be taken into consideration, Sriyuths D. B. Kalmankar and M. Nagappa raised points of order saying that the motion could not be moved.

The contention of Sri D. B. Kalmankar was that under Rule 148(7) a motion shall not anticipate discussion of a matter which is likely to be discussed in the same Session. He added that since he had given notice of a separate motion regarding the Report of the Pay Commission, the Minister could not move his motion as it would anticipate discussion of a matter likely to be discussed.

2-00 P.M.

The contention of Sri Nagappa was that the motion of the Minister did not involve any decision of the House as envisaged under the rules governing the motions. He referred to Rules 146, 147 and 148 in this regard.

The Minister for Parliamentary Affairs pointed out that the motion made by the Minister for Finance was under Rule 279 and not under rule 146 and under Rule 279 a policy statement or any other matter could be considered and that no decision was recorded on such a motion.

I have considered the points of order raised by the two members and the argument of the Minister for Parliamentary Affairs.

I find from the records of the Legislature Secretariat that the hon. Minister for Finance has given on 13th January 1969, soon after the Report of the Mysore Pay Commission 1966-68 was circulated to the members, a notice of his intention to make the following motion :-

"I beg to move that the Report of the Mysore Pay Commission 1966-68 be taken into consideration"

The hon. members Sriyuths M. Nagappa, D. B. Kalmankar, S. Chandrakant have given notice on 20th January 1969 under Rule 146 of the Rules of Procedure and Conduct of Business of the following motion :—

"This Assembly unanimously accepts the Recommendations of the Mysore Pay Commission, in toto."

It may be noted that the notice of the motion of the hon. Minister for Finance is earlier than the one given by the three hon. members by about a week.

The admissibility of motions of whatever description is governed by Rules 146, 147, 148 and 149 of the Rules of Procedure, Rule 151 provides for the putting of every question necessary to determine the decision of the Assembly, on the motion. This obviously is the procedure for the substantive motions. It does not purport to provide for the disposal of motions for discussion on a matter of general public interest for which provisions exist in Rule 279 of the Rules of Procedure. Thus Rule 279 is in the nature of a proviso or an exception to Rule 151. The Rule of harmonious construction is an universally accepted principle of interpretation of laws and rules. I, therefore, hold that Rule 279 applies to the motion, the notice of which is given by hon'ble Minister for Finance. This disposes of the point of order raised by the hon'ble Member Sri M. Nagappa regarding the applicability of the Rules 151 and 279.

As regards the notice of the motion given by the Hon'ble Minister for Finance, it was already admitted and placed in the list of business for the sitting of this hon'ble House on 23rd January 1969, as it

(MR. SPEAKER)

fulfilled all conditions specified in the said Rules 146, 147, 148 and 149 and was allotted time under Rule 150 on the day reserved for Government Business. It may be noted here that the Hon. Finance Minister took the earliest opportunity of giving notice of his motion *i. e.* 13th January 1969 when the present Session of the Assembly commenced soon after the circulation of the Mysore Pay Commission Report to the members. The objection to the admissibility of the Hon. Finance Minister's motion raised by the hon. Member Sri Kalmankar under Rule 148 clause (vii) *viz.*, "it shall not anticipate discussion of a matter which is likely to be discussed in the same session" has no validity in view of the fact that it is senior to the notice given by the three hon. Members by about a week and that it was admitted earlier. However, by irony of events, this objection of the hon. Member Sri Kalmankar boomrangs against the notice of the motion given by him and two other hon. members. There is one more objection to the admissibility of the notice of the motion given by the hon. Members. Under Rule 148 clause (iv) *viz.*, that it should be restricted to a matter of recent occurrence. The Pay Commission's Report was published in November 1968 and it was circulated to the members on 13th January 1969 *i.e.*, on the first day of the present session of the Assembly. The three hon. Members should have taken an earliest opportunity like the hon'ble Finance Minister to give their notice. A delay of one week has occurred on their part to give their notice. I, therefore, regret my inability to admit their notice as it is barred under Rule 148 clauses (iv) and (vii).

The only point that remains to be dealt with is the objection of hon' ble Member Sri Nagappa that the Rule 279 is not meant for the discussion of matters like the Mysore Pay Commission Report.

The Pay Commission is appointed under an Executive Order. But later on the provisions of the Commissions of Inquiry Act, 1952 (Central Act 60 of 1952) have been made applicable for certain purposes. With the result, the Commission is deemed to be one appointed under the Central Act. But all the same the position does not seem to vary. The 1952 Act does not specify in what way the report should be dealt with by the House. In the absence of such a provision in the Act the matter may be brought before the House in the form of a motion.

It is upto the Government to have the matter discussed in whatever form it likes. It may bring a substantive motion and get a decision of the House. Or it may bring a motion that the report be taken into consideration. Usually reports of Committees like P A.C. etc., are discussed only in such a form. Therefore the contention of hon'ble Member Sri Nagappa is not tenable. The motion moved by the Hon. Minister is in order.

The hon. Members Sriyuths M. Nagappa, D. B. Kalmankar and S. Chandrakanth may, if they so choose, move a substitute motion to the one of the hon'ble Minister for Finance under Rule 279, in

appropriate words and at appropriate time *i.e.* before the discussion on the Finance Ministers motion commences. Now, I will place the motion before the house. Motion moved :

> "That the report of the Mysore Pay Commission, 1966-68, be taken into consideration."

ಶ್ರೀ ಎಚ್. ಬಿ. ಜ್ವಾಲನಯ್ಯ.- ವೇತನ ಆಯೋಗದ ವರದಿಯನ್ನು ಇಲ್ಲಿ ಚರ್ಚೆಗೆ ಇಟ್ಟಿದ್ದಾರೆ ಆವರೆ ಇಲ್ಲಿ ಯಾವ ಮಂತ್ರಿಗಳೂ ಇಲ್ಲ. ಇದಕ್ಕಿಂತಲೂ ಬಹಳ ಮುಖ್ಯವಾದ ಕೆಲಸ ಇದೆ ಎಂದು ಆರ್ಥಿಕ ಮಂತ್ರಿಗಳು ಸಭೆಗೆ ಬಾರದಿರುವುದು ಬಹಳ ವಿಷಾದಕರ ಹಾಗೂ ಆಶ್ಚರ್ಯಕರ.

ಶ್ರೀ ಎಸ್. ಶಿವಪ್ಪ.—ನಾವು ಇಲ್ಲಿ ಏನು ಹೇಳಬೇಕು ಎನ್ನುವುದೇ ಗೊತ್ತಿಲ್ಲ. ಇದನ್ನು ಕಾರ್ಯಗತ ಮಾಡುವುದರಿಂದ ಸರ್ಕಾರಕ್ಕೆ ಹೆಚ್ಚುಹಣ ಬೇಕಾಗುವುದು, ಅದನ್ನು ಎಲ್ಲಿಂದ ಹೇಗೆ ಒದಗಿಸಬೇಕು ಎಂಬುದನ್ನೆಲ್ಲಾ ಹೇಗೆ ತಿಳಿದುಕೊಳ್ಳುವುದು ? ಆ ವಿವರಗಳಿಲ್ಲದೆ ನಾವೇನು ಇಲ್ಲಿ ಚರ್ಚೆ ಮಾಡಬೇಕು? ಸಭೆಯಲ್ಲಿ ಈ ದಿವಸ ಮುಖ್ಯವಾಗಿ ಇರಬೇಕಾದ ಹಣಕಾಸಿನ ಮಂತ್ರಿಗಳಿಲ್ಲ—ಮುಖ್ಯ ಮಂತ್ರಿಗಳಿಲ್ಲ......

Mr. SPEAKER.—The Finance Minister has written to me a letter that he had to leave the headquarters for some very urgent work and that he has left and in his absence Sri K. Puttaswamy, Minister for Law Labour and Parliamentary Affairs, will attend to the legislative work.

Sri S. SIVAPPA.—Even the Parliamentary Affairs Minister is not present in the House.

Mr. SPEAKER. – He is in the Upper House now. There are other Ministers here and they will take notes.

† **Sri K. PUTTASWAMY.**—Sir, this House is aware that the Government have from time to time increased the emoluments of the Government servants either by themselves or on the recommentation of the Pay Committee. Just before 1957, the Old Mysore State constituted a Pay Committee. The report of that committee was not implemented. Soon after the reorginsation of the State, an official committee was constituted and that committee adopted most of the recommendations of the Pay Committee referred to and these recommendations were implemented. All these recommendations were implemented with effect from 1st January 1957 giving liberal weightage increments. An Official Committee was again constituted in 1961 and their recommendations merging a portion of the dearness allowance was given effect to from 1st January 1961. The House has also been made aware of the fact that during the third five year plan period the State Government had to incur expenditure of Rs. 30 crores for increasing the emoluments of Government servants.

The House is aware that the Fourth Finance Commission considered the State's case and a major portion of the commitment on account of dearness allowance, etc., was taken into account in giving its award. But that Commission did not make any provision for any further increase during the fourth plan period.

An official Committee was also constituted by Government with the Finance Minister as Chairman to evolve a pay structure on the basis of the scales obtaining in Madras.

(SRI K. PUTTASWAMY)

There were frequent representations from the Non-Gazetted Officers' Association for constituting a Pay Commission. There were also interpallations on the floor of this House. An assurance was also given to consider them sympathetically.

The Government constituted a One Man Pay Commission with Justice T. K. Tukol, Judge of the High Court of Mysore as Chairman. The House is also aware of the terms of reference. The Commission submitted interim reports regarding enhancement of dearness allowance and certain relief to pensioners. These recommendations were accepted by Government and orders were issued. The recommendation on account of the interim reports has involved a commitment of Rs. 14 crores per annum. The Commission has examnied 610 witnesses comprising persons from various sections of society and representing different Associations and Departments.

Sir, the main recommendations of the Commission are as follows:

1. Minimum wage of Rs. 60 per month exclusive of dearness allowance and other allowances.
2. Reduction of the existing 107 scales to 27 scales.
3. Counting of part of the dearness allowance as additional basic pay.
4. Grant of Central rates of dearnese allowance.
5. Bifurcation of C. C. A. and H. R. A. and grant of small increase.
6. Leave encashment benefits.
7. Revision of D. A. rates.
8. Liberalisation of pension Rules.
9. Cash allowances for minor ailments to Government servants Class III, Class IV and Pensioners.
10. Marriage advances and educational concessions.

The broad details of the extra cost on acount of the recommendations of the Pay Commission are as follows:

		(In Lakhs)	
		Immediate cost.	*Average cost.*
		Rs.	Rs.
Revision of pay scales	...	800	1,122
Dearness allowance	...	275	275
Cash allowance for minor ailments	...	177	177
Marriage advance	...	100	100
Other recommendations	...	167	195
Local bodies, aided institutions, etc. in respect of revision of pay scales		268	374
	Total cost	1,787	2,243

In the State there are 2.4 lakhs of Government employees. Total revenue of the State for 1968–69 excluding plan grants and receipts from Government Industrial Concerns is Rs. 170·26 crores. The total expenditure of the State for 1968–69 excluding expenditure on Plan and Centrally sponsored schemes and working expenses of Government Industrial Concerns but including dearness allowance increases given effect to from 1-3-1968 not included in the Budget Estimates for 1968–69 is Rs. 15·92 crores. The total estimate of the expenditure on Pay of Officers, Pay of Establishment and other allowances during 1968–69 including dearness allowances increase from 1–3–1968 is Rs. 71.53 crores. This does not include revenne expenditure and expenditure on local bodies, but it includes 80 per cent of the grant-in-aid to educational institutions and dearness allowance grant to local bodies. The percentage of establishment charges to net revenue is 42 per cent. The percentage of establishment charges to net expenditure is 46 per cent. Taking the average extra cost on account of the recommendations of the Pay Commission, the percentage of wage bill to revenue would be 55 per cent and with reference to total expenditure it would be 53 per cent. The extra cost is about 30 per cent of the expenditure on establishment charges. The Pay Commission has also made certain other recommendations such as, (1) allowances to children of Government servants who work in places where educational facilities are not available; (2) provision of home orderlies to Class I officers; (3) grant of amenities allowances to Forest Officers. The extra cost on account of these recommendations cannot be readily assessed.

This is the picture that I am able to give. Hon. Members were given copies of the Pay Commission's Report on 13th January 1969. I am sure Hon. Members have had opportunity to go through the several recommendations that Justice Tukol has made.

It is my duty to acknowledge with gratitude the good work that Justice Tukol has done.

I am sure this House will consider the report dispassionately and Hon. Members will offer their constructive comments.

SRI H. SIDDAVEERAPPA.—I want to seek certain clarifications from the Hon. Minister before we proceed further. This is an unparalleled situation in which we are meeting today. Hitherto, if you take history, all the revisions of pay scales from 1957......

MR. SPEAKER.—The Hon. Member is making a speech.

SRI H. SIDDAVEERAPPA.—I am only asking for clarification. I will take my own time for speech. No Government ever consulted the Legislature before they thought of either accepting or rejecting or modifying any recommendations of the Pay Commission. By this time a number of Committees and Commissions were appointed by Government and Government took decisions on their reports and placed them before the House. Now a piquant situation has arisen where Government have

(SRI H. SIDDAVEERAPPA)

simply placed the report before the House. I may tell the Hon. Minister we have read the report to the extent that we can and have marshalled all the facts. What is it that the Government want us to do? What is the lead they are giving us? What are their views? The Government are the employers and the employees totalling 2.4 lakhs are looking to them and not to us. Therefore, I would like to know what lead they would like to give to this country and also for the enlightenment of this House? What is it that they are going to do? I would like to have clariffication on these points before we consider this Report.

SRI K. PUTTASWAMY.—Sir, I do not agree with the Hon. Member that 2.4 lakhs of Government employees are looking only at the Government for implementation of this Report. In my humble opinion, they are looking at this august House. I have already given the picture of the Pay Commission Report and what would be its possible impact on the finances of the State. Therefore, before taking a decision on the several recommendations that are contained in the Pay Commission Report, the Government is seeking the opinion of the Hon. House. Hon'ble Member Sri Siddaveerappa said that a piquant situation has been created. It is not the desire of the Government to embarrass this House or any Member of this House. We do need their advice on the several recommendations that have been made. I may say that the Government may find it rather difficult to implement all the recommendations of the Pay Commission that they have made, and when they take up the question of implementation they may not be able to implement even some of the recommendations to the extent to which the Pay Commission have made the recommendations. All these factors will have to be taken into consideration. Government are anxious to implement the recommendations of the Pay Commission keeping in mind the finances of the State and the resources that this Government is able to tap.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈಗ ಪೇ ಕಮಿಷನ್‌ನವರು ಕೊಟ್ಟಿರತಕ್ಕ ವರದಿಯನ್ನು ಸರ್ಕಾರದವರು ಪರಿಶೀಲನೆ ಮಾಡಿ ಇದನ್ನು ಆಚರಣೆಗೆ ತರುವ ಬಗ್ಗೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟ ಮಾಡಿಲ್ಲ. ಇದರಲ್ಲಿ ಯಾವುದನ್ನು ಅನ್ವಯ ಮಾಡುವುದಕ್ಕಾಗುತ್ತದೆ, ಎಷ್ಟೆಷ್ಟು ಅನ್ವಯ ಮಾಡುವುದಕ್ಕಾಗುತ್ತದೆ, ಎಂಬುದನ್ನು ಹೇಳಿದರೆ ಈ ಬಗ್ಗೆ ಸರ್ಕಾರದ ಅಭಿಪ್ರಾಯ ಏನಿದೆ ಎಂಬುದು ನಮಗೆ ಗೊತ್ತಾಗುತ್ತದೆ. ಆಗ ನಾವು ಅದರ ಮೇಲೆ ನಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ.

MR. SPEAKER.—The Hon. Member can refer to it in his speech. I will give full opportunity to every one to speak.

SRI T. R. SHAMANNA.—Sir, my learned friend Sri Siddaveerappa asked a pertinent question as to what compelled the Government to place this Report before the Assembly when it was not being done in previous cases?

ಶ್ರೀ ಕೆ. ಪುಟ್ಟಸ್ವಾಮಿ.—ಸರ್ಕಾರ ತನ್ನ ಜವಾಬ್ದಾರಿಯನ್ನು ಹೊರುವುದಕ್ಕೆ ಸಿದ್ಧವಾಗಿದೆ. ಈಗ ಪೇ ಕಮಿಷನ್‌ನವರು ಮಾಡಿರತಕ್ಕ ಶಿಫಾರಸ್ಸುಗಳು ಮತ್ತು ಅವರ ಸಲಹೆಯ ಸ್ವರೂಪವನ್ನು ಈ ಸಭೆಯ ಮುಂದೆ ಇಟ್ಟಿದ್ದೇವೆ. ಅದರ ಮೇಲೆ ಅಖೈರು ತೀರ್ಮಾನ ಮಾಡುವುದಕ್ಕೆ ಮುಂಚೆ ಪ್ರಜಾಪ್ರತಿನಿಧಿಗಳ ಅಭಿಪ್ರಾಯ ಏನಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಈ ವರದಿಯನ್ನು ಈ ಸಭೆಯಮುಂದೆ ತಂದಿದ್ದೇವೆ.

ಶ್ರೀ ಎಸ್. ಶಿವಪ್ಪ.—ತುಕೋಳ್ ಕಮಿಷನ್ ವರದಿಯನ್ನು ಇಂಪ್ಲಿಮೆಂಟ್ ಮಾಡುವ ಕಾಲಕ್ಕೆ ಒಂದನೆ, ಎರಡನೆಯ, ಮೂರನೆಯ ದರ್ಜೆಯ ನೌಕರರಿಗೆ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಚರ್ಚೆ ನಡೆಯುತ್ತಿರಲಿ. ಈ ಅಂಶಗಳನ್ನು ತರಿಸಿ ಕೊಡುತ್ತೇನೆ

Sri D. B. KALMANKAR.—In Chapter XIII of Volume I, it has been stated that a recommendation is there regarding the strength of the Council of Ministers. But in the Report there is not even a word mentioned about it. I want to know whether there is such a recommendation or not and whether it is contained in some other Volume?

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನು ಯಾವ ವಾಲ್ಯೂಮ್ ಸಹ ಇಲ್ಲ. ನಮ್ಮಲ್ಲಿರುವ ವರದಿಯನ್ನೆಲ್ಲಾ ಸಂಪೂರ್ಣವಾಗಿ ಕೊಟ್ಟಿದ್ದೇವೆ. ಕಾಂಟ್ರಡಿಕ್ಷನ್ ಏನಾದರು ಇದ್ದರೆ ಮಾನ್ಯ ಸದಸ್ಯರುಗಳು ತೋರಿಸಿಕೊಡಬಹುದು.

Sri H. SIDDAVEERAPPA.—In Chapter XIII it is clearly stated that the Commission has also recommended about the possible retrenchment of the Ministry!

Sri K. PUTTASWAMY.—That is a point on which the hon'ble members can make certain comments.

ಶ್ರೀ ಎಂ. ನಾಗಪ್ಪ.—ಇಲ್ಲಿ ಸ್ಪೆಸಿಫಿಕ್ ರೆಕಮಂಡೇಷನ್ ಇದೆ. ಕೌನ್ಸಿಲ್ ಆಫ್ ಮಿನಿಸ್ಟ್ರಿಯನ್ನು ರೆಡ್ಯೂಸ್ ಮಾಡುವ ಬಗ್ಗೆ ಒಂದು ಶಿಫಾರಸ್ಸನ್ನು 13 ನೇ ಚಾಪ್ಟರ್‌ನಲ್ಲಿ ವರದಿ ಮಾಡಿದ್ದೇನೆಂದು ತುಕೋಳ್ ಅವರು ಹೇಳಿದ್ದಾರೆ. ತಾವು ಆ ಚಾಪ್ಟರ್‌ನ್ನು ದಯವಿಟ್ಟು ನೋಡಿ. ಮೊನ್ನೆ ಮಾನ್ಯ ಅರ್ಥಿಕ ಮಂತ್ರಿಗಳು ಉತ್ತರ ಕೊಡುವಾಗ ಸರ್ಕಾರಿ ನೌಕರರ ಸಂಬಳದ ವರದಿಯಲ್ಲಿ ಮಂತ್ರಿಗಳ ವಿಷಯ ಬರುವುದಿಲ್ಲವೆಂದು ಹೇಳಿದರು. ಮತ್ತು ತುಕೋಳ್ ಅವರು ಈ ಬಗ್ಗೆ ಯಾವ ತರಹದ ಸ್ಟೇಟ್‌ಮೆಂಟ್ ಮಾಡಿಲ್ಲವೆಂದೂ ಸಹ ಹೇಳಿದರು. ತುಕೋಳ್ ವರದಿಯ 33ನೇ ಪೇಜು, ವಾಲ್ಯೂಮ್ 1ರಲ್ಲಿ ಈ ಬಗ್ಗೆ 13ನೇ ಚಾಪ್ಟರ್‌ನಲ್ಲಿ ರೆಕಮೆಂಡೇಷನ್ ಮಾಡಿದ್ದೇನೆಂದು ಹೇಳಿದ್ದಾರೆ. ತಾವು ಮತ್ತೆ ಪ್ರಿಂಟ್ ಮಾಡಿಸುವ ಕಾಲಕ್ಕೆ ಇದನ್ನು ತೆಗೆದು ಹಾಕಿದಿರಾ ಎಂಬುದನ್ನು ತಿಳಿಸಬೇಕು. ಇಲ್ಲದಿದ್ದರೆ ಆಯೋಗಕ್ಕೆ ಮತ್ತೆ ಈ ವಿಚಾರವನ್ನು ರೆಫರ್ ಮಾಡಿ ಅವರ ಅಭಿಪ್ರಾಯ ಏನು ಎಂಬುದನ್ನು ತರಿಸಿಕೊಂಡು ಸಭೆಗೆ ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಈ ಬಗ್ಗೆ ಉತ್ತರ ಕೊಡುವುದಕ್ಕೆ ಮೊದಲು ನನ್ನ ಒಂದು ಪ್ರಶ್ನೆ ಏನೆಂದರೆ, ಕೌನ್ಸಿಲ್ ಆಫ್ ಮಿನಿಸ್ಟರ್ಸ್‌ನ್ನು ರೆಡ್ಯೂಸ್ ಮಾಡುವ ಬಗ್ಗೆ 13ನೇ ಚಾಪ್ಟರ್‌ನಲ್ಲಿ ಇಲ್ಲದಿರುವುದು ಮತ್ತು ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಶಿವಪ್ಪನವರು ಹೇಳಿದಂತೆ ನಾಲ್ಕನೆಯ ದರ್ಜೆಯ ನೌಕರರಿಗೆ ಈ ಆಯೋಗದ ರೆಕಮೆಂಡೇಷನನ್ನು ಜಾರಿಗೆ ತಂದರೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ತಿಳಿಸಬೇಕು. ತಾವು ಈ ಚರ್ಚೆನಡೆಯುತ್ತಿರಲಿ, ಇನ್‌ಫರ್‌ಮೇಷನ್ ತರಿಸಿಕೊಡುತ್ತೇನೆ ಎಂದು ಈಗ ಹೇಳಿದಿರಿ ತಾವು ವಿವರಗಳನ್ನು ಕೊಟ್ಟಮೇಲೆ ನಾವು ಭಾಷಣ ಮಾಡಬೇಕಾಗುತ್ತದೆ.

2-30 P.M.

ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಉದಾಹರಣೆಯಾಗಿ ಇಲ್ಲಿ ಆಗಲೇ ಕೆಲವರು ತಿಳಿಸಿದಂತೆ ಕೌನ್ಸಿಲ್ ಆಫ್ ಮಿನಿಸ್ಟರ್ಸ್ ಬಗ್ಗೆ ಯಾವ ವಿವರಣೆಗಳೂ ಇಲ್ಲಿಲ್ಲ. ಇದರ ಮೇಲೆ ನಾವು ಇಲ್ಲಿ ಭಾಷಣ ಮಾಡಬೇಕೇ ಬೇಡವೇ ಗೊತ್ತಾಗುತ್ತಿಲ್ಲ. ಮತ್ತು ಇನ್ನೂ ಒಂದು ದುರದೃಷ್ಟದ ಸಂಗತಿ ಎಂದರೆ ನಮ್ಮ ಮಾನ್ಯ ಫೈನಾನ್ಸ್ ಮಿನಿಸ್ಟರಾದ ಶ್ರೀಮಾನ್ ರಾಮಕೃಷ್ಣ

(ಶ್ರೀ ಎಸ್. ಬಂಗಾರಪ್ಪ)

ಹೆಗ್ಗಡೆಯವರು ಎಲ್ಲೋ ಹೊರಗಡೆ ಹೋಗಿದ್ದಾರೆಂದು ತಿಳಿದುಬರುತ್ತದೆ. ಅವರೇನಾದರೂ ಇಲ್ಲಿ ಇದ್ದರೆ ಇಲ್ಲಿ ಯಾವ ವಿವರಗಳನ್ನು ಕೊಡಬಹುದಾಗಿತ್ತೋ ಅದನ್ನು ಅವರಿಗೆ ಕೊಡಲು ಸಾಧ್ಯವಾಗುತ್ತಿತ್ತು. ಅವರೇನೋ ಅಂಡಮಾನಿಗೆ ಹೋಗಿದ್ದಾರೆ ಎಂದು ಕೆಲವು ಸದಸ್ಯರು ಹೇಳುತ್ತಾರೆ. ಅಂತೂ ಅವರು ಇಲ್ಲಲ್ಲ. ಆದುದರಿಂದ ಅವರು ಬರುವವರೆಗಾದರೂ ಇದನ್ನು ತಡೆ ಹಿಡಿದು ಆ ನಂತರ ಚರ್ಚೆ ಮಾಡಬಹುದೇ ಹೇಗೆ ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ನಮ್ಮ ಮಾನ್ಯ ರಾಮಿನಿಸ್ಟರು ಸಾಧ್ಯವಾದಷ್ಟು ತರಿಸಿಕೊಡುತ್ತೇವೆ ಎಂದು ಹೇಳಿದರೆ ಅವರಿಗೆ ಕೂಡ ಸಂಪೂರ್ಣ ಜವಾಬ್ದಾರಿ ಇರುವಂತೆ ಕಾಣಲಿಲ್ಲ. ಇವನ್ನೆಲ್ಲಾ ಮಾನ್ಯ ಅಧ್ಯಕ್ಷರು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಪೇ ಕಮಿಷನ್‌ನವರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ ಅದರ ಬಗ್ಗೆ ನೋಡಿದರೆ ಕೆಲವು ವಿಚಾರಗಳನ್ನು ಇಲ್ಲ ನಮಗೆ ಒದಗಿಸದೇ ಕೈಬಿಟ್ಟಿದ್ದಾರೆಂದು ತೋರುತ್ತದೆ. ಅದು ಯಾವುದು ಎನ್ನುವುದು ನಮಗೆ ಇಲ್ಲ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು.—ಮಂತ್ರಿಗಳು ಇಲ್ಲ ಏನು ಉತ್ತರ ಹೇಳುತ್ತಾರೋ ಅದನ್ನು ಮೊದಲು ಕೇಳೋಣ.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಈ ಸಂದರ್ಭದಲ್ಲಿ ನಾನು ಒಂದು ವಿಚಾರ ಹೇಳಬೇಕೆಂದು ಇದ್ದೇನೆ. ತುಕೋಳ್ ಕಮೀಷನ್ ರಿಪೋರ್ಟಿನ ಬಗ್ಗೆ ವಿವರಗಳನ್ನು ಕೇಳಿದರೆ ಮಾನ್ಯ ಮಂತ್ರಿಗಳು ಆಗಾಗ್ಗೆ ತರಿಸಿಕೊಡುತ್ತೇನೆ ಎನ್ನುತ್ತಾರೆ. ಹೀಗೆ ಅರ್ಥಂಬರ್ಥ ಹೇಳುತ್ತಿದ್ದರೆ, ನಾವು ಹೇಗೆ ತಾನೇ ಇದರ ಬಗ್ಗೆ ಮಾತನಾಡುವುದು ? ಇದರಲ್ಲಿ ಸರಕಾರಕ್ಕೆ ಒಂದು, ಎರಡು, ಮೂರು ಹಾಗೂ ನಾಲ್ಕನೇ ವರ್ಗದವರಿಗೆ ಎಷ್ಟು ದುಡ್ಡು ಬೇಕಾಗುತ್ತದೆ ಮತ್ತು ಬೇರೆ ಕಡೆಯಿಂದ ಸರಕಾರಕ್ಕೆ ಯಾವ ರೀತಿ ಹಣ ಬರುತ್ತಿದೆ, ಮತ್ತು ಇವರೆಲ್ಲರಿಗೂ ಸಂಬಳ ಹೆಚ್ಚು ಮಾಡಿದರೆ ಎಷ್ಟು ಹಣ ಬೇಕಾಗುತ್ತದೆ ಎನ್ನುವ ವಿವರಗಳನ್ನು ನಮ್ಮ ಫೈನಾನ್ಸ್ ಮಿನಿಸ್ಟರು ಇಲ್ಲ ಇದ್ದಿದ್ದರೆ ಅವರು ಕೊಡಬಹುದಾಗಿತ್ತು. ಅವರು ಇಂದು ಇಲ್ಲಲ್ಲ. ಅವರೇನೂ ವಿವರಗಳನ್ನು ಕೊಡದೇ ಹೋದರೆ ನಾವು ಹೇಗೆ ಭಾಷಣ ಮಾಡುವುದು ? ಇದರ ಬಗ್ಗೆ ಸರಿಯಾದ ವಿವರಗಳನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ (ಅರಕಲಗೂಡು).—ಸ್ವಾಮಿ, ಶ್ರೀ ತುಕೋಳರವರೂ ಕಷ್ಟಪಟ್ಟು ಒಂದು ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ಈ ವರದಿಯ ಬಗ್ಗೆ ಸರಕಾರದ ಅಭಿಪ್ರಾಯ ಏನಿದೆ ನಮ್ಮಿಂದ ಯಾವ ವಿಚಾರಗಳಲ್ಲಿ ಅಭಿಪ್ರಾಯಗಳುಬೇಕು ಸರಕಾರದ ಧೋರಣೆಯೇನು ಇಂತಿಂತಹ ಭಾಗಗಳಲ್ಲ ಪ್ರಯೋಗ ಮಾಡಿದರೆ ಏನಾಗುತ್ತದೆ ಎನ್ನುವ ವಿವರಗಳನ್ನು ಹೇಳಿದ್ದರೆ ನಾವು ನಮ್ಮ ಅಭಿಪ್ರಾಯಗಳನ್ನು ಕೊಡಬಹುದಾಗಿತ್ತು ಮತ್ತು ಇದರ ಖರ್ಚಿಗೆ ಎಲ್ಲಿಂದ ಹಣ ತರಬಹುದು ಎನ್ನುವುದನ್ನು ಹೇಳಿದ್ದರೆ ಅದು ಒಂದು ರೀತಿಯಾಗಿತ್ತು. ಇದೂ ಅಲ್ಲದೆ ಹಿಂದೆ ಇಂಟೆರಿಂ ರಿಪೋರ್ಟು ಕೊಟ್ಟಾಗ ನಮಗೆ ಎಷ್ಟು ಖರ್ಚು ಬಂತು. ಈಗ ಇದನ್ನು ಇಂಪ್ಲಿಮೆಂಟು ಮಾಡಿದರೆ ಏನು ಖರ್ಚು ಬರಬಹುದು ಎನ್ನುವ ವಿವರಗಳನ್ನು ಕೊಡಲಲ್ಲ. ಸುಮ್ಮನೆ ವರದಿಗಳನ್ನು ನಮ್ಮ ಮುಂದೆ ಇಟ್ಟು ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರ ಮಾತಿನಲ್ಲಿ ಹೇಳುವಂತೆ ವಿರೋಧ ಪಕ್ಷದವರ ಮೇಲೆ ಗೂಬೆ ಕೂರಿಸುವಂತೆ ಮಾಡಿದ್ದಾರೆ. They do not consult us. If they are really sincere, they should have come forward with a formal motion.

Sri D. B. KALMANKAR.—As the Leader of the Opposition stated, we want the figures for each category. This report is contained in five volumes. I want to know how much money will be realised by imposing sales tax and by improving the Revenue sources according to the suggestions continued in the report so that we may consider them. The Commission has proposed to increase the sales tax, agricultural income tax and so many other things. Therefore, all this information may be furnished so that we may consider and give our considered opinion.

SRI K. PUTTASWAMY.—Sir, certain members are trying to extract some information from the Government. Certainly, I am not reluctant to give information that is required. Whatever I have, it is my duty to give. I have already made a statement which contains what would be the approximate commitment of the State if the recommendations of the Commission are implemented. Hon. Member Sri Kalmankar wanted certain information from me. Sir, about the income that the Government is getting from several sources which he mentioned in his speech, they are contained in the budget estimates. It would not be possible for Government to say what exactly the income the State would get from various sources when the increase is effected. Also it is not possible at this stage to say what exactly would be the expenditure if the recommendations are implemented. I am sure the Hon. Member will appreciate the position of the Government. What increase is going to be effected is not yet thought of. Therefore, I submit it is not possible for me to give that information.

I am sorry Sir, if I have created such an impression. I only said during the course of discussion I would be able to get that information and supply to the Hon. Members. I have given information with regard to the financial commitment the State would have to face if the Tukol Commission's report is implemented. Some other members wanted to know the financial commitment on account of increase in salaries, etc., in respect of class III and Class IV employees. Sir, I would be able to supply that information tomorrow, because it has to be calculated and furnished.

With regard to the other information asked by some Hon. Members about the observations of the Pay Commission on page 33, the Commission has offered its suggestions in regard to the strength of the Council of Ministers in Chapter 13 and Government may examine those suggestions and take appropriate action. Hon. Members have also drawn the attention of this House to the fact that in Chapter 13 no recommendation has been made. Sir, I cannot comment on the omission or on the inclusion of this observation on page 33, as the Hon. Minister for Finance has already made it clear that the terms of reference for the Pay Commission was to consider and make recommendations in relation to the salary and emoluments, etc., with regard to the employees of the Government. He has also made it clear that the Ministers are not employees of the Government. It may be, perhaps the Pay Commission has subsequently realised this position and they have not made any reference to the Council of Ministers and that is all that I can say.

MR. SPEAKER.—Now the question is whether there is any omission on the part of the Government in printing the whole report of the Commission.

SRI K. PUTTASWAMY.—I am sorry for such a remark by Hon. Members. I may assure the House that no such thing has been done.

Sri H. SIDDAVEERAPPA.—Why not you get a clarification from the Pay Commission and place it before this House ?

Sri K. PUTTASWAMY.—I don't think it is necessary in view of the stand the Government has taken that the Pay Commission was requested only to make recommendations in regard to pay structure, etc., of Government employees and not on the Government.

ಶ್ರೀ ಎಚ್. ಬಿ. ಜ್ವಾಲನಯ್ಯ.—ಕಳೆದು ಹೋದ ಲಂಕನ್ನು ಇಲ್ಲಿ ಕೊಡಬೇಕಾಗಿದೆ. It is a responsible body which has given the report.

Mr. SPEAKER.—Now the Hon. Minister Mr. Puttaswamy has furnished broad details of the financial implications. As far as I can see, all that is required is, the Hon. Members could give some guidelines to the Government to enable them to take a decision one way or the other. With regard to the observation of the Commission on page 33 of the report, Hon. Members are quite free to comment on the strength of the Ministry and say that it should be reduced or things of that sort or whatsoever they like. The Commission has completed its work and I think it has now become *defacto* powerless. The Government has made it clear that the report has been printed as it came from the pen of Mr. Justice Tukol and circulated to Hon. Members without omission or suppression. Nothing prevents the Hon. Members from giving guidences to the Government even in regard to the strength of the Council of Ministers. Now, Mr. Nagappa has given notice of a substituted motion. It has to be moved before the discussion starts. I call upon Mr. Nagappa to move his substitute motion.

Sri M. NAGAPPA.—Sir, I beg to move that:

"This Assembly accepts the recommendations of the Mysore Pay Commission of 1966-68, regarding :—

(*a*) the pay scales fixed for the Non-Gazetted employees ;

(*b*) the Gazetted Officers whose basic salary is Rs. 350 per month only ;

(*c*) the abolition of various categories of posts except the IV grade employees ;

(*d*) re-organisation of Secretariat ;

and rejects the recommendations regarding the enhancement of taxes *i.e.*,

(*a*) land revenue ;

(*b*) surcharge ;

(*c*) sales tax ;

(*d*) imposition of agricultural Income-tax on the food-grain producers, etc., and

(*e*) recommendation regarding the enhancement of Salary of Gazetted officers whose basic salary is more than Rs. 350 per month."

MR. SPEAKER.—Motion moved:

"That this Assembly accepts the recommendations of the Mysore Pay Commission of 1966-68, regarding:—

(*a*) the pay scales fixed for the Non-gazetted employees;

(*b*) the Gazetted Officers whose basic salary is Rs. 350 per month only;

(*c*) the abolition of various categories of posts except the IV grade employees;

(*d*) re-organisation of Secretariat;

and rejects the recommendations regarding the enhancement of taxes, *i.e.*,

(*a*) land revenue;

(*b*) surcharge;

(*c*) sales tax;

(*d*) Imposition of agricultural Income-tax on the foodgrain producers, etc., and

(*e*) recommendation regarding the enhancement of salary of Gazetted Officers whose basic salary is more than Rs. 350 per month."

Both the original motion moved by the Hon. Minister for Finance and the substitute motion moved by Hon. Member Sri Nagappa are before the House. I call upon Sri Shivappa to initiate the discussion.

SRI H. SIDDAVEERAPPA.—The only point I wanted to know from the Hon'ble Minister was, whether this was not the first time the recommendations of this nature was ever unreservedly placed before the House for discussion. So far as I know, within my experience, never before the legislature was consulted as to what should be paid to the Government employees. Even when we were in the Government, quite a number of times, we increased D. A. and other things. Four interim reports involving an expenditure of 14 crores, they have accepted without consulting us. Not only that, there is the big question: I am rather intrigued as to why this report should come before us in this form. Why not you take a decision and then place it here? I want to know from the Government, because no reply came for that question.

SRI K. PUTTASWAMY.—I already met that point also. Perhaps it escaped the notice of the hon' Member. First I would request the hon' Members not to read too much in between the lines. There is absolutely nothing; the Government have not tried to keep back anything. Sir, very often, the complaints are made on the floor of the House that this House was not taken into confidence before the report was accepted or implemented or acted upon. And when the Government comes before this House requesting their opinion, they

(SRI K. PUTTASWAMY)

say: 'why have you come before us?' or why have you not taken a decision? The Hon. House will readily agree that this report has a far-reaching effect and more so on the finances of the State. Therefore, the Government considers it desirable to have the advice of the hon. Members before they take a decision in the matter.

Sri S. SIVAPPA.—Sir, on page 26 it is said that the expenditure on Government establishment is only 48.25 crores and is 26.4 per cent of the total expenditure. But the information given by the Hon. Minister is that it is 71.54 per cent and is 42 per cent of the total expenditure. In the Pay Commission Report, figures are given on page 7. The expenditure on salaries and allowances of employees under State Administrations, including the expenditure on non-plan schemes works out to 53.35 crores, whereas according to the Hon. Minister, it is 71.53 crores.

Mr. SPEAKER.—Probably it is after the recommendations are accepted.

Sri K. PUTTASWAMY.—Here it is expressed in terms of percentage. There I have given the figure. It is for the Hon. Leader of the Opposition to make comments on my speech.

Sri S. SIVAPPA.—The figures furnished must be correct. At the outset, I want to know whether Rs. 71.53 crores is correct or whether Rs. 53 crores is correct?

Sri K. PUTTASWAMY.—What I have stated on the floor of the House is correct.

Sri S. SIVAPPA.—The whole thing is based on incorrect figures. Why should we comment on this?

Sri K. PUTTASWAMY.—If that is the inference of the Hon. Leader of the Opposition, I have nothing to say.

Sri S. SIVAPPA.—If that is the attitude of the Hon. Minister, then I say, no useful purpose will be served by my speaking on the subject and why should we waste the time of the House?

Mr. SPEAKER.—The Minister says that he has funrished the available figures, now the Hon. member may state the points in the course of his speech on the subject.

Sri S. SIVAPPA.—When the Government is making the statement, they must be responsible.

3-00 P. M.

Sri K. PUTTASWAMY.—There is disparity. I never disputed the different figures that were cited here. The House is aware that the calculations that the Pay Commission had made was on the basis of the structure of salary, D. A. and other amenities that were being given

at that time. In my speech I have stated that the Pay Commission gave interim reports and they were implemented and the costs due to the implementation of the interim report are also stated. The Pay Commission have not taken into consideration the grant in aid that is paid to the grant-in-aid institutions and also local bodies. Therefore the figure that I have given represents the calculations as on date, presuming that the report of the Pay Commission is implemented. That is the reason for the difference in these figures.

[MR. DEPUTY SPEAKER in the Chair]

† ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಈ ಸರಕಾರ ತುಕೋಳ್ ಕಮಿಟಿಯ ವರದಿಯನ್ನು ಸಭೆಯ ಮುಂದಿಟ್ಟು ಸಭೆಯನ್ನು ಎಷ್ಟೊಂದು ಇಕ್ಕಟ್ಟಿಗೆ ಸಿಕ್ಕಿಹಾಕಿದೆ ಎಂಬುದನ್ನು ಅರ್ಥಮಾಡಿ ಕೊಳ್ಳಬಹುದು. ಯಾವ ಸರಕಾರವೇ ಆಗಲಿ ತನ್ನ ಅಧೀನದಲ್ಲಿರುವ ಅಧಿಕಾರಿಗಳ ಸಂಬಳದ ಏರಿಕೆ ಪ್ರಶ್ನೆ ಬಂದಾಗ ಧೈರ್ಯವಿದ್ದರೆ ನೇರವಾಗಿ ಅದು ಈ ಜವಾಬ್ದಾರಿಯನ್ನು ತಾನೇ ಹೊರಬೇಕು. ಇಂದು ಸರ್ಕಾರ ತನ್ನ ಜವಾಬ್ದಾರಿಯನ್ನು ಹೊರುವುದಕ್ಕೆ ಧೈರ್ಯವಿಲ್ಲದೆ ತಾನೇ ಮಾಡಿದ ಒಂದು ಸಮಿತಿಯು ವರದಿ ಕೊಟ್ಟರೆ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಧೈರ್ಯವಿಲ್ಲದೆ ಅದನ್ನು ಶಾಸನಸಭೆ ಮುಂದಿಟ್ಟು ಅದರ ಅಭಿಪ್ರಾಯ ಕೇಳುತ್ತಿದೆ. ಇದನ್ನು ಚರ್ಚಿಸಿ ಅಭಿಪ್ರಾಯ ತಿಳಿಸಬೇಕೆಂದು ಸಭೆಯ ಮುಂದಿಟ್ಟಿದ್ದಾರೆ. ಇದನ್ನು ನೋಡಿದರೆ ಸರಕಾರ ತಾನು ಹಿಂಜರಿಯುತ್ತಿದೆ, ಒಂದು ನಾಟಕವಾಡುತ್ತಿದೆ, ಇದು ಸರಿಯಿಲ್ಲ, ಧೈರ್ಯವಿಲ್ಲದೆ ಮಾಡಿರುವ ಕೆಲಸ ಇದು ಎಂದು ವಿಷಾದದಿಂದ ಹೇಳಬೇಕಾಗಿದೆ. ಸರಕಾರಕ್ಕೆ ನೇರವಾಗಿ ಸಂಬಂಧಪಟ್ಟಿರುವ ತನ್ನ ಅಧಿಕಾರಿಗಳ ಸಂಬಳದ ಏರಿಕೆ ವಿಚಾರದಲ್ಲಿ ಈ ವರದಿ ಬಂದಿದೆ. ಇಂದು ತುಕೋಳ್ ಕಮಿಷನ್‌ನವರು ಒಂದು ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ, ಬಹಳ ಕಷ್ಟಪಟ್ಟು ತಯಾರಿಸಿದ್ದಾರೆ. ದೇಶದಲ್ಲಿರುವ ಆರ್ಥಿಕ ಪರಿಸ್ಥಿತಿ ನೋಡಿ ಮನುಷ್ಯನಾದವನು ಉತ್ತಮವಾದ ಜೀವನ ನಡೆಸಬೇಕಾದರೆ ಕನಿಷ್ಟವಾಗಿ ಅವನಿಗೆಷ್ಟು ಹಣ ಬೇಕು ಎಂಬುದನ್ನು ಪ್ರಾಮುಖ್ಯವಾಗಿ ವಿಚಾರಮಾಡಿದ್ದಾರೆ. ಇಂದು ದೇಶದಲ್ಲಿ ಅನೇಕ ಕೈಗಾರಿಕೆಗಳಲ್ಲಿ ಮತ್ತು ಉದ್ಯಮಗಳಲ್ಲಿ ಕೆಲಸಮಾಡುವ ಕೂಲಿಗಳಿಗೆ ಯಾವರೀತಿಯ ವೇತನ ಕೊಡಬೇಕೆಂದು ಹೇಳುವ ಈ ಸರಕಾರ ಅದರಂತೆ ಜಾರಿ ಮಾಡುತ್ತಿದ್ದಾರೆಯೇ ಎಂದು ನೋಡಲು ಜವಾಬ್ದಾರಿ ಇರುವ ಸರಕಾರ ಇಂದು ತಾನೇ ಯಜಮಾನನಾಗಿ ತಾನೇ ನೇಮಕ ಮಾಡಿರುವ ತನ್ನ ಅಧಿಕಾರಿಗಳಿಗೆ ಸರಿಯಾದ ರಕ್ಷಣೆ ಕೊಡುತ್ತಿದೆಯೇ, ಎಷ್ಟುಮಟ್ಟಿಗೆ ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿಗೆ ತನ್ನ ಹೊಣೆಯನ್ನು ಸರಿಯಾಗಿ ಹೊರುತ್ತಿದೆಯೇ ಎಂದು ವಿಚಾರ ಮಾಡಬೇಕಾಗಿದೆ. ಅಂಕಿ ಅಂಶಗಳನ್ನು ನೋಡಿದರೆ ಕಮಿಷನ್‌ನವರು ಬಹಳ ಧೀರ್ಘವಾಗಿ ವರದಿಮಾಡಿರುವುದು ಕಂಡು ಬರುತ್ತದೆ. ಈ ದಿವಸ ದೇಶದಲ್ಲಿರುವ ಬೆಲೆ ಏರಿಕೆ ಮತ್ತು ಜೀವನಮಟ್ಟ ನೋಡಿ ಅದಕ್ಕನು ಗುಣವಾಗಿ ವರದಿ ಮಾಡಿದ್ದಾರೆ. ಅದರ ಪ್ರಕಾರ ಒಂದು ಸಂಸಾರದಲ್ಲಿ ಮೂರು ಜನರಿರಬಹುದು ಎಂದು ಲೆಕ್ಕ ಹಾಕಿರಬಹುದು. 3 ಜನರಿರುವ ಸಂಸಾರಕ್ಕೆ ಹೊಟ್ಟೆ ತುಂಬ ಅನ್ನ, ಮೈತುಂಬ ಬಟ್ಟೆ ಮತ್ತು ಷೆಲ್ಟರ್- ಭಾರಿ ಮನೆಯಲ್ಲ, ಒಂದು ಚಿಕ್ಕ ಗುಡಿಸಲು ದೊರೆಯಬೇಕಾದರೆ ಎಷ್ಟು ಹಣ ಬೇಕು ಎಂದು ಚರ್ಚೆಮಾಡಿದ್ದಾರೆ. ಈ ಚರ್ಚೆ ಬಹಳ ವಿವಾದಾಸ್ಪದವಾಗಿದೆ. ಸೆಂಟ್ರಲ್ ಪೇಕಮಿಷನ್ ಕೂಡ ಇದೇರೀತಿ ಜೀವನಮಟ್ಟವನ್ನು ಗಣನೆಗೆ ತೆಗೆದುಕೊಂಡು ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಮೈಸೂರಿನಲ್ಲಿ ತುಕೋಳ್ ಕಮಿಷನ್ ಕೂಡ ತನ್ನದೇ ಆದ ನೀತಿಯನ್ನಳವಡಿಸಿ ಕೊಂಡು ಎಷ್ಟು ಸಂಬಳಸಾರಿಗೆ ಕೊಡಬೇಕೆಂದು ಒಂದು ನಿರ್ಧಾರಕ್ಕೆ ಬಂದಿದೆ. ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಪರಿಣತರು ಒಬ್ಬ ಮನುಷ್ಯ ಆರೋಗ್ಯವಂತನಾಗಿರುವವನಿಗೆ ಆತನಿಗೆ ಸರಿಯಾಗಿ ಆರೋಗ್ಯವಿರಬೇಕಾದರೆ 3 ಸಾವಿರ ಕ್ಯಾಲೊರಿಗಳಷ್ಟು ಆಹಾರ ಅತ್ಯಾವಶ್ಯಕ ಎಂದು ಹೇಳಿದ್ದಾರೆ. ಇದಕ್ಕೆ ಒಳ್ಳೆಯ ಆಹಾರ ಕೊಡಬೇಕು, ಇಷ್ಟು ಕೊಡಲು ಈ ಸರಕಾರಕ್ಕೆ ಶಕ್ತಿಯಿಲ್ಲ ಎಂದು ಹೇಳುತ್ತಿದ್ದಾರೆ. ಕೊನೆಗೆ 2,800 ಕ್ಯಾಲೊರಿಗಳ ಶಾಖಾಂಶವಿರುವ ಆಹಾರ ವನ್ನಾದರೂ ಕೊಡಬೇಕು ಎಂದು ಲೆಕ್ಕಹಾಕಿದ್ದಾರೆ. ಇಂದು ಅದೂ ಸಾಧ್ಯವಾಗದಿದ್ದರೆ ಸುಮಾರು 2600 ಕ್ಯಾಲೊರಿಗಳಷ್ಟಾದರೂ ಕೊಡಬೇಕೆಂದು ತಿಳಿಸಿದ್ದಾರೆ. ಇದಕ್ಕೆ ರಾಗಿ, ಗೋಧಿ, ತರಕಾರಿ, ಹಾಲು, ತುಪ್ಪ, ಕೋಳಿ ಮೊಟ್ಟೆ ಮುಂತಾದ್ದೆಲ್ಲಾ ಬೇಕು. ಈ ತುಕೋಳ್ ಕಮಿಷನ್ನಿಗೂ ಸೆಂಟ್ರಲ್ ಕಮಿಷನ್ನಿಗೂ ಒಂದು ಮೂಲಭೂತವಾದ ವ್ಯತ್ಯಾಸವಿದೆ. ಇಂದು

(ಶ್ರೀ ಎಸ್. ಶಿವಪ್ಪ)

ಒಂದು ಸಂಸಾರದಲ್ಲಿ 3 ಜನರು ಇರುವರೆಂದು ಲೆಕ್ಕ ಹಾಕಿ ಇಷ್ಟು ಹಣ ಕೊಡಬೇಕೆಂದು ತಿಳಿಸಿದ್ದಾರೆ, ಕನಿಷ್ಟವೇತನ ನಿರ್ಧಾರಮಾಡಿದ್ದಾರೆ. ಹಾಗೆ ಮಾಡುವಾಗ ಬೇಸಿಕ್ ಪೇ ವಿಚಾರ ಹೇಳಿದ್ದಾರೆ. ಒಂದು ಕಡೆ ಸೆಂಟ್ರಲ್ ಕಮಿಷನ್ 70 ರೂ ಇರಬೇಕೆಂದರೆ ನಮ್ಮ ಮೈಸೂರು ಕಮಿಷನ್ ಪ್ರಕಾರ ಬೇಸಿಕ್ ಪೇ 60 ರೂಪಾಯಿ ಇರಬೇಕು, ಡಿ. ಎ. 65 ರೂಪಾಯಿ ಕೊಟ್ಟು ಒಟ್ಟು ಸುಮಾರು 125 ರೂಪಾಯಿ ಕೊಡಬಹುದು ಎಂದು ತಿಳಿಸಿದ್ದಾರೆ. ಸೆಂಟ್ರಲ್ ಕಮಿಷನ್ ಬೇಸಿಕ್ ಪೇ 70 ರೂಪಾಯಿ ಇರಬೇಕು, ಡಿ. ಎ. ಸೇರಿ ಸುಮಾರು 135 ರೂಪಾಯಿ ಇರಬೇಕು ಎಂದು ತೀರ್ಮಾನವಾಡಿದೆ. ಇಂದು ಕಡಿಮೆ ಸಂಬಳ ಬರುವವರು ಸರಕಾರದ ಬೆನ್ನುಮೂಳೆಯಿದ್ದಹಾಗೆ. ಅವರಿಗೆ ಎರಡು ಹೊತ್ತು ಊಟ ಮಾಡುವುದಕ್ಕೆ ಸಾಕಾಗುವಷ್ಟು ಕೊಟ್ಟರೂ ಅವರ ಮಕ್ಕಳ ವಿದ್ಯಾಭ್ಯಾಸ ಮತ್ತು ಆರೋಗ್ಯದ ವಿಷಯವನ್ನೂ ನೋಡಿಕೊಳ್ಳುವುದು ಸರಕಾರದ ಕರ್ತವ್ಯ ಎಂಬುದನ್ನು ಮರೆಯಬಾರದು. ಎಂಥವರೇ ಆಗಲಿ ತಮ್ಮ ಹೆಂಡತಿ ಮಕ್ಕಳುಗಳಿಗೆ ಹೊಟ್ಟೆತುಂಬ ಅನ್ನ ಹಾಕಬೇಕಾದರೆ ಕೊನೆಯಪಕ್ಷ ಒಂದು ತಿಂಗಳಿಗೆ 150 ರೂಪಾಯಿಗಳಾದರೂ ಅವರಿಗೆ ವರಮಾನವಿರಬೇಕು. ಹಾಗಿಲ್ಲದಿದ್ದರೆ ಸಂಸಾರ ಕಾಪಾಡುವುದು ಕಷ್ಟ ಎಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕು. ಅಷ್ಟನ್ನು ಕೊಡಬೇಕು. ಅದಕ್ಕಾಗಿ ಎಷ್ಟು ಖರ್ಚಾಗುತ್ತದೆ ಎಂಬುದು ಎರಡನೆಯ ಪ್ರಶ್ನೆ. ಮನುಷ್ಯ ಬಾಳಬೇಕಾದರೆ ಒಂದು ತಿಂಗಳಿಗೆ ಎಷ್ಟು ಬೇಕು ಎಂದು ನಿರ್ಧಾರಮಾಡುವುದು ಈ ಸಭೆಯ ಪ್ರಥಮ ಕರ್ತವ್ಯ, ಪವಿತ್ರ ಕರ್ತವ್ಯ. ಈ ಕಮಿಷನ್ ವರದಿಯನ್ನು ಒಪ್ಪಿದರೆ ನಾಲ್ಕನೆಯ ದರ್ಜೆಯ ನೌಕರರಿಗೆ ಎಷ್ಟು ಖರ್ಚು ಬರುತ್ತದೆ ಎಂದು ಕೇಳಿದರೆ ಸರಕಾರ ಇದುವರೆಗೆ ಏನೂ ಹೇಳಿಲ್ಲ. ಅದನ್ನೇಕೆ ಲೆಕ್ಕ ಹಾಕಲಿಲ್ಲ ಎಂದು ಕೇಳುತ್ತೇನೆ. ಕಮಿಷನ್ ವರದಿ ಓದಿ ಮಾತನಾಡಬೇಕೆಂದು ಹೇಳಬಹುದು, ಇದು ನಾವು ಮಾಡುವ ವಿಚಾರವಲ್ಲ. ಈ ವರದಿ ಸರಕಾರಕ್ಕೆ ಬಂದು ಸುಮಾರು 3-4 ವಾರಗಳಾಗಿವೆ, ಹಾಗಿರುವಾಗ ಈ ಸಭೆಯ ಮುಂದಿರುವಾಗ ಅಂಕಿ ಅಂಶ ಕೊಡಬೇಕಾಗಿತ್ತು. ನಾಲ್ಕನೆಯ ವರ್ಗದವರಿಗೆ ಅರೆಹೊಟ್ಟೆ ತಿನ್ನುವವರಿಗೆ ಸೌಕರ್ಯ ಕೊಡಬೇಕಾದರೆ ಹೊಟ್ಟೆತುಂಬ ಅನ್ನ ಕೊಡಬೇಕಾದರೆ ಎಷ್ಟು ಬೇಕು, ಎಷ್ಟು ಖರ್ಚಾಗುತ್ತದೆ ಎಂದು ಹೇಳಿದ್ದರೆ ಅದನ್ನು ಒಪ್ಪಬೇಕೇ, ಬಿಡಬೇಕೇ ಎಂಬುದನ್ನು ಹೇಳಬಹುದಾಗಿತ್ತು.

ಈವೊತ್ತು ಇದರಲ್ಲಿ ಒಂದನೇ ವರ್ಗ, ಎರಡನೇ ವರ್ಗ ಮೂರನೆ ವರ್ಗ, ನಾಲ್ಕನೇ ವರ್ಗ ಎಲ್ಲ ಸೇರಿಸಿದ್ದಾರೆ. ಇದನ್ನೆಲ್ಲಾ ಒಪ್ಪಿಕೊಳ್ಳುವುದಾದರೆ ಬಹಳವಾಗಿ ಹಣದ ಹೊರೆಯಾಗುತ್ತದೆ ಎಂದು ಹೇಳಿದ್ದಾರೆ. 22 ಕೋಟಿ ರೂಪಾಯಿಗಳಲ್ಲಿ ನಾಲ್ಕನೇ ವರ್ಗದ ಜನರಿಗೆ ಎಷ್ಟಾಗುತ್ತದೆ ಎಂಬ ಅಂಶವನ್ನು ತಾವು ಕೊಡಬೇಕೆಂದು ಅವತ್ತು ಕೇಳಿದೆ. ಆ ಅಂಕಿಅಂಶ ತಮ್ಮಲ್ಲಿ ಇಲ್ಲವೆಂದು ಹೇಳಿದಿರಿ. ಅಧ್ಯಕ್ಷರೇ, ನಾನು ಮೊದಲೇ ಹೇಳಿದ ಹಾಗೆ ಈ ದೇಶದಲ್ಲಿ ಒಬ್ಬನಿಗೆ ಕನಿಷ್ಟ ವರಮಾನ ಎಷ್ಟಿರಬೇಕೆಂಬುದು ಒಂದು ಮುಖ್ಯವಾದ ಪ್ರಶ್ನೆ, ಮತ್ತು ಅತಿ ಹೆಚ್ಚೆಂದರೆ ಒಳ್ಳೆಯ ಜೀವನವನ್ನು ಮಾಡುವುದಕ್ಕೆ ಎಷ್ಟಿರಬೇಕೆಂಬುದು ಇನ್ನೊಂದು ಪ್ರಶ್ನೆ. ಇವತ್ತು ನಾವು ಸಮಾಜವಾದವನ್ನು ಹೇಳುತ್ತಾ ಇದ್ದೇವೆ. ಕಾಂಗ್ರೆಸ್‌ನವರೂ ಕೂಡ ಅವರು ಸಮಾಜವಾದಿಗಳು ಎಂದು ಹೇಳುತ್ತಾರೆ. ಇವತ್ತು ಈ ಸಮಾಜದಲ್ಲಿ ಏರುಪೇರು ಇಲ್ಲದೆ ಒಬ್ಬ ಬಹಳ ಎತ್ತರದಲ್ಲಿ ಜೀವನವನ್ನು ಮಾಡುವವನು ಮತ್ತು ಒಬ್ಬ ಕನಿಷ್ಟವಾದ ಮಟ್ಟದಲ್ಲಿ ಜೀವನ ಮಾಡುವವನು. ಇವರಿಗೆ ಬೇಕಾದ ಆಹಾರ, ವಸತಿ ಮತ್ತು ಬಟ್ಟೆ ಇವುಗಳನ್ನು ಗಳಿಸಿಕೊಳ್ಳುವುದಕ್ಕೆ ಎಷ್ಟು ಹಣ ಬೇಕೆಂಬುದನ್ನು ಲೆಕ್ಕ ಹಾಕಿದರೆ ಅತಿ ಕಿರಿದು ನಾಲ್ಕನೇ ವರ್ಗದ ಆಧಿಕಾರಿ ಮತ್ತು ಉತ್ತಮವಾದ ಮೊದಲನೆ ವರ್ಗದ ಅಧಿಕಾರಿಗೆ ಎಷ್ಟು ಅಂತರ ಇರಬೇಕೆಂಬುದು ಮೂಲಭೂತವಾದ ಪ್ರಶ್ನೆ ಚರ್ಚೆಯಾಗಬೇಕಾಗಿದೆ. ಮೂಲಭೂತವಾದ ಪ್ರಶ್ನೆಯನ್ನು ಆಮೇಲೆ ಚರ್ಚೆ ಮಾಡೋಣ. ಈಗ ನಮ್ಮ ಮುಂದಿರತಕ್ಕ ಪ್ರಶ್ನೆಯನ್ನು ಚರ್ಚೆ ಮಾಡುವುದಾದರೆ ಕೊನೆ ಪಕ್ಷ ಅತ್ಯಂತ ಕೆಳಗೆ ಇರತಕ್ಕ ಅಧಿಕಾರಿಗೂ ಮತ್ತು ಅತ್ಯಂತ ಮೇಲ್ಮಟ್ಟದಲ್ಲಿ ಇರತಕ್ಕ ಅಧಿಕಾರಿಗೂ ಒಂದರಿಂದ ಹತ್ತರಷ್ಟು ಜಾಸ್ತಿ ಇರಬಾರದು. ಕೆಳಗಿನ ಅಧಿಕಾರಿಗೆ ನೂರು ರೂಪಾಯಿ ಸಂಬಳ ಕೊಟ್ಟರೆ ಮೇಲ್ಮಟ್ಟದಲ್ಲಿರತಕ್ಕ ಅಧಿಕಾರಿಗೆ ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿಗಳಿಗಿಂತಲೂ ಕೂಡ ಜಾಸ್ತಿ ಇರಬಾರದು ಈ ಒಂದು ಪರಿಮಿತಿಯಲ್ಲಿ ನಮ್ಮ ತತ್ವವನ್ನು ಅಳವಡಿಸಿಕೊಂಡು ತುಕೋಲ್ ಕಮಿಷನ್ ವರದಿಯ ಪ್ರಕಾರ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡತಕ್ಕ ಕಾಲದಲ್ಲಿ ವಿಚಾರ ಮಾಡಬೇಕಾಗಿದೆ. ತಾವು ಹೇಳಬಹುದು ಎಲ್ಲರಿಗೂ ಒಂದೇ ಸಮನಾಗಿ ಕೊಡುವುದಕ್ಕೆ ಸಾಧ್ಯವಿಲ್ಲ, ಬುದ್ಧಿವಂತರು ಇದ್ದರೆ, ಒಳ್ಳೆಯ ಕೆಲಸ ಮಾಡತಕ್ಕವರಿಗೆ, ಹೆಚ್ಚು ವಿದ್ಯಾಭ್ಯಾಸ ಮಾಡಿರತಕ್ಕವರಿಗೆ, ಟೆಕ್ನಿಕಲ್ ಎಜ್ಯುಕೇಷನ್ ಇರತಕ್ಕವರಿಗೆ ಸ್ವಲ್ಪ ಹೆಚ್ಚು ಸಂಬಳ ಕೊಡಬೇಕೆನ್ನುವುದನ್ನು ಒಪ್ಪುತ್ತೇನೆ. ಆದರೆ ಎಷ್ಟು ಅಂತರ

ಇರಬೇಕೆಂಬುದನ್ನು ನಿರ್ಧರ ಮಾಡುವಾಗ ಒಂದರಿಂದ ಹತ್ತಕ್ಕಿಂತ ಜಾಸ್ತಿ ಯಾರಿಗೂ ಇರಕೂಡದು. ಈ ತತ್ವವನ್ನು ಗಮನದಲ್ಲಿಟ್ಟುಕೊಂಡು, ಸಂಬಳ ಸಾರಿಗೆಗಳನ್ನು ನಿರ್ಧರ ಮಾಡತಕ್ಕ ಕಾಲದಲ್ಲಿ ಇವತ್ತು ಪ್ರಪ್ರಥಮವಾಗಿ ಸೆಕ್ರೆಟೇರಿಯೇಟ್‌ನಿಂದಲೇ ಪ್ರಾರಂಭಿಸಬೇಕಾಗಿದೆ. ತುಕೋಳ್ ಕಮಿಷನ್‌ನವರೇ ಹೇಳಿದ್ದಾರೆ, ಇವತ್ತು ಏನಾಗಿದೆ ಎಂದರೆ ಎಲ್ಲಿ ಅವಶ್ಯಕತೆ ಇದೆಯೋ ಆ ಕಡೆಯಲ್ಲಿ ಬಿಟ್ಟು ಎಲ್ಲಿ ಅನಾವಶ್ಯಕವಾಗಿ, ನಮಗೆ ಅಧಿಕಾರಿಗಳು ಬೇಕಾಗಿಲ್ಲವೋ ಅಂತಹ ಕಡೆ ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಎಷ್ಟೋ ಕಡೆ ಈ ರೀತಿಯಾಗಿದೆ. ಯಾರೋ ಒಬ್ಬ ಮನುಷ್ಯ ನನ್ನ ಬಂಧು ಅವನಿಗೆ ಒಂದು ಕೆಲಸಬೇಕು. ಈ ರೀತಿ ಯಾರೋ ಒಬ್ಬ ವ್ಯಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲವು ಹುದ್ದೆಗಳನ್ನು ನಿರ್ಮಾಣ ಮಾಡತಕ್ಕದ್ದು ಏನಿದೆ ಈ ಹವ್ಯಾಸವನ್ನು ಈ ಸರ್ಕಾರ ಆಗಿಂದಾಗ್ಗೆ ಮಾಡಿಕೊಂಡು ಬಂದಿದೆ. ಎಕಾನಮಿ ಮೆಷರ್ಸ್ ಮಾಡುತ್ತೇವೆ ನಮಗೆ ನಿಜವಾಗಿಯೂ ದುಡ್ಡಿಲ್ಲ ಎಂದು ಹೇಳಿ ಹೇಳಿ ಐದು ವರ್ಷಗಳಿಂದಲೂ ಬೇಕಾದಷ್ಟು ಹೊಸ ಹುದ್ದೆಗಳನ್ನು ನಿರ್ಮಾಣ ಮಾಡಲಾಗಿದೆ. ಈ ಒಂದು ಅಂಶವನ್ನು ಈವೊತ್ತು ಪರಿಶೀಲನೆ ಮಾಡಬೇಕಾಗಿದೆ. ಇವತ್ತು ಯಾವುದೇ ಒಂದು ಶಾಸ್ತ್ರೀಯವಾದ ನೀತಿ ನಿಮ್ಮಲ್ಲಿ ಇಲ್ಲ, ಯಾವ ಇಲಾಖೆಗೆ ಎಷ್ಟು ಹುದ್ದೆ ಬೇಕು, ವರ್ಕ್ ಲೋಡ್ ಎಷ್ಟಿರಬೇಕು ಎಂಬ ಶಾಸ್ತ್ರೀಯವಾದ ನೀತಿ ಇಲ್ಲ. ಎಷ್ಟು ಇಂಜನಿಯರುಗಳ ಬೇಕು, ಎಷ್ಟು ಓವರ್‌ಸೀಯರುಗಳು ಬೇಕು ಎಂಬುದು ನಿಮ್ಮಲ್ಲಿ ಇಲ್ಲ, ನಿಮಗೆ ಯಾರಿಗೋ ಕೆಲಸ ಕೊಡಬೇಕು, ಅದಕ್ಕೆ ಒಂದು ಹುದ್ದೆಯನ್ನು ನಿರ್ಮಾಣ ಮಾಡಬೇಕು ಇದೇ ಆಗಿದೆ. ಎರಡು ಹೊತ್ತು ತಾವು ಇಲ್ಲೇ ಇರುತ್ತೀರಲ್ಲಾ ನಿಮ್ಮ ಈ ಮಂತ್ರಿ ಮಂಡಲವನ್ನೇ ತೆಗೆದುಕೊಳ್ಳಿ, ಇವತ್ತು ಎಷ್ಟು ಕೆಲಸ ಇದೆ, ಎಷ್ಟು ಮಂತ್ರಿಗಳು ಇರಬೇಕು ವರ್ಕ್‌ಲೋಡ್ ಎಷ್ಟು ಎಂಬುದು ಅಲ್ಲಿಂದಲೇ ಶುರುವಾಗಬೇಕು. ಇವತ್ತು ಅಲ್ಲಿಂದಲೇ ಕೆಟ್ಟುಹೋಗಿದೆ. ನೀವು ನಿಮ್ಮ ಮನಸ್ಸೇಚ್ಛೆಯಾಗಿ, ನಿಮ್ಮ ಗುಂಪನ್ನು ಬೆಳೆಸಿಕೊಳ್ಳುವುದಕ್ಕೆ, ನಿಮ್ಮ ಬೆಂಬಲಿಗರು ನಿಮಗೆ ಬೆಂಬಲವನ್ನು ಕೊಡುವುದಕ್ಕೆ ನಿಮಗೆ 29 ಜನ ಮಂತ್ರಿಗಳು ಬೇಕು ಎಂದು ಹೇಳಿ 29 ಜನರನ್ನು ಇಟ್ಟುಕೊಂಡಿದ್ದೀರೇ ಹೊರತು ಈ ದೇಶದ ರಾಜ್ಯಭಾರ ಕ್ರಮವನ್ನು ಪಾರ್ಲಿಮೆಂಟರಿ ತತ್ವಕ್ಕನುಸಾರವಾಗಿ ನಡೆಸಬೇಕಾದರೆ ಎಷ್ಟು ಜನ ಮಂತ್ರಿಗಳುಬೇಕು ಎನ್ನುವುದಕ್ಕೆ ಶಾಸ್ತ್ರೀಯವಾದ, ಕರಾರುವಾಕ್ಕಾದ ಒಂದು ನೀತಿ ಈ ದೇಶದಲ್ಲಿ ಇಲ್ಲ. ಮನಸ್ಸಿಗೆ ಬಂದ ಹಾಗೆ ಒಬ್ಬೊಬ್ಬರು ಬಂದಾಗ ಒಂದೊಂದು ರೀತಿ, ನಿಜಲಿಂಗಪ್ಪನವರು ಇದ್ದಾಗ ಒಂದು ರೀತಿ. ಅಥವಾ ಇನ್ನೆಲ್ಲೋ ಅವರು ಹಾಗೆ ಮಾಡಿದರು ನಾವು ಹೀಗೆ ಮಾಡೋಣ ಅವರು 25 ಜನ ಇದ್ದಾರೆ ನಾವು 45 ಜನ ಏಕೆ ಇರಬಾರದು ಎಂಬುದೇ ಆಗಿದೆ. ಇವತ್ತು ಬೇರೆಯವರಿಗೆ ಹೇಳುತ್ತೀರಲ್ಲಾ, ನಿಮ್ಮ ಪಕ್ಕದ ರಾಜ್ಯವಾದ ಮದರಾಸನ್ನು ನೀವು ಏಕೆ ಉದಾಹರಣೆಯಾಗಿ ತೆಗೆದುಕೊಳ್ಳಬಾರದು ? ಮದರಾಸಿನಲ್ಲಿ ಎಷ್ಟು ಜನ ಮಂತ್ರಿಗಳು ಇದ್ದಾರೆ ನೋಡಿ. ನಿಮಗೆ ಯಾವುದು ಬೇಕಿಲ್ಲವೋ ಅದನ್ನು ಬಿಟ್ಟು ಕೊಡುತ್ತೀರಿ. ಅಷ್ಟು ದೊಡ್ಡ ರಾಜ್ಯದಲ್ಲಿ ಒಂಬತ್ತು ಜನ ಸರ್ಕಾರ ನಡೆಸುವುದಕ್ಕೆ ಸಾಕು ಅಂತ ಅನ್ನುವಾಗ ನೀವೇಕೆ ಇಷ್ಟು ಜನ ಇರಬೇಕು ? ನಾನು ಹೇಳುವುದು ಇಷ್ಟೆ, ಕೆಲಸ ಎಷ್ಟಿದೆ, ಕಾರ್ಯಭಾರ ಎಷ್ಟಿದೆ ಎಷ್ಟು ಜನ ಇರಬೇಕು, ಒಂಬತ್ತು ಜನರೇ 20 ಜನರೇ ಎಂಬುದನ್ನು ನಿರ್ಧರಿಸಬೇಕು. ಇನ್ನು ಇಲಾಖೆಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ನೀವು 29 ಜನ ಮಾಡುವ ಕೆಲಸವನ್ನು ನಾವು ಹತ್ತು ಜನರೇ ಮಾಡುತ್ತೇವೆ ಎಂದು ಹೇಳಿದರೆ ಅವರು ಒಪ್ಪಿಕೊಳ್ಳುತ್ತಾರೆ' ಅವರೂ ಕೂಡ ಕಡಿಮೆ ಸಂಖ್ಯೆಯ ಜನರೇ ಕೆಲಸಮಾಡಲು ಸಿದ್ಧವಾಗಿರುತ್ತಾರೆ. ಈಗ ನಿಮ್ಮ ಕೈಕೆಳಗೇ ಇರತಕ್ಕ ಸೆಕ್ರೆಟೇರಿಯಟ್ ವಿಚಾರವನ್ನೇ ತೆಗೆದುಕೊಂಡು ಮಾತನಾಡುವುದಾದರೆ ಈವೊತ್ತು ಸೆಕ್ರೆಟೇರಿಯಟ್ ಕೂಡ ಬಹಳವಾಗಿ ಬದಲಾವಣೆಯಾಗಬೇಕಾಗಿದೆ. ಒಂದು ಆಖೈರು ತೀರ್ಮಾನವನ್ನು ತೆಗೆದುಕೊಳ್ಳಬೇಕಾದರೆ ಎಷ್ಟು ಜನರು ನೋಡಬೇಕು, ಎಷ್ಟು ರೆಡಟೇಪಿಸಂ ಇದೆ ಎಂಬುದನ್ನು ನಾವು ಗಮನಿಸಿದ್ದೇ ಆದರೆ ಯಾವುದೇ ಪತ್ರ ಹೋದರೂ ಕೂಡ ಅದು ನಾಲ್ಕು ಜನರ ಹತ್ತಿರ ಹೋಗಬೇಕಾಗಿದೆ. ಮೊದಲು ಒಬ್ಬ ಕೇಸ್‌ವರ್ಕರ್, ಆಮೇಲೆ ಸೆಕ್ಷನ್ ಆಫೀಸರು, ಆಮೇಲೆ ಅಂಡರ್ ಸೆಕ್ರೆಟೆರಿ, ಆಮೇಲೆ ಡೆಪ್ಯೂಟಿ ಸೆಕ್ರೆಟೆರಿ, ಇಷ್ಟೆಲ್ಲ ಜನರಾದ ಮೇಲೆ ಸೆಕ್ರೆಟೆರಿಗಳು ಇದ್ದಾರೆ. ಇನ್ನು ಕೆಲವು ಇಲಾಖೆಗಳಲ್ಲಿ ಜಾಯಿಂಟ್ ಸೆಕ್ರೆಟೆರಿಗಳು ಇದ್ದಾರೆ. ಇವತ್ತು ನಿಜವಾಗಿಯೂ ಒಂದು ಕಾಗದ ವಿಲೇವಾರಿಯಾಗಬೇಕಾದರೆ ಎರಡು ಹಂತ ಸಾಕಾಗಿದೆ. ಒಂದು ಕೇಸ್‌ವರ್ಕರ್, ಅವರಾದಮೇಲೆ ಸೆಕ್ಷನ್ ಆಫೀಸರು. ಸೆಕ್ಷನ್ ಆಫೀಸರಿಂದ ಸೆಕ್ರೆಟೆರಿಯವರಿಗೆ ಹೋಗಬಹುದು. ಈ ರೀತಿ ಮಾಡುವುದರಿಂದ ಸೆಕ್ರೆಟೇರಿಯಟ್‌ನಲ್ಲಿ ಸುಮಾರು ಈಗಿರತಕ್ಕ ಅರ್ಧದಷ್ಟು ಹೊರೆಯನ್ನು ಕಡಿಮೆ ಮಾಡಬಹುದಾಗಿದೆ. ಇವತ್ತು ತಾವು ಸೆಕ್ರೆಟೆರಿಯಟ್‌ನಲ್ಲಿ ಏಕೆ ಇಷ್ಟು ಹೆಚ್ಚು ಅಧಿಕಾರವನ್ನು ಇಟ್ಟುಕೊಂಡಿದ್ದೀರಿ ಎಂದರೆ ಎಲ್ಲ ವ್ಯವಹಾರಗಳೂ ಕೂಡ ಇಲ್ಲಿಗೇ ಬರಬೇಕು, ಸಾಲ ಮಂಜೂರು ಮಾಡಬೇಕಾದರೆ, ಲ್ಯಾಂಡ್ ಅಕ್ವಿಸಿಷನ್ ಆಗಬೇಕಾದರೆ, ಯಾವುದಾದರೂ ಗ್ರ್ಯಾಂಟ್ ಕೊಡಬೇಕಾದರೆ ಎಲ್ಲವೂ ಕೂಡ ಸೆಕ್ರೆಟೇರಿಯಟ್‌ಗೇ ಬರಬೇಕು.

(ಶ್ರೀ ಎಸ್. ಶಿವಪ್ಪ)

ಪ್ರತಿಯೊಂದಕ್ಕೂ ಸೆಕ್ರೆಟೆರಿಯವರು ಒಪ್ಪಬೇಕೆಂದರೂ ಫಾರ್ಮಲ್ ಆಗಿ ಮಂತ್ರಿಗಳಿಗೆ ಹೋಗಿಯೇ ಹೋಗುತ್ತದೆ. ಅದಕ್ಕೇ ಸೆಕ್ರೆಟೆರಿಯವರನ್ನು ಇಟ್ಟುಕೊಂಡಿದ್ದೀರಿ. ಇದೇ ತುಕೋಳ್ ಕಮಿಟಿಯು ವರದಿಯಲ್ಲಿ ಅಧಿಕಾರ ಒಂದೇ ಕಡೆ ಕೇಂದ್ರೀಕೃತವಾಗದಂತೆ—ಅದನ್ನು ವಿಕೇಂದ್ರೀಕರಣ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಪ್ರತಿಯೊಂದು ಇಲಾಖೆಗೂ ಒಬ್ಬೊಬ್ಬ ಮೊಖ್ತೇಸರ ಇದ್ದೇ ಇರುತ್ತಾರೆ. ಈ ದಿವಸ ಸೆಕ್ರೆಟೇರಿಯೆಟ್‌ನಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಶೇಕಡ 40ರಷ್ಟು ಕೆಲಸಕಾರ್ಯಗಳನ್ನು ಇಲಾಖೆಯ ಮೊಖ್ತೇಸರರುಗಳಿಗೆ ವಹಿಸುವ ಸಾಧ್ಯತೆ ಇದೆ. ಹಾಗೆ ಇಂದು ತಾವು ಅಧಿಕಾರವನ್ನು ವಿಕೇಂದ್ರೀಕರಣ ಮಾಡದಿರುವುದರಿಂದ ಕಾಗದ ಪತ್ರಗಳ ವಿಲೇವಾರಿಯಲ್ಲಿ ರೆಡ್‌ಟೇಪಿಸಂಗೆ ಅವಕಾಶವಾಗಿದೆ. ಸೆಕ್ರೆಟೇರಿಯೆಟ್ ಏನಿದ್ದರೂ ಇದೊಂದು ಪಾಲಿಸಿಗಳನ್ನು ನಿರ್ಣಯ ಮಾಡತಕ್ಕ ಕಛೇರಿ. ಇಲ್ಲಿ ನಿರ್ಣಯ ಮಾಡಲ್ಪಟ್ಟ ಪಾಲಿಸಿಗಳನ್ನು ಎಗ್ಸಿಕ್ಯೂಟ್ ಮಾಡತಕ್ಕವರು ಇಲಾಖಾ ಮೊಖ್ತೇಸರರುಗಳು. ಹಾಗಿರುವಾಗ ಇಲ್ಲಿ ಸೆಕ್ರೆಟೇರಿಯೆಟ್‌ನಲ್ಲಿ ಒಂದೊಂದು ಇಲಾಖೆಗೆ ಒಬ್ಬೊಬ್ಬ ಸೆಕ್ರೆಟೆರಿ ಇದ್ದರೆ ಸಾಕು. ಹಾಲಿ ಈಗೇನು ಈ ಸೆಕ್ರೆಟೆರಿಗಳ ಕೈಕೆಳಗಿರತಕ್ಕವರಿಗೆ ಕೊಟ್ಟಿರತಕ್ಕ ಅಧಿಕಾರ ಮತ್ತು ಕೆಲಸಕಾರ್ಯಗಳನ್ನೆಲ್ಲಾ ಇಲಾಖೆಯ ಮೊಖ್ತೇಸರರಿಗೆ ವಹಿಸಿದರೆ ಕೆಲಸಗಳು ಸುಗಮವಾಗಿ ನಡೆಯುತ್ತವೆ: ಕೆಲಸಗಳು ಬೇಗನೆಯೂ ಆಗುತ್ತವೆ; ಸರ್ಕಾರಕ್ಕೆ ಖರ್ಚೂ ಸಹಾ ಕಡಿಮೆಯಾಗುತ್ತದೆ. ಅಲ್ಲಿಗೆ ಅಧಿಕಾರ ವಿಕೇಂದ್ರೀಕರಣವೂ ಆದಂತಾಗುವುದು. ಹಾಗೆ ಇಲ್ಲಿಯವರೆಗೂ ಮಾಡದೆ ಇರುವುದರಿಂದ ಇಲ್ಲಿ ಸೆಕ್ರೆಟೇರಿಯೆಟ್‌ನಲ್ಲಿ ಒಬ್ಬ ಸೆಕ್ರೆಟೆರಿ ಕೆಲವು ಬಾಬುಗಳಲ್ಲಿ ಸೆಕ್ರೆಟೆರಿಯ ಜೊತೆಗೆ ಒಬ್ಬ ಜಾಯಿಂಟ್ ಸೆಕ್ರೆಟೆರಿ, ಅವರ ಕೈಕೆಳಗೆ ಒಬ್ಬ ಡೆಪ್ಯುಟಿ ಸೆಕ್ರೆಟೆರಿ ಆತನ ಕೈಕೆಳಗೆ ಒಬ್ಬ ಅಂಡರ್ ಸೆಕ್ರೆಟೆರಿ ಮತ್ತು ಆತನ ಕೆಳಗೆ ಒಬ್ಬ ಸೆಕ್ಷನ್ ಆಫೀಸರ್ ಅಲ್ಲಿಂದ ಮುಂದಕ್ಕೆ ಕೇಸ್ ವರ್ಕರ್—ಹೀಗೆ ಈ ದಿವಸ ಕಾಗದ ಪತ್ರಗಳು ಆರು—ಏಳು ಕೈಗಳನ್ನು ದಾಟಿ ಓಡಾಡಬೇಕಾಗಿದೆ. ಇದರಿಂದ ಅಂದರೆ ಇಂಥಾ ಒಂದು ಪ್ರೊಸೀಜರನ್ನು ಅನುಸರಿಸುತ್ತಿರುವುದರಿಂದ ಇಲ್ಲಿ ರೆಡ್ಟೇಪಿಸಂ ಜಾಸ್ತಿಯಾಗಿದೆ. ಇದನ್ನು ಇನ್ನಾದರೂ ತಪ್ಪಿಸಿ ಸೆಕ್ರೆಟೆರಿ ಈತನ ಕೈಕೆಳಗೆ ಒಬ್ಬ ಸೆಕ್ಷನ್ ಆಫೀಸರ್ ಮತ್ತು ಒಬ್ಬ ಕೇಸ್ ವರ್ಕರ್ ಹೀಗೆ ಆರು ಕೈಗಳಿದ್ದುದನ್ನು ಮೂರು ಕೈಗಳಿಗೆ ಇಳಿಸಿದರೆ ವ್ಯವಹಾರಗಳು ಸುಗಮವಾಗಿ ನಡೆಯಬಹುದು. ಇಲ್ಲದಿದ್ದರೆ ಎಂದಿನಂತೆ ಒಂದು ಕೈಯಿಂದ ಕಾಗದ ಪತ್ರಗಳು ಇನ್ನೊಂದು ಕೈಗೆ ಹೋಗಬೇಕಾದರೆ ಎಂಟು—ಹತ್ತು ದಿನಗಳು ಹಿಡಿಯುತ್ತವೆ. ಕೆಲವು ವೇಳೆ ತಿಂಗಳಗಟ್ಟಲೆಯೂ ಹಿಡಿಯುತ್ತದೆ. ಈ ದಿವಸ ಸೆಕ್ರೆಟೇರಿಯೆಟ್ ಆಫೀಸುಗಳಲ್ಲಿ ಇಷ್ಟೊಂದು ನ್ಯೂನತೆಗಳಿರುವುದರಿಂದ ಇಲ್ಲಿ ಬಹಳ ಮಾರ್ಪಾಡಾಗಬೇಕಾಗಿದೆ. ಅಂದರೆ ಇನ್ನು ಮುಂದೆ ಇಲ್ಲಿ ಒಬ್ಬ ಕೇಸ್ ವರ್ಕರ್ ಆತನ ಮೇಲೆ ಒಬ್ಬ ಸೆಕ್ಷನ್ ಆಫೀಸರ್ ಮತ್ತು ಆತನ ಮೇಲೆ ಒಬ್ಬ ಸೆಕ್ರೆಟರಿ ಇಲ್ಲಿ ಇಷ್ಟಿದ್ದರೆ ಸಾಕು. ಇನ್ನುಳಿದ ಶಿಬ್ಬಂದಿಯನ್ನು ಇಲ್ಲಿಂದ ತೆಗೆದು ಹಾಕಲೇಬೇಕು. ನಾನು ಆಗಲೇ ಹೇಳಿದಂತೆ ಇಲ್ಲಿ ಆರು ಕೈಗಳು ಮಾಡುತ್ತಿರುವ ಕೆಲಸವನ್ನು ಮೂರು ಕೈಗಳಿಗೆ ಇಳಿಸಬೇಕಾದ್ದು ಅತ್ಯಗತ್ಯ. ಇಲ್ಲಿ ರದ್ದುಮಾಡತಕ್ಕ ಹುದ್ದೆಗಳ ಕೆಲಸವನ್ನು ಇಲಾಖಾ ಮೊಖ್ತೇಸರರಿಗೆ ವಹಿಸಬೇಕೆಂದು ಹೇಳುತ್ತೇನೆ. ಇಲ್ಲಿ ಅಧಿಕಾರಿಗಳು ಜಾಸ್ತಿ ಆದಷ್ಟೂ ಇಲ್ಲಿ ರೆಡ್ಟೇಪಿಸಂಗೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ.

ಇನ್ನು ನಮ್ಮ ರಾಜ್ಯಕ್ಕೆ ಭಾರಿ ಭಾರಿ ಸಂಬಳಗಳನ್ನು ಪಡೆಯತಕ್ಕ ಆ ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳ ಸಂಖ್ಯೆ ಕೂಡ ಜಾಸ್ತಿಯಾಯಿತು. ಇಲ್ಲಿಗೆ ಅಷ್ಟು ಹುದ್ದೆಗಳು ಅನಗತ್ಯ. ನಮ್ಮ ರಾಜ್ಯಕ್ಕೆ ಸುಮಾರು ಈ ದಿವಸ ಇರತಕ್ಕ ನಮ್ಮ ಕೋಟಾ 169—170 ಭಾರಿ ಸಂಬಳದ ಅಧಿಕಾರಿಗಳಿದ್ದಾರೆ. ಇಷ್ಟು ಜನ ಏತಕ್ಕೆ ಬೇಕು? ನಮ್ಮಲ್ಲಿ 19 ಜಿಲ್ಲೆಗಳಿವೆ. 19 ಜಿಲ್ಲೆಗೂ 19 ಜನ ಡೆಪ್ಯುಟಿ ಕಮಿಷನರುಗಳಿದ್ದಾರೆ. ಆ 19 ಜನರ ಜೊತೆಗೆ ಇನ್ನೂ 19 ಜನ ಐ. ಎ. ಎಸ್. ಅಧಿಕಾರಿಗಳನ್ನು ತೆಗೆದುಕೊಂಡರೆ ಅಲ್ಲಿಗೆ ಮೂವತ್ತೆಂಟಾಯಿತು. ಆ ಮೂವತ್ತೆಂಟು ಜನರ ಜೊತೆಗೆ ಇನ್ನೂ 12 ಜನ ಐ. ಎ. ಎಸ್. ಬೇಕಾದರೆ ಇರಲಿ. ಅಂದರೆ ನಮಗೆ ಅಲ್ಲಿಗೆ 50 ಜನ ಐ. ಎ. ಎಸ್. ಅಧಿಕಾರಿಗಳು ಇದ್ದರೆ ಸಾಕೆಂದಾಯಿತು. ಹೀಗಿರುವಾಗ ಇಲ್ಲಿ ನಮಗೆ ಅಗತ್ಯವಾಗಿ ಬೇಕಾಗಿರತಕ್ಕ ಸಂಖ್ಯೆ 50 ಇದ್ದರೆ ನಮ್ಮ ಕೋಟಾ 170 ಇದೆ. ಅಂದರೆ ನೂರು ಜನ ಐ. ಎ. ಎಸ್. ಅಧಿಕಾರಿಗಳು ಇಲ್ಲಿ ಅನವಶ್ಯಕವಾಗಿದ್ದಾರೆಂಬುದರಲ್ಲಿ ಸಂಶಯವೇ ಇಲ್ಲ. ಇಷ್ಟು ಜನ ಏತಕ್ಕೆ? ಭಾರಿ ಭಾರಿ ಸಂಬಳದ ಜನರನ್ನು ನಾವು ಅನವಶ್ಯಕವಾಗಿ ಇಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಅವರನ್ನು ಮೇಯಿಸಬೇಕಾಗಿದೆ. ನಮ್ಮ ಆಡಳಿತ ಚಿತ್ರವನ್ನು ನೋಡಿದರೆ ಅದೇನೋ ಹೇಳುತ್ತಾರಲ್ಲಾ ಕೈ ಕಾಲು ಸಣ್ಣ ಹೊಟ್ಟೆ ದುಬ್ಬಣ್ಣ ಅನ್ನುವಂತೆ ಇರುತ್ತದೆ. ಆದರೆ ಈ ಗ್ರೇಡಿನಲ್ಲಿ ನಮ್ಮ ರಾಜ್ಯದವರು ಇರುವವರು ಬಹಳ ಕಡಮೆ. ಇದರಲ್ಲಿರತಕ್ಕವರು ಬೇರೆ ರಾಜ್ಯಗಳ

ಜನರೇ ಜಾಸ್ತಿಯಾಗಿದ್ದಾರೆ. ಅಂದರೆ ಅವರು ಅಷ್ಟು ಬುದ್ಧಿವಂತರು. ಆದ್ದರಿಂದ ನಮ್ಮ ರಾಜ್ಯದಲ್ಲಿ ಈ ಐ. ಎ. ಎಸ್. ಅಧಿಕಾರಿಗ ಹುದ್ದೆ ಏನೇ ಆದರೂ ಅವು 60–70ಕ್ಕೆ ಜಾಸ್ತಿ ಇರಬಾರದೆಂದು ಹೇಳುತ್ತೇನೆ.

> "One feature that distinctly marks out the pay structure from the minimum wage is that the latter is fixed on standardised norms at all stages of employment of the wage earner while the remuneration prescribed for Government staff is fixed according to the graded incremental time scale and is intended to provide an arrangement for the growing needs of the employee as he advances in service and with statutory retirement benefit like pension Fund, etc."

I do not know how they got it and from where they got it. I must submit in all humility that this shows utter ignorance of industry and the wage structure. It does not show respect for the wage scales which are constructed in the industry. I did not expect them to do in this manner.

Reference is also made to the minimum wages under the Minimum Wages Act. I am really surprised at it. How can this be thought of? It is for sweated labour and it is a wage which just subsistence wage or poverty wage. How can this be brought in as a norm when actualyly it is the need-based wage and the fair wage that has to be thought of? Does it not show a pre-Independence outlook? Such arguments have been advance before. They have fixed minimum wages for the workers of rice mills, tanneries, etc. To consider the applicability of minimum wages to Government employees betray a pre-Independence outlook. After all, traditions die very hard and the same pre-Independencet raditions are being unfortunately continued. The comparison of minimum wage and agricultural labour is really absurd. As far as agricultural labour is concerned, many members will say that the agricultural labourer and the rural folk are getting much worse. They do not have anything and why do the Government servants want so much. That will be the line of their argument. I will come to it later. One particular fallacy of this report is that they have not take into account certain criteria which have been taken into account by the Second Central Pay Commission. They say that they have taken it into account, but in fact they have not taken it into account. On pages 64–65 para 4.13 where they describe the economic condition they have stated about the *per capita* income. This *per capita* income is taken as 20 in 1960–61 and on the basis of that they have arrived at 125. The Second

(SRI M. S. KRISHNAN)

Pay Commission have taken it at 20 and for 5 persons in a family they have arrived at the figure of 125. If you actually see their report you will find that 392 was the *per capita* income in 1964-65 for a family of 5 persons. So either you have to go by the Second Pay Commission's recommendations and the norms agreed to by them or you have to accept the principle of need based wage which is taken as 3 consumption unit. But here they have made a jumble of both. They have not taken the norm agreed to by the Second Pay Commission. If you take 50, you will get 164 and even if it is taken as for 4 members it will come to 136 in 1965 and from 1964-65 up to 1968 what is the increase. There is an increase of 50 points. If it is taken on the basis of 50 points, the minimum wage will have to be 175 on the basis of this figure alone. So I do not know how they arrived at the figure of 125. It is not an arithmetical mistake, but it is a gross error.

If you consider another aspect, on the basis mentioned by the Government employees given on page 65 the *per capita* in 1960-61 is stated as 125. On the basis of *per capita* income of 20 in 1960-61 it works out to 125 and if it is calculated up to 1968 it will come to 200.

MR. DEPUTY SPEAKER.—What is expected of the members is broad suggestions and outlines.

SRI M. S. KRISHNAN.—I am trying to focus attention on the basic point and I am trying to show that it is an injudicious decision. There are misleading statements here. For example, there is a reference to M. S. Gopal's Survey, but I must point out that this survey was made long back and thereafter we have had the Pay Commission's recommendations. In Gopal's survey the basis adopted was in the ratio of 1 : 3, but the Second Pay Commission has adopted a ratio of 1 : 5. So, why should we take M. S. Gopal's ratio ? This is a misleading statement. They should have taken the Pay Commission's ratio of 1 : 5, but instead of that they have taken the ratio of 1 : 3. That is how they have tried to bring down the whole thing and bring down the minimum wage that ought to be given.

Then there is a comparison to industries also. The *per capita* annual average earnings of employees has been given at page 67. What are the industries with which Government employees have been compared? You will find that that the comparison made is with minor industries like Food (except beverages, Textiles, Wood and Cork (except furniture) Leather and Leather Products. The whole list of these industries are small industries giving employment to a very small number. Can you compare them with Government employees? Is it correct to compare them with these industries? You have got to compare Government servants with comparable industries. It is not correct to make comparisons with unlike industries and come to wrong conclusions.

Mr. DEPUTY SPEAKER.—So, according to the member what should be the scale of pay to be given to N. G. Os. ?

Sri M. S. KRISHNAN.—My submission is only this. What has been worked here is not corect and if it is worked out on the actual basis adopted by the Second Pay Commission it would come to Rs. 205. Even if it is taken as Rs. 155, there also they have cut it by Rs. 20 and given only Rs. 135. I do not know why should have made a cut of 20 even out of 155 ?

I will cite only one particular figure to show how this 155 is worked out on the basis of the number of calories consumption of Government employees. At page 79 you will find that for cereals one consumption unit is taken at 425 calories by the Tukol Commission whereas this is not in accordance with even what the C.F.T.R.I. has given which is 454. So, it is not understood on what basis they have arrived at the figure of 425. I think the Tukol Commission have erred in taking this figure as 425 and so their conclusion of Rs. 155 also is not correct because they have worked it out on a wrong basis as even the figure worked out by the C. F. T. R. I. itself is much higher than the basis adopted by the Commission. I will be satisfied if these people in cities are given the same as is given to the rural side people. The rural people are getting much more than the city people. I will be satisfied if the Government accept the wage worked out on the basis of the food consumption worked out by the C. F. T. R. I. on pages 76-77 of the Report. The figures of 4 places have been given, namely, Anekal 2832, Mandya 2701, Somwarpet 2222 and Dharwar 2859. It will be seen from this that 2850 calories of food are being taken by the rural folk according to the statistics given here.

Mr. DEPUTY SPEAKER.—The rural people do physical work whereas the city people do only sedantary work and so they consume much less food because they would not be able to digest.

5-00 P. M.

Sri M. S. KRISHNAN.—My submission is, 2800 calories is what has been fixed by Dr. Aykroyd, but that has been reduced further. I will be satisfied if you give it on the basis on which it is given to the rural folk. What I am saying is that 176 has been worked out. On the basis of this, a really wrong calculation has been made for food and clothing. For Dhoties, the average is 1.52. Who can get it at that rate ? For coating 1.72, for shirting 1.66, for cloth for Pyjama 1.56 and for sarees 1.84. for a saree it is 6 yards and it will come to minimum of Rs. 11. On the basis of the calculations that have been made here, I would say that it is not correctly made, it is misleading and there is reduction which is not warranted and not at all correct. Even calculating what is spent on Medical benefits and education. it will be far less. Actually what is spent on medical and education is 6.07 and 33.47 respectively and the *per capita* expenditure will be about Rs. 65

(SRI M. S. KRISHNAN)

total. Even that has not been assessed properly. Then they go back to Madras Pay Commission, but they did not worry about their figures. Somehow they get at Rs. 60 and it is his predetermined idea. Sir, my submission is that it is a total mess, whether deliberately or not deliberately done. Why take Madras alone? Why not take Maharashtra? If this is taken, the minimum wage will be much more. Their own bureau of statistics is not believed by the Government. From the statements here, for example, at page 77, para 4.43 they say that the interview method is not correct. But, the interview has been held correct by the Supreme Court in the case of Ahmedabad Mill Owners Association *Vs.* Textile Labour Association, Ahmedabad—A. I. R. 1966—S. C. 497 at page 499. So, there is total confusion, and that is why I say that this figure arrived at is totally wrong apart from the inadequacy of it. They should have arrived at the figures purely on scientific basis, but they have arrived at it on very wrong considerations and methods.

Similarly, with regard to the incremental rates. For Class IV they have recommended a rate of Re. 1 as increment. The N. G. Os. Association has been demanding from years that it should be made Rs. 2. I request the Government to consider this aspect. The ratio of middle-class to Class IV is a very important consideration. What should be the middle-class minimum base? It is also wrongly taken here. The ratio that should have been taken here is 1:1.8 according to the decision. Here, unfortunately, it has not been taken. If that ratio had been taken, I would have been very happy.

Finally, I would like to say a few words about the Labour Department. Sir, the Labour Inspectors have been classified along with First Grade Clerks. This, I think, is very unjustified. The Labour Inspector has to do a job of enforcement of so many Acts. Industrial law is becoming more and more complex. Their equalisation with First Grade Clerks will lead to corruption and inefficiency. Therefore, there should be a separate grade for Labour Inspectors and they must also be given motor-vehicle allowance.

There is a long standing request of the Superintending Engineers and Chief Engineers of P. W. D. that they should have the services of a Stenographer. I think, this can be done without extra financial burden. The Chief Engineers and Superintending Engineers should be provided with Stenos.

As far as resources are concerned, I would submit that a number of suggestions have been made in this Report. I agree with some of the suggestions which have been made. But the increase in taxes upon the people, if any, has got to be stoutly resisted. Without increasing the taxes, if you can plug the loopholes of getting taxes, it is all right. If expenditure on buildings in P. W. D. is properly made, much could be

saved. Of course, if you reduce the Ministry, it won't come to crores. But there are some other suggestions, which have been made, without taxation proposals, which may be implemented.

I would conclude by saying that I am thoroughly disappointed about the Tukol Commission Report. Even then, I would say : 'please implement what at least has been given'. If necessary, you can cut-down the emoluments of the higher officers. Please do not retrench any body. I am opposed to retrenchment, because it will create further problems. Please form a Joint Committee of the Government and the N. G. Os. Association, to discuss the various problems and come to a settlement.

With these words, I thank the Chair.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಸಭಾಪತಿಗಳೇ, ನಾವೀದಿವಸ ಈ ಸಭೆಯಲ್ಲಿ ಪೇಕಮಿಷನ್ ವರದಿಯನ್ನು ಚರ್ಚೆಮಾಡುತ್ತಿದ್ದೇವೆ. ಈ ವಿಚಾರದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅನೇಕ ವೇಳೆ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ವಿರೋಧ ಮಾಡುವುದಕ್ಕಾಗೇ ಮಾತನಾಡುತ್ತಾರೆ. ಆದರೆ ಶ್ರೀಮಾನ್ ಸಿದ್ಧವೀರಪ್ಪನವರು ಮಾತ್ರ ಈ ವಿಚಾರದಲ್ಲಿ ಎಲ್ಲ ವಿಷಯಗಳನ್ನೂ ಚೆನ್ನಾಗಿ ಪರ್ಯಾಲೋಚನೆ ಮಾಡಿದ ನಂತರವೇ ಈ ವಿಷಯದಲ್ಲಿ ಮುಂದುವರಿಯಬೇಕು ಎಂಬ ಒಂದು ಬಹಳ ಒಳ್ಳೆಯ ಸಲಹೆಯನ್ನು ಸಭೆಯ ಮುಂದಿಟ್ಟಿದ್ದಾರೆ. ಆದರೆ ವಿರೋಧ ಪಕ್ಷದ ನಾಯಕರು ಕೆಲವು ವಿಷಯಗಳನ್ನು ಪ್ರಸ್ತಾಪಮಾಡುತ್ತಾ ನೌಕರರುಗಳಿಗೆ ಅಂದರೆ ಕೆಳದರ್ಜೆಯವರಿಗೆ ಸಂಬಳಗಳನ್ನು ಜಾಸ್ತಿ ಮಾಡಬೇಕೆಂದೂ ಆದರೆ ಟ್ಯಾಕ್ಸೇಷನ್ ವಿಚಾರ ಮಾತ್ರ ಪ್ರಸ್ತಾಪಮಾಡುವುದು ಬೇಡ ಎಂದು ಹೇಳಿದ್ದಾರೆ. ಹಾಗೇ ರೈತರ ವಿಚಾರವನ್ನೂ ಪ್ರಸ್ತಾಪಮಾಡುತ್ತಾ ಭೂಕಂದಾಯವನ್ನು ವಜಾ ಮಾಡಿ ಇಲ್ಲದಿದ್ದರೆ ರೈತನು ಉಳಿಯುವುದಿಲ್ಲ ಎಂದು ಹೇಳಿದರು. ಇದು ಅರ್ಥವಿಲ್ಲದ ಮಾತು ಸರ್ಕಾರದ ಅಧಿಕಾರಿಗಳು ರೈತರಿಗೆ ಸಹಕಾರವನ್ನು ನೀಡದಿದ್ದರೂ ಇಲ್ಲಿ ಅಧಿಕಾರಿಗಳಿಗೆ ಹೆಚ್ಚು ಸಂಬಳವನ್ನು ನೀಡಬೇಕೆಂದು ವಾದ ಮಾಡುವುದು ರೈತರಿಗೆ ಹಿಡಿಸದು.

ಈ ಆಯೋಗ ರಚನೆಯ ವಿಚಾರದಲ್ಲಿ ಸ್ವಲ್ಪ ಯೋಚಿಸಬೇಕಾಗಿತ್ತು. ಸರ್ಕಾರದವರು ಈ ಸಭೆ ಮುಂದೆ ಆಯೋಗ ರಚಿಸುವ ವಿಷಯದಲ್ಲಿ ಪ್ರಸ್ತಾಪಮಾಡಿ ಇಲ್ಲಿ ಹೇಳತಕ್ಕ ಭಾಷಣಗಳನ್ನು ಕ್ರೋಢೀಕರಿಸಿ ಆಗ ಆಯೋಗವನ್ನು ರಚನೆ ಮಾಡಿದ್ದರೆ, ಇಲ್ಲಿರತಕ್ಕವರ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ತೀರ್ಮಾನ ಕೊಡುವುದಕ್ಕೆ ಅನುಕೂಲವಾಗುತ್ತಿತ್ತು ಎಂಬುದಾಗಿ ನನಗನ್ನಿಸುತ್ತದೆ. ಇನ್ನೊಂದು ಕಡೆ ಸುಮಾರು 14 ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಹೆಚ್ಚಿಗೆ ಕೊಡಬೇಕಾಗುತ್ತದೆಂದು ಹೇಳುವ ಸಂದರ್ಭದಲ್ಲಿ ಆ ರೀತಿ ಕೊಡತಕ್ಕ ಜನರ ಪ್ರತಿನಿಧಿಯಿಂದ ಮತ್ತು ಎನ್. ಜಿ. ಓ. ಪ್ರತಿನಿಧಿಯಿಂದ ಕೂಡಿರುವ ಆಯೋಗ ಅಗತ್ಯವಿತ್ತು. ಎನ್. ಜಿ. ಓ. ಕೂಡ ಅದರ ಬಗ್ಗೆ ಯೋಚನೆ ಮಾಡುವುದಕ್ಕೆ ಆಯೋಗದಲ್ಲಿ ಒಂದು ರೆಪ್ರೆಸೆಂಟೇಷನ್ ಇದ್ದಿದ್ದರೆ ಅವರ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತಿತ್ತು ಎಂದು ನನಗನಿಸುತ್ತದೆ. ಈಗ ಅವರಿಗೆ ತಿಳಿದ ಮಟ್ಟಿಗೆ ಸರಿಯಾದ ವರದಿಯನ್ನು ಕೊಟ್ಟಿದ್ದಾರೆ. ಆದರೆ ಈಗ ಮಾತನಾಡಿರುವ ವಿಷಯದಲ್ಲಿ ಅದನ್ನು ಜಾರಿಗೆ ಕೊಡತಕ್ಕ ರೀತಿಯಲ್ಲಿ ಮಾತನಾಡುವ ಹಾಗೆ ಇಲ್ಲ. ಈಗ ಆಗುವ ಹೆಚ್ಚಿನ ಖರ್ಚನ್ನು ಈ ದಿನ ಪುನಃ ಮೀಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ರೈತರ ಪರಿಸ್ಥಿತಿ ಏನಾಗಿದೆ ಅಂದರೆ ಒಂದು ಕ್ವಿಂಟಾಲ್ ಬತ್ತಕ್ಕೆ 25 ರೂಪಾಯಿಗಳಿಂದ 30 ರೂಪಾಯಿಗಳವರೆಗೆ ರೈತ ಇನ್‌ಡೈರೆಕ್ಟಾಗಿ ತೆರಿಗೆ ಕೊಡುತ್ತಿದ್ದಾನೆ. ಬೇರೆ ರೂಪದಲ್ಲಿ ಅವರು ಅನೇಕ ತೆರಿಗೆ ಕೊಡುತ್ತಿದ್ದರೂ ಕೂಡ ಹೀಗೆ ಪುನಃ ಇವರು ಸಂಬಳವನ್ನು ಹೆಚ್ಚಿಗೆ ಕೊಡಬೇಕೆಂದು ಹೇಳುವುದು ಅಷ್ಟೊಂದು ಸರಿಯಾದ ಮಾರ್ಗವಲ್ಲವೆಂದು ನಾನು ಹೇಳುತ್ತೇನೆ. ಎನ್. ಜಿ. ಓ. ವಿಷಯದಲ್ಲಿ ಹೇಳುವುದಾದರೆ, ಕನಿಷ್ಟ ಸಂಬಳ 150 ರೂಪಾಯಿಗಳೂ, ಗರಿಷ್ಠ ಸಂಬಳ ಸಾವಿರಕ್ಕೆ ಹೆಚ್ಚಾಗಿರುವುದು ಇವತ್ತಿನ ಕಾಲದಲ್ಲಿ ಸರಿಯಾದ ನೀತಿಯಲ್ಲ. ಅದಕ್ಕಿತ ಕಡಿಮೆ ಮಾಡುವುದಕ್ಕೂ ಆಗುವುದಿಲ್ಲ. ಈ ವಿಚಾರವನ್ನು ನಾನು ಸಭಾಧ್ಯಕ್ಷರ ಮೂಲಕ ಹೇಳುತ್ತೇನೆ. ಈವೊತ್ತಿನ ಪರಿಸ್ಥಿತಿಯಲ್ಲಿ ನಾವು ಸಂಪೂರ್ಣವಾಗಿ ಇದನ್ನು ಪುನರ್ವಿಮರ್ಶೆಮಾಡುವುದು ಬಹಳ ಅಗತ್ಯವಿದೆ. ಈವೊತ್ತು ತಾವು ಭೂಸುಧಾರಣೆ ವಿಷಯದಲ್ಲಿ ಒಬ್ಬ ರೈತನಿಗೆ ಬೇಸಿಕ್

(ಶ್ರೀ ಕೆ. ಎನ್. ವೀರಪ್ಪಗೌಡ)

ಹೋಲ್ಡಿಂಗ್, ಫ್ಯಾಮಿಲಿ ಹೋಲ್ಡಿಂಗ್, ಸಫಿಸಿಯೆಂಟ್ ಹೋಲ್ಡಿಂಗ್ ಈ ರೀತಿ 400, 800, 1,200 ರೂಪಾಯಿಗಳೆಂದು ನಿಗದಿಮಾಡಿದ್ದೀರಿ. ವರ್ಷಕ್ಕೆ ಆ ಮಟ್ಟದಲ್ಲಿ ಭೂಸುಧಾರಣೆ ಜಾರಿಗೆ ಬರಬೇಕೆಂದು ಹೇಳಿದ್ದೀರಿ. ಆ ಕಡೆ ಅಂತಹ ಪರಿಸ್ಥಿತಿ ಇರುವಾಗ ಇವತ್ತು ತಿಂಗಳಿಗೆ 150 ರೂಪಾಯಿಗಳಿಗಿಂತ ಹೆಚ್ಚಿಗೆ ಬರುವವರಿಗೆ ಇನ್ನೂ ಹೆಚ್ಚಿಗೆ ಮಾಡಬೇಕು, ಹೆಚ್ಚಿನ ಮೂಲ ಸಂಬಳ ಇರಬೇಕೆಂದು ಪುಟ 24-25ರಲ್ಲಿ ಕೊಟ್ಟಿದ್ದೀರಿ. ಅದರಲ್ಲಿ 60 ರೂಪಾಯಿಗಳ ಸಂಬಳ ಇರುವವರಿಗೆ 35 ರೂಪಾಯಿಗಳ ಹೆಚ್ಚಿನ ಮೂಲ ಸಂಬಳ ಕೊಡಬೇಕೆಂದಿದೆ. ಅದೇ ರೀತಿಯಲ್ಲಿ 1,300 ರಿಂದ 1,800 ರೂಪಾಯಿಗಳವರೆಗೆ ಇರುವವರಿಗೂ ಹೆಚ್ಚುಮಾಡಬೇಕಾಗಿ ಬಂದಿದೆ. 150 ರೂಪಾಯಿಗಳೊಳಗೆ ಸಂಬಳ ಬರುವವರ ಬಗ್ಗೆ ಇದನ್ನು ವಿಚಾರ ಮಾಡಬೇಕಾಗಿದೆ. 500ಕ್ಕಿಂತ ಹೆಚ್ಚು ಸಂಬಳ ಇರುವವರ ವಿಷಯ ವಿಮರ್ಶೆಮಾಡುವುದು ಅಷ್ಟೊಂದು ಈಗಿನ ಕಾಲಕ್ಕೆ ಸರಿಯಾಗಿ ಇರುವುದಿಲ್ಲ. ಇನ್ನೂ ಅನೇಕ ವಿಷಯಗಳಲ್ಲಿ ಪ್ರಸ್ತಾಪಮಾಡಿದ್ದಾರೆ. ಏನಾದರೂ ಸಂಬಳ ಕೊಡುವುದನ್ನು ಜಾಸ್ತಿ ಮಾಡಬೇಕಾದರೆ ಮೊದಲು ರಿಟ್ರೆಂಚ್ ಮಾಡಬೇಕು. 7—8 ಲಕ್ಷ ಜನರು ನಿರುದ್ಯೋಗಿಗಳು ಇದ್ದಾರೆಂದು ಮಾನ್ಯ ಶ್ರೀ ಶಿವಪ್ಪನವರು ಹೇಳಿದ್ದಾರೆ. ಈ ದೇಶದಲ್ಲಿ ಓದಿರುವವರಿಗೆ, ಎಂಪ್ಲಾಯ್‌ಮೆಂಟ್‌ನಲ್ಲಿ ಇಲ್ಲದೇ ಇರುವವರಿಗೆ ಉದ್ಯೋಗ ಕೊಡಬೇಕು ಅಂದರೆ ಅಷ್ಟು ಹಣ ಎಲ್ಲಿಂದ ತರಬೇಕು, ಹೇಗೆ ಹುದ್ದೆಗಳನ್ನು ಒದಗಿಸಬೇಕು ! ಇದು ಸಾಧ್ಯವಿಲ್ಲದ ಮಾತು 2 ಲಕ್ಷ ಇರುವ ಅಧಿಕಾರಿಗಳಿಗೆ ಹೆಚ್ಚು ಹಣ ಒದಗಿಸುವುದು ಹೇಗೆಂದು ಯೋಚನೆಮಾಡುವಾಗ, ಏಳೂವರೆ ಲಕ್ಷ ಜನರು ನಿರುದ್ಯೋಗಿಗಳಾಗಿದ್ದಾರೆ, ಸರ್ಕಾರದವರು ಅವರಿಗೆ ಉದ್ಯೋಗ ಕೊಡುವುದು ಸರ್ಕಾರದವರ ಕರ್ತವ್ಯವೆಂದು ಹೇಳಿದ್ದಾರೆ. ಆದರೆ ಆ ಒಂದು ಕರ್ತವ್ಯ ನಿರ್ವಹಣೆಗೆ ಏನೂ ಸಲಹೆಯನ್ನು ಅವರು ಕೊಡಲಿಲ್ಲ. ಆಯೋಗದವರ ಅನೇಕ ವಿಷಯಗಳನ್ನು ಪ್ರಸ್ತಾಪಮಾಡಿದ್ದರಲ್ಲಿ ಡಿವಿಜನಲ್ ಕಮೀಷನರ್‌ಅವರ ಆಫೀಸುಗಳನ್ನು ತೆಗೆದುಹಾಕುವುದು ಸೂಕ್ತವೆಂದು ಹೇಳಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಹಾಗೆಯೇ ಇನ್ನೂ ಜಾಯಿಂಟ್ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್, ಇಂತಹ ಹುದ್ದೆಗಳನ್ನು ರದ್ದುಮಾಡಬೇಕೆಂದು ಹೇಳಿದ್ದಾರೆ. ಅವನ್ನು ಕೂಡಲೇ ತೆಗೆದುಹಾಕಬೇಕು. ನಂತರ ಕೆಲಸಕಾರ್ಯಗಳು ಎಷ್ಟರಮಟ್ಟಿಗೆ ನಡೆಯುತ್ತವೆಂಬುದನ್ನು ವಿಮರ್ಶೆಮಾಡಿ, ಈ ವರದಿಯನ್ನು ಜಾರಿಗೆ ಕೊಡುವುದಾದರೆ, ಮೊದಲು ಅನೇಕ ಹುದ್ದೆಗಳನ್ನು ರಿಟ್ರೆಂಚ್ ಮಾಡುವುದಕ್ಕೆ ಪ್ರಯತ್ನಮಾಡಬೇಕಾಗುತ್ತದೆ. ಡಿವಿಜನಲ್ ಸಬ್‌ಡಿವಿಜನ್ ಮಟ್ಟದ ಎಲ್ಲಾ ಇಲಾಖೆಗಳನ್ನೂ ರದ್ದುಮಾಡಿ. ಅದು ಬಹಳ ಕಷ್ಟವಾಗುತ್ತದೆಂದು ಹೇಳಿದರೆ, ಎರಡು ಮೂರು ವರ್ಷಗಳ ಕಾಲ ಹೊಸ ನೇಮಕಗಳನ್ನು ಮಾಡುವುದಕ್ಕಾಗುವುದಿಲ್ಲವೆಂದು ನಿರ್ಧಾರಮಾಡಬೇಕು. ಕೆಲವು ವೇಳೆ ಎಕ್ಸ್‌ಟೆನ್‌ಷನ್ ಕೊಡುವ ಪದ್ಧತಿ ಇದೆ. ಕೆಲವುವೇಳೆ ಯಾರಾದರೂ ಇಬ್ಬರಿಗೆ ಪ್ರೊಮೋಷನ್ ಬಂದರೆ, ಅವರೊಳಗೆ ಒಂದು ತಿಂಗಳು ಅಥವಾ 2 ತಿಂಗಳು ವ್ಯತ್ಯಾಸವಿದ್ದರೆ, ಅಡಿಷನಲ್ ಹುದ್ದೆ ಕ್ರಿಯೇಟ್‌ಮಾಡಿ, ಒಬ್ಬರನ್ನು ಜಾಯಿಂಟ್ ಎಂಬುದಾಗಿ ಮಾಡುತ್ತಿದ್ದಾರೆ. ಆದ್ದರಿಂದ ಈ ರೀತಿಯಾಗಿ ಅನೇಕ ಕಡೆಗಳಲ್ಲಿ ದೊಡ್ಡ ದೊಡ್ಡ ಹುದ್ದೆಗಳು ಬಹಳ ಜಾಸ್ತಿಯಾಗಿವೆ. ಇವನ್ನು ಸಾಕಷ್ಟು ಕಡಿಮೆಮಾಡಬೇಕು. ಆಗ ಸಾಮಾನ್ಯ ಹೆಚ್ಚು ಜನರಿಗೆ ಜೀವನಕ್ಕೆ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಈ ವರದಿಯಲ್ಲಿ ಕ್ಯಾಲ್ಯುಕ್ಲೇಷನ್ ಹಾಕಿ ಜೀವನಕ್ಕೆ ಇಷ್ಟೇ ಬೇಕಾಗುತ್ತದೆಂದು ಹೇಳಿದ್ದಾರೆ. ಅದನ್ನು ಮೊದಲು ಸರ್ಕಾರದವರು ತೀರ್ಮಾನಮಾಡಬೇಕು. ಯಾರಾದರೂ ಕೂಡ ಜೀವನಕ್ಕೆ ಬೇರೆ ಮಾರ್ಗವಿಲ್ಲದೇ ಇರುವವರಿಗೆ ಈ ಅಧಿಕಾರವನ್ನು ಮೀಸಲಾಗಿಟ್ಟಿದ್ದೇವೆಂದು ಹೇಳುವಾಗ ಮಾತ್ರ ಖರ್ಚಿನ ಎಲ್ಲಾ ವಿಷಯ ವಿಮರ್ಶಿಸಬಹುದಾಗಿತ್ತು. ಆದರೆ ನಮ್ಮಲ್ಲಿ ಲಕ್ಷಾಂತರ ರೂಪಾಯಿಗಳ ವರಮಾನ ಬರತಕ್ಕ ದೊಡ್ಡ ದೊಡ್ಡ ಜಮೀನ್ದಾರರಿಗೆ ಮತ್ತು ವರ್ತಕರಿಗೆ, ಅವರ ಮಕ್ಕಳಿಗೆ ಅಲ್ಲಿ ಅವಕಾಶ ಹೆಚ್ಚಾಗಿದೆ. ಕಡಿಮೆ ಉತ್ಪತ್ತಿಬರುವವರೂ ಅಂಥ ನೇಮಕಕ್ಕೆ ಬರಬಹುದು. ಆದರೆ ಅವಕಾಶ ಸಿಕ್ಕುವದು ಕಡಿಮೆ. ಜೀವನ ವೆಚ್ಚವನ್ನೆಲ್ಲಾ ಕೊಡುತ್ತಿದ್ದೇವೆಂದು ನಾವು ತೀರ್ಮಾನಕ್ಕೆ ಬರಬೇಕಾದರೆ, ಆಗ ರೈತರ ಪರಿಸ್ಥಿತಿಯನ್ನು ಯೋಚನೆಮಾಡಬೇಕಾಗಿ ಬರುತ್ತದೆ. ಅವರ ಜೀವನ ಹೇಗೆ ! ಆದ್ದರಿಂದ ಈ ವಿಚಾರವನ್ನು ತೆಗೆದುಕೊಂಡು ಈಗ ಒಂದು ಗುಂಪಿನವರಿಗೆ ಅನುಕೂಲಮಾಡಿಕೊಂಡು ಬಂದರೆ, ಆಗ ಇಡೀ ದೇಶದಲ್ಲಿ ಸರಿಸಮಾನವಾದ ಅವಕಾಶವನ್ನು ಎಲ್ಲಾ ಗುಂಪಿನವರಿಗೂ ಒದಗಿಸಬೇಕಾಗುತ್ತದೆಂದು ನಾನು ಹೇಳುತ್ತೇನೆ. ಆ ವಿಷಯದಲ್ಲಿ ಸರ್ಕಾರದವರು ಬಹಳಮಟ್ಟಿಗೆ ಹೆಚ್ಚು ವಿಮರ್ಶೆಮಾಡಬೇಕಾದ ಸಂದರ್ಭ ಈಗ ಬಂದಿದೆ. ನಾನು ಹೇಳಿದ ಹಾಗೆ ಅನೇಕ ವಿಷಯಗಳನ್ನು ಮಾನ್ಯ ಸದಸ್ಯರು ಹೇಳುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಾರೆ. ಅದಕ್ಕೆ ನಾನು ಬಹಳವಾಗಿ ಸಂತೋಷಪಡಬೇಕಾಗುತ್ತದೆ. ಈಗ ಹಿಂದಿನ ಲೆಕ್ಕ ತೆಗೆದುಕೊಂಡರೆ, ಡೆಪ್ಯುಟಿ

ಕಮೀಷನರ್, ಎಸ್.ಡಿ. ಓ. ಹುದ್ದೆಗಳಿಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ವಗೈರೆ ಎಲ್ಲಾ ಸೇರಿತ್ತು. ಇತ್ತೀಚೆಗೆ ಪ್ರತಿಯೊಂದು ಇಲಾಖೆಗೂ ಹಂತಹಂತಗಳಲ್ಲಿ ಬೇರೆಬೇರೆ ಅಧಿಕಾರಿಗಳನ್ನು ಮಾಡಿರುವು ದರಿಂದ ಕೆಲಸಗಳು ಸಲೀಸಾಗಿ ಆಗುತ್ತಾ ಇಲ್ಲ. ಆದ್ದರಿಂದ ತಹಸೀಲ್ದಾರ್, ಡೆಪ್ಯುಟಿ ಕಮೀಷನರ್, ಸರ್ಕಾರ—ಈ ಮೂರು ಹಂತಗಳನ್ನು ಇಟ್ಟರೆ ಸಾಕು. ಇಲ್ಲದಿದ್ದರೆ ಒಂದೊಂದು ಕಡೆ ಕಾಲವಿಳಂಬವಾಗಿ ಕೆಲಸಗಳು ಸರಿಯಾಗಿ ಆಗುವುದಿಲ್ಲ. ಒಬ್ಬೊಬ್ಬರ ಅಭಿಪ್ರಾಯ ಬೇರೆ ಬೇರೆಯಾಗಿ ಅನೇಕರು ಕೋರ್ಟುಗಳಿಗೆ ಹೋಗುವುದಕ್ಕೆ ಅವಕಾಶವಾಗುತ್ತದೆ. ಆಡಳಿತವೂ ಅಷ್ಟಾಗಿ ಸುಲಭವಾಗಿ ನಡೆಯುವುದಕ್ಕೆ ಕಷ್ಟವಾಗುತ್ತದೆ. ಇದನ್ನು ಸರ್ಕಾರದವರು ಮೊದಲು ಯೋಚನೆ ಮಾಡಬೇಕು. ಆಡಳಿತ ತಾಲ್ಲೂಕು ಲೆವಲ್‌ನಲ್ಲಿ ಒಂದು ಮಟ್ಟ, ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಒಂದು ಮಟ್ಟ, ನಂತರ ನೇರವಾಗಿ ಸರ್ಕಾರಕ್ಕೆ ಇರಬೇಕು. ಮಧ್ಯಮಧ್ಯೆ ಇರತಕ್ಕ ಅಧಿಕಾರಿ ಗಳನ್ನು ಮತ್ತು ಅವರ ಆಫೀಸುಗಳನ್ನು ವಜಾಮಾಡುವುದು ಸರ್ಕಾರದವರ ಮೊಟ್ಟಮೊದಲನೇ ಕರ್ತವ್ಯ ಆಗಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆಮಾಡುತ್ತೇನೆ.

ಇನ್ನು ವಿದ್ಯಾಭ್ಯಾಸ ಇಲಾಖೆ ತೆಗೆದುಕೊಂಡರೆ, ಅಸಿಸ್ಟೆಂಟ್ ಡಿ.ಇ.ಓ. ಎಂದು ಹೊಸದಾಗಿ ಹುದ್ದೆ ಪ್ರಾರಂಭವಾಗಿದೆ. ಇವು ಅಗತ್ಯವಿಲ್ಲ ಒಂದು ಜಿಲ್ಲೆಯಲ್ಲಿ ಅವರು 2–3 ಆಫೀಸುಗಳು ಪ್ರಾರಂಭವಾಗಿವೆ. ಸರ್ಕಾರದವರು ಇದರ ಅಗತ್ಯತೆ ಎಷ್ಟಿದೆ, ನಮ್ಮ ಖರ್ಚುವೆಚ್ಚಗಳು ಎಷ್ಟಿವೆ ಎಂಬುದನ್ನು ನೋಡಬೇಕು. ನಾನು ಖಾದಿಬೋರ್ಡಿನಲ್ಲಿದ್ದಾಗ್ಗೆ ಏನಾದರೂ ಆಗಲಿ ಶೇಕಡ 10 ಅಥವಾ 12ಕ್ಕಿಂತ ಹೆಚ್ಚಿಗೆ ಅಡ್ಮಿನಿಸ್ಟ್ರೇಷನ್ ಬಗ್ಗೆ ಖರ್ಚುಮಾಡಬಾರದು ಎಂದು ಖಾದಿ ಕಮಿಷನ್ ನವರು ಹೇಳುತ್ತಿದ್ದು, ಅದರಂತೆ ರಿಟ್ರೆಂಚ್ ಮಾಡಿದೆವು. ಕನಿಷ್ಟ 18ಕ್ಕಿಂತ ಜಾಸ್ತಿ ಇರಲೇ ಬಾರದು. ಶ್ರೀಮಾನ್ ಕೃಷ್ಣನ್‌ರವರು ಹೇಳಿದರು 26ಕ್ಕಿಂತ ಇಳಿದುಬಿಟ್ಟಿದೆ ಎಂದು. ಅವರು ಟೋಟಲ್ ಇನ್‌ಕಂ ತೆಗೆದುಕೊಂಡು ಲೆಕ್ಕಾಚಾರ ಹಾಕುತ್ತಿದ್ದಾರೆ. 18 ಪರ್‌ಸೆಂಟಿಗಿಂತ ಜಾಸ್ತಿ ಇರಬಾರದು, ಮತ್ತು ಹಾಗೆ ಮಾಡತಕ್ಕದ್ದು ಬಹಳ ಸೂಕ್ತವೆಂದು ಕಾಣುತ್ತದೆ.

ಆಮೇಲೆ ತಾತ್ಕಾಲಿಕವಾಗಿ ನೇಮಕ ಮಾಡುವುದಕ್ಕೆ ಸರ್ಕಾರದವರು ಇತ್ತೀಚೆಗೆ ಕಡ್ಡಾಯ ವಾಗಿ ಯಾರೂ ಟೆಂಪರರಿಯಾಗಿ ನೇಮಕ ಮಾಡಿಕೊಳ್ಳಬಾರದು ಎಂದು ಆರ್ಡರ್ ಮಾಡಿ ಹೇಳಿದ್ದಾರೆ. ಇದು ಬಹಳ ಸಂತೋಷ. ಈಗ ಏನಾಗುತ್ತದೆ ಎಂದರೆ, ತಾತ್ಕಾಲಿಕವಾಗಿ ಯಾವ ರೀತಿಯಲ್ಲಾದರೋ, ಜಾಗ ಇದ್ದರೆ, ಅಲ್ಲಿ ನೇಮಕ ಮಾಡಿಕೊಂಡರೆ, ಒಂದು ವರ್ಷ ಆದನಂತರ ಆಟೋಮ್ಯಾಟಿಕ್ ಆಗಿ ಕನ್‌ಫರ್ಮ್ ಆಗಬೇಕಾಗುತ್ತದೆ. ಉದಾಹರಣೆಗೆ ಸರ್ವೆ ಇಲಾಖೆಯನ್ನು ತೆಗೆದುಕೊಳ್ಳೋಣ. ಅಲ್ಲಿ ಟೆಂಪರರಿ ಬೇಸಿಸ್ ಮೇಲೆ ಕೆಲವರನ್ನು ತುರ್ತಿನ ಆಗಿನ ಕೆಲಸಗಳಿಗೆ ತೆಗೆದುಕೊಂಡರು. ಅವರನ್ನು ತೆಗೆದುಕೊಳ್ಳುವಾಗ, ಅವರು ಟೆಂಪರರಿ ಕಂಡಿಶನ್ಸ್‌ಗೆ ಎಲ್ಲಾ ಒಪ್ಪಿಕೊಂಡಿದ್ದಾರೆ. ಆಮೇಲೆ ಅವರದೇ ಒಂದು ಸಂಸ್ಥೆ, ಅವರದ್ದೇ ಒಂದು ನಿಯೋಗ ಸ್ಥಾಪನೆ ಯಾಗಿ, ನಮ್ಮ ಗತಿ ಏನಾಗಬೇಕು, ನಾವು ಕೆಲಸದಿಂದ ತೆಗೆದುಹಾಕಿದರೆ ಏನು ಮಾಡಬೇಕು ಎಂಬ ಎಲ್ಲಾ ಪ್ರಶ್ನೆಗಳನ್ನು ತರುತ್ತಾರೆ. ಅವರು ಮೊದಲು ಏನು ಮಾಡುತ್ತಿದ್ದರು? ನಂತರ ಏನು ಮಾಡಬೇಕೆಂಬುದು ಇಲ್ಲ. ಸದ್ಯಕ್ಕೆ ಟೆಂಪರರಿಯಾಗಿ ತೆಗೆದುಕೊಳ್ಳುತ್ತೇವೆಂದು ಹೇಳಿದಾಗ ಒಪ್ಪಿಕೊಂಡು, ನಂತರ ಮುಂದೆ ಕನ್‌ಫರ್ಮ್ ಮಾಡಬೇಕೆಂದು ಎಲ್ಲಾ ಹೇಳಿದರೆ, ಸರ್ಕಾರ ಏನು ಮಾಡಬೇಕು? ಇದನ್ನೆಲ್ಲಾ ಸಂಪೂರ್ಣವಾಗಿ ವಿಮರ್ಶೆಮಾಡಿ, ಅಂಥವುಗಳನ್ನು ಬೇಗನೆ ರಿಟ್ರೆಂಚ್ ಮಾಡಬೇಕಾದುದು ಒಳ್ಳೆಯದು. ಯಾವುದೇ ಹೊಸ ಟ್ಯಾಕ್ಸ್ ಹಾಕಿ ಇದನ್ನು ಭರ್ತಿ ಮಾಡುವುದಕ್ಕೆ ದೇಶ ತಯಾರಿಲ್ಲ. ಅದನ್ನು ಸಾಕಷ್ಟು ಸರ್ಕಾರದವರು ವಿಮರ್ಶೆ ಮಾಡತಕ್ಕದ್ದು ಬಹಳ ಅಗತ್ಯ ಮತ್ತು ಆದಷ್ಟು ಜಾಗ್ರತೆ ಇದನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇವತ್ತು ಏನಾಗಿದೆ ಎಂದರೆ, ಟ್ಯಾಕ್ಸ್ ರೈತ ಕೊಡಬೇಕಾದರೂ ಅವನ ಮನಸ್ಸು ಸಂತೋಷದಲ್ಲಿರಬೇಕು. ಇವತ್ತು ಯಾವ ರೈತನು ಕೂಡ, ಕೊಡಪ್ಪಾ ಸ್ವಲ್ಪ ಟ್ಯಾಕ್ಸ್, ಎಂದರೆ ಕೊಡಲಾರನು. ಇವತ್ತು ಅದೇ ರೈತನು ಸರ್ಕಾರಿ ಕಚೇರಿಗಳಿಗೆ ಹೋದಾಗ, ಈ ನೌಕರರು ಅವನನ್ನು ಚೆನ್ನಾಗಿ ಮಾತನಾಡಿಸಿ, ಅವನು ಏಕೆ, ಯಾವ ಕೆಲಸಕ್ಕೆ ಬಂದಿದ್ದಾನೆ ಎಂಬುದನ್ನು ವಿಚಾರಿಸಿ, ಅವನಿಗೆ ಬೇಕಾದ ಸಹಾಯವನ್ನು ಮಾಡಿದರೆ, ಅವನು ನಿಜವಾಗಿಯೂ ಇವರ ಮೇಲೆ ಅಭಿಮಾನಪಟ್ಟು ಇವರಿಗಾಗಿ ಟ್ಯಾಕ್ಸ್ ಕೊಡಲು ತಯಾರಿರುವನು. ಇವತ್ತು ಕಚೇರಿಗಳಿಗೆ ನಮ್ಮಂತವರು ಹೋದರೆ, ಬೇಕಾದರೆ ಅವರ ಕುರ್ಚಿಯನ್ನೇ ಕೊಡುತ್ತಾರೆ. ಆದರೆ ರೈತನು ಹೋದರೆ, ಏನಯ್ಯ ಬಂದಿದ್ದಿ, ಏಕೆ ಬಂದಿದ್ದೀ, ನಿನ್ನದು ಏನೂ ಆಗುವುದಿಲ್ಲ ಇಲ್ಲ, ಅಲ್ಲಿ ಬೋರ್ಡು ಹಾಕಿದ್ದು ಕಾಣುವುದಿಲ್ಲವೇ, ಏಕೆ ಒಳಗೆ ಬಂದೆ ಎಂದು ಹೇಳಿ, ಗದರಿಸಿ ಬಿಡುತ್ತಾರೆ. ಆದರೆ ಅವನಿಗೆ ಬೇಕಾದವರು ಬಂದರೆ ಏನು ಬೇಕಾದರೂ ಮಾಡುತ್ತಾರೆ. ಘಂಟೆಗಟ್ಟಲೆ ಮಾತನಾಡು ತ್ತಿರುತ್ತಾರೆ. ಹೀಗಿರುವಾಗ ನಾವಾದರೂ ನಿಮ್ಮ ಒಳ್ಳೆಯದಕ್ಕೆ ಟ್ಯಾಕ್ಸ್ ಕೊಡಿ ಎಂದು

(ಶ್ರೀ ಕೆ. ಎಚ್. ವೀರಪ್ಪಗೌಡ)

ಯಾವ ರೀತಿಯಲ್ಲಿ ಹೇಳುವುದು ? ಈ ಕಮಿಷನ್ ವರದಿಯನ್ನು ಕೂಡ ಒಂದು ವರ್ಷ ಕಾದು, ಒಂದು ವರ್ಷದಲ್ಲಿ ಪ್ರತಿಯೊಬ್ಬರಿಗೂ ವಿಷಯ ತಿಳಿಸಿ, ರಿಕಾರ್ಡುಗಳನ್ನು ಇವರು ಯಾವರೀತಿ ವಿಲೇವಾರಿ ಮಾಡುತ್ತಾರೆಂದು ಗಮನಿಸಿ, ಆ ಮೇಲೆ ಜಾರಿಗೆ ಕೊಡುವುದು ಸೂಕ್ತವೆಂದೆಣಿಸುತ್ತದೆ. ಇಲ್ಲದಿದ್ದರೆ, ಹೇಗಾದರೂ ಕೊಡುತ್ತಾರೆ, ನಾಳೆ ದಿವಸ ಎನ್.ಜಿ.ಓ. ಸಂಘ ಇದೆ, ಮುಷ್ಕರ ಹೂಡಿದರೆ ಆಯಿತು, ಏನಾದರೂ ಮಾಡಿಯೇ ಮಾಡುತ್ತಾರೆ ಎಂಬ ಒಂದು ಮನೋಭಾವನೆ ಬೆಳೆದು ಯಾವತ್ತೂ ಇದು ಕೊನೆಗಾಣುವುದಿಲ್ಲ. 1947ನೇ ಇಸವಿಯಿಂದ ರಿಕಾರ್ಡುಗಳು ವಿಲೇವಾರಿ ಯಾಗದೆ ಇವೆ ಎಂದು ಹೇಳಬಹುದು. 56-57ರಿಂದ ನೂರಾರು ರಿಕಾರ್ಡುಗಳು ಇವೆ. ಯಾವುದೇ ರೂಪದಲ್ಲಿ ಒಂದು ತೀರ್ಮಾನ ಮಾಡಿ ಕೊಡುತ್ತೇವೆ ಎಂಬುದು ಇಲ್ಲವೇ ಇಲ್ಲ. ಸೆಕ್ರೆಟರಿಯೇಟ್ ರವೆಲ್ಲಿನವರಲ್ಲೂ ಒಂದು ಕಾಗದ ಬರೆದರೆ, ಸೆಕ್ರೆಟರಿಯಿಂದ ಒಂದು ಉತ್ತರ ಬರುತ್ತದೆ. ನಿಮ್ಮ ಪತ್ರ ತಲಪಿದೆ ಎಂದು. ಪುನಃ ನಾವು ಹೋಗಿ ಕೇಳಿದಾಗ ಅದನ್ನು ವಿಚಾರಿಸುತ್ತಾರೆ ವಿನಃ ಅವರೇ ಏನಾದರೂ ಒಂದು ತೀರ್ಮಾನ ಮಾಡಿ ರಿಪ್ಲೈ ಮಾಡುತ್ತಾ ಇಲ್ಲ. ಹೀಗಾದರೆ ದೇಶದಲ್ಲಿ ಅವರಿಗೆ ಉತ್ತರ ಹೇಳತಕ್ಕ ಶಕ್ತಿ ಇಲ್ಲವೇ ಎನ್ನತಕ್ಕ ರೀತಿಯಲ್ಲಿ ನಮ್ಮ ಆಡಳಿತ ಇದೆ. ಯಾರೇ ಪ್ರಜೆಯಾಗಲಿ, ರೈತನಾಗಲಿ, ಅವನು ಆಫೀಸಿಗೆ ಹೋದಾಗ, ಇವರು ಹೇಗೆ ವರ್ತಿಸುತ್ತಾರೆ ಎಂಬುದು ನೋಡತಕ್ಕದ್ದು ಅಗತ್ಯ. ಅದ್ದರಿಂದ ಅವರು ಹೇಗೆ ನೌಕರರ ಸಂಬಳ ಜಾಸ್ತಿ ಮಾಡುವುದನ್ನು ಒಪ್ಪಬೇಕು ? 150 ರೂಪಾಯಿವರೆಗಿನವರಿಗೆ 10 ರಿಂದ 15 ರೂಪಾಯಿ, ಹೆಚ್ಚು 500 ರೂಪಾಯಿ ಮೇಲ್ಪಟ್ಟವರಿಗೆ 25 ರಿಂದ 50 ರೂಪಾಯಿ ಎಂದು ಹೇಳಿದ್ದಾರೆ. ಇವತ್ತಿನ ದಿವಸ 150 ರೂಪಾಯಿಗಿಂತ ಕಡಮೆ ಇದ್ದರೆ, ಜೀವನ ಮಾಡುವುದಕ್ಕಾಗುವುದಿಲ್ಲ. ಹೀಗಿರುವಾಗ 500 ರೂಪಾಯಿ ಮೇಲ್ಪಟ್ಟವರಿಗೆ ಜಾಸ್ತಿ ಏಕೆ ಮಾಡಬೇಕು. 150 ಕ್ಕಿಂತ ಕಡಿಮೆ ಇರುವವರಿಗೆ ಕಡಿಮೆ ಇದೆ. ಇವತ್ತಿನ ದಿವಸ ನಮ್ಮ ರೈತ ಬೆಳಿಗ್ಗೆ 6 ಗಂಟೆಗೆ ಹೊಲಕ್ಕೆ ಹೊರಟರೆ, ಬರುವುದು ಸಾಯಂಕಾಲ 6 ಗಂಟೆಗೆ. ಅವನಿಗೆ 150 ರೂಪಾಯಿ ಪ್ರಕಾರ ಏನು ಒಂದು ವರ್ಷಕ್ಕೆ ಬರಬೇಕಾಗಿತ್ತೋ, ಅದು ಖಂಡಿತವಾಗಿಯೂ ಬರುತ್ತಾ ಇಲ್ಲ. ಆದರೆ ಇವರು 10½ ಗಂಟೆಯಿಂದ 5½ ಗಂಟೆಯವರೆಗೆ ಆಫೀಸಿನಲ್ಲಿ ಇವರ ಕೆಲಸ. ನಂತರ ಮನೆಗೆ ಹೊರಟುಬಿಡುತ್ತಾರೆ. ಇವತ್ತು ಅದರ ಮಧ್ಯೆ 2, 2½ ಗಂಟೆಗೆ ಕಾಫಿ ಸಮಯ ಬೇರೆ. ಮಧ್ಯಾಹ್ನ ಮೂರುವರೆ ಗಂಟೆಯಾದರೂ ಬರುತ್ತಾ ಇಲ್ಲ. ಕೇಳಿದರೆ, ಧೈರ್ಯವಾಗಿ, 'ಕಾಫಿಗೆ ಹೋಗಿದ್ದಾರೆ, ಸ್ವಾಮಿ, ಈಗ ಬರುತ್ತಾರೆ' ಎಂದು ಹೇಳುತ್ತಾರೆ. ಇದರಿಂದ ಇವರ ಬಗ್ಗೆ ಒಂದು ಸಾರ್ವಜನಿಕ ಅಭಿಪ್ರಾಯ ಚೆನ್ನಾಗಿಲ್ಲ. ಸಾರ್ವಜನಿಕ ಅಭಿಪ್ರಾಯ ಚೆನ್ನಾಗಿಲ್ಲ. ಸಾರ್ವಜನಿಕರಲ್ಲಿ ಇವರ ಬಗ್ಗೆ ಒಂದು ಒಳ್ಳೆಯ ಅಭಿಮಾನ, ವಾತಾವರಣ ಕುದುರಿ, ಇವರು ಮಾಡತಕ್ಕ ಕಾಗದ ಪತ್ರಗಳು 15 ದಿನಗಳಲ್ಲೇ ವಿಲೇವಾರಿ ಯಾಗುವ ಹಾಗೆ ಆದರೆ, ಅವರಲ್ಲಿ ಒಳ್ಳೆಯ ಅಭಿಪ್ರಾಯ ಬರುತ್ತದೆ. ಆದರೆ ಆ ರೀತಿ ಇಲ್ಲ. ಲಂಚ ರುಷುವತ್ತುಗಳು ಎಲ್ಲಾ ಅಲ್ಲಿವೆ. ಈಗ ಒಬ್ಬನ ಹತ್ತಿರ ಒಂದು ಪೇಪರು ಬಂದರೆ, ಅದು ಒಂದು ತಿಂಗಳಾದರೂ ಕೂಡ ಅಲ್ಲೇ ಇರುತ್ತದೆ. ಆದರೆ ಅಲ್ಲಿ ಏನಾದರೂ ಅವರಿಗೆ ಹುಮ್ಮನ್ನು ಬರುವಂತೆ ಮಾಡಿದರೆ, 8 ದಿವಸಗಳಲ್ಲಿ ಅವನ ಹತ್ತಿರ ಬಂದಿರತಕ್ಕ ಕಾಗದ ಆಗಲೇ ರೆಕಮೆಂಡ್ ಆಗಿ ಜಿಲ್ಲಾಧಿ ಕಾರಿಗಳ ಕೈಗೆ ಹೋಗುತ್ತದೆ. ಆದರೆ ಪಾಪ, ಏನೂ ಮಾಡದವನ ಕಾಗದ, 15 ತಿಂಗಳಾದರೂ ಅಲ್ಲೆ ಬಿದ್ದಿರುತ್ತದೆ. ಇದನ್ನು ತಪ್ಪಿಸಬೇಕು.

ಇನ್ನೊಂದು ಮಾತು; ಮಾನ್ಯ ಸಿದ್ಧವೀರಪ್ಪನವರು ಹೇಳಿದಹಾಗೆ, ಪ್ರೊಮೋಷನ್ಸ್ ವಿಚಾರ. ಇವತ್ತು 1, 2, 3, 4, 5, ಹೀಗೆ ಪ್ರೊಮೋಷನ್ಸ್ ಕೊಡದಿದ್ದರೆ ಕೂಡಲೇ ಅವನು ಹೈಕೋರ್ಟಿಗೆ ಹೋಗುತ್ತಾನೆ. ಆದ್ದರಿಂದ ಏನಾದರೂ ಮಾಡಿ ಈ ಸಿ.ಸಿ.ಎ. ರೂಲ್ಸನ್ನು ಸಂಪೂರ್ಣವಾಗಿ ಬದಲಾವಣೆ ಮಾಡಬೇಕು. ಈಗ ಏನಾಗಿದೆ ಎಂದರೆ, ಕೆಲಸ ಮಾಡಲಿ, ಮಾಡದಿರಲಿ, ತಿಂಗಳ ಕೊನೆಗೆ ಸಂಬಳ ಬರುತ್ತದೆ, ದಕ್ಷತೆ ಇರಲಿ, ಇಲ್ಲದಿರಲಿ ಸರ್ವಿಸ್ ಜಾಸ್ತಿಯಾಗುತ್ತಾ ಹೋಗುತ್ತದೆ, ಇನ್‌ಕ್ರಿಮೆಂಟ್ ಬರುತ್ತಾ ಇರುತ್ತದೆ ಎಂಬ ಒಂದು ಮನೋಭಿಪ್ರಾಯ ಕೆಲವರಲ್ಲಿ ಮೂಡಿದೆ. ಆದ್ದರಿಂದ ಅವುಗಳನ್ನೆಲ್ಲಾ ತಪ್ಪಿಸಲಿಕ್ಕೆ ಸರ್ಕಾರದವರು ಯೋಗ್ಯ ಕ್ರಮ ತೆಗೆದುಕೊಳ್ಳಬೇಕು. ದಕ್ಷತೆ ಎಲ್ಲಿದೆ, ಯಾರಲ್ಲಿದೆ, ಅವರಿಗೆ ಮಾತ್ರ ಪ್ರೊಮೋಷನ್ಸ್ ಸಿಗುವ ಅವಕಾಶ ಇರಬೇಕು. ಆಗ ಮಾತ್ರ ಎಲ್ಲರಲ್ಲೂ ಒಂದು ವಿಧವಾದ ಅಭಿಪ್ರಾಯವೇ ಬೇರೆಯಾಗಿ ದಕ್ಷತೆ ಎಲ್ಲರಲ್ಲೂ ಹೆಚ್ಚಾಗುವುದು. ಇದನ್ನು ಸರ್ಕಾರದವರು ಕೂಲಂಕಷವಾಗಿ ತೀರ್ಮಾನ ಮಾಡಿ, ನಿರ್ಧಾರ ಮಾಡದೆ ಹೋದರೆ, ನಮ್ಮ ಸರ್ಕಾರದವರು ಏನು ಹೊಸ ಹೊಸ ಯೋಜನೆಗಳನ್ನು ರೂಪಿಸಿದ್ದಾರೆ, ಅದೆಲ್ಲಾ ಜಾರಿಗೆ ಬರಬೇಕಾದರೆ, ಈ ಪ್ರೊಮೋಷನ್ ಪದ್ಧತಿ ಸಂಪೂರ್ಣವಾಗಿ ಬದಲಾವಣೆಯಾಗಿಯೇ ತೀರಬೇಕೆಂದು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು ಮಾತನಾಡಬೇಕಾಗಿದೆ. ಆದರೆ ಸಮಯವಿಲ್ಲ.

5-30 P.M.

ಈಗ ಕೋ-ಆಪರೇಟಿವ್ ಇಲಾಖೆಯಲ್ಲಿ ಜಾಯಿಂಟ್ ರಿಜಿಸ್ಟ್ರಾರ್ ಎಂದು ಬೇರೆ ಮಾಡಿದ್ದಾರೆ. ಆಮೇಲೆ ಡೆಪ್ಯುಟಿ ರಿಜಿಸ್ಟ್ರಾರ್ ಎಂದು ಬೇರೆ ಮಾಡಿದ್ದಾರೆ. ಇದೆಲ್ಲವೂ ಅನಾವಶ್ಯಕ. ಕೋ-ಆಪರೇಟಿವ್ ಇಲಾಖೆಯಲ್ಲಿ ಬಹಳ ಅದಕ್ಷತೆ ಇದೆ. ಅನೇಕ ಸೊಸೈಟಿಗಳಲ್ಲಿ ದುರುಪಯೋಗವಾಗ ' ಕ್ಕದ್ದನ್ನು ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ಇದು ಎಲ್ಲಾ ಕಡೆಗಳಲ್ಲೂ ನಡೆಯುತ್ತಿದೆ. ಈ ಸೊಸೈಟಿಗಳನ್ನು ಇನ್‌ಸ್ಪೆಕ್ಷನ್ ಮಾಡಲು ಅಧಿಕಾರಿಗಳು ಬರುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಯಾರಾದರೂ ಇನ್‌ಸ್ಪೆಕ್ಷನ್ ಬಂದರೂ ಕೂಡ ಸುಮ್ಮನೆ ವಿಜಿಟ್ ಮಾಡಿಕೊಂಡು ಹೋಗುತ್ತಾರೆ ಎಂದು ಕಾಣುತ್ತದೆ. ಯಾವ ಆಫೀಸರು ಬಂದರೂ ಕೂಡ ಸೊಸೈಟಿಯನ್ನು ಇನ್‌ಸ್ಪೆಕ್ಷನ್ ಮಾಡಿ ನೋಡಿ ಆಡಳಿತ ಮಂಡಲಿಗೆ ತಮ್ಮ ರಿಪೋರ್ಟನ್ನು ಕಳುಹಿಸುವುದಿಲ್ಲ. ಒಂದು ವರ್ಷಕ್ಕೋ, ಎರಡು ವರ್ಷಕ್ಕೋ, ಆಡಿಟರ್ಸ್ ಬರುತ್ತಾರೆ, ಅವರು ಆಡಿಟ್ ಮಾಡಿ ರಿಪೋರ್ಟ್ ಬಂದಾಗ ಮಾತ್ರ ಆ ಸೊಸೈಟಿಯ ಕೆಲಸಗಾರರು ಏನೇನು ಮಾಡಿದ್ದಾರೆ ಎಂಬುದನ್ನು ತಿಳಿದು ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಂಥಾ ಒಂದು ಪರಿಸ್ಥಿತಿ ಕೋ-ಆಪರೇಟಿವ್ ಇಲಾಖೆಯಲ್ಲಿ ಇದೆ.

ಈಗ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ಸಿಬ್ಬಂದಿ ವರ್ಗ ಜಾಸ್ತಿ ಇದೆ. ಆದ್ದರಿಂದ ಇದಕ್ಕೆ ಒಂದು ಬೋರ್ಡ್ ಅಥವಾ ಒಂದು ಕಮಿಟಿಯನ್ನು ಮಾಡಿ ಜಾಸ್ತಿ ಇರತಕ್ಕಂಥ ಸಿಬ್ಬಂದಿ ವರ್ಗವನ್ನು ಸುಮಾರು 50 ಪರ್ಸೆಂಟ್ ಕಡಿಮೆ ಮಾಡುವುದಕ್ಕೆ ಅವಕಾಶ ಇದೆ. ಇವೊತ್ತಿನ ದಿವಸ ನಾವು ಒಂದು ವಿಷಯವನ್ನು ಯೋಚನೆ ಮಾಡುವುದಾದರೆ ಯಾವ ಉತ್ಪತ್ತಿಯೂ ಇಲ್ಲದೇ ಇರುವವರಿಗೆ, ಜೀವನಕ್ಕೆ ಯಾವ ಮಾರ್ಗವೂ ಇಲ್ಲದೆ ಇರುವವರಿಗೆ ನಾವು ಪ್ರೋತ್ಸಾಹ ಕೊಡತಕ್ಕದ್ದನ್ನು, ಕೆಲಸವನ್ನು ಕೊಡತಕ್ಕದ್ದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಬೇರೆ ಬೇರೆ ಕಡೆಯಿಂದ ಲಕ್ಷಾಂತರ ರೂಪಾಯಿ ಆದಾಯ ಬರುತ್ತಿದ್ದರೆ, ಅವರ ಜೀವನಕ್ಕೆ ಆಗುವಷ್ಟು ಉತ್ಪತ್ತಿ ಅವರಿಗೆ ಬರುತ್ತಿದ್ದರೆ ಅಂಥವರಿಗೂ ಕೆಲಸವನ್ನು ಕೊಡಬೇಕು, ಪೆನ್‌ಷನ್ ಕೊಡಬೇಕು ಎಂದರೆ ಅದು ಸಮಾಜ ನೀತಿಗೆ ಸರಿಹೋಗುವುದಿಲ್ಲ.

ನಿವೃತ್ತರಾದ ನೌಕರರಿಗೆ ಪೆನ್‌ಷನ್ ಕೊಡತಕ್ಕದ್ದು ಪ್ರಾಮುಖ್ಯವಾದ ವಿಷಯ. ನನಗೆ ಬಹಳ ಆಶ್ಚರ್ಯವಾಗುತ್ತದೆ, ಇವೊತ್ತು ದೇಶದಲ್ಲಿ ನಿರುದ್ಯೋಗ ಸಮಸ್ಯೆ ಏನು ಇದೆ, ಸುಮಾರು 7½ ಲಕ್ಷ ಜನಗಳು ನಮ್ಮ ದೇಶದಲ್ಲಿ ನಿರುದ್ಯೋಗಿಗಳಿದ್ದಾರೆಂದು ಶ್ರೀಮಾನ್ ಶಿವಪ್ಪನವರೇ ಹೇಳಿದ್ದಾರೆ. ಇವೊತ್ತು ಯಾರಿಗೇ ಆಗಲಿ 10 ವರ್ಷಗಳ ಕಾಲ ಸೆಕ್ಯೂರ್ಡ್ ಇನ್‌ಕಂ ಕೊಡುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಸರ್ಕಾರಿ ನೌಕರರಿಗೆ 30 ವರ್ಷಗಳ ಕಾಲ ಸೆಕ್ಯೂರ್ಡ್ ಇನ್‌ಕಂ ಕೊಟ್ಟು ಅವರಿಗೆ ವೈದ್ಯಕೀಯ ಸಹಾಯ, ಶಿಕ್ಷಣ ಸಹಾಯ ಎಲ್ಲಾ ಒದಗಿಸಿಕೊಟ್ಟು ಮತ್ತೆ 30 ವರ್ಷಗಳಾದಮೇಲೆ ಸಾಯುವವರೆಗೂ ಪೆನ್‌ಷನ್ ಬೇರೆ ಕೊಡುತ್ತಿದ್ದಾರೆ. ಇದು ಯಾವ ರೈತನಿಗೂ ಸಿಕ್ಕುವುದಿಲ್ಲ. ಹೀಗಾದರೆ ದೇಶದ ಗತಿ ಏನು ? ಕೆಲಸದಿಂದ ನಿವೃತ್ತರಾಗಿರುವವರಿಗೆ ಯಾವ ಆಸ್ತಿಯೂ ಇಲ್ಲದೇ ಇದ್ದು, ಅವರ ಮಕ್ಕಳಿಗೂ ಕೂಡ ಯಾವ ಅಧಿಕಾರವೂ ಸಿಕ್ಕದೇ ಇದ್ದರೆ ಅಂಥವರಿಗೆ ಬೇಕಾದರೆ ಪೆನ್‌ಷನ್ ಕೊಡೋಣ. ಒಂದು ಕಡೆ ಅವರ ಮಕ್ಕಳಿಗೆ ಅಧಿಕಾರವನ್ನು ಕೊಟ್ಟಿರುತ್ತಾರೆ, ಆಸ್ತಿ ಬೇರೆ ಇರುತ್ತದೆ, ಹೀಗಿದ್ದರೂ ಕೂಡ ಅಂಥವರಿಗೆ ಪೆನ್‌ಷನ್ ಏತಕ್ಕೆ ಕೊಡಬೇಕು ? ಪಾಪ ರೈತ ರಾತ್ರಿ ಹಗಲು ದುಡಿಯುತ್ತಾನೆ. ಬೆಳಗ್ಗೆ 6 ಗಂಟೆಗೆ ಕೆಲಸವನ್ನು ಪ್ರಾರಂಭ ಮಾಡಿದರೆ ಸಾಯಂಕಾಲ 9 ಗಂಟೆಯವರೆಗೂ ದುಡಿಯುತ್ತಾನೆ. ಅವನಿಗೆ ಸರ್ಕಾರ ದವರು ವಯಸ್ಸಾದಮೇಲೆ ಯಾವ ಸಹಾಯವನ್ನು ಮಾಡುತ್ತಿಲ್ಲ. ಆದರೆ ಇವೊತ್ತಿನ ದಿವಸ ಯಾವುದೇ ಒಂದು ತೆರಿಗೆಯಾಗಲಿ ಅದನ್ನು ರೈತ ಕೊಡಬೇಕಾಗುತ್ತದೆ. ಅವನ ಮೇಲೆ ಯಾರಿಗೂ ಅಭಿಮಾನವಿಲ್ಲ. ನಿವೃತ್ತರಾದ ನೌಕರರಿಗೆ ಜೀವನಕ್ಕೆ ಬೇರೆ ಯಾವ ಮಾರ್ಗವೂ ಇಲ್ಲ ಎನ್ನುವ ಸಂದರ್ಭದಲ್ಲಿ ಮಾತ್ರ ಜೀವನಕ್ಕೆ ಅನುಕೂಲಪಡಿಸಿಕೊಡೋಣ. ಮಕ್ಕಳು, ಆಸ್ತಿ ಯಾವುದೂ ಇಲ್ಲದೇ ಇರುವವರಿಗೆ ಬೇಕಾದರೆ ಪೆನ್‌ಷನ್ ಕೊಡೋಣ, ಲಕ್ಷಾಂತರ ರೂಪಾಯಿ ಬಾಡಿಗೆ ಬರುವ ವರಿಗೆ, ಕಾಫೀ ಎಸ್ಟೇಟ್ ಇರುವವರಿಗೆ ಪೆನ್‌ಷನ್ ಕೊಡಬೇಕೆಂದರೆ ಇದು ಸಮಾಜವಾದಕ್ಕೆ ಸರಿ ಹೋಗುತ್ತದೆಯೇ ! ಸಮಾಜವಾದದ ದೃಷ್ಟಿಯಿಂದ ಇದು ಸರಿಯಲ್ಲ. ಈಗ ಕೆಲವರು ರಿಟೈರು ಆದವರು ಅಸೆಂಬ್ಲಿ ಸದಸ್ಯರಾಗಿರುತ್ತಾರೆ. ಇಲ್ಲಿಯೂ ಅವರು ಸಂಬಳವನ್ನು ತೆಗೆದುಕೊಳ್ಳುತ್ತಾರೆ, ಪೆನ್‌ಷನ್ನನ್ನೂ ತೆಗೆದುಕೊಳ್ಳುತ್ತಾರೆ. ಈ ದೃಷ್ಟಿಯಿಂದ ಅದಕ್ಕೆ ಖರ್ಚು ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಮತ್ತು ಸಿಬ್ಬಂದಿವರ್ಗದವರನ್ನು ಕಡಿಮೆ ಮಾಡುವ ದೃಷ್ಟಿಯಿಂದ ರಿಟ್ರೆಂಚ್‌ಮೆಂಟ್ ಜಾರಿಗೆ ತರಬೇಕು. ಈ ಪೇ ಕಮಿಷನ್ ರಿಪೋರ್ಟ್ ಪ್ರಕಾರ 150 ರೂಪಾಯಿ

(ಶ್ರೀ ಕೆ. ಎಚ್. ವೀರಪ್ಪಗೌಡ)

ಗಳಿಗಿಂತ ಕಡಿಮೆ ಸಂಬಳ ಬರುವವರಿಗೆ ಅನುಕೂಲ ಮಾಡಿಕೊಡಬೇಕು. ಈ ಕೆಲವು ವಿಷಯಗಳನ್ನು ನಾನು ವಿನಂತಿ ಮಾಡಿಕೊಂಡು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಬಿ. ಜ್ವಾಲನಯ್ಯ.—ಸನ್ಮಾನ್ಯ ಸಭಾಧ್ಯಕ್ಷರೇ, ಈಗ ಈ ಸಭೆಯ ಮುಂದಿಟ್ಟಿರತಕ್ಕ ಪೇ ಕಮಿಷನ್ ರಿಪೋರ್ಟ್ ಹೇಗಿದೆ ಎಂದರೆ ವಿಶ್ವಾಮಿತ್ರ, ಮೇನಕೆ, ಶಕುಂತಲೆ ಇದ್ದಹಾಗೆ ಇದೆ. ಕೇಂದ್ರ ಸರ್ಕಾರ ವಿಶ್ವಾಮಿತ್ರ, ರಾಜ್ಯ ಸರ್ಕಾರ ಮೇನಕೆ, ಈ ಪೇ ಕಮಿಷನ್ ರಿಪೋರ್ಟ್ ಶಕುಂತಲೆ ಎಂದು ಹೇಳಬಹುದು. ವಿಶ್ವಾಮಿತ್ರ ಮತ್ತು ಮೇನಕೆಯವರು ಶಕುಂತಲೆಯೆಂಬ ಪೇ ಕಮಿಷನ್ ರಿಪೋರ್ಟನು ಕಣ್ವರೋಪಾದಿಯಲ್ಲಿರುವ ಈ ಸಭೆಗೆ ಕೊಟ್ಟಿದ್ದಾರೆ.

ಉಪಾಧ್ಯಕ್ಷರು.—ದುಶ್ಯಂತ ಯಾರು ?

ಶ್ರೀ ಎಚ್. ಬಿ. ಜ್ವಾಲನಯ್ಯ.—ಸ್ವಾಮಿ ತುಕೋಳ್ ಕಮಿಷನ್ನಿನವರು ಈ ವರದಿಯನ್ನು ಬಹಳ ಕಷ್ಟಪಟ್ಟು ಶ್ರಮದಿಂದ ತಯಾರು ಮಾಡಿ ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರ ಶ್ರಮಕ್ಕೆ ನಾವು ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಆದರೆ ಈ ಪೇ ಕಮಿಷನ್ ಏರ್ಪಡಿಸುವಂತಹ ಸಂದರ್ಭದಲ್ಲಿ ಸರ್ಕಾರ ಈ ಸಭೆಯ ಅನುಮತಿಯನ್ನು ಪಡೆಯಲಿಲ್ಲ. ನಮ್ಮ ಹಿರಿಯ ಸದಸ್ಯರಾದ

ಶ್ರೀ ಸಿದ್ದವೀರಪ್ಪನವರು ಹೇಳಿದಹಾಗೆ ಚುನಾವಣೆಯ ಸಂದರ್ಭದಲ್ಲಿ ಯಾವುದೋ ಒಂದು ಭಾಗವನ್ನು ಸಮಾಧಾನ ಮಾಡುವ ದೃಷ್ಟಿಯಲ್ಲಿ ಈ ಪೇ ಕಮಿಷನ್ ಏರ್ಪಡಿಸಿದರು ಎಂದು ಅದಕ್ಕೆ ಸಾಕಷ್ಟು ಆಧಾರಗಳನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ಈ ನಮ್ಮ ನೌಕರ ವರ್ಗದವರು ಹೆಚ್ಚು ಸಂಬಳ ಕೊಡಬೇಕೆಂದು ಕೇಳತಕ್ಕದ್ದು ತಪ್ಪು ಎಂದು ಯಾರು ಹೇಳುವುದಕ್ಕೆ ಸಾಧ್ಯವಿಲ್ಲ. ಈ ವಿಷಯ ಇಡೀ ದೇಶದ ಜನತೆಗೆ ಸಂಬಂಧಪಟ್ಟ, ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಈ ದೃಷ್ಟಿಯಿಂದ ಇದನ್ನು ನಾವು ವಿಮರ್ಶೆ ಮಾಡಬೇಕಾಗಿದೆ. ನಮ್ಮ ರಾಜ್ಯದ ಜನಸಂಖ್ಯೆ 2½ ಕೋಟಿ ಇದೆ. ಶೇಕಡ 78 ಭಾಗ ಜನಗಳು ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡುತ್ತಿದ್ದಾರೆ. ಯಾವುದೇ ತೆರಿಗೆಯನ್ನು ಹಾಕಿದರೂ ಕೂಡ ರೈತ ಕೊಡಬೇಕು. ಯಾವುದೇ ತೆರಿಗೆಯನ್ನು ಹಾಕಿದರೂ ಕೂಡ ಅದು ಕಡೆಯ ಮಟ್ಟದಲ್ಲಿ ಗ್ರಾಮಾಂತರದ ಪ್ರದೇಶದಲ್ಲಿರುವ ವ್ಯಕ್ತಿಯಮೇಲೆ ಬೀಳುತ್ತದೆ. ತೆರಿಗೆಯಿಂದ ಬರತಕ್ಕ ಹಣವನ್ನು ನೌಕರರ ಸಂಬಳಕ್ಕೆ ವಿನಿಯೋಗಿಸಬೇಕು. ಮಾನ್ಯ ಪಾರ್ಲಿಮೆಂಟರಿ ಶಾಖೆಯ ಮಂತ್ರಿಗಳು ನಮಗೆ ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಈ ತುಕೋಳ್ ಕಮಿಷನ್ ವರದಿಯನ್ನು ಒಪ್ಪಿದ್ದೇ ಆದರೆ ಮೊದಲನೆಯ ವರ್ಷ 17.85 ಕೋಟಿ ರೂಪಾಯಿಗಳು ಹೆಚ್ಚುವರಿ ಹಣ ಬೇಕಾಗುತ್ತದೆ. ಅದು ಕ್ರಮೇಣ 22.43 ಕೋಟಿ ರೂಪಾಯಿಗಳಿಗೆ ಹೋಗುತ್ತದೆ ಎಂದು ಹೇಳಿದ್ದಾರೆ. ಈ ಪೇ ಕಮಿಷನ್ ರಿಪೋರ್ಟಿನ ಟರ್ಮ್ಸ್ ಅಂಡ್ ರೆಫರೆನ್ಸ್‌ನ ಪರಿಮಿತಿಯೊಳಗೆ ಯಾವು ಯಾವುದು ಬರುತ್ತದೆಯೋ ಎಂದರೆ ಸರ್ಕಾರಿ ನೌಕರರು, ಲೋಕಲ್ ಬಾಡೀಸ್ ನೌಕರರು, ಏಯ್ಡೆಡ್ ಇನ್‌ಸ್ಟಿಟ್ಯೂಷನ್‌ಗಳು ಇವರೆಲ್ಲರಿಗೂ ಎಷ್ಟು ದುಡ್ಡು ಬೇಕಾಗುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದರ ಬಗ್ಗೆ ಏನಾದರೂ ರೀ ಆಕ್ಷನ್ ಇದೆಯೋ ಅಥವಾ ಇಲ್ಲವೇ ಎಂಬುದನ್ನೂ ಸಹ ನಾವು ಯೋಚನೆ ಮಾಡಬೇಕಾಗಿದೆ. ಲೋಕಲ್ ಬಾಡೀಸ್, ಏಯ್ಡೆಡ್ ಇನ್‌ಸ್ಟಿಟ್ಯೂಷನ್‌ಗಳು ತನ್ನ ಸಿಬ್ಬಂದಿವರ್ಗದವರಿಗೆ ಒಂದು ಸಂಬಳವನ್ನು ನಿಗದಿ ಮಾಡುವ ಸಂಧರ್ಭದಲ್ಲಿ ಕೆಲವು ರೀ ಆಕ್ಷನ್‌ಗಳು ಬರಬಹುದು ಅನಿಸುತ್ತದೆ. ಮೂಲತಃ ನೌಕರರ ಸಂಬಳವನ್ನು ಹೆಚ್ಚಿಸಬೇಕು ಎನ್ನುವ ಸಮಸ್ಯೆ ಈ ಸಭೆಯ ಮುಂದೆ ಬಂದಿದೆ. ಯಾವಾಗ ಆಹಾರ ಪದಾರ್ಥಗಳ ಮತ್ತು ಜೀವನಕ್ಕೆ ಬೇಕಾದ ಇತರ ವಸ್ತುಗಳ ಬೆಲೆಗಳು ಗಂಟೆಗಂಟೆಗೂ ಏರಿದ ಸಂದರ್ಭದಲ್ಲಿ ಈ ನೌಕರ ವರ್ಗದವರು ಹೆಚ್ಚಿನ ಸಂಬಳ ಸಾರಿಗೆಗಳನ್ನು ಕೇಳುವುದಕ್ಕೆ ಪ್ರಾರಂಭ ಮಾಡಿದರು. ಈ ಬೆಲೆಗಳು ಗಗನಕ್ಕೇರುವುದಕ್ಕೆ ಸರ್ಕಾರದವರೇ ಕಾರಣವೆಂದು ನಾವು ಹೇಳಬಹುದು. ನಮ್ಮ ಮುಖಂಡರಾದ ಶ್ರೀ ಶಿವಪ್ಪನವರು ಹೇಳಿದಂತೆ 20 ಸಾವಿರ ಕೋಟಿ ರೂಪಾಯಿಗಳನ್ನು ನಮ್ಮ ಇಂಡಿಯಾ ದೇಶದಲ್ಲಿ ಯೋಜನೆಗಳ ಕಾಲದಲ್ಲಿ ಖರ್ಚು ಮಾಡಿದರೂ ಕೂಡ ಜನರು ದಿನದಿಂದ ದಿನಕ್ಕೆ ಕಷ್ಟದ ಕಡೆಗೇ ಹೋಗುತ್ತಿದ್ದಾರೆ. ರಾಮರಾಜ್ಯದ ಕಡೆಗೆ ಇವರು ಹೋಗುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿ ಆಗುವುದಕ್ಕೆ ಈಗಿನ ಒಂದು ಸರ್ಕಾರವೇ ಕಾರಣವೆಂದು ಹೇಳಬಹುದು. ಮೈಸೂರು ಸಂಸ್ಥಾನದ ಒಂದು ಉತ್ಪತ್ತಿ ಮತ್ತು ಖರ್ಚುಗಳನ್ನು ನೋಡುವುದಾದರೆ, ನಮ್ಮ ಪಾರ್ಲಿಮೆಂಟ್

ಮಂತ್ರಿಗಳು ಹೇಳಿದಾಗೆ ಈ ವರದಿಯನ್ನು ಅನುಷ್ಠಾನಕ್ಕೆ ತಂದರೆ ಒಟ್ಟು ಉತ್ಪತ್ತಿಯಲ್ಲಿ ಶೇಕಡ 53 ರಷ್ಟು ಹಣ ವೆಚ್ಚವಾಗುತ್ತದೆ. ಉಳಿದ 47 ಪರ್‌ಸೆಂಟ್ ಹಣವನ್ನು ರಾಜ್ಯದ ಅಭಿವೃದ್ಧಿಗೆ ಮತ್ತು ಯೋಜನೆಗಳಿಗೆ ಖರ್ಚು ಮಾಡಬೇಕಾಗುತ್ತದೆ. 53 ಪರ್‌ಸೆಂಟ್ ಹಣವನ್ನು ದೇಶದ ಅಖಂಡ ಜನಸಂಖ್ಯೆಯಲ್ಲಿ ಎಷ್ಟು ಜನ ಪಡೆಯುತ್ತಾರೆ ಮತ್ತು ಇದರಿಂದ ಬೇರೆಯವರ ಮೇಲೆ ಯಾವ ರೀತಿ ಪರಿಣಾಮ ಉಂಟಾಗುತ್ತದೆ ಎಂಬುದನ್ನು ನೋಡಬೇಕಾಗಿದೆ. ಅಡಿಷನಲ್ ರಿಸೋರ್ಸಸ್‌ನ್ನು ಯಾವ ರೀತಿಯಿಂದ ಪಡೆಯಬಹುದು ಎಂಬುದನ್ನು ತುಕೋಳ್ ಅವರು ತಿಳಿಸಿದ್ದಾರೆ. ಇದರಲ್ಲಿ ಮದುವೆ ಮಾಡಿಕೊಳ್ಳುವವರು ರಿಜಿಸ್ಟರ್ ಮಾಡಿಸಬೇಕು ಎಂಬುದು ಒಂದು. ಆ ಮೂಲಕ ಹಣವನ್ನು ಪಡೆಯಬಹುದೆಂದು ಹೇಳಿದ್ದಾರೆ. ಮದುವೆ ಮಾಡಿಕೊಳ್ಳುವವರು ಕ್ಯೂನಲ್ಲಿ ನಿಂತು ರಿಜಿಸ್ಟರ್ ಮಾಡಿಸಿಕೊಳ್ಳುವುದು ನಮ್ಮ ಒಂದು ಸಂಸ್ಕೃತಿಗೆ ಒಳಪಡುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ವ್ಯವಸಾಯದ ಮೇಲೆ ಆದಾಯ ತೆರಿಗೆಯನ್ನು ಹಾಕಬಹುದೆಂದು ಸಲಹೆ ಮಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರಲ್ಲಿ ಉಳಿತಾಯವಾಗುವ ಸಂದರ್ಭವೇ ಇಲ್ಲವೆಂದು ನನಗನ್ನಿಸುತ್ತದೆ. ಇವತ್ತಿನದಿವಸ ದಿನದಿನಕ್ಕೆ ಬೇಕಾಗುವ ಕನಿಷ್ಠ ಕೂಲಿಯನ್ನು ಸಹ ಪಡೆಯುವುದಕ್ಕೆ ರೈತವರ್ಗಕ್ಕೆ ಸಾಧ್ಯವಾಗುತ್ತಿಲ್ಲ. ಒಂದು ರೀತಿಯಲ್ಲಿ ಇವರು ನಿರುದ್ಯೋಗಿಗಳಾಗಿದ್ದಾರೆಂದು ಹೇಳಬಹುದು. ಇವತ್ತಿನ ದಿನಸ ನಾವುಗಳು ಯಾವ ಒಬ್ಬ ರೈತನ ಮೈಮೇಲೆ ಸರಿಯಾದ ಬಟ್ಟೆ ಇರುವುದನ್ನು ನೋಡುತ್ತಿಲ್ಲ. ಇಷ್ಟು ಯೋಜನೆಗಳು ಮುಗಿದಿದ್ದರೂ ಸಹ ಜನರು ಸೊಸೈಟಿಯ ಮುಂದೆ ಆಹಾರಕ್ಕಾಗಿ ಕ್ಯೂ ನಿಲ್ಲುವುದು ತಪ್ಪಲಿಲ್ಲ. ಇಂತಹ ರೈತರ ಮೇಲೆ ಮತ್ತೆ ಟ್ಯಾಕ್ಸ್ ಹಾಕುವುದು ಸರಿಯಲ್ಲ. ಸರ್ಕಾರೀ ನೌಕರರಿಗೆ ಸಂಬಳಗಳನ್ನು ಹೆಚ್ಚಿಸ ಬಾರದು ಎಂದು ನಾನು ಹೇಳುತ್ತಿಲ್ಲ. ನಮ್ಮ ಒಟ್ಟು ಆದಾಯದಲ್ಲಿ ಕೇವಲ ನೌಕರರ ಸಂಬಳಕ್ಕಾಗಿ 53 ಪರ್‌ಸೆಂಟನ್ನು ವಿನಿಯೋಗಿಸುವುದು ಸರಿಯೇ ಅಲ್ಲವೇ ಎಂಬುದು ನಮ್ಮ ಮುಂದಿರುವ ಒಂದು ಸಮಸ್ಯೆ. ಇದುವರೆಗೆ ಸರ್ಕಾರದವರು ಅನೇಕ ಪೇ-ಕಮಿಷನ್‌ಗಳನ್ನು ನೇಮಕ ಮಾಡಿದ್ದಾರೆ. ಮತ್ತು ಆ ಸಮಯದಲ್ಲಿ ಸರ್ಕಾರದವರೇ ಒಂದು ತೀರ್ಮಾನ ತಗೆದು ಕೊಂಡು ಎಷ್ಟೆಷ್ಟು ಕೊಡಬಹುದು ಎಂಬುದನ್ನು ತೀರ್ಮಾನಿಸಿ ನಮ್ಮಗಳ ಸಲಹೆ ಕೇಳದೆ ಕೊಟ್ಟಿದ್ದಾರೆ. ಈಗ ಏನಾಗಿದೆಯೆಂದರೆ; 1966ರಲ್ಲಿ ಪೇ-ಕಮಿಷನನ್ನು ರಚನೆ ಮಾಡಿದರು. ಈಗ ಅದರ ವರದಿಯಂತೆ ಅನುಷ್ಠಾನಕ್ಕೆ ತಂದರೆ ಎಷ್ಟು ವೆಚ್ಚವಾಗಬಹುದು ಎಂಬುದನ್ನು ನಮಗೆ ಹೇಳಿ, ಆ ಖರ್ಚನ್ನು ಸರಿದೂಗಿಸಲು ಯಾವ ರೀತಿ ತೆರಿಗೆಯನ್ನು ಹಾಕಬಹುದು ಎಂಬುದನ್ನು ತಿಳಿಸುವುದಕ್ಕೆ ನಮ್ಮಕಡೆಗೆ ತೋರಿಸುತ್ತಿದ್ದಾರೆ. ಇದಕ್ಕಾಗಿ ಸುಮಾರು 23 ಕೋಟಿ ರೂಪಾಯಿಗಳು ಖರ್ಚಾದರೆ ಅದರ ಒಂದು ಪರಿಣಾಮ ರೈತರ ಮೇಲೆ, ಸಾರ್ವಜನಿಕರ ಮೇಲೆ ಉಂಟಾಗುತ್ತದೆ. ಕಾಫಿ ಎಸ್ಟೇಟ್ ಮಾಲೀಕ ತನ್ನ ನೌಕರರ ಸಂಬಳವನ್ನು ಹೆಚ್ಚು ಮಾಡುತ್ತಾನೆ. ನಂತರ ಕಾಫೀಬೀಜದ ಬೆಲೆ ಜಾಸ್ತಿಯಾಗುತ್ತದೆ. ಈಗ ಎರಡಾಣೆಗೆ ಸಿಗುತ್ತಿರುವ ಟಮಟೋ ಹಣ್ಣು ಎಂಟಾಣೆ ಯಾಗುತ್ತದೆ. ಜನರಿಗೆ ಏನಾದರೂ ಸಹಾಯ ಮಾಡಬೇಕೆಂದು ಸರ್ಕಾರದವರು ತೀರ್ಮಾನಿಸುವು ದಾದರೆ ಮೊದಲು ಪ್ರೈಸ್ ಕಂಟ್ರೋಲ್ ಮಾಡಬೇಕಾಗುತ್ತದೆ. ಮೂರು ಮತ್ತು ನಾಲ್ಕನೆಯ ದರ್ಜೆಯ ನೌಕರರುಗಳು ಏನಿದ್ದಾರೆ ಅವರ ಜೀವನ ವೆಚ್ಚವನ್ನು ವಿಂಗಡಣೆ ಮಾಡಿ ನೋಡುವು ದಾದರೆ ಅವರ ಸಂಬಳದ ಶೇಕಡ 45 ರಿಂದ 65ರ ವರೆಗೆ ರೇಷನ್‌ಗೆ ಹೋಗುತ್ತದೆ. ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವೇ ಎಂಬುದನ್ನು ನೋಡುವುದಾದರೆ, 3 ಮತ್ತು 4ನೇ ವರ್ಗದ ನೌಕರರು ಗಳಿಗೆ ಸಬ್ಸಿಡಿ ಮೂಲಕ ಆಹಾರವನ್ನು ಸಪ್ಲೈ ಮಾಡಬೇಕು: ಇದಕ್ಕಾಗಿ 8–10 ಕೋಟಿ ರೂಪಾಯಿ ಗಳು ಖರ್ಚಾದರೂ ಸರಿಯೇ, ಮಾಡುವುದು ಒಳ್ಳೆಯದು. ದೇವರ ದಯದಿಂದ ಇನ್ನು 4–5 ವರ್ಷದವರೆಗೆ ಚೆನ್ನಾಗಿ ಮಳೆಬೆಳೆಯಾದರೆ ತನ್ನಷ್ಟಕ್ಕೆ ತಾನೇ ಮಾರ್ಕೆಟ್ ರೇಟ್‌ಗಳು ಕಡಿಮೆಯಾಗಿ ಸರ್ಕಾರಕ್ಕೆ ಸಬ್ಸಿಡಿ ಮೂಲಕ ಖರ್ಚಾಗುವ ಹಣ ಉಳಿಯುತ್ತದೆ. ಯಾವ ಕಾಲಕ್ಕೂ ರೇಟ್‌ಗಳನ್ನು ಕಡಿಮೆ ಮಾಡುವುದು ಕಷ್ಟವಾಗುತ್ತದೆಂಬ ಇಕ್ಕಟ್ಟಿಗೆ ಸರ್ಕಾರ ಸಿಕ್ಕಿಕೊಂಡು ಈ ವರದಿಯನ್ನು ಅನುಷ್ಠಾನಕ್ಕೆ ತಂದರೆ, ಇದರಿಂದ ಆಗುವ ಪರಿಣಾಮವನ್ನು, ಈ ಒಂದು ತಪ್ಪಿನ ಪ್ರಾಯಶ್ಚಿತ್ತ ವನ್ನು ಶೇಕಡ 92 ಜನರು ಅನುಭವಿಸಬೇಕಾಗುತ್ತದೆಂಬ ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ತುಕೋಳ್ ಕಮಿಷನ್ ಅವರು ಈ ರೀತಿ ಹೇಳಿದ್ದಾರೆ:

> "Though the financial condition of the State cannot be described as prosperous the Commission considers there are two ways by which economic imbalance can be removed. The first course is to reduce administrative expenditure by limiting the strength.

(ಶ್ರೀ ಎಚ್. ಬಿ. ಜ್ವಾಲನಯ್ಯ)

ರೆವಿನ್ಯೂ ಎಷ್ಟು ಇರಬೇಕು, ರೆವಿನ್ಯೂವನ್ನು ಖರ್ಚುಮಾಡುವುದಕ್ಕೆ ಸಿಬ್ಬಂದಿ ಎಷ್ಟು ಇರಬೇಕು ಎಂಬುದನ್ನು ನಾವು ನೋಡಬೇಕಾಗಿದೆ. ಬರತಕ್ಕಂಥ ಆದಾಯದಲ್ಲಿ ಹೆಚ್ಚಿನ ಭಾಗವನ್ನು ಸಿಬ್ಬಂದಿಗಳಿಗಾಗಿಯೇ ಖರ್ಚು ಮಾಡುವುದಾದರೆ ಸಾಬರಿಗಿಂತ ಗಡ್ಡವೇ ಭಾರ ಎಂದು ಹೇಳಿದಂತೆ ಆಗುತ್ತದೆ. ನೌಕರರ ಸಂಬಳವನ್ನು ಕಡಿಮೆ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಅವರ ಅಗತ್ಯಕ್ಕೆ ಬೇಕಾಗತಕ್ಕಂಥ ಸಂಬಳವನ್ನು ಕೊಡಬೇಕಾಗುತ್ತದೆ. ರೆವಿನ್ಯೂ ಆದಾಯ 10 ಭಾಗ ಇದ್ದರೆ ಸಿಬ್ಬಂದಿಗಳ ವೆಚ್ಚ ಒಂದು ಭಾಗ ಇರಬೇಕು. ಆದರೆ ಈಗ ಆದಾಯದಲ್ಲಿ ಶೇಕಡ 53ರಷ್ಟು ಸಂಬಳಕ್ಕೆ ಕೊಡಬೇಕಾದ ಸ್ಥಿತಿ ಬಂದಿದೆ. ಇದಕ್ಕೆ ಕಾರಣವೆಂದರೆ ನಮ್ಮ ಪ್ಲಾನ್‌ಗಳು ಕೊಟ್ಟ ವಿಷದ ಫಲ ಎಂದು ಹೇಳಬಹುದು. ಪ್ಲಾನ್ ತಯಾರಾಗುವುದಕ್ಕೆ ಮೊದಲೇ ಸಿಬ್ಬಂಧಿಗಳನ್ನು ನೇಮಕ ಮಾಡಿ, ಸಂಬಂಧಪಟ್ಟ ಪ್ಲಾನ್‌ಗಾಗಿ ಎಷ್ಟು ಖರ್ಚಾಗಬೇಕೆಂದು ನಿಗದಿಯಾಗಿರುತ್ತದೋ ಅದರ ಹೆಚ್ಚಿನ ಭಾಗ ಸಿಬ್ಬಂಧಿಗಳಿಗಾಗಿ ಖರ್ಚಾಗಿ ಯೋಜನೆಗಳು ಮಾತ್ರ ಪೂರ್ತಿಯಾಗಲಿಲ್ಲ. ಸಿಬ್ಬಂದಿ ವರ್ಗ ಮಾತ್ರ ಹಾಗೆಯೇ ಉಳಿಯಿತು. ಇವರಿಗೆ ಸಂಬಳ ಕೊಡುವುದು ಮಾತ್ರ ತಪ್ಪಲಿಲ್ಲ, ಆಫೀಸ್‌ಗಳಿಗೆ ಬಾಡಿಗೆ ಕೊಡುವುದು ತಪ್ಪಲಿಲ್ಲ. ಈ ಸಿಬ್ಬಂದಿ ವರ್ಗ ಭೂತ-ರಾಕ್ಷಸರಂತೆ ಬೆಳೆದು ಸರ್ಕಾರವನ್ನೇ ತಿನ್ನುವುದಕ್ಕೆ ಬಂದಿದೆ, ನಮಗೆ ಪರಿಹಾರವನ್ನು ಮಾಡಿಕೊಡಿ ಎಂದು ನಮ್ಮನ್ನು ಈ ಸರ್ಕಾರದವರು ಕೇಳುತ್ತಿದ್ದಾರೆ. ನಮ್ಮ ಖರ್ಚು ಮತ್ತು ಆದಾಯವನ್ನು ಸಮವಾಗಿ ಸರಿದೂಗಿಸಬೇಕಾದರೆ ಸಿಬ್ಬಂದಿಗಳಿಗಾಗಿ ಒಟ್ಟು ಆದಾಯದಲ್ಲಿ ಒಂದು ಅಥವಾ ಎರಡು ಪರ್‌ಸೆಂಟ್‌ಗಿಂತ ಜಾಸ್ತಿ ಖರ್ಚು ಮಾಡಬಾರದು. ಯಾವ ಯಾವ ವಿಭಾಗಗಳಲ್ಲಿ ಎಷ್ಟೆಷ್ಟು ಸಿಬ್ಬಂದಿಗಳು ಇರಬೇಕೆಂದು ಸರ್ಕಾರ ಯೋಚನೆ ಮಾಡಬೇಕು. ಇವತ್ತು ಸಹಕಾರ ಇಲಾಖೆಯನ್ನೇ ತೆಗೆದುಕೊಂಡರೆ ರಿಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್‌ಗಳು, ಡೆಪ್ಯೂಟಿ ರಿಜಿಸ್ಟ್ರಾರ್‌ಗಳು, ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳು ಎಂಬುದಾಗಿ ಬೇಕಾದಷ್ಟು ಜನ ಅಧಿಕಾರಿಗಳು ಇದ್ದಾರೆ. ಹಿಂದೆ ರಾಜ ಮಹಾರಾಜರುಗಳ ಕಾಲದಲ್ಲಿ ಅವರ ಬಟ್ಟೆಯನ್ನು ಹಿಡಿದುಕೊಳ್ಳುವುದಕ್ಕೆ ಜನರು ಇದ್ದಂತೆ ಈ ಅಧಿಕಾರಿಗಳು ಜಾಸ್ತಿಯಾಗಿದ್ದಾರೆ: ಇವತ್ತಿನದಿವಸ ಸಹಕಾರ ಇಲಾಖೆಯಲ್ಲಿ 8-10 ಕೋಟಿ ರೂಪಾಯಿಗಳಷ್ಟು ಹಳೆ ಬಾಕಿ ಬದ್ದಿದೆ. ಸರ್ಕಾರದವರು ನಡೆಸುತ್ತಿರುವ ಕೈಗಾರಿಕೆಗಳಲ್ಲಿ ನಾಲ್ಕೂವರೆ ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಕೈಗಾರಿಕೆಗಳಲ್ಲಿ ಬರುವ ಆದಾಯದಲ್ಲಿ ಹೆಚ್ಚಿನ ಭಾಗ ಸಿಬ್ಬಂಧಿಗಳಿಗಾಗಿಯೇ ಖರ್ಚಾಗುತ್ತಿದೆ. ಇವತ್ತಿನದಿವಸ ಡಾಕ್ಟರ್‌ಗಳು, ಲಾಯರ್‌ಗಳು, ರೈತರುಗಳು ತಮ್ಮ ಆದಾಯದಲ್ಲಿ ಉಳಿತಾಯವನ್ನೇ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಾರಣ ಅವರು ಅಷ್ಟೊಂದು ತೆರಿಗೆಯನ್ನು ಕೊಡಬೇಕಾಗಿದೆ. ಇವತ್ತಿನ ದಿವಸ ಸರ್ಕಾರದ ಧೋರಣೆ ಏನಿದೆಯೆಂದರೆ ತಮ್ಮ ಆಪ್ತರಿಗೆ ಸ್ಥಾನ ಕಲ್ಪಿಸಿಕೊಡಬೇಕೆಂಬ ಕಾರಣದಿಂದ ಆಫೀಸರ್‌ಗಳ ಹುದ್ದೆಗಳನ್ನು ಹೆಚ್ಚಿಸುತ್ತಿದ್ದಾರೆ. ಈ ಮೂಲಕ ರಾಜ್ಯದ ಹಣವನ್ನು ಪಿಂಡಪ್ರೋಲು ಮಾಡುತ್ತಿದ್ದಾರೆ. ಈ ರೀತಿ ಮಾಡುತ್ತಿರುವುದು ತಪ್ಪು. ವರ್ಕ್‌ಲೋಡು ಎಷ್ಟು ಇರಬೇಕು ಮತ್ತು ಒಬ್ಬರು ಎಷ್ಟು ಪೇಪರುಗಳನ್ನು ಕ್ಲಿಯರ್ ಮಾಡುತ್ತಾರೆ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಇಲ್ಲಿ ಹೇಳಿದರು. ಅವರೇ ಹೇಳಿದಂತೆ ಹೆಚ್ಚು ಜನರನ್ನು ಕೆಲಸಕ್ಕೆ ನೇಮಿಸಿದರೆ ಕೆಲಸಗಳೇ ಆಗುವುದಿಲ್ಲ. ಇದು ಹೇಗಿದೆ ಎಂದರೆ ಒಂದು ದೇವಸ್ಥಾನದಲ್ಲಿ ದೇವರಿಗೆ ಅಭಿಷೇಕ ಮಾಡಬೇಕೆಂದು ಅಲ್ಲಿನ ಅರ್ಚಕರು ಹಾಲನ್ನು ಎಲ್ಲರೂ ಸ್ವಲ್ಪ ಸ್ವಲ್ಪ ತರಬೇಕು ಎಂದು ಹೇಳಿದರು. ಆಗ ಎಲ್ಲರೂ ಹಾಲು ತಂದರೆ ತಾನು ಒಂದು ಲೋಟ ನೀರು ತಂದು ಹಾಕಿದರೆ ಅದನ್ನು ಯಾರು ನೋಡುತ್ತಿರುತ್ತಾರೆ ಎಂದು ತಿಳಿದು ಒಬ್ಬರು ಒಂದು ಲೋಟ ನೀರು ತಂದು ಬೆರಸಿದರು. ಅವನಂತೆ ಇತರರೂ ಯೋಚಿಸಿ ಅವರೂ ಕೂಡ ನೀರನ್ನೇ ತಂದು ಹಾಕಿದರಂತೆ. ಆಗ ಹಾಲಿಗೆ ಬದಲು ಎಲ್ಲಾ ನೀರೇ ಇತ್ತಂತೆ. ಹೀಗೆ ಹೆಚ್ಚು ಜನರನ್ನು ಕೆಲಸಕ್ಕೆ ನೇಮಿಸಿಕೊಂಡರೆ ಕೆಲಸಗಳು ಯಾವುದೂ ಸರಿಯಾಗಿ ಆಗುವುದಿಲ್ಲ. ಒಂದೊಂದು ಕಡೆ ಹೇಳುತ್ತೀರಿ ರೈತ ಇಂದು ದೇಶದ ಒಡೆಯ ಅವನು ಬೆಳೆದು ದಾಸ್ತಾನು ಮಾಡಿದರೇನೇ ಅವನಿಂದ ನಾವು ದವಸಗಳನ್ನು ಪಡೆಯುವುದು ಎಂದು. ಆದರೆ ಅವನಿಗೆ ಸರಿಯಾದ ಸ್ಥಾನ ಮಾನಗಳನ್ನು ಕೊಡುತ್ತಿಲ್ಲ. ಇನ್ನು ಒಂದು ವಿಚಾರ ಇಲ್ಲಿ ಹೇಳಬೇಕು ಎಂದರೆ ಈವೊತ್ತು ಯಾರಾದರೂ ಒಬ್ಬರು ಬಡವರು ಔಷಧಿಗಾಗಿ ಆಸ್ಪತ್ರೆಗೆ ಬಂದರೆ ಔಷಧಿ ಸಿಗುವುದಿಲ್ಲ. ಯಾರಾದರೂ ಒಬ್ಬರು ಬಡವರು ಒಂದು ವಾರ್ಡು ಬೇಕು ಎಂದು ಬಂದರೆ ಅವನಿಗೆ ಅಲ್ಲಿ ಒಂದು ಸ್ಥಾನ ಸಿಗುವುದಿಲ್ಲ. ಅದಕ್ಕಾಗಿ ಅವನು ಒಬ್ಬರು ಪುಡಾರಿಗಳನ್ನು ಆಶ್ರಯ ಮಾಡಬೇಕು. ಹೀಗೆ ಇದೆ ಇಂದಿನ ಆಸ್ಪತ್ರೆಗಳ ಸ್ಥಿತಿ. ಅಲ್ಲದೆ ನಾನು ಒಂದು ಕಡೆ ನನ್ನ ಕಾನ್‌ಸ್ಟಿಟುಯೆನ್ಸಿಯಲ್ಲಿ ಸಂಚಾರ ಮಾಡುತ್ತಿದ್ದಾಗ ಒಂದು ವಿದ್ಯಾ ಶಾಲೆಗೆ ಹೋಗಿದ್ದೆ. ಅಲ್ಲಿನ ಉಪಾಧ್ಯಾಯರು ಸ್ಕೂಲಿನಲ್ಲಿ

ಇಂಡಿಯಾ ದೇಶದ ಮ್ಯಾಪ್ ಒಂದನ್ನು ಇಟ್ಟಿದ್ದರು. ಅದು ಪಾಕೀಸ್ಥಾನ ಮತ್ತು ಹಿಂದೂಸ್ಥಾನ ಒಂದಾಗಿದ್ದ ಹಳೇ ಕಾಲದ ಮ್ಯಾಪು. ಪಾಕೀಸ್ಥಾನ ಹಿಂದೂಸ್ಥಾನದಿಂದ ಬೇರೆಯಾಗಿದೆ ಎನ್ನುವುದೇ ಅಲ್ಲಿನ ಉಪಾಧ್ಯಾಯರಿಗೆ ಗೊತ್ತಿರಲಿಲ್ಲ. ಇದೇ ಮ್ಯಾಪನ್ನು ಇಟ್ಟುಕೊಂಡು ಹುಡುಗರಿಗೆ ಪಾಠಗಳನ್ನು ಹೇಳಿದರೆ ಎಷ್ಟು ಸರಿಯಾಗಿರುತ್ತದೆ ಎನ್ನುವುದನ್ನು ತಾವೇ ಯೋಚಿಸಬೇಕು. ಹೈಸ್ಕೂಲುಗಳಲ್ಲಿ ಟೆಸ್ಟ್ ಟ್ಯೂಬು ಎನ್ನುವುದೇ ಇರುವುದಿಲ್ಲ. ಅವರು ಹುಡುಗರಿಗೆ ಬೋರ್ಡಿನ ಮೇಲೆ ಟೆಸ್ಟ್ ಟ್ಯೂಬಿನ ಚಿತ್ರ ಬರೆದು ಹೀಗಿರುತ್ತದೆ ಎಂದು ಹೇಳಿದರೆ ಅದರಿಂದ ಹುಡುಗರಿಗೆ ಸರಿಯಾದ ತಿಳುವಳಿಕೆ ಬಂದಂತಾಗುತ್ತದೆಯೇ? ನಾವು ಕೊಟ್ಟ ಹಣಕ್ಕೆ ಸರಿಯಾದ ಪ್ರತಿಫಲ ದೊರೆಯದಿದ್ದರೆ ಅದರಿಂದೇನು ಪ್ರಯೋಜನ ಸಿಕ್ಕಿದಂತಾಗುತ್ತದೆ? ಸಾರ್ವಜನಿಕ ದೃಷ್ಟಿಯಲ್ಲಿ ಇಂತಹ ಕೆಲಸಗಳನ್ನು ಮಾಡುವುದರಿಂದೇನೂ ಪ್ರಯೋಜನವಿಲ್ಲ. ಅಲ್ಲದೆ ಇತರರನ್ನು ಅನುಕರಣ ಮಾಡುವ ಬುದ್ಧಿಯೂ ಇಲ್ಲ. ಸರಕಾರದವರು ಇನ್ನು ಮುಂದೆ ಹೆಚ್ಚು ಟ್ಯಾಕ್ಸುಗಳನ್ನು ಜನರಮೇಲೆ ಹೊರಿಸಬೇಕು ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಜನರ ಮೇಲೆ ಇನ್ನು ಹೆಚ್ಚು ಹೊರೆ ಹೊರಲು ಜನರಲ್ಲಿ ಶಕ್ತಿಇಲ್ಲ ಎನ್ನುವುದನ್ನು ಸ್ಪಷ್ಟವಾಗಿ ಈಗಾಗಲೇ ಅನೇಕರು ಇಲ್ಲಿ ಹೇಳಿರುತ್ತಾರೆ. ಸರಕಾರ ಬೇರಾವ ರೀತಿಯಲ್ಲಾದರೂ ಉಳಿತಾಯ ಮಾಡಿ ಇದನ್ನು ಸರಿದೂಗಿಸುವುದು ಅವಶ್ಯಕ. ಉಳುವವನೇ ಭೂಮಿಯ ಒಡೆಯ ಎಂದು ಹೇಳುತ್ತಾರೆಯೇ ವಿನಾ ಅವನ ಸ್ಥಿತಿಗತಿಗಳನ್ನು ಉತ್ತಮಪಡಿಸುತ್ತಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ.

ಇನ್ನು ನಮ್ಮ ಸರಕಾರಕ್ಕೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹಾಗೂ ಎಸ್ಟಿಮೇಟ್ಸ್ ಕಮಿಟಿಯವರು ಆಗಿಂದಾಗ್ಗೆ ವರದಿಗಳನ್ನು ಕೊಡುತ್ತಿದ್ದರೂ ಅದರ ಕಡೆಗೆ ಸರಕಾರ ಗಮನವನ್ನೇ ಕೊಡುತ್ತಿಲ್ಲ. ಅವರಲ್ಲಿ ಅವರು ದುಡ್ಡು ಹೇಗೆ ಖರ್ಚಾಗುತ್ತದೆ ಯಾವ ರೀತಿ ನಿಗಾ ಇಡಬೇಕು ಎನ್ನುವುದರ ಬಗ್ಗೆ ಸೂಕ್ತವಾದ ಸೂಚನೆಗಳನ್ನು ಕೊಡುತ್ತಿದ್ದರೂ ಅದರ ಕಡೆಗೆ ಗಮನವನ್ನೇ ಕೊಡುತ್ತಿಲ್ಲ. ಒಂದು ಸಣ್ಣ ಉದಾಹರಣೆಯನ್ನು ಇಲ್ಲಿ ಕೊಡುತ್ತೇನೆ. ಬಾಣಾವರದಿಂದ ಹಾಸನದವರೆಗೆ ಓರ್ ಕ್ಯಾರೀಯಿಂಗು ರೋಡು ಎಂದು ಮಾಡಬೇಕೆಂದು ಮೊದಲು 42 ಲಕ್ಷ ರೂಪಾಯಿಗಳ ಒಂದು ಅಂದಾಜು ಆಗಿತ್ತು. ಇದಕ್ಕೆ ಸಣ್ಣಸಣ್ಣ ಕಂಟ್ರಾಕ್ಟರುಗಳಿಂದ ಟೆಂಡರುಗಳು ಬೇಕೆಂದು ನೋಟಿಫಿಕೇಷನ್ ಕೊಟ್ಟರು ಅದರಂತೆ ಕೆಲವರು ಶೇಕಡ 8ರಷ್ಟು ಹೆಚ್ಚಿಗೆ ಟೆಂಡರನ್ನು ಕೊಟ್ಟರು. ಸ್ವಲ್ಪ ಸಮಯದ ನಂತರ ಕೇಂದ್ರದವರೇ ಓರ್ ಈ ಕ್ಯಾರಿಯಿಂಗು ರೋಡನ್ನು ಬೇಗನೆ ಮಾಡಬೇಕು ಎಂದು ಹೇಳಿದಾಗ ಹಿಂದೆ ಮಾಡಿದ್ದ 42 ಲಕ್ಷ ರೂಪಾಯಿಗಳ ಎಸ್ಟಿಮೇಟು ಆರು ಕೋಟಿಯವರೆಗೆ ರಿವೈಸು ಆಗಿ ಮೊದಲು ಶೇಕಡ 8 ರಷ್ಟು ಹೆಚ್ಚಿಗೆ ಕೊಡಬೇಕೆಂದು ಇದ್ದುದನ್ನು ಶೇಕಡ 37 ರಷ್ಟು ಹೆಚ್ಚುಮಾಡಿ ಬೇರೆ ಕಡೆಯಿಂದ ಹನ್ನೊಂದು ಜನ ಕಂಟ್ರಾಕ್ಟರುಗಳನ್ನು ತೆಗೆದುಕೊಂಡು ಬಂದು ಯಾರೋ ಒಬ್ಬರು ಕೇಂದ್ರದ ಮಂತ್ರಿಗಳು ಬರುತ್ತಾರೆಂದು 20 ಮೈಲಿ ರೋಡನ್ನು ಬೇಗನೆ ಮಾಡಿಸಿದರು. ಆದರೆ ಕೆಲಸಗಳನ್ನು ಸರಿಯಾಗಿ ಮಾಡದೇ ಇದ್ದ ಕಾರಣದಿಂದಾಗಿ ಮಳೆ ಬಂದ ಕೂಡಲೇ ಅವರು ಹೋದ ಎರಡು ತಿಂಗಳಲ್ಲೇ ಇವೆಲ್ಲಾ ಪೂರ್ತಿ ವಾಷ್ ಔಟ್ ಆಯಿತು. ಹೀಗೆ ಕೆಲಸ ಮಾಡಿದರೆ ಸರಕಾರಕ್ಕೆ ಅನುಕೂಲ ಮಾಡಿದಂತಾಯಿತೇ. ಜನರಿಗೂ ಕೂಡ ತಾಳ್ಮೆ ಎನ್ನುವುದು ಇದೆ ಎಂದು ಹಿಂದೆ ನಮ್ಮ ಪ್ರೊಫೆಸರಾಗಿದ್ದ ಡಾ. ಕೃಷ್ಣಾರವರು ಹೇಳುತ್ತಿದ್ದರು. ತಾಳ್ಮೆ ಎನ್ನುವುದು ಇಂದು ಜೀರೋ ಮಟ್ಟದಿಂದ ಕೆಳಗೆ ಹೋಗಿದೆ. ಆದರೆ ಜನರು ತಾಳ್ಮೆ ಕೆಟ್ಟರೆ, ಅವರೂ ಕೂಡ ಒಂದಲ್ಲ ಒಂದು ದಿನ ಚಾಮುಂಡೇಶ್ವರಿ ಅವತಾರ ಎತ್ತಿದಂತೆ ಆಗಿ ನಿಮ್ಮನ್ನೆಲ್ಲಾ ತುಳಿಯುವ ಕಾಲ ಬಂದೇ ಬರುತ್ತದೆ. ಇದರ ಬಗ್ಗೆ ಸರಕಾರ ಪೂರ್ತಿಯಾಗಿ ಗಮನ ಕೊಡಬೇಕು.

ಇನ್ನು ಸರಕಾರ ಮಂಗಳೂರಿನಲ್ಲಿ ಒಂದು ಡೈರಿ ಸ್ಥಾಪನೆಮಾಡಬೇಕು ಎಂದು ಹೋದ ವರ್ಷ ಅದಕ್ಕೆ ಬೇಕಾದ ಮೆಷಿನರಿಗಳನ್ನು ಫಾರಿನ್ ಎಕ್ಸ್‌ಚೇಂಜು ಕೊಟ್ಟು ತರಿಸಿಕೊಟ್ಟಿದ್ದರು. ಇಂತಹ ಒಳ್ಳೆಯ ಮೆಷನರಿಗಳನ್ನು ತರಿಸಿ ಕೊಟ್ಟಿದ್ದರೂ ಕೂಡ ಇದನ್ನು ಓಪನ್ ಮಾಡದೆ ಅದು ಅಲ್ಲೇ ಕೊಳೆಯುತ್ತಿದೆ. ಇದು ಹಾಳಾಗಿ ಹೋದರೆ ಅದು ಮುಂದೆ ಉಪಯೋಗಕ್ಕೆ ಬರುತ್ತದೆಯೇ ಎನ್ನುವುದರ ಕಡೆಗೆ ಸರಕಾರದ ಲಕ್ಷವೇ ಇಲ್ಲ. ಹೀಗೆ ಸರಕಾರ ಅನುಸರಿಸುತ್ತಿರುವ ನೀತಿಗಳಾಗಿದೆ. ಸುಮ್ಮನೆ ಎಲ್ಲ ಕಡೆಗೂ ಸಿಬ್ಬಂದಿ ಬೇಕು ಎಂದು ಹೆಚ್ಚಿಸಿಕೊಂಡು ಹೋಗುತ್ತಲೇ ಇರುತ್ತಾರೆ. ಆದರೆ ಯಾವುದಕ್ಕೂ ಒಂದು ಮಿತಿ ಇದ್ದಂತೆ ಕಾಣುವುದಿಲ್ಲ., ಪ್ರತಿಯೊಂದು ಡಿಪಾರ್ಟುಮೆಂಟಿನಲ್ಲಿಯೂ ಟೆಸ್ಟ್ ಮಾಡಿ ಎಫಿಷಿಯನ್ಸಿ ಹೇಗಿದೆ ಎನ್ನುವುದನ್ನು ಆಗಾಗ್ಗೆ ನೋಡಬೇಕು. ಇನ್‌ಎಫಿಷಿಯಂಟ್ ಆಗಿರುವವರನ್ನು ರಿಟೈರು ಮಾಡಬೇಕು. ಇದರ ಬಗ್ಗೆ ಸರಕಾರ ಯಾವ ಮಾತನ್ನೂ ಹೇಳಿಲ್ಲ. ಇದನ್ನು ಮಾಡುವುದು ಬಹಳ ಮುಖ್ಯ. ನಮ್ಮ ಸರಕಾರಕ್ಕೆ ಎ.ಜಿ.ಆರ್. ಕಮಿಟಿಯವರು ಒಂದು ರಿಪೋರ್ಟು ಆಗಲೇ ಕೊಟ್ಟಿರುತ್ತಾರೆ.

(ಶ್ರೀ ಎಚ್. ಬಿ. ಜ್ವಾಲನಯ್ಯ)

ಅದರಂತೆ ನೋಡಿದರೆ ಸರಕಾರ ಎಲ್ಲಿ ಉಳಿತಾಯ ಮಾಡಬಹುದು ಎನ್ನುವುದು ಅವರಿಗೆ ಚೆನ್ನಾಗಿ ಅರ್ಥವಾಗುತ್ತದೆ. ಸರಕಾರ ಈ ವರದಿಯಲ್ಲಿರುವಂತೆ ಇಂಪ್ಲಿಮೆಂಟು ಮಾಡಿದರೆ ಅದೇ ಸಾಕು, ಎಷ್ಟೋ ಅನುಕೂಲವಾಗುತ್ತದೆ. ಸರಕಾರವೇನೊ ಆಗಾಗ್ಗೆ ಇಂತಹ ಕಮಿಟಿಗನ್ನು ಮಾಡುತ್ತಿರುತ್ತಾರೆ. ಆ ಕಮಿಟಿಗಳೂ ಸರಕಾರಕ್ಕೆ ರಿಪೋರ್ಟುಗಳನ್ನು ಕೊಡುತ್ತದೆ. ಆದರ ಮುಂದೆ ಅದರ ಬಗ್ಗೆ ಏನಾಗುತ್ತದೋ ಹೇಳುವುದಕ್ಕೆ ಆಗುವುದಿಲ್ಲ. ಮುಖ್ಯವಾಗಿ ಇಂದು ಜನರಿಗೆ ಅವರ ಉತ್ಪತ್ತಿಯಲ್ಲಿ ಏನನ್ನೂ ಉಳಿಸುವುದಕ್ಕೆ ಆಗುವುದಿಲ್ಲ. ಇದಕ್ಕೆ ಕಾರಣ ಇಂದು ಇರುವ ಧಾರಣಿ ವಾಸಿಗಳು. ದಿನ ದಿನಕ್ಕೂ ಪದಾರ್ಥಗಳ ಬೆಲೆ ಏರುತ್ತಲೇ ಇರುತ್ತವೆ. ಇಂತಹ ಕಮಿಷನ್ನಿನ ಸಲಹೆಗಳನ್ನು ಇಂಪ್ಲಿಮೆಂಟು ಮಾಡುವಾಗ ಅನ್‌ಎಂಪ್ಲಾಯ್‌ಮೆಂಟ್ ಒಂದು ಪ್ರಾಬ್ಲಂ ಬರುತ್ತದೆ. ಇದನ್ನೆಲ್ಲಾ ಸಮಗ್ರವಾಗಿ ವಿಚಾರ ಮಾಡಿ ಇದರ ಬಗ್ಗೆ ಸರಿಯಾದ ತೀರ್ಮಾನ ತೆಗೆದುಕೊಳ್ಳಬೇಕು. ಅಲ್ಲದೆ ಸರಕಾರದವರ ನಿರ್ದಿಷ್ಟ ನೀತಿ ಇದರ ಬಗ್ಗೆ ಏನಿದೆ ಎನ್ನುವುದನ್ನು ಸರಿಯಾಗಿ ನಮ್ಮ ಮುಂದೆ ಇಡದೇ ತಮ್ಮ ಜವಾಬುದಾರಿಯನ್ನು ಕಳಚಿಕೊಳ್ಳುವುದಕ್ಕೋಸ್ಕರ ಇಂತಹ ಒಂದು ವರದಿಯನ್ನು ನಮ್ಮ ಮುಂದಿಟ್ಟು ಸಲಹೆಗಳನ್ನು ಕೇಳುತ್ತಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರು ಮೊದಲೇ ಕೇಳಿದ ಹಾಗೆ ಈ ಶಿಫಾರಸ್ಸುಗಳನ್ನು ಕಾರ್ಯಗತ ಮಾಡಲು ಒಂದನೇ ವರ್ಗ, ಎರಡನೇ ವರ್ಗ ಮೂರನೇ ವರ್ಗ ಮತ್ತು ನಾಲ್ಕನೆ ವರ್ಗಗಳಿಗಾಗಿ ಎಷ್ಟು ಹಣ ಬೇಕಾಗಬಹುದು ಎನ್ನುವ ಸ್ಪಷ್ಟ ಚಿತ್ರವನ್ನು ನಮ್ಮ ಮುಂದೆ ಇಡುವುದು ಅವಶ್ಯಕವಾಗಿತ್ತು. ಅಂತಹ ಒಂದು ಸ್ಪಷ್ಟ ಚಿತ್ರ ಇಂದು ನಮ್ಮ ಮುಂದೆ ಇಲ್ಲ. ಇದನ್ನು ಬಿಟ್ಟು ಸರಕಾರ ನಮ್ಮ ಮುಂದೆ ಇಂದು 1500 ಪುಟಗಳ ಒಂದು ದೊಡ್ಡ ರಿಪೋರ್ಟನ್ನು ತಂದು ನಮ್ಮ ಮುಂದೆ ಇಟ್ಟು ಐಟಂ ಬೈ ಐಟಂ ಹೇಳಬೇಕು ಎಂದರೆ ನಮಗೆ ಇದರ ಸ್ಪಷ್ಟವಾದ ಚಿತ್ರ ಗೊತ್ತಿಲ್ಲ. ಇಂದು ನಮ್ಮ ಮೈಸೂರು ಸ್ಟೇಟಿನಲ್ಲಿ ಒಟ್ಟು ರೆವೆನ್ಯೂ ಇದರಲ್ಲಿರುವಂತೆ 170.26 ಎಂದು ಇದೆ. ಇದು ಇನ್ನೂ ಎಷ್ಟು ಜಾಸ್ತಿಯಾಗುತ್ತದೆ ಎನ್ನುವುದು ಗೊತ್ತಿಲ್ಲ. ಇಂದ ನಮ್ಮಲ್ಲಿ ಒಬ್ಬರು ಮಧ್ಯಮ ವರ್ಗದವರು ಅವರ ಮನೆಯಲ್ಲಿ ಒಂದು ಹೊತ್ತಿನ ಊಟ ಮಾಡುವುದೇ ಕಷ್ಟವಾಗಿದೆ. ಏಕೆಂದರೆ ಅವರಿಗೆ ಬರುವ ಉತ್ಪತ್ತಿ ಬಹಳ ಕಡಿಮೆ ಇದೆ. ಅವರು ಮಕ್ಕಳಿಗೆ ಪುಸ್ತಕಗಳನ್ನು ಹೇಗೆ ತಂದುಕೊಡಬೇಕು ? ಮತ್ತು ಮಕ್ಕಳಿಗೆ ಯೂನಿಫಾರಂ ಹೊಲಿಸಿಕೊಡುವುದಕ್ಕೆ ಕೂಡ ಆಗುತ್ತಿಲ್ಲ. ಶೇಕಡಾ 98ರಷ್ಟು ಇರುವ ಜನರೇ ಇಂದು ಬಹಳ ಕಷ್ಟಪಡುತ್ತಿದ್ದಾರೆ. ಆದುದರಿಂದ ಸರಕಾರ ಯಾವ ಯಾವ ಸ್ಕೀಂಗಳನ್ನು ಇಂಪ್ಲಿಮೆಂಟು ಮಾಡಿ ಎಲ್ಲೆಲ್ಲಿ ಉಳಿತಾಯ ಮಾಡಲು ಸಾಧ್ಯ ಎನ್ನುವುದನ್ನು ನಮ್ಮ ಮುಂದೆ ಇಡಬೇಕಾಗಿತ್ತು. ಇವೊತ್ತು ಸುಮ್ಮನೆ ಸಂಬಳ ಹೆಚ್ಚಿಸುತ್ತೇವೆ ಎಂದು ಹೇಳಿದರೆ ಸಾಕು, ಮಾರ್ಕೆಟ್ಟಿನಲ್ಲಿರುವ ತರಕಾರಿಯವರು ಬೆಲೆ ಏರಿಸಿಬಿಡುತ್ತಾರೆ. ಈಗಾಗಲೇ ಟೊಮೇಟೊ ಎಂಟಾಣೆಯಾಗಿದೆ. ಅಕ್ಕಿ ಒಂದು ಕೆಜಿಗೆ ಎರಡು ರೂಪಾಯಿನಿಂದ ಎರಡೂಕಾಲು ರೂಪಾಯಿಗಳಷ್ಟು ಏರಿಹೋಗಿದೆ. ಹೀಗಿರುವಾಗ ನಮ್ಮ ಮುಂದೆ ಸರಕಾರ ಒಂದು ಸಮಗ್ರವಾದ ಚಿತ್ರವನ್ನು ಇಟ್ಟುಕೊಂಡು ಸ್ಪಷ್ಟವಾಗಿ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಸರಿಯಾದ ವಿವರಗಳನ್ನು ಒದಗಿಸಿಕೊಡದೇ ಹೋದರೆ ನಾವು ನಮ್ಮ ಅಭಿಪ್ರಾಯಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇನ್ನು ಇದರಲ್ಲಿ ಡಿವಿಜನಲ್ ಕಮಿಷನರನ್ನು ತೆಗೆಯಬೇಕು. ಇದರ ಬದಲಿಗೆ ಸೂಪರ್‌ಟೈಂ ಸ್ಕೇಲು ಅಧಿಕಾರಿಗಳನ್ನು ನೇಮಿಸಬೇಕು ಎಂದೂ ಹೇಳಿದ್ದಾರೆ. ಯಾವ ಅಧಿಕಾರಿಯನ್ನೇ ಆಗಲಿ ಮನೆಗೆ ಕಳುಹಿಸಬೇಕು, ಎಂದರೆ ಕಷ್ಟ. ಇದಕ್ಕೆ ಬದಲು ನಾನು ಸಲಹೆ ಮಾಡುವುದು ರಿಟೈರು ಆದವರ ಸ್ಥಳದಲ್ಲಿ ಇನ್ನು ಮುಂದೆ ಸ್ವಲ್ಪ ಕಾಲ ಬೇರೆಯವರನ್ನು ತುಂಬುವ ಕೆಲಸವನ್ನಾದರೂ ನಿಲ್ಲಿಸಿ. ಇಂತಹ ಪೋಸ್ಟುಗಳನ್ನು ಫಿರ್‌ಆಫ್ ಮಾಡಲು ಹೋಗಬೇಡಿ.

ಮತ್ತು ನಾಲ್ಕನೇ ಯೋಜನೆಯಲ್ಲಿ ಸಿಬ್ಬಂದಿ ವರ್ಗವನ್ನು ಹೆಚ್ಚು ಮಾಡಬೇಕು ಎಂದಿದ್ದಾರೆ. ಇದರ ಬಗ್ಗೆ ವಿವರಗಳಿಲ್ಲ ಮತ್ತು ಸರಕಾರ ದೇಶದ ಒಂದು ಸಮಗ್ರವಾದ ಒಂದು ಸ್ಪಷ್ಟವಾದ ಚಿತ್ರವನ್ನು ನಮಗೆ ಒದಗಿಸಿಲ್ಲ. ಇನ್ನೂ ರೆವಿನ್ಯೂ ಸ್ಟ್ಯಾಂಪು ದರ ಏರಿಸಬೇಕೆಂದಿದ್ದಾರೆ. ಇದರಿಂದ ಎಷ್ಟು ಹಣ ಬರುತ್ತೆ ಎನ್ನುವುದನ್ನೂ ತಿಳಿಸಲಲ್ಲ. ಇದರ ಬಗ್ಗೆ ಎಲ್ಲ ವಿವರಗಳನ್ನೂ ಕೊಡದೇಹೋದರೆ ನಾವು ನಮ್ಮ ಅಭಿಪ್ರಾಯಗಳನ್ನು ಕೊಡುವುದು ಕಷ್ಟ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P.M.

Half-an-Hour Discussion arising out of Replies to Question No. 42 *re:* Construction of Houses for Scheduled Castes and Scheduled Tribes

† ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಸಭಾಪತಿಗಳೇ, ಈ ಚುಕ್ಕೆ ಗುರುತಿನ 123 (42) ನೆಯ ಪ್ರಶ್ನೆಗೆ ಮಾನ್ಯ ಸಹಕಾರಿ ಉಪಸಚಿವರು ಸಮಾಧಾನಕರವಾದಂಥ ವಿಚಾರಗಳನ್ನು ಹೇಳಲಿಲ್ಲ ಎನ್ನುವಂಥ ವಿಷಯದ ಮೇಲೆ ನಾಲ್ಕು ಮಾತುಗಳನ್ನಾಡಬೇಕಾಗಿದೆ. ಇದು ಮಹತ್ವವಾದಂಥ ವಿಷಯ ಮೈಸೂರು ಹೌಸಿಂಗ್ ಕಾರ್ಪೋರೇಷನ್ನಿನವರು ಅನುಸೂಚಿತ ಜಾತಿ ಮತ್ತು ಅನುಸೂಚಿತ ಅದಿಮ ಜಾತಿಯವರಿಗೆ ಮನೆಗಳನ್ನು ಕಟ್ಟಿಸುವ ವಿಷಯದಲ್ಲಿ ಸುಮಾರು 5-6 ವರ್ಷಗಳಿಂದಲೂ ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಅಪಾದನೆ ಮಾಡುತ್ತಾ ನಾನು ಮೈಸೂರು ರಾಜ್ಯದ ಸಹಕಾರಿ ಮಂತ್ರಿಗಳ ಗಮನಕ್ಕೆ ಅನೇಕ ವಿಷಯಗಳನ್ನು ತರುವ ಇಚ್ಛೆಯಿಂದ ಇವೊತ್ತಿನ ದಿವಸ ಅವರಿಗೆ ಕೆಲವು ಸಲಹೆಗಳನ್ನು ಮಾಡುತ್ತೇನೆ.

ಮಾನ್ಯ ಸಹಕಾರಿ ಮಂತ್ರಿಗಳು ಮೈಸೂರು ರಾಜ್ಯದ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮಜಾತಿಯವರ ಸಹಕಾರೀ ಗೃಹನಿರ್ಮಾಣ ಸಂಸ್ಥೆಗೆ 3-4 ಕೋಟಿ ರೂಪಾಯಿಗಳಷ್ಟು ಮೊಬಲಗು ಮಂಜೂರಾಗಿದೆ ಎಂದು ಹೇಳಿದ್ದಾರೆ. 3–4 ಕೋಟಿ ರೂಪಾಯಿಗಳ ಪೈಕಿ ಹೌಸಿಂಗ್ ಕಾರ್ಪೋರೇಷನ್ನಿನವರು ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿಮ ಜಾತಿಯವರಿಗೆ 1,86,56,900 ರೂಪಾಯಿಗಳಷ್ಟು ಖರ್ಚು ಮಾಡಿದ್ದಾರೆ ಎಂದು ಹೇಳಿದ್ದಾರೆ. ಇನ್ನೂ 1½ ಕೋಟಿ ರೂಪಾಯಿ ಕೊಡಲಿಲ್ಲ ಎನ್ನುವ ವಿಷಯಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಈವೊತ್ತಿನ ದಿವಸ ಮೈಸೂರು ಹೌಸಿಂಗ್ ಕಾರ್ಪೋರೇಷನ್ನಿನಲ್ಲಿ 8,635 ಅರ್ಜಿಗಳು ಸಾಲಕ್ಕಾಗಿ ಬಂದಿದ್ದು ಅವು ಹಾಗೆಯೇ ಉಳಿದಿವೆ. ಇನ್ನೂ 1½ ಕೋಟಿ ರೂಪಾಯನ್ನು ಸರ್ಕಾರ ಮಂಜೂರು ಮಾಡಿದ್ದರೂ ಕೂಡ ಕಾರ್ಪೋರೇಷನ್ನಿನವರೇ ಇಟ್ಟುಕೊಂಡು ಎರಡನೇ ಕಂತಿನ ಹಣ ಇನ್ನೂ ಅವರಿಗೆ ಕೊಟ್ಟಿಲ್ಲ. 17,315 ಮನೆಗಳನ್ನು ಕಟ್ಟಲು ಸಾಲ ಮಂಜೂರಾತಿ ಮಾಡಿದ್ದಾರೆ. ಆದರೆ ಈ ವೊತ್ತಿನ ದಿವಸ ಮೈಸೂರು ಹೌಸಿಂಗ್ ಕಾರ್ಪೋರೇಷನ್ ಛೇರ್ಮನ್‌ರವರನ್ನು ನಾನು ಕೇಳುತ್ತಾ ಇದ್ದೇನೆ. ಏನೆಂದರೆ 17,315 ಮನೆಗಳಲ್ಲಿ ಎಷ್ಟು ಮನೆಗಳು ತಯಾರಾಗಿದೆ ಎಂದು ಉದಾಹರಣೆಗೆ ಹೇಳಬೇಕಾದರೆ ಬಿಜಾಪುರ ಜಿಲ್ಲೆಯಲ್ಲಿ 1,235 ಮನೆಗಳಿಗೆ 27 ಲಕ್ಷ 70 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ ಈವೊತ್ತಿನ ದಿವಸ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದು ಏನೆಂದರೆ ಅದರಲ್ಲಿ 10 ಪರ್ಸೆಂಟ್ ಕೂಡ ಕಂಪ್ಲೀಟ್ ಆಗಿಲ್ಲ ಎಂದು ಹೇಳುತ್ತೇನೆ. ಮನೆ ಕಟ್ಟಲು ಮೊದಲನೇ ಕಂತು ತೆಗೆದುಕೊಂಡಮೇಲೆ ಎರಡನೇ ಕಂತು ಕೊಡಲು 2–3 ವರ್ಷವಾದರೂ ಅವರಿಗೆ ಸಿಕ್ಕಲಿಲ್ಲ. ನಾನು ಕೆಲವು ಹಳ್ಳಿಗಳಿಗೆ ಶಿವಮೊಗ್ಗ ಮತ್ತು ಇತರ ಕಡೆಗಳಿಗೆ ಹೋಗಿ ಹರಿಜನ ಬಾಂಧವರನ್ನು ಹೋಗಿ ವಿಚಾರಿಸಿದ್ದೇನೆ. ಎರಡನೇ ಇನ್‌ಸ್ಟಾಲ್‌ಮೆಂಟ್ ಕೊಡಬೇಕಾದರೆ ಒಂದು ಸರ್ಟಿಫಿಕೇಟ್ ಕೊಡಬೇಕು ಎಂದು ಹೇಳುತ್ತಾರೆ ಅದು ದೊರಕಬೇಕಾದರೆ ಸೂಪರ್‌ವೈಸರ್, ಸೀನಿಯರ್ ಆಫೀಸರ್ ಬಿ.ಡಿ.ಓ ಮತ್ತು ಟೆಕ್ನಿಕಲ್ ಆಫೀಸರ್‌ಸ್ ಈ ಮೂರು ಜನಗಳೂ ಸೇರಿ ಸರ್ಟಿಫೈ ಮಾಡಿದಮೇಲೆ ಎರಡನೇ ಕಂತಿನ ಹಣ ಸಿಗುತ್ತದೆ. ಈ ಸರ್ಟಿಫಿಕೇಟ್ 6 ತಿಂಗಳಿಂದಲೂ ಸಿಕ್ಕುತ್ತಾ ಇಲ್ಲ. ಕಾರಣ ಏನು ಎಂದರೆ ಅವು ಸಿಕ್ಕಬೇಕಾದರೆ 400-500 ರೂಪಾಯಿ ಲಂಚ ಕೊಡಬೇಕು ಎಲ್ಲಿಂದ ಕೊಡೋಣ ಎಂದು ಹೇಳುತ್ತಾರೆ, ಅದಕ್ಕೋಸ್ಕರ ಅವರುಗಳಿಗೆ ಎರಡನೇ ಕಂತಿನ ಹಣ ಸಿಕ್ಕದೇ ಇಂತಹ ಪರಿಸ್ಥಿತಿಗೆ ಒಳಗಾಗಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದುದರಿಂದ ಮಾನ್ಯ ಸಹಕಾರಿ ಮಂತ್ರಿಗಳು ಸೂಪರ್‌ವೈಸರ್, ಟೆಕ್ನಿಕಲ್ ಆಫೀಸರ್‌ಸ್ ಮತ್ತು ಬಿ. ಡಿ.ಓ. ಇವರುಗಳಿಗೆ ಒಂದು ತಿಳುವಳಿಗೆ ಕೊಟ್ಟು ಅವರಿಗೆ ಕೊಡುವ ಮಂತಿಕೆಯನ್ನು ನಿದಾನವಾಗದ ರೀತಿಯಲ್ಲಿ ಕೊಡುವ ಏರ್ಪಾಟನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಸರ್ಟಿಫಿಕೇಟ್ ಕೊಡದೇ ಹೋದರೆ ಎರಡನೇ ಕಂತು ಸಿಕ್ಕುವ ಹಾಗಿಲ್ಲ. ಮಳೆಗಾಲದಲ್ಲಿ ಅರ್ಧ ಕಟ್ಟಿರುವ ಮನೆಗಳು ಪೂರ್ಣ ಆಗದೇ ಇರುವುದರಿಂದ ಬಿದ್ದು ಹೋಗಿವೆ. ಸರ್ಕಾರದವರು ಹರಿಜನರ ಏಳಿಗೆಗಾಗಿ, ಅವರನ್ನು ಸುಖಿಯಾಗಿ ಇಡಬೇಕೆಂದು 3.4 ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದರೂ ಅದು ಸರಿಯಾಗಿ 5–6 ವರ್ಷಗಳಿಂದಲೂ ವಿತರಣೆಯಾಗದೆ ತಡ ಮಾಡುತಿದ್ದಾರೆ. ಇದು ಸರಿಯಾಗಿ ವಿತರಣೆಯಾಗಿದ್ದರೆ ಅವರುಗಳು ಇಂದು ಮನೆಗಳನ್ನು ಕಟ್ಟಿಕೊಂಡು ಸುಖಿಯಾಗಿರಬೇಕಾಗಿತ್ತು, ಎಂದು ಈ ಸಂದರ್ಭದಲ್ಲಿ ನಾನು ಇಲ್ಲಿ ಹೇಳಬಯಸುತ್ತೇನೆ. ಮೇಲಿನ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಹೋದರೆ ಎಷ್ಟು ದಶಕವಾದರೂ ಕೂಡ

(ಶ್ರೀ ಎಸ್. ಎಸ್. ಅರಕೇರಿ)

ಮುಂದುವರಿಯಲು ಸಾಧ್ಯವಾಗುವುದಿಲ್ಲ. ಅಥವಾ ಇಂತಿಷ್ಟು ಹರಿಜನರ ಮನೆಗಳನ್ನು ಕಟ್ಟಲು ಪೂರ್ಣ ಕಾಂಟ್ರ್ಯಾಕ್ಟ್ ತೆಗೆದುಕೊಂಡು ಮುಗಿಸೋಣ ಎಂದು ಮಾಡಿದ್ದರೆ ಎಷ್ಟು ದಶಕದವರಿಗೆ ಮಾಡಬೇಕು ಎಂದು ನಾನು ಕೇಳಬೇಕಾಗಿದೆ. ಸಾಲಕ್ಕಾಗಿ ತಾಲ್ಲೂಕ ಬೋರ್ಡ್ ಪ್ರೆಸಿಡೆಂಟರನ್ನು ಕಾಣುವುದಕ್ಕೆ ಬಂದರೆ ಒಂದು ದಿವಸಕ್ಕೆ 2-3 ರೂಪಾಯಿ ಖರ್ಚು ಮಾಡಿಕೊಂಡು ಬರಬೇಕಾಗು ತ್ತದೆ. ಬಂದರೆ ಪ್ರಸಿಡೆಂಟರು ಇರುವುದಿಲ್ಲ. ಈ ರೀತಿ ಅನೇಕಸಾರಿ ಬಂದು ಕಾಣಬೇಕಾಗಿರು ತ್ತೆ. ನೂರಾರು ರೂಪಾಯಿ ಖರ್ಚಾಗಿರುತ್ತೆ ಹೀಗೆ ಖರ್ಚು ಮಾಡಿಕೊಂಡು ಬಂದರೂ 2-3 ವರ್ಷವಾದರೂ ಸಾಲ ಮಂಜೂರಾತಿ ಆಗಿರುವುದಿಲ್ಲ. ಸರ್ಕಾರದವರು ಮಾಡಿರುವ ಉದ್ದೇಶ ಒಳ್ಳೆಯದಾದರೂ ಮೇಲಧಿಕಾರಿಗಳು ಈ ಅವಿವೇಕದ ಜನರಿಗೆ ಈ ರೀತಿ ತೊಂದರೆ ಕೊಡುವುದು ಸರಿಯಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ವಿಷಯವನ್ನು ಮಾನ್ಯ ಮಂತ್ರಿ ಗಳು ಗಮನಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಇವೊತ್ತಿನ ದಿವಸ 8635 ಅರ್ಜಿಗಳು ಬಂದಿವೆ, ಹೊಸದಾಗಿ ಗ್ರ್ಯಾಂಟು ಬಂದಿಲ್ಲ, ಆದುದರಿಂದ ಅವರಿಗೆ ಕೊಟ್ಟಿಲ್ಲ ಎಂದು ಹೇಳಿದ್ದಾರೆ ಮತ್ತೆ 3 ಕೋಟಿ ರೂಪಾಯಿಯನ್ನು ಕೇಳಿದ್ದೇವೆ ಎಂತಲೂ ಹೇಳಿದ್ದಾರೆ. ಈಗ ಒಂದು ವರ್ಷದಿಂದಲೂ ದುಡ್ಡಿಲ್ಲ ಎಂದು ಸರ್ಕಾರದವರು ಸುಮ್ಮನೆ ಕುಳಿತುಕೊಂಡಿದ್ದಾರೆ, ಅವರಲ್ಲಿ ಹೆಚ್ಚಿಗೆ ಆಸಕ್ತಿ ವಹಿಸಿಲ್ಲ ಎಂದು ಕಾಣುತ್ತದೆ. ಈಗ ಬಂದಿರುವ ಅರ್ಜಿಗಳಿಗೆ ಸಾಲವನ್ನು ಮಂಜೂರು ಮಾಡಬಹುದಾಗಿತ್ತು, ಆದರೂ ಹೊಸದಾಗಿ ಗ್ರ್ಯಾಂಟ್ ಬಂದಿಲ್ಲ ಎಂದು ಕೊಟ್ಟಿಲ್ಲ. ಹರಿಜನರ ಏಳಿಗೆಗಾಗಿ ಏನು ಒಂದು ಸ್ಕೀಮನ್ನು ಇಟ್ಟುಕೊಂಡಿದ್ದಾರೋ ಅದರ ಉದ್ದೇಶ ಒಳ್ಳೆಯದಾದರೂ ಅದನ್ನು ಇನ್ನೂ ಕಾರ್ಯಗತ ಮಾಡಿಲ್ಲ. ಹೌಸಿಂಗ್ ಕಾರ್ಪೋರೇಷನ್ 3-4 ವರ್ಷದಿಂದ ಇದ್ದರೂ ಕೂಡ ಅದು ಸರಿಯಾಗಿ ಕೆಲಸ ಮಾಡಿಲ್ಲ ಎಂದು ಹೇಳಬೇಕಾಗಿದೆ. 2 ವರ್ಷಗಳಿಂದಲೂ ಅಲ್ಲಿಯ ಛೇರ್ಮನ್‌ರವರು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಿಲ್ಲ ಏಕೆಂದರೆ ಅವರಿಗೆ ಅನೇಕ ಡಿಪಾರ್ಟ್‌ಮೆಂಟುಗಳನ್ನು ಕೊಟ್ಟಿರು ತ್ತಾರೆ. ಅವರಿಗೆ ನಾನಾ ಕಾರ್ಯಗಳು ಇರುವುದರಿಂದ ಹರಿಜನರ ಏಳಿಗೆಯ ಬಗ್ಗೆ ಹೆಚ್ಚು ಕೆಲಸ ಮಾಡಲು ಅವಕಾಶ ಇರುವುದಿಲ್ಲ. ಇದರಿಂದ ಹರಿಜನರ ಕಲ್ಯಾಣ ಎಂದಿಗೂ ಆಗುವುದಿಲ್ಲ. ಅದ ಕ್ಕೋಸ್ಕರ ಮಾನ್ಯ ಮಂತ್ರಿಗಳಿಗೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಏನೆಂದರೆ ನಾನ್-ಅಫಿಷಿಯಲ್ಸ್ ಆಗಿರುವವರು ಪ್ರಾಮಾಣಿಕತೆಯಿಂದ ಇರುವವರು ಯಾರನ್ನಾದರೂ ಕಾರ್ಪೋ ರೇಷನ್ ಛೇರ್ಮನ್ ಆಗಿ ಮಾಡಿ, ಹಾಗಿಲ್ಲದಿದ್ದರೆ ಸೀನಿಯರ್ ಐ.ಎ.ಎಸ್. ಆಫೀಸರನ್ನು ಕಾರ್ಪೋ ರೇಷನ್ ಛೇರ್ಮನ್‌ರಾಗಿ ಪೋಸ್ಟ್ ಮಾಡಿ. ಹಾಗೆ ಮಾಡಿದರೆ ಇನ್ನು 15-20 ವರ್ಷದಲ್ಲಿ ಹರಿಜನ ಮತ್ತು ಗಿರಿಜನರ ಬಗ್ಗೆ ಏನನ್ನು ಸಾಧಿಸಬೇಕೋ ಅದು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಯಾವ ಸ್ಕೀಮೂ ಕೂಡ ಸಫಲವಾಗುವುದಿಲ್ಲ. ಮತ್ತು ಡಾ. ಅಂಬೇಡ್ಕರ್‌ರವರೂ ಕೂಡ ಜಾತಿಮತ ಭೇದ ಎಣಿಸಬಾರದು ಮತ್ತು ಅಸ್ಪೃಶ್ಯತೆ ನಿವಾರಣೆಯಾಗಬೇಕು ಎಂದು ಹೇಳಿದ್ದಾರೆ. ಆದರೆ ಇವೊತ್ತಿನ ಪರಿಸ್ಥಿತಿ ಬೇರೆ ರೀತಿಯಾಗಿದೆ. ಅಂದರೆ ಒಂದು ಕತ್ತಿಯನ್ನು ಕಟುಕನ ಕೈಯಲ್ಲಿ ಕೊಟ್ಟರೆ ಪ್ರಾಣವನ್ನು ತೆಗೆಯುತ್ತಾನೆ. ಅದೇ ಕತ್ತಿಯನ್ನು ಡಾಕ್ಟರ್ ಕೈಯ್ಯಲ್ಲಿ ಕೊಟ್ಟರೆ ಪ್ರಾಣವನ್ನು ಉಳಿಸುತ್ತಾನೆ; ಈ ರೀತಿ ಇದೆ. ಆದುದರಿಂದ ನಾನು ಸ್ಪಷ್ಟವಾಗಿ ತಿಳಿಸುತ್ತೇನೆ. ಇವೊತ್ತಿನ ದಿವಸ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗಳ ಪ್ರಗತಿ ಸಾಧಿಸಲು ಖಾಸಗಿ ಮನುಷ್ಯರನ್ನು ಛೇರ್ಮನ್ ಆಗಿ ಮಾಡಿದರೆ ಅವರು ತಮ್ಮ ಎಲ್ಲಾ ಸಮಯಗಳನ್ನೂ ಹರಿಜನರು ಮತ್ತು ಗಿರಿಜನರ ಅಭಿವೃದ್ಧಿ ಸಲುವಾಗಿ ಉಪಯೋಗಿಸಿಕೊಂಡು, ಸರ್ಕಾರದವರು ಹಾಕಿದ ಸ್ಕೀಮು ಸಫಲುಮಾಡುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ ಎನ್ನುವುದನ್ನು ಹೇಳಬಯ ಸುತ್ತೇನೆ. ಈವೊತ್ತಿನ ದಿವಸ ಸೂಪರ್‌ವೈಸರ್, ಬಿ.ಡಿ.ಓ. ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರ್ ಹೀಗೆ ಎಲ್ಲರೂ ನೋಡಿ ಸರ್ಟಿಫೈ ಮಾಡಬೇಕಾಗಿದೆ. ಅದರ ಬದಲಾಗಿ ಸೂಪರ್‌ವೈಸರ್ ಟೆಕ್ನಿಕಲ್ ಹ್ಯಾಂಡ್ ಆಗಿರುವುದರಿಂದ ಅವರು ಒಬ್ಬರು ನೋಡಿ ಸರಿಯಾಗಿ ಪ್ಲಾನ್ ಪ್ರಕಾರ ಕಟ್ಟಿರುತ್ತಾನೆಂದು ತಿಳಿಸಿದ ಮೇಲೆ ಎರಡನೇ ಕಂತನ್ನು ರಿಲೀಸ್ ಮಾಡಿದರೆ ಬಹಳಮಟ್ಟಿಗೆ ಈ ಸಮಸ್ಯೆ ಪರಿಹಾರವಾಗ ಬಹುದು ಎಂದು ಹೇಳುತ್ತಿದ್ದೇನೆ, ಮನೆ ಕಟ್ಟಿಕೊಳ್ಳುವವರಿಗೆ ಅನುಕೂಲವಾಗಬಹುದು ಎಂದು ಹೇಳುತ್ತಿದ್ದೇನೆ. ಈಗಾಗಲೇ 17,315 ಮನೆಗಳಿಗಾಗಿ ಹಣವನ್ನು ಕೊಟ್ಟಿರುವುದರಲ್ಲಿ ಯಾವ ಯಾವ ಮನೆಗಳ ಕೆಲಸ ಎಷ್ಟೆಷ್ಟು ಉಳಿದಿದೆ, ಯಾವ ಯಾವ ಕಾರಣಗಳಿಗಾಗಿ ಕೆಲಸ ಪೂರ್ತಿಯಾಗಿಲ್ಲ ಎನ್ನುವುದನ್ನು ತಿಳಿದುಕೊಳ್ಳಲು ಹಳ್ಳಿ ಹಳ್ಳಿಗೂ ತಾಲ್ಲೂಕಿನ ಪ್ರೆಸಿಡೆಂಟ ರನ್ನು ಕರೆದುಕೊಂಡು ಹೋಗಿ ವಿಚಾರ ಮಾಡಿದರೆ ಎರಡು ಮೂರು ಯುಗಗಳಲ್ಲಿ ಕೆಲಸ ಆಗುವ ಬದಲು ಎರಡು ಮೂರು ವರ್ಷಗಳಲ್ಲಿ ಆಗಲಿಕ್ಕೆ ಸಾಧ್ಯವಿದೆ. ಸುಮಾರು 60 ಲಕ್ಷ ಜನಾಂಗ

ಇರುವ ಹರಿಜನ ಗಿರಿಜನ ಬಾಂಧವರ ಕಲ್ಯಾಣ ಕಿಂಚಿತ್ತಾದರೂ ಆಗಬೇಕಾಗಿದ್ದರೆ, ಅವರಿಗೆ ಮನೆಗಳನ್ನು ಒದಗಿಸಿಕೊಡಬೇಕೆಂಬ ಯಾವ ಮಹಾ ಉದ್ದೇಶವನ್ನು ಇಟ್ಟು ಕೊಂಡಿದ್ದಾರೆ, ಅದು ಸಫಲವಾಗಬೇಕಾದರೆ, ನಾನು ಹೇಳಿರುವ ಸಲಹೆಗಳನ್ನು ಸರ್ಕಾರ ಪರಿಶೀಲಿಸಿ ಆ ಪ್ರಕಾರ ಹೋಗುವುದಾದರೆ ಮನೆಗಳನ್ನು ನಿರ್ಮಿಸಿ ಅವರನ್ನು ಮುಂದೆ ತರಬೇಕು ಮತ್ತು ಅವರನ್ನು ಸುಖಿಯಾಗಿ ಇಡಬೇಕು ಎನ್ನುವ ಕನಸು ನನಸಾಗುತ್ತದೆ. ಗಾಂಧೀಜಿಯವರ ನೂರನೇ ಜನ್ಮ ದಿನೋತ್ಸವವನ್ನು ಈ ವರ್ಷ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಾದರೂ ಹರಿಜನರಿಗೆ ಆಗಬೇಕಾದ ಸೌಕರ್ಯಗಳನ್ನೆಲ್ಲ ಒದಗಿಸಿಕೊಡಬೇಕು. ಕೆಲವರು ಐದಾರು ನೂರು ರೂಪಾಯಿ ಸಾಲ ತೆಗೆದುಕೊಂಡು ಅಷ್ಟು ಹಣವನ್ನು ಖರ್ಚು ಮಾಡಿದ್ದರೂ ಅವರ ಮನೆಗಳು ಪೂರ್ತಿಯಾಗದೆ ಇದ್ದರೆ ಅವರು ಮನೆಗಳನ್ನು ಸರಿಯಾಗಿ ಕಟ್ಟಿಲ್ಲ ಎಂದು ಮೊದಲನೆಯ ಕಂತನ್ನು ಬಡ್ಡಿ ಸಹಿತ ವಾಪಸು ಕೊಡಬೇಕೆಂದು ವಸೂಲ್ಮಾಡುತ್ತಿದ್ದಾರೆ. ಇಂಥ ಅನ್ಯಾಯವನ್ನು ಹೋಗಲಾಡಿಸಬೇಕು. ಮಾನ್ಯ ಸರ್ಕಾರದವರು ಎಲ್ಲ ವಿಷಯಗಳನ್ನೂ ಸಹಾನುಭೂತಿಯಿಂದ ಪರಿಶೀಲಿಸಿ ಮನೆಗಳನ್ನು ಕಟ್ಟುವುದರಲ್ಲಿ ಇರುವಂಥ ಸಮಸ್ಯೆ ಬಗೆಹರಿಯುವಂತೆ ಮಾಡುತ್ತಾರೆಂದು ಆಶಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಂ. ನಾಡಗೌಡ (ಅಭಿವೃದ್ಧಿ ಶಾಖೆಯ ಮಂತ್ರಿಗಳು).— ಮಾನ್ಯ ಸಭಾಪತಿಗಳೇ, ಶ್ರೀಮಾನ್ ಅರಕೇರಿ ಅವರು ಹೇಳಿದಂಥ ಮಾತುಗಳನ್ನು ಸರ್ಕಾರ ಕೇಳಿದೆ ಶ್ರೀಮಾನ್ ಅರಕೇರಿ ಅವರು ಯಾವತ್ತಿಗೂ ನನ್ನ ಕಡೆ ಬರುತ್ತಿದ್ದರು. ಆದರೆ ಈಪೊತ್ತು ಮೊದಲ ಬಾರಿಗೆ ಸರ್ಕಾರಿ ಅಧಿಕಾರಿಗಳ ಮೇಲೆ ಈ ಒಂದು ವ್ಯವಹಾರದಲ್ಲಿ ಹೇಳುತ್ತಿದ್ದಾರೆ. ಅದಕ್ಕೆ ನನಗೆ ಸಖೇದಾಶ್ಚರ್ಯವಾಗುತ್ತದೆ. ಅವರಿಗೆ ವಿಶ್ವಾಸ ಪೂರ್ವಕವಾಗಿ ಹೇಳುತ್ತಿದ್ದೇನೆ, ಯಾವತ್ತಿಗೂ, ಯಾವ ಅಧಿಕಾರಿಗಳ ಮೇಲೆ ಆಕ್ಷೇಪಣೆ ಇದೆ ಮತ್ತು ಯಾರು ಲಂಚ ವಗೈರೆ ತೆಗೆದುಕೊಳ್ಳುತ್ತಿದ್ದಾರೆ ಅವರ ಹೆಸರುಗಳನ್ನು ಕೊಟ್ಟರೆ ಸರ್ಕಾರ ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಅವರಿಗೆ ಆಶ್ವಾಸನೆ ಕೊಡುತ್ತಿದ್ದೇನೆ.

ನಮ್ಮ ರಾಜ್ಯದಲ್ಲಿ ಹರಿಜನ ಗಿರಿಜನರಿಗೆ ಮನೆಗಳನ್ನು ಕಟ್ಟಿಸುವ ಬಗ್ಗೆ ಒಂದು ಕಾರ್ಪೊರೇಷನ್ ಹೊಸದಾಗಿ ಮಾಡಿ ಮೂರು ವರ್ಷವಾಗಿದೆ. ಕಾರ್ಪೊರೇಷನ್ ಮಾಡಿದರೆ ದೀನದಲಿತ ಜನಾಂಗಕ್ಕೆ ಮನೆಮಠಗಳನ್ನು ಕಟ್ಟಿ ಕೊಡುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಉದಾತ್ತ ಧ್ಯೇಯದಿಂದ ಸರ್ಕಾರ ಕಾರ್ಪೊರೇಷನ್ ರಚನೆ ಮಾಡಿತು. ಮೂರು ವರ್ಷದ ಕಾರ್ಯವನ್ನು ನೋಡಿದರೆ ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್‌ನಿಂದ 34ಕೋಟಿ ರೂಪಾಯಿಗಳನ್ನು ತೆಗೆದುಕೊಂಡು 17ಸಾವಿರ ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಸರ್ಕಾರ ಮಂಜೂರು ಮಾಡಿದೆ. ಅದರಲ್ಲಿ ನಾಲ್ಕೂವರೆ ಸಾವಿರ ಮನೆಗಳು ಪೂರ್ತಿಯಾಗಿವೆ. ಮಾನ್ಯ ಅರಕೇರಿ ಅವರು ಹೇಳಿದಂತೆ 1,93,32,000 ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ಒಂದನೇ ಕಂತು 67,14,000 ಕೊಟ್ಟಿದ್ದೇವೆ, ಎರಡನೇ ಕಂತು 86,86,400 ರೂಪಾಯಿ ಕೊಟ್ಟಿದ್ದೇವೆ, ಮೂರನೇ ಕಂತು 39,31,000 ರೂಪಾಯಿಗಳನ್ನು ಕೊಟ್ಟಿದ್ದೇವೆ. ಹೀಗೆ ಒಟ್ಟು 1, 93, 32, 700 ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದಾಗಿದೆ. ಇನ್ನು ಉಳಿದ ಹಣವನ್ನು 17, 300 ಮನೆಗಳನ್ನು ಪೂರ್ತಿ ಮಾಡಲಿಕ್ಕೆ ಇಟ್ಟಿದ್ದೇವೆ. ನಮ್ಮಲ್ಲಿ ಈಗ 8,635 ಅರ್ಜಿಗಳು ಪೆಂಡಿಂಗ್‌ನಲ್ಲಿವೆ ಎಂದು ಮಾನ್ಯ ಸದಸ್ಯರು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಈಗಾಗಲೇ 17,300 ಮನೆಗಳಿಗಾಗಿ ಕೊಡಬೇಕೆಂದು ಇಟ್ಟಿರುವ ಹಣದಲ್ಲಿ ಹೆಚ್ಚು ಹಣ ಉಳಿಯಲಾರದು ಎಂದು ಪೆಂಡಿಂಗ್‌ನಲ್ಲಿರುವ ಅರ್ಜಿಗಳಿಗೆ ಹಣವನ್ನು ಕೊಟ್ಟಿಲ್ಲ. ನಾವು ಮೂರು ವರ್ಷಗಳ ವಿಹಂಗಮ ನೋಟವನ್ನು ನೋಡಿದರೆ ಮೂರು ಯೋಜನೆಗಳಲ್ಲಿ ಏನು ಕೆಲಸವನ್ನು ಮಾಡಲಾಗಿದೆಯೋ ಅದಕ್ಕಿಂತ ಹೆಚ್ಚು ಕೆಲಸವನ್ನು ಮಾಡಲಾಗಿದೆ. ನಾವು ಕಾರ್ಪೊರೇಷನ್ ಮಾಡಿರುವ ಉದ್ದೇಶವೇನೆಂದರೆ ಸರ್ಕಾರದಿಂದ ಏನು ರಕಮು ಕೊಡುತ್ತೇವೆ ಅಷ್ಟು ರಕಮಿಗೆ ಮೂರು ನಾಲ್ಕು ಪಟ್ಟು ಕೊಡಲಿಕ್ಕೆ ಅವಕಾಶವಾಗುತ್ತದೆ ಎಂದು ಕಾರ್ಪೊರೇಷನ್ ವ್ಯವಸ್ಥೆ ಮಾಡಿದ್ದೇವೆ. ಈಗ 8 ಸಾವಿರ ಅರ್ಜಿಗಳು ಏನು ಪೆಂಡಿಂಗ್‌ನಲ್ಲಿವೆ ಅವುಗಳಲ್ಲಿ 6 ಸಾವಿರ ಅರ್ಜಿಗಳು ಕಾರ್ಪೊರೇಷನ್‌ನಲ್ಲಿವೆ, 2 ಸಾವಿರ ಅರ್ಜಿಗಳು ರಾಜ್ಯ ಸರ್ಕಾರದ ಕಚೇರಿಗಳಲ್ಲಿವೆ. ಹೀಗಿದ್ದರೂ ಕೂಡ ಅವುಗಳ ಬಗ್ಗೆ ನಾವು ಎಲ್. ಐ. ಸಿ. ಯಲ್ಲಿ ಆರ್ಥಿಕ ಮಂತ್ರಿಗಳಿಗೆ ಹೇಳಿ ಮತ್ತೆ ಮೂರು ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳಬೇಕೆಂದು ದೀರ್ಘವಾದ ಪ್ರಯತ್ನ ನಡೆದಿದೆ. ಈ ಯೋಜನೆಯನ್ನು ಸ್ಥಗಿತಗೊಳಿಸಬೇಕೆಂಬುದು ಸರ್ಕಾರದ ಉದ್ದೇಶವಲ್ಲ. ಯಾರಿಗಾಗಿ ಮನೆಗಳನ್ನು ಕಟ್ಟಿಕೊಳ್ಳುವ ಸಲುವಾಗಿ ಈ ಕಾರ್ಪೊರೇಷನ್ ರಚನೆಯಾಯಿತು, ಯಾವ ಉದ್ದೇಶಕ್ಕಾಗಿ ಆಯಿತು ಅದರಲ್ಲಿ ಎಷ್ಟರಮಟ್ಟಿಗೆ ಕೆಲಸವಾಗಿದೆ ಎಂದು ನೋಡಿದರೆ ಕಾರ್ಪೊರೇಷನ್ ಯೋಗ್ಯವಾದ ಕೆಲಸವನ್ನು ಮಾಡಿದೆ ಎಂದು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ.

(ಶ್ರೀ ಪಿ. ಎಂ. ನಾಡಗೌಡ)

ಸಮಾಜ ಕಲ್ಯಾಣ ಇಲಾಖೆಯಿಂದ ನಾವು ಈಗಾಗಲೇ 1,72,56,000 ರೂಪಾಯಿಗಳನ್ನು ಸಬ್ಸಿಡಿ ಎಂದು ಒಬ್ಬೊಬ್ಬರಿಗೆ 900 ರೂಪಾಯಿ ಪ್ರಕಾರವಾಗಿ ಕೊಟ್ಟಿದ್ದೇವೆ. ಇತರ ಕಾರ್ಪೊರೇಷನ್‌ಗಳಲ್ಲಿ ಎಂದರೆ ಹೌಸಿಂಗ್ ಕಾರ್ಪೊರೇಷನ್, ಹೌಸಿಂಗ್ ಬೋರ್ಡ್, ಇಂಥ ಕಡೆ ಸಹಿತ ಹರಿಜನ ಗಿರಿಜನರಿಗೆ ವ್ಯವಸ್ಥೆ ಮಾಡಿದೆ. ಅಂದ ಮೇಲೆ ಸರ್ವೇಸಾಮಾನ್ಯವಾಗಿ ಮೈಸೂರು ರಾಜ್ಯದಲ್ಲಿ ಏನು ಪ್ರಗತಿ ನಡೆದಿದೆ ಎಂಬುದನ್ನು ತುಲನಾತ್ಮಕ ದೃಷ್ಟಿಯಿಂದ ನೋಡಲು ಎರಡನೇ ರಾಜ್ಯಗಳಲ್ಲಿನ ಅಂಕಿಅಂಶಗಳನ್ನು ಪಡೆಯಲು ಪ್ರಯತ್ನ ಮಾಡಿದೆ. ಆದರೆ ಆ ಅಂಕಿಗಳು ಸಿಕ್ಕಿಲ್ಲ. ಒಂದು ಮಾತನ್ನು ಧೈರ್ಯವಾಗಿ ಹೇಳಬಹುದು ಏನೆಂದರೆ ಈ ಒಂದುಕ್ಕಿಕೆಲಸ ಚೆನ್ನಾಗಿ ನಡೆದಿದೆ ಮತ್ತು ಇನ್ನು ಮುಂದೆ ಮಾನ್ಯ ಸದಸ್ಯರು ಹೇಳಿದಂಥ ಅಡಚಣೆಗಳು ಬಂದರೆ ಅವುಗಳನ್ನುಪರಿಹಾರ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. ಸರಕಾರಕ್ಕೆ ಬಹಳ ವಿಶ್ವಾಸವಿದೆ, ಕನಿಕರವಿದೆ ಎಂದು ಹೇಳುತ್ತೇನೆ. ಅಧಿಕಾರಿಗಳಿಗೆ ಹೃದಯ ಬೇಕು ಎಂದು ಹೇಳಿದರು, ಅದರ ವಿಚಾರ ಯಾರಿಗೂ ಹೇಳುವುದಕ್ಕಾಗುವುದಿಲ್ಲ; ಶ್ರೀ ಅರಕೇರಿಯವರಿಗೆ ಹೃದಯವಿದೆಯೇ ಎಂಬುದನ್ನು ಸಹ ಹೇಳಲು ಸಾಧ್ಯವಿಲ್ಲ. ನಮ್ಮ ಇಲಾಖೆಯಲ್ಲಿ ಒಬ್ಬರು ಸೆಕ್ರೆಟರಿಗಳಿದ್ದಾರೆ, ಅವರಿಗೂ ಹೃದಯವಿಲ್ಲ ಎಂದು ಹೇಳುವ ಪ್ರಸಂಗ ಬರಬಹುದು, ಅವರು ಶ್ರೀ ಅರಕೇರಿಯವರ ಮಾವ. ಅವರಲ್ಲಿ ಜಗಳ ಹುಟ್ಟಲಿ ಎಂಬ ಉದ್ದೇಶದಿಂದ ಇದನ್ನು ಹೇಳಲಿಲ್ಲ. ಗಿರಿಜನರು ಮತ್ತು ಹರಿಜನರ ವಿಷಯದಲ್ಲಿ ಬಹಳ ವಿಶ್ವಾಸವಿದೆ, ಅವರಿಗೆ ಬಹಳ ಸಹಾಯಮಾಡಿದ್ದೇವೆ. ಕಾರ್ಪೊರೇಷನ್ ಅಧ್ಯಕ್ಷರ ಬಗ್ಗೆ ಮಾತನಾಡಿದ್ದಾರೆ. ಸರಕಾರದ ಫೈನಾನ್‌ಷಿಯಲ್ ಕಮಿಟ್‌ಮೆಂಟ್ ಬಹಳ ದೊಡ್ಡದು ಇದೆ. ಕಾರ್ಪೊರೇಷನ್ನಿನಲ್ಲಿ ನಾನ್ ಅಫಿಷಿಯಲ್ ಛೇರ್ಮನ್ ಮಾಡಬೇಕೆಂದು ಹೇಳಿದರು. ಈಗಿರುವ ವ್ಯವಸ್ಥೆಯನ್ನು ಸಂಬಂಧಪಟ್ಟವರೇ ಮಾಡಿರುವುದು. ನನಗೆ ಚಿಂತೆಯೇನೆಂದರೆ ಇದರ ಇಂಪ್ಲಿಕೇಷನ್ ಮಾನ್ಯ ಮಿತ್ರರಿಗೆ ಗೊತ್ತಾಗುವುದಿಲ್ಲ ಎಂಬುದು. ಕಾರ್ಪೊರೇಷನ್ ಬೈಲಾ ಮಾಡುವಾಗ ಎಲ್ಲರೂ ಒಪ್ಪಿ ಒಬ್ಬ ಅಧಿಕಾರಿ ಇರಬೇಕೆಂದು ಸಲಹೆ ಮಾಡಿದ್ದಾರೆ. ಅವರು ಮಾಡಿರುವ ಕೆಲಸ ಒಪ್ಪಿ ಅಧಿಕಾರಿಯನ್ನು ನೇಮಕಮಾಡಿದ್ದೇವೆ. ಬೇರೆ ಸಲಹೆ ಮಾಡಿದರೆ ವಿಚಾರ ಮಾಡಬಹುದು. ಆದರೆ ಹಣದ ಜವಾಬ್ದಾರಿ ಬಹಳವಿದೆ. ಈ ದಿವಸ ಬೇರೆಯವರನ್ನು ನೇಮಕ ಮಾಡಿದರೆ ಕಷ್ಟವಾಗುತ್ತದೆ. ಆದುದರಿಂದ ಡೆವಲಪ್‌ಮೆಂಟ್ ಕಮಿಷನರನ್ನು ನೇಮಕ ಮಾಡಿದೆ. ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಸರಿಯಾಗಲಾರದೆಂದು ಹಾಗೆ ಮಾಡಿದೆ. ಇನ್ನು ಎರಡು ತಿಂಗಳಲ್ಲಿ ಪುನರ್ಘಟನೆ ಮಾಡುವ ಕಾಲ ಬರುವುದು. 5 ಮಂದಿಯ ಚುನಾವಣೆಯಾಗಬೇಕು, ಸೊಸೈಟಿಯಲ್ಲಿ 170 ಮೆಂಬರುಗಳಿದ್ದಾರೆ, ಚುನಾವಣೆಯಾದಮೇಲೆ 4 ಮಂದಿಯನ್ನು ನಾಮಿನೇಟ್ ಮಾಡಬೇಕು. ಯಾವ ಅಧಿಕಾರಿಗೆ ಹೃದಯವಿದೆಯೆಂಬುದನ್ನು ಶ್ರೀ ಅರಕೇರಿಯವರೇ ಹೇಳಲಿ. ಒಬ್ಬ ಆಫೀಸರ ನೇಮಕ ಮಾಡುವಾಗ ತಕರಾರಿರಲಿಲ್ಲ, ಈಗಿರುವ ಅಧ್ಯಕ್ಷರೂ ಸಹ ಚೆನ್ನಾಗಿ ಕೆಲಸಮಾಡಿದ್ದಾರೆ. ಇಂದು ಯಾವ ಕಾರ್ಪೊರೇಷನ್ ಅಸಂಗತವಾಗುವ ಪರಿಸ್ಥಿತಿ ಬರಬಾರದು. ಮೂರನೆಯ ಕಂತನ್ನು ಕೊಡುವುದಕ್ಕೆ ರೊಕ್ಕಕ್ಕೆ ವ್ಯವಸ್ಥೆ ಮಾಡಿದ್ದೇವೆ. ಯೋಜನೆ ಚೆನ್ನಾಗಿ ಮಾಡಿದ್ದಾರೆ. ಒಂದೇ ಯೋಜನೆಯಲ್ಲ, ಬೇಕಾದಷ್ಟಿವೆ, ರೂರಲ್ ಹೌಸಿಂಗ್ ಸೆಲ್‌ನಿಂದ ಸಹಾಯ ಮಾಡಲಾಗುತ್ತಿದೆ. ಯಾವುದಾದರೂ ಸಂದರ್ಭದಲ್ಲಿ ಬಿ. ಡಿ. ಓ., ಸೂಪರ್‌ವೈಜರ್, ಎಕ್ಸ್‌ಟೆನ್‌ಷನ್ ಆಫೀಸರ್ ತಡ ಮಾಡಿದ್ದರೆ, ಸರ್ಟಿಫಿಕೇಟ್ ಕೊಡುವುದರಲ್ಲಿ, ಹಣ ಹಂಚುವುದರಲ್ಲಿ ತೊಂದರೆ ಮಾಡಿದ್ದರೆ ಸರಕಾರ ತಕ್ಕ ಕ್ರಮ ತೆಗೆದುಕೊಳ್ಳುತ್ತದೆ. ಈ ಹಣವನ್ನು ಕಾರ್ಪೊರೇಷನ್ ಸ್ಯಾಂಕ್‌ಷನ್ ಮಾಡಿದಮೇಲೆ ಸೊಸೈಟಿಗಳಿಗೆ ಕೊಡಲಾಗುವುದು, ಸೊಸೈಟಿಯು ಅಪ್ಲಿಕೇಷನ್ ಕೊಟ್ಟವರಿಗೆ ಕೊಡುವುದು. ಇಂದು ಹಣ ಹಂಚಿದಕೂಡಲೇ ಬಡ್ಡಿ ಹಾಕುವುದಿಲ್ಲ, ಸೊಸೈಟಿಗಳಿಗೆ ಹಣ ಕಳಿಸಿದಮೇಲೆ ವ್ಯಕ್ತಿಗಳಿಗೆ ಕೊಡುವುದಕ್ಕೆ ಮುಂಚೆ ಬಡ್ಡಿ ಹಾಕಲಾಗುವುದು. ಕಾರ್ಪೊರೇಷನ್ ಸ್ಯಾಂಕ್‌ಷನ್ ಮಾಡಿದ ದಿವಸ ಬಡ್ಡಿ ಹಾಕುವುದಿಲ್ಲ. ಈ ರೀತಿಯಲ್ಲಿ ಸರಕಾರ ಮಾನವೀಯತೆಯಿಂದ ವರ್ತಿಸುತ್ತಿದೆ. 42 ಲಕ್ಷ ಗಿರಿಜನರು ಮತ್ತು ಹರಿಜನರು ಇದ್ದಾರೆ. ರಾಜ್ಯಾಂಗದ ಪ್ರಕಾರ ನೂರಕ್ಕೆ 30-35 ಕ್ಕೆ ಪ್ರಾವಿಷನ್ ಇದೆ, 18 ಅಲ್ಲ. ಸೋಷಿಯಲ್ ವೆಲ್‌ಫೇರ್ ಇಲಾಖೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬುಗಳವರಿಗೆ 1 ಕೋಟಿ 72 ಲಕ್ಷ 56 ಸಾವಿರ ರೂಪಾಯಿ ಕೊಡುವುದಿದೆ.

ಶ್ರೀ ಎಸ್. ಎಸ್. ಅರಕೇರಿ.—1966 ರಿಂದ ಎಷ್ಟು ಮಾಡಿದೆಯೆಂಬುದನ್ನು ಹೇಳಿ.

ಶ್ರೀ ಪಿ. ಎಂ. ನಾಡಗೌಡ.—1965-66 ರಲ್ಲಿ ಮೂರನೆಯ ಯೋಜನೆಯಲ್ಲಿ 40 ಸಾವಿರ ರೂಪಾಯಿ ಒದಗಿಸಿದೆ, 57 ಮನೆಗಳಿಗೆ ಅವಕಾಶ ಮಾಡಿದೆ, 1967-68 ರಲ್ಲಿ 45 ಸಾವಿರ ರೂಪಾಯಿ ಒದಗಿಸಿ 64 ಮನೆಗಳಿಗೆ ಅವಕಾಶ ಕೊಡಲಾಗಿದೆ, 1968-69 ರಲ್ಲಿ 45 ಸಾವಿರ ರೂಪಾಯಿ ಒದಗಿಸಿ 64 ಮನೆಗಳಿಗೆ ಅವಕಾಶ ಕೊಟ್ಟಿದೆ. ಡೀನೋಟಿಫೈಡ್ ಟ್ರೈಬ್ಸ್‌ಗೆ ಹೌಸಿಂಗೆ ಈಯರ್‌ವೈಜ್ ಬ್ರೇಕಪ್ ಈ ರೀತಿ ಇದೆ : 1965-66 ರಲ್ಲಿ 40 ಸಾವಿರ ರೂಪಾಯಿ ಒದಗಿಸಿ 100 ಮನೆಗಳಿಗೆ ಅವಕಾಶ ಕೊಟ್ಟಿದೆ, 1967-68 ರಲ್ಲಿ 50 ಸಾವಿರ ರೂಪಾಯಿಗಳನ್ನೊದಗಿಸಿ 125 ಮನೆಗಳಿಗೆ ಅವಕಾಸ ಕೊಡಲಾಗಿದೆ, 68-69 ರಲ್ಲಿ 50 ಸಾವಿರ ರೂಪಾಯಿ ಒದಗಿಸಿ 120 ಮನೆಗಳಿಗೆ ಅವಕಾಶ ಕೊಟ್ಟಿದೆ. ನ್ಯೂಮ್ಯಾಡಿಕ್ ಮತ್ತು ಸೆಮಿ ನ್ಯೂಮ್ಯಾಡಿಕ್ ಟ್ರೈಬ್ಸ್‌ಗೆ 1966-67 ರಲ್ಲಿ 40 ಸಾವಿರ ರೂಪಾಯಿ ಕೊಟ್ಟು 57 ಮನೆಗಳಿಗೆ ಅವಕಾಶಮಾಡಿದೆ, 67-68 ರಲ್ಲಿ 40 ಸಾವಿರ ಒದಗಿಸಿ 57 ಮನೆಗಳಿಗೆ ಅವಕಾಶ ಕೊಟ್ಟಿದೆ, 68-69 ರಲ್ಲಿ 40 ಸಾವಿರ ರೂಪಾಯಿ ಕೊಟ್ಟು 57 ಮನೆಗಳಿಗೆ ಅವಕಾಶ ಕೊಡಲಾಗಿದೆ. ಹೀಗೆ ಎಲ್ಲಾ ಕಡೆಯೂ ಅವಕಾಶ ಕೊಡಲಾಗುತ್ತಿದೆ.

ಶ್ರೀ ಐ. ಸೋಮಶೇಖರಪ್ಪ.—ಇದು ಸಬ್‌ಸಿಡಿಯೇ ಅಥವಾ ಗ್ರಾಂಟೇ ?

ಶ್ರೀ ಪಿ. ಎಂ. ನಾಡಗೌಡ.—ಸಬ್ಸಿಡಿ. ಕಾರ್ಪೊರೇಷನ್‌ನಿಂದ ಕೊಡುವುದಕ್ಕೆ ಸೇಕಡ 3 ರಷ್ಟು ಬಡ್ಡಿ ಇದೆ. ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ರೊಕ್ಕ ಕೊಟ್ಟಾಗ ಕೊಡ ಬೇಕಾಗುತ್ತದೆ. ಈಗ ಕಾರ್ಪೊರೇಷನ್‌ನಲ್ಲಿ 4 ತರಹ ಮನೆಗಳಿಗೆ ಅವಕಾಶವಿದೆ ; 1,500, 2,000, 2,500 ಮತ್ತು 3,000 ರೂಪಾಯಿ ಈ ರೀತಿ ನಾಲ್ಕು ರೀತಿಯ ಮನೆಗಳಿವೆ. ಎಲ್. ಐ. ಸಿ. ನಿಂದ ಶೇಕಡ ಆರೂಕಾಲರಂತೆ ಬಡ್ಡಿ ಕೊಟ್ಟು ಹಣ ತಂದು ಶೇಕಡ ಮೂರೂಕಾಲರಂತೆ ನಾವು ಕೊಟ್ಟುಕೊಂಡು ಸಬ್ಸಿಡೈಸ್ ಮಾಡಿ ಹರಿಜನರಿಗೆ ಕೊಡಲಾಗುವುದು. ಇದರ ಪ್ರಕಾರ ಸಾಲ 1,500 ಇದ್ದರೆ 511 ಅಥವಾ 512 ರೂಪಾಯಿ ಬಡ್ಡಿ ಸಬ್ಸಿಡೈಸ್ ಮಾಡಿರುವುದು. ಹೀಗೆ ಇಂಟರೆಸ್ಟ್ ಫ್ರೀ ಕೊಡಲಾಗಿದೆ. 2,000 ಇದ್ದರೆ 683 ಸಬ್ಸಿಡೈಸ್ ಮಾಡಲಾಗುವುದು, 2500 ಇದ್ದರೆ 753 ರೂಪಾಯಿ ಬಡ್ಡಿಯನ್ನು ಸಬ್ಸಿಡೈಸ್ ಮಾಡಲಾಗುವುದು. 3000 ಇದ್ದರೆ ಒಂದು ಸಾವಿರ ಸಬ್ಸಿಡೈಸ್ ಮಾಡುವರು. ಇಷ್ಟು ಪ್ರಕ್ಕಟ್ಟೆ ಹಣ ಕೊಡುವುದಿದೆ. ಈ ಒಂದು ಕಾರ್ಪೊರೇಷನ್ ಆದಮೇಲೆ ಅದು ಚೆನ್ನಾಗಿ ಕೆಲಸ ಮಾಡಿರುವುದನ್ನು ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ.

6-30 P. M.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ಈ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರು ತಮ್ಮ ಮಾವಂದಿರನ್ನು ಟೀಕೆ ಮಾಡಬಹುದೇ ? ಈ ಬಗ್ಗೆ ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಡಬೇಕು.

ಉಪಾಧ್ಯಕ್ಷರು.—ಅದು ಕ್ರಿಯಾಲೋಪವಾಗುವುದಿಲ್ಲ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—8600 ಅರ್ಜಿಗಳು ಪೆಂಡಿಂಗ್ ಇವೆ. ಇದಕ್ಕೆ ಹಣ ಯಾವಾಗ ಒದಗಿಸುತ್ತೀರಿ ? ಮತ್ತು ಹಣವನ್ನು ಒದಗಿಸುವಾಗ ಯಾವ ನಿಯಮವನ್ನು ಅನುಸರಿ ಸುತ್ತೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಮೂರು ಕೋಟಿ ರೂಪಾಯಿ ಸಾಲ ಕೇಳಿದ್ದೇವೆ. ಅದು ಇನ್ನೂ ಪತ್ರವ್ಯವಹಾರದಲ್ಲಿ ಇದೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಈ ಪ್ರಶ್ನೆಯನ್ನು ಕೇಳುವುದರ ಉದ್ದೇಶ ಇಷ್ಟೇ. ಈಗಾಗಲೇ ಅರ್ಜಿಗಳನ್ನು ಹಾಕಿಕೊಂಡಿರುವವರಿಗೆ ಅನೇಕ ಜನರಿಗೆ ಹಣ ಸಿಕ್ಕಿಲ್ಲ, ಅವರಿಗೆ ಕೊಡು ವಾಗ ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಿ ? ಸೀನಿಯಾರಿಟಿ ಮೇಲೆ ಮಂಜೂರು ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರು ಮಾಡಿರತಕ್ಕ ಸೂಚನೆಯನ್ನು ಪರಿಶೀಲನೆ ಮಾಡಬಹುದೇ ಹೊರತು ಈಗ ಯಾವ ಒಂದು ನಿಯಮವನ್ನು ಹಾಕಿಕೊಂಡಿದ್ದೇವೆಯೋ ಅವರ ಪ್ರಕಾರವೇ ಹೋಗಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ಹರಿಜನ ಗಿರಿಜನರಿಗೆ ಮನೆಗಳನ್ನು ಕಟ್ಟಿಸುವ ಬಗ್ಗೆ ಹೌಸಿಂಗ್ ಕಾರ್ಪೊರೇಷನ್, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟು ಮತ್ತು ರೂರಲ್ ಹೌಸಿಂಗ್‌ಸೆಲ್ ಈ ಮೂರು ಏಜೆನ್ಸಿಯಿಂದ್ಲ ಎಷ್ಟೆಷ್ಟು ಹಣ ದೊರೆತಿದೆ ಎಂಬುದನ್ನು ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಪಿ. ಎಂ. ನಾಡಗೌಡ.—ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

Mr. DEPUTY SPEAKER.—The House stands adjourned and will meet tomorrow at 12 NOON.

The House adjourned at Thirty-five Minutes past Six of the Clock to meet again at Twelve of the Clock on Tuesday the 28th January 1969.

WD 12018—GPB—600—3-5-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 28th January 1969

The House met in the Assembly Chamber, Vidhana Soudha, Bangalore, at Twelve of the Clock.

Mr. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Construction of Thimmasami Amanikere

19. SRI T. K. GANGI REDDI (Chintamani).—

Will the Minister of State for Minor Irrigation be pleased to state :—

(*a*) the date on which the survey of Thimmasami Amanikere in Burudagunte, Chintamani Taluk was made ;
(*b*) the estimated cost of constructing the said tank ;
(*c*) the total achkat of the said tank ?

SRI D. PARAMESHWARAPPA (Deputy Minister for Major Irrigation and Electricity) [on behalf of SRI A. J. DODDAMETI (Minister of State for Minor Irrigation)].—

(*a*) In June 1963.
(*b*) The estimated cost for the restoration of the said tank is about Rs. 1,39,000.
(*c*) 301–03 Acres.

ಶ್ರೀ ಟಿ. ಕೆ. ಗಂಗಿರೆಡ್ಡಿ.—ಸ್ವಾಮಿ, (ಅ)ಗೆ ಉತ್ತರವಾಗಿ 1963 ರಲ್ಲಿ ಎಸ್ಟಿಮೇಟ್ ಆಗಿದೆ ಎಂದು ಹೇಳಿದ್ದೀರಿ. ಆಗ ಆ ಎಸ್ಟಿಮೇಟ್ ಕಾಸ್ಟ್ 1,39,000 ರೂಪಾಯಿ ಇದ್ದುದು, ಈಗ ಎಷ್ಟಕ್ಕೆ ಆಗಿದೆ ?

† ಶ್ರೀ ಡಿ. ಪರಮೇಶ್ವರಪ್ಪ.—ಈಗಲೂ ಅಷ್ಟಕ್ಕೇ ಆಗಿದೆ.

---

† Indicates that the speeches or remarks have not been revised by the member concerned.

ಶ್ರೀ ಟಿ. ಕೆ. ಗಂಗಿರೆಡ್ಡಿ.—ಸ್ವಾಮಿ, ಈವಾಗ ಎಸ್ಟಿಮೇಟ್ ರಿವೈಸ್ ಆಗಿಲ್ಲವೇ ? ಆಗಿನ ಷೆಡ್ಯೂಲ್ ರೇಟಿಗೂ ಈಗಿನ ಷೆಡ್ಯೂಲ್ ರೇಟಿಗೂ ವ್ಯತ್ಯಾಸ ಇಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಅದೇ ಎಸ್ಟಿಮೇಟ್ಟನ್ನೇ ನಾವು ಈಗ ಇಟ್ಟುಕೊಂಡಿರುವುದು.

ಶ್ರೀ ಟಿ. ಕೆ. ಗಂಗಿರೆಡ್ಡಿ.—ಇಷ್ಟು ತಡವಾಗುವುದಕ್ಕೆ ಕಾರಣ ಏನು, ಸ್ವಾಮಿ ?

ಶ್ರೀ ಡಿ. ಪರಮೇಶ್ವರಪ್ಪ.—ಈಗತಾನೆ ಗೌರ್ನಮೆಂಟ್ ಅಪ್ರೂವಲ್‌ಗೆ ಬಂದಿದೆ. ಅಪ್ರೂವ್ ಆಗುವ ನಿರೀಕ್ಷೆ ಇದೆ.

ಶ್ರೀ ಟಿ. ಕೆ. ಗಂಗಿರೆಡ್ಡಿ.—ಈ ಬಡ್ಜೆಟ್ಟಿನಲ್ಲಾದರೂ ಸೇರಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಪ್ರಯತ್ನ ಮಾಡುತ್ತೇನೆ.

Collection of fees for Entry in Temples

103. Sri K. RATNAKUMAR SHETTY (Mudabidri).—

Will the Minister for Revenue be pleased to state :—

(*a*) whether the Government authorities in Sravanabelagola are collecting 0–50 paise per head from the devotees for Dharsanam of Sri Gomateswara ;

(*b*) if so, the authority for such collection ;

(*c*) the composition of the governing body of the temple and whether it is appointed under section 6 of the Muzrai Act of 1927.

(*d*) whether any rules have been framed under the Act empowering the collection of 50 Paise from the devotees ;

(*e*) the object of these collections ;

(*f*) whether any account of the collections made is being maintained ;

(*g*) the estimated and actual collection ;

(*h*) the expenditure incurred per month to maintain the staff there ;

(*i*) whether there is a proposal before Government to introduce ticket system for admission to have 'Dharsanam' in all the temples of the Mysore State which are under control of the Endowment ?

Sri H. V. KOUJALGI (Minister for Revenue).—

(*a*) Yes.

(*b*) As per G. O. No. RD 218 MET 67, dated 6-11-1967.

(*c*) A governing body called the Committee of Management, Digambar Jain Muzrai Institutions, Sravanabelagola, consisting of 24 members, under the Chairmanship of the Swamiji of the Jain Mutt, Sravanabelagola, has been constituted in Government Notification No. RD 2 MST 67, dated 18-1-1967 in pursuance of clause (iv) of sub-rule

(2) and sub-rule (3) of rule 3, Sravanabelagola Digamber Jain Muzrai Institution Management Rules, 1967 framed in exercise of powers conferred by Sections 7 and 41 of the Mysore Religious and Charitable Institutions Act, 1927.

(*d*) No.

(*e*) Development of the area.

(*f*) Yes.

(*g*) A sum of Rs. 74,795.50 has been collected from the Tourists up to end of 15th December, 1968.

(*h*) Rs. 533 per month.

(*i*) No.

ಶ್ರೀ ಕೆ. ರತ್ನಕುಮಾರ್ ಶೆಟ್ಟಿ.—(ಅ) ಗೆ ಉತ್ತರವಾಗಿ ಶ್ರವಣಬೆಳಗೊಳದಲ್ಲಿರುವ ಗೊಮ್ಮಟೇಶ್ವರ ದರ್ಶನಕ್ಕೆ ಬರುವ ಭಕ್ತಾದಿಗಳಮೇಲೆ 50 ಪೈಸೇ ಟಿಕೆಟ್ ಇಟ್ಟಿದ್ದೇವೆ ಎಂದು ಉತ್ತರ ಕೊಟ್ಟಿದ್ದೀರಿ. ಅದರಿಂದ ಸಾಮಾನ್ಯ ಜನತೆಗೆ ಅಲ್ಲಿಗೆ ಹೋಗುವ ದರ್ಶನದ ಹಕ್ಕು, ಅವರ ಹಕ್ಕು ಭಾಧ್ಯತೆಗಳನ್ನೂ ಲೋಪ ಮಾಡಿದಂತೆ ಆಗುತ್ತದೆ, ಅನ್ಯಾಯವಾಗುತ್ತದೆ ಬೇರೆ ದೇವಸ್ಥಾನಗಳಿಗೆ ಆಗಲ 50 ಪೈಸೇ ಟಿಕೆಟ್ ಇಟ್ಟಿಲ್ಲ. ಧರ್ಮಕ್ಕೆ ಲೋಪವಾಗಿದೆ. ಅನ್ಯಾಯವಾಗಿದೆ. ಆದುದರಿಂದ ತಾವು ಆದಷ್ಟು ಜಾಗ್ರತೆ ಇದನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ ?

†ಶ್ರೀ ಹೆಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಹೇಳಿದಂತೆ ಯಾವ ಧರ್ಮಕ್ಕೂ ಲೋಪವಾಗಿಲ್ಲ. ಈಗ ತಮಗೆಲ್ಲಾ ಗೊತ್ತಾದಂತೆ ಇದು ಯಾತ್ರಿಕರ ಹಿತದೃಷ್ಟಿಯಿಂದ ಅವರಿಗೆ ಸೌಲಭ್ಯಗಳನ್ನು ಹೆಚ್ಚಿಸುವುದಕ್ಕೋಸ್ಕರ ಮಾಡಿರುವುದರಿಂದ ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಾನು ಒಪ್ಪುವುದಿಲ್ಲ.

ಶ್ರೀ ಕೆ. ರತ್ನಕುಮಾರ್ ಶೆಟ್ಟಿ.—ಮಾನ್ಯ ಮಂತ್ರಿಗಳು ಹೇಳುವುದನ್ನು ನಾನು ಒಪ್ಪುವುದಿಲ್ಲ. ತುರ್ತಾಗಿ ಇದನ್ನು ವಾಪಸು ಪಡೆಯದೆ ಇದ್ದರೆ ಅನ್ಯಾಯವಾಗುತ್ತದೆ. ಧರ್ಮಲೋಪವಾಗುತ್ತದೆ. ದೇವರ ವಿಗ್ರಹವನ್ನು ನೋಡಿಕೊಂಡು ಬರಲು 50 ಪೈಸೆ ಫೀ ಹಾಕಿರುವುದರಿಂದ ಅನೇಕ ಜನ ಯಾತ್ರಾರ್ಥಿಗಳು ದೇವರ ದರ್ಶನ ಪಡೆಯದೆ ವಾಪಸು ಬರುತ್ತಿದ್ದಾರೆ. ಈ ಬಗ್ಗೆ ಆದಷ್ಟು ಬೇಗನೆ ವಿಚಾರ ಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ವಿ. ಕೌಜಲಗಿ.—ದೇವರಿಗೂ ಸಹಿತ ದುಡ್ಡು ಬೇಕಾಗುತ್ತದೆ, ಅಲ್ಲಿ ಅಭಿವೃದ್ಧಿ ಆಗಬೇಕಾದರೆ ದುಡ್ಡು ಬೇಕಾಗುತ್ತದೆ.

MR. SPEAKER.—Next Question.

ಶ್ರೀ ಎಚ್. ಬಿ. ಜ್ವಾಲನಯ್ಯ.—ಶ್ರವಣಬೆಳಗೊಳದಲ್ಲಿರುವ ಜನ ಪ್ರತಿನಿತ್ಯವೂ ಪೂಜೆಗೆ ಹೋಗಬೇಕಾದರೆ 50 ಪೈಸೆ ಕೊಡಬೇಕೆಂದು ಹೇಳುವುದು ಯಾವ ನ್ಯಾಯ ? ಪ್ರತಿದಿನ 50 ಪೈಸೆ ಕೊಟ್ಟು ಪೂಜೆ ಮಾಡಿಕೊಂಡು ಬರಲು ಸಾಧ್ಯವೇ ? ಇಂಥ ವಿಚಾರವನ್ನು ಪರಿಶೀಲನೆ ಮಾಡದೆ ಹೋದರೆ ಇನ್ನು ಯಾವುದನ್ನು ಪರಿಶೀಲನೆ ಮಾಡುತ್ತೀರಿ ?

MR. SPEAKER.—I have called the next question.

Promotion to selection grade in Government High Schools

125. **SRI H. B. JWALANAIAH** (Hassan).—

Will the Minister for Education be pleased to state :—

(*a*) whether the ratio of 1 : 4 for promotions in Selection Grade of Pandits, Munshis and other language teachers in Government High Schools, etc., is maintained up-to-date ;

(*b*) if not, the reason for the same ?

SRI N. M. KOTRABASAIAH SOGI (Deputy Minister for Education).—

(*a*) No.

(*b*) Up-to-date Ratio is not maintained, as the posts in the lower cadre are increased year by year. Additional posts have to be sanctioned. Due to economy orders, this was not done.

ಶ್ರೀ ಎಚ್. ಬಿ. ಜ್ವಾಲನಯ್ಯ.—ಪಂಡಿತರಿಗೆ 1 : 4 ಪ್ರಕಾರ ಪ್ರಮೋಷನ್ ಕೊಡಬೇಕೆಂದು ತೀರ್ಮಾನವಾಗಿ 1961 ರಲ್ಲಿ ಕಾನೂನಾಗಿದ್ದರೂ ಕೂಡ ಇಲ್ಲಿಯವರೆಗೂ ಎಷ್ಟು ಜನರಿಗೆ ಕೊಡಬೇಕಾಗಿತ್ತೋ ಅಷ್ಟು ಜನರಿಗೆ ಕೊಡದೆ ಇರುವುದಕ್ಕೆ ಕಾರಣವೇನು ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಉತ್ತರದಲ್ಲಿ ಹೇಳಲಾಗಿದೆ. ಇತ್ತೀಚೆಗೆ ಪಂಡಿತರ ಸಂಖ್ಯೆ ಹೆಚ್ಚಾದುದರಿಂದ ವರ್ಷೇ ವರ್ಷೇ ಅವರಿಗೆ ಸಂಬಂಧಪಟ್ಟಂತೆ ವಿವರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ನಮ್ಮ ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ಬಂದುದರ ಸಲುವಾಗಿ ಮಿತವ್ಯಯವನ್ನು ಸಾಧನೆ ಮಾಡಬೇಕಾದ್ದರಿಂದ ಅದನ್ನು ಮಾಡಲು ಆಗಿಲ್ಲ. ಇನ್ನು ಮುಂದೆ ಮಾಡಬೇಕೆಂಬ ವಿಚಾರವಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—1961ನೇ ಇಸವಿಯಲ್ಲಿ ಮಾಡಿದಂಥ ಪಟ್ಟಿ 1968ನೇ ಇಸವಿಯ ಹೊತ್ತಿಗೆ 148 ಜನಗಳಿಗಿಂತ ಹೆಚ್ಚು ಜನರಿಗೆ ಈ ಪ್ರತಿಫಲ ಬರಬೇಕಾಗಿರುವುದರಿಂದ ಈ ಕಾನೂನು ಪ್ರಕಾರವಾಗಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—1960 ನೇ ಇಸವಿಯಲ್ಲಿ 1 : 4 ರೇಷಿಯೋ ಮೇನ್‌ಟೇನ್ ಮಾಡಿದ್ದೇವೆ. ಇತ್ತೀಚೆಗೆ ಅದನ್ನು ಮಾಡಲು ಆಗಿಲ್ಲ. ಕಾರಣ ಪಂಡಿತರ ಸಂಖ್ಯೆ ಹೆಚ್ಚಾಯಿತು ಮತ್ತು ಎಕಾನಮಿ ಮೆಷರ್ಸ್ ಬಂದುದರಿಂದ ಕೊಡಲಿಕ್ಕೆ ಆಗಲಿಲ್ಲ. ಅದಕ್ಕಾಗಿ ತಡೆಹಿಡಿಯಲಾಗಿದೆ. ಇನ್ನು ಮುಂದೆ ಹಿಂದೆ ಇದ್ದ ಪ್ರಕಾರ ಸೆಲೆಕ್ಷನ್ ಗ್ರೇಡಿನಲ್ಲಿ ಪ್ರಮೋಷನ್ ಕೊಡಬೇಕೆಂದು ಸರ್ಕಾರದ ಮುಂದೆ ವಿಚಾರವಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಯಾವಾಗಿನಿಂದ ಕೊಡುತ್ತೀರಿ ? ಸರ್ಕಾರದ ಆರ್ಡರ್ ಪ್ರಕಾರ 1961 ನೇ ಇಸವಿಯಿಂದ ಕೊಡಬೇಕೆಂದು ಇದೆ. ಅಲ್ಲಿಂದ 1968ರವರೆಗೂ ಸೇರಿಸಿ ಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದನ್ನು ವಿಚಾರ ಮಾಡಲಾಗುತ್ತದೆ.

Court Building at Aland

172. SRI D. B. KALMANKAR (Aland).—

Will the Minister for Law, Labour and Parliamentary Affairs be pleased to state :—

(*a*) whether any court buildings have been sanctioned during 1968-69 in State or any proposals are there for consideration during 1969-70;

(*b*) if so, when the court building at Aland will be sanctioned in view of the longstanding demand for the same ?

SRI K. PUTTASWAMY (Minister for Law, Labour and Parliamentary Affairs).—

(*a*) The construction of First Floor and additions to the new District Court building (under construction at Chitradurga has been sanctioned during the year 1968-69).

The construction of a composite Court building at Shimoga during the current year, *i.e.*, 1969-70 is under consideration.

(*b*) The proposal for construction of Court building at Aland has been deferred in view of the need for economy and the question will be considered when the financial position of the State improves.

Sri D. B. KALMANKAR.—May I know whether any new buildings have been constructed for Munsiff Courts during these two years?

†Sri K. PUTTASWAMY.—I can give information as regards building sanctioned. Last year, no new building has been sanctioned.

Sri D. B. KALMANKAR.—In view of the fact that there is no good building for law courts, there is a great demand for new buildings for the last 10 years.

Sri K. PUTTASWAMY.—There is persistent demand.

Sri D. B. KALMANKAR.—In view of the fact that there is no proper court building consisting of room for withness, Bar, will the Government consider urgently to include it in the coming year's, budget?

Sri K. PUTTASWAMY.—I realise the need. But I cannot give any assurance to the hon. Member about its inclusion in the next year's programme.

Sri V. N. PATIL.—Will the Government assure that since most of the Munsiff Courts and Magistrate's Courts are not having proper building, Government will take urgent steps to construct new buildings ?

Sri K. PUTTASWAMY.—It all depends upon the word early Government are anxious to provide court buildings as early as possible provided the finances are available.

Highway Robberies in the State

211. Sri H. N. NANJE GOWDA (Arkalgud).—

Will the Chief Minister be pleased to state :—

(*a*) the number of "Highway Robberies" that occurred in the State between January 1968 up to the latest convenient date (place-war occurrence may be furnished) ;

(*b*) of them how many are under investigation and in how many cases the police have charge-sheeted the robberers ;

(*c*) the total amount and worth of jewels and other properties said to have been robbed in the said robberies ;

(*d*) the amount and the worth of jewels and other properties that have been recovered from the robberers ?

Sri VEERENDRA PATIL (Chief Minister).—

(*a*) 24, between 1-11-1968 and 20-12-1968. Places of occurences are furnished in the statement appended.

(*b*) 11 under investigation. 11 charge sheeted.

		Rs.
(*c*) Cash	...	7,761
Jewels	...	10,740
Other Properties	...	5,569
(*d*) Cash	...	1,175
Jewels	...	5,690
Other Properties	...	6,427

STATEMENT

Showing places where Highway Robberies were committed.

District		*Place*
Bangalore District	1.	Near Narasandra on Kunigal-Bangalore road.
Mandya District	2.	On Mysore-Hassan Road near Pura.
	3.	On K. R. Sagar Road, Near Hosahalli.
Mysore	4.	On Mysore-Mercara Road, Near Handanahalli village.
	5.	On Bilikere and K.R. Nagar Road, near Ramanahally.
	6.	Near Punjanoor, Chamarajanagar, Mysore Road.
	7.	Nanjangud-Gundlupet Road, near Vaddar Palya.
	8.	On Mysore-Mercara Road, near, Chikkadanahalli.
Shimoga	9.	On Shimoga-Thirthahalli Road, near Mandagudda village.
	10.	On Shimoga-Harihar Road, near Honnali.
	11.	Do

District	*Place*
	12. On Kumsi-Ayanur Road, near Kumsi.
Chickmagalur	13. On B. H. Road at 152/3 Mills stone.
	14. Do
	15. Do
	16. Near Laxmipur village, Kadur-Chickmagalur Road.
Tumkur	17. Tumkur Nelamangala Road, near Panditanahalli.
Belgaum	18. Near Gotalli village, Nandagad-Belgaum Road.
	19. Near Chikkalgud village.
Kolar	20. Near Gangapur on High Way Road (Kolar Road).
	21. Near Narasapura Out post.
	22. Near Gangapur Kolar Road.
Gulbarga	23. On Sadam-Rajanapalli Road, near Koila village.
Bidar	24. On Udgir-Zahirabad Road, neat Lalbag.

ಶ್ರೀ ಎಚ್. ಎನ್. ನಂಜೇಗೌಡ.—50 ದಿನಗಳಲ್ಲಿ ಹೆದ್ದಾರಿಗಳಲ್ಲಿ 24 ದರೋಡೆಗಳು ಆಗಿವೆ ಯೆಂದು ತಿಳಿಸಲಾಗಿದೆ. ಅದರಲ್ಲಿ ಯಾವುದಾದರೂ ಸಂದರ್ಭಗಳಲ್ಲಿ ಪೋಲೀಸರು ಸಹಕಾರಮಾಡಿ ನಡೆಸಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಬಂದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಸುಮಾರು 22 ಸಾವಿರ ಚಿಲ್ಲರೆ ರೂಪಾಯಿ ದರೋಡೆ ಯಾಗಿರುವುದರಲ್ಲಿ 12 ಸಾವಿರ ಚಿಲ್ಲರೆ ರಿಕವರಿಯಾಗಿಲ್ಲ. ಅದರ ಅರ್ಥ ಕಳ್ಳತನ ಮಾಡಿರುವವರು ಸಿಕ್ಕಿಲ್ಲ ಅಂತಲೋ ಅಥವಾ ಮಾಲು ಪರಭಾರೆಯಾಗಿದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಉತ್ತರದಲ್ಲೇ ಹೇಳಿದೆ, 11 ಕೇಸುಗಳಲ್ಲಿ ಛಾರ್ಜ್‌ಷೀಟನ್ನು ಹಾಕಿದೆ, ಮಾಲು ಸಿಕ್ಕಿ ಇನ್‌ವೆಸ್ಟಿಗೇಷನ್ ಪೂರ್ತಿಯಾಗಿದೆ. 11 ಕೇಸುಗಳ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ, ಆ ಕೆಲಸ ಬಹಳ ತೀವ್ರವಾಗಿ ನಡೆಯುತ್ತಿದೆ.

ಶ್ರೀ ಸಿದ್ಧಯ್ಯ ಕಾಶೀಮಠ.—ಈ ದರೋಡೆಗೆ ಸಂಬಂಧಪಟ್ಟಂತೆ ಎಷ್ಟು ಜನರನ್ನು ಹಿಡಿಯ ಲಾಗಿದೆ ? ಎಷ್ಟು ಜನರಮೇಲೆ ಚಾರ್ಜ್‌ಷೀಟ್ ಹಾಕಿದೆ ?

ಶ್ರೀ ವೀರೇಂದ್ರ ಪಾಟೀಲ್.—ಮೈಸೂರು ಜೈಲಿನಿಂದ ತಪ್ಪಿಸಿಕೊಂಡು ಬಂದಿದ್ದ 3 ಜನರನ್ನು ಶ್ರೀರಂಗಪಟ್ಟಣದ ಬಳಿ ಹಿಡಿಯಲಾಗಿದೆ. ಪೂರ್ಣವಾದ ವಿವರ ನನ್ನ ಹತ್ತಿರ ಈಗ ಇಲ್ಲ. ತರಿಸಿ ಕೊಡುತ್ತೇನೆ.

ಅಧ್ಯಕ್ಷರು.—ಅದನ್ನು ಸಭೆಯ ಮೇಜಿನಮೇಲೆ ಇಡಬಹುದು.

ಶ್ರೀ ಎಸ್. ಎಂ. ಗುರೆಡ್ಡಿ.—ಈ ಹೈವೇ ರಾಬರಿಯನ್ನು ಆರ್ಗನೈಸ್ಡ್ ಗ್ಯಾಂಗು ಮಾಡು ತ್ತಿದೆಯೋ ಅಥವಾ ಯಾವ ಜನಾಂಗವಾದರೂ ಮಾಡುತ್ತಿವೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಕೆಲವು ಗ್ಯಾಂಗ್ ಇವೆ. ಆ ಗ್ಯಾಂಗಿನವರು ಮಾಡು ತ್ತಿದ್ದಾರೆ, ಅವರಲ್ಲಿ ಕೆಲವರನ್ನು ಹಿಡಿಯಲಾಗಿದೆ, ಇನ್ನು ಕೆಲವರು ಸಿಕ್ಕಿಲ್ಲ. ಹೆಚ್ಚು ಗ್ಯಾಂಗ್ ಇಲ್ಲ, ಎರಡು ಮೂರು ಇರಬಹುದು.

ಶ್ರೀ ವಾಟಾಳ್ ನಾಗರಾಜ್.—50 ದಿನಗಳಲ್ಲಿ ರಾಜ್ಯದಲ್ಲಿ 24 ಕಡೆ ದರೋಡೆ ರಸ್ತೆಗಳಲ್ಲಿ ಆಗಿರುವುದನ್ನು ನೋಡಿದರೆ ರಾಜ್ಯದ ಪೋಲೀಸಿನವರು ಎಷ್ಟು ದಕ್ಷತೆಯಿಂದ ಕೆಲಸಮಾಡುತ್ತಿದ್ದಾರೆಂಬುದು ಅರ್ಥವಾಗುತ್ತದೆ. ಆದುದರಿಂದ ಈಗಲಾದರೂ 13 ವರ್ಷಗಳಿಂದ ಒಂದೇ ಸಮ ಇರುವ ಐ. ಜಿ. ಪಿ. ಯವರನ್ನು ಬೇರೆ ಕಡೆಗೆ ಕಳುಹಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈ ಪ್ರಶ್ನೆಗೂ ಚರ್ಚೆಯಾಗುತ್ತಿರುವ ಪ್ರಶ್ನೆಗೂ ಸಂಬಂಧವಿಲ್ಲ. ಇಷ್ಟು ದರೋಡೆಯಾದಾಗ ಪೋಲೀಸಿನವರು ಜಾಗ್ರತೆ ಕ್ರಮ ತೆಗೆದುಕೊಂಡಿರುವುದರಿಂದ ಗ್ಯಾಂಗನ್ನು ಹಿಡಿಯುವುದಕ್ಕೆ ಸಾಧ್ಯವಾಗಿದೆ. ಕೆಲವರು ತಪ್ಪಿಸಿಕೊಂಡು ಹೋದವರನ್ನು ಹಿಡಿಯಲಾಗಿದೆ. 11 ಕೇಸುಗಳಲ್ಲಿ ತಪ್ಪಿತಸ್ಥರನ್ನು ಹಿಡಿದು ಸಾಕಾದಷ್ಟು ಆಸ್ತಿ ವಾಪಸು ಪಡೆಯಲಾಗಿದೆ. ಕೆಲವು ಕೇಸುಗಳ ಇನ್‌ವೆಸ್ಟಿಗೇಷನ್ ಆಗುತ್ತಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—50 ದಿನಗಳಲ್ಲಿ ಇಷ್ಟು ದರೋಡೆಯಾಗಿರುವುದು ಪೋಲೀಸು ಇಲಾಖೆಯ ಅದಕ್ಷತೆ ಅಥವ ಸರಕಾರದ ಅದಕ್ಷತೆ ತೋರಿಸುವುದು. ಇದನ್ನು ಕಡಿಮೆಮಾಡುವುದಕ್ಕೆ ವಿಶೇಷ ರೀತಿಯ ವ್ಯವಸ್ಥೆಮಾಡಿರುವುದೇನು ?

ಶ್ರೀ ವೀರೇಂದ್ರ ಪಾಟೀಲ್.—ಅವಕ್ಕೇ ಇದೀಗ ಹೇಳಿದ 2-3 ಗ್ಯಾಂಗ್ಸ್ ಇವೆ, ಅವರು ಮಾಡುತ್ತಾರೆ. ಉದಾಹರಣೆಗೆ ಹೇಳಬೇಕಾದರೆ ಶ್ರೀರಂಗಪಟ್ಟಣದಲ್ಲಿ 3 ಜನ ತಪ್ಪಿಸಿಕೊಂಡು ಹೋದರು, ಅವರು ಹೋದಮೇಲೆ ಮತ್ತೆ ಶಿವಮೊಗ್ಗಾ ಜಿಲ್ಲೆಯಲ್ಲಿ 3 ಹೈವೇ ರಾಬರೀಸ್ ಆಗಿವೆ. ಇದನ್ನು ವಿಶೇಷವಾಗಿ ಮಾಡುವಂತಹವು ರಾತ್ರಿ ಸಮಯದಲ್ಲಿ, ಅದರ ಸಲುವಾಗಿ ರಾತ್ರಿ ಹೊತ್ತು ಅಲ್ಲಲ್ಲಿ ಪೆಟ್ರೋಲ್ ಮಾಡತಕ್ಕ ವ್ಯವಸ್ಥೆ ಮಾಡುತ್ತಾ ಇದ್ದೇವೆ. ಎಲ್ಲೆಲ್ಲಿ ಗ್ಯಾಂಗ್ಸ್ ಇವೆ ಎಂಬುದನ್ನು ನೋಡಿಕೊಂಡು ಅದಕ್ಕೆ ಪ್ರತ್ಯೇಕವಾದ ವ್ಯವಸ್ಥೆ ಮಾಡಿ ಅವರನ್ನು ಹಿಡಿಯುವಂತಹ ಪ್ರಯತ್ನ ಮಾಡುತ್ತಾ ಇದೆ, ಇದು ಬಹಳಷ್ಟು ಕಡಿಮೆಯಾಗಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ನಿಮ್ಮ ಪೋಲೀಸ್ ಸಿಬ್ಬಂದಿ ವರ್ಗದ ಮಧ್ಯದಲ್ಲಿ ಇದ್ದಂಥ ಕಳ್ಳರು ತಪ್ಪಿಸಿಕೊಂಡು ಹೋಗಬೇಕಾದರೆ ಇದು ಅವರ ಸಾಮರ್ಥ್ಯವೇ ಅಥವಾ ಪೋಲೀಸಿನವರ ಅಸಾಮರ್ಥ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಶ್ರೀರಂಗಪಟ್ಟಣದಲ್ಲಿ ಅವರು ಬಸ್ಸಿಗೆ ಬರುವ ಮುಂದೆ ತಪ್ಪಿಸಿಕೊಂಡು ಹೋಗಿದ್ದಾರೆ ಎಂಬುದನ್ನು ಒಪ್ಪಿಕೊಂಡಿದ್ದೇನೆ. ಈಗಾಗಲೇ ಈ ರೀತಿ ಅವರು ತಪ್ಪಿಸಿಕೊಂಡು ಹೋದದ್ದಕ್ಕೆ ಯಾರು ಜವಾಬ್ದಾರರು ಇದ್ದಾರೆ ಅವರನ್ನು ಸಸ್‌ಪೆಂಡ್ ಮಾಡಿದ್ದೇವೆ, ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ. ತಪ್ಪಿಸಿಕೊಂಡು ಹೋದವರ ಪೈಕಿ ಒಬ್ಬನು ಸಿಕ್ಕಿದ್ದಾನೆ, ಇನ್ನಿಬ್ಬರು ಸಿಕ್ಕಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ರಾಜ್ಯಪಾಲರ ಭಾಷಣದಲ್ಲೂ ಈ ವಿಷಯ ಪ್ರಸ್ತಾಪವಾಗಿದೆ. ಇತ್ತೀಚೆಗೆ ಈ ಹೆದ್ದಾರಿ ದರೋಡೆ ಆಗಿರುವುದಕ್ಕೆ ಹಿನ್ನೆಲೆ ಏನಿದೆ ಎಂಬುದನ್ನು ಸರ್ಕಾರದವರು ಸೂಕ್ಷ್ಮವಾಗಿ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಆಗಲೇ ಹೇಳಿದೆ, ಕೆಲವು ಗ್ಯಾಂಗ್ಸ್ ಇವೆ, ಅವರ ಉದ್ಯೋಗವೇ ಇದು. ಆ ಗ್ಯಾಂಗ್ಸನ್ನು ಹಿಡಿಯುತ್ತಾ ಇದ್ದೇವೆ, ಅದರಿಂದ ಕಡಿಮೆಯಾಗುತ್ತಾ ಇದೆ.

ಶ್ರೀ ಎಂ. ನಾಗಪ್ಪ.—ಈ ಗ್ಯಾಂಗ್ಸನಲ್ಲಿ ಇರತಕ್ಕ ಜನರು ಏನಿದ್ದಾರೆ ಅವರು ಮೈಸೂರು ಸ್ಟೇಟಿನೊಳಗಿರತಕ್ಕ ಜನರೇ ಅಥವಾ ಬೇರೆ ಸ್ಟೇಟ್‌ಗಳಲ್ಲಿ ಗ್ಯಾಂಗ್ಸ್ ಮಾಡಿಕೊಂಡು ನಮ್ಮ ಮೈಸೂರು ರಾಜ್ಯದಲ್ಲಿ ಬಂದು ಈ ರೀತಿ ದರೋಡೆ ಮಾಡುತ್ತಾ ಇದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅಷ್ಟು ವಿವರಗಳು ನನ್ನ ಹತ್ತಿರ ಬಂದಿಲ್ಲ. ಕೆಲವು ಜನರ ಹೆಸರು ಬೇಕಾದರೆ ಕೊಡಬಹುದು. ಮಾಣಿಕ್ಯಂ, ಮುನಿಯ ಮತ್ತು ಕಣ್ಣ ಈ ರೀತಿಯಿಂದ ಮೂರು ಜನರು ಇದ್ದಾರೆ, ಇವರು ತಪ್ಪಿಸಿಕೊಂಡು ಹೋದವರು, ಇವರ ಹೆಸರು ನನ್ನ ಹತ್ತಿರ ಇದೆ.

Sri J. P. SARVESH.—In some of the robberies in the last three years in Sedum' taluk, no property is recovered and no persons are traced ; will you agree that the police has become inefficient and they are not able to trace robbers or recover property ?

Sri VEERENDRA PATIL.—In my reply, I have already said that out of 24 cases, 11 cases have been chargesheeted and investigation is going on with regaid to other cases. When I say investigation is still going on that means that they have not been detected so far.

Sri H. P. GANGADHAR.—May I know the action that the Government has taken or action the Government is proposing to take to see that such things will not be committed in future or whether any preventive measures have been adopted ?

Sri VEERENDRA PATIL.—We have already taken several measures for instance, intensive highway patrolling ; also we have been requesting the public to co-operate with us ; we have announced a reward of Rs. 1,000 to whoever gives us information leading to the detection of these cases.

Sri D. B. KALMANKAR.—Out of these cases which are chargesheeted eleven in number, may I know the places to which these accused belong ?

Sri VEERENDRA PATIL.—I do not have that detailed information. Eleven have been charge-sheeted. I can furnish that information later.

ಶ್ರೀ ಎನ್. ಎ. ಚನ್ನೇಗೌಡ.—ಶ್ರೀರಂಗಪಟ್ಟಣದಲ್ಲಿ ತಪ್ಪಿಸಿಕೊಂಡರು ಎಂದು ಹೇಳಿದ ದರೋಡೆಕಾರರನ್ನು ಸುಲಭದಲ್ಲಿ ಹಿಡಿಯಬಹುದಾಗಿತ್ತು. ಅಂಥಾದ್ದರಲ್ಲಿ ಹಿಡಿದವರನ್ನೂ ಬಿಟ್ಟಿರುವುದನ್ನು ನೋಡಿದರೆ ಪೋಲೀಸಿನವರು ಪರೀಕ್ಷೆಗಾಗಿ ಬಿಟ್ಟಿದ್ದಾರೆ ಎಂದು ಸುದ್ದಿ ಇದೆ, ಇದು ನಿಜವೇ ? ಮತ್ತು ಇದೇ ಸಂದರ್ಭದಲ್ಲಿ ನಕ್ಸಲೈಟ್ ಟ್ರಬಲ್ ಆದದ್ದು ಏನಿದೆ ಅದಕ್ಕೂ ಇದಕ್ಕೂ ಸಂಬಂಧವಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಒಪ್ಪಿಕೊಂಡಿದ್ದೇನೆ. ಅಲ್ಲಿ ಪೋಲೀಸಿನವರು ಅವರನ್ನು ಬಸ್‌ಗೆ ಕರೆದುಕೊಂಡು ಹೋಗುವ ಮುಂದೆ ಅವರು ತಪ್ಪಿಸಿಕೊಂಡು ಹೋಗಿದ್ದಾರೆ. ಯಾರು ಇದಕ್ಕೆ ಜವಾಬ್ದಾರರೋ ಅವರ ಮೇಲೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ, ಇದರ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ. ಇಷ್ಟರಿಂದಲೇ ಪೋಲೀಸಿನವರು ಇದರಲ್ಲಿ ಸೇರ್ಪಡೆಯಾಗಿದ್ದಾರೆ ಎಂದು ಊಹೆ ಮಾಡುವುದು ಕಷ್ಟ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಆ ದರೋಡೆಕೋರರನ್ನು ಕೈಬಿಟ್ಟ ಪೋಲೀಸ್‌ರಿಗೆ ತಕ್ಕ ಶಿಕ್ಷೆ ಮಾಡತಕ್ಕ ಭರವಸೆಯನ್ನು ತಾವು ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಅವರನ್ನು ಸಸ್‌ಪೆಂಡ್ ಮಾಡಿದೆ—ಕ್ರಮ ಕೈಗೊಳ್ಳುತ್ತೇವೆಂದು ಉತ್ತರ ಕೊಟ್ಟಿದ್ದೇನೆ.

ಶ್ರೀ ಪಿ. ಎಸ್. ಪಾಟೀಲ್.—ಆ ದರೋಡೆಕೋರರು ಇಲ್ಲಿಯವರೇ ಅಥವಾ ಹೊರಗಡೆಯ ರಾಜ್ಯಗಳವರೇ ಎಂಬುದನ್ನು ಪತ್ತೆಮಾಡಿದರೆ ಅವರು ಎಲ್ಲೆಲ್ಲಿ ತಂಗುತ್ತಾರೆ ಅವರನ್ನು ಎಲ್ಲಿ ಎಲ್ಲಿ ಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವುದು ಗೊತ್ತಾಗುವುದು.

ಶ್ರೀ ವೀರೇಂದ್ರ ಪಾಟೀಲ್.—ಪೋಲೀಸಿನವರು ಆ ಬಗ್ಗೆ ಎಲ್ಲಾ ಪ್ರಯತ್ನಗಳನ್ನೂ ನಡೆಸುತ್ತಿದ್ದಾರೆ. ಈಗ ಸಿಕ್ಕಿರತಕ್ಕವರಲ್ಲಿ ಮುನಿಯ ಅಂತಲೋ ಅಥವಾ ಮಾಣಿಕ್ಯಂ ಅಂತಲೋ ಅವನಿಂದ ಸಾಧ್ಯವಾದಷ್ಟೂ ಇನ್ನುಳಿದವರ ಮಾಹಿತಿಯನ್ನು ಪಡೆಯುತ್ತಿದ್ದಾರೆ. ಇನ್ನು ನಮಗೆ ಸಿಕ್ಕಬೇಕಾಗಿರತಕ್ಕ ವ್ಯಕ್ತಿಗಳೂ ಕೂಡ ಸದ್ಯದಲ್ಲೇ ಸಿಕ್ಕಬಹುದು ಅನ್ನತಕ್ಕ ಭರವಸೆ ಇದೆ.

Sri G. CHANDRAKANTH.—Since these are highway robberies, may we know what precautions have been taken to prevent them and what accion has been taken to detect them ?

Sri VEERENDRA PATIL.—I have already stated what precuation we have taken. We have arranged intensive patrolling; we have been enlisting the co-operation of the people for prevention and detection of the offences. We have also announced rewards to people from whom information leading to them detection would be forthcoming.

ಮಾನ್ಯ ಸದಸ್ಯರು.—ಈ ದರೋಡೆಕೋರರು ಇದುವರೆಗೆ ಅಗರೇ ಎಷ್ಟು ಸಾರಿ ಜೈಲಿಗೆ ಹೋಗಿದ್ದವರು ಎಂಬುದು ಗೊತ್ತಾಗಿದೆಯೇ ?

Sri VEERENDRA PATIL.—These are very minute details. How can I have that information now?

Assets and liabilities of the State

232. Sri H. SIDDAVEERAPPA (Harihar).—

Will the Minister for Finance, Planning and Youth Welfare be pleased to state :—

(*a*) the total assets of the State in the public sector;

(*b*) the total loan liabilities of the State (figures up to end of December 1968 may be furnished);

(*c*) the details of evaluation of the assets;

(*d*) total amount of subsidy received by the State from January 1957 up to end of December, 1968?

Sri K. PUTTASWAMY (Minister for Law, Labour and Parliamentary Affairs [on behalf of SRI RAMAKRISHNA HEGDE (Minister for Finance, Planning and Youth Welfare]).—

(*a*) *Assets*	*As on 31st March 1968* (Rs. in lakhs)
Capital Outlay on Improvement of Public Health ...	1,129.97
Capital Outlay on Industrial and Economic Development ...	4,906.31
Capital Outlay on INE and D Works (Commercial and Non-Commercial).	15,259.47
Capital Outlay on Electricity Schemes ...	9,204.57
Capital Outlay on Public Works ...	7,600.84
Capital Outlay on Other Works ...	66.12
Capital Outlay on Ports ...	181.64
Capital Outlay on Road Transport Schemes ...	522.31
Capital Outlay on Forests ...	41.00

		As on 31st March 1968 (Rs. in lakhs)
Deposits and Advances		
Advances not bearing interest	...	309.28
Loans and Advances by State Government	...	14,931.49
Investments	...	1,185.78
Total	...	55,338.78

(b) *Liabilities*		As on 31-3-1968 (Rs. in lakhs)
Public Dept		
Permanent Debt—State Loans including Loans not bearing interest		6,015.72
Floating Debt		
Ways and means advances	...	1,449.93
Loans from Central Government	...	25,800.44
Other Loans	...	2,194.77
Unfunded Debt	...	2,483.77
Deposits and Advances		
Reserve and Depreciation Funds	...	6,338.04
Other Deposit Accounts	...	2,891.06
Total	...	47,173.73

Actual figures up to the end of December 1968 (in both the cases) as required by the Hon'ble Member are not available. Hence figures up to the end of 31st March 1968 are furnished as per accounts of the Accountant General.

(c) This is as per outlay booked in the Accountant General's accounts. Besides this, Government own many assets not taken to Capital Account such as Roads, Bridges, Buildings etc., constructed out of revenue funds and also assets like Forests which are not valued in accounts.

(d) The following are details of assistance received by State Government as a result of award of Finance Commission and

(SRI K. PUTTASWAMY)

assistance for Plan Schemes. Centrally Sponsored Schemes and other schemes outside the Plan from 1957-58, the first full year after States reorganisation to end of 1967-68.

(Rs. in lakhs)

Years	Statutory grants	Share of Central Taxes	Grants for Plan, Centrally Sponsored and other schemes.
1957–58	625.73	641.88	283.81
1958–59	609.87	803.41	421.04
1959–60	600.24	842.88	495.92
1960–61	612.16	894.03	863.15
1961–62	706.96	956.69	695.16
1962–63	684.34	1192.22	721.34
1963–64	679.28	1390.46	852.32
1964–65	683.43	1370.41	985.10
1965-66	687.88	1473.66	1081.35
1966-67	2092.15	1969.09	1027.77
1967–68	2091.46	2237.73	1309 99

SRI H. SIDDAVEERAPPA.—May I know since what period these assets are built up ?

†SRI K. PUTTASWAMY.—These assets are built up ever since we are having organized Government.

SRI H. SIDDAVEERAPPA.—Please give me the time from which these assets have been built up ?

SRI K. PUTTASWAMY.—Perhaps since the time we began constructing the Krishnaraja Sagara, the Vanivilasa Sagara and the Bhadravathi Iron and Steel Works.

SRI H. SIDDAVEERAPPA.—What about these liabilities ? Since how long have they been there ?

SRI K. PUTTASWAMY.—The liabilities also are being accumulated all along.

SRI H. SIDDAVEERAPPA.—What is the quantum of these liabilities that have accrued since 1956 ?

SRI K. PUTTASWAMY.—For that I plead notice.

SRI C. K. RAJAIAH SHETTY.—Looking at the assets, the net assets come to Rs. 82 crores. May I know how much of it has come from Inter-State Reorganization and how much from the old Mysore State ?

Sri K. PUTTASWAMY.—Even for that question, I plead notice. All those figures are available in the Budget Estimates that are being presentd to the House all along.

Mr. SPEAKER.—They are also available in the published Reports.

Sri N. A. CHANNE GOWDA —It is stated that the total assets come to Rs. 55,338.78 lakhs. Have the Government taken into consideration the devaluation of the Rupee when they made an assessment of their assets?

Sri K. PUTTASWAMY.– That is the attitude of the economist.

Sri M. S. KRISHNAN.—The answer to (d) may be seen. Is the Government satisfied that the due share that the State has to get out of the Central taxes has been got? If it has not been got, what steps have the Government taken to get them?

Sri K. PUTTASWAMY.—We are getting the share we are entitled to according to the Constitution and the existing law.

Sri C. K. RAJAIAH SHETTY.—According to the figures furnished Rs. 82 crores is the book value of the assets. Are you aware that the market value of every property has gone up? Has the evaluation been made according to the market value?

Sri K. PUTTASWAMY.—That we are not taking. Apart from that, we have ever so many assets.

ಶ್ರೀ ಎಚ್. ಬಿ. ಜ್ವಾಲನಯ್ಯ.—(ಬಿ) ಪ್ರಶ್ನೆಗೆ ಉತ್ತರವಾಗಿ ಲ್ಯಾಬಿಲಿಟಿ ಸ್ಟೇಟ್‌ಮೆಂಟ್‌ನಲ್ಲಿ ಕೆಲವು ಸಾಲಗಳನ್ನು ತೋರಿಸಿದ್ದೀರಿ. ಅದಕ್ಕೆ ಎಷ್ಟು ಬಡ್ಡಿಯಾಗುತ್ತದೆ.

Sri K. PUTTASWAMY.—I have to calculate and tell the House.

Sri N. A. CHANNE GOWDA.—It is stated that the grants for Plan, Centrally-sponsored and other schemes for 1967-68 is Rs. 1399.99 lakhs. I would like to know whether this and other amounts for other years were based in relation to population or any other consideration?

Sri K. PUTTASWAMY.—The factors that have been taken into consideration while determining grants and other things are already available in public documents.

Mr. SPEAKER.—Any more information that is required, is available in the various Audit Reports. Hon. Members may refer to them. Next Question.

Mahajan Commission Report

281 Sri D. M. SIDDAIAHi (Bligere):—

Will the Chief Minister be pleased to state.—

(*a*) the action taken by the Government to urge upon the Central Government to implement the Mahajan Report regarding the border dispute between Mysore and Maharashtra;

(*b*) what exactly are the difficulties in the way of implementation by the Central Government?

Sri VEERENDRA PATIL (Chief Minister) :—

(*a*) Both Houses of Legislature adopted on 14-12-1967 and 20-12-1967 a resolution to the effect that the recommendation of the Mahajan Commission be accepted as final and implemented without delay. A copy of the resolution was forwarded to the Government of India, Ministry of Home Affairs on 19th January, 1968, requesting them to take immediate action to give effect to the recommendations of Mahajan Commission. Letters have also been written to the Prime Minister in this regard, besides requesting personally whenever the Chief Minister was in Delhi.

(*b*) The State Government is not aware of this.

Sri D. M. SIDDAIAH.—In spite of the fact that both the Houses have passed resolutions urging implementation of the Mahajan Commission Report and the hon. Chief Minister is also pressing the hon. Prime Minister whenever he visited Delhi, if the Mahajan Commission Report is not implemented, what is the reason ?

† **Sri VEERENDRA PATIL.**—We have been representing to the Government of India. They say, we are considering, we are considering. They have not given any reasons for not implementing the Mahajan Commission Report.

ಶ್ರೀ ವಾಟಾಳ್ ನಾಗರಾಜ್,—ಮಹಾಜನ್ ಅವರ ವರದಿ ಬಗ್ಗೆ ನಾವು ಹೋದಾಗಲೆಲ್ಲಾ ಒತ್ತಾಯಮಾಡುತ್ತಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಈ ಪ್ರಶ್ನೆ ಯಾವ ಕಾಲಕ್ಕೆ ಇತ್ಯರ್ಥವಾಗುತ್ತದೆ ? ಏಕೆಂದರೆ ಈಗಾಗಲೇ ಮಹಾಜನ್ ಅವರ ವರದಿ ಫೈಲು ಕಳೆದು ಹೋಗಿದೆ ಎಂಬ ಸುದ್ದಿ ಬಂದಿದೆ. ಆದ್ದರಿಂದ ಇದರ ಬಗ್ಗೆ ನೀವು ಒಂದು ನಿರ್ದಿಷ್ಟ ನಿಲುವನ್ನು ತೆಗೆದುಕೊಳ್ಳುತ್ತೀರಾ ? ಏನಾದರೂ ಒಂದು ತೀರ್ಮಾನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದರ ತೀರ್ಮಾನ ಇಷ್ಟೇ ದಿವಸಗಳಲ್ಲಿ ಆಗುತ್ತದೆಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಅದನ್ನು ಕೇಂದ್ರ ಸರ್ಕಾರದವರು ಹೇಳಬೇಕು. ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪದೇಪದೇ ಒತ್ತಾಯ ಮಾಡುತ್ತಿದ್ದೇವೆ. ಅದರ ಬಗ್ಗೆ ತೀವ್ರ ನಿರ್ಣಯವನ್ನೂ ಸಹ ತೆಗೆದುಕೊಳ್ಳಬೇಕೆಂದೂ ಪದೇ ಪದೇ ಅವರಿಗೆ ಹೇಳುತ್ತಿದ್ದೇವೆ.

Sri K. H. RANGANATH.—Is it not a fact that the hon. Union Home Minister Sri Y. B. Chavan is in the way of taking a decision and that he is obstructing the Central Government ?

Sri VEERENDRA PATIL.—I cannot accept that suggestion.

Sri S. SIVAPPA.—Whenever the Chief Minister goes to Delhi, he meets the Prime Minister and prevails upon the Prime Minister to accept the Mahajan award. May I know what was the reaction of the Prime Minister on the Chief Minister's demand ?

Sri VEERENDRA PATIL.—Whenever I have gone and made a representation to the Prime Minister, the Prime Minister has been saying that it is already engaging the attention of the Central Government, that it is a complicated matter and that it will have to wait for some time. So, the Government of India have not said that they have shelved it and that they do not want to consider it. They have been saying every time that they are considering and that they would take a decision shortly.

Mr. SPEAKER.—The Chair feels the same supplementaries are being put, and there by the precious time of the House is being taken away. If there are any new supplementaries, they may be put.

12–30 P. M.

Sri D. B. KALMANKAR.—Is it a fact that there is a move to hand over Belgaum to Goa.

Sri VEERENDRA PATIL.—There is no such move.

ಶ್ರೀ ಶರಣಗೌಡ ಇನಾಂದಾರ್.—ಒಂದು ಸಲ ಹೇಳಿಕೆ ಕೊಡುವಾಗ ಕೇಂದ್ರದವರು ಪರಿಸ್ಥಿತಿ ಅನುಗುಣವಾಗಿಲ್ಲ, ಪರಿಸ್ಥಿತಿ ಆ ರೀತಿ ನಿರ್ಮಾಣವಾದಾಗ ವಿಚಾರ ಮಾಡುತ್ತೇವೆ ಎಂದು ಹೇಳಿದರೆ, ಪರಿಸ್ಥಿತಿ ಅನುಗುಣವಾಗದಿರಲು ಕಾರಣವೇನು, ಇದರ ಬಗ್ಗೆ ನೀವು ಸರಿಯಾಗಿ ಅವರಿಗೆ ತಿಳಿಸಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದೆ. ಅವರು ಇದರ ಬಗ್ಗೆ ವಿಚಾರ ಮಾಡುತಿದ್ದೇನೆ, ಒಂದು ಒಳ್ಳೆಯವಾತಾವರಣದಲ್ಲಿ ನಿರ್ಣಯ ತೆಗೆದುಕೊಳ್ಳುವುದು ಅವಶ್ಯವೆಂದು ಹೇಳುತ್ತಿದ್ದಾರೆ. ಇಷ್ಟು ದಿವಸದಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇವೆಂದು, ಅಥವಾ ನಿರ್ಣಯ ತೆಗೆದುಕೊಳ್ಳುವುದಿಲ್ಲವೆಂದು ಇಲ್ಲಿಯವರೆಗೂ ಹೇಳಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಪತ್ರಿಕೆಗಳ ವರದಿ ಪ್ರಕಾರ, ಮಹಾಜನ್ ಕಮಿಷನ್ ವರದಿಯ ಮೇಲೆ ನಿರ್ಣಯ ತೆಗೆದುಕೊಳ್ಳಲು ಕೇಂದ್ರಸರ್ಕಾರದವರು ನಿಧಾನ ಮಾಡುತ್ತಿದ್ದಾರೆ, ಅದಕ್ಕೆ ರಾಜ್ಯ ಸರ್ಕಾರದವರು ಒತ್ತಾಯ ಪಡಿಸಿದ್ದಾರೆಯೇ ?

ಅಧ್ಯಕ್ಷರು.—ಅದೇ ಪ್ರಶ್ನೆ, ಅದೇ ಉತ್ತರ.

ಶ್ರೀ ವೀರೇಂದ್ರ ಪಾಟೀಲ್ .—ಏನೇನು ಪ್ರಯತ್ನ ಮಾಡಿದ್ದೇವೆಂದು ನಾವು ಉತ್ತರದಲ್ಲಿ ಹೇಳಿದ್ದೇವೆ. ಎರಡು ಮನೆಯಿಂದ ರಿಸೊಲ್ಯೂಶನ್ ಮಾಡಿ ಕಳಿಸಿದ್ದೇವೆ. ಅನೇಕ ಪತ್ರಗಳನ್ನು ಬರೆದಿದ್ದೇವೆ ; ಮತ್ತು ಪ್ರತ್ಯಕ್ಷವಾಗಿ ಅಲ್ಲಿ ಹೋದಾಗ ಭೇಟಿಯಾಗಿ ಹೇಳಿದ್ದೇವೆ, ಮತ್ತು ಸಂಬಂಧಪಟ್ಟವರಿಗೆ ಈಗಾಗಲೇ ಮನವಿ ಮಾಡಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಮಹಾಜನ್ ಕಮಿಶನ್ ರಿಪೋರ್ಟು ಮಹಾರಾಷ್ಟ್ರದವರಿಗೆ ಅನುಕೂಲವಾಗಿಲ್ಲವೆಂದು ತಿಳಿದು, ಅವರು ಇದನ್ನು ಮೊದಲು ಇದ್ದ ಹಾಗೆ, ಅಂದರೆ, ಈಗಿನ ಪರಿಸ್ಥಿತಿಯಂತೆ ಸ್ಟೇಟಸ್ಕೋ ಮಾಡಬೇಕೆಂದು ಕೇಂದ್ರಸರ್ಕಾರದವರಿಗೆ ಮನವಿ ಮಾಡಿರುವುದು ಏನಾದರು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ. ನಾನು ಸ್ಪಷ್ಟವಾಗಿ ಹೇಳಿದೆ. ಹೀಗೆ ಮುಂದುವರಿಸಿಕೊಂಡು ಹೋದರೆ ಅಥವಾ ಶಿಫ್ಟ್ ಮಾಡುತ್ತೇವೆಂದು ಏನು ಹೇಳಿಲ್ಲ. ನಾವು ಕೇಳಿದಾಗಲೆಲ್ಲಾ ಇದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳಿಕೊಂಡು ಬಂದಿದ್ದಾರೆ.

ಶ್ರೀ ಎಂ ಎಸ್ ಕೃಷ್ಣನ್.—ಸರ್ಕಾರದ ನಿಲುವು ಅವಾರ್ಡ ಎಂದು ತೆಗೆದುಕೊಳ್ಳಬೇಕಾಗಿದ್ದಾಗ್ಯೂ, ಕೂಡ ಶ್ರೀಮತಿ ಇಂದಿರಾಗಾಂಧಿಯವರು ಹೇಳಿಕೆ ಕೊಟ್ಟು, ಇದನ್ನು ಸ್ನೂತ್ ಆಗಿ ಸೆಟಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಅರ್ಥ ಏನೆಂದರೆ, ಅವಾರ್ಡ್ ಎಂದು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ ಎಂಬುದು ಅರ್ಥವೆ ? ಇದರ ಬಗ್ಗೆ ತಮ್ಮ ಪ್ರತಿಕ್ರಿಯೆ ಅವರಿಗೆ ತಿಳಿಸಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಹೇಳಿದ್ದೇವೆ. ಇದನ್ನು ಅವಾರ್ಡ್ ಎಂದು ಪರಿಗಣಿಸಿ ಒಪ್ಪಿಕೊಳ್ಳಬೇಕು ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳಿದ್ದೇವೆ. ಮತ್ತು ಶ್ರೀನಗರದಲ್ಲಿ ನ್ಯಾಶನಲ್ ಇಂಟಿಗ್ರೇಷನ್ ಕೌನ್ಸಿಲ್ ಮೀಟಿಂಗಿನಲ್ಲೂ ಈ ತರದ ಒಂದು ಗಡಿ ವಿವಾದಗಳಿಗೆ ಒಂದು ಪ್ರತ್ಯೇಕವಾದ ಮ್ಯಾಶಿನರಿ ಮಾಡಬೇಕೆಂಬ ಸಲಹೆಯನ್ನು ನಾನು ಪ್ರತಿಭಟನೆ ಮಾಡಿ, ಆ ರೀತಿ ಮಾಡುವುದಕ್ಕೆ ನಾನು ಒಂದು ಪಾರ್ಟಿಯಾಗಿ ಆಗುವುದಕ್ಕೆ ತಯಾರಿಲ್ಲವೆಂದು ಹೇಳಿದ್ದೇನೆ. ಆ ರೀತಿ ಒಂದು ಪ್ರಯತ್ನ ನಡೆಯುತ್ತಿದೆ. ಕೇಂದ್ರಸರ್ಕಾರದ ಮುಂದೆ ಕಮಿಶನ್ ರಿಪೋರ್ಟು ಇದೆ. ಒಪ್ಪಿಕೊಳ್ಳಬೇಕೆಂಬ ಪ್ರಶ್ನೆ ಅವರ ಮುಂದೆ ಇದೆ.

ಶ್ರೀ ಬಿ. ಎಂ. ಸಾಣಿಕೊಪ್ಪ.—ಮಹಾಜನ್ ವರದಿಗೆ ಕಾಲಾವಧಿಯನ್ನು ಗೊತ್ತು ಮಾಡಿದ ನಂತರ, ಅದನ್ನು ಮಾಡಿಕೊಳ್ಳದಿದ್ದರೆ, ಈಗಿರುವಂತಹ ಸ್ಟೇಟಸ್ಕೋ ಮುಂದುವರಿಯುವುದು ಎಂಬುದರ ಬಗ್ಗೆ ಏನಾದರೂ ವಿಚಾರ ಮಾಡಿದ್ದಾರೋ ?

ಶ್ರೀ ವೀರೇಂದ್ರ ಪಾಟೀಲ್—ಆರೀತಿ ಹೇಳುವುದನ್ನು ನಾವು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಇನ್ ಟೋ ಟೊ ಒಪ್ಪಿಕೊಳ್ಳಬೇಕೆಂಬುದು ನಮ್ಮ ನಿಲುವು.

ಶ್ರೀ ಎಂ. ನಾಗಪ್ಪ.—ಶ್ರೀಮಾನ್ ನಿಜಲಿಂಗಪ್ಪನವರು ಎಷ್ಟು ಆಸ್ತೆ ವಹಿಸಿ ಈ ಒಂದು ಮಹಾಜನಾ ಕಮಿಶನ್ ನೇಮಿಸಿದರೋ, ಅಷ್ಟೇ ಪ್ರಯತ್ನ ಮಾಡಿ ಅವರ ಅವಧಿ ಮುಗಿಯುವುದರೊಳಗೆ ಈ ವರದಿಯನ್ನು ಕಾರ್ಯಗತ ಮಾಡುತ್ತೇವೆಂದು ಏನಾದರೂ ತಮಗೆ ಭರವಸೆ ಕೊಟ್ಟಿದ್ದಾರೆಯೇ ? ಕೊಡದಿದ್ದರೆ ತಾವು ಅವರಿಂದ ಭರವಸೆ ತೆಗೆದುಕೊಂಡು, ಅವರ ಅಧ್ಯಕ್ಷತೆಯ ಅವಧಿ ಮುಗಿಯುವುದರೊಳಗೆ ಇದನ್ನು ಕಾರ್ಯಗತ ಮಾಡುವುದಕ್ಕೆ ತಾವು ಸಿದ್ಧವಾಗಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ತಮಗೆ ಹೇಳುವುದಾದರೆ ಇದರ ಬಗ್ಗೆ ಏನು ನಮ್ಮ ಧೋರಣೆ ಇದೆ, ಏನು ನಿಲುವು ಇದೆ, ಅದರ ಮೇಲೆ ಪ್ರಯತ್ನಮಾಡಿ ಕೇಂದ್ರ ಸರ್ಕಾರಕ್ಕೆ ನಮ್ಮ ಪ್ರಭಾವ ಬೀರಿದ್ದೇವೆ. ವಿಚಾರವನ್ನು ಹೇಳಿದ್ದೇವೆ. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರಿಗೂ ನಾವು ಈ ವಿಚಾರವನ್ನು ಹೇಳಿದ್ದೇವೆ. ಅವರು ಇಲ್ಲಿ ಅಧಿಕಾರದಲ್ಲಿದ್ದಾಗ ಅವರಿಗೆ ಸಮ್ಮತಿ ಇಲ್ಲದೆ ಇದ್ದರೂ ಕೂಡ ಕೇಂದ್ರ ಸರ್ಕಾರದವರು ಆ ಕಮಿಷನ್ ನೇಮಕ ಮಾಡಿದರು. ಆದ್ದರಿಂದ ಒಮ್ಮೆ ಆ ಕಮಿಷನ್ನಿನವರು ಒಮ್ಮೆ ಒಂದು ರಿಪೋರ್ಟ್ ಕೊಟ್ಟ ಮೇಲೆ ಅದನ್ನ ಪೂರ್ತಿಯಾಗಿ ಒಪ್ಪಿಕೊಳ್ಳುವುದು ಕೇಂದ್ರ ಸರ್ಕಾರದ ನೈತಿಕ ಹೊಣೆಯಾಗಿದೆಯೆಂದು ನಾವು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮಾನ್ ನಿಜಲಿಂಗಪ್ಪನವರಿಗೂ ತಿಳಿಸಿದ್ದೇವೆ ಮತ್ತು ಕೇಂದ್ರ ಸರ್ಕಾರದ ನಾಯಕರಿಗೂ ಈ ವಿಷಯವನ್ನ ಹೇಳಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ಮಹಾಜನ್ ವರದಿ ಬಗ್ಗೆ ಮಹತ್ವದ ಫೈಲು ಕಾಣೆಯಾಗಿದೆ ಎಂದು ಪತ್ರಿಕೆಗಳಲ್ಲಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಆ ಫೈಲು ಕಳೆದು ಹೋಗಿದೆ ಎಂದು ಪತ್ರಿಕೆಗಳಲ್ಲಿ ವರದಿ ಬಂದಿದೆ. ಆದರೆ ಆ ಬಗ್ಗೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಯಾವ ಅಫಿಷಿಯಲ್ ಕಮ್ಯುನಿಕೇಷನ್ನೂ ಬಂದಿಲ್ಲ.

Sri N. B. SIRDESAI.—Is it not a fact that the Marathi-speaking M. L. As. have given vent to the feelings of the majority people in the border area by not supporting the resolution passed in this legislature because the recommendations of the Mahajan Commission are illogical, perverse, one-sided and partial to Mysore ?

Mr. SPEAKER.—We are not here to hear the hon. Member's lecture.

Sri M. NAGAPPA.—The hon. Member cannot say anything against the resolution as it is the decision of this House.

Sri N. B. SIRDESAI.—I want a clarification. Is it a unanimous resolution passed by this House or is it dissented to by some M. L. As. ?

Mr. SPEAKER.—That is a matter of record.

ಶ್ರೀ ಎಚ್. ಚಿಕ್ಕೇಗೌಡ.—ಕೇಂದ್ರ ಸರ್ಕಾರದಲ್ಲಿರತಕ್ಕವರಿಗೆ ಈ ಮಹಾಜನ್ ವರದಿಯನ್ನು ಕಾರ್ಯಗತ ಮಾಡುವಂತೆ ಒತ್ತಾಯ ಮಾಡಲು ರಾಜ್ಯ ಸರ್ಕಾರದವರು ಏನಾದರೂ ಕಾಗದ ಬರೆದಿದ್ದಾರೆಯೇ ? ಮತ್ತು ಕೇಂದ್ರ ಸರ್ಕಾರದವರು ಈ ಮಹಾಜನ್ ವರದಿಯನ್ನು ಕಾರ್ಯಗತ ಮಾಡುವ ಬಗ್ಗೆ ಪಕ್ಷಪಾತ ಮನೋಭಾವವನ್ನೂ ಹೊಂದಿದ್ದಾರೆಂದು ಕಂಡುಬಂದಿದ್ದರೂ ಕೂಡ ರಾಜ್ಯ ಸರ್ಕಾರದವರು ಕ್ರಮ ತೆಗೆದುಕೊಳ್ಳದೇ ಇರುವುದು ಸರಿಯೇ ?

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರ್ಕಾರದವರು ಈ ಬಗ್ಗೆ ಪಕ್ಷಪಾತ ಮನೋಭಾವವನ್ನು ತಾಳಿದ್ದಾರೆಂದು ಹೇಳುವುದು ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಹೇಳುವಹಾಗೆ

ಒಳ್ಳೆಯ ವಾತಾವರಣದಲ್ಲಿ ಈ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ನಾನು ಒಮ್ಮೆ ಪ್ರಧಾನಮಂತ್ರಿಗಳಿಗೆ ಹೇಳಿದ್ದೇನೆ. ಈ ವಿಷಯದಲ್ಲಿ ತಡಮಾಡುವುದು ಸಾಧುವಲ್ಲ ಆದಷ್ಟು ಜಾಗ್ರತೆ ಈ ಬಗ್ಗೆ ನಿರ್ಣಯ ತೆಗೆದು ಕೊಳ್ಳಬೇಕು ಎಂದು ಪದೇಪದೇ ಅನೇಕ ಮಾನ್ಯ ಸದಸ್ಯರು ತಮ್ಮ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ ಎಂದು ನಾನು ಮತ್ತೆ ಪ್ರಧಾನಿಗೆ ಪತ್ರ ಬರೆಯುತ್ತೇನೆ. ಹಾಗೂ ದೆಹಲಿಗೆ ಹೋದಾಗ ಮತ್ತೆ ಅವರೊಡನೆ ಚರ್ಚೆ ಮಾಡುತ್ತೇನೆ.

Supply of Electricity to Villages

307. Sri M. MALLAPPA (Birur).—

Will the Chief Minister be pleased to state :—

(*a*) whether the Government is aware that the public of the villages of Chikkingala and Andehalli in Birur Hobli and Gubbihally and Chikbanur in Sakrepatna Hobli, Kadur Taluk are urging for providing Electricity to the Villages since a long time ;

(*b*) whether Government has prepared any estimates to provide electricity to the said villages ;

(*c*) if not, the reasons for the delay in providing electricity to the said villages ;

(*d*) the action Government proposes to take to provide electricity to the said villages ?

Sri D. PARAMESWARAPPA (Deputy Minister for Major Irrigation and Electricity).—

(*a*) Yes.

(*b*) Yes.

(*c*) For want of adequate finances.

(*d*) The question of inclusion of these villages in the next year's programme will be considered consistant with the funds that would be available.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ನಮ್ಮ ಜಿಲ್ಲೆಗೆ ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಎಂ.ಎಸ್.ಇ.ಬಿ. ಆಫೀಸಿತ್ತು. ಈಗ ಅದನ್ನು ಹರಿದು ಹಂಚಿ ಚಿಕ್ಕಮಗಳೂರು ಜಿಲ್ಲೆಯ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಆಡಳಿತವನ್ನು ಹಾಸನ, ತುಮಕೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿ ಕೆಲಸ ಕಾರ್ಯಗಳಿಗೆ ಸರ್ಕಾರದವರು ಹಣವನ್ನು ಕೊಡುವಾಗ ಎಲ್ಲಾ ಜಿಲ್ಲೆಗಳಿಗೂ ಸೇರಿಸಿ ಕೊಡುತ್ತಾರೆ. ಆದರೆ ಆ ಹಣ ಹಂಚಿಕೆಯಾಗುವಾಗ ನಮ್ಮ ಜಿಲ್ಲೆಗೆ ಸರಿಯಾಗಿ ಕೊಡುತ್ತಿಲ್ಲ. ಇಂಥಾ ಕ್ರಮಗಳಿಂದ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡತಕ್ಕದ್ದರಲ್ಲಿ ತಡವಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†Sri D. PARAMESWARAPPA.—The question is with regard to supply of electricity to villages in Birur Hobli and Kadur Hobli ; it does not pertain to the establishment of a separate Executive Engineer's office in Chickmagalur District.

ಶ್ರೀ ಎಂ. ಮಲ್ಲಪ್ಪ.—ಈ ಸಲವಾದರೂ ಈ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೀರಾ ?

Sri D. PARAMESWARAPPA.—There is every probability that these villages would be included in the programme.

Transfer of Government Primary School Teachers

345. Sri PRABHU RAO JAGADALE (Hulsoor).—

Will the Minister for Education be pleased to state :—

(*a*) whether the Government has adopted as a policy not to post or transfer the Government Primary School teachers to their native villages with a view to improve the working of primary schools in the State;

(*b*) if so, since when this is being followed ?

Sri N. M. KOTRABASAIAH SOGI (Deputy Minister for Education).—

(*a*) No.

(*b*) Does not arise.

Sri PRABHURAO JAGADALE.—I have no supplementaries.

Mr. SPEAKER.—Next question, since the Member has no supplementaries to put.

(*Several members rose to put supplementaries*).

Mr. SPEAKER.—If the member who has tabled the question has no supplementaries, it is not necessary for other Members to ask supplementaries. I have already called the next question.

Sri H. SIDDAVEERAPPA.—If you say that you have already called out the next question and so no supplementaries can now be allowed, we shall accept it. But I only submit that since there is time and since there are several members desirous of putting supplementaries, some more time may be allowed for supplementaries to this question.

Mr. SPEAKER.—Without making this as a precedent I shall allow a few supplementaries on this question, but this should not be cited as a precedent.

ಶ್ರೀ ಎನ್. ಚೆನ್ನೇಗೌಡ.—ಈ ಉಪಾಧ್ಯಾಯರುಗಳು ಶಾನುಭೋಗರಿಗಿಂತ ಜಾಸ್ತಿಯಾಗಿ ರಾಜಕಾರಣದಲ್ಲಿ ಸೇರಿಕೊಂಡು ತಮ್ಮ ಕಾಲವನ್ನೆಲ್ಲಾ ಅದರಲ್ಲಿ ತೊಡಗಿಸುತ್ತಿದ್ದಾರೆ. ಈ ವಿಚಾರವನ್ನು ಈ ಸಭೆಯಲ್ಲಿ ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದವರು ಸಹ ಆಗಿಂದಾಗ್ಗೆ ಹೇಳುತ್ತಿರುತ್ತಾರೆ. ಆದ್ದರಿಂದ ಇವರನ್ನು ಅವರ ಸ್ವಂತ ಜಿಲ್ಲೆಯನ್ನು ಬಿಟ್ಟು ಬೇರೆ ಜಿಲ್ಲೆಗಳಿಗೆ ವರ್ಗ ಮಾಡಲು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಯೇ ?

†ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಶಿಕ್ಷಕರನ್ನು ಅವರ ಸ್ವಗ್ರಾಮದಲ್ಲಿ ಇಡಬೇಕೇ, ಅವರ ತಾಲ್ಲೂಕ್‌ನಲ್ಲಿ ಇಡಬೇಕೇ, ಅಥವಾ ಬೇರೆ ಜಿಲ್ಲೆಗಳಿಗೆ ವರ್ಗ ಮಾಡಬೇಕೇ ಎಂಬ ಬಗ್ಗೆ ಸರ್ಕಾರದ ನಿರ್ದಿಷ್ಟವಾದ ಕಟ್ಟಳೆ ಇಲ್ಲ. ಎಲ್ಲೆಲ್ಲಿ ಅವರು ಸರಿಯಾಗಿ ಕೆಲಸ ಮಾಡದೆ ರಾಜಕಾರಣದಲ್ಲಿ ಭಾಗವಹಿಸುತ್ತಿದ್ದಾರೆಂಬುದು ಗೊತ್ತಾದರೆ ಅಥವಾ ಆ ಬಗ್ಗೆ ಯಾರಿಂದಲಾದರೂ ಆರೋಪ ಬಂದರೆ ವಿಚಾರಣೆ ನಡೆಸಿ ಅವರು ಇರುವ ಸ್ಥಳದಿಂದ ಬೇರೆ ಕಡೆಗೆ ವರ್ಗ ಮಾಡಲಾಗುತ್ತದೆ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಈಗ ಮಾನ್ಯ ಉಪಮಂತ್ರಿಗಳು ಯಾವ ಕಟ್ಟಳೆಯೂ ಇಲ್ಲ ಎಂದು ಹೇಳಿದರು. ಈ ವಿಚಾರದಲ್ಲಿ ಒಂದು ಸರ್ಕ್ಯುಲರ್ ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟಿನಿಂದ ಹೊರಟಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಈ ಬಗ್ಗೆ ಒಂದು ಸರ್ಕ್ಯುಲರ್ ಇರಬಹುದು. ಆದರೆ ಶಿಕ್ಷಣ ಖಾತೆಯಲ್ಲಿ ನಿರ್ದಿಷ್ಟವಾದ ಒಂದು ಕಟ್ಟಳೆ ಇಲ್ಲ. ಸ್ವಗ್ರಾಮದಲ್ಲಿರುವ ಉಪಾಧ್ಯಾಯರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಕಂಡುಬಂದರೆ ತಕ್ಷಣ ಬೇರೆ ಸ್ಥಳಗಳಿಗೆ ವರ್ಗಾ ಮಾಡುತ್ತೇವೆ.

ಶ್ರೀ ಎಚ್. ಸಿದ್ಧವೀರಪ್ಪ.—ಅನೇಕ ಸಂದರ್ಭಗಳಲ್ಲಿ ಉಪಾಧ್ಯಾಯರುಗಳು ಸ್ವಗ್ರಾಮದಲ್ಲಿ ಇದ್ದುಕೊಂಡು ರಾಜಕೀಯದಲ್ಲಿ ಸೇರಿಕೊಂಡು ಊರಿನಲ್ಲಿ ಪಾರ್ಟಿ ಪಂಗಡಗಳನ್ನು ಮಾಡುತ್ತಿರುವ ಬಗ್ಗೆ ನಿರ್ದಿಷ್ಟವಾದ ಪಿರ್ಯಾದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದರೂ ಸಹ ಕಾರ್ಯಕ್ರಮ ತೆಗೆದು ಕೊಳ್ಳದಿರುವುದಕ್ಕೆ ಕಾರಣವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ನಿರ್ದಿಷ್ಟವಾಗಿ ವಿಚಾರಣೆ ಮಾಡಿಸಿದಾಗ ಅವರು ತಪ್ಪಿತಸ್ಥರು ಎಂದು ಕಂಡುಬರಲಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಒಂದು ಕೇಸಿನ ಬಗ್ಗೆ ಆರೋಪ ಮಾಡಿ ಒಂದೂವರೆ ವರ್ಷವಾಯಿತು. ಇನ್ನೂ ಕಾರ್ಯಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ನಿರ್ದಿಷ್ಟವಾದ ಆರೋಪಣೆ ಇದ್ದರೆ ವಿಚಾರಣೆ ಮಾಡಲಾಗುತ್ತದೆ.

ಶ್ರೀ ಎ. ಮುನಿಯಪ್ಪ.—ಈಗ ಉತ್ತಮವಾಗಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ರಿಯಾಯಿತಿ ಕೊಟ್ಟು ಅವರು ವ್ಯಾಪಾರವನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಉತ್ತಮವಾಗಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬರ ಜಾತಕವನ್ನೂ ಸಹ ತರಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಶಿಕ್ಷಕರ ಮೇಲೆ ಆರೋಪಗಳು ಇದ್ದಾಗ ಖಂಡಿತ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಆರೋಪ ಇಲ್ಲದಿದ್ದಾಗ ಅವರನ್ನು ಇದ್ದ ಸ್ಥಳದಲ್ಲಿಯೇ ಇರಿಸಿಕೊಳ್ಳುತ್ತೇವೆ.

Sri G. CHANDRAKANTH.—In certain cases it has been brought to the notice of Government by way of complaints that teachers who have been there in their native places for the past 10 years have indulged in local politics and in spite of that no action has been taken. Have such cases come to your notice ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಹತ್ತು ವರ್ಷಗಳ ಕಾಲ ಒಂದೇ ಕಡೆ ಇರುವುದರ ಬಗ್ಗೆ ಅಲ್ಲ. ಅವರ ಮೇಲೆ ಏನಾದರೂ ಆರೋಪಣೆಗಳು ಬಂದರೆ ಅಂತಹವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಉಪಾಧ್ಯಾಯರುಗಳಿಗೆ ಇದೊಂದು ಉಪ ವೃತ್ತಿಯಾಗಿದೆ. ಸ್ಕೂಲು ಬಾಗಿಲನ್ನು ತೆರೆಯದಿದ್ದರೂ ಪರವಾಗಿಲ್ಲ ಶಾಲೆಗೆ ಯಾವಾಗ ಬೇಕಾದರೆ ಆಗ ಬರಬಹುದು. ಅವರು ತಮ್ಮ ಊರಿನಲ್ಲಿ ವ್ಯವಸಾಯ ಹಾಗೂ ವ್ಯಾಪಾರ ಇತ್ಯಾದಿಗಳನ್ನು ಮಾಡುವುದೇ ಅವರ ಮುಖ್ಯ ಕಸಬಾಗಿರುವುದರಿಂದ ಇದೊಂದು ಉಪ ವೃತ್ತಿಯಾಗಿದೆ. ಇಂತಹವರ ಮೇಲೆ ಆರೋಪಣೆಗಳು ಬಂದಾಗ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದು ಅವಶ್ಯಕವಲ್ಲ ಎನ್ನುವುದು ಸರಕಾರದ ನೀತಿಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂತಹ ಪಾಲಿಸಿಯನ್ನೇನೂ ಸರಕಾರ ಇಟ್ಟು ಕೊಂಡಿಲ್ಲ.

ಶ್ರೀ ಎಂ. ನಾಗಪ್ಪ.—1966 ರಲ್ಲಿ ಮೈಸೂರು ರಾಜ್ಯದ ವಿದ್ಯಾ ಇಲಾಖೆಯವರು ಒಂದು ಪ್ರಕಟಣೆ ಹೊರಡಿಸಿ ತಾಲ್ಲೂಕುಗಳ ಹತ್ತಿರ ಇರುವ ಶಾಲೆಗಳಿಗೆ ಆಯಾ ಸ್ಥಳದಲ್ಲಿರುವ ಉಪಾಧ್ಯಾಯರುಗಳನ್ನು ವರ್ಗಮಾಡಕೂಡದು ಎಂದು ಸೂಚಿಸಿದ್ದುದು ಸರಕಾರದ ಗಮನದಲ್ಲಿದೆಯೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇಂತಹ ಒಂದು ಸರ್ಕ್ಯುಲರು ಹಿಂದೆ ಇತ್ತು. ಆದರೆ ಈ ಸಭೆಯ ಮಾನ್ಯ ಸದಸ್ಯರುಗಳು ಈ ರೀತಿ ದೂರ ಪ್ರದೇಶಗಳಿಗೆ ವರ್ಗ ಮಾಡಿದರೆ ಇವರಿಗೆ ತೊಂದರೆಯಾಗುತ್ತದೆ ಹೀಗೆ ವರ್ಗಗಳನ್ನು ಮಾಡಬಾರದು ಎಂದು ಹೇಳಿದುದರಿಂದ ಬೇರೆ ರೀತಿ ಕ್ರಮ ತೆಗೆದುಕೊಳ್ಳಬೇಕಾಗಿದೆ ಎಂದು ಈ ಆಜ್ಞೆಯನ್ನು ಜಾರಿಗೆ ತರಲಿಲ್ಲ. ಮತ್ತು ತಡೆ ಹಿಡಿಯಲಾಯಿತು.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೋಲಾರ ತಾಲ್ಲೂಕಿನಲ್ಲಿ ಕೆಲವು ಉಪಾಧ್ಯಾಯರುಗಳು ತಾಲ್ಲೂಕು ಬೋರ್ಡು ಚುನಾವಣೆಗಳಲ್ಲಿ ಕಾಂಗ್ರೆಸ್ಸು ಪರವಾಗಿ ಪ್ರಚಾರ ಮಾಡುತ್ತಿದ್ದಾರೆ ಎಂದು ಅವರ ಮೇಲೆ ಸರಕಾರಕ್ಕೆ ದೂರುಗಳನ್ನು ಕೊಟ್ಟಿದ್ದರೂ ಅವರ ಬಗ್ಗೆ ಸರಕಾರ ಯಾವ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದರೊಳಗೆ ಕಾಂಗ್ರೆಸ್ಸು ಪಕ್ಷ ಹಾಗೂ ಬೇರೆ ಪಕ್ಷ ಎಂದು ಬರುವುದಿಲ್ಲ. ಯಾವುದೇ ಆರೋಪಗಳು ನಿರ್ದಿಷ್ಟವಾಗಿ ಸರಕಾರಕ್ಕೆ ಬಂದರೆ ಅವರ ಮೇಲೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲದೆ ಯಾವುದಾದರೂ ಪಕ್ಷಕ್ಕೆ ಪ್ರಚಾರ ಮಾಡಿದರು ಎಂದು ಕಂಡು ಬಂದರೆ ಅವರ ಮೇಲೆ ಶಿಕ್ಷೆ ಮಾಡುವ ಕ್ರಮವನ್ನೂ ತೆಗೆದುಕೊಳ್ಳಲಾಗುತ್ತದೆ.

ಇನ್ನೊಂದು ಅತಿ ಮುಖ್ಯವಾದ ವಿಷಯವೇನೆಂದರೆ ಬೆಂಗಳೂರು ನಗರದಲ್ಲಿ ಸುಮಾರು 63 ಡಿವಿಜನ್‌ಗಳು ಇವೆ. ಈ ಡಿವಿಜನ್‌ಗಳನ್ನು ಕಾರ್ವ್‌ಔಟ್ ಮಾಡುವುದು ಕಾಂಗ್ರೆಸ್ ಆಫೀಸಿನಲ್ಲಿ. ಆದ್ದರಿಂದ ದಯವಿಟ್ಟು ಈ ಸಾರಿ ಎಲೆಕ್ಟೋರಲ್ ರೋಲ್‌ನ್ನು ತಯಾರು ಮಾಡುವಾಗ ಮತ್ತು ಡಿವಿಜನ್‌ಗಳನ್ನು ಸ್ಕಾರ್ವ್‌ಔಟ್ ಮಾಡುವಾಗ ಕಾಂಗ್ರೆಸ್ ಆಫೀಸಿನಲ್ಲಿ ಮಾಡಬೇಕು. ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಇದನ್ನು ಮಾಡುವಂತೆ ಮಾಡಲು ಸಾಕಾದಷ್ಟು ಎಚ್ಚರಿಕೆಯನ್ನು ತೆಗೆದುಕೊಳ್ಳಿ. ನನಗೆ ಗೊತ್ತಿದೆ. ಇದನ್ನು ಯಾವ ರೀತಿ ಮಾಡುತ್ತಾರೆ ಎಂಬುದು ಏಕೆಂದರೆ ನಾನು ಕಾಂಗ್ರೆಸ್ಸಿನಲ್ಲಿ ಇದ್ದವನು. ಎಲೆಕ್ಟೋರಲ್ ರೋಲ್ ಅಲ್ಲಿ ಹೇಗೆ ತಯಾರಾಗುತ್ತಾ ಇತ್ತು ಎಂಬುದನ್ನು ಬೇಕಾದರೆ ನಾನು ಪ್ರಮಾಣಮಾಡಿ ಹೇಳುತ್ತೇನೆ. ಒಂದು ನ್ಯಾಚುರಲ್ ರೀಜನ್ ತೆಗೆದುಕೊಂಡು ಅದಕ್ಕೆ ತಕ್ಕಂತೆ ಡಿವಿಜನ್‌ಗಳನ್ನು ಮಾಡಬೇಕು. ಕಾಂಗ್ರೆಸ್‌ನವರಿಗೆ ಅನುಕೂಲವಾಗುವ ರೀತಿಯಲ್ಲಿ ಡಿವಿಜನ್‌ಗಳನ್ನು ಮಾಡಬೇಡಿ ಎಂದು ಹೇಳುತ್ತೇನೆ. ಹೋದ ಸಾರಿ ಕಾಂಗ್ರೆಸ್‌ನವರು ಗೆಲ್ಲಬೇಕೆಂದು ಹೇಳಿ ಒಂದು ಕಡೆ 34 ಹಳ್ಳಿಗಳನ್ನು ಅದಕ್ಕೆ ಸೇರಿಸಿದರು. ಎರಡನೆಯದಾಗಿ ಒಂದೊಂದು ಡಿವಿಜನ್‌ನಲ್ಲೂ ಇರತಕ್ಕ ಜನಸಂಖ್ಯೆ ಬಹಳ ವ್ಯತ್ಯಾಸ ಇದೆ. 1964ರಲ್ಲಿ ಜಯನಗರದ ಎಲೆಕ್ಟೋರಲ್ ರೋಲ್‌ನಲ್ಲಿ 21 ಸಾವಿರ ಜನ ಇದ್ದರು, 310 ಜನ ಎಲೆಕ್ಟೋರಲ್ ರೋಲ್‌ನಲ್ಲಿ ಇದ್ದಾರೆ. ಮ್ಯಾಕ್ಐವರ್ ಟೌನಿನಲ್ಲಿ 6,321, ಶಿವನ್ ಚೆಟ್ಟಿಗಾರ್ಡನ್ 6,326, ಮರ್ಫಿಟೌನ್ 7,685 ಹೀಗೆ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಬಹಳ ವ್ಯತ್ಯಾಸ ಇದೆ. ಸಾಧ್ಯವಾದಮಟ್ಟಿಗೂ ಈಕ್ವಲ್ ಡಿವಿಜನ್‌ಗಳನ್ನು ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಕಾರ್ಪೊರೇಷನ್ ಎಲೆಕ್ಷನ್‌ಗಳು ಸುಗಮವಾಗಿ ಇಲ್ಲಿ ನಡೆಯಬೇಕಾದುದು ಮುಖ್ಯ. ಬೆಂಗಳೂರು ಇಡೀ ಭಾರತದಲ್ಲೇ ಬಹಳ ಸುಂದರವಾದ ನಗರ ಹಾಗೂ ಅತಿ ಮುಖ್ಯವಾದ ನಗರ. ಇಲ್ಲಿ ನಡೆಯತಕ್ಕ ಕಾರ್ಯಗಳು ಇಡೀ ರಾಜ್ಯಕ್ಕೂ ಮತು ಸರ್ಕಾರಕ್ಕೂ ಒಂದು ಒಳ್ಳೆಯ ಹೆಸರನ್ನು ತರುವಂತೆ ಇದ್ದರೆ ಸಾಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ, ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎ. ನಂಜಪ್ಪ (ಶಾಂತಿನಗರ).—ಮಾನ್ಯ ಅಧ್ಯಕ್ಷರೇ: ಮಾನ್ಯ ಮಂತ್ರಿಗಳು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಬೆಂಗಳೂರು ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ಲನ್ನು ಸ್ವಾಗತಿಸುತ್ತಾ ಎರಡು ಮಾತುಗಳನ್ನು ಹೇಳಬಯಸುತ್ತೇನೆ.

ಮಾನ್ಯ ಶಾಮಣ್ಣನವರು ಮಾತನಾಡುತ್ತ ಸರ್ಕಾರದವರು ಕಾರ್ಪೊರೇಷನ್ ಆಡಳಿತವನ್ನು ಸೂಪರ್‌ಸೀಡ್ ಮಾಡಬಾರದಾಗಿತ್ತು, ಆದರೆ ಒಂದು ರಾಜಕೀಯಕ್ಕಾಗಿ ಅದನ್ನು ಸೂಪರ್‌ಸೀಡ್ ಮಾಡಿದರು, ಅದನ್ನು ನಾನು ಪ್ರಮಾಣಬೇಕಾದರೂ ಮಾಡಿ ಹೇಳು ಎಂದರೆ ಹೇಳುತ್ತೇನೆ ಎಂದು ಹೇಳಿದರು. ಆದರೆ ಅವರು ಯಾವ ಪ್ರಮಾಣವನ್ನೂ ಮಾಡಲಿಲ್ಲ, ನಾನೂ ಮತ್ತು ಅವರೂ ಇಬ್ಬರೂ ಒಂದೇ ಗರಡಿಯಲ್ಲಿ ತಯಾರಾದವರು. ಅವರೂ ನಾನೂ ಇಬ್ಬರೂ ಕಳೆದ ಹತ್ತಾರು ವರ್ಷಗಳಿಂದ ಕಾರ್ಪೊರೇಷನ್ ಆಡಳಿತದಲ್ಲಿ ಸೇರಿರುತ್ತೇವೆ. 1965ರಲ್ಲಿ ಕಾರ್ಪೊರೇಷನ್ ಆಡಳಿತ ಕಾಂಗ್ರೆಸ್ಸಿನವರ ಕೈಗೆ ಸಿಕ್ಕಿದ್ದರೂ ಆಗ ಕಾಂಗ್ರೆಸ್ಸೇತರ ಪಕ್ಷಕ್ಕೆ ಸೇರಿದ್ದ ಶ್ರೀಮಾನ್ ನಾಗಣ್ಣನವರು ಅಧ್ಯಕ್ಷರಾದರು. ಆಗ ಕಾಂಗ್ರೆಸ್ಸಿನಲ್ಲಿ 24 ಜನ ಸದಸ್ಯರಿದ್ದರು. ಅಧ್ಯಕ್ಷರು ಕಾಂಗ್ರೆಸ್ ಪಕ್ಷದ ವಿರೋಧಿಗಳಾಗಿದ್ದುದರಿಂದ ಆಗ ಕಾಂಗ್ರೆಸ್ ಸದಸ್ಯರಿಗೆ ಅಲ್ಲಿ ಬಹಳ ಕಿರುಕುಳವನ್ನು ಕೊಡಲಾಯಿತು. ಆದಾಗ್ಯೂ ನಾವು ಆಗ ಏನೋ ಒಂದು ರೀತಿಯಲ್ಲಿ ಆಡಳಿತ ನಡೆಸಿಕೊಂಡು ಬಂದೆವು. ಆದರೆ ಕಾರ್ಪೊರೇಷನ್ ಆಡಳಿತ ವಿರೋಧಿ ಪಕ್ಷಗಳಿಗೆ ಸಿಕ್ಕಿದ್ದಾಗ ಅಲ್ಲಿ ಅದರ ಆಡಳಿತವನ್ನು ಸರ್ಕಾರದವರು ಸೂಪರ್‌ಸೀಡ್ ಮಾಡಲಿಲ್ಲ. ಆ ಆಡಳಿತ ಕಾಂಗ್ರೆಸ್ಸಿನವರ ಕೈಗೆ ಸಿಕ್ಕಿದ್ದಾಗ ಅಲ್ಲಿ ಆಡಳಿತವನ್ನು ಸರ್ಕಾರದವರು ಸೂಪರ್‌ಸೀಡ್ ಮಾಡಿದರು. ಹಾಗೆ ಸೂಪರ್‌ಸೀಡ್ ಮಾಡುವುದಕ್ಕೆ ಮುನ್ನ ಸಂಬಂಧಪಟ್ಟ ಎಲ್ಲ ಕೌನ್‌ಸಿಲರುಗಳಿಗೂ ಸರ್ಕಾರದವರು ಕ್ರಮವಾಗಿ ನೋಟಿಸನ್ನು ಕೊಟ್ಟು ಅವರ ಸಮಾಧಾನವನ್ನು ಕೇಳಿ ಅದು ಸರ್ಕಾರಕ್ಕೆ ಸರಿಕಾಣದೆ ಇದ್ದ ಕಾರಣ ಅವರು ಅದನ್ನು ಸೂಪರ್‌ಸೀಡ್ ಮಾಡಿದರು. ಆದ್ದರಿಂದ ಅದರಲ್ಲಿ ಸರ್ಕಾರದವರ ತಪ್ಪೇನೂ ಇರುವುದಿಲ್ಲ. ಅಲ್ಲಿ ಯಾರು ನಮಗೆ ಓಟನ್ನು ಕೊಟ್ಟು ಕಳುಹಿಸಿದ್ದರೋ ಅವರು ಅವರ ಕೆಲಸಕಾರ್ಯಗಳು ಸರಿಯಾಗಿ ನಡೆಯದೆ ಇದ್ದ ಕಾರಣ ಅವರು ಕೌನ್‌ಸಿಲರುಗಳ ಮರ್ಯಾದೆಯನ್ನು ಕಳೆಯುವುದಕ್ಕೆ ಪ್ರಾರಂಭ ಮಾಡಿದರು. ಆದ್ದರಿಂದ ಸರ್ಕಾರ ಮುಂದೆ ಬರಲೇ ಬೇಕಾಯಿತು. ಒಳ ವಿಷಯಗಳು ಹೀಗಿರುವಾಗ ಸರ್ಕಾರವನ್ನು ನಾವೇತಕ್ಕೆ ದೂಷಣೆ ಮಾಡಬೇಕು? 1966ರಲ್ಲಿ ಕಾರ್ಪೊರೇಷನ್ ಮೀಟಿಂಗ್ ನಡೆಸುವುದಕ್ಕೇ ಅಲ್ಲಿದ್ದ ವಿರೋಧ ಪಕ್ಷಗಳ ಸದಸ್ಯರು ಅವಕಾಶ ಕೊಡದೆ ಬಹಳ ತೊಂದರೆ ಕೊಟ್ಟರು. ಜನರಿಗೆ ದೊರೆಯಬೇಕಾದ ಅನುಕೂಲಗಳು ದೊರೆಯಲಿಲ್ಲ. ಆಗ ಸರ್ಕಾರದವರು ಆಡಳಿತ ನಡೆಸುತ್ತಿದ್ದ ಕಾರ್ಪೊರೇಟರುಗಳಿಗೆ ನೋಟೀಸನ್ನು ಕೊಟ್ಟು ಅನಂತರ ಸೂಪರ್‌ಸೀಡ್ ಮಾಡಿದ್ದಾರೆ. ಅದರಲ್ಲಿ ಸರ್ಕಾರದವರ ತಪ್ಪೇನೂ ಇಲ್ಲ. ಆದ್ದರಿಂದ ಶ್ರೀಮಾನ್ ಶ್ಯಾಮಣ್ಣನವರು ಸರ್ಕಾರದವರನ್ನು ದೂಷಣೆ ಮಾಡತಕ್ಕದ್ದು ಸಾಧುವಾದ್ದಲ್ಲ. ಅಲ್ಲಿ ಆಗ ಯಾರು ಯಾರು ಕಾರ್ಪೊರೇಟರುಗಳಾಗಿದ್ದರೋ ಅವರೇ ಒಬ್ಬರಿಗೊಬ್ಬರು ಅಲ್ಲಿ ಗುದ್ದಾಡುವುದಕ್ಕೆ ಪ್ರಾರಂಭವಾಯಿತು. ಅದು ತೀರಾ ನಾಚಿಗೆಗೇಡಾದದ್ದು. ಅದಕ್ಕಾಗಿ ಅದನ್ನು ವಿಧಿಯಿಲ್ಲದೆ ಸೂಪರ್‌ಸೀಡ್ ಮಾಡಬೇಕಾಯಿತು. ಅಷ್ಟೇ ವಿನಾ ಅದರಲ್ಲಿ ಯಾವ ರಾಜಕೀಯವೂ ಇಲ್ಲ. ಅದಕ್ಕೆಲ್ಲಾ ಕಾರಣರು ಆಗಿದ್ದ ಕೌನ್‌ಸಿಲರುಗಳೇ. ಆದರೆ ಅಲ್ಲಿ ಈ ದಿವಸ ಅಧಿಕಾರಿಗಳನ್ನು ಆಡಳಿತ ನಡೆಸುವುದಕ್ಕೆ ಇಟ್ಟಿರುವುದರಿಂದ ನಾಗರೀಕರಿಗೆ ಬಹಳ ತೊಂದರೆಯಾಗಿದೆ. ಅದನ್ನು ನಾನೂ ಒಪ್ಪುತ್ತೇನೆ. ಅದಕ್ಕಾಗೇ ಈಗ ಸರ್ಕಾರದವರು ಈ ತಿದ್ದುಪಡಿಯನ್ನು ತಂದಿದ್ದಾರೆ. ನಾನು ಆ ಶಾಂತಿನಗರದಲ್ಲಿ ಎಲ್ಲಾ ಹೆಣ್ಣುಮಕ್ಕಳಿಗೂ ಅನುಕೂಲವಾಗುವಂತೆ ಒಂದು ಗರ್ಲ್ಸ್ ಹೈಸ್ಕೂಲಿಗೆ ಕಟ್ಟಡ ಕಟ್ಟಿಸಲು ಎಷ್ಟೋ ಪ್ರಯತ್ನ ಮಾಡಿದೆ. ಅದಕ್ಕೆ ಅಲ್ಲಿದ್ದ ವಿರೋಧಪಕ್ಷದ ಸದಸ್ಯರುಗಳು ಅವಕಾಶ ಕೊಡಲಿಲ್ಲ. ಹೀಗಾಗಿ ಅಲ್ಲಿ 1965ರಿಂದಲೂ ಕಟ್ಟಡವಾಗುವುದಕ್ಕೆ ಅವಕಾಶವಾಗುತ್ತಿಲ್ಲ ಇತ್ತೀಚೆಗೆ ಕಳೆದ 2 ವರ್ಷಗಳಿಂದ ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ನಲ್ಲಿಗಳನ್ನು ಮುಚ್ಚಿಸಿದ್ದಾರೆ. ಹಾಲಿ ಇರತಕ್ಕ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಪ್ರಜೆಗಳಿಗೆ ಅನುಕೂಲಗಳು ಸಿಗುತ್ತಿಲ್ಲ. ಕಾರ್ಪೊರೇಷನ್ ಸರಿಯಾಗಿ ಕೆಲಸ ನಡೆಸುತ್ತಿಲ್ಲ. ಶ್ಯಾಮಣ್ಣನವರು ಜನರಿಗೆ ಬಹಳ ತೊಂದರೆಯಾಗುತ್ತಿದೆ ಎಂದು ಹೇಳುತ್ತಿರುವುದು ನಿಜ. ಅದನ್ನು ನಾನೂ ಕೂಡ ಒಪ್ಪುತ್ತೇನೆ. ಅಲ್ಲಿಗೆ ಒಳ್ಳೆಯ ಅಧಿಕಾರಿಗಳನ್ನು ತರಬೇಕೆಂದು ಶ್ರೀಮಾನ್ ಶ್ಯಾಮಣ್ಣನವರು ಹೇಳಿದ್ದು ನ್ಯಾಯವಾಗಿದೆ. ಅವರು ಹೇಳತಕದ್ದೆಲ್ಲಾ ಸರಿಯೇ. ಆದರೆ ಸರ್ಕಾರದವರು ರಾಜಕೀಯ ಕಾರಣದಿಂದ ಅದನ್ನು ಸೂಪರ್‌ಸೀಡ್ ಮಾಡಿದರು ಅನ್ನುವುದನ್ನು ನಾನು ಒಪ್ಪುವುದಿಲ್ಲ. ನಾವು ಎಲ್ಲರೂ ಮೊದಲು ರೂಲ್ಸ್ ಕಾನೂನುಗಳನ್ನು ಅನುಸರಿಸಿ ನಡೆಯೋಣ. ಜನರಿಗೆ ಆದಷ್ಟೂ ಅನುಕೂಲಗಳನ್ನು ಮಾಡೋಣ; ಅದನ್ನು ಕೈಬಿಟ್ಟು ಸರ್ಕಾರವನ್ನು ಸುಮ್ಮನೆ ದೂಷಣೆ ಮಾಡುತ್ತಿದ್ದರೆ ಅದು ಪ್ರಯೋಜನವಾದುದಲ್ಲ ಎಂದು ಹೇಳುತ್ತೇನೆ. ಇನ್ನು ಶ್ರೀಮಾನ್ ಶ್ಯಾಮಣ್ಣನವರು ಕಾರ್ಪೊರೇ

(ಶ್ರೀ ಎ. ನಂಜಪ್ಪ)

ಷನ್ನಿಗೆ ಸೇರಿದ ಕೆಲವು ಅಂಗಡಿಗಳನ್ನು ಬಾಡಿಗೆಗೆ ಕೊಡತಕ್ಕ ವಿಚಾರದಲ್ಲಿ ಬಹಳ ಕಡಮೆ ಬಾಡಿಗ್ಗೆ ಕೊಟ್ಟರು ಅವನ್ನು ಇನ್ನೂ ಹೆಚ್ಚಿನ ಬಾಡಿಗ್ಗೆ ಕೊಡತಕ್ಕ ಅವಕಾಶವಿತ್ತು ಎಂದು ವಾದ ಮಾಡಿದ್ದಾರೆ. ಅವನ್ನು ನಾನು ಒಪ್ಪುವುದಿಲ್ಲ. ನಮ್ಮ ಆ ರೂಲ್ಸಿನಲ್ಲಿ ಒಂದು ಕಡೆ ಆ ಬಾಡಿಗೆಯನ್ನು ಲಾಟರಿ ಮೂಲಕ ನಿರ್ಧರಿಸಬಹುದು ಎಂದಿದೆ. ಅದರಂತೆ ಅದನ್ನು ಮಾಡಲಾಗಿದೆ. ಆದರೆ ಹಿಂದೆ ಶ್ರೀಮಾನ್ ಶ್ಯಾಮಣ್ಣನವರು ಅಲ್ಲಿ ಕೌನ್ಸಿಲರಾಗಿದ್ದಾಗ ಅಲ್ಲಿ ಇವರ ಆಡಳಿತವಿದ್ದ ಕಾಲದಲ್ಲಿ ಇವರು ಯಾವ ರೂಲ್ಸ್ ರೆಗ್ಯುಲೇಷನ್ ಇಲ್ಲದೆ ಅವರ ಪಾರ್ಟಿಗೆ ಅವರಿಗೆ ಬೇಕಾದವರಿಗೆ ಆ ಮನೆಗಳನ್ನು ಕೊಟ್ಟರು. ಅಲ್ಲಿ ಆಡಳಿತದಲ್ಲಿ ಬಗಿ ತಪ್ಪಿ ಕೆಲಸಗಳು ಅಡ್ಡದಾರಿಗೆ ಹೊರಟಿದ್ದರಿಂದ ಸರ್ಕಾರದವರು ಸೂಪರ್‌ಸೀಡ್ ಮಾಡಿದರು. ಅವರು ಹೇಳಿದಹಾಗೆ ಎಲ್ಲರೂ ರಾಜಕೀಯದಿಂದ ದೂರವಿದ್ದು ಅಲ್ಲಿ ಜನರಿಗೇನು ಅನುಕೂಲವಾಗಬೇಕು ಎಂಬುದನ್ನು ಅಷ್ಟೇ ತಮ್ಮ ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಿದರೆ ಅಲ್ಲಿ ಒಂದು ಪಾಠಶಾಲೆ—ಒಂದು ಆಸ್ಪತ್ರೆ ಇತ್ಯಾದಿಗಳನ್ನು ಮಾಡಿ ಜನಕ್ಕೆ ಅನುಕೂಲತೆಯನ್ನು ಮಾಡಿಕೊಡೋಣ. ಅಂದಾಗ ಯಾರೂ ರಾಜಕೀಯಕ್ಕೆ ಕೈ ಹಾಕಬಾರದು. ಆಗ ಎಲ್ಲಿವೂ ಸರಿಯಾಗಿ ನಡೆಯುತ್ತವೆ. ಆಗ ಸರ್ಕಾರವನ್ನು ನಾವು ಟೀಕೆ ಮಾಡಬೇಕಾದ ಪ್ರಮೇಯವೇ ಬರುವುದಿಲ್ಲ. ಇಷ್ಟು ಮಾತನ್ನು ಹೇಳುವುದಕ್ಕೆ ನನಗೆ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಗಳೇ: ಈಗ ಈ ಬಿಲ್ಲನ್ನು ತಂದಿರತಕ್ಕ ವಿಧಾನದ ಬಗ್ಗೆ ಹಾಗೂ ಇದರಲ್ಲಿ ಅಡಕವಾಗಿರತಕ್ಕ ಅಂಶಗಳ ಬಗ್ಗೆ ಮತ್ತು ಹಿಂದೆ ಇದೇ ಬಿಲ್ಲುಗಳನ್ನು ಯಾವ ರೂಪದಲ್ಲಿ ತರಲಾಗುತ್ತಿತ್ತು ಅನ್ನುವುದರ ವಿಚಾರವಾಗಿ ನಾನು ಎರಡು ಮಾತುಗಳನ್ನಾಡಬೇಕಾಗಿದೆ.

ಈ ಹಿಂದೆ ನನಗೆ ತಿಳಿದಿರುವ ಹಾಗೆ ಯಾವ ಯಾವ ಕ್ಲಾಜುಗಳನ್ನು ತಿದ್ದುಪಡಿ ಮಾಡಲಾಗುತ್ತದೆಯೋ ಆ ಕ್ಲಾಜುಗಳ ಒರಿಜಿನಲ್ ಸೆಕ್ಷನ್‌ಗಳು ಯಾವ ರೂಪದಲ್ಲಿದ್ದವು ಎಂಬುದನ್ನು ಆ ತಿದ್ದುಪಡಿಯಾದ ಕ್ಲಾಜಿನ ಪಕ್ಕದಲ್ಲೇ ಪ್ರಿಂಟ್ ಮಾಡುತ್ತಿದ್ದರು. ಆದರೆ ಈಗ ಸಭೆಯ ಮುಂದೆ ಇಟ್ಟಿರತಕ್ಕ ಬಿಲ್ಲಿನಲ್ಲಿ ಯಾವ ಯಾವ ತಿದ್ದುಪಡಿಯಾದ ಕ್ಲಾಜುಗಳಿವೆಯೋ ಅವುಗಳಿಗೆ ಒರಿಜಿನಲ್ ಕ್ಲಾಜುಗಳನ್ನು ಇಲ್ಲಿ ಸೂಚಿಸದೆ ಇರತಕದ್ದು ಒಂದು ಲೋಪವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಿಂದ ನಮಗೆ ಯಾವ ಕಾರ್ಯಕ್ಕಾಗಿ ಇವುಗಳನ್ನು ತಿದ್ದುಪಡಿ ಮಾಡಿದರು ಅನ್ನುವುದು ಗೊತ್ತಾಗುವುದಿಲ್ಲ. ಉದಾಹರಣೆಗೆ ಇಲ್ಲಿ ಕ್ಲಾಜ್ 47 (ಎಸಿ) ನಲ್ಲಿ ಕಾರ್ಪೊರೇಷನ್ ಸೂಪರ್‌ಸೀಡ್ ಆಗತಕ್ಕ ಅವಧಿಯನ್ನು ಕರ್ಟೈಲ್ ಮಾಡಬೇಕು ಎಂದು ಇಲ್ಲಿದೆ. ಆದರೆ ಅದರ ಒರಿಜಿನಲ್ ಸೆಕ್ಷನ್‌ನ್ನಲ್ಲಿ ಏನಿತ್ತು? ಅದನ್ನು ಇಲ್ಲಿ ಏತಕ್ಕೆ ಪ್ರಿಂಟ್ ಮಾಡಲಿಲ್ಲ. ಅದನ್ನು ರೂಲ್ಸಿನಲ್ಲಿಯೂ ಸ್ಪಷ್ಟವಾಗಿ ಹೇಳಿಲ್ಲ. ಆದರೆ ಪರಂಪರೆಯಾಗಿ ನಡೆದುಕೊಂಡು ಬರುತ್ತಿದ್ದ ಪದ್ಧತಿಯನ್ನು ಏಕೆ ಈ ದಿವಸ ಬದಲಾಯಿಸಿದರು? ಇದರ ಬಗ್ಗೆ ಸರ್ಕಾರದವರು ಸಭೆಗೆ ಒಂದು ವಿವರಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೊನ್ನೆ ಬೆಂಗಳೂರು ಕಾರ್ಪೊರೇಷನ್ ಆಕ್ಟ್ ಪ್ರಿಂಟ್ ಮಾಡಿದ್ದಾರೆ. ಅವು ಇನ್ನೂ ನಮ್ಮ ಕೈಗೆ ಸೇರಿಲ್ಲ. 1949ರಿಂದ 1968ರವರೆಗೆ ಏನೇನು ತಿದ್ದುಪಡಿಗಳು ಆಗಿವೆಯೋ ಅದನ್ನು ತಿಳಿದುಕೊಳ್ಳುವುದಕ್ಕೆ ಬಹಳ ಕಷ್ಟವಾಗಿದೆ. ಅದು ಬೇರೆ ಬೇರೆ ಕಡೆಗಳಲ್ಲಿ ಇರುತ್ತದೆ. ರೂಲ್ಸಿಗೆ ಸರಿಯಾಗಿ ಮಾಡದಿದ್ದರೆ ಅದು ರೂಲ್ಸಿಗೆ ವಿರೋಧವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಗಮನಿಸಬೇಕು.

ಎರಡನೆಯ ವಿಷಯ. ಈ ಮಸೂದೆಯಲ್ಲಿ ಮಾನ್ಯ ಮಂತ್ರಿಗಳು ಹೇಳಿರುವುದು 3 ವಿಚಾರಗಳು. ಒಂದು, ಬೆಂಗಳೂರು ಕಾರ್ಪೊರೇಷನ್ ಸೂಪರ್‌ಸೀಡ್ ಆಗಿವೆ, ಅದರ ಪೀರಿಯಡ್ಡನ್ನು ಕಡಿಮೆಮಾಡುವುದು. ಎರಡು, ಕಾರ್ಪೊರೇಷನ್ನಿನವರು ಎಲೆಕ್ಟೊರಲ್ ರೋಲ್ಸ್ ಸಿದ್ಧಗೊಳಿಸುವುದು, ಮತ್ತು ಮೂರು, ಅಪೋರ್ಷನ್‌ಮೆಂಟ್ ಆಫ್ ಪ್ರಾಪರ್ಟಿಟ್ಯಾಕ್ಸ್. ಬೆಂಗಳೂರು ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿರುವುದು ಸರಿಯಾದುದಲ್ಲವೆನ್ನುವುದನ್ನು ಸರ್ಕಾರದವರೇ ಒಪ್ಪಿಕೊಂಡು ಅದನ್ನು ಈಗ ತೆಗೆದುಹಾಕಬೇಕೆಂಬ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆಂಬುದು ಈಗ ವ್ಯಕ್ತವಾಗುತ್ತದೆ. ಹಿಂದೆ ಅಲ್ಲಿ ವಿರೋಧಪಕ್ಷದವರೇ ಗೆದ್ದಿದ್ದರು. ಕಾಂಗ್ರೆಸ್ಸಿನವರು ಮುಂದಿನ ಚುನಾವಣೆಯಲ್ಲಿ ಗೆದ್ದು ಬರುವುದಿಲ್ಲವೆಂದು ತಿಳಿದುಕೊಂಡು ಮುಖ್ಯವಾಗಿ ಈ ಮಸೂದೆಯಲ್ಲಿ ಪ್ರಾಪರ್ಟಿ ಟ್ಯಾಕ್ಸನ್ನು ಸೇರಿಸಿದ್ದಾರೆ. ಈಗ ಸೂಪರ್‌ಸೆಷನ್

ಮಾಡಿರುವುದನ್ನು ಕಡಿಮೆಮಾಡಬೇಕೆಂದು ತಾವೇ ಇಲ್ಲಿ ಸೇರಿಸಿರುವುದನ್ನು ನೋಡಿದರೆ, ಕಾರ್ಪೊರೇಷನ್ ಚುನಾವಣೆಯನ್ನು ಗ್ರಾಜುಯಲ್ಲಾಗಿ ಮಾಡಬೇಕೆಂದು ಸೇರಿಸಿದ್ದೀರಿ ಎಂಬ ಅರ್ಥ ಬರುತ್ತದೆ. ಆದ್ದರಿಂದ ಮೊಟ್ಟಮೊದಲನೆಯದಾಗಿ, ಕಾರ್ಪೊರೇಷನ್ನನ್ನು 1970ರವರೆಗೆ ಸೂಪರ್‌ಸೀಡ್ ಮಾಡಿದ್ದೂ ಸರಿಯಾದುದಲ್ಲ, ಇವತ್ತು ಆ ಅವಧಿಯನ್ನು ಕಡಿಮೆಮಾಡಬೇಕೆಂದು ಈ ಮಸೂದೆಯಲ್ಲಿ ತಂದಿರುವುದು ನೋಡಿದರೆ, ಆಳುವ ಪಕ್ಷವೇ ಇದನ್ನು ಒಪ್ಪಿದಹಾಗೆ ಆಯಿತು. ಒಟ್ಟಿನಲ್ಲಿ ಬೆಂಗಳೂರು ಕಾರ್ಪೊರೇಷನ್‌ನ್ನು ಸೂಪರ್‌ಸೆಷನ್ ಮಾಡಿದ್ದು ಸರಿಯಾದುದಲ್ಲವೆಂದು ನನ್ನ ವ್ಯಾಖ್ಯಾನ. ಅದನ್ನು ನಾನು ಮಾನ್ಯ ಮಂತ್ರಿಗಳಿಗೆ ಈಗಾಗಲೇ ಹೇಳಿದ್ದೇನೆ. ಆ ಮಾತನ್ನು ಈ ಸಭೆಯಲ್ಲಿಯೂ ಧೈರ್ಯದಿಂದ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಈಗ ಹೊಸದಾಗಿ ಬಂದಿದ್ದಾರೆ. ಮಾನ್ಯ ಶ್ರೀ ನಂಜಪ್ಪನವರು ಒಂದು ರೀತಿ ಇಲ್ಲಿ ಹೇಳಿದ್ದಾರೆ. ಮಾನ್ಯ ಶ್ರೀ ಶಾಮಣ್ಣನವರು ಒಂದು ರೀತಿ ಇಲ್ಲಿ ಹೇಳಿದ್ದಾರೆ. ಮೂಲಭೂತವಾಗಿ ಬೆಂಗಳೂರು ಕಾರ್ಪೊರೇಷನ್ನನ್ನು ಸೂಪರ್‌ಸೆಷನ್ ಮಾಡಬೇಕಾಗಿತ್ತೇ ಎಂಬುದು ಈಗ ಇರತಕ್ಕ ಮುಖ್ಯ ಪ್ರಶ್ನೆ. ಮಾನ್ಯ ಶ್ರೀ ಶಾಮಣ್ಣನವರು ಮತ್ತು ಮಾನ್ಯ ಶ್ರೀ ನಂಜಪ್ಪನವರು ಹಿಂದೆ ಕಾರ್ಪೊರೇಷನ್ನಿನಲ್ಲಿದ್ದರು. ಆದರೆ ಇಲ್ಲಿಗೆ ಅವರು ನೇರವಾಗಿ ಚುನಾಯಿತರಾಗಿ ಬಂದಿರುವವರು. ನಾನು ಅವರ ಬಗ್ಗೆ ವಿರೋಧಕ್ಕೆ ಹೋಗುವುದಿಲ್ಲ. ಮಾನ್ಯ ಶ್ರೀ ಶಾಮಣ್ಣನವರೇ ಆಗಲೀ ಅಥವಾ ಮಾನ್ಯ ಶ್ರೀ ನಂಜಪ್ಪನವರೇ ಆಗಲೀ ಅಥವಾ ಯಾರಾದ್ದಾದರೂ ಆಗಿರಲೀ, ಇವರದು ಸರಿಯೇ, ಅವರದು ಸರಿಯೇ ಎಂಬ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸೂಪರ್‌ಸೀಡ್ ಮಾಡಿದ್ದೇ ತಪ್ಪು ಎಂದು ನನ್ನ ಅಭಿಪ್ರಾಯ. ನನಗೆ ತಿಳಿದಮಟ್ಟಿಗೆ ಸೂಪರ್‌ಸೀಡ್ ಮಾಡುವುದಕ್ಕೆ ಗಾಢವಾದ ಕಾರಣಗಳು ಇರಲಿಲ್ಲ. ಸೂಪರ್‌ಸೀಡ್ ಮಾಡುವುದಕ್ಕೆ ಗಾಢವಾದ ಕಾರಣಗಳು ಇರಬೇಕು. ನಾನು ಹೇಳುವುದಾದರೆ, ಕಾರ್ಪೊರೇಷನ್ನಿನವರು ಯಾವ ತೆರಿಗೆಯನ್ನು ವಸೂಲುಮಾಡುವುದಿಲ್ಲ ವೆಂಬುದಾಗಲೀ, ತೆರಿಗೆಗಳನ್ನು ಪ್ರತಿಯೊಂದು ತಿಂಗಳೂ ರದ್ದುಮಾಡುತ್ತಿದ್ದಾರೆಂದಾಗಲೀ ಕಾರ್ಪೊರೇಷನ್ ಅವರು ಲಂಚಗುಳಿತನ ಮತ್ತು ಭ್ರಷ್ಟಾಚಾರ ನಡೆಸುತ್ತಿದ್ದಾರೆಂದಾಗಲೀ, ಕಾರ್ಪೊರೇಷನ್ ಅಧಿಕಾರಿಗಳು ಕೆಳಗಿನ ಅಧಿಕಾರಿಗಳನ್ನು ಹಾಗೂ ನೌಕರರನ್ನು ದಬ್ಬಾಳಿಕೆಯಿಂದ ನೋಡುತ್ತಿದ್ದಾರೆಂದಾಗಲೀ, ಈ ತರಹ ಕಾರಣಗಳು ಇದ್ದಿದ್ದರೆ, ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡಬಹುದಾಗಿತ್ತು. ಅಂತಹ ಯಾವ ಮೂಲಭೂತ ಕಾರಣಗಳೂ ಇರಲಿಲ್ಲ. ಆದ್ದರಿಂದ ಸೂಪರ್‌ಸೀಡ್ ಮಾಡಿದ್ದೇ ತಪ್ಪು ಎಂದು ಇವತ್ತಿನದಿವಸ ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಬೆಂಗಳೂರು ನಗರವೊಳಗೆ ಮಾನ್ಯ ಶ್ರೀ ವೈ. ರಾಮಚಂದ್ರ ಅವರು ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. ಅವರು ಕಾರ್ಪೊರೇಷನ್ ಚುನಾವಣೆಮಾಡಿದರೆ ನಾವು ಒಬ್ಬರೂ ಉಳಿಯುವುದಿಲ್ಲ, ನಿರ್ನಾಮವಾಗುತ್ತೇವೆಂದು ಹೇಳುತ್ತಿದ್ದರು. ತಲೆಗೆ ಏಟು ಬಿದ್ದಮೇಲೆ ಈ ಮಸೂದೆಯನ್ನು ಈಗ ತಂದಿದ್ದಾರೆ. ಈ ರೀತಿ ಅವರಿಗೆ ಭಯ ಇದ್ದುದರಿಂದ ಯಾವಾಗ ಚುನಾವಣೆಮಾಡುತ್ತಾರೆಂದು ಹೇಳಲಿಲ್ಲ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಇಂಡಿಕೇಷನ್ ಕೊಡುತ್ತಾರೆಂದು ಇದ್ದೆ. ಏಕೆಂದರೆ ಈ ದಿನ ಬೆಂಗಳೂರಿನ ಜನ ಕಾರ್ಪೊರೇಷನ್‌ನಲ್ಲಿ ತಮ್ಮ ರೆಪ್ರಸೆಂಟೇಟೀವ್ಸ್ ಇಲ್ಲದೆ ತೊಂದರೆಪಡುತ್ತಿದ್ದಾರೆ. ಬೆಂಗಳೂರು ನಗರಕ್ಕೆ ಅಡ್ಮಿನಿಸ್ಟ್ರೇಟರ್ ರೆಜೀಂನಲ್ಲಿ ಬೇಕಾದಷ್ಟು ಕೆಲಸಗಳು ನಡೆದಿವೆ, ಅವರಲ್ಲಿಯೂ ದಕ್ಷ ಅಧಿಕಾರಿಗಳು ಅಲ್ಲಿನ ಆಡಳಿತ ವನ್ನು ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆ. ನೀವು ಏಕೆ ಗಲಾಟೆಮಾಡುತ್ತೀರಿ, ಎಂಬುದಾಗಿ ಇವತ್ತಿನ ದಿವಸ ಕೆಲವು ಮಂತ್ರಿಗಳು ಮಾತನಾಡುತ್ತಿದ್ದಾರೆ. ಆದರೆ ನಿಜಾಂಶ ಏನಿದೆ ಎನ್ನುವ ಬಗ್ಗೆ ಮಂತ್ರಿಗಳು ಹೇಳಿಕೆ ಕೊಟ್ಟಿದ್ದರೆ ಚೆನ್ನಾಗಿತ್ತು. ಕೆಲವು ರಸ್ತೆಗಳನ್ನು ಮಾತ್ರ ಅಗಲಮಾಡಿದ್ದಾರೆ. ದೀಪಗಳನ್ನು ಹಾಕಿಸಿದ್ದಾರೆ. ರೈಲ್ವೆಸ್ಟೇಷನ್ ಮುಂದೆ ಇರತಕ್ಕ ರಸ್ತೆ, ಮಹಾತ್ಮ ಗಾಂಧಿ ರಸ್ತೆ, ಬ್ರಿಗೇಡ್ ರೋಡ್, ಕಸ್ತೂರಿಬಾ ರೋಡ್, ಕಾರ್ಪೊರೇಷನ್ ಮುಂದೆ ಇರತಕ್ಕ 2-3 ರೋಡುಗಳನ್ನು ಮಾಡಿದ್ದೇವೆಂದು ಹೇಳಿದ್ದಾರಷ್ಟೆ. ಬೆಂಗಳೂರು ನಗರದಲ್ಲಿ ಕೇವಲ ಇಂಥ 2–3 ರಸ್ತೆಗಳು ಮಾತ್ರ ಇಲ್ಲ. ಬೇಕಾದಷ್ಟು ರಸ್ತೆಗಳಿವೆ. ರಾಜಾಜಿನಗರದಿಂದ ನನ್ನ ಮಾನ್ಯ ಮಿತ್ರರು ಹೇಳಿದಹಾಗೆ, ಸುಮಾರು 20 ಸಾವಿರ ನಾನ್ ಗೆಜೆಟೆಡ್ ನೌಕರರು ಆಫೀಸುಗಳಿಗೆ ಬರುತ್ತಿದ್ದಾರೆ. ಅಲ್ಲಿ ಒಂದು ಕ್ರಾಸ್ ರಸ್ತೆಯೂ ಕೂಡ ಇಷ್ಟು ವರ್ಷಗಳಿಂದಲೂ ಟಾರ್ ಆಗಿಲ್ಲ. ಅಡ್ಮಿನಿಸ್ಟ್ರೇಟರ್ ಬಂದಮೇಲೆ ಅನೇಕ ಕಡೆಗಳಲ್ಲಿ ಲೇಔಟ್ಸ್, ಮೆಟಲಿಂಗ್, ಟಾರಿಂಗ್ ಇನ್ನೂ ಮಾಡಿಲ್ಲ. ತೋರಿಕೆಗೋಸ್ಕರ ಕೇವಲ ಒಂದೆರಡು ರಸ್ತೆಗಳನ್ನು ಮಾತ್ರ ದೊಡ್ಡದು ಮಾಡಿದ್ದಾರೆ. ಅದೇ ಕಾರ್ಪೊರೇಟರ್ಸ್ ಇದ್ದಿದ್ದರೆ ಇದುವರೆಗೆ ಇನ್ನೂ ಹೆಚ್ಚು ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ರಸ್ತೆಗಳ ಕೆಲಸ ಕಾರ್ಪೊರೇಷನ್ ಕೌನ್ಸಿಲರ್ಸ್ ಇದ್ದಾಗ್ಗೆ ಬಹಳ ಹೆಚ್ಚಾಗಿ ನಡೆಯುತ್ತಿತ್ತು. ಅಂಥಾದ್ದನ್ನು ಇವರು ಮಾಡುವ ಪರಿಸ್ಥಿತಿಯಿಲ್ಲ. ಇನ್ನು ತೆರಿಗೆಗಳನ್ನು ಬಹಳವಾಗಿ ವಸೂಲುಮಾಡಿದ್ದಾರೆಂದು ಕಾರ್ಪೊರೇಷನ್ ಅಡ್ಮಿನಿಸ್ಟ್ರೇಷನ್ ವರದಿ

(ಶ್ರೀ ಎಂ. ಎಸ್. ಕೃಷ್ಣನ್)

ಯಲ್ಲಿವೆ. ಮೊದಲಿಗಿಂತ ಈಗ ಬಹಳ ವಸೂಲು ಮಾಡಿದ್ದೇವೆಂದು ಜಂಬಕೊಚ್ಚಿಕೊಳ್ಳು ತ್ತಿದ್ದಾರೆ. ಅವರು ಎಷ್ಟು ವಸೂಲು ಮಾಡುತ್ತಿದ್ದರೋ ಅದಕ್ಕಿಂತ ಸ್ವಲ್ಪ ಉತ್ತಮವಿರ ಬಹುದು. ಆದರೆ ಜನರ ಪ್ರತಿನಿಧಿಗಳ ಸಹಕಾರ ಪಡೆದರೆ ಇನ್ನೂ ಹೆಚ್ಚು ವಸೂಲು ಮಾಡಬಹು ದೆಂಬುದು ಈಗಿನ ಪ್ರಶ್ನೆ. ಅದನ್ನು ಈಗ ಮಾಡಿದ್ದರೆ, ಕಾರ್ಪೊರೇಷನ್ನಿನಲ್ಲಿ ತೆರಿಗೆ ವಸೂಲಿ ಜಾಸ್ತಿಯಾಗುವುದಿಲ್ಲ. ಜನಗಳ ಮನಸ್ಸಿನಲ್ಲಿ ತೆರಿಗೆಗಳನ್ನು ಕೊಡಬಾರದೆಂಬ ಚಳುವಳಿ ನಡೆದಿರುವುದೇ ತೆರಿಗೆ ಉತ್ಪತ್ತಿ ಕಡಿಮೆಯಾಗಿರುವುದಕ್ಕೆ ಕಾರಣವೆಂದು ಹೇಳಬಹುದು. ಸೂಪರ ಸೀಡ್ ಮಾಡಿದ್ದು ಸರಿ, ದಕ್ಷರಾದ ಅಡ್ಮಿನಿಸ್ಟ್ರೇಟರ್ ಆಡಳಿತ ಮುಂದುವರಿಯಲ್ಲಿ ಎಂಬುದಾಗಿ ಯಾರು ಹೇಳಿದರೋ ಅಂತಹವರಿಗೆ ಬುದ್ಧಿ ವಿಕಲ್ಪವಾಗಿದೆ. ಭಾರತದೇಶದಲ್ಲಿ ಹಿಂದೆ ಒಂದು ಕಾಲದಲ್ಲಿತ್ತು. ಆಗ ರೀಜೆಂಟ್ ರೆಜಿಂನಲ್ಲಿ ಒಬ್ಬ ಅಧಿಕಾರಿಯೇ ಇದ್ದರು. ಎಲ್ಲಾ ಕೆಲಸಕಾರ್ಯ ಗಳನ್ನು ಒಬ್ಬರೇ ನೋಡುತ್ತಿದ್ದರು. ಆಗಲೇ ಭಾರತೀಯರಿಗೆ ಪ್ರಜಾಪ್ರಭುತ್ವ ಕೊಡಬಾರದೆಂಬ ಅಭಿಪ್ರಾಯವಿತ್ತು. ಈಗ ಪ್ರಜಾಪ್ರಭುತ್ವ ಇರುವ ಕಾಲದಲ್ಲಿ ಕಾರ್ಪೊರೇಷನ್ನಿನಲ್ಲಿ ಅಡ್ಮಿನಿಸ್ಟ್ರೇಟರ ಆಡಳಿತ ಸರಿಯೆಂದು ಹೇಳುವುದು ನಾಚಿಕೆಗೇಡು ಎಂಬುದಾಗಿ ಹೇಳುತ್ತೇನೆ. ದಕ್ಷವಾದ ಆಡಳಿತ ಗಾರರು ಇದ್ದರೂ ಸಹ ಪ್ರಜಾಪ್ರಭುತ್ವ ಯುಗದೊಳಗೆ ಅವರನ್ನು ಮುಂದುವರಿಸುವುದು ಸರಿಯಲ್ಲ. ಒಬ್ಬ ಚೀಫ್ ಸೆಕ್ರೆಟರಿ ಇದ್ದರೆ ಸಾಕು, ಎಲ್ಲಾ ನಡೆಸಿಕೊಂಡು ಹೋಗುತ್ತಾರೆ. ಇನ್ನೊಂದು ಇವರು 47 (ಎ) (ಎ) ಯನ್ನು ತೆಗೆದುಕೊಂಡಿರುವುದು ಸ್ವಾಗತಾರ್ಹ. ಇನ್ನೊಂದು ಏನೆಂದರೆ, ಎಲೆಕ್ಟೋರಲ್ ರೋಲ್ಸಿನ ವಿಚಾರ ಹೇಳಿದ್ದಾರೆ. ಇದರಲ್ಲಿ ಬರೆದಿರುವುದು ಏನೆಂದರೆ :

"Electoral rolls shall be prepared in accordance with the rules in Schedule VIII."

3-30-P.M.

ಏನೆಂದರೆ ಶೆಡ್ಯೂಲ್ 8 ಈಗ ಬಿಲ್ಲಿನ ಭಾಗವಾಗುತ್ತದೆ, ನಾಳೆ ಆಕ್ಟಿನ ಭಾಗವಾಗುತ್ತದೆ. ಇದು ಸರಿಯಾಗಿದೆಯೇ ? ಅವರು ಕಾರಣ ಕೊಟ್ಟಿದ್ದಾರೆ "ಶೆಡ್ಯೂಲ್ 7 ಆದಮೇಲೆ 8 ಬರುತ್ತದೆ" ಎಂದು. ಅದು ಹೇಗೆ ಎಂಬುದನ್ನು ವಿಮರ್ಶೆ ಮಾಡೋಣ. ಶೆಡ್ಯೂಲ್ 7 ಪೆನಾಲ್ಟೀಸ್ ಬಗ್ಗೆ ಇರುವುದು. Schedule VII deals with penalties and fine, and failure to maintain house connection, etc., etc., ಅದರಲ್ಲಿ ಯಾವ ರೀತಿ ಪೆನಲ್ಟೀಸ್ ಹಾಕ ಬೇಕೆಂಬ ಅಧಿಕಾರವನ್ನು ಕೊಟ್ಟಿದ್ದಾರೆ. ಶೆಡ್ಯೂಲ್ 8 ಎಲೆಕ್ಟೋರಲ್ ರೋಲ್ಸನ್ನು ಆಕ್ಟಿನ ಭಾಗ ಮಾಡಿದರೆ, ನಾಳೆ ಜನತೆಯ ಹಿತದೃಷ್ಟಿಯಿಂದ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಬೇಕಾದರೂ ಸಹ, ಅವರು ನೇರವಾಗಿ, ಅಸೆಂಬ್ಲಿಗೆ ಬರಬೇಕು. ತಾವಾಗಿ ಮಾಡುವುದಕ್ಕೆ ಅವರಿಗೆ ಅಧಿಕಾರ ಇರುವುದಿಲ್ಲ. ಆ ದೃಷ್ಟಿಯಿಂದ ಶೆಡ್ಯೂಲ್ 8 ಪ್ರತ್ಯೇಕವಾಗಿ ಇದ್ದರೆ ಒಳ್ಳೆಯದು. ನನ್ನ ಅಮೆಂಡ್‌ಮೆಂಟ್‌ನಲ್ಲಿ ಅದನ್ನು ತಂದಿದ್ದೇನೆ :

"Provided that the Government may add to the schedule any rules as are deemed necessary in connection with the elections."

ಯಾರೂ ರೂಲ್ ಮಾಡುವ ಅಧಿಕಾರವನ್ನು ಇಟ್ಟುಕೊಳ್ಳಬಹುದು. ಸ್ವಲ್ಪ ಮಟ್ಟಿಗೆ ಫ್ಲೆಕ್ಸಿಬಲ್ ಆಗಿರಲಿ ಎಂದು ಅದನ್ನು ಸೇರಿಸಿದ್ದೇನೆ. ಇಲೆಕ್ಷನ್ ನಡೆಯಕೂಡದು ಎಂದು ಸೇರಿಸಿಲ್ಲ.

ಮೂರನೆಯ ವಿಷಯ. ಅಮೆಂಡ್‌ಮೆಂಟ್ ಟು ಸೆಕ್ಷನ್ 61, ಇದರ ಬಗ್ಗೆ ಏನೂ ಹೇಳು ವುದಕ್ಕಾಗುವುದಿಲ್ಲ. ಶಾಮಣ್ಣನವರು ಹೇಳಿದಂತಹ ಅಮೆಂಡ್‌ಮೆಂಟನ್ನು ಒಪ್ಪಿಕೊಳ್ಳುತ್ತೇನೆ. ಎಜುಕೇಶನಲ್ ಸಂಸ್ಥೆಗಳಿಗೆ ವಿನಾಯಿತಿ ಇರಬೇಕು, ಅದು ಕೂಡ ನ್ಯಾಯವಾದುದು. ಅದರ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮತ್ತು ನಗರದ ಜನತೆಯ ಹಿತದೃಷ್ಟಿಯಿಂದ ಉತ್ತೇಜನ ಕೊಡುವುದು, ಶಾಮಣ್ಣನವರು ಹೇಳಿದಂತೆ ನ್ಯಾಯವಾದದು. ಅದಕ್ಕಿಂತ ಮುಖ್ಯವಾದುದು ಕ್ಲಾಸ್ 10. ಇದರ ಬಗ್ಗೆ ಮಾನ್ಯ ಮಂತ್ರಿಯವರು ಹೇಳಿದ್ದನ್ನು ಕೇಳಿದ್ದೇನೆ. ನಾವು ಹೇಳಿದ್ದೇ ರೈಟ್, ಜನರ ಹಿತದೃಷ್ಟಿಯಿಂದ ತಂದಿದ್ದೇವೆ, ಆದ್ದರಿಂದ ನೀವು ಹೇಳುವುದು ಒಪ್ಪಿಕೊಳ್ಳುವುದಿಲ್ಲ ವೆಂದು ಹೇಳುವುದು ಸರಿಯಲ್ಲ. ಏಕೆಂದರೆ, ಅದರೊಳಗೆ, ಮುಖ್ಯವಾದ ಪ್ರಶ್ನೆ ಬರುತ್ತದೆ.

104ರೊಳಗೆ, ಸರ್ಕಾರಿ ಕಟ್ಟಡಗಳಲ್ಲಿ ಯಾರಾದರೂ ರೆಂಟಿಗೆ ಇದ್ದರೆ, ತೆರಿಗೆಗಳನ್ನು ವಸೂಲು ಮಾಡುವುದು ಹೇಳಿದ್ದಾರೆ :

> " Provided that the property tax due in respect of buildings vesting in the Government and occupied by servants of the Governments or other persons on payment of rent shall be leviable primarily from the Government and if the premises are not so held from the lessor if the premises are let, from the superior lessor if the premises are sub-let and from the person in whom the right to let the premises vests; if they are unlet. "

ಇದರಿಂದ ಏನಾಗಿದೆ ಎಂದರೆ, ಯಾರು ಒಬ್ಬ ನೌಕರ ಸರ್ಕಾರಿ ಭವನದಲ್ಲಿ ಇದ್ದರೆ, ಅಂಥವನಿಂದ ಕೂಡ ವಸೂಲು ಮಾಡಬಹುದು. ಈ 104 (ಎ) ಇದು ಬಹಳ ಅನ್ಯಾಯವಾಗುತ್ತದೆ. ಇದರೊಳಗೆ ಯಾರಿಗೋ ಒಬ್ಬನಿಗೆ ತೆರಿಗೆ ಜಾಸ್ತಿ ಮಾಡಿಬಿಟ್ಟಿದ್ದಾರೆ, ಆದರೆ ಅವರಿಂದ ವಸೂಲು ಮಾಡುತ್ತಿರುವ ಬಾಡಿಗೆ ಕಡಿಮೆ. ಎಷ್ಟು ಬಾಡಿಗೆ ಇವೆಯೋ, ಅಷ್ಟಕ್ಕೆ ತೆರಿಗೆ ಫಿಕ್ಸ್ ಮಾಡಿ ವಸೂಲು ಮಾಡುವುದಕ್ಕೆ ಪ್ರೊವಿಜನ್ ಮಾಡಬೇಕೆಂದು ಹೇಳಿದ್ದಾರೆ. ಇದು ನಿಜವಾಗಿ ತೋರಿಕೆಗೆ ತರುತ್ತಿದ್ದಾರೆ. ಜಾಸ್ತಿ ಟ್ಯಾಕ್ಸ್ ಹಾಕಿದರೂ ಟೆನೆಂಟಿನಿಂದ ವಸೂಲು ಮಾಡಬಹುದು.

Mr. SPEAKER.—It is in the nature of rent. The landlord it appears, can recover more if there is increase in tax on property. That principle is accepted under the Rent Control Act. There is nothing new about it. Probably it is an accepted principle every where.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅವಾಂತರ, ಗೊಂದಲ, ಅಪಾಯ ಹೇಗೆ ಉಂಟಾಗುತ್ತದೆ ಎನ್ನುವುದನ್ನು ಹೇಳುತ್ತೇನೆ. ಅದರ ಬಗ್ಗೆ ಪ್ರೊಟೆಕ್ಷನ್ ಇದ್ದರೆ ಒಪ್ಪಿಕೊಳ್ಳಬಹುದಿತ್ತು. ಮೊದಲನೆಯದು ಟೆನೆಂಟಿನಿಂದ ವಸೂಲು ಮಾಡುವ ಅಧಿಕಾರ ಮನೆಯ ಮಾಲೀಕನಿಗೆ ಕೊಡುತ್ತಾರೆ. ಇದು ಕಾರ್ಪೊರೇಷನ್ ಅಧಿಕಾರ. ಈ ಅಧಿಕಾರವನ್ನು ಮನೆಯ ಮಾಲೀಕನಿಗೆ ಏಕೆ ಕೊಡಬೇಕು ? ಹಾಗೆ ಕೊಡುವುದು ನ್ಯಾಯವಾದುದಲ್ಲ. ಅದಕ್ಕಿಂತ ಮುಖ್ಯವಾದುದು ಏನೆಂದರೆ, ಮನೆಯ ಮಾಲೀಕನಿಗೂ ಬಾಡಿಗೆ ಜಾಸ್ತಿ ಮಾಡುವುದಕ್ಕೆ ಅವಕಾಶ ವಾಗುತ್ತದೆ. ಮೊದಲೇ ನಗರದಲ್ಲಿ ಬಾಡಿಗೆ ಜಾಸ್ತಿಯಾಗಿ ಜನರು ಬಹಳ ಕಷ್ಟ ಪಡುತ್ತಿದ್ದಾರೆ. ಕಾನೂನು ದೃಷ್ಟಿಯಿಂದ ಟೆನೆಂಟ್ಸ್ ಹೆಚ್ಚು ಟ್ಯಾಕ್ಸ್ ಕೊಡುತ್ತಾರೆ. ಒಬ್ಬ ಲೀಸ್‌ಗೆ ತೆಗೆದುಕೊಂಡು ಮನೆಯನ್ನು ಕಟ್ಟಿಕೊಂಡಿರುತ್ತಾನೆ, ಅವನಿಗೆ ಇನ್ನೂ ಹೆಚ್ಚು ಮಾಡುವುವಕ್ಕೆ ಅಧಿಕಾರ ಬರುವುದಿಲ್ಲವೇ ?

ಅದ್ದರಿಂದ ಈ ತರಹ ಒಂದು ಹೆಚ್ಚಿನ ಎಡರು ತೊಡರುಗಳು, ತೊಂದರೆಗಳು ಅಗುವುವಕ್ಕೆ ಇದರಲ್ಲಿ ಅವಕಾಶ ಇದೆಯೆಂದು ಕಾಣುತ್ತದೆ. ಈ ದೃಷ್ಟಿಯಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಏನೆಂದರೆ ಈ ಒಂದು ಕ್ಲಾಜನ್ನು ತೆಗೆದುಹಾಕಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ಸೂಚನೆ ಕಾರ್ಪೋರೇಷನ್ ಚುನಾವಣೆಗೆ ಸಂಭದಪಟ್ಟ ಹಾಗೆ ಶ್ರೀಮಾನ್ ಶಾಮಣ್ಣನವರು ಒಂದು ಸೂಚನೆಯನ್ನು ಮಾಡಿದರು. ಅದು ಏನೆಂದರೆ ಈ ಕಾರ್ಪೋರೇಷನ್ ಚುನಾವಣೆಯನ್ನು ಮಾಡುವುದಾದರೆ ಮೊದಲು ಮತದಾರರ ಪಟ್ಟಿಯನ್ನು ತಯಾರುಮಾಡಬೇಕು ಮತ್ತು ಆ ರೀತಿ ಮತದಾರರ ಪಟ್ಟಿಯನ್ನು ತಯಾರು ಮಾಡುವಾಗ ಎಲ್ಲಾ ಡಿವಿಜನ್‌ಗೂ ಒಂದೇ ಸಂಖ್ಯೆಯ ಮತದಾರರನ್ನು ಹೊಂದಿರಬೇಕು. ಡಿವಿಜನ್ ವರ್ಗೀಕರಣ ಸರಿಯಾಗಿರಬೇಕು. ಈ ಮತದಾರ ಪಟ್ಟಿಯನ್ನು ತಯಾರು ಮಾಡುವ ಹಾಗೂ ಎಲ್ಲಾ ಡಿವಿಜನ್ನಿಗೂ ಒಂದೇ ಸಂಖ್ಯೆಯ ಮತದಾರರನ್ನು ಹೊಂದುವಂತೆ ಅದನ್ನು ವರ್ಗೀಕರಣ ಮಾಡುವ ಸಂಬಂಧದಲ್ಲಿ ಸಂಬಂಧಪಟ್ಟವರೆಲ್ಲರನ್ನು ಕರೆದು ಯಾರಿಗೂ ರಾಜಕೀಯ ಭಿನ್ನಾಭಿಪ್ರಾಯ ಬಾರದ ಹಾಗೆ ಮಾತನಾಡಬೇಕು. ಆದಷ್ಟು ಬೇಗ ಬೆಂಗಳೂರು ಕಾರ್ಪೋರೇಷನ್ ಚುನವಾಣೆಯನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri M. A. AMALORPAVAM (Bharathinagar).—Mr. Speaker Sir, kindly permit me to welcome the amending Bill to the Corporation Act. I was under the impression that the hon. Members of the Opposition would be really jubilant to welcome this amending Bill which in my humble opinion is long overdue. But the members of the Opposition, not all but some of them, have criticised it. This has become the tendency of some of the Opposition members.

(*Interruptions*)

We have been always listening whenever they talk without interrupting whatsover. But unfortunately when I get up, some of the members on the other side do not sit quiet. Whenever we get up they think that everything we say is wrong. This kind of approach will take us nowhere. With all humility I say this kind of approach is not at all proper. They should reciprocate the approach that we make. The moment we get up, there will be interruption. This is not a healthy approach. We listen to them quietly whatever they say. Let them criticise us, but let them not interrupt us while speaking. Some of the members of the Opposition think that we are all bad. We too have got some sense of responsibility. We too are interested in the welfare of the people of Bangalore City. They think that they are the only custodians of the people of Bangalore. This is too bad. This kind of attitude should not be adopted by anybody. We are not here just to be dictated.

Sri M. S. KRISHNAN.—If the hon Member yields, I want to say something.

Mr. SPEAKER.—There should be no unnecessary interruptions. These things should be avoided. No explanation is needed.

Sri M. A. AMALORPAVAM.—It is open to the Opposition to point out mistakes if I commit. If they keep on interrupting, the chain of thought will get disturbed.

Sir, the Government of Hon. Veerendra Patil deserves whole-hearted congratulations because this amending Bill is a Bill which ought to be welcomed by everyone not only in Bangalore, but throughout the State of Mysore. I am not here to talk on the postponement of the election. I am interested in pointing out a few salient features of this amending Bill.

Sir, we are all firm believers in democracy. We do know that even the best of Government is not a substitute to self-Government. All these days unfortunately, owing to the exigencies of circumstances, the Government was constrained to carry on the administration in the manner it has carried on until the elected body takes up office. We were not happy when the Corporation was superseded. Sir, in compliance with our request and in compliance with the request of the members of Opposition, the Government has been good enough to come forward with this amendment Bill and sooner these

elections are held the better it would be. We really congratulate the Government for bringing in this amendent Bill whereby the Government is exempting from payment of tax, educational institutions which were formerly made to pay more taxes. With the present amendment proposed by the Government, many of the institutions would be relieved of this tax burden and would also help the institutions to develop by diverting that particular amount for other fruitful expenditure. In welcoming this particular amendment along with the other amendments I would really congratulate the Government for having thought of bringing this piece of legislation before this House.

Sir, it is said that some of the members on this side did not conduct themselves properly in the Corporation. It is a fact that some members belonging to the Ruling Party did not conduct themselves well. We are determined to condemn such a thing which happened in the Municipal Corporation. But the members of other parties in criticising the Congress Members should be reasonable and charitable to condemn the mistakes on their side also. It is not only some Congress Members conducted themselves in an unbecoming way but at least some members from all parties also did not conduct themselves in a dignified manner with the result the entire population of Bangalore City was put to inconvenience. Sir, even in this House, as representatives of the public we are given every opportunity to express ourselves freely without any limitation, without any hindrance to say what all we feel, in a dignified and decent way. But unfortunately, I do not know for what reason certain things developed in such a manner as to force the Government to take action and supersede the Corporation of Bangalore. I know Sir, it was not at all an action to be welcomed by any one. I think even the Government, the Hon. Chief Minister and also the Minister for Municipal Administration would have taken the decision to supersede the Corporation with great pain because they are all confirmed believers in democracy. We may call them as autocrats or dictators as was expressed by some Hon. Members and an Hon. Member stated that the supersession of the Corporation was merely due to politics and the Opposition was not responsible for that. But Sir, I would say that even for this present Bill to be brought before this House, they have not brought it because they were forced to do it. But they have brought this Bill since they felt that a time has come when the people would have realised their difficulties and mistakes and therefore they have brought this Bill.

I do not want to say more on this Bill, as I belong to the party which has brought this Bill. It is almost superfluous on my part to say anything more. But since, I heard some Hon. Members saying that this Bill was brought with a political motive. A remark was made that some Congress Members did not conduct themselves in a dignified way in the Corporation. I feel Sir, that this is not a charitable way to criticise others. Sir, whenever we are in the wrong, we have the courage to come out boldly not only on the floor of this House, but even on the

(SRI M. A. AMALORPAVAM)

platform outside, to say that we are in the wrong. But, unfortunately, I find the members of the Opposition think that they never commit an error and it is only the Congressmen who are born to err and continue to err. That kind of attitude is undemocratic in a country where we had men of moral characters, men who struggled for attaining independence for the country and men who are all bound to bow to discipline. We had great leaders line Jawaharlal Nehru, who belonged to Congress Party. It is rather very uncharitable for the Opposition to think in that way. We are all bound by certain principles and discipline. When our Leader says 'sit' we 'sit' and when the Leader asks us to 'stand' we 'stand'. We have always respected whenever the Hon. Leader of the Opposition stands to speak—Hon. Sri Siddaveerappa and Hon. Sri Channabasappa and other senior members of the Opposition rise to speak. We respect them because they respect the conventions, they respect the Hon. Chair. Therefore Sir, when a Bill for the welfare of the people and for the holding of elections to the superseded Corporation is brought before this House, instead of welcoming such a measure or making valuable suggestions, the members of the Opposition are again conducting a postmortem criticising the Government saying that the supersession was due to Congressmen and all that. Why should they talk about things which the people already know? Why should they merely try to criticise the Hon. Members on this side? I very humbly submit to you Sir, that we on this side are not at all protected. I know also Sir, that you have tried your best to protect us, unfortunately we are not allowed to take much time as is necessary or as is given to the other side. Whenever we rise to speak, there will be so many interruptions, so many unbecoming allegations and therefore we beg of you Sir, kindly to protect our interest and whenever we rise to speak we should also be allowed to express ourselves freely and it should be heard without any interruptions. If we commit any mistake, let them tear us into pieces, instead of interrupting and making us lose the chain of our thoughts while speaking.

I once again say that we have run the Corporation for so many years and only once the Opposition was in power and we know what happened at that time. Sir, men like Mr. Kamaraj and Mr. Subramaniam proved that the Congress Government very firmly believes in democratic conventions and democratic principles. We are never afraid of the Opposition; let the Corporation of Bangalore City be in the hands of the Opposition; once again the public is there to choose the representatives. Even if the Opposition comes to power we will certainly co-operate with them and let them not blame always the Congress Party; let them succeed in the elections by a majority we will give our wholehearted support.

Sir, I once again congratulate the Hon. Chief Minister Mr. Veerendra Patil, the Hon. Minister of State for Municipal Administration Mr. B. M. Patil and the Government as a whole for

bringing this Bill and I hope the voters would be distributed in a sensible manner, so as to see that each division gets equal number of voters for the elections to the City of Bangalore Municipal Corporation. I am sure, the Government will do the needful in the matter.

I thank you, Mr. Speaker, for having been so kind enough in allowing me to speak on this Bill.

4-00 P.M.

† ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ಅಧ್ಯಕ್ಷರೇ, ಈ ಬಿಲ್ಲಿನ ಬಗ್ಗೆ ಮಾನ್ಯ ಶಾಮಣ್ಣನವರು ಇಲ್ಲಿ ತಂದಿರತಕ್ಕ ತಿದ್ದುಪಡಿಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

ಶ್ರೀಮಾನ್ ನಂಜಪ್ಪನವರು ಹಾಗೂ ಶ್ರೀ ಅಮಲೋರಪವಂ ಅವರು ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿದರು. ಅವರು ಶಿಸ್ತು, ಪ್ರಜಾಪ್ರಭುತ್ವ, ಕಾಂಗ್ರೆಸ್ಸು ಹಾಗೂ ಮಹಾತ್ಮ ಗಾಂಧಿಯವರ ಬಗ್ಗೆ ಹೇಳಿದರು. ಮಹಾತ್ಮ ಗಾಂಧಿಯವರು ಹೆಂಡವನ್ನು ಮಾರಬೇಡಿ ಎಂದರು, ನೀವು ಹೆಂಡವನ್ನು ಮಾರುತ್ತಿದ್ದೀರಿ. ಪಾನ ನಿರೋಧವನ್ನು ಜಾರಿಗೆ ತರಬೇಕು ಎಂದು ಗಾಂಧಿಯವರು ಹೇಳುತ್ತಿದ್ದರು ಆದರೆ ಇನ್ನೂ ಅದನ್ನು ಮುಂದುವರಿಸುತ್ತಿದ್ದೀರಿ. ಗಾಂಧಿ ಮಹಾತ್ಮರು ಈ ದೇಶದಲ್ಲಿ ಯಾವ ರೀತಿ ಆಡಳಿತ ಇರಬೇಕು ಮತ್ತು ಅವನ್ನು ಹೇಗೆ ನಡೆಸಬೇಕು ಎಂದು ಹೇಳಿದ್ದರೋ ಅದಕ್ಕೆ ತದ್ವಿರುದ್ಧವಾಗಿ ಯಾವ ತರಹ ಆಡಳಿತ ನಡೆಸುತ್ತಿದ್ದೀರಿ ಎನ್ನುವುದು ಎಲ್ಲರಿಗೂ ಗೊತ್ತಿದೆ. 1948ರಲ್ಲಿ ಏನಾದರೂ ಮಹಾತ್ಮ ಗಾಂಧಿಯವರು ಸಾಯದೇ ಇದ್ದಿದ್ದರೆ ಅವರು ಇಂದು ಬದುಕಿದ್ದರೆ ಇವರು ಮಾಡುವ ಆಡಳಿತದ ವೈಖರಿಗಳನ್ನು ನೋಡಿ ನಿಮ್ಮ ಈ ವಿಧಾನ ಸೌಧದ ಮುಂದೆ ಸತ್ಯಾಗ್ರಹ ಮಾಡುತ್ತಿದ್ದರು. ನೀವುಗಳು ಮಾಡುತ್ತಿರುವ ಈ ದುರಂತಗಳನ್ನು ಮತ್ತು ನಿಮ್ಮ ಆಡಳಿತದಲ್ಲಿರುವ ಸ್ವಜನ ಪಕ್ಷಪಾತ ಇವನ್ನು ನೋಡಿದ್ದರೆ ಅವರು ಖಂಡಿತ ದುಃಖ ಪಡುತ್ತಿದ್ದರು. ಇಂತಹ ಕಾಂಗ್ರೆಸ್ಸು ಪಕ್ಷದವರು ಇಂದು ವಿರೋಧ ಪಕ್ಷದವರಿಗೆ ಶಿಸ್ತು, ಸಂಯಮ ಹಾಗೂ ನಡತೆ ಇವುಗಳ ಬಗ್ಗೆ ಬುದ್ಧಿ ಹೇಳುತ್ತಿದ್ದಾರೆ. ಬೆಂಗಳೂರು ಕಾರ್ಪೊರೇಷನ್ನನ್ನು ರದ್ದು ಮಾಡಬೇಕೆಂದು ಮಾಡಿದವರು ವಿರೋಧ ಪಕ್ಷದವರಲ್ಲದಿದ್ದರೂ ಅವರೇ ಮಾಡಿದರು ಎಂದು ಇಲ್ಲಿ ಮಾನ್ಯ ಸದಸ್ಯರಾದ ಶ್ರೀ ನಂಜಪ್ಪನವರು ಹಾಗೂ ಶ್ರೀ ಅಮಲೋರಪವಂರವರು ಹೇಳಿದ್ದಾರೆ.

ಈ ಹಿಂದೆ ಈ ರಾಜ್ಯದ ಉಪಮಂತ್ರಿಗಳಾಗಿದ್ದವರು ಒಬ್ಬರು ಬೆಂಗಳೂರು ನಗರ ಸಭೆಯ ಸದಸ್ಯರಾಗಿದ್ದರು. ಇವರ ಕಣ್ಣು ಎಲ್ಲಿಯವರೆಗೆ ಹೋಗಿತ್ತು ಎನ್ನುವುದಕ್ಕಾಗಿ ಇಲ್ಲಿ ಹೇಳುತ್ತಿದ್ದೇನೆ. ಬೆಂಗಳೂರಿನಲ್ಲಿ ಒಂದು ಸ್ಮಶಾನ ಇತ್ತು. ಆ ಜಾಗಕ್ಕೆ ಸುಮಾರು ಏಳು ಲಕ್ಷದಷ್ಟು ಹಣವನ್ನು ಯಾರಾದರೂ ಕೊಟ್ಟು ಕೊಂಡುಕೊಳ್ಳುತ್ತಿದ್ದರು. ಆ ಜಾಗವನ್ನು ಹೇಗಾದರೂ ಮಾಡಿ ಪಡೆಯಬೇಕೆಂದು ಪ್ರಯತ್ನ ಮಾಡಿದರು ಇವರ ಜೊತೆಗೆ ಇನ್ನೂ ಕೆಲವು ಕಾಂಗ್ರೆಸ್ಸಿಗರನ್ನು ಸೇರಿಸಿಕೊಂಡು ಒಂದು ಸಿಂಡಿಕೇಟು ಮಾಡಿಕೊಂಡರು. ಇದರಲ್ಲಿ ಅವರೇ ಚೇರ್ಮನ್ನರಾದರು ಮತ್ತು ಅವರು ನಾಲ್ಕು ಜನ ಸದಸ್ಯರು ಎಂದಾದರು. ಇವರೆಲ್ಲರೂ ಸೇರಿಕೊಂಡು ಸ್ಮಶಾನದ ಜಾಗವನ್ನು ಪಡೆಯಬೇಕು ಎಂದೂ ಅದನ್ನು ಒಬ್ಬರು ಬಾಂಬೆ ಕಡೆಯಿಂದ ಬಂದವರಿಗೆ ಸಿನಿಮಾ ಥೀಯೆಟರು ಕಟ್ಟಲು ಲೀಸ್ ಮೇಲೆ ಅವರಿಗೆ ಕೊಡಬೇಕೆಂದು ಸನ್ನಾಹ ಮಾಡಿದ್ದರು. ಆದರೆ ಬೆಂಗಳೂರಿನಲ್ಲಿರುವ 17 ಲಕ್ಷ ಜನತೆಗೆ ಬೇಕಾಗಿರುವ ಈ ಸ್ಮಶಾನವನ್ನು ಪಡೆಯಲು ಇವರು ನಾಲ್ಕು ಜನ ಪ್ರಯತ್ನ ಪಟ್ಟಾಗ ಬೆಂಗಳೂರು ಕಾರ್ಪೊರೇಷನ್ ಸಭೆಯಲ್ಲಿ ವಿರೋಧ ಪಕ್ಷದವರು ಇದರ ಬಗ್ಗೆ ಪ್ರತಿಭಟಿಸಿದಾಗ ಇವರೇನು ಮಾಡಿದರು ಎನ್ನುವುದು ಎಲ್ಲರಿಗೂ ಗೊತ್ತು. ಇವರೆಲ್ಲರೂ ಗಾಂಧಿ ಭಕ್ತರು ಹಾಗೂ ಗಾಂಧಿಯವರ ಅನುಯಾಯಿಗಳು ಮತ್ತು ಕಾಂಗ್ರೆಸ್ಸು ಸಂಸ್ಥೆಗೆ ಕಾಂಗ್ರೆಸ್ಸು ಮಾಡುವವರು, ಏಳು ಲಕ್ಷ ರೂಪಾಯಿ ಬೆಲೆ ಬಾಳುವ ಸಾರ್ವಜನಿಕರ ಆಸ್ತಿಗೆ ಧಕ್ಕೆ ತರುವ ರೀತಿಯಲ್ಲಿ ವರ್ತಿಸುತ್ತಿದ್ದರು ಎಂದು ಪೌರಸಮಿತಿಯ ವಿರೋಧ ಪಕ್ಷದ ಸದಸ್ಯರು ಒಬ್ಬರು ಇದರ ಪ್ರಸ್ತಾಪ ಮಾಡಿದಾಗ ಓಪನ್ ಆಗಿ ಮೀಟಿಂಗಿನಲ್ಲಿ ಒಬ್ಬರು ಸದಸ್ಯರು ವಿರೋಧ ಪಕ್ಷದ ಸದಸ್ಯರ ಕಪಾಲಕ್ಕೆ ಹೊಡೆದರು. ಇದರ ಕೇಸು ಇನ್ನೂ ಕೋರ್ಟಿನ ಮುಂದೆ ನಡೆಯುತ್ತಿರಬಹುದು. ಕಾಂಗ್ರೆಸ್ಸಿನವರು ಅಹಿಂಸಾವಾದಿಗಳೆಂದು ಹೆಸರು ಪಡೆದವರು ಓಪನ್ ಮೀಟಿಂಗಿನಲ್ಲಿ ಹೀಗೆ ಒಬ್ಬ ಸದಸ್ಯರಿಗೆ ಹೊಡೆದು ಅವಮಾನ ಮಾಡಿದರು. ಇವರು ಪ್ರಜಾಪ್ರಭುತ್ವದ ನೀತಿ

(ಶ್ರೀ ವಾಟಾಳ್ ನಾಗರಾಜ್)

ಗಳನ್ನು ದೇಶದಲ್ಲಿ ತರಕೂಡದು ಎಂದು ಹೇಳಲು ಹೊರಟಿದ್ದಾರೆ. ಮಾನ್ಯ ಅಧ್ಯಕ್ಷರು ಬೇಕಾದರೆ ಇದರ ರಿಕಾರ್ಡುಗಳನ್ನು ತರಿಸಿ ಪರಿಶೀಲಿಸಬಹುದು. ಮಾನ್ಯ ಸದಸ್ಯರಾದ ಶ್ರೀ ಅಮ ಲೋರಪವಂರವರು ಕಾಂಗ್ರೆಸ್ಸು ಹೆಸರಿನಲ್ಲಿ ನಾವು ಬಹಳ ಮಾಡಿದ್ದೇವೆ ಎಂದು ಹೇಳಿದರು. ಅದಕ್ಕಾಗಿ ನಾನು ಇಲ್ಲಿ ಆ ಸದಸ್ಯರಿಗೆ ಉತ್ತರ ಕೊಡಬೇಕಾಗಿದೆ. ಸುಮಾರು ಹದಿನೆಂಟು ವರ್ಷಕಾಲ ಕಾಂಗ್ರೆಸ್ಸಿನವರು ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ಆಡಳಿತ ನಡೆಸುತ್ತಿದ್ದರು ಆ ನಂತರ ಎರಡು ವರ್ಷಗಳ ಕಾಲ ವಿರೋಧ ಪಕ್ಷದವರು ಕಾರ್ಪೊರೇಷನ್ ಆಡಳಿತ ನಡೆಸಿದರು. ವಿರೋಧ ಪಕ್ಷದವರು ಆಡಳಿತ ನಡೆಸಿದ ಕಾಲದಲ್ಲಿ ಏನಾದರೂ ಲೋಪವಾಗಿದೆ ಎನ್ನುವುದನ್ನು ಹೇಳುವುದು ನಾವಲ್ಲ. ಇದಕ್ಕೆ ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಆಗ ಇವೆರಡು ವರ್ಷದ ವಿಚಾರಗಳನ್ನು ಅಲ್ಲಿ ವಿಚಾರ ಮಾಡಬಹುದು.

ಶ್ರೀ ಎ. ನಂಜಪ್ಪ.—ಒಂದು ವರ್ಷವೇ ಆಡಳಿತ ನಡೆಸುವುದಕ್ಕೆ ಆಗಲಿಲ್ಲ, ಎರಡು ವರ್ಷ ಮಾಡಿದೆವು ಎಂದು ಇಲ್ಲಿ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಇದಕ್ಕಾಗಿಯೇ ಇಲ್ಲಿ ನಾನು ಸಲಹೆ ಮಾಡುವುದು. ತಮ್ಮ ಮಾನ್ಯ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿ. ನಮ್ಮಿಂದ ಯಾವ ರೀತಿಯಾಗಿ ಅನ್ಯಾಯಗಳು ನಡೆದಿವೆ ಎನ್ನುವುದನ್ನು ತಾವು ತೀರ್ಮಾನಮಾಡಿದರೆ ಆಗ ತಾವು ಏನು ಶಿಕ್ಷೆ ವಿಧಿಸಿದರೂ ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇವೆ. ಇಂತಹ ಒಂದು ಚಾಲೆಂಜಿಗೆ ನಮ್ಮ ಮಾನ್ಯ ಕಾಂಗ್ರೆಸ್ ಸದಸ್ಯರು ಒಪ್ಪುತ್ತಾರೆಯೇ, ಕೇಳಿ.

ಆ ಮೇಲೆ ನಮ್ಮ ಬೆಂಗಳೂರು ಸಭೆಗೆ ಸೇರಿದ ಚಲುವಾದಿಪಾಳ್ಯ ಎಂಬಲ್ಲಿ ಹರಿಜನರಿಗಾಗಿ ಸುಮಾರು 81 ಸ್ಯೆಟುಗಳನ್ನು ಕೊಡಬೇಕು ಹಾಗೂ ಮನೆ ಇಲ್ಲದ ಬಡವರಿಗೆ ಈ ಸ್ಯೆಟುಗಳನ್ನು ಕೊಡಬೇಕೆಂದು ಇತ್ತು. ಇದನ್ನು ನಮ್ಮ ಕಾಂಗ್ರೆಸ್ಸು ಭಕ್ತರು ಯಾರಿಗೂ ಹೇಳದೇ ಕೇಳದೇ ರಾತ್ರೋರಾತ್ರಿಯಲ್ಲಿ ತಮ್ಮ ತಮ್ಮೊಳಗೇನೇ ಇದನ್ನು ಪೂರ್ತಿ ಹಂಚಿಕೊಂಡರು ! ಇಂತಹವರು ಕಾಂಗ್ರೆಸ್ಸು ಪಕ್ಷದಲ್ಲಿದ್ದುಕೊಂಡು ಸೂಪರ್‌ಸೆಷನ್ ಮಾಡಲಿಕ್ಕೆ ಕಾರಣರಾದರು. ಕಾಂಗ್ರೆಸ್ಸಿನವರು ಕಾರ್ಪೊರೇಷನ್ನನ್ನು ಸೂಪರ್‌ಸೀಡು ಮಾಡಬೇಕೆಂದು ಸರಕಾರ 14 ಚಾರ್ಜುಗಳನ್ನು ತಂದಿದ್ದರು. ಇವೆಲ್ಲವನ್ನೂ ನಗರ ಸಭೆಯ ಸದಸ್ಯರ ಮೇಲೆ ತಂದಿದ್ದರೂಕೂಡ ವಿರೋಧ ಪಕ್ಷದ ಸದಸ್ಯರ ಮೇಲೆ ಒಂದು ಚಾರ್ಜನ್ನೂ ಪ್ರೂವ್ ಮಾಡುವುದಕ್ಕೆ ಆಗಲಿಲ್ಲ. ರಾಜಕೀಯ ಕಾರಣಕ್ಕೋಸ್ಕರ ನಗರ ಸಭೆಯನ್ನು ರದ್ದುಮಾಡಿದರೇ ವಿನಾ ಬೇರಾವ ಕಾರಣಕ್ಕೂ ಇದನ್ನು ರದ್ದು ಮಾಡಲಿಲ್ಲ. ಇದು ಎಲ್ಲರಿಗೂ ಗೊತ್ತಿದೆ. ಜನತೆಗೂ ಗೊತ್ತಿದೆ. ಇಂದು ಇಲ್ಲಿ ಈ ಕಾರ್ಪೊರೇಷನ್ನಿಗೆ ಚುನಾವಣೆಗಳನ್ನು ನಡೆಸಬೇಕೆಂದು ಜನರ ಒತ್ತಾಯದ ಮೇಲೆ ಅದನ್ನು ಸಮರ್ಥಿಸಬೇಕೆಂದು ತರುತ್ತಿದ್ದೀರಿ. ಇದಕ್ಕಾಗಿ ನಾನು ನಮ್ಮ ಮಾನ್ಯ ಸ್ಟೇಟು ಮಂತ್ರಿಗಳಾದ ಶ್ರೀ ಮಾನ್ ಬಿ. ಎಂ. ಪಾಟೀಲರವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಮತ್ತು ಇದಕ್ಕಾಗಿ ಸಂತೋಷ ಪಡುತ್ತೇನೆ. ಚುನಾವಣೆಗಳನ್ನು ನಡೆಸಲೇಬೇಕು ಅದನ್ನು ನಡೆಸಿ.

ಇನ್ನೊಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ತ್ರಿವೇಣಿ ಟಾಕೀಸ್ ಎಂದು ನಮ್ಮ ಸಿಟಿಯಲ್ಲಿರುವುದು ಎಲ್ಲರಿಗೂ ಗೊತ್ತಿದೆ. ಬಿ.ಸಿ.ಡಿ.ಸಿ. ಅಧ್ಯಕ್ಷರಾಗಿದ್ದವರು ಇದನ್ನು ಕೊಂಡು ಕೊಂಡಿದ್ದಾರೆ. ಇದು ಆಗುವುದಕ್ಕೆ ಮುಂಚೆ ಇಲ್ಲಿ ಎಂಟು ಗುಡಿಸಲುಗಳಿದ್ದುವು. ಇವರಿದ್ದ ಜಾಗವನ್ನು ತೆಗೆದುಕೊಂಡು ಇಲ್ಲಿನ ಬಡವರಿಗೆ ಬಹಳ ತೊಂದರೆ ಮಾಡಿದ್ದಾರೆ. ಇದನ್ನು ನಮ್ಮ ಗಾಂಧಿ ಭಕ್ತರು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದಾರೆಯೇ ? ಅವರಿಗೆ ತಿಂಗಳಿಗೆ ಅದರಿಂದ 18 ಸಾವಿರ ರೂಪಾಯಿ ಬಾಡಿಗೆ ಬರುತ್ತಾ ಇದೆ. ಅಲ್ಲಿ ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದಂಥ ಜನಕ್ಕೆ ಇನ್ನೂ ಸ್ಯೆಟುಗಳು ಸಿಕ್ಕಿಲ್ಲ. ಈಗ ಕೆಂಪೇಗೌಡ ಸರ್ಕಲ್‌ನಲ್ಲಿ 7–8 ಯೂರಿನಲ್‌ಗಳ ಹಿಂದೆ ಅಂಗಡಿಗಳು ಬರಬೇಕಾಗಿತ್ತು. ಅವು ಕಾಂಗ್ರೆಸ್ಸಿನ ಜನರಿಗೆ ಸೇರಿದ್ದು. ಕಾರ್ಪೊರೇಷನ್ ಸೂಪರ್‌ಸೀಡ್ ಆದಮೇಲೆ ಒಳೊಳಗೆ ಅಧಿಕಾರಿಗಳನ್ನು ಕಟ್ಟಿಕೊಂಡು ಆ ಯೂರಿನಲ್‌ಗಳನ್ನೆಲ್ಲಾ ಒಂದೇ ರಾತ್ರಿಯಲ್ಲಿ ಒಡೆದುಹಾಕಿದರು. ಇದನ್ನು ಮಾಡತಕ್ಕಂಥವರು ಕಾಂಗ್ರೆಸ್ಸಿನವರು. ಕಾಂಗ್ರೆಸ್ ಆಡಳಿತದಲ್ಲಿ ಅನ್ಯಾಯವಾಗಿದೆ. ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ರಚನೆ ಮಾಡಿದರೆ ನಾವು ರುಜುವಾತು ಕೊಡುತ್ತೇವೆ. ನಾನು ಹೇಳುವುದರಲ್ಲಿ ತಪ್ಪೇನಾದರೂ ಇದ್ದರೆ ಈ ಅಸೆಂಬ್ಲಿಗೆ ರಾಜೀನಾಮೆ ಕೊಡುತ್ತೇನೆ. ಕಾಂಗ್ರೆಸ್ಸಿನವರಿಗೆ ಧ್ಯೆರ್ಯವಿದ್ದರೆ ಈ ಸವಾಲು ಒಪ್ಪಲಿ.

ಇನ್ನು ಬೆಂಗಳೂರು ಕಾರ್ಪೋರೇಷನ್ನಿನ ಚುನಾವಣೆ ಸರ್ಕಾರದವರು ನಡೆಸುತ್ತಾರೆ ಎನ್ನುವುದು ಗೊತ್ತಾಯಿತು. ಇದಕ್ಕಾಗಿ ಬೇಕಾದಷ್ಟು ಚಳುವಳಿಯೂ ಆಯಿತು. ಬೆಂಗಳೂರಿನಲ್ಲಿ ಜನರಲ್ ಎಲೆಕ್ಷನ್ ನಡೆದಾಗ ಈಗಿನ ಬಿ.ಸಿ.ಡಿ.ಸಿ.ಸಿ. ಅಧ್ಯಕ್ಷರು ಚುನಾವಣೆಯಲ್ಲಿ ನಿಂತು ಸೋತರು. ಅದಾದ ತಕ್ಷಣ ಒಂದು ಕೆಲಸ ಬೇಕಾಗಿತ್ತು. ಅವರು ಬಿ.ಸಿ.ಡಿ.ಸಿ.ಸಿ. ಅಧ್ಯಕ್ಷರಾದರು. ಹೀಗೆ ಕಾಂಗ್ರೆಸ್‌ನವರದ್ದು ಒಂದು ಅನಾಥಾಶ್ರಮ ಇದೆ. ಅದರಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಕಾರ್ಯದರ್ಶಿಗಳು ಎಲ್ಲಾ ಚುನಾವಣೆಯಲ್ಲಿ ಸೋತವರೇ, ಅವರಿಗೆಲ್ಲಾ ಈ ಅನಾಥಾಶ್ರಮದಲ್ಲಿ ಆಶ್ರಯ ಸಿಕ್ಕಿದೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗೆರೆ).—ಸ್ವಾಮಿ, ಕಾಂಗ್ರೆಸ್ ಸಂಸ್ಥೆಯನ್ನು ಅನಾಥಾಶ್ರಮ ಎಂದು ಹೇಳುತ್ತಿದ್ದಾರೆ ಇದು ಸರಿಯೇ?

ಅಧ್ಯಕ್ಷರು.—ಒಂದು ಪಕ್ಷ ಇನ್ನೊಂದು ಪಕ್ಷವನ್ನು ಅನಾದರಣೆ ಮಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಈಗ ದೇಶದಲ್ಲಿ ಅನಾಥಾಶ್ರಮ ಇರುವುದು ಅನಾಥರಾದವರನ್ನು ನೋಡಿಕೊಳ್ಳುವುದಕ್ಕೆ. ಆರೀತಿ ಗಾಂಧೀಜಿಯವರು ಮಾಡಿದ್ದಾರೆ. ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಅನಾಥಾಶ್ರಮ ಅಲ್ಲ ಎಂದು ಹೇಳಿದರು. ಅವರವರಲ್ಲೇ ಒಡಕು ಬಂದಿರುವುದು ಗೊತ್ತಿದೆ. ಈವೊತ್ತು ಬೆಂಗಳೂರಿನ ಒಬ್ಬ ಪ್ರಮುಖ ವಾಣಿಜ್ಯೋದ್ಯಮಿಯ ಅಧ್ಯಕ್ಷತೆಯಲ್ಲಿ ಬಿ.ಸಿ.ಡಿ.ಸಿ.ಸಿ. ಅಧ್ಯಕ್ಷರಿಗೆ ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ಆ ಸಮಾರಂಭದಲ್ಲಿ ಇವರು ಬೆಂಗಳೂರಿನ ಜನತೆಗೆ ಉಚಿತ ನೀರನ್ನು ಕೊಡಿಸಿದರು, ಬೆಂಗಳೂರು ನಗರಸಭೆಗೆ ಚುನಾವಣೆ ನಡೆಸಲು ಅವಕಾಶ ಮಾಡಿಕೊಟ್ಟರು ಮತ್ತು ಇನ್ನು ಏನೇನೋ ಸೌಲಭ್ಯಗಳು ಇವೆಯೋ ಅವನ್ನೆಲ್ಲಾ ಅವರೇ ಮಾಡಿಕೊಟ್ಟರು ಎಂದು ಹೇಳಿದರು. ಆದರೆ ಅವರು ಉಪಮಂತ್ರಿಗಳಾಗಿದ್ದಾಗ್ಗೆ ಏನೇನು ಬೇಕು ಬೇಕಾದ ಕೆಲಸ ಮಾಡಿದರು ಎಂದರೆ, ಕಾರ್ಪೋರೇಷನ್ ರದ್ದು ಮಾಡಿದರು, ನೀರಿನ ಮೇಲೆ ತೆರಿಗೆ ಹಾಕಿದರು, ಸೈಕಲ್ ಮೇಲೆ ತೆರಿಗೆ ಹಾಕಿದರು, ಜನತೆಯ ಮೇಲೆ ಬೇಕು ಬೇಕಾದ ತೆರಿಗೆ ಹಾಕಿದರು. ಆದರೆ ಈವೊತ್ತಿನ ವಿರೋಧಪಕ್ಷದ ಒಂದು ಹೋರಾಟದ ಫಲವನ್ನು ತಾವು ಪಡೆಯಲು ಬಿ.ಸಿ.ಡಿ.ಸಿ.ಸಿ. ಅಧ್ಯಕ್ಷರಿಗೆ ಒಂದು ಸಮಾರಂಭ ಏರ್ಪಡಿಸಿ ಅವರೇ ಇದಕ್ಕೆ ಕಾರಣರು ಎಂದು ಹೇಳಿದ್ದಾರೆ. 30 ಸಾವಿರ ರೂಪಾಯಿ ಹಣವನ್ನು ಬೆಂಗೂರು ಕಾರ್ಪೋರೇಷನ್ ಕಂಟ್ರಾಕ್ಟರ್‌ಗಳಿಂದ ಕಲೆಕ್ಟ್ ಮಾಡಿಕೊಳ್ಳುತ್ತಿದ್ದಾರೆ ಎಂದು ಕೇಳಿದ್ದೇನೆ. ಇದಕ್ಕಾಗಿ ಹಳೇ ಕೆಲಸಕ್ಕೆ ಹೊಸಬಿಲ್ ಕೊಟ್ಟು ಅದರ ಮೂಲಕ ದುಡ್ಡನ್ನು ಕೆಲವು ಕಂಟ್ರಾಕ್ಟರು ಮಾಡಿಕೊಡುತ್ತಿದ್ದಾರೆ ಎಂದು ಕೇಳಿದ್ದೇನೆ ಬೆಂಗಳೂರು ನಗರಸಭೆಯ ಚುನಾವಣೆಗೆ ಅವರ ಪಕ್ಷದ ಸದಸ್ಯರನ್ನು ಗೆಲಿಸುವುದಕ್ಕೋಸ್ಕರ ಅವರು ಈ ಪಿತೂರಿಯನ್ನು ನೆಡೆಸುತ್ತಿದ್ದಾರೆ, ಈ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸುವ ಅಧ್ಯಕ್ಷರಿಗೆ 'ಪದ್ಮಶ್ರೀ' ಕೊಡಿಸುತ್ತಾರಂತೆ. ಅದು ಅಷ್ಟು ಸುಲಭ ಇದೆಯೇ? ಬೀದಿಯಲ್ಲಿ ಮಾತನಾಡಿದ ಹಾಗೆ ಸಿಕ್ಕುವ ವಸ್ತುವೆ? ಹೀಗೆಲ್ಲಾ ಹೇಳಿಕೊಂಡು ತಮ್ಮ ಒಂದು ಪ್ರಭಾವನ್ನು ಸಾಮಾನ್ಯ ಜನತೆಯ ಮೇಲೆ ಬೀರಿ ಒಂದು ಕೆಟ್ಟ ಪರಿಣಾಮನ್ನು ಉಂಟು ಮಾಡಿದ್ದಾರೆ.

ಸ್ವಾಮಿ, ಇನ್ನೊಂದು ವಿಷಯವನ್ನು ಕೊನೆಯದಾಗಿ ಶ್ರೀ ಮಾನ್ ಬಿ. ಎಂ. ಪಾಟೀಲರಿಗೆ ಹೇಳಬೇಕಾಗಿದೆ. ಬೆಂಗಳೂರಿನಲ್ಲಿರುವ ಬಿ. ವಿ. ಕೃಷ್ಣಯ್ಯಂಗಾರ್ ರಸ್ತೆಯನ್ನು ವಿಶಾಲವಾಗಿರಲಿ ಎನ್ನುವ ಉದ್ದೇಶದಿಂದ ಮಾಡಿದ್ದಾರೆ. ಆದರೆ ಅದರ ಈ ಒಂದು ಉದ್ದೇಶ ನೆರವೇರದೆ ಹೋಗಿದೆ ಕಾರಣ ಎಲ್ಲಿ ರಸ್ತೆ ಮಾಡಬೇಕು ಅಲ್ಲಿ ಮಾಡದೆ ಕಾಂಗ್ರೆಸ್ಸಿನವರ ಮನೆ ಎಲ್ಲಿ ಇರುತ್ತದೋ ಅಲ್ಲಿ ಬಿಟ್ಟು ಮಾಡಿದ್ದಾರೆ. ಈ ಕೆಲಸ ಮಾಡಿರುವವರು ಶ್ರೀ ರಾಮಣ್ಣನವರು.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ರಸ್ತೆ ವಿಚಾರ ಮಾತನಾಡುವಾಗ ಸದಸ್ಯರ ಹೆಸರನ್ನು ಹೇಳುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಶ್ರೀಮತಿ ನಾಗರತ್ನಮ್ಮನವರು ನನಗೆ ಪಾಠ ಹೇಳಬೇಕಾಗಿಲ್ಲ. ನನಗೆ ಗೊತ್ತಿದೆ. ****

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಸದಸ್ಯರು ಡೈರೆಕ್ಟ್ ಆಗಿ ಇನ್ನೊಬ್ಬ ಸದಸ್ಯರನ್ನು **** ಎಂದು ಹೇಳಬಹುದೋ ಎಂದು ಅಧ್ಯಕ್ಷರನ್ನು ಕೇಳುತ್ತೇನೆ.

ಅಧ್ಯಕ್ಷರು.—ಡೈರೆಕ್ಟ್ ಆಗಿ ಒಬ್ಬ ಸದಸ್ಯರು ಇನ್ನೊಬ್ಬ ಸದಸ್ಯರನ್ನು **** ಎಂದು ಹೇಳಬಾರದು.

**** Expunged under orders of the Chair.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಅಧ್ಯಕ್ಷರು ಮಾನ್ಯ ಸದಸ್ಯರು ಆಡಿದಂಥ ಮಾತುಗಳನ್ನು ಹಿಂತೆಗೆದುಕೊಳ್ಳಬೇಕು.

ಅಧ್ಯಕ್ಷರು.—ನಾನು ಆ ಮಾತುಗಳನ್ನು ಎಕ್ಸ್‌ಪಂಜ್ ಮಾಡುತ್ತೇನೆ. ಮಾನ್ಯ ಸದಸ್ಯರಿಗೆ ಕೊಟ್ಟಿರುವ ವೇಳೆ ಆಗಿರುವುದರಿಂದ ಬೇಗ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಬಿ. ವಿ. ಕೃಷ್ಣ ಐಯ್ಯಂಗಾರ್ ರಸ್ತೆ ಈವೊತ್ತು ಏನಾಗಿದೆ ಎಂದರೆ ಸರಿಯಾದ ಪ್ಲಾನ್ ಮಾಡಿ ಕೊಡದೆ ಇರುವುದರಿಂದ ಎಲ್ಲ ಕಡೆಯೂ ಅವರವರ ಇಷ್ಟ ಬಂದ ಹಾಗೆ ಮಾಡಿಕೊಳ್ಳುತ್ತ ಇದ್ದಾರೆ. ಯಾರು ಏನು ಬೇಕಾದರೂ ಮಾಡಿಕೊಳ್ಳಲಿ ಎಂದು ಕಾರ್ಪೊರೇಷನ್‌ನವರು ಭಾವಿಸಿದ್ದಾರೆಂದು ಕಾಣುತ್ತದೆ. ಇದು ಸರಿಯಲ್ಲ ಎನ್ನುವ ಮಾತನ್ನು ಈ ಸಭೆಯಲ್ಲಿ ತಿಳಿಸುತ್ತ ಹಿಂದೆ ಈ ನಗರ ಸಭೆಯ ಚುನಾವಣೆಗಳಲ್ಲಿ ಕೆಲವು ಮೀಸಲು ಸ್ಥಾನಗಳಿದ್ದುವು..... ...

ಅಧ್ಯಕ್ಷರು.—ಮಾನ್ಯ ಸದಸ್ಯರು ಭಾಷಣವನ್ನು ಬೇಗನೇ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಹೆಚ್ಚು ಮಾತನಾಡಲು ಅಧ್ಯಕ್ಷರು ವೇಳೆ ಇಲ್ಲ ಎಂದು ಒಂದೇ ಸಮನೆ ಹೇಳುತ್ತಿರುವುದರಿಂದ ಇಷ್ಟು ಮಾತ್ರ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—I will put the motion to the House. The question is :

"That the City of Bangalore Municipal Corporation (Amendment) Bill, 1969, be taken into consideration."

The motion was adopted.

Sri L. SRIKANTAIAH.—(Nanjangud) I beg to move :

"That the City of Bangalore Municipal Corporation (Amendment) Bill, 1969, be referred to a a Select Committee."

Mr. SPEAKER.—Motion moved :

"That the City of Bangalore Municipal Corporation (Amendment) Bill, 1969, be referred to a Select Committee."

Sri L. SRIKANTAIAH.—Sir, I request that the Bill may be referred to a Select Committe for the following reasons :

The amendments enumerated in the Amendment Bill are not ordinary amendments. They have far-reaching consequences. To list here only a few, I wish to draw the attention of the House to the following :

The Amendment Bill requires the utmost and careful consideration of a Committee. For instance, let me take Clause 11—insertion of new Schedule VIII. As we are aware, hitherto the elections to the Municipal Council were held on the basis of electoral rolls prepared under the provisions of the Representation of the People's Act and the rules made thereunder. Now in this new Bill, an amendment is brought in to the effect that the Corporation shall prepare its own electoral roll and in Schedule VIII some model rules are framed ; as far as possible, wherever the Commissioner is also empowered, to issue instructions or to frame such rules as are necessary. We know quite well with what great care the Parliament has prepared the Representation of the People's

Act and the preparation of electoral rolls. Here I find those provisions are totally absent. Let me give you a simple illustration of the problem. We are aware how during these 15 days innumerable writs have been filed in the High Court of Mysore on the sole ground that even after nominations began for elections to the Taluk Board, the Electoral Officer was pleased to admit new voters. Even in the Municipal Elections this happened and writ petitions are pending in this connection also. If we go through the entire clause, we do not find any rule to the effect that immediately after the notification is made, the Electoral Officer shall stop registration of voters. Moreover, the forms of objections and the way the electoral rolls should be prepared are not discussed in Schedule VIII. These are very important matters. More than that, I think it is necessary that the Committee should consider this aspect. The preparation of electoral roll by the Corporation is not an ordinary affair. It is an expensive one. I do not know why the electoral roll of the Legislative Assembly could not be adopted for this purpose. We know under the Representation of the People's Act, annual revision, intensive revision and summery revision are there. There is an Electoral Officer for the State of Mysore and the Chief Election Commissioner for India. The Electoral Officer could as well take up the task of either intensive revision or summary revision or annual revision and get the voters' list printed for the Legislative Assembly and the Parliament. Why this duplication of work ? Therefore, it is absolutely necessary that a Committee be appointed for this purpose to consider these proposals made by the Government. This matter cannot be discussed on the floor of the House within 1½ hours or half-an-hour at our disposal because these are all complicated matters and they have to be examined by a body of experts who could go through the provisions leisurely.

The second aspect to which I wish to draw the attention of the House is, Section 104 relating to Property tax from whom and when payable. I think this is another most interesting and complicated affair. My learned friend Sri Nagappa was quite right in drawing the attention of the Chair about the constitutionality of some of these provisions in this Act. Some of the provisions here are *ultra vires* of the Constitution and the Courts may declare them so. Apart from that, care must be taken by us to see that as far as possible that we enact legislation in conformity with the Constitution and not violating any article of the Constitution. Therefore, whatever Government wants to do about Section 104, let it be examined carefully by a Select Committee. While enacting Section 104 I think it is better that a Committee takes the evidence of the Government or the authorities of the Corporation who may place before the Committee the need for substitution of section 104. I do not think the hon. Minister Sri Puttaswamy can place before the House all the difficulties experienced by the Corporation or the Administrator or his administration. There are legal difficulties. There are ancillary difficulties. On the other hand, those difficulties can be placed before a Committee and that Committee can take into account the difficulties experienced by the Administrator while

(SRI L. SRIKANTAIAH)

running the Corporation and if there are any difficulties or loopholes in the Corporation Act, 1964, they can be amended and listed in a proper manner.

So far as the holding of elections to the Bangalore City Corporation is concerned, I welcome it. Some of my friends may argue that if the Bill is referred to a Select Committee, we cannot hold elections. I think the Government can hold elections by other means. If it is referred to a Select Committee it will take a long time and the question would be whether the elections would be postponed. If the Government is anxious to hold the elections to the Corporation immediately, other steps can be thought of. In the meanwhile, the Select Committee may go through all these provisions and scrutinise the amendments before they are brought to this House. I think, within the time at our disposal we cannot do justice to the amendment Bill because important provisions are involved. We do not know what we are amending in the original Act. The argument might be that most of the members could have thought over the matter and convinced the House with regard to the feasibility or non-feasibility of certain amendments.

4-30 P.M.

As pointed out by Sri Shamanna some of the provisions are very difficult to follow. So, I request that the Bill may be referred to a Select Committee.

† Sri M. NAGAPPA.—Sir, apart from section 104A there are some provisions which are very important. For instance, take clause 5. I wanted to take part in the debate but could not do so as there was no time. For instance, look at the proviso. This is a fundamental right. So many times we have seen that names of persons who were in jail have been enrolled in the voters list and they have been allowed to contest the elections. But by this proviso, the right to vote has been taken away. This definitely infringes the right of a citizen who is entitled to get himself enrolled and vote. Such a provision is found neither in the Representation of Peoples Act nor in any other law. I therefore suggest that this Bill may be referred to a Select Committee.

The normal procedure is that we should enact short Bills leaving delegated legislation to the Executive. But here we have taken upon ourselves the burden of subordinate legislation by adding Schedule VIII. Suppose any amendment is required to Schedule VIII, that has to come before the House. This will put us in an awkward position.

I also wish to submit that the Commissioner is also given vast powers under sub-section 4 of section 104.

With these submissions, I support the suggestion made by the hon. Member Sri Srikantiah to refer this Bill to a Select Committee.

Even at this stage if the Hon'ble Minister is prepared to withdraw the proviso in clause 5 and sub-section 4 of section 104, we have no objection for passing of this Bill. We do not want to bring any hurdle to the Government. If the Government is anxious to hold elections in Bangalore City, we are more anxious than the Government. If the Government does not want to make it a controversial Bill, let them withdraw those two provisions which I have suggested. Otherwise, let the Bill be referred to a Select Committee. I hope the Government will consider this matter very seriously.

Sri L. SRIKANTAIAH.—I wish to draw the attention of the Hon. Minister that it is impossible to make out the meaning of the words used in sections 104 and 105. It is hurriedly and poorly drafted.

Mr. SPEAKER.—The hon. Member may refer to it when the clause comes up for consideration.

† ಶ್ರೀ ಬಿ. ಎಂ. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಿತ್ರರನೇಕರು ಈಗಾಗಲೇ ಈ ತಿದ್ದುಪಡಿ ವಿಧೇಯಕದಮೇಲೆ ಮಾತನಾಡಿದ್ದಾರೆ, ಇದರಲ್ಲಿ ಬಹಳ ಮುಖ್ಯವಾದ ಮತ್ತು ಮಹತ್ವವುಳ್ಳ ಅಂಶಗಳಿವೆ, ಸೆಕ್ಷನ್ 104 (ಎ), ಷೆಡ್ಯೂಲು 8 ಮುಂತಾದುವೆಲ್ಲಾ ಬಹಳ ಮುಖ್ಯವಾದುವು ಎಂದು ಹೇಳಿದ್ದಾರೆ. ಷೆಡ್ಯೂಲು 8 ರಲ್ಲಿ ನಾವೇನು ಕಾಣಿಸಿದ್ದೇವೆ ಅದು 1969 ರಪೀಪಲ್ಸ್ ರೆಪ್ರಸೆಂಟೇಷನ್ ಆಕ್ಟಿನಲ್ಲಿರುವುದು, ಅದನ್ನು ಇನ್ನೂ ಬದಲಾಯಿಸಿಲ್ಲ, ಅದರಲ್ಲಿ ಹೇಗಿದೆಯೋ ಹಾಗೆ ಕಾಣಿಸಿದೆ. ಮಾನ್ಯ ಸದಸ್ಯರು ಈ ರೆಪ್ರೆಸೆಂಟೇಷನ್ ಆಕ್ಟನ್ನು ಸ್ವಲ್ಪ ತುಲನೆಮಾಡಿನೋಡಿ ಅದೇ ರೀತಿಯಲ್ಲಿಲ್ಲದಿದ್ದರೆ, ಆಗ ಹೇಳಿದರೆ ಒಪ್ಪಿಕೊಳ್ಳಬಹುದು.

ವಿಧೇಯಕವನ್ನು ತರಬೇಕಾದರೆ ಮೊದಲನ ಕ್ಲಾಜುಗಳನ್ನೂ ನಮೂದುಮಾಡಬೇಕಾಗಿತ್ತು, ಯಾವ ಕ್ಲಾಜನ್ನು ಬದಲಾಯಿಸುತ್ತಾರೋ ಅದನ್ನು ವಿಧೇಯಕದ ಜೊತೆಯಲ್ಲಿ ಕೊಟ್ಟಿಲ್ಲ, ಹಾಗೆಯೇ ಇನ್ನೂ ಕೆಲವು ಕೊಡಬೇಕಾಗಿತ್ತು ಎಂದು ಶ್ರೀ ನಾಗಪ್ಪನವರು ಹೇಳಿದರು. ಆಕ್ಟಿನಲ್ಲಿರುವುದರಲ್ಲಿ ಯಾವುದನ್ನು ಬದಲಾಯಿಸಲು ಸೂಚನೆಯಿದೆ ಅದನ್ನು ಕೊಟ್ಟಿದೆ. 47 (ಎ) ಎಂಬ ಹೊಸ ಕ್ಲಾಜನ್ನು ಸೇರಿಸಲಾಗಿದೆ, ಅದು ಒರಿಜಿನಲ್ ಅಲ್ಲ.

ಶ್ರೀ ಎಂ. ನಾಗಪ್ಪ.—ರೂಲ್ಸ್ ಪ್ರಕಾರ ನಮಗೆ 7 ದಿವಸಗಳಾದರೂ ಕಾಲಾವಕಾಶ ಕೊಡಬೇಕು, ಹಾಗೆ ಕೊಡದಿರುವುದರಿಂದ ನಾವು ವಿಧೇಯಕವನ್ನು ನೋಡಿ ಚರ್ಚೆಮಾಡಲು ತೊಂದರೆಯಾಗಿದೆ ಎಂದು ನಾನು ಹೇಳಿದೆ, ಹಿಂದಿನದನ್ನು ಕೊಡಲಿಲ್ಲ ಎಂಬುದು ನನ್ನ ಆಕ್ಷೇಪಣೆಯಲ್ಲ.

ಶ್ರೀ ಬಿ. ಎಂ. ಪಾಟೀಲ್.—ಶ್ರೀ ಕೃಷ್ಣನ್‌ರವರು 47 (ಎ) ಕ್ಲಾಜು ಹೊಸದು, ಕೆಲವು ಕ್ಲಾಜುಗಳನ್ನು ಕೊಟ್ಟಿಲ್ಲ ಎಂದು ಹೇಳಿದರು. ತಿದ್ದುಪಡಿಮಾಡಿರುವ ಕ್ಲಾಜುಗಳನ್ನೆಲ್ಲಾ ಕೊಡಲಾಗಿದೆ. ಹೊಸ ಕ್ಲಾಜಿಗೆ ಅವರು ಹೇಳುವುದು ಅನ್ವಯಿಸುವುದಿಲ್ಲ.

ಅಧ್ಯಕ್ಷರು.—ಸೆಲೆಕ್ಟ್ ಕಮಿಟಿಗೆ ಕಳಿಸಬೇಕೆಂದು ಹೇಳಿದ್ದಾರೆ, ಆ ವಿಚಾರ ಹೇಳಿ.

ಶ್ರೀ ಬಿ. ಎಂ. ಪಾಟೀಲ್.—ಸೆಲೆಕ್ಟ್ ಕಮಿಟಿಗೆ ಕಳಿಸಲು ಅಂಥ ಮಹತ್ತರವಾದ ಅಂಶಗಳೇನೂ ಇಲ್ಲ, ಇದರಲ್ಲಿ ಆಮೂಲಾಗ್ರವಾದ ಬದಲಾಣೆಯನ್ನೇನೂ ಮಾಡಿಲ್ಲ, ಹೊಸ ಕ್ಲಾಜು ಅಂಥ ಮಹತ್ವದ್ದೇನೂ ಇಲ್ಲ. ಇದು ಸೆಲೆಕ್ಟ್ ಕಮಿಟಿಗೆ ಹೋಗುವುದು ಸೂಕ್ತವಲ್ಲವಾದುದರಿಂದ ಅದಕ್ಕೆ ಒಪ್ಪುವುದಕ್ಕಾಗುವುದಿಲ್ಲ ಅದರ ಅವಶ್ಯಕತೆಯಿಲ್ಲ ಎಂಬ ಭಾವನೆ ಇದೆ.

ಮಾನ್ಯ ಶಾಮಣ್ಣನವರು ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ, ಆಸ್ತಿ ತೆರಿಗೆ ಬಹಳ ಕಡಮೆಯಾಗುತ್ತಿದೆಯೆಂದು ಹೇಳಿದ್ದಾರೆ. ಈಗಾಗಲೇ ಅಂಕಿಅಂಶ ಕೊಡಲಾಗಿದೆ, ಮತ್ತೆ ಬೇಕಾದರೆ ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಆಸ್ತಿ ತೆರಿಗೆ ಹೆಚ್ಚುತ್ತಿದೆ. ಮಾನ್ಯ ಸದಸ್ಯರು ಯಾವರೀತಿ ಅಂಕಿ ಕೊಟ್ಟರೋ ಗೊತ್ತಿಲ್ಲ.

1965-66ರಲ್ಲಿ 73 ಲಕ್ಷ 1966-67ರಲ್ಲಿ 1 ಕೋಟಿ 14ಲಕ್ಷ, 1967-68ರಲ್ಲಿ 1 ಕೋಟಿ 40 ಲಕ್ಷ ಈ ರೀತಿ ಹೆಚ್ಚುತ್ತಾ ಇದೆ. ಪ್ರಾಪರ್ಟಿ ಟ್ಯಾಕ್ಸ್ ಕೂಡ ಹೆಚ್ಚಾಗಿ ವಸೂಲು ಮಾಡುತ್ತಾ ಇದ್ದೇವೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

(ಶ್ರೀ ಬಿ. ಎಂ. ಪಾಟೀಲ್)

ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡುವಾಗ ರಾಜಕೀಯ ಕಾರಣಕ್ಕಾಗಿ ಮಾಡಲಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಸತ್ಯವಲ್ಲ ಎಂದು ಹೇಳುತ್ತೇನೆ. ಸೂಪರ್‌ಸೀಡ್ ಮಾಡಿದ ನಂತರ ಅದು ಹೈಕೋರ್ಟಿಗೆ ಹೋಯಿತು, ಅವರು ಸರ್ಕಾರದವರು ಏನು ಆರ್ಡರ್ ಮಾಡಿದ್ದಾರೆ ಅದನ್ನು ಎತ್ತಿ ಹಿಡಿದಿದ್ದಾರೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಕಾರ್ಪೊರೇಟರುಗಳು ಯಾವ ರೀತಿ ಇರಬೇಕು, ಯಾವ ಮಟ್ಟದ ಜನ ಅಲ್ಲಿಗೆ ಬರಬೇಕು ಎಂಬುದನ್ನು ಹೇಳುತ್ತಾ ಇದ್ದರು. ಪ್ರಜಾಸತ್ತೆಯಲ್ಲಿ ಜನತೆಯ ವಿಶ್ವಾಸವನ್ನು ಗಳಿಸಿರತಕ್ಕ ಜನ ಅಲ್ಲಿಗೆ ಬರಬೇಕು. ಯಾವ ರಾಜಕೀಯ ಪಕ್ಷದವರೇ ಆಗಿರಲಿ ಜನತೆಯಲ್ಲಿ ಸಮಾಜದಲ್ಲಿ ಒಳ್ಳೆಯವರು ಕೆಟ್ಟವರು ಇದ್ದೇ ಇರುತ್ತಾರೆ, ಅದೇ ರೀತಿ ರಾಜಕೀಯ ಪಕ್ಷಗಳೂ ಇರುತ್ತವೆ, ಆದ್ದರಿಂದ ಜನತೆಯ ವಿಶ್ವಾಸವನ್ನು ಗಳಿಸಿರತಕ್ಕವರು ಬಂದರೆ ಅವರಿಗೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ.

ಮಾನ್ಯ ಸದಸ್ಯರೊಬ್ಬರು ಬಾಡಿಗೆ ಜಾಸ್ತಿಯಾಗುತ್ತದೆ ಎಂದು ಹೇಳಿದರು, ಆ ರೀತಿ ಬಾಡಿಗೆ ಜಾಸ್ತಿಯಾಗುವುದಿಲ್ಲ, ರೆಂಟ್ ಕಂಟ್ರೋಲ್ ಆಕ್ಟ್ ಪ್ರಕಾರ ಎಷ್ಟು ಆಗುತ್ತದೆಯೋ ಅಷ್ಟೆ ವಿನಹ ಹೆಚ್ಚು ಬಾಡಿಗೆ ಆಗುತ್ತದೆ ಎಂಬ ವಾದ ಸರಿಯಲ್ಲ ಎಂದು ಹೇಳುತ್ತೇನೆ.

ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ಸಲುವಾಗಿ ಮಾತನಾಡಿದ್ದಾರೆ. ಈಗಾಗಲೇ ರೂಲ್ಸನ್ನು ಪಿ. ಎಸ್. ಸಿ. ಅವರ ಒಪ್ಪಿಗೆಗೆ ಕೊಟ್ಟಿದ್ದಾರೆ. ಅದನ್ನು ಆಡಳಿತಗಾರರು ಸರ್ಕಾರಕ್ಕೆ ಕಳುಹಿಸಿದ ನಂತರ ತೀವ್ರವಾಗಿ ಕಾರ್ಯ ರೂಪದಲ್ಲಿ ತರುತ್ತೇವೆ ಎಂದು ಹೇಳುತ್ತೇನೆ.

ಎಲೆಕ್ಟೋರಲ್ ರೋಲ್ ವಿಷಯ ಹೇಳಿದ್ದಾರೆ. ಪೀಪಲ್ಸ್ ರೆಪ್ರಸೆಂಟೇಷನ್ ಆಕ್ಟ್ ಏನಿದೆ ಅಷ್ಟೆ ಇದು ಒಳಗೊಂಡಿದೆ ಎಂದು ಹೇಳಲಿಚ್ಛಿಸುತ್ತೇನೆ. ಹುಬ್ಬಳ್ಳಿ, ಧಾರವಾಡ ಮತ್ತು ಇನ್ನಿತರ ಕಾರ್ಪೊರೇಷನ್‌ದೊಳಗೂ ಎಲೆಕ್ಟೋರಲ್ ರೋಲ್ ತಯಾರುಮಾಡಿ ಚುನಾವಣೆ ನಡೆಸಬಾರದು ಎಂದು ಮಾನ್ಯ ಸದಸ್ಯರ ಅಭಿಪ್ರಾಯ ಇದೆ. ಜನರಲ್ ಎಲೆಕ್ಷನ್‌ಗೆ ಒಂದು ಎಲೆಕ್ಟೋರಲ್ ರೋಲ್ ತಯಾರು ಮಾಡುತ್ತೇವೆ, ಅದನ್ನು ಚಾಲೆಂಜ್‌ಮಾಡಿ ಹೈಕೋರ್ಟಿನಲ್ಲಿ ಅನೇಕ ಕೇಸುಗಳು ನಡೆಯುತ್ತಾ ಇವೆ. ಆದ್ದರಿಂದ ಈಗ ಹೊಸದಾಗಿ ಎಲೆಕ್ಟೋರಲ್ ರೋಲ್ ತಯಾರು ಮಾಡಬೇಕೆಂದು ಅನ್ನುವಾಗ ಪೀಪಲ್ಸ್ ರೆಪ್ರೆಸೆಂಟ್‌ಷನ್ ಆಕ್ಟ್‌ಗೆ ಅನುಸಾರವಾಗಿ ಮಾಡಬೇಕಾಗುತ್ತದೆ ಅದನ್ನು ಮಾಡುತ್ತಾ ಇದ್ದೇವೆ ಎಂದು ಹೇಳಲಿಚ್ಛಿಸುತ್ತೇನೆ.

ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್‌ಗಳು ಇವುಗಳೆಲ್ಲದರ ಮೇಲೆ ಪ್ರಾಪರ್ಟಿ ಟ್ಯಾಕ್ಸ್ ಹಾಕುವುದರಿಂದ ಬಹಳ ಅನಾನುಕೂಲವಾಗುತ್ತದೆ. ಆ ರೀತಿ ಹಾಕುವುದು ಸೂಕ್ತವಲ್ಲ ಎಂದು ಹೇಳಿದರು. ಈಗ ಒಂದು ಆ ಪ್ರೊವಿಜನ್ ಇರಲಿಲ್ಲ. ಆ ಪ್ರೊವಿಜನ್ ಮಾಡಲಿಕ್ಕೆ ಸೇರಿಸಿದ್ದೇವೆ ಎಂದು ಹೇಳಲಿಚ್ಛಿಸುತ್ತೇನೆ.

Mr. SPEAKER.—Now I will put the amendment to the House. Before that I would like to know whether the hon. member Sri Srikantaiah would withdraw his amendment now that this official amendment has been moved.

SRI L. SRIKANTAIAH.—I am quite willing to accept the suggestion if the Hon. Minister says that he will make the necessary change in the rule. I beg leave of the House to withdraw my amendment.

The amendment was by leave of the House withdrawn.

MR. SPEAKER.—The question is :

"That at the end of Rule 6 of Schedule VIII add the following :

" Notwithstanding anything contained in rules 1 to 6 no amendment, transposition or deletion of any entry shall be made or no direction for the inclusion of a name in the electoral roll shall be given after the last date for making nominations for an election in that Division and before the completion of that election."

The amendment was adopted.

MR. SPEAKER.—I will put the clause as amended to the vote of the House. The question is :

"That clause 11, as amended, do stand part of the Bill."

The motion was adopted.

Clause 11, as amended, was added to the Bill.

CLAUSE 1, ETC.

MR. SPEAKER.—The question is :

" That clause 1, the long : Title and the enacting formula do stand part of the Bill."

The motion was adopted.

Clause 1, the long Title and the enacting formula were added to the Bill.

Motion to pass.

SRI B. M. PATIL.—I beg to move :

" That the City of Bangalore Municipal Corporation (Amendment) Bill, 1969, as amended, be passed."

MR. SPEAKER.—The question is :

"That the City of Bangalore Municipal Corporation (Amendment) Bill, 1969, as amended, be passed."

The motion was adopted.

Business of the House

Mr. SPEAKER.—The other Bill has not been reached. I do not know whether the House would like to have it tomorrow.

Sri B. P. GANGADHAR.—Sir, what about the discussion on the Pay Commission Report?

Mr. SPEAKER.—There are two or three small Bills to be taken up. After the disposal of those Bills, the House may carry on the debate on the Tukol Commission Report. If, unfortunately, the time is not sufficient tomorrow, the discussion on the Pay Commission will be taken up in the next sittings. If the House agrees, I have no objection to that being done.

HON'BLE MEMBERS.—Yes.

Mr. SPEAKER.—I had promised some of the hon. Members that they would be given an opportunity to ask for certain explanations from the Hon. Ministers, and the other item on the Agenda is half-an-hour discussion. Which shall we take first?

HON'BLE MEMBERS.—Explanations from the Ministers, Sir.

Sri K. SANGANA GOUDA (Lingsugur)).—I had given notice of half-an-hour discussion on the Upper Krishna Project.

ಶ್ರೀ ಕೆ. ಪುಟ್ಟಸ್ವಾಮಿ.—ಇದು ಸಭೆಗೆ ಗೌರವ ತರುವುದಿಲ್ಲ. ಯಾವ ರೂಲ್ ಪ್ರಕಾರ ಇದಕ್ಕೆ ಅವಕಾಶವಿದೆಯೋ ತಿಳಿಯದು, ಎಕ್ಸ್‌ಪ್ಲನೇಷನ್ ಕೇಳುವುದು ದಿನವಹಿ ಕಾರ್ಯಕ್ರಮವಾದರೆ ನಾವು ಸಾಕ್ಷಿಪೆಟ್ಟಿಗೆಯಲ್ಲಿ ನಿಂತಹಾಗಾಗುತ್ತದೆ. ಕೇಳಿದರೆ ಇರುವ ವಿಚಾರ ಒದಗಿಸಬಹುದೇ ವಿನಾ ನಮ್ಮ ಎಕ್ಸ್‌ಪ್ಲನೇಷನ್ ಈ ರೀತಿ ಕೇಳುವುದು ಸರಿಯಲ್ಲ.

Mr. SPEAKER.—I had indicated that I do not entertain Zero hour and instead permit one or two matters to be explained. Under the provisions of Rule 312, liberally interpreted, if a notice is given early in the morning, I may permit one or two matters to be explained at the end of the day, and in accordance with that procedure, I am permitting members to ask certain explanations. I wanted to permit one or two members, but today there is a large number. I may permit 4 or 5 hon. Members to ask for certain explanations.

Sri K. H. SRINIVASA (Sagar).—Sir, half-an-hour discussion finds a place in the regular Agenda. I think, it is better to give priority to that.

Mr. SPEAKER.—I will permit that also, after the explanations are given.

Absence of Ministers at Gandhi Centenary Celebrations at Bangalore

† ಶ್ರೀ ವಾಟಾಳ್ ನಾಗರಾಜ್,—ಸ್ವಾಮಿ, 27ನೆಯ ತಾರೀಖು ಈ ಊರಿನಲ್ಲಿರುವ ತತ್ತ್ವ ಪ್ರಚಾರ ಕೇಂದ್ರದಲ್ಲಿ ರಾಷ್ಟ್ರಪಿತ ಗಾಂಧೀಜೀಯವರ ಶತಾಬ್ದಿ ಉತ್ಸವವನ್ನು ಏರ್ಪಡಿಸಿದ್ದರು. ಅದಕ್ಕೆ ದೊಡ್ಡ ಅಧಿಕಾರಿಗಳನ್ನು ಕರೆಸಬೇಕೆಂದು ತೀರ್ಮಾನಮಾಡಿ ಮಂತ್ರಿಗಳನ್ನು ಕರೆಸ

ಬೇಕೆಂದು ತೀರ್ಮಾನಿಸಿ ಮಂತ್ರಿಗಳಾದ ಶ್ರೀ ಬಿ. ರಾಚಯ್ಯ, ಶ್ರೀ ಪಿ. ಎಂ. ನಾಡಗೌಡ, ಶ್ರೀ ಆಲೂರು ಹನುಮಂತಪ್ಪ, ಶ್ರೀ ಬಿ. ಎಂ. ಪಾಟೀಲ್ ಮತ್ತು ಶ್ರೀ ಬಸವರಾಜ ಮಾಗಾವಿ ಮುಂತಾದವರನ್ನು ಆಹ್ವಾನಿಸಿದರು. ಆಹ್ವಾನಪತ್ರಿಕೆಗಳನ್ನು ಪ್ರಿಂಟ್‌ಮಾಡಿ ಹಂಚಿದ್ದರು, ಸಾವಿರಾರು ಜನರು ಮಂತ್ರಿಗಳು ಬರುತ್ತಾರೆಂದು ಕಾದಿದ್ದರು. ಆ 5 ಜನರಲ್ಲಿ ಗಾಂಧಿವಾದಿಗಳೆಂದು ಹೇಳಿಕೊಳ್ಳುವ ಒಬ್ಬ ಮಂತ್ರಿಗಳೂ ಬರಲಿಲ್ಲ, ಈಗ ಗಾಂಧಿಶತಮಾನೋತ್ಸವ ಎಲ್ಲರೂ ಆಚರಿಸಬೇಕೆಂದು ಸಾರಿರುವ ಮಂತ್ರಿಗಳೇ ಈ ಸಂಬಂಧವಾದ ಉತ್ಸವಕ್ಕೆ ಬಾರದೆ ರಾಷ್ಟ್ರಪಿತನಿಗೆ ಅಗೌರವವನ್ನು ಸೂಚಿಸಿದ್ದಾರೆ ಎಂದು ಅಲ್ಲಿ ನೆರೆದಿದ್ದ ಜನರೆಲ್ಲಾ ಬಹಳ ವ್ಯಥೆಪಟ್ಟರು. ಈ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ. ಪಿ. ಎಂ. ನಾಡಗೌಡ (ಅಭಿವೃದ್ಧಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ. ಬಹಳ ವಿಷಾದವಾದ ಸಂಗತಿಯನ್ನು ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದರು. ವೀರಶೈವ ತತ್ವ ಪ್ರಚಾರ ಸಂಘದವರು ಒಂದು ಪತ್ರ ಬರೆದಿದ್ದರೆ, ಏನಾಗಿದೆ ಎಂಬ ವಿಚಾರದಲ್ಲಿ ನಡೆದಿರುವ ವ್ಯವಹಾರದ ಪೂರ್ಣ ಮಾಹಿತಿಯನ್ನು ಕೊಡುತ್ತೇನೆ. ಆ ಸಂಘದವರು ನನ್ನ ಪ್ರೈವೇಟ್ ಸೆಕ್ರೆಟರಿಯವರಿಗೆ ಒಂದು ಕಾಗದವನ್ನು ಕೊಟ್ಟರು. ಅದಕ್ಕೆ ಜವಾಬು ಬರೆದಮೇಲೆ ಅವರು ಉತ್ತರ ಕೊಟ್ಟಿಲ್ಲ. ಓರಲ್ ಆಗಿ ಕೇಳಿದ್ದೇವೆ, ಅದಕ್ಕೆ ಒಪ್ಪಿಗೆ ಕೊಟ್ಟಿದ್ದರು ಎಂದು ಹೇಳುತ್ತಿದ್ದಾರೆ. ನನಗೆ ಆ ರೀತಿ ಒಪ್ಪಿಗೆ ಕೊಟ್ಟಿದ್ದು ನೆನಪಿಲ್ಲ. ಪ್ರೈವೇಟ್ ಸೆಕ್ರೆಟರಿಯ ಬಳಿಗೆ ಹೋಗಿ ಮಂತ್ರಿಗಳನ್ನು ಕೇಳಿದ್ದೇವೆ. ಅವರು ಒಪ್ಪಿದ್ದಾರೆ, ಡೈರಿಯಲ್ಲಿ ಬರೆದುಕೊಳ್ಳಿ ಎಂದು ಹೇಳಿ ಬರೆಸಿದ್ದಾರೆ. ನಾನು 25 ನೆಯ ತಾರೀಖು ಶ್ರೀಮಂಗಲಕ್ಕೆ ಹೋಗಬೇಕಾಗಿತ್ತು, ಅಲ್ಲಿಂದ ಬಂದ ಇನ್‌ವಿಟೇಷನ್ ಒಪ್ಪಿಕೊಂಡಿದ್ದೆ ಅದಕ್ಕಾಗಿ ತತ್ವ ಪ್ರಚಾರ ಸಂಘಕ್ಕೆ ಕಾಗದ ಬರೆದೆ. ಬರೆದಿರುವ ಕಾಗದವನ್ನು ಓದುತ್ತೇನೆ. ಅದು ಈ ರೀತಿ ಇದೆ :

I am reading the letter written by my Private Secretary to the Organiser, Gandhi Centenary Celebrations, H. B. Samaja Road, Basavanagudi, Bangalore-4.

> " Dear Sir—In connectiou with the acceptance of the Minister for Development and Co-operation to participate in the Centenary Celebrations of Mahatma Gandhi on the 25th, I am desired to state that the Minister has unavoidably to proceed to Coorg with the Deputy Minister for Industries in connection with some function, which is important. So, the Minister pleads his inability to request you to excuse him for the incovenience caused, He wishes the function all success. "

ಹೀಗೆ ದಾರಿಯಲ್ಲಿ ಸಿಕ್ಕಿದಾಗ ಹೇಳುವುದು, ಓರಲ್ಲಾಗಿ ಹೇಳುವುದು ಉಂಟು, ನಂತರ ಮಂತ್ರಿಗಳು ಒಪ್ಪಿದ್ದಾರೆಂದು ಪ್ರೈವೇಟ್ ಸೆಕ್ರೆಟರಿಗೆ ಹೇಳುತ್ತಾರೆ. ದೊಡ್ಡವರ ಹೆಸರು ಹೇಳಿ ಮಂತ್ರಿಗಳು ಒಪ್ಪಿದ್ದರೂ ಬರಲಿಲ್ಲವೆಂದು ವಿಚಾರ ಸರಿಯಾಗಿ ತಿಳಿಯದೆ ಹೇಳುವುದು ಸರಿಯಲ್ಲ. ಹೋಗಲು ಅನಾನುಕೂಲವಿದೆಯೆಂದು ತಿಳಿಸಿದಮೇಲೆ ಈ ರೀತಿ ಆಕ್ಷೇಪಣೆ ಮಾಡುವುದು ಯೋಗ್ಯವಲ್ಲ. ಇದರಲ್ಲಿ ನಮ್ಮದೇನೂ ತಪ್ಪಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ಮೊದಲನೆಯದಾಗಿ ಈ ಸಮಾರಂಭಗಳಿಗೆ ಇಬ್ಬರು ಮೂವರು ಮಂತ್ರಿಗಳು ಹೋಗಬಾರದು ಎಂದು ಹೇಳಿ ಮಂತ್ರಿಮಂಡಲದಲ್ಲಿ ನಾವು ಮಾತನಾಡಿಕೊಂಡಿದ್ದೆವು.

ಶ್ರೀ ಬಿ. ಪಿ. ಗಂಗಾಧರ್.—ಅವರು ಹೇಳಿದ್ದು ನಿಜವಲ್ಲ ಸ್ವಾಮಿ, ಗುಬ್ಬಿಯಲ್ಲಿ ನಾಲ್ಕು ಜನ ಮಂತ್ರಿಗಳು ಹೋಗಿದ್ದಾರೆ.

ಶ್ರೀ ಬಿ. ರಾಚಯ್ಯ.—ಸ್ವಾಮಿ; ನಾನು ಮಂತ್ರಿಮಂಡಲದಲ್ಲಿ ಮಂತ್ರಿಗಳು ಮಾತನಾಡಿಕೊಂಡಿದ್ದೆವು ಎಂದು ಹೇಳಿದೆ. ಮಾತನಾಡಿಕೊಂಡಿರುವುದು ನಿಜವೇ ಅಲ್ಲವೇ ಎಂಬುದು ಅವರಿಗೆ ಹೇಗೆ ಗೊತ್ತಾಗಬೇಕು ?

ಶ್ರೀ ಬಿ. ಪಿ. ಗಂಗಾದರ್.—ನುಡಿದಂತೆ ನಡೆಯುತ್ತೀರಿ ಎಂದು ತಿಳಿದುಕೊಂಡಿದ್ದೆವು ಆದರೆ ಆ ರೀತಿ ಇಲ್ಲ ಎಂದು ಹೇಳುತ್ತಾ ಇದ್ದೇನೆ.

ಶ್ರೀ ಎಸ್. ಶಿವಪ್ಪ.—ಅದು ಏಕೆ ಬೇರೆ ಏನಾದರೂ ಕಾರಣ ಹೇಳಿ.

ಶ್ರೀ ಬಿ. ರಾಚಯ್ಯ.—ನನ್ನ ಹತ್ತಿರ ಒಬ್ಬರು ನಂಜುಂಡಯ್ಯನವರು ಅಂತ ಅನ್ನುವವರು ಬಂದು ಈ ಸಾರಿ ಗಾಂಧಿ ಸೆಂಟನರಿ ಸೆಲಿಬ್ರೇಷನ್ ಅಂತ ಏನೂ ನನಗೆ ಹೇಳಲಿಲ್ಲ, ಸಿದ್ಧಗಂಗಾ ಸ್ವಾಮಿಗಳು ಬರುತ್ತಾರೆ ಮತ್ತು ನಿಡುಮಾಮಿಡಿ ಸ್ವಾಮಿಗಳು ಪ್ರಿಸೈಡ್ ಮಾಡುತ್ತಾರೆ ಅಲ್ಲಿಗೆ ಬಂದು ತಾವು ಭಾಗವಹಿಸಬೇಕೆಂದು ಕೇಳಿದರು. ಅವರು ಎರಡು ಸಾರಿ ಬಂದಿದ್ದರು ಆಗ ನಾನು Endowment ಮಿನಿಸ್ಟರ್ ಅಲ್ಲ. ನಾನೇಕೆ ಬರಬೇಕು, ಮಾನ್ಯ ಮಿನಿಸ್ಟರು ಕೌಜಲಗಿಯವರು ಇದ್ದಾರೆ ಅವರನ್ನು ಕರೆದುಕೊಂಡು ಹೋಗಿ ಎಂದು ಹೇಳಿದೆ. ನಾನು ಏನೇ ಹೇಳಿದರೂ ಕೇಳಲಿಲ್ಲ. ನಾನು ಬರಲೇಬೇಕೆಂದು ಆಶೆ ಪಟ್ಟರು. ಮೈಸೂರಿನಲ್ಲಿ ಎಂಗೇಜ್‌ಮೆಂಟ್ ಇದೆ ನಾನು ಬರುವುದಿಲ್ಲ ಎಂದು ಹೇಳಿದರೂ ಕೂಡ ಕೇಳದೆ ಕಡ್ಡಾಯವಾಗಿ ಬರಲೇಬೇಕೆಂದರು. ನಾನು ನನ್ನ ಹೆಸರನ್ನು ಹಾಕಬೇಡಿ ಟೈಂ ಇದ್ದರೆ ಸ್ವಲ್ಪ ಹೊತ್ತು ಬರುತ್ತೇನೆ ಎಂದು ಹೇಳಿದೆ. ನಂತರ ಅವರು ಬಂದು ರಿಮೈಂಡ್ ಕೂಡ ಮಾಡಲಿಲ್ಲ. ಆಮೇಲೆ ಒಂದು ದಿನ ನಮಗೆ ಒಂದು ಇನ್‌ವಿಟೇಷನ್ ಬಂತು. ಆಗಲೂ ಕೂಡ ಹೀಗೆ ಹೇಳಿದ್ದೇನೆ ಬರುವುದಕ್ಕಾಗುವುದಿಲ್ಲ ಎಂದು. ಅದನ್ನು 6 ಗಂಟೆಗೆ ಪ್ರಿಂಟ್ ಮಾಡಿಸಿದ್ದಾರೆ ಅದನ್ನು ಒಪ್ಪಿಕೊಂಡರೆ ಮೈಸೂರಿಗೆ ಹೋಗುವುದು ಎಷ್ಟು ಹೊತ್ತಿಗೆ? ಮತ್ತೆ ಕನ್‌ಫರ್ಮ್ ಮಾಡುತ್ತೇನೆ ಕಾಗದ ಬರೆಯುತ್ತೇನೆ ಎಂದು ಹೇಳಿದ ಅವರು ಕನ್‌ಫರ್ಮ್ ಮಾಡಲೂ ಇಲ್ಲ ಬರೆಯಲೂ ಇಲ್ಲ. ಅಂತೂ ಈ ರೀತಿ ಒಬ್ಬೊಬ್ಬರಲ್ಲಿ ಒಂದೊಂದು ತರಹ ಹೇಳಿ ಅವರು ಬರುವ ಹಾಗೆ ಮಾಡಿಕೊಳ್ಳುತ್ತಾರೆ. ಆದ್ದರಿಂದ ಅದೇ ದಿವಸ ನನ್ನ ಪ್ರೈವೇಟ್ ಸೆಕ್ರೆಟರಿಯವರು ಅವರಿಗೆ ಕಾಗದ ಬರೆದಿದ್ದಾರೆ. ಅದು ಈ ರೀತಿ ಇದೆ :

> "With reference to your invitation extended to the Hon'ble Minister for Agriculture to participate in the Gandhi Centenary celebrations organised under the auspices of the Veerashaiva Tathwa Prachara Sangha on 25th January 1969 at 6 p.m., I am directed to state that the Minister pleads his inability to attend the function as he has to fulfil an engagement at Mysore. The Minister wishes the function all success."

ಅಂತೂ ಬೆಂಗಳೂರಿನಲ್ಲಿ ಇರುತ್ತೀರಲ್ಲಾ ಬನ್ನಿ ಅಂತ ಅಂದರು. ಅದಕ್ಕೆ ಮೈಸೂರಿಗೆ ಹೋಗಬೇಕೆಂದು ನಾನು ಹೇಳಿದ್ದೆ. ಹಾಗೆ ಹೇಳಿದಮೇಲೂ ಕೂಡ ಅವರು ಕನ್‌ಫರ್ಮ್ ಮಾಡಲಿಲ್ಲ.

ಶ್ರೀ ಎಸ್. ಶಿವಪ್ಪ.—ಸಾಕು ಬಿಡಿ ಹೋಗಲಿ.

ಶ್ರೀ ಬಿ. ರಾಚಯ್ಯ.—ಇಷ್ಟಕ್ಕೇ ನಾನು ಬಿಡುವವನಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಐ ಪ್ಲೀಡ್ ನೋ ಗಿಲ್ಟಿ ಅಂತ ಹೇಳುತ್ತಾರೆ ಅಷ್ಟೆ.

ಶ್ರೀ ಬಿ. ರಾಚಯ್ಯ.—ಕೆಲವು ಸ್ವಾಮಿಜಿಗಳ ಹತ್ತಿರ ಅಡ್ವೈಸರ್ಸ್ ಇರುತ್ತಾರೆ ಅವರು ಮಂತ್ರಿಗಳು ಬರಬೇಕು ಮಂತ್ರಿಗಳು ಬಂದರೆ ಅವರಿಗೆ ಬೆಲೆ ಬರುತ್ತದೆ ಎಂದು ಈ ರೀತಿ ಮಾಡುತ್ತಾರೆ. ಮಂತ್ರಿಗಳು ಬಂದರೆ ಸ್ವಾಮಿಜಿಯವರಿಗೆ ಬೆಲೆ ಹೇಗೆ ಬರುತ್ತದೆಯೋ ನನಗೆ ಗೊತ್ತಿಲ್ಲ, ಅಂತೂ ಇಂತಹ ಇಕ್ಕಟ್ಟಿನ ಪರಿಸ್ಥಿತಿಗೆ ನಮ್ಮನ್ನು ತರತಕ್ಕ ಹವ್ಯಾಸವನ್ನ ಅನೇಕರು ಇಟ್ಟುಕೊಂಡಿದ್ದಾರೆ. ಒಂದಲ್ಲಾ ಒಂದು ರೀತಿಯಲ್ಲಿ ಅವರನ್ನು ಕರೆಸಬೇಕು, ಅವರಿಗೆ ಹೇಳಬೇಕು ಮಂತ್ರಿಗಳೆಲ್ಲಾ ನಾವು ಹೇಳಿದ ಹಾಗೆ ಕೇಳುತ್ತಾರೆ ಅಂತ ಹೇಳಿ ತಮ್ಮ ಕಾರ್ಯಾಚರಣೆ ನಡೆಸಬೇಕು.

ಒಬ್ಬ ಸದಸ್ಯರು.—ನೀವೂ ಅಡ್ಡಬೀಳುತ್ತೀರಲ್ಲಾ!

ಶ್ರೀ ಬಿ. ರಾಚಯ್ಯ.—ಭಕ್ತಿ ಇದ್ದರೆ ನಮಸ್ಕಾರ ಹೊಡೆಯುತ್ತೇವೆ ಇಲ್ಲದೇ ಇದ್ದರೆ ಬಿಡುತ್ತೇವೆ, ಸಮಾಜದಲ್ಲಿ ಯಾವ ರೀತಿ ಮಾಡಬೇಕೋ ಆ ರೀತಿ ಮಾಡುತ್ತೇವೆ.

SRI B. P. GANGADHAR.—Swamijis know what exactly these people are. Don't make such comments on Swamijis. We hold Swamijis with great respect.

SRI B. RACHAIAH.—I am not referring to Swamiji. I am making a responsible statement.

Sri B. P. GANGADHAR.—* * * * Why does the Hon'ble Minister bring his name here. You should not try to name the Swamiji here.

Sri B. RACHAIAH.—I am not referring to Swamiji.

Sri K. PUTTASWAMY.—On a point of order, Sir. Some of the Hon'ble Members of this side and that side are addressing directly. Under the Rules of this House they have to address through you.

Mr. SPEAKER.—I uphold the point of order of the Hon'ble Minister. All the members should address through me and should not address each other across the Table. The time allotted is over. I have extended the time.

ಶ್ರೀ ಬಿ. ರಾಚಯ್ಯ.—ಇಂತಹ ಥ್ರೆಟ್‌ಗಳಿಗೆ ನಾನು ಬಗ್ಗುವವನಲ್ಲ. ಸ್ವಾಮಿಜಿ ಪಕ್ಕದಲ್ಲಿರ ತಕ್ಕ ಜನ ಇವತ್ತು ಸರ್ಕಾರದ ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಳ್ಳುವುದು, ಸರ್ಕಾರದ ಮಂತ್ರಿಗಳನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಮಾಡತಕ್ಕ ಕೆಲಸಗಳನ್ನು ನಾನು ಈ 6 ವರ್ಷದಿಂದ ನೋಡಿದ್ದೇನೆ. ನಾನು ಮತ್ತೆ ಹೇಳಬೇಕಾದರೆ ಯಾವ ಸ್ವಾಮಿಜಿಗೆ ಆಗಲಿ ಯಾವ ಮರ್ಯಾದೆಯನ್ನು ಕೊಡಬೇಕೋ ಅದನ್ನು ಕೊಡುತ್ತೇನೆ. ಮಂತ್ರಿಗಳನ್ನು ದುರುಪಯೋಗಪಡಿಸಿ ಕೊಳ್ಳತಕ್ಕ ಜನ ಯಾರು ಇದ್ದಾರೆ ಅದರಂತೆಯೇ ಸ್ವಾಮಿಜಿಯವರನ್ನೂ ಕೂಡ ದುರುಪಯೋಗ ಪಡಿಸಿಕೊಳ್ಳತಕ್ಕ ಜನ ಇದ್ದಾರೆ.

Sri B. P. GANGADHAR.—I rise to a point of order. Swamiji is not here. If you make any reference, he must be here to defend himself. This is the procedure you have preached us. These responsible Ministers are making Statement that Swamiji was interested. These people will go there and prostrate before them. No Swamiji is interested to boost himself. * * * *

Sri B. RACHAIAH.—This kind of statement I am not tolerating.

6-30 P.M.

Sri B. P. GANGADHAR.—Sir, I raise a point of order. The Hon'ble Minister must withdraw his words...... * * *

Mr. SPEAKER.—The point raised by hon'ble Member Mr. Gangadhar has no force in it. I have been telling the hon'ble Members that no name should be dragged here. As far as I heard, the hon'ble Minister for Agriculture has not dragged in anybody's name and not referred to any particular Swamiji. The point is the Hon'ble Minister was stating that some persons who surround the Swamijis want to take advantage. There is no allegation nor any disrespect shown to any particular Swamiji and as such, there is no point of order. Hereafterwards, if the Hon'ble Members do like this, I will have to adjourn the House and there will be no scope for half-an-hour discussion. Therefore, I would request the Hon'ble Members to co-operate with the Chair and hear the statement of the Hon'ble Minister for Agriculture.

Sri B. RACHAIAH.—Sir, I have nothing to add. You have clarified the position. I thank you very much, Sir.

---

* * * * Matter expunged as ordered by the Chair.

* * * Matter not recorded as ordered by the Chair.

† **Sri K. PUTTASWAMY.**—Sir, I submit that certain expressions used by Hon'ble Member Mr. Gangadhar may be expunged from the record. **** this is a sort of expression casting reflections on the character and conduct of the Hon'ble Members of this House and such sort of statements should not be made. Sir. in raising this point, let the hon'ble Members do not feel that just because those words were expressed against one of my colleagues I have raised it, even if that had been referred to any hon'ble Member of this House, I would have raised the same point.

Sri B. P. GANGADHAR.—Sir, I repeated again ****

Mr. SPEAKER.—I shall look into the point raised by Hon'ble Minister Mr. Puttaswamy after examining the records......

ಶ್ರೀ ಕೆ. ಪ್ರಭಾಕರ್ (ವರ್ತೂರು).—ಸ್ವಾಮಿ, ನಾನು ಒಂದು ಕ್ರಿಯಾಲೋಪವನ್ನು ಸೂಚಿಸಬೇಕಾಗಿದೆ. ಈಗ್ಗೆ ಸ್ವಲ್ಪ ಹೊತ್ತಿನ ಕೆಳಗೆ ಇಲ್ಲಿ ಒಂದು ಚರ್ಚೆ ನಡೆಯುತ್ತಿದ್ದ ಕಾಲದಲ್ಲಿ ಕೆಲವು ವಿಚಿತ್ರ ಪ್ರಸಂಗಗಳು ಉಂಟಾಗಿವೆ. ಸಭೆಯಲ್ಲಿ ಕೆಲವು ಸದಸ್ಯರು ಮಾತನಾಡತಕ್ಕ ಕಾಲದಲ್ಲಿ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಆ ಮಧ್ಯ ಭಾಷಣ ಕಾಲದಲ್ಲಿ ತಾವು ಬಾಯಿ ಹಾಕುವುದಕ್ಕೆ ಅವಕಾಶ ಕಲ್ಪಿಸಿಕೊಳ್ಳಲು ಇಲ್ಲಿರತಕ್ಕ ಸದಸ್ಯರು ಒಂದು ಕ್ರಿಯಾಲೋಪವನ್ನು ಎತ್ತತಕ್ಕ ನೆಪದಲ್ಲಿ ಇದರ ಒಂದು ಪ್ರಯೋಜನವನ್ನು ಪಡೆಯುತ್ತ ಯಾವ ಕಾಲದಲ್ಲಿ ಯಾರಿಗೆ ಮನಸ್ಸಿನಲ್ಲಿ ಏನಿರುತ್ತದೆಯೋ ಅವರ ಮನಸ್ಸಿನ ಪ್ರಚೋದನೆಯನ್ನು ಸುಣ್ಣಗೆ ಮಾಡಿಕೊಂಡ ನಂತರ ನನ್ನ ಕ್ರಿಯಾಲೋಪವೇನಿಲ್ಲ ಎಂದು ಸುಮ್ಮನೆ ಕುಳಿತುಬಿಡುತ್ತಾರೆ. ಹೀಗಾಗಿ ಇಲ್ಲಿ ಇಂಥ ಒಂದು ರೀತಿಯಲ್ಲಿ ನಮ್ಮ ಕಾಲ ಕ್ರಿಮಿನಲ್ ವೇಸ್ಟಾಗುತ್ತಿದೆ. ಆದರೆ ಯಾರೂ ಖಚಿತವಾಗಿ ರೂಲ್ ಅನುಸರಿಸಿ ಮಾತನಾಡುವುದಿಲ್ಲ. ಹೀಗಾಗಿ ಈ ಪ್ರಿವಿಲೇಜ್ ಹಾವಳಿ ಇಲ್ಲಿ ಜಾಸ್ತಿಯಾಗುತ್ತಿದೆ ಮಾತನಾಡುವುದಕ್ಕೆ ಮುಂಚೆ ಯಾರು ಇಂಥಾ ಸೆಕ್ಷನ್ ಇಂಥಾ ರೂಲ್ ಅನುಸರಿಸಿ ಮಾತನಾಡುತ್ತೇವೆಂದು ಹೇಳುವುದಿಲ್ಲ. ಹೀಗೆ ಅನೇಕರು ಇಲ್ಲಿಯವರೆಗೆ ಯಾವ ಒಂದು ಹಳ್ಳಕ್ಕೆ ಬಿದ್ದಿದ್ದಾರೋ ಅದೇ ಹಳ್ಳಕ್ಕೆ ನಾನೂ ಕೂಡ ಸಂತೋಷದಿಂದ ಬಿದ್ದಿದ್ದೇನೆ.

ಇನ್ನು ಈಗ ಇಲ್ಲಿ ನಡೆಯುತ್ತಿದ್ದ ವಿಚಾರಕ್ಕೆ ಬಂದರೆ ಮಾನ್ಯ ಮಂತ್ರಿಗಳು ಇಬ್ಬರು ಸ್ವಾಮಿಗಳ ಹೆಸರನ್ನು ಹೇಳುತ್ತಾ ಅವರು ಈ ಮಂತ್ರಿಗಳ ಬಳಿಗೆ ಬಂದು ಯಾವುದೋ ಒಂದು ಸಮಾರಂಭಕ್ಕೆ ಇವರನ್ನು ಬನ್ನಿ ಎಂತ ಕರೆದರೆಂದೂ ಹೇಳುತ್ತಿದ್ದರು ಆಗ ಇದೇ ಸಭೆಯ ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಅವರು ಈ ಸಭೆಯಲ್ಲಿ ಇಲ್ಲ—ಅವರನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಆ ಸ್ವಾಮಿಗಳು ಸಭೆಯಲ್ಲಿ ಇಲ್ಲದಿರುವುದರಿಂದ ಅವರ ಹೆಸರನ್ನು ಎತ್ತಬಾರದೆಂದು ಹೇಳಿದ್ದು ಸರಿಯಾದ್ದಲ್ಲ. ಆದರೆ ಇದು ಸೆಕ್ಯುಲರ್ ಸ್ಟೇಟ್. ಇಲ್ಲಿ ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತದೆ. ಆಗ ಇಲ್ಲಿ ಸೂರ್ಯ ಚಂದ್ರರ ವಿಚಾರ ಕೂಡ ಚರ್ಚೆಗೆ ಬರಬಹುದು. ಆದರೆ ಆ ಸೂರ್ಯಚಂದ್ರರು ಸಭೆಯಲ್ಲಿಲ್ಲ—ಅವರನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಅನ್ನುವುದು ಎಷ್ಟು ಇರ್ರೆಲವೆಂಟೋ ಇಲ್ಲಿ ಆ ಸ್ವಾಮಿಗಳು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಸಭೆಯಲ್ಲಿಲ್ಲ—ಆದ್ದರಿಂದ ಅವರ ಹೆಸರನ್ನು ಇಲ್ಲಿ ಎತ್ತಬಾರದು ಎಂಬುದು ಕೂಡ ಅಷ್ಟೇ ಇರ್ರೆಲವೆಂಟ್. ಇದಕ್ಕೆ ಇನ್ನೂ ಒಂದು ಉದಾಹರಣೆ ಕೊಡುತ್ತೇನೆ. ಆ ಸಾಧೂ ಸಮಾಜದವರು ಗೋವಧೆಯನ್ನು ನಿಲ್ಲಿಸತಕ್ಕ ವಿಚಾರದಲ್ಲಿ ಪ್ರೈಮಿನಿಸ್ಟರ್ ಇಂದಿರಾಗಾಂಧಿಯವರೊಡನೆ ಚರ್ಚೆ ನಡೆಸಿದರು—ಎಂದರೆ ಆ ವಿಚಾರವನ್ನು ಇಲ್ಲಿ ಎತ್ತಬಾರದು—ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಇಲ್ಲಿಲ್ಲ ಎನ್ನುವುದು ಯಾವ ನ್ಯಾಯ? ಅಥವಾ ಇಂಥಾ ಸಂದರ್ಭದಲ್ಲಿ ಕೆಲವು ಋಷಿಗಳ ಹೆಸರನ್ನೂ ಎತ್ತಬಹುದು. ಆಗ ಆ ಋಷಿಗಳಿಗೆ ಅಪಮಾನ ಮಾಡಿದ ಹಾಗಾಯಿತು ಅಂತ ಹೇಳುವುದು ಅದು ಮೋಸ್ಟ್ ಇರ್ರೆಲವೆಂಟ್ ಎಂದು ಹೇಳುತ್ತೇನೆ.

Mr. SPEAKER.—The member is wasting the time. He must state his point of order.

**** Expunged as ordered by the Chair.

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಹೇಳಿರುವುದನ್ನು ಈ ಸಭೆಯು ಪ್ರೊಸೀಡಿಂಗ್ಸ್‌ನಿಂದ ತೆಗೆದುಹಾಕುವುದು ಒಂದೇ ಅಲ್ಲ. ಪಾಯಿಂಟ್ ಆಫ್ ಆರ್ಡರನ್ನು ಉಪಯೋಗಿಸುವ ಸದಸ್ಯರಿಗೆ ರೂಲ್ಸ್ ಪ್ರಕಾರ ಅವರು ಅದನ್ನು ಇಲ್ಲಿ ಉಪಯೋಗಿಸಬೇಕೆಂದು ತಾವು ಸದಸ್ಯರಿಗೆ ಆದೇಶ ಕೊಡಬೇಕು. ಇಲ್ಲದಿದ್ದರೆ ಕ್ರಿಮಿನಲ್ ವೇಸ್ಟ್ ಆಫ್ ಟೈಂ ಆಗುತ್ತದೆ.

MR. SPEAKER.—I uphold the point of order raised by Sri K. Prabhakar. He says that this rule 311 is much abused. Points of order are raised which do not serve the purpose for which that rule is meant. I request the Hon'ble Members not to resort to this rule merely to get an opportunity to speak in the House. Rule 311 is not meant for that purpose. I have already indicated this morning that any Hon'ble Member raising a point of order should in the first instance indicate what particular rule of the rules of business or the provision of the constitution is violated, and then proceed to say how it is violated. If this procedure is followed, I think much of the abuse that we find will disappear. I therefore while upholding the point of order, request Hon'ble Member not to unnecessarily draw upon the provisions of rule 311.

SRI M. NAGAPPA.—Sir, I rise to a point of order. The Hon'ble Member Sri Prabhakar used the expression : *'criminal waste of time'*. It has been held that the expression 'waste of time' is unparliamentary. To say 'criminal waste of time' is much worse. I want to know from the Hon'ble Minister for Parliamentary Affairs whether he is going to support that statemant ?

MR. SPEAKER.—I request the Hon'ble Members to give me authorities on the subject.

SRI M. NAGAPPA.—Let it be kept open, Sir, I will submit the authorities tomorrow.

MR. SPEAKER.—I have now got the record of Proceedings

* * * *

The expression used by Sri Gangadhar is a direct attack on the Members here. I am sorry such words were used here. I order the expungement of these words, if Mr. Gangadhar thinks it fair, let him withdraw these words and express regret for using them.

SRI B. P. GANGADHAR.—No, Sir.

MR. SPEAKER,—Then as I already ordered, this particular expression will be expunged from the proceedings.

SRI K. PUTTASWAMY.—Sir, I am raising a point of privilege. Sir, the expression used by the Hon'ble Member Sri B. P. Gangadhar amounts not only to a breach of privilege of the Members here, but also contempt of this House. Therefore Sir, I move that this House may kindly take this privilege motion into consideration.

**** Matter expunged as ordered by the Chair.

Mr. SPAEKER.—The Hon'ble Minister will please give it in writing.

Sri P. V. AITHAL (Suratkal).—On a point of order, Sir. While replying to Sri Gangadhar, the Hon'ble Minister for Agriculture took the file in his hands and bumped it on the table and his attitude was threatening the member. Does it not amount to making a gesture against the Member concerned ?

Mr. SPEAKER.—I have noticed it. There is no point of order.

Sri H. SIDDAVEERAPPA.-In the first the place the procedure that was followed was not conducive—holding all the Ministers as though they are accused and come to the dock and they should be courtmartialled. Sir, I must say that the procedure you permitted was not correct and that has led to all this scene. If there was any motion from my hon. friend Sri Vatal Nagaraj it is that he wants to bring to the notice of the House and ultimately to the country that as responsible Ministers of the State they have accepted an engagement and they ought to comply with that engagement. That is what he intended. Now the matter could have rested at explaining the position because it all happened and came in the Press.

Mr. SPEAKER.—What does the hon. Member want me to do ?

Sri H. SIDDAVEERAPPA.—I am appealing. If the Hon. Minister wants to talk further, it is open to him. We are treading on delicate ground. I can quite understand the feelings of the Minister Sri B. Rachiah. He felt hurt by the way some reference was made. Of course we can say that the words he used were not fair and decorous and they are not correct. There, you have expunged. Now I would request my friend Sri B. P. Gangadhar—that after all the English language is so elastic that if he expresses regret, it would enchance our prestige. Instead of taking it further I wouldappeal to him to express regret for what all has happened.

ಶ್ರೀ ಎನ್. ಶ್ರೀಕಂಠಯ್ಯ.—ಸ್ವಾಮಿ, ಉಭಯತ್ರರೂ ತಪ್ಪು ಮಾತನಾಡಿದ್ದು ಉಂಟು. ಆದ್ದರಿಂದ ನಾವು ಇದನ್ನು ಇಲ್ಲಿಗೇ ಮರೆತು, ದಯವಿಟ್ಟು ಶ್ರೀ ಗಂಗಾಧರ್ ಅವರು ಅವರ ಬಾಯಿಯಿಂದ ಆಡಿದ ಮಾತನ್ನು ಪರಿಶೀಲಿಸಬೇಕೆಂದು ನನ್ನ ಪ್ರಾರ್ಥನೆ.

Mr. SPEAKER.—I made a gesture, but the Hon'ble Member refused.

Sri B. P. GANGADHAR.—I did not mean to wound anybody's feelings. But allegations were recklessly made against the religious heads......

Mr. SPEAKER.—While expressing regret, the member should do it in a proper way. Why does he say recklessly and all that ?

Sri B. P. GANGADHAR.—I was really hurt being a disciple of Swamijis that such a statement should be made on the floor of the House. In fact if I have hurt the feelings of anybody, I am sorry for it.

Mr. SPEAKER.—Why should not the hon. Member say " I express regret".

Sri B. P. GANGADHAR.—If at all it has hurt anybody, I regret.

Mr. SPEAKER.—Does it satisfy the Hon. Minister ?

Sri K. PUTTASWAMY.—Yes.

Sri H. SIDDAVEERAPPA.—We will presume that for some reason they could not attend the function. Let us stop at it.

Sri S. V. AGNIHOTRI (Dharwar Rural).—You must give a chance to all Ministers to explain the reasons.

Sri B. RACHAIAH.— When this question is raised in the Assembly, please allow us to explain.

Mr. SPEAKER.—I think we are losing time.

ಶ್ರೀ ಬಿ. ಎಂ. ಪಾಟೀಲ್.—ಸನ್ಮಾನ್ಯ ಸಭಾಪತಿಯವರೇ, ನಾನು ಅಂದಿನ ದಿನ ಇನ್ವಿಟೇಶನ್ ಅಕ್ಸೆಪ್ಟ್ ಮಾಡಿಲ್ಲ. ಆದರೆ ಫಂಕ್ಷನ್ನಿಗೆ ಒಂದು ಮೆಸೇಜ್ ಕಳಿಸಿಕೊಟ್ಟಿದ್ದೇನೆ.

ಶ್ರೀ ಅಲೂರು ಹನುಮಂತಪ್ಪ (ಸಣ್ಣ ನೀರಾವರಿ ಶಾಖೆಯ ರಾಜ್ಯಮಂತ್ರಿಗಳು).—ಸಭಾಪತಿಯವರೇ, ನನ್ನ ಹತ್ತಿರ ಕೆಲವು ಜನರು ಬಂದು ಜನವರಿ 10ನೇ ತಾರೀಕಿಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಫಂಕ್ಷನ್ನಿಗೆ ಅಧ್ಯಕ್ಷತೆ ವಹಿಸಬೇಕೆಂದು ಕೇಳಿದರು. ಆದರೆ ನಾನು ಅದಕ್ಕೆ ಒಪ್ಪಿಕೊಂಡಿಲ್ಲ. ಅದು ಆಫೀಸಿನ ಯಾವ ಪೇಪರಿನಲ್ಲೂ ಇಲ್ಲ. 24ನೇ ತಾರೀಕಿಗೆ ನಾನು ಊರಿನಲ್ಲೂ ಇರಲಿಲ್ಲ.

ಶ್ರೀ ಜಿ. ವಿ. ಮಾಗಾವಿ (ಲೋಕೋಪಯೋಗಿ ಶಾಖೆಯ ಉಪಮಂತ್ರಿಗಳು).—ಸ್ವಾಮಿ, ನಾನೂ ಅಕ್ಸೆಪ್ಟ್ ಮಾಡಿಲ್ಲ.

Notice of Adjournment Motion

re : excesses upon the Marathi people in Belge

Sri B. B. SAYANAK (Belgaum).—I will read the notice only. I have given notice of an adjournment motion. I will read the contents.

> "In Belgaum Municipal area section 35 of Mysore Police Act is promulgated since 23rd January 1969. Yet the Kannada students of Lingraj College, Belgaum took a procession on 24th January 1969 at 1 P.M. and went to the Medical College. On the way, they stopped the car of Navayug Soap Factory who is a Marathi man and removed the Marathi Board. Afterwards they entered the Medical College and compelled the authorities to close down the college. The Kannada students who are residing in Neelaya Boarding in Marathi Galli, had thrown dung on almost all marathi Boards in Marathi Galli. This has been brought to the notice of the Superintendent of Police, Belgaum and told him to see the Board. He had not come. Similarly the Kannada students of Benyan Smith High School took procession on 25th January, 1969 at 1 P.M. and threw stones on Rickshaw Near Bogervesa. All this is done with the instigation and protection of the Police and the police officers."

Hence this may kindly be allowed.

Sri VEERENDRA PATIL (Chief Minister).—I do not know what adjournment motion the hon. member has moved. I did not receive a copy of it to enable me to make a statement. If I get a copy of it I will make a statement.

Mr. SPEAKER.—Yes.

Expenditure incurred for Bangalore University Convocation held at Glass House, Bangalore

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸಭಾಪತಿಯವರೇ, ಈ ವಿಶ್ವವಿದ್ಯಾನಿಲಯದ ಬಗ್ಗೆ ನನಗೆ ಭಾರಿ ದುಃಖವಾಗುತ್ತಿದೆ. ಇದು ಸರಸ್ವತಿ ಪೀಠ. ಇಂಥ ಒಂದು ಚರ್ಚೆಗೆ ಇಲ್ಲಿ ಅವಕಾಶವಾಗಬಾರದು. ಇದು ಸರಿಯೋ, ತಪ್ಪೋ ವಿಶ್ವವಿದ್ಯಾನಿಲಯದವರು ನಡೆಸಿದಂತಹ ಘಟಿಕೋತ್ಸವದ ಬಗ್ಗೆ............

ಅಧ್ಯಕ್ಷರು—ಅದೆಲ್ಲಬೇಡ, ನೋಟೀಸು ಓದಿದರೆ ಸಾಕು.

ಶ್ರೀ ಎಚ್. ಎನ್. ನಂಜೇ ಗೌಡ.—ಅದೇ ಸ್ವಾಮಿ ನಾನು ಹೇಳುತ್ತಿದ್ದೇನೆ. ಇದೆಲ್ಲಾ ಪತ್ರಿಕೆಯಲ್ಲೂ ಬಂತು. ಜನತೆ ಇದು ನಿಜವೋ, ಸುಳ್ಳೊ ಎಂಬ ಅನುಮಾನದಿಂದ ನೋಡುತ್ತಿದ್ದಾರೆ. ಈ ಸಂಶಯವನ್ನು ಪರಿಹಾರ ಮಾಡಿದರೆ, ಶಾಂತಿ ಬರುತ್ತದೆ. ಈ ಸರಸ್ವತಿ ಪೀಠದಲ್ಲಿ ದುರುಪಯೋಗವಾಗಿದೆ ಎಂಬುದು ಪತ್ರಿಕೆಯಲ್ಲಿ ಎಲ್ಲಾ ಬಂತು, ಅದರಲ್ಲೂ ಸಂಪಾದಕರ ಪತ್ರದಲ್ಲೂ ಬಂತು. ಆದ್ದರಿಂದ ನಿಜಸಂಗತಿ ಏನಾಗಿದೆ ಎಂದು ತಿಳಿಯಲು ಇದನ್ನು ಸೆಕ್ಷನ್ 8 ರ ಪ್ರಕಾರ ವಿಜಿಲೆನ್ಸ್ ಕಮಿಷನರಿಗೆ ಒಪ್ಪಿಸದೆ ಹೋದರೆ, ಈ ಅನುಮಾನ ಬಗೆಹರಿಯುವುದಿಲ್ಲ; ಆ ಅನುಮಾನ ಹಾಗೇ ಉಳಿಯುತ್ತದೆ. ಉಪಕುಲಪತಿಗಳು ಹೇಳುವ ಅಂಕಿ ಅಂಶಗಳು ಕೂಡ ನಮಗೆ ಅನುಮಾನವನ್ನು ಬಗೆಹರಿಸುವುದಿಲ್ಲ. ಇದು ಬರೇ ತಪ್ಪಾಗುತ್ತದೆ, ಕೋಲಾಹಲ ಉಂಟುಮಾಡುತ್ತದೆ, ಆದ್ದರಿಂದ ಇದನ್ನು ವಿಜಿಲೆನ್ಸ್ ಕಮಿಷನರಿಗೆ ಹಾಕಿ ವಿಚಾರಣೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಗಾಜಿನ ಮನೆಯಲ್ಲಿ ನಡೆದಂತಹ ಘಟಿಕೋತ್ಸವದ ಸಂದರ್ಭದಲ್ಲಿ ಏನೇನು ನಡೆಯಿತು, ಅದನ್ನು ಕೂಲಂಕಷವಾಗಿ ತಿಳಿಯದೆ, ವಿಶ್ವವಿದ್ಯಾನಿಲಯದ ಬಗ್ಗೆ ಮಾನ್ಯ ಸದಸ್ಯರಾದಂತಹ ಶ್ರೀ ಎಚ್. ಎನ್. ನಂಜೇಗೌಡರು ದುಃಖ ಪಡತಕ್ಕಂತದ್ದು ಸರಿಯಲ್ಲವೆಂದು ನಾನು ಹೇಳುತ್ತೇನೆ. ದುಃಖಪಡತಕ್ಕ ಪ್ರಸಂಗ ವಿಶ್ವವಿದ್ಯಾನಿಲಯಲ್ಲಿ ಏನೂ ನಡೆಯಲಿಲ್ಲ. ಅಲ್ಲಿ ನಡೆಯತಕ್ಕ ಕೆಲಸಗಳು ಹೆಮ್ಮೆ ಪಡತಕ್ಕ ಕೆಲಸಗಳು ಎಂದು ಹೇಳುವುದಕ್ಕೆ ನನಗೆ ಹೆಮ್ಮೆಯಾಗುತ್ತದೆ. ವಿಶ್ವವಿದ್ಯಾನಿಲಯ ನಡೆಸಿದಂತಹ ಘಟಿಕೋತ್ಸವದ ಸಂದರ್ಭದಲ್ಲಿ ಫರ್ನಿಚರ್ ಮತ್ತು ಇದರ ವಿಚಾರದಲ್ಲಿ ಬಂದಂತಹ ಪ್ರೆಸ್ ವರದಿಗಳನ್ನು ಓದಿಕೊಂಡು ಶ್ರೀಮಾನ್ ನಂಜೇಗೌಡರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ಅದರಲ್ಲಿ ಬಂದಿರತಕ್ಕ ಅನೇಕ ವಿಷಯಗಳು ಸತ್ಯಕ್ಕೆ ದೂರವಾಗಿದೆ ಎಂಬುದನ್ನು ಹೇಳುತ್ತೇನೆ. ಫರ್ನಿಚರಿಗೆ 45 ಸಾವಿರ ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದಾರೆ. ಅದು ಸತ್ಯಕ್ಕೆ ದೂರವಾಗಿದೆ. ಖರ್ಚು ಮಾಡಿರತಕ್ಕದ್ದು 16 285 ರೂಪಾಯಿ. ಅದನ್ನು ಕೂಡ ಸೀಲ್ಡ್ ಟೆಂಡರ್ ಕರೆದು, ಟೆಂಡರರ್ ಸಮ್ಮುಖದಲ್ಲಿ ಒಡೆದು, ಅದರಲ್ಲಿ ಬಹಳ ಕಡಿಮೆ ಯಾರು ಕೊಟ್ಟಿದ್ದಾರೆ ಅವರಿಗೆ ಆ ಕಾರ್ಯವನ್ನು ಮಾಡುವುದಕ್ಕೆ ವಹಿಸಿದ್ದಾರೆ. ಬಂದಂತಹ ಟೆಂಡರ್ ನನ್ನ ಹತ್ತಿರ ಇದೆ. ಅದು ಈ ರೀತಿ ಇದೆ:

			Rs.
1.	M/s. Janatha Furnishing House	...	16, 85-80
2.	M/s. Shacoor Brothers	...	16,842-05
3.	M/s. Chelva & Co.	...	17,587-30

			Rs.
4.	M/s. Ramaswamy Chetty and Sons	...	18,038-40
5.	M/s. Falcon	...	17,669-80
6.	M/s. Adams	...	18,038-40
7.	M/s. Saleh Ahmed	...	18,726-50

ಅದರಲ್ಲಿ ಅತೀ ಕಡಿಮೆ ಇದ್ದಂತಹ ಟೆಂಡರ್, ಅಂದರೆ, 16,285-80 ರೂಪಾಯಿ ಇದ್ದಂತದ್ದನ್ನು ಒಪ್ಪಿಕೊಂಡಿದ್ದಾರೆ.

7-00 P.M.

ಕಾರ್ಪೆಟ್ಸ್, ಶಾಮಿಯಾನ, ಕನ್ನಾತ್ ಇತ್ಯಾದಿಗಳಿಗೆ 16,285 ರೂಪಾಯಿಗಳು ನಿಜವಾಗಿ ಖರ್ಚಾಗಿದೆ, ಅತ್ಯಂತ ಕಡಿಮೆ ಟೆಂಡರನ್ನು ಒಪ್ಪಲಾಯಿತು. ಇದಕ್ಕೆ 40 ಸಾವಿರ ರೂಪಾಯಿಗಳು ಖರ್ಚಾಗಿದೆ ಎಂದು ಹೇಳುವುದು ಸರಿಯಲ್ಲ.

ಆಮೇಲೆ ಡಯಾಸ್ ಫಿಕ್ಸ್ ಮಾಡುವುದಕ್ಕೆ 11 ಸಾವಿರ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದಾರೆ. ಅದು ಸರಿಯಲ್ಲ ಅದಕ್ಕೆ ನಿಜವಾಗಿ ಖರ್ಚಾಗಿರುವುದು 3500 ರೂಪಾಯಿಗಳು ಮಾತ್ರ. ಇದಕ್ಕೂ ಸಹ ಟೆಂಡರು ಕರೆದು ಅತ್ಯಂತ ಕಡಿಮೆ ಟೆಂಡರನ್ನು ಒಪ್ಪಲಾಯಿತು. ಮಾನ್ಯ ಸದಸ್ಯರು ಉತ್ಪ್ರೇಕ್ಷೆಮಾಡಿ ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿದ್ದಾರೆ. ಅಲ್ಲಿ ದುಃಖ ಪಡುವಂಥಾದ್ದು ಯಾವುದು ನಡೆದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಆ ರೀತಿ ಮಾತನಾಡಿದ್ದು ಸರಿಯಲ್ಲ. ಇದನ್ನು ವಿಜಿಲೆನ್ಸ್‌ಗೆ ಕಳುಹಿಸುವಂಥಾ ಪ್ರಮೇಯ ಏನೂ ಇಲ್ಲ.

Irrigation Projects in Bidar District

† SRI V. N. PATIL (Humnabad).—In this august House, on various occasions we have discussed the burning problem, namely, the Godavari issue and Krishna waters issue. Only Bidar District in our State falls in the Godavari basin. But unfortunately no project has come up in Bidar District and no attempt is also made. I feel the Government is adopting an indifferent attitude and have not initiated in Bidar District any development activities or projects in respect of irrigation. It is more than six years back that the Karanji project was enunciated. Even recently in the District Development Council and the District Seminar on the IV Five-Year Plan, five projects, namely, Manjra, Chulkinala, Nagora, Musla and Karanji Projects were suggested. If no technical clearance is given by the Central Government or any other agencies for the Karanji Project, we would request the hon. Chief Minister and the august House to give its full attention to this Project and see that clearance is obtained. At least in the Fourth Plan, these projects may be taken up, funds earmarked for the purpose and works started. All these projects may not cost the Government more than Rs. 20 crores. As Bidar District is the most backward District in the State, it is the prime necessity of this House to give earnest attention to it. I hope the hon. Chief Minister will also do his best to give priority to Karanji and the other four projects.

† Sri VEERENDRA PATIL.—It is true that Bidar is the only District in our State which lies in Godavari Basin. So far we have not made any attempts to utilise our share of water in Godavari except constructing minor irrigation tanks here and there in Bidar District. But it is not correct to suggest that the Government is taking an indifferent attitude towards Bidar District. As the hon. Member is aware, Bidar is the most backward District so far per capita income is concerned and it is very necessary for us to improve the economy of the District. That is why, we have prepared certain projects in Godavari Basin. One of the projects, as the hon. Member is aware, is Karanji project. Project report has already been prepared; detailed studies have been made; investigations have been conducted; and that project Report has been forwarded to the Government of India for technical clearance. We are awaiting the technical clearance.

So far as the question of having that project included in the Fourth Plan is concerned, it is very difficult for me to straightaway say anything now because we do not know what is going to be the size of our project; and out of that, how much it will be possible for us to give for major irrigation projects. In view of the large financial commitments and huge spillover, we do not know to what extent it will be possible for the State Government to start or take up some more projects. We will try our best to see that it is included in the IV Plan. I can say only this much that it is too early for me to make any commitment on this occasion. We will have sympathetic attitude and we will try our best. That is all I would say.

Expediting the Construction of Upper Krishna Project

ಶ್ರೀ ಕೆ. ಸಂಗನಗೌಡ (ಲಿಂಗಸುಗೂರ್).—ಸನ್ಮಾನ್ಯ ಸಭಾಧ್ಯಕ್ಷರೇ, ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಕೆಲವು ವಿಷಯಗಳನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ಒಪ್ಪಿಸುವುದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿದ್ದಾರೆಂದು ಹೇಳಿದ್ದಾರೆ. ಆದರೆ ಇದನ್ನು ಸಂಪೂರ್ಣವಾಗಿ ಕಾರ್ಯಗತ ಮಾಡುವುದಕ್ಕೆ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ರಾಜ್ಯಪಾಲರ ಭಾಷಣದಮೇಲೆ ನಡೆದಂತಹ ಚರ್ಚೆಗೆ ಉತ್ತರ ಕೊಡುವ ಸಂದರ್ಭದಲ್ಲಿಯೂ ಕೂಡ ಈ ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ ನಿರ್ದಿಷ್ಟವಾದ ವಿವರಗಳನ್ನು ಹೇಳಲಿಲ್ಲ. ಮತ್ತು ಮೊನ್ನೆ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಈ ಮನೆಯಲ್ಲಿ ಈ ಯೋಜನೆಯ ಸಂಬಂಧದಲ್ಲಿ ಪ್ರಶ್ನೆಯನ್ನು ಕೇಳಿದಾಗ ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವ ಕಾಲಕ್ಕೆ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕೇಂದ್ರೀಯ ಯೋಜನೆಯನ್ನಾಗಿ ಕೈಗೊಳ್ಳುವ ಬಗ್ಗೆ ಪರಿಶೀಲಿಸಬೇಕೆಂದು ಭಾರತ ಸರ್ಕಾರದವರನ್ನು ಕೋರಲಾಗಿದ್ದಿತು. ಭಾರತ ಸರ್ಕಾರದವರು ಇದನ್ನು ಒಪ್ಪಿಕೊಂಡಿರುವುದಿಲ್ಲ ಎಂದು ಹೇಳಿದ್ದಾರೆ. ಈ ದೃಷ್ಟಿಯಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೇ. ಈ ಅಪ್ಪರ್ ಕೃಷ್ಣಾ ಯೋಜನೆ ಮೈಸೂರು ರಾಜ್ಯದ ಮಹತ್ವದ ಯೋಜನೆ. ಅಷ್ಟೇ ಅಲ್ಲ, ಆ ಭಾಗದಿಂದ ಬಂದಿರತಕ್ಕ ಈ ಮನೆಯ ಸದಸ್ಯರೆಲ್ಲರೂ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ಈ ಅಪ್ಪರ್ ಕೃಷ್ಣಾ ಯೋಜನೆ ಆ ಪ್ರದೇಶದ ಜನಗಳಿಗೆ ಇದು ಜೀವನ ಮರಣದ ಪ್ರಶ್ನೆಯಾಗಿದೆ. ಈ ವಿಷಯವನ್ನು ಅನೇಕ ಮಾನ್ಯ ಸದಸ್ಯರು ಸರ್ಕಾರದ

ಗಮನಕ್ಕೆ ತಂದಿದ್ದಾರೆ. ಈ ಪ್ರಾಜೆಕ್ಟಿನ ಕೆಲಸಕ್ಕೆ ಸಂಬಂಧಪಟ್ಟ ಹಾಗೆ 14-15 ಕೋಟಿ ರೂಪಾಯಿಗಳ ಟೆಂಡರ್ ಕರೆದಿದ್ದಾರೆ. ಅರ್ದನ್ ಡ್ಯಾಮ್, ಕಾಂಕ್ರೀಟ್ ಡ್ಯಾಮ್ ಮತ್ತು ರಸ್ತೆಯ ಕೆಲಸಗಳನ್ನು ಈಗಾಗಲೇ ಪ್ರಾರಂಭ ಮಾಡಬೇಕಾಗಿತ್ತು. ಆದರೆ ಸರ್ಕಾರದವರಿಗೆ ಹಣದ ಕೊರತೆ ಏನಾದರೂ ಇದೆಯೋ ಏನೋ ಗೊತ್ತಿಲ್ಲ. ಸರ್ಕಾರದವರು ಇದಕ್ಕೆ ಇದುವರೆಗೆ ಹಣವನ್ನು ಒದಗಿಸಿಲ್ಲ. ಆದ್ದರಿಂದ ನಾನು ಸರ್ಕಾರವನ್ನು ಕೇಳಿಕೊಳ್ಳುವುದು ಇಷ್ಟೆ. ಈ ಯೋಜನೆಯನ್ನು ಕಾರ್ಯಗತ ಮಾಡುವ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನಮಗೆ ಭರವಸೆಯನ್ನು ಕೊಡಬೇಕು. ಈ ಯೋಜನೆಯು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ನಾಯಕತ್ವದಲ್ಲಿ ಪೂರ್ಣವಾಗಿ ಆಗುತ್ತದೆಯೋ ಅಥವಾ ಇಲ್ಲವೇ ಎಂಬುದನ್ನು ಕೃಷ್ಣಾ ಬೇಸಿನ್‌ನಿಂದ ಬಂದಿರತಕ್ಕ ಈ ಮನೆಯ ಎಲ್ಲಾ ಮಾನ್ಯ ಸದಸ್ಯರೂ ಕೂಡ ಖಚಿತವಾಗಿ ತಿಳಿದುಕೊಳ್ಳಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಏತಕ್ಕೆಂದರೆ ಈ ಯೋಜನೆ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ಆಡಳಿತದಲ್ಲಿ ಪೂರ್ಣವಾಗಿ ಕಾರ್ಯಗತ ಆಗಬೇಕಾಗಿದೆ. ಅಪ್ಪರ್ ಕೃಷ್ಣಾ ಯೋಜನೆಯನ್ನು ಪೂರ್ಣವಾಗಿ ಕಾರ್ಯಗತ ಮಾಡುವ ಬಗ್ಗೆ ಒಂದು ವೇಳೆ ಸರ್ಕಾರದಲ್ಲಿ ಸಾಕಷ್ಟು ಹಣ ಇಲ್ಲ ಎಂದರೆ ವರ್ಲ್ಡ್ ಬ್ಯಾಂಕಿನ ಮುಖಾಂತರವೋ ಅಥವಾ ಎಲ್. ಐ. ಸಿ. ಯ ಮುಖಾಂತರವೋ ಹಣವನ್ನು ಪಡೆದುಕೊಂಡು ಈ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ಈ ಯೋಜನೆಯ ಪ್ರದೇಶದ ಜನಗಳಾದ ನಾವು, ಈ ಯೋಜನೆಗೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ 3-4 ಲಕ್ಷ ರೂಪಾಯಿಗಳನ್ನು ಕೂಡಿಸಿ ಕೊಡುತ್ತೇವೆ. ಆ ಭಾಗದಿಂದ ಬಂದಿರುವ ಪ್ರತಿಯೊಬ್ಬ ಸದಸ್ಯರೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಏನು ಒಂದು ಆದೇಶವನ್ನು ಈ ಬಗ್ಗೆ ಕೊಡುತ್ತಾರೋ ಅದನ್ನು ಪಾಲಿಸುವುದಕ್ಕೆ ಸಿದ್ಧರಿದ್ದೇವೆ ಹಣ ಕೂಡಿಸಬೇಕೆಂದರೆ ಕೂಡಿಸಿ ಕೊಡುತ್ತೇವೆ. ಈ ಯೋಜನೆಯನ್ನು ಮಾತ್ರ ಆದಷ್ಟು ತೀವ್ರವಾಗಿ ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಟೆಂಡರ್ ಕರೆದಿದ್ದಾರೆ. ಕೆಲಸ ಮಾಡಿಸಲು ಒಳ್ಳೆಯ ಸೂಪರಿಂಟೆಂಡಿಂಗ್ ಇಂಜನಿಯರ್‌ಗಳು ಮತ್ತು ಚೀಫ್ ಇಂಜನಿಯರ್‌ಗಳು ಇದ್ದಾರೆ. ಆದ್ದರಿಂದ ಸರ್ಕಾರದ ಧೋರಣೆ ಏನು ಎಂಬುದನ್ನು ತಿಳಿಸಬೇಕು. ನಮ್ಮಿಂದ ಆಗುವ ಸಹಾಯ ಮಾಡುವುದಕ್ಕೆ ಸಿದ್ಧರಿದ್ದೇವೆ. ಅಲ್ಲಿಗೆ ಈಗ ಒಬ್ಬರು ಲ್ಯಾಂಡ್ ಅಕ್ವಿಜಿಷನ್ ಆಫೀಸರನ್ನು ನೇಮಕ ಮಾಡುವುದು ಅವಶ್ಯಕವಾಗಿದೆ. ಆದ್ದರಿಂದ ಜಾಗ್ರತೆ ನೇಮಕ ಮಾಡಬೇಕು. ಈ ಯೋಜನೆಯ ಬಗ್ಗೆ ಬಹಳ ಅನ್ಯಾಯವಾಗುತ್ತಿರುವುದರಿಂದ ಈ ಬಗ್ಗೆ ರಾಜ್ಯ ಸರ್ಕಾರದವರು ತಮ್ಮ ಧೋರಣೆಯನ್ನು ಸ್ಪಷ್ಟೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಕಳವಳ ಆ ಭಾಗದ ಪ್ರತಿನಿಧಿಗಳಿಗೆ ಎಷ್ಟು ಇದೆ ಎನ್ನುವುದರ ಅರಿವು ನನಗೆ ಗೊತ್ತಿದೆ. ಈ ಕೆಲಸ ಜಾಗ್ರತೆ ಆಗಬೇಕು ಎಂಬ ಬಗ್ಗೆ ಅನೇಕ ದಿವಸಗಳಿಂದ ಮಾನ್ಯ ಸದಸ್ಯರುಗಳು ಕೇಳುತ್ತಿದ್ದಾರೆ. ಅವರು ಹೇಳಿದಂತೆ ಈ ಕೆಲಸ ನಿಧಾನವಾಗಿ ನಡೆಯುತ್ತಿದೆ. ಅದಕ್ಕೆ ಮತ್ತೆ ಯಾವ ಕಾರಣಗಳೂ ಇಲ್ಲ, ಹಣದ ಮುಗ್ಗಟ್ಟೇ ಮೂಲ ಕಾರಣ ಎಂಬುದನ್ನು ನಾನು ಅನೇಕ ಸಲ ಹೇಳಿದ್ದೇನೆ. ಈ ಕೆಲಸವನ್ನು ನಿಲ್ಲಿಸಬಾರದು ಎಂಬ ದೃಷ್ಟಿಯಿಂದ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಈಗಾಗಲೇ ಜಲಾಶಯದ ಕೆಲಸವನ್ನು ಪ್ರಾರಂಭ ಮಾಡಲು ಟೆಂಡರ್ ಕರೆದು ವಿಲೇವಾರಿ ಮಾಡಿದ್ದೇವೆ. ಈಗಾಗಲೇ ಎರಡು ಭಾಗಗಳಲ್ಲಿ ಅರ್ದನ್ ವರ್ಕ್ಸ್‌ನ ಕೆಲಸ ಪ್ರಾರಂಭವಾಗುತ್ತಿದೆ. ನಿಧಾನವಾಗಿ ಕೆಲಸ ನಡೆಯುತ್ತಿದೆ ಎಂಬುದನ್ನು ನಾನು ಒಪ್ಪಿಕೊಂಡಿದ್ದೇನೆ. ಕೇಂದ್ರ ಸರ್ಕಾರದಿಂದ ಪ್ರತ್ಯೇಕವಾಗಿ ಹಣವನ್ನು ಒದಗಿಸಿಕೊಳ್ಳಬೇಕೆಂದು ಸರ್ವ ಪ್ರಯತ್ನವನ್ನು ಇದುವರೆಗೆ ಮಾಡುತ್ತಲೇ ಇದ್ದೇವೆ. ಇನ್ನೊಂದು ವಿಚಾರವನ್ನು ಮಾನ್ಯ ಸದಸ್ಯರಿಗೆ ಹೇಳಬೇಕೆಂದರೆ ಇತ್ತೀಚೆಗೆ ಪ್ರತ್ಯೇಕವಾಗಿ ಈ ಯೋಜನೆಗೆ ಹಣದ ಸಹಾಯವನ್ನು ಮಾಡಬೇಕೆಂದು ಕೇಂದ್ರ ಸರ್ಕಾರದವರನ್ನು ಕೇಳಿಕೊಂಡಾಗ ಅವರು ಐ.ಡಿ.ಎ. ಮೂಲಕ ಈ ಯೋಜನೆಗೆ ಬೇಕಾಗುವಂತಹ ಹಣವನ್ನು ಒದಗಿಸಲು ಪ್ರಯತ್ನ ಮಾಡುತ್ತಿದ್ದಾರೆ. ಈ ಯೋಜನೆಯ ಬಗ್ಗೆ ಕೇಂದ್ರ ಸರ್ಕಾರದವರು ಕೆಲವೊಂದು ವಿವರಗಳನ್ನು ಕೇಳಿದ್ದರು. ಆದರಂತೆ ನಾವು ವಿವರಗಳನ್ನು ಮತ್ತು ಈ ಯೋಜನೆಗೆ ಸಂಬಂಧಪಟ್ಟಂತೆ ಮೆಟೀರಿಯಲ್ಸ್‌ಗಳನ್ನು ಒದಗಿಸಿದ್ದೇವೆ. ಐ.ಡಿ.ಎ. ಮೂಲಕ ನಮಗೆ ಹಣದ ಸಾಲ ಸಿಕ್ಕಿದರೆ ಈ ಕೆಲಸವನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುತ್ತದೆಂದು ತೋರುತ್ತದೆ. ಮಾನ್ಯ ಸದಸ್ಯರಿಗೆ ಬಹಳ ಕಳವಳ ಇದೆ. ಆ ಭಾಗದ ಜನರಿಗೆ ಏನು ಒಂದು ಕಳವಳ ಇದೆ ಅದರ ಅರಿವು ನಮಗೆ ಇರುವುದರಿಂದ ಸರ್ವ ಪ್ರಯತ್ನ ಮಾಡಿ ಈ ಕೆಲಸ ಜಾಗ್ರತೆಯಾಗಿ ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹಣದ ಕೊರತೆ ಇದ್ದರೆ ಯೋಜನಾ ಪ್ರದೇಶದ ಜನರಿಂದ ಕೂಡಿಸಿಕೊಡುತ್ತೇವೆಂದು ಹೇಳಿದರು, ಅದಕ್ಕೆ ತಮ್ಮ ಅಭಿಪ್ರಾಯವೇನು ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ನಾನು ಹೇಳಿದೆ, ನಾಲ್ಕನೇ ಯೋಜನೆ ಇನ್ನೂ ಫೈನಲೈಜ್ ಆಗಿಲ್ಲ. ಐ.ಡಿ.ಎ. ಮೂಲಕ ಹಣವನ್ನು ಒದಗಿಸಿಕೊಂಡು ಈ ಕೆಲಸವನ್ನು ಮಾಡ ಬೇಕೆಂದಿದ್ದೇವೆ. ಅದರ ರಿಜಲ್ಟ್ ಏನಾಗುತ್ತದೆ ಎಂಬುದನ್ನು ನೋಡಿಕೊಂಡ ಮೇಲೆ ಮುಂದಿನ ಹೆಜ್ಜೆ ಯಾವ ರೀತಿ ಇಡಬೇಕು ಎಂಬುದನ್ನು ನೋಡಿಕೊಂಡು ಮಾಡುತ್ತೇವೆ.

Replies to Question tabled by the members.

ಶ್ರೀ ಎಂ. ನಾಗಪ್ಪ.—ಸ್ವಾಮಿ, ನಾನು ರೂಲ್ 312ರ ಪ್ರಕಾರ ಒಂದು ನೋಟೀಸ್ ಕೊಟ್ಟಿದ್ದೇನೆ. ಅದರಲ್ಲಿ ನಾನು ಹೇಳಿರುವುದೇನೆಂದರೆ ನಾನು ಕಳಿಸಿಕೊಟ್ಟ 15 ಪ್ರಶ್ನೆಗಳಿಗೆ ಇದುವರೆಗೆ ಕೇವಲ 2 ಪ್ರಶ್ನೆಗಳಿಗೆ ಮಾತ್ರ ಸರ್ಕಾರದಿಂದ ಉತ್ತರ ಬಂದಿದೆ. ಇನ್ನು 13 ಪ್ರಶ್ನೆ ಗಳಿಗೆ ಉತ್ತರ ಬಂದಿಲ್ಲ. ನಾವು ಪ್ರಶ್ನೆ ಕಳಿಸಿಕೊಟ್ಟ 15 ದಿವಸಗಳಲ್ಲಿ ಸರ್ಕಾರದವರು ಉತ್ತರ ಕೊಡಬೇಕೆಂದು ನಿಯಮವಿದೆ. ಈಗ 15 ದಿವಸಗಳು ಮೀರಿ ಹೋಗಿದೆ. ಸರ್ಕಾರದವರು ಸಕಾಲದಲ್ಲಿ ಉತ್ತರ ಕೊಡದಿದ್ದರೆ ಬೇರೆ ಅಸೆಂಬ್ಲಿಗಳಲ್ಲಿರುವಂತೆಯಾದರೂ ಏರ್ಪಾಡು ಮಾಡಿ. ಸರ್ಕಾರದವರು ಸಕಾಲದಲ್ಲಿ ಉತ್ತರ ಕೊಡದಿದ್ದರೆ ನಮ್ಮ ಹಕ್ಕನ್ನು ಚಲಾಯಿಸುವುದ ಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರು 15 ದಿವಸಗಳಲ್ಲಿ ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ಗೆ ಉತ್ತರವನ್ನು ಒದಗಿಸಿಕೊಟ್ಟರೆ ಸರಿ, ಇಲ್ಲದಿದ್ದರೆ ತಾವು ಸರ್ಕಾರದ ಮೇಲೆ ಮುಂದಿನ ಕ್ರಮ ಏನು ತೆಗೆದುಕೊಳ್ಳುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ಸದಸ್ಯರು ಕಳಿಸಿಕೊಟ್ಟಿರುವ ಪ್ರಶ್ನೆಗಳಿಗೆ 15 ದಿವಸಗಳಲ್ಲಿ ತಮ್ಮ ಆಫೀಸ್‌ಗೆ ಉತ್ತರ ಒದಗಿಸಿಕೊಟ್ಟಿದ್ದೇವೆ. ಎಷ್ಟು ಪ್ರಶ್ನೆಗಳಿಗೆ 15 ದಿವಸ ಗಳಲ್ಲಿ ಉತ್ತರ ಒದಗಿಸಿಕೊಡಲು ಸಾಧ್ಯವಾಗದ್ದರಿಂದ ತಮ್ಮ ಅನುಮತಿಯನ್ನು ಕೇಳಲಾಗಿದೆ ಎಂಬ ವಿವರಗಳನ್ನು ನಾಳೆ ಈ ಸಭೆಯಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈಗಿರುವ ಪರಿಸ್ಥಿತಿಯಲ್ಲಿ ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಸಕಾಲದಲ್ಲಿ ತುಂಬಾ ಸಮರ್ಪಕವಾದ ಉತ್ತರಗಳನ್ನು ಒದಗಿಸಲಾಗುತ್ತಿದೆ ಎಂದು ಭಾವಿಸುತ್ತೇನೆ. ನೆನ್ನೆತಾನೇ ನಮ್ಮ ಸೆಕ್ರೆಟೇರಿಯಟ್‌ನ ಎಲ್ಲಾ ಕಾರ್ಯದರ್ಶಿಗಳ ಸಭೆಯನ್ನು ಸೇರಿಸಿ ಎಲ್ಲಾ ಅಂಶಗಳನ್ನು ಕೇಳಿಕೊಂಡಿದ್ದೇನೆ. ನಾಳೆ ದಿವಸ ಒಂದು ಹೇಳಿಕೆ ಕೊಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಒಂದು ವಿಚಾರ............

ಅಧ್ಯಕ್ಷರು.—ಈಗ ನಾನು ಮುಂಚಿತವಾಗಿ ನೋಟೀಸ್ ಕೊಟ್ಟವರಿಗೆ ಮಾತ್ರ ಮಾತ ನಾಡಲು ಅನುಮತಿ ಕೊಡುತ್ತಿದ್ದೇನೆ.

Haif-an hour Discussion arising out of Replies to Question No. 204 *re* : Nationalisation of Bus Routes in Mysore and Shimoga Districts.

† ಶ್ರೀ ಕೆ. ಎಚ್. ಶ್ರೀನಿವಾಸ್.—ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದ್ದರಿಂದಾಗಿ ಕೆಲವೊಂದು ಸಮಸ್ಯೆಗಳು ಉದ್ಭವವಾಗಿವೆ. ಅವುಗಳಲ್ಲಿ ಕೆಲವು ಪ್ರಾಮುಖ್ಯವಾದವು ಎಂದರೆ, ಯಾವ ಬಸ್ ಮಾರ್ಗಗಳನ್ನು ಸರ್ಕಾರದವರು ರಾಷ್ಟ್ರೀಕರಣ ಮಾಡಿದ್ದಾರೋ, ಅಲ್ಲಿ ಮೊದಲು ಇದ್ದಂತಹ ಖಾಸಗೀ ಬಸ್ ಮಾಲೀಕರಲ್ಲಿ ಕೆಲಸ ಮಾಡುತ್ತಿದ್ದವರು ಇವತ್ತಿನದಿವಸ ನಿರುದ್ಯೋಗಿಗಳಾಗಿ ದ್ದಾರೆ. ಈ ಬಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಸರ್ಕಾರದ ನಿಲುವು ಏನು, ಈ ನೌಕರರಿಗೆ ಏನಾದರೂ ಬದಲೀ ಉದ್ಯೋಗ ಒದಗಿಸಿಕೊಡುವ ಬಗ್ಗೆ ಒಂದು ಸ್ಪಷ್ಟವಾದ ನೀತಿಯೇನಾದರೂ ಇದೆಯೋ ಎಂಬುದನ್ನು ಸರ್ಕಾರದವರು ಸ್ಪಷ್ಟಪಡಿಸಲಿಲ್ಲ. 204ನೇ ಪ್ರಶ್ನೆಯಲ್ಲಿ ಕೇಳಿರುವ

ಪ್ರಶ್ನೆಗಳಿಗೆ ಸರ್ಕಾರದವರು ಉತ್ತರ ಕೊಡುತ್ತಾ ಸಹಾನುಭೂತಿಯಿಂದ ಕೇಡರ್ ಅಂಡ್ ರೆಕ್ರೂಟ್‌ಮೆಂಟಿನ ಆಶ್ರಯದಲ್ಲಿ ಉದ್ಯೋಗ ದೊರಕಿಸಿ ಕೊಡಲು ಕೆಲವು ರೂಲ್ಸ್‌ಗಳನ್ನು ರಿಲ್ಯಾಕ್ಸ್ ಮಾಡಿದ್ದೇವೆಂದು ಹೇಳಿದರು. ಎಷ್ಟರಮಟ್ಟಿಗೆ ರಿಲ್ಯಾಕ್ಸ್ ಮಾಡಿದ್ದಾರೆ, ಯಾವ ಸ್ವರೂಪದಲ್ಲಿ ಮಾಡಿದ್ದಾರೆ, ಆ ರೀತಿ ಮಾಡಿದ್ದರಿಂದ ಯಾರು ಯಾರಿಗೆ ಪ್ರಯೋಜನವಾಗಬಹುದು ಎಂಬತಕ್ಕಂಥ ಅಂಶಗಳನ್ನು ತಿಳಿಸಲಿಲ್ಲ. ಈಗ ಈ ಚರ್ಚೆಯನ್ನು ಪ್ರಾರಂಭಿಸುವುದಕ್ಕೆ ಕಾರಣ ನಮಗೆ ಬೇಕಾಗಿರತಕ್ಕಂಥ ಅಂಶಗಳು ಇಷ್ಟು, ಯಾವುದೇ ಒಂದು ಜಿಲ್ಲೆಯಲ್ಲಿ ಬಸ್ ಮಾರ್ಗವನ್ನು ರಾಷ್ಟ್ರೀಕರಣ ಮಾಡಿದಾಗ ಅಲ್ಲಿ ಮೊದಲು ಇದ್ದ ನೌಕರರಿಗೆ ಹೊಸದಾಗಿ ಉದ್ಯೋಗವನ್ನು ಒದಗಿಸುವುದು ಸರ್ಕಾರದ ಉದ್ದೇಶವಾಗಿದ್ದರೆ ಅದನ್ನು ಸ್ಪಷ್ಟಪಡಿಸಬೇಕು. ಆ ಒಂದು ದೃಷ್ಟಿಯಿಂದ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ರಿಲ್ಯಾಕ್ಸ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆ ರಿಲ್ಯಾಕ್ಸೇಷನ್ ಸ್ವರೂಪವೇನು, ಯಾವರೀತಿಯಲ್ಲಿ ರಿಲ್ಯಾಕ್ಸ್ ಮಾಡಿದ್ದಾರೆ ಮತ್ತು ಅದರಿಂದಾಗಿ ಎಷ್ಟು ಜನ ನಿರುದ್ಯೋಗಿಗಳಾಗಿರುವವರಿಗೆ ಉದ್ಯೋಗ ದೊರಕುತ್ತದೆ, ಅಷ್ಟಾದರೂ ಕೂಡ ಉದ್ಯೋಗ ದೊರಕದ ಇರುವವರು ಯಾರಾದರೂ ಇದ್ದರೆ ಯಾವ ಕಾರಣಕ್ಕಾಗಿ ಉದ್ಯೋಗ ನಿರಾಕರಿಸಲ್ಪಟ್ಟಿದೆ ಎನ್ನುವುದನ್ನು ಕೂಡ ಸ್ಪಷ್ಟಪಡಿಸಬೇಕು ಮತ್ತು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಏನೇನು ಅರ್ಹತೆಗಳಿರಬೇಕು, ಆ ಅರ್ಹತೆಗಳಲ್ಲಿ ಏನು ರಿಲ್ಯಾಕ್ಸೇಷನ್ ಮಾಡಿದ್ದಾರೆ, ಎಷ್ಟರಮಟ್ಟಿಗೆ ಮಾಡಿದ್ದಾರೆ, ಹಾಗೆ ಮಾಡಲಿಕ್ಕೆ ಕಾರಣ ವೇನು, ಉಳಿವಿರತಕ್ಕ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸುವ ದೃಷ್ಟಿಯಿಂದ ಪೂರ್ಣವಾಗಿ ಯಾರು ಯಾರು ಇದರಿಂದ ನಿರುದ್ಯೋಗಿಗಳಾಗುತ್ತಾರೆ, ಅವರಲ್ಲಿ ಎಷ್ಟು ಜನರಿಗೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ರಿಲ್ಯಾಕ್ಸ್ ಮಾಡುವುದರಿಂದ ಅನುಕೂಲವಾಗುತ್ತದೆ, ಈ ಅಂಶಗಳನ್ನೆಲ್ಲ ದಯವಿಟ್ಟು ಸ್ಪಷ್ಟಪಡಿಸಿದರೆ ನಮಗೂ ಹಾಗೂ ಈ ಉದ್ಯೋಗಕ್ಕೋಸ್ಕರ ಕಾದುಕೊಂಡು ಕೆಲಸವನ್ನು ಕಳೆದುಕೊಂಡಿರುವ ನಿರುದ್ಯೋಗಿಗಳಿಗೂ ಬಹಳ ಅನುಕೂಲ ವಾಗುತ್ತದೆ ಎಂದು ಹೇಳುತ್ತೇನೆ.

†ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಅಧ್ಯಕ್ಷರೇ, ಹಾಸನದ ವಿಭಾಗದ ರಾಷ್ಟ್ರೀಕರಣ ವಾದ ಸಂದರ್ಭದಲ್ಲಿ ಆಗ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಜತ್ತಿ ಅವರು ಒಂದು ಮಾತು ಹೇಳಿದರು, ಏನೆಂದರೆ ಕೇವಲ ಬಸ್ಸುಗಳನ್ನು ಮಾತ್ರ ರಾಷ್ಟ್ರೀಕರಣ ಮಾಡುವುದಿಲ್ಲ, ಅಲ್ಲಿ ಕೆಲಸ ಮಾಡುವ ಕಾರ್ಮಿಕರನ್ನೂ ರಾಷ್ಟ್ರೀಕರಣ ಮಾಡುತ್ತೇವೆ ಎಂದು ಅಪ್ಪಣೆ ಕೊಡಿಸಿದರು. ಮೊದ ಮೊದಲು ರಾಷ್ಟ್ರೀಕರಣವಾದ ಸಂದರ್ಭದಲ್ಲಿ ಅಲ್ಲಿ ಇದ್ದಂಥ ಕೆಲಸಗಾರರಿಗೆ ಯಾವ ಕ್ವಾಲಿ ಫಿಕೇಷನನ್ನೂ ಗೊತ್ತು ಮಾಡದೆ ಕೆಲಸಕ್ಕೆ ತೆಗೆದುಕೊಂಡರು. ಆ ನಂತರ ಶಿವಮೊಗ್ಗದಲ್ಲಿ ಮತ್ತು ಈಚೆಗೆ ಕೋಲಾರದಲ್ಲಿ ರಾಷ್ಟ್ರೀಕರಣ ಮಾಡಿದಾಗ ಕೆಲವು ಕ್ವಾಲಿಫಿಕೇಷನ್ ಇರಬೇಕೆಂದು ಮಾಡಿದ್ದಾರೆ. ಇದು ಸಾಧುವಾದುದಲ್ಲ ರಾಷ್ಟ್ರೀಕರಣವಾಗುವಾಗ ಡ್ರೈವರ್ ಮತ್ತು ಕಂಡಕ್ಟರುಗಳು ಮಾತ್ರವಲ್ಲ, ಸಣ್ಣ ಸಣ್ಣ ಉದ್ಯಮಿಗಳು ಕೂಡ ತಮ್ಮ ಕೆಲಸವನ್ನು ಕಳೆದು ಕೊಂಡು ನಿರ್ಗತಿಕರಾಗಿದ್ದಾರೆ. ಈ ಸಣ್ಣ ಸಣ್ಣ ಉದ್ಯಮಿಗಳು ಬಸ್ಸುಗಳಿಗೆ ಬೇಕಾಗುವ ಬೋಲ್ಟು, ನಟ್, ಇದರ ಬಿಡಿ ಭಾಗಗಳನ್ನು ತಯಾರು ಮಾಡಿಕೊಡುತ್ತಿದ್ದರು. ರಸ್ತೆ ಸಾರಿಗೆ ಕಾರ್ಪೊರೇಷನ್‌ನವರು ಆಯಾ ಡಿಪೋಗಳಿಗೆ ಬೇಕಾಗುವ ಬಿಡಿ ಭಾಗಗಳಿಗೆ ದೊಡ್ಡದಾಗಿ ಕಂಟ್ರಾಕ್ಟ್ ಕರೆದು ಮದ್ರಾಸ್, ಪಂಜಾಬ್ ಈ ರಾಜ್ಯಗಳಿಲ್ಲರುವ ಉದ್ಯಮಿಗಳಿಗೆ ಕೊಡುತ್ತಿದ್ದಾರೆ. ಇದಕ್ಕೆ ಬದಲಾಗಿ ಆಯಾ ಡಿಪೋಗಳ ಹತ್ತಿರವಿರುವ ಸಣ್ಣ ಸಣ್ಣ ಕೈಗಾರಿಕೋದ್ಯಮಿ ಗಳಿಂದ ಈ ಸಾಮಾನುಗಳನ್ನು ಪಡೆಯುವುದಕ್ಕೆ ಅವಕಾಶವಿದೆ. ಇಂಥದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಮಾನ್ಯ ಮಂತ್ರಿಗಳು ಹೇಳಿರುವಂತೆ ಕಂಡಕ್ಟರ್ ಮುಂತಾದ ಕೆಲಸಗಳಿಗೆ ತೆಗೆದುಕೊಳ್ಳುವಾಗ ಎಸ್. ಎಸ್. ಎಲ್. ಸಿ. ಆಗಿರಬೇಕು ಎನ್ನುವ ನಿರ್ಬಂಧ ಹಾಕುತ್ತಿದ್ದಾರೆ. ರಾಷ್ಟ್ರೀಕರಣ ಮಾಡಿರುವ ಭಾಗಗಳಲ್ಲಿ ಎಷ್ಟು ಜನ ಕೆಲಸಗಾರರಿದ್ದಾರೆ, ರಿಕ್ರೂಟ್‌ಮೆಂಟ್ ಪಾಲಿಸಿ ಪ್ರಕಾರ ಎಷ್ಟು ಜನಗಳಿಗೆ ಆ ವ್ಯಾಪ್ತಿಯಲ್ಲಿ ತರುವುದಕ್ಕಾಗುವುದಿಲ್ಲ ಎಂದು ಮುಂಚೆಯೇ ಒಂದು ಸರ್ವೇ ಮಾಡಬೇಕಾಗಿತ್ತು. ಇದನ್ನೆಲ್ಲ ಮಾಡದೆ ಇರುವುದರಿಂದ ಕೇವಲ ರಾಷ್ಟ್ರೀಕರಣ ಮಾಡುತ್ತೇವೆ ಎಂದು ಬಸ್ಸುಗಳನ್ನು ತೆಗೆದುಕೊಳ್ಳುವ ಒಂದೇ ಒಂದು ದುರುದ್ದೇಶದಿಂದ ನಿರುದ್ಯೋಗಿಗಳಾಗುವವರ ಹಿತವನ್ನು ಗಮನದಲ್ಲಿಟ್ಟುಕೊಳ್ಳದೆ ಬಸ್ಸುಗಳ ರಾಷ್ಟ್ರೀಕರಣ ಮಾತ್ರ ಮಾಡಿದ್ದಾರೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಬಸ್ಸುಗಳ ಡ್ರೈವರ್, ಕಂಡಕ್ಟರ್ ಮತ್ತು ಎಲ್ಲ ವಿಧವಾದ ಕೆಲಸ ಮಾಡುವವರಿಗೆ ರಿಕ್ರೂಟ್‌ಮೆಂಟ್ ಪಾಲಿಸಿ ಎಂದು ಹೇಳುತ್ತ, ಸರ್ಕಾರ ತನ್ನ ಇಲಾಖೆಯಲ್ಲಿ ಕೆಲಸ ಮಾಡುವವರನ್ನು ತೆಗೆದುಕೊಳ್ಳುವಾಗ ಅನ್ವಯಿಸುವಂತೆ ಅರ್ಹತೆಗಳನ್ನು ಗೊತ್ತು ಮಾಡಿದ್ದಾರೆ. ಅದನ್ನು ಬಿಟ್ಟು ಅಲ್ಲಿ ಇರುವಂಥ ಎಲ್ಲ ಕಾರ್ಮಿಕರಿಗೂ ಕೆಲಸವನ್ನು ಒದಗಿಸುವುದು ರಸ್ತೆ ಸಾರಿಗೆ ಕಾರ್ಪೊರೇಷನ್‌ನವರ ಕರ್ತವ್ಯ.

(ಶ್ರೀ ಹೆಚ್. ಬಿ. ಜ್ವಾಲನಯ್ಯ)

ಬಸ್ಸುಗಳಲ್ಲಿ ಕೆಲಸ ಮಾಡುವ ಡ್ರೈವರ್, ಕಂಡಕ್ಟರ್ ಮುಂತಾದ ಕೆಲಸಗಾರರಲ್ಲದೆ ಸಣ್ಣ ಸಣ್ಣ ಉದ್ಯಮಗಳಲ್ಲಿ ತೊಡಗಿದ್ದು, ರಾಷ್ಟ್ರೀಕರಣವಾದ ಮೇಲೆ ಕೆಲಸವಿಲ್ಲದೆ ನಿರ್ಗತಿಕರಾಗಿರುವವರಿಗೂ ಕೆಲಸಗಳನ್ನು ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

† Sri H. C. BORAIAH (Deputy Minister for Transport).—Mr. Speaker, Sir, Starred Question No. 204 to which replies have already been given relates to the number of private bus concerns affected due to nationalisation of bus routes in Mangalore and Shimoga pockets and the number of employees of those private bus concerns who have become unemployed as a result of nationalisation. Prior to nationalisation of bus routes in Mangalore and Shimoga pockets, bus routes in other parts of the State were nationalised. Whenever such nationalisation takes place the employees of the private bus concerns become unemployed. Such unemployed people are generally given preference for employment in the M. S. R. T. C. if they satisfy the prescribed qualifications. However, when the bus routes in Mangalore and Shimoga pockets were nationalised it was considered necessary to relax the rules of recruitment of the M. S. R. T. C. so that the persons who became unemployed as a result of nationalisation could be given appointment in the M. S. R.T. C. In view of this, directions were issued on 17th October 1968, to the M. S. R. T. C. to take steps to recruit to the extent possible the employees of the private operators in Mangalore and Shimoga pockets by relaxing the provisions of the M. S. R. T. C. Cadre and Recruitment Rules in respect of age limit, educational qualification, minimum height and in respect of proportion prescribed for direct recruitment and promotion to the categories of posts concerned. In pursuance of these directions, the M. S. R. T. C. had issued notice on 8th November 1968 inviting applications for various posts from the employees of the private operators who were displaced on account of nationalisation of the bus services in Mangalore and Shimoga pockets. The applications received in response to the notice are under scrutiny by the M.S.R.T.C.

In Mangalore pocket about 366 workers were affected on account of nationalisation. Out of them 122 have been absorbed by the M. S. R. T. C. and the remaining 244 workers were given employment on their same emoluments in 7 private bus companies. In Shimoga pocket, workers in two districts, *viz.*, Shimoga and Tumkur Districts, 39 workers have been absorbed by the M.S.R.T.C. But as regards Tumkur District, the number of workers affected is not available. But 139 workers of that district have been absorbed in the M.S.R.T.C.

Recently, bus services in Kolar District have been nationalised. The M. S. R. T. C. tried to collect data about the number of employees of private operators affected by nationalisation. But many of the private operators have not given complete details. The question of

relaxing the recruitment Rules of the M. S. R. T. C. to facilitate employment of those workers in the M. S. R. T. C. is under consideration of Government in consultation with the M. S. R. T. C. and a decision will be taken in the matter early.

ಶ್ರೀ ಎಚ್. ಬಿ. ಜ್ವಾಲನಯ್ಯ.— ಎಷ್ಟೋ ಜನ ಪ್ರೈವೇಟ್ ಆಪರೇಟರ್ಸ್ ಸರ್ಟಿಫಿಕೇಟ್ ಕೊಡದೆ ಇದ್ದುದರಿಂದ ಡ್ರೈವರ್, ಕಂಡಕ್ಟರ್ ಮತ್ತು ಮೆಕ್ಯಾನಿಕ್‌ಗಳಿಗೆ ತೊಂದರೆಯಾಗಿರುವುದರಿಂದ ಸರ್ಟಿಫಿಕೇಟ್ ಇಲ್ಲದೆ ಇದ್ದರೂ ಅಂಥವರ ಅರ್ಜಿಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ತಿಳಿಸುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಪ್ರೈವೇಟ್ ಆಪರೇಟರುಗಳಿಂದ ಸರ್ಟಿಫಿಕೇಟ್ ಇಲ್ಲದೆ ಇದ್ದರೆ ಅಲ್ಲಿ ಕೆಲಸ ಮಾಡುತ್ತಿದ್ದರೆಂದು ಹೇಳುವುದಕ್ಕೆ ಯಾವ ಆಧಾರ ಇರುತ್ತದೆ ? ಆಧಾರವಿಲ್ಲದೆ ಇದ್ದರೆ ಯಾರನ್ನೂ ನೇಮಕ ಮಾಡುವುದಕ್ಕೆ ಆಗುವುದಿಲ್ಲ.

Mr. SPEAKER.—The House will now rise and meet tomorrow at 12 NOON.

The House adjourned at Thirty Minutes past Seven of the Clock to meet again at Twelve of the Clock on Wednesday the 29th January 1969.

WD 12108—GPB—600—6-5-69